# ಚಿತ್ರದುರ್ಗ ಜಿಲ್ಲೆಯ ಬುಡಕಟ್ಟು ವೀರರು

## ಪರಾಮರ್ಶನ ಗ್ರಂಥಗಳು


೧. ಕನ್ನಡ

೧. ಈಶ್ವರಪ್ಪ ಎಂ.ಜಿ: ೧೯೮೨, ಮ್ಯಾಸಬೇಡರು, ಐ.ಬಿ.ಎಚ್. ಪ್ರಕಾಶನ, ಬೆಂಗಳೂರು

೨. ಕರಿಶೆಟ್ಟಿ ರುದ್ರಪ್: ೧೯೯೫, ಮ್ಯಾಸನಾಯಕರು: ಒಂದು ಜನಾಂಗಿಕ ಅಧ್ಯಯನ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

೩. ಕೃಷ್ಣಮೂರ್ತಿ ಹನೂರು: ೧೯೮೧, ಕತ್ತಲ ದೂರಿದೂರ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

೪. ಕೃಷ್ಣಮೂರ್ತಿ ಹನೂರು: ೧೯೮೭, ಜನಪದ ವೀರಗೀತೆಗಳು, ಕನ್ನಡ ಅಧ್ಯಯನ ಸಂಸ್ಥೆ, ಮೈ.ವಿ.ವಿ. ಮೈಸೂರು.

೫. ಕೃಷ್ಣಮೂರ್ತಿ ಹನೂರು: ೧೯೯೩, ಮ್ಯಾಸಬೇಡರ ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೬. ಪುಟ್ಟಣ್ಣ ಎಂ.ಎಸ್.: ೧೯೨೪, ಚಿತ್ರದುರ್ಗದ ಪಾಳೆಯಗಾರು, ಮದಕರಿ ಪ್ರಕಶನ ಚಿತ್ರದುರ್ಗ

೭. ಬೋರಲಿಂಗಯ್ಯ: ೧೯೯೧, ಗಿರಿಜನ ನಾಡಿಗೆ ಪಯಣ, ೨೦೦೧, ವಿಸ್ಮೃತಿ ಮತ್ತು ಸಂಸ್ಕೃತಿ, ಸಿ.ವಿ.ಜಿ. ಬೆಂಗಳೂರು

೭. ಮೈಲಹಳ್ಳಿ ರೇವಣ್ಣ: ೧೯೮೪, ಚಿತ್ರದುರ್ಗ ಸುತ್ತಿನ ಜನಪದ ಕಾವ್ಯಗಳು, ಕ.ಅ.ಸಂಸ್ಥೆ, ಮೈ.ವಿ.ವಿ. ಮೈಸೂರು.

೮. ಯಜ್ಞನಾರಾಯಣ ಉಡುಪ: ೧೯೯೪, ಪುರಾಣ ಭಾರತ ಕೋಶ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು

೯. ರಾಜಣ್ಣ ಆರ್.: ೧೯೮೨, ನಾಯಕ ಜನಾಂಗದ ಇತಿಹಾಸ, ಚಳ್ಳಕೆರೆ, ಚಿತ್ರದುರ್ಗ

೧೦. ಲಕ್ಕಪ್ಪಗೌಡ (ಸಂ) : ೧೯೯೮ – ೨೦೦೦, ಕರ್ನಾಟಕ ಬುಡಕಟ್ಟುಗಳು (ಸಂ.೧ – ೨) ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು

೧೧. ಲಕ್ಷ್ಮಣ್ ತೆಲಗಾವಿ: ಡಾ. ಎಂ.ವಿ. ಶ್ರೀನಿವಾಸ್: ೧೯೭೭, ಹುಲ್ಲೂರು ಶ್ರೀನಿವಾಸ ಜೋಯಿಸರ ಐತಿಹಾಸಿಕ ಲೇಖನಗಳು, ಹುಲ್ಲೂರು ಶ್ರೀನಿವಾಸ ಜೋಯಿಸ ಗ್ರಂಥ ಪ್ರಕಟಣ ಸಮಿತಿ, ಚಿತ್ರದುರ್ಗ.

೧೨. ವಿರೂಪಾಕ್ಷಿ ಪೂಜಾರಹಳ್ಳಿ: ೧೯೯೯, ಗಾದರಿಪಾಲನಾಯಕ, ಪ್ರಸಾರಾಂಗ, ಕನ್ನಡ ವಿ.ವಿ. ಹಂಪಿ

೧೩. ವೀರನಾಕ: ೧೯೭೧, ರಾಷ್ಟ್ರಸೇವೆಯಲ್ಲಿ ನಾಯಕ ಜನಾಂಗ, ವಾಲ್ಮೀಕಿ, ಸಾಹಿತ್ಯ ಸಂಪದ, ಹರತಿ ಕೋಟೆ (ಮರುಮುದ್ರಣ ೧೯೯೮)

೧೪. ಶ್ರೀನಿವಾಸ್ ಎಂ.ವಿ. ಮತ್ತು ಲಕ್ಷ್ಮಣ್ ತೆಲಗಾವಿ: ೧೯೭೬, ಚಂದ್ರವಳ್ಳಿ, ಜಿಲ್ಲಾ ಇತಿಹಾಸ ಸಂಶೋಧನಾ ಮಂಡಳಿ, ಚಿತ್ರದುರ್ಗ

**೨. ಇಂಗ್ಲೀಷ್**

01. Edgar Thurston, K. Rangachari: 1987, Castes and Tribes of Southern India, Vol – 1, Asian Educational Services, New Delhi

02. Gunther Dietz Sontheimer: 1993, Pastroal Dieties in Western India, Oxford University press, New Delhi

03. I Year LKA: 1998, The Mysore Tribes and Castes, Vol – 2, Mittal Publications, Delhi

04. Rice B.L.: Epigraphia Carnatica, Vol – XI, Inscriptions in the Chitradurga district, Bangalore

05. Sathyam B.N: 1967, Mysore State Gazettee, Chitradurga Districts, Bangalore

06. Venkata Ramanayya: 1990, Vijayanagara Origion of the city and the Empire, Asian educational Services, New Delhi.

07. Saletore R.N.Ed: 1985, Encyclopaidia of Indian Culture Vol – V.

**೩ಲೇಖನಗಳು**

೦೧. ಕೃಷ್ಣಮೂರ್ತಿ ಕೆ: ಈರ ಸಿರಿಯಣ್ಣ, ಕನ್ನಡ ಸಾಹಿತ್ಯ ಪರಿಷ್ಪತ್ರಿಕೆ, ಸಂ.೬೧, ಸಂ.೨, ಡಿಸೆಂಬರ್ ೧೯೭೬, ಕ.ಸಾ.ಪ. ಬೆಂಗಳೂರು, ಪುಟ: ೬೧

೦೨. ನೇಗಿನಹಾಳ ಎಂ.ಬಿ: ಕರ್ನಾಟಕದ ಬೇಡ ಜನಾಂಗ, ಹರತಿಸಿರಿ, ವಾಲ್ಮೀಕಿ ಸಾಹಿತ್ಯ ಸಂಪದ ಹರ್ತಿಕೋಟೆ, ೧೯೮೭, ಪುಟ: ೩೨೪

೦೩. ಮೈತ್ರಿ ಕೆ.ಎಂ.: ನಿರ್ಲಕ್ಷಿತ ಇತಿಹಾಸದಲ್ಲಿ ಬೊಮ್ಮಗೊಂಡೇಶ್ವರರ ಚರಿತ್ರೆ, ಕನಕ ಸ್ಪೂರ್ತಿ ಸಂಚಿಕೆ, ೧೯೯೭, ಪುಟ: ೬ – ೧೯

೦೪. ಮೈತ್ರಿ ಕೆ.ಎಂ.: ಬದಲಾವಣೆಯ ದಿಕ್ಕಿನಲ್ಲಿ ಬುಡಕಟ್ಟುಗಳು, ಮೈಸಿಟಿ, ೧೯೯೮, ಪುಟ: ೭೫

೦೫. ವಿರೂಪಾಕ್ಷಿ ಪೂಜಾರಹಳ್ಳಿ: ಗಾದರಿಪಾಲನಾಯಕನ ಐತಿಹಾಸಿಕ ಹಿನ್ನೆಲೆ, ವಾಲ್ಮೀಕಿಕಿರಣ, ೧೯೯೮, ಪುಟ: ೩೭

೦೬. ವಿರೂಪಾಕ್ಷಿ ಪೂಜಾರಹಳ್ಳಿ: ಅಕ್ಕಮ್ಮನ ಆಚರಣೆ: ಮರೆಯಾಗಲಿರುವ ಮ್ಯಾಸಬೇಡರ ಸಂಸ್ಕೃತಿಯ ಕೆಲವು ಗ್ರಹಿಕೆಗಳು, ತರಳಬಾಳು, ಸಿರಿಗೆರೆ, ಆಗಸ್ಟ್ – ಅಕ್ಟೋಬರ್ ೧೯೯೬

೦೭. ವಿರೂಪಾಕ್ಷಿ ಪೂಜಾರಹಳ್ಳಿ: ಮರೆಯಾಗುತ್ತಿರುವ ಮೊಂಡಬೇಡರ ಸಂಸ್ಕೃತಿ, ವಾಲ್ಮೀಕಿ ಬಂಧು, ಧಾರವಾಡ, ಜನವರಿ ೧೯೯೮

೦೮. ವಿರೂಪಾಕ್ಷಿ ಪೂಜಾರಹಳ್ಳಿ: ಯರಗಾಟನಾಕನೆಂಬ ವೀರ ಕಥೆ, ನಿಮಗೊಂದು ವನಸುಮ ದೇವರ ಮರಿಕುಂಟೆ, ಜನವರಿ ೧೯೯೮

೦೯. ವಿರೂಪಾಕ್ಷಿ ಪೂಜಾರಹಳ್ಳಿ; ಕೊಡಗಲುಬೊಮ್ಮಯ್ಯನೆಂಬ ಸಾಂಸ್ಕೃತಿಕ ವೀರನ ಜನಪದ ಕಥೆ, ವಾಲ್ಮೀಕಿವಾಣಿ, ಚಿತ್ರದುರ್ಗ, ಫೆಬ್ರವರಿ ೧೯೯೮

೧೦. ವಿರೂಪಾಕ್ಷಿ ಪೂಜಾರಹಳ್ಳಿ: ನಾಯಕನಹಟ್ಟಿ ತಿಪ್ಪೇಸ್ವಾಮಿ ಜಾತ್ರೆ, ಈ ನಮ್ಮ ಕನ್ನಡ ನಾಡು, ಬಳ್ಳಾರಿ, ೫.೩.೧೯೯೮

೧೧. ವಿರೂಪಾಕ್ಷಿ ಪೂಜಾರಹಳ್ಳಿ: ಕರ್ನಾಟಕ: ಕರಿನಾರು>ಕರಿನಾಡು: ಒಂದು ಟಿಪ್ಪಣಿ, ಸಂಕ್ರಮಣ, ಜನವರಿ ೨೦೦೦

೧೨. ವಿರೂಪಾಕ್ಷಿ ಪೂಜಾರಹಳ್ಳಿ; ಹೂಡೇಂಗ್ರಾಮದ ಪ್ರಾಚ್ಯಾವಶೇಷಗಳು, ಇತಿಹಾಸ ದರ್ಶನ, ಸಂ.೧೫, ಬೆಂಗಳೂರು, ೨೦೦೦

೧೩. ವಿರೂಪಾಕ್ಷಿ ಪೂಜಾರಹಳ್ಳಿ: ಮ್ಯಾಸಬ್ಯಾಡ್ಕಿನಾಯಕತನಕ್ಕೆ ಸಂಬಂಧಿಸಿದ ಶಾಸನ ಶೋಧನೆ, ವಿಜಯನಗರ ಅಧ್ಯಯನ, ಸಂ.೫, ಹಂಪಿ, ೨೦೦೦ ನವೆಂಬರ್

**೪. ಹಸ್ತಪ್ರತಿವಿವರ**

* ತಿಪ್ಪನಾಯಕ ಎಸ್.ಬಿ.: ೧೯೯೫, ನಾಯಕ ಜನಾಂಗದ ಇತಿಹಾಸ, (ಅಪ್ರಕಟಿತ), ಕಾನಕಟ್ಟೆ, ಜಗಳೂರು ತಾ, ದಾವಣಗೆರೆ ಜಿ.

೧. ಓಬಣ್ಣನಹಳ್ಳಿ ಯರಮಂಚಿನಾಯಕರ ಕಾಗದ ಪತ್ರಗಳು (೩.೨.೧೯೪೧), (೨೩.೫.೧೯೯೮ ಸಂಗ್ರಹ)

೨. ಬೇಡರೆಡ್ಡಿಹಳ್ಳಿಯ ದೊಡ್ಡ ತಿರುಮಲ ಮತ್ತು ಕೊತ್ತಲಬೊಮ್ಮ ದೇವರಿಗೆ ಸಂಬಂಧಿಸಿದ ಪಂಚಾಯ್ತಿಯಲ್ಲಿ ತೀರ್ಮಾನ ಮಾಡಿದ ಪ್ರಮಾಣ ಪತ್ರ ೩.೨.೧೯೪೧ (೨೩.೫.೧೯೯೮ ಸಂಗ್ರಹ)

೩. ಶ್ರೀ ಗೌರಿಪುರದ ಓಬಳದೇವರ ಪಟ್ಟದ ಪೂಜಾರಿ ಬಸಪ್ಪನವರ ಬರಹ ಮ್ಯಾಸ ನಾಯಕರ ಮತ ವಿಚಾರಗಳು (ಚಾ) (೧೧.೪.೧೯೯೭ ರಂದು ಸಂಗ್ರಹಿಸಿಕೊಂಡಿದ್ದು).

೪. ೧೯೫೫ ಮಾರ್ಚ್ ೩ ರಂದು ಚನ್ನಬಸಯ್ಯನಹಟ್ಟಿ ಗಾದರಿಪಾಲನಾಯಕದೇವರ ಪಟ್ಟದ ಪೂಜಾರಿ ಮಾಡುವ ಸಂದರ್ಭದಲ್ಲಿ ಬರೆದ ಗ್ರಾಮಸ್ಥರ, ಹಿರಿಯರ ಮುಚ್ಚಳಿಕೆ ಪತ್ರ (೧೧.೪.೧೯೯೭ ಸಂಗ್ರಹಣೆ).

೫. ಶಾ.ಶಕ. ೧೦೩೫ ಪ್ರಮೋಧೂತನಾಮ ಸಂ ಮಾಘಶುದ್ಧ ೫ರ ಮಳೆ ಭೂಸಂದ್ರದ ಗುಂಡೇತಲ ಗಾದರಿದೇವರ ಚರಿತ್ರೆ ಕುರಿತ ಛಾಪಕಾಗದಲ್ಲಿ ಬರೆದ ವಾರಸುದಾರಿಕೆ ಪತ್ರ ೨೨.೯.೧೯೬೮ (ಸಂಗ್ರಹ ೧೧.೪.೧೯೯೭).

೬. ಪಟೇಲ್ ತಿಪ್ಪೇಸ್ವಾಮಿ ವೋಬನಹಳ್ಳಿ ಅವರು ಬರೆದ ಪಂಚಾಯ್ತಿ ತೀರ್ಮಾನದ ಪತ್ರ ೩ ಕಟ್ಟೆಮನೆ, ೩ ಜನ ನಾಯಕ, ೭ ಅಜ್ಜನೋರು ಬಗ್ಗೆ ಬರೆದ ಪತ್ರ ೧೨.೭.೧೯೩೭ ರಂದು ಬೊಮ್ಮಗೊಂಡನಕೆರೆಯ ಬಸಪ್ಪ ಇದನ್ನು ಬರೆದಿರುತ್ತಾರೆ. (೨೫.೫.೧೯೯೮ ಸಂಗ್ರಹ)

೭. ೧೩.೩.೧೯೫೯ರ ಜಗದ್ಗುರುನಾಥಸ್ವಾಮಿ ಓಬನಹಳ್ಳಿ ಮಠಕ್ಕೆ ದೊರೆ ಕೋರಿಯರ ಮಂಚಿನಾಯಕ ಮತ್ತು ಪೂಜಾರಿ ಪಾಲಯ್ಯ, ಕೆಂಗಯ್ಯನವರು ಪೂಜಾರಹಳ್ಳಿ ಕಾರೇಕೊಳದ ಓಬಳ ದೇವರ ಗುಡಿಕಟ್ಟಿನ ಬಗ್ಗೆ ವಾರಸುದಾರರ ಪತ್ರ (ಸಂಗ್ರಹ ಜಂಬುನಾಥರಿಂದ ೧೯೯೮ ಮಾರ್ಚ್)

೭.ಅ ಇದೇ ದೇವರಿಗೆ ಸೇರಿದ ಮತ್ತೊಂದು ದಾಖಲೆ. ೧೯೬೩ ಫೆಬ್ರವರಿ ೧೬ ರಂದು ಪೂಜಾರಹಳ್ಳಿ ಹಿರೇಮಠದ ಶ್ರೀಗುರುನಾಥಸ್ವಾಮಿ ಮುಖ್ಯಸ್ಥರು ಹೊಸಪೇಟೆ ತಾಲೂಕು ಕಮಲಾಪುರದ ಹಿರೇಕೆರೆಯಲ್ಲಿರುವ ಓಬಯ್ಯ, ಓಬನಾಯ್ಕ, ಬರ್ಮಣ್ಣ ಮೊದಲಾದ ಈ ದೇವರ ಸಂಬಂಧಪಟ್ಟವರಿಗೆ ಹಕ್ಕುದಾರಿಕೆಯನ್ನು ಕೊಟ್ಟ ಬಗ್ಗೆ ವಿವರವಿದೆ.

೭.ಆ ಇದೇ ದೇವರಿಗೆ ಸಂಬಂಧಿಸಿದ್ದು: ೧೯೬೩ ಫೆಬ್ರವರಿ ೧೯ ರಂದು ಕಮಲಾಪುರದ ಹಿರೇಕೆರೆ ಅಣ್ಣಂದಿರಿಗೆ ಅಧಿಕಾರ ಚಲಾವಣೆ, ಗರುಡಗಂಭ, ಪೂಜೆ, ಕಳಸ, ಪೂಜಾ ಅಧಿಕಾರದ ಬಗ್ಗೆ ಪತ್ರ (ಸಂಗ್ರಹ: ೧೯೯೮)

೮. ಪೂಜಾರಹಳ್ಳಿ ಗುರುನಾಥಸ್ವಾಮಿ ಸಂಸ್ಥಾನದ ದಾಯಾದಿಗಳ ಹಕ್ಕು ಭಾದ್ಯತಪತ್ರ ಶ್ರೀ ಪಂಪಾಕ್ಷೇತ್ರಕ್ಕೆ ತೀರ್ಥಯಾತ್ರೆ ಬಗ್ಗೆ ೧೯೬೩ ಫೆಬ್ರವರಿ ೧೬ (ಬಳ್ಳಾರಿ ಜಿ, ಕೂಡ್ಲಿಗಿ ತಾ).

೯. ನಾಯಕನಹಟ್ಟಿ ರಾಜಮಲ್ಲಪ್ಪನಾಯಕನ ವಂಶದ ಚರಿತ್ರೆಯನ್ನು ದೊರೆ ಬಸಪ್ಪ ನಾಯಕ ವಿವರ ಪೂರ್ಣವಾದ ಮನವಿ ಪತ್ರ ೧೪.೩.೧೯೩೦, ಚಳ್ಳಕೆರೆ ತಾಲೂಕು ಅಮಲ್‌ದಾರ್ ಸಾಹೇಬರಿಗೆ ಬರೆದ ಮನವಿ. ಪುಟ:೧, (ಈ ಕೆಳಗಿನ ೯ ಪುಟಗಳಿರುವ ಹಸ್ತಪ್ರತಿಯನ್ನು ೨೨.೨.೧೯೯೯ ರಂದು ಚಿತ್ರದುರ್ಗದಲ್ಲಿ ಎಂ.ಕೆ. ನಾಯಕರು ನನಗೆ ಕೊಟ್ಟಿರುತ್ತಾರೆ.)

* ೧೯೪೨ ಜನವರಿ ೨೩ ರಂದು ವಿಷುನಾಮ ಸಂವತ್ಸರೆ, ಚಂದ್ರಗಿರಿ, ಬೂದಾಳು ಪಟ್ಟಣಕ್ಕೆ, ಸೇರಿದ ಗೌಡಗೆರೆ ಗ್ರಾಮಸ್ಥರು ಹೊಳಲ್ಕೆರೆ ತಾ ಗಾರ್ರೆಹಟ್ಟಿ ರಂಗಪ್ಪ ಕೊಡಗಳ್ಳಿ ನನ್ನ ಕುಲಗೋತ್ರ ತಿಳಿಸಿ ಎಂಬುದಕ್ಕೆ ಉತ್ತರ. ಪುಟ: ೨

* ೧೯೩೨ ಮಾರ್ಚ್ ೮ರಂದು ಚಿಂತಗುಂಟ್ಲು ಬೋರದೇವರ, ಹಟ್ಟಿ, ನನ್ನಿವಾಳ ಕಟ್ಟಮನೆಗಳ ದೊರೆ, ಶ್ರೀಕಂಪಳದೇವರಹಟ್ಟಿ ಅರಮನೆ ವಿಚಾರಗಳಿವೆ. ಪುಟ:೩

* ಮಹಾನಾಯಕಚಾರ್ಯ ಶಿರೋಮಣಿ ಹಟ್ಟಿ ಸಂಸ್ಥಾನ ಬಸಪ್ಪನಾಯಕರು ೧೩.೧.೧೯೩೦ ಸೋಮವಾರ ಪೇಲೋರಹಟ್ಟಿಯಲ್ಲಿ ಮ್ಯಾಸಮಂಡಳಿ ಹಿರಿಯರ ಸಭೆ ಕರೆದು ರಾಮಜೋಗಿಹಳ್ಳಿ ತಳವಾರ ಹನುಮಯ್ಯನ ಮಗ ಮಲ್ಲಯ್ಯನ ಫಿರ್ಯಾದು ಸಂಬಂಧದ ವಿವರಣೆ ಪತ್ರ (೬.೨.೧೯೩೦ ಬಸಪ್ಪನಾಯಕ ದೊರೆ.) ಪುಟ: ೪

* ೨೪.೧೦.೧೯೩೪ ಕಸ್ತೂರಿ ಮಲ್ಲಪ್ಪನಾಯಕರ ಜಮೀನು ವಿಚಾರ ಬಗ್ಗೆ ಬಸಪ್ಪನಾಯಕರಿಗೆ ಕಾಟಮ್ಮನವರು ಮನವಿ ಪತ್ರ. ಪುಟ: ೫

* ೨೮.೩.೧೯೩೧ ಶ್ರೀಬೋಸೆದೇವರ ಪೂಜಾರ ಬಸಯ್ಯನಾಯಕನಹಟ್ಟಿ ಇವರ ಗ್ರಾಮಗಳ ಹಿರಿಯರು ಬರೆದ ಪತ್ರ. ಕೂಡ್ಲಿಗಿ ತಾಲೂಕು ದಶಮಾಪುರದ ಮ್ಯಾಸಮಂಡಲಿ ನಾಯ್ಕಂಣ ಮತ್ತು ಸಂಣಕಮ್ಮಪ್ಪತ ನಾಯಕರಿಗೆ ಕಾಣಿಕೆ ಸಲ್ಲಿಸುವ ಕುರಿತು. ರಾಯದುರ್ಗದವರೆಗೂ ಹೀಗೆ ವಿವರಿಸಿದ. ಪುಟ:೬

* ನಾಯಕನಹಟ್ಟಿ ಕಟ್ಟೇಮನೆ, ನನ್ನಿವಾಳದ ಕಟ್ಟೇಮನೆ, ಗಾದ್ರದೇವರ ಪೂಜಾರಿ ರಾಜಯ್ಯ ಮೊದಲಾದವರ ವಿವರಗಳಿವೆ. ತಾಳೆಗರೆ ಪ್ರತಿಗಳಲ್ಲಿ ನಕಲು ಮಾಡಿದ್ದು ವಿವರ ಕಾಣುವುದಿಲ್ಲ. ಪುಟ:೭

* ೨೬.೩.೧೩೨೧೬ಕ್ಕೆ (೨೬.೩.೧೩೨೧೩) ಸೇರಿದ ಸಂಸ್ಕೃತ ಲಿಪಿ ಮುದ್ರೆ ಇರುವ ಪತ್ರದಲ್ಲಿ (ಕಾಲಾಂತರದಲ್ಲಿ) ಮೈಸೂರು ರಾಜರಿಗೆ ಪತ್ರವನ್ನು ಹಟ್ಟಿದೊರೆಗಳು ಬರೆದಿರುವುಉದ. (೨೬.೩.೧೯೧೬ ರಂದು ಇದನ್ನು ಬರೆದಿರಬೇಕು ಪರಿಶೀಲನೆ ಅಗತ್ಯ) ಮೈಸೂರು ಮಲ್ಲಪ್ಪನಾಯಕನ ಮನೆತನಕ್ಕೆ ಆನೆಗುಂದಿಯ ಪ್ರಧಾನ ನರಪತಿ ಸಂಸ್ಥಾನ ವಿದ್ಯಾನಗರ ನಂದ್ಯಾಲ ವೆಂಕಪತಿರಾಯರು ಬರೆದು ಕೊಟ್ಟ ಪತ್ರ, ಪುಟ: ೮

* ನೋಟೀಸ್ ಪತ್ರ ಹೊಳಲ್ಕೆರೆ ತಾಲೂಕು ಕಾಮಸಮುದ್ರದ ಮಜುರೆ ಅವಳೇಹಟ್ಟಿ ಮ್ಯಾಸನಾಯ್ಕರ ಓಬಯ್ಯನ ಮಗ ರಂಗಯ್ಯನು ೩.೧೨.೧೯೪೨ ರಂದು ನಾನು ಊರನಾಯಕರ ಮತಕ್ಕೆ ಸೇರಿದವನೆಂದು ಹೇಳಿದ್ದೀರಿ ಅಲ್ಲವೆಂಬುದಕ್ಕೆ ಈ ನೋಟೀಸ್ ಕೊಡುತ್ತಾನೆ. ಪುಟ: ೯

೧೦. ಮರ್ಲಹಳ್ಳಿ ಯರಗೊಡ್ಲಯ್ಯನ ಬಳಿಯಿರುವ ಯರಮಂಚಿನಾಯಕ, ಯರಗೊಡ್ಲಯ್ಯ ಮತ್ತು ದಡ್ಡಿಸೂರನಾಯಕನ ವಿವರಗಳಿರುವ ಪ್ರಾಚೀನ ಕಾಗದ ಪತ್ರಗಳು: (ಸಂಗ್ರಹ ೨೫.೫.೧೯೯೮)

೧೧. ಶ್ರೀಮನ್ ಕೋರಿ ಯರಮಂಚಿನಾಯ್ಕನ ದೇವರ ಮುತ್ತೇಯಗಳ ಇತರ ಮ್ಯಾಸಬೇಡರ ದೇವರುಗಳ ಸಕಲ ವಿವರಗಳು ೪ ಪುಟಗಳಲ್ಲಿ ತಿಳಿಸಲಾಗಿದೆ. (೨೩.೫.೧೯೯೮ ಸಂಗ್ರಹ)

೧೨. ಚಳ್ಳಕೆರೆ ತಾಲೂಕು ಹಿರೇಹಳ್ಳಿ ಯಜಮಾನರಾದ ಸೂರಯ್ಯನಿಗೆ ಸಂಬಂಧಿಸಿದ ಪತ್ರಗಳು

೧. ದಳವಾಯಿ, ಯಜಮಾನರು ಬರೆಸಿಕೊಟ್ಟ ವಿಜ್ಞಾಪನಾ ಪತ್ರ, ಚಳ್ಳಕೆರೆಯ ಚಿತ್ರಯ್ಯನಹಟ್ಟಿ, ರೆಡ್ಡಿಹಳ್ಳಿ, ಬಂಜಗೆರೆ ದೇವರುಗಳಿಗೆ ಸಂಬಂಧಿಸಿದಂತೆ ಮನವಿ ಪತ್ರಗಳು. ನನ್ನಿವಾಳ (೫.೫.೧೯೨೪) ಸಂಸ್ಥಾನ, ಕೋನಸಾಗರ (೨೮.೧೨.೧೯೭೦), ಗೋನೂರು ಗ್ರಾಮಕ್ಕೆ ೧೫.೧.೧೯೨೧

೨. ರಾಯದುರ್ಗ ತಾಲೂಕು ೭೪ ವುಡೋಗಳದವರು ಹಿರೇಹಳ್ಳಿ ಮ್ಯಾಸಮಂಡಳಿಗೆ ಬರೆದ ೧೦.೮.೧೯೫೨ ರ ಪತ್ರ

೩. ಆನೆಗುಂದಿ ಅರಸರು ಕೊಟ್ಟ ಪತ್ರ

೪. ಹಿರೇಹಳ್ಳಿ ಕಟ್ಟೇಮನೆಗೆ ಆನೆಗುಂದಿ ಸಂಸ್ಥಾನದಿಂದ ಪತ್ರ

೫. ದಿ.೧೩.೫.೧೯೨೩ರ ಕಂಪಳದೇವರಹಟ್ಟಿ, ಹಿರೇಹಳ್ಳ ಕಟ್ಟೆಮನೆ ಬಗ್ಗೆ ಪತ್ರ

೬. ೧೯೩೩ ಆಗಸ್ಟ್ ೩ರಲ್ಲಿ ಚಿಂತುಗುಂಟ್ಲು ಬೋರವನಲ್ಲಿ ಎಲ್ಲ ಕಟ್ಟೇಮನೆಗಳ ಅಧಿಕಾರಿಗಳ ಕಲೆತ್ತಿದ್ದರು. ನನ್ನಿವಾಳ ಮಜರೆ ಮುಚ್ಚುಗುಂಟೆ ಗ್ರಾಮ ಪೂಜಾರಿ ಪಾಪಯ್ಯನ ಮಗ ಮಲ್ಲಯ್ಯ ಬಹಿಷ್ಕರಿಸಿದ ಪತ್ರ (ಹೊಳಲ್ಕೆರೆ ತಾ, ಅವಳಹಟ್ಟಿಯ ಊರುನಾಯಕರ ರಂಗಪನ ಮನೆಯಲ್ಲಿ ಊಟಮಾಡಿ ಕುಲಸಂಬಂಧ ಬೆಳೆಸಿದ್ದಕ್ಕಾಗಿ)

೭. ಹಿರೇಹಳ್ಳಿ ಸೂರ್ಯ ಸಿಂಹಾಸನ ಕಟ್ಟೆಮನೆಗೆ ೧೮.೭.೧೯೨೮ ಯಳವರ್ತಿ ಮ್ಯಾಸನಾಯಕರ ಮನವಿ ಪತ್ರ (ಪಿರ್ಯಾದು ಪಂಚಾಯ್ತಿ, ತೀರ್ಮಾನ ಇತ್ಯಾದಿ ವಿವರ)

೮. ೨೩.೮.೧೯೨೮ ರ ಹಿರೇಹಳ್ಳಿ ಕಟ್ಟೆಮನೆ ಯಜಮಾನರ ಪತ್ರ

೯. ೨೧.೮.೧೯೨೮ರಂದು ಯಳವರ್ತಿ ನಾಯಕರ ಹಿರೇಹಳ್ಳಿ, ಸೂರ್ಯಸಿಂಹಾಸನಕ್ಕೆ ಬರೆದ ಪತ್ರ

೧೦. ಸೂರೆದೇವರ ಸಿಂಹಾಸನದ ೫.೪.೧೯೨೩ ರಲ್ಲಿ ಕೆಳಗಳಹಟ್ಟಿ, ಮೊಗಳಹಟ್ಟಿ ಇತರ ಮ್ಯಾಸಬೇಡರ ಮುಖಂಡರ ಪತ್ರ

೧೧. ಮಲ್ಲಿಕಾರ್ಜುನಸ್ವಾಮಿ ಮುತ್ತೈದೆಗಳಹಟ್ಟಿ ಹಿರಿಯರಿಗೆ ಹಿರೇಹಳ್ಳಿ ಕಟ್ಟೇಮನೆಗೆ ಬರೆದ ಪತ್ರ.

೧೨. ೧೯೨೮ ಫೆಬ್ರವರಿ ೯ ತೆದಿ ರಾಯದುರ್ಗದ ಉಡೇಗೊಳದ ಮ್ಯಾಸನಾಯಕರಿಂದ ಹಿರೇಹಳ್ಳಿ ಕಟ್ಟೆಮನೆ ಬರೆದ ಮನವಿ ಪತ್ರ

೧೩. ದಿ.೮.೭.೧೯೩೨ ಬ್ರಿಟಿಷ್ ಇಲಾಖಾ ರಾಯದುರ್ಗ ತಾ, ಉಡೆಗೋಳದ ಜಿ, ಚಿತ್ರದೇವರ ವಿಷಯದ ತಕರಾರು ಮನವಿ (ಗಲಗಲ್ಲು ಯಳವರ್ತಿ ಮ್ಯಾಸರಹಟ್ಟಿ).

೧೪. ದಿ. ೨೬.೫.೧೯೩೧ ಚಳ್ಳಕೆರೆ ತಾ, ನೇರ್ಲಗುಂಟೆ ಬತ್ತಯ್ಯಳ ಹಟ್ಟಿಯವರು ಹಿರೇಹಳ್ಳಿ ಸೂರ ಸಿಂಹಾಸನಕ್ಕೆ ಕೊಟ್ಟಮನವಿಪತ್ರ

೧೫. ದಿ. ೧೩.೧೦.೧೯೩೩ ರಂದು ಹಿರೇಹಳ್ಳ ಯಜಮಾನರು ಪೆಯ್ಲೋರಹಟ್ಟಿಯ ಮ್ಯಾಸನಾಯಕರಿಗೆ ಬರೆದ ಪತ್ರ

೧೬. ೨೨.೨.೧೯೯೦ ಚಿಂತಗುಂಟ್ಲ ಬೋರದೇವರಿಗೆ ಸಂಬಂಧಿಸಿದಂತೆ (ದೊರೆ ಬಸಪ್ಪನಾಯ್ಕ) ನಾಯಕನಹಟ್ಟಿ ಸಂಸ್ಥಾನದ ಅಧಿಕಾರಿಗಳು ಹಿರೇಹಳ್ಳಿಗೆ ಪತ್ರ ಬರೆದ ವಿವರ

೧೭. ೮.೧೦.೧೯೨೮ ನಾಯಕ ಶಿರೋಮಣಿ, ಮಹಾನಾಯಕಚಾರ್ಯ ಹಿರೇಹಳ್ಳಿ ಕಟ್ಟೆಮನೆಗೆ ಚಳ್ಳಕೆರೆ ಸಂಸ್ಥಾನಿಕರು ಬರೆದ ಪತ್ರ

೧೮. ರಾಯದುರ್ಗ ತಾ, ಗೊಲ್ಲಹಳ್ಳಿಯಿಂದ ಮ್ಯಾಸಮಂಡಳಿಯವರಿಂದ ಹಿರೇಹಳ್ಳಿ ಕಟ್ಟೆಮನೆ ಪತ್ರ.

೧೯. ಹಿರೇಹಳ್ಳಿ ಕಟ್ಟೆಮನೆಗೆ ನಾಯ್ಕನಹಟ್ಟಿ ಚಿನ್ನಯ್ಯ ಬರೆದ ಪತ್ರ

೨೦. ೧೯೭೧ ಜನವರಿ ೨೬, ಹಿರೇಹಳ್ಳಿ ದಡ್ಡಿಸೂರನಾಯಕ ಕಟ್ಟೆಮನೆ ಕಾರ್ಯಕಾರಣಿ ಸಭೆ ಸೇರಿ ಕೆಲವು ತೀರ್ಮಾನಗಳನ್ನು ಕೈಗೊಂಡ ವಿವರ.

೨೧. ಭಾಗ – IV I ಬಿ ಕರ್ನಾಟಕ ರಾಜ್ಯ ಪತ್ರ, ಗುರುವಾರ ಡಿಸೆಂಬರ್ ೧೯,೧೯೯೧ ಕೇಂದ್ರ ಅಧಿನಿಯಮಗಳು ಮತ್ತು ಅಧ್ಯಾದೇಕಗಳು (೧೭.೧೧.೧೯೯೧) ಸಂವಿಧಾನ ಮತ್ತು ಕಾನೂನು ಸಚಿವಾಲಯದ ಆದೇಶದಂತೆ ನಾಯ್ಕ್ (Naik), ನಾಯಕ್ (Nayak), ಬೇಡ (Beda), ಬೇಡರ್ ಮತ್ತು ವಾಲ್ಮೀಕಿ (Valmiki) ಜಾತಿಗಳನ್ನು ಪರಿಶಿಷ್ಟ ವರ್ಗದ ಪಟ್ಟಿಗೆ ಸೇರಿದ ಆದೇಶ (ಕೇಂದ್ರ ಸರ್ಕಾರ ೧೯.

# ಕನ್ನಡ ಪ್ರಜ್ಞೆಯನ್ನು ವಿಶ್ವ ಪ್ರಜ್ಞೆಯಾಗಿಸುವತ್ತ

ಸಾವಿರಾರು ವರ್ಷಗಳ ಸುದೀರ್ಘ ಮತ್ತು ಉಜ್ವಲ ಸಾಂಸ್ಕೃತಿ ಪರಂಪರೆಯನ್ನು ಹೊಂದಿರುವ ಕರ್ನಾಟಕದ ಆಧುನಿಕ ಇತಿಹಾಸದಲ್ಲಿ ಕರ್ನಾಟಕದ ಏಕೀಕರಣ ಒಂದು ಐತಿಹಾಸಿಕವೂ ಮತ್ತು ಮಹತ್ವಪೂರ್ಣವೂ ಆದ ವಿಶಿಷ್ಟ ಘಟನೆ. ಹಾಗೆಯೇ ಕನ್ನಡ ವಿಶ್ವವಿದ್ಯಾಲಯದ ಸ್ಥಾಪನೆ ಮತ್ತೊಂದು ಮಹತ್ವದ ಐತಿಹಾಸಿಕ ಘಟನೆ. ಕರ್ನಾಟಕದ ಇತರೆ ವಿಶ್ವವಿದ್ಯಾಲಯಗಳು ಕೇವಲ ಕೆಲವು ಜಿಲ್ಲೆಗಳಿಗೆ ಮಾತ್ರ ಪರಿಮಿತಗೊಂಡಿದ್ದರೆ ಕನ್ನಡ ವಿಶ್ವವಿದ್ಯಾಲಯದ ವ್ಯಾಪ್ತಿ ಅಖಂಡ ಕರ್ನಾಟಕ ಮಾತ್ರವಲ್ಲದೆ ಕನ್ನಡಿಗ ಮತ್ತು ಕನ್ನಡ ಸಂಸ್ಕೃತಿ ನೆಲೆಸಿರುವ ಎಲ್ಲ ದೇಶ ಮತ್ತು ವಿದೇಶಗಳನ್ನೂ ಒಳಗೊಂಡಿದೆ. ಈ ಕಾರಣದಿಂದ ನಮ್ಮ ವಿಶ್ವವಿದ್ಯಾಲಯದ ದಾರಿ ಮತ್ತು ಗುರಿ ಎರಡೂ ವಿಭಿನ್ನವೂ ಮತ್ತು ವೈಶಿಷ್ಟ್ಯ ಪೂರ್ಣವೂ ಆಗಿವೆ.

ಕನ್ನಡ ವಿಶ್ವವಿದ್ಯಾಲಯ ಕನ್ನಡ ನಾಡು, ನುಡಿ, ಸಂಸ್ಕೃತಿ ಮತ್ತು ಜನಜೀವನದ ಸರ್ವಮುಖಗಳ ವಿಶಿಷ್ಟವಾದ ಅಂತರಂಗ ಮತ್ತು ಬಹಿರಂಗ ಸಂಪತ್ತನ್ನು ಕುರಿತು ಅಧ್ಯಯನ ಮಾಡುವ, ಸಂಶೋಧಿಸುವ ಮತ್ತು ಅದರ ಅಧ್ಯಯನದ ಫಲಿತಗಳನ್ನು ಜಗತ್ತಿನಾದ್ಯಂತ ಪ್ರಸಾರ ಮಾಡಿ

ಕರ್ನಾಟಕದ ಬಗೆಗಿನ ಅರಿವನ್ನು ಜನಸಮುದಾಯದಲ್ಲಿ ವಿಸ್ತರಿಸುವ ಹಾಗೂ ಅನಂತಮುಖಿಯಾದ ವಿಶ್ವಜ್ಞಾನವನ್ನು ಕನ್ನಡಜ್ಞಾನವನ್ನಾಗಿ ಪರಿವರ್ತಿಸಿ ಅದು ಕನ್ನಡಿಗರೆಲ್ಲರಿಗೆ ದಕ್ಕುವಂತೆ ಮಾಡುವ ಮೂಲಭೂತ ಆಶಯದ ಪ್ರತಿನಿಧಿಯಾಗಿ ಸ್ಥಾಪಿತಗೊಂಡಿದೆ. ಬೋಧನೆಗಿಂತ ಸಂಶೋಧನೆ, ಸೃಷ್ಟಿಗಿಂತ ವಿಶ್ವಂಭರ ದೃಷ್ಟಿ, ಶಿಥಿಲ ವಿವರಣೆಗಿಂತ ಅತುಳ ಸಾಧ್ಯತೆಗಳನ್ನೊಳಗೊಂಡ ಅನನ್ಯ ಅಭಿವ್ಯಕ್ತಿ, ನಾಡಿನ ಕೋಟಿ ಕೋಟಿ ಶ್ರೀಸಾಮಾನ್ಯರ ವಿವಿಧ ಪ್ರತಿಭಾಶಕ್ತಿ ಮತ್ತು ಸಾಮರ್ಥ್ಯಗಳ ಸದ್ಬಳಕೆಯ ಮೂಲಕ ಅವರ ಅಂತಃಪ್ರಜ್ಞೆಯನ್ನು ಎಚ್ಚರಿಸುವ, ವಿಕಸಿಸುವ ಶ್ರದ್ಧಾನ್ವಿತ ಕಾಯಕ ಇದರ ದಾರಿಯಾಗಿದೆ.

ಕನ್ನಡ ನಾಡನ್ನು ಕನ್ನಡ ವಿಶ್ವವಿದ್ಯಾಲಯದಲ್ಲಿ ನೋಡು, ಕನ್ನಡ ವಿಶ್ವವಿದ್ಯಾಲಯವನ್ನು ನೋಡಿದ್ದಲ್ಲದೆ ಕನ್ನಡ ನಾಡಿನ ಯಾತ್ರೆ ಸಂಪೂರ್ಣವಾಗದು, ಸಾರ್ಥಕವಾಗದು ಎಂಬಂತೆ ರೂಪುಗೊಳ್ಳುತ್ತಿರುವ ಮತ್ತು ರೂಪುಗೊಳ್ಳಬೇಕಾದ ಮಹಾಸಂಸ್ಥೆ ಇದು. ಕನ್ನಡ ಪ್ರಜ್ಞೆ ತನ್ನ ಸತ್ವ ಮತ್ತು ಸತ್ವದೊಡನೆ ವಿಶ್ವಪ್ರಜ್ಞೆಯಾಗಿ ಅರಳಿ ನಳನಳಿಸಬೇಕು; ವಿಶ್ವಪ್ರಜ್ಞೆ ಕನ್ನಡ ದೇಶೀ ಪ್ರಜ್ಞೆಯೊಳಗೆ ಪ್ರವೇಶಿಸಿ, ಪ್ರವಹಿಸಿ, ಸಮನ್ವಯಗೊಂಡು, ಸಂಲಗ್ನಗೊಂಡು, ಸಮರಸಗೊಂಡು ಸಾಕ್ಷಾತ್ಕಾರಗೊಳ್ಳಬೇಕು ಎಂಬುದೇ ಇದರ ಗುರಿ. ಈ ಗುರಿಯ ಮೂಲಕ ಕನ್ನಡ ಕರ್ನಾಟಕತ್ವದ ಉಸಿರಾಗಿ, ವಿಶ್ವಪ್ರಜ್ಞೆಯ ಹಸಿರಾಗಿ, ಕನ್ನಡ ಮಾನವ ವಿಶ್ವಮಾನವನಾಗಿ ಬೆಳೆಯಲು ಸಾಧನವಾಗಬೇಕು. ಕನ್ನಡಿಗರೆಲ್ಲರ ಸಾಮೂಹಿಕ ಶ್ರಮ ಮತ್ತು ಪ್ರತಿಭೆಗಳ ಸಮಷ್ಟಿ ಪ್ರಕ್ರಿಯೆಯಿಂದ ಬೆಳಕಿನ ಈ ಮಹಾಪಥವನ್ನು ಕ್ರಮಿಸುವುದು ನಮ್ಮ ವಿಶ್ವವಿದ್ಯಾಲಯದ ಮಹತ್ತರ ಆಶಯ.

ನಾಗಾಲೋಟದಿಂದ ಕ್ರಮಿಸುತ್ತಿರುವ ಜಗತ್ತಿನ ವ್ಯಾಪಕ ಜ್ಞಾನ, ತಂತ್ರಜ್ಞಾನ ಮತ್ತು ವಿಜ್ಞಾನಗಳ ಶೋಧನೆ ಮತ್ತು ಚಿಂತನೆಗಳನ್ನು ಕನ್ನಡದಲ್ಲಿ ಸತ್ವಪೂರ್ಣವಾಗಿ ದಾಖಲಿಸಿ ಕನ್ನಡ ಓದುಗರ ಜ್ಞಾನವನ್ನು ವಿಸ್ತರಿಸಿ ಅವರಲ್ಲಿ ಪುಸ್ತಕ ಸಂಸ್ಕೃತಿಯನ್ನು ಪ್ರಸರಿಸುವ ವಿಶೇಷ ಹೊಣೆಯನ್ನು ಹೊತ್ತು ನಮ್ಮ ವಿಶ್ವವಿದ್ಯಾಲಯದ ಪ್ರಸಾರಾಂಗ ಅಸ್ತಿತ್ವಕ್ಕೆ ಬಂದಿದೆ. ಶ್ರವ್ಯ, ದೃಶ್ಯ ಮತ್ತು ವಾಚನ ಸಾಮಗ್ರಿಗಳ ಸಮರ್ಪಕ ಉತ್ಪಾದನೆ ಮತ್ತು ವಿತರಣಾ ಪ್ರಕ್ರಿಯೆಗಳ ಮೂಲಕ ಇದು ಈ ಗುರಿಯನ್ನು ತಲುಪಲು ಶಕ್ತಿಮೀರಿ ಪ್ರಯತ್ನಿಸುತ್ತಿದೆ. ಈಗಾಗಲೇ ೭೦೦ ಕ್ಕೂ ಹೆಚ್ಚು ವೈವಿಧ್ಯಮಯ ಮತ್ತು ವೈಶಿಷ್ಟ್ಯಮಯ ಕೃತಿಗಳ ಮೂಲಕ ಕನ್ನಡ ಗ್ರಂಥಲೋಕದ ಅಂತರಂಗ ಮತ್ತು ಬಹಿರಂಗ ಸೌಂದರ್ಯಗಳನ್ನು ಉಜ್ವಲಿಸಿರುವ ಇದು ತನ್ನ ಮುಂದಿನ ಗುರಿಯ ಕಡೆಗೆ ಆಶಾದಾಯಕವಾಗಿ ಚಲಿಸುತ್ತಿದೆ.

ಯಾವುದೇ ರಾಷ್ಟ್ರದ ಅತ್ಯಂತ ಪ್ರಾಚೀನ ಜನಾಂಗವನ್ನು ಅಥವಾ ಅತ್ಯಂತ ಪ್ರಾಚೀನವಾದ ನುಡಿ, ನಡೆ, ಜೀವನ ವಿಧಾನಗಳನ್ನು ಇನ್ನೂ ತಮ್ಮ ಪ್ರತಿನಿತ್ಯದ ಜೀವನ ಕ್ರಮದಲ್ಲಿ ಉಳಿಸಿಕೊಂಡು ಬಂದಿರುವ, ಆಧುನಿಕ ಜ್ಞಾನವಿಜ್ಞಾನಗಳ ಹಾಗೂ ನಾಗರೀಕತೆಗಳ ಪ್ರಬಲ ದಾಳಿಯ ತೀವ್ರ ಒತ್ತಡದಲ್ಲೂ ತಮ್ಮ ಸಂಸ್ಕೃತಿಯ ಬೇರುಗಳನ್ನು ಉಳಿಸಿಕೊಂಡು ಬಂದಿರುವ ಮತ್ತು ನಾಗರಿಕ ಜನಾಂಗವೆಂದು ತಮ್ಮನ್ನು ತಾವೇ ಕರೆದುಕೊಳ್ಳುವ ಜನರಿಂದ ದೂರವಾಗಿಯೇ ಬದುಕುವ ಮತ್ತು ಬದುಕಲಿಚ್ಛಿಸುವ ಜನಸಮುದಾಯವನ್ನು ಬುಡಕಟ್ಟು ಎಂದು ಹೇಳಲಾಗುತ್ತದೆ.

ಭಾರತ ಮೂಲತಃ ಬುಡಕಟ್ಟುಗಳ ಮಾತೃಭೂಮಿ. ಪ್ರಪಂಚದ ಬೇರೆ ಬೇರೆ ಕಡೆಗಳಿಂದ ಆರ್ಯರು ಮುಂತಾದ ಜನಾಂಗಗಳು ಈ ಭೂ ಭಾಗವನ್ನು ತಮ್ಮ ನಾಗರಿಕ ಶಕ್ತಿಯಿಂದ ಆಕ್ರಮಿಸಿತೊಡಗಿದ ಕೂಡಲೇ ಈ ದೇಶದ ಮೂಲನಿವಾಸಿಗಳಾದ ಬುಡಕಟ್ಟು ವರ್ಗದವರು ಅವರ ಆಧುನಿಕ ಶಸ್ತ್ರಾಸ್ತ್ರಗಳ ಮತ್ತು ಬಹುಸಂಖ್ಯೆಯ ಜನಪರಿವಾರದ ದಾಳಿಗೆ ಹೆದರಿ ಕಾಡಿನ ಅಜ್ಞಾನ ಮೂಲೆಗಳಲ್ಲಿ ಪ್ರಾಣ ರಕ್ಷಣೆ ಮಾಡಿಕೊಳ್ಳುತ್ತಾ ಬದುಕನ್ನು ದೂಡತೊಡಗಿದರು. ಈ ದಾಳಿ ಇಂದಿಗೂ ಬೇರೆ ಬೇರೆಯ ರೂಪದಲ್ಲಿ ಈ ಬುಡಕಟ್ಟು ಜನರನ್ನು ಕಾಡುತ್ತಲೇ ಬಂದಿದೆ. ಬೇಟೆಯಾಡುತ್ತಲೇ ಬಂದಿದೆ. ಕರ್ನಾಟಕದಲ್ಲೂ ಆಧುನಿಕತೆಯ ಗಂಧಗಾಳಿ ಸೋಕದ, ಸೋಕಿದರೂ ಜೀವನದ ಆಳದ ಸ್ತರಗಳಿಗೆ ಇಳಿಯದ ಪರಿಸ್ಥಿತಿಯಲ್ಲಿ ಮತ್ತು ತಾವೂ ಹಾಗೂ ತಮ್ಮವರು ಕೂಡಿಕೊಂಡು ಕಟ್ಟಿದ ಮಿತಪರಿಕಲ್ಪನೆಗಳ, ಮಿತವಾದ ಆಶೋತ್ತರಗಳ, ಮಿತವಾದ ಅಗತ್ಯಗಳ ಬದುಕನ್ನು ನಗರಗಳಿಂದ ದೂರವಾಗಿಯೇ ನಡೆಸುತ್ತಾ ತಮ್ಮ ಮೂಲತನವನ್ನು ಕಾಪಾಡಿಕೊಂಡು ಬರುತ್ತಿದ್ದಾರೆ. ಅಕ್ಷರಜ್ಞಾನ, ಯಂತ್ರ ನಾಗರೀಕತೆ, ಸುಖ ಜೀವನದ ಆಕರ್ಷಣೆಗಳು ಅವರ ಮೇಲೆ ಪ್ರಬಲ ಬಲೆಯನ್ನು ಬೀಸುತ್ತಿದ್ದರೂ ಅವರಲ್ಲೇ ಕೆಲವರು

ಈ ಅಪ್ರತಿಹತ ಆಕರ್ಷಣೆಗೆ ಬಲಿಯಾಗುತ್ತಿದ್ದರೂ ಸಾಧ್ಯವಾದಷ್ಟು ಮಟ್ಟಿಗೆ ತಮ್ಮ ಮೂಲಕ ಸೊಗಡುಗಳನ್ನು ಉಳಿಸಿಕೊಂಡಿದ್ದಾರೆ. ಸರ್ಕಾರ ನೀಡುವ ಸವಲತ್ತುಗಳಲ್ಲಿ ಬಹುಪಾಲು ಮಧ್ಯವರ್ತಿಗಳ ಪಾಲಾಗುತ್ತಿರುವುದರಿಂದ ಅವುಗಳ ಸಂಪೂರ್ಣ ಅರಿವು ಮತ್ತು ಉಪಯೋಗ ಅವರಿಗೆ ದೊರೆಯುತ್ತಿಲ್ಲ ಬದಲಾಗಿ ಮತ್ತಷ್ಟು ಶೋಷಣೆಗೆ ಮತ್ತು ಆಮಿಷಗಳಿಗೆ ಅವರು ತುತ್ತಾಗುತ್ತಿದ್ದಾರೆ. ರಾಮಾಯಣ, ಮಹಾಭಾರತ ಮುಂತಾದ ನಮ್ಮ ಪ್ರಾಚೀನ ಗ್ರಂಥಗಳು ಒಂದಲ್ಲ ಒಂದು ರೀತಿಯಲ್ಲಿ ಈ ಬುಡಕಟ್ಟು ಜನರ ರೀತಿ, ನೀತಿಗಳನ್ನು ಸಾಂದ್ರವಾಗಿ ಚಿತ್ರಿಸುವ ಗ್ರಂಥಗಳೇ ಆಗಿವೆ.

ಭಾರತದ ಮೊದಲ ಆದಿ ಕವಿಯೇ ಬುಡಕಟ್ಟು ಮೂಲಕ್ಕೆ ಸೇರಿರುವಂತದ್ದು, ಸೋಜಿಗದ ಮತ್ತು ಕುತೂಹಲದ ಸಂಗತಿಯಾಗಿದೆ. ಈ ಬುಡಕಟ್ಟುಗಳ ಬಗೆಗೆ ಅಧ್ಯಯನಗಳನ್ನು ಮಾಡಲು ಮೊದಲು ಮನತೆತ್ತವರು ಪಾಶ್ಚಾತ್ಯರು, ಅವರು ಸಮಾಜವಿಜ್ಞಾನದ ದೃಷ್ಟಿಯಿಂದ ಮುಖ್ಯವಾಗಿ ಇವರ ಜೀವನ ವಿವರಗಳನ್ನು ಸಂಗ್ರಹಿಸಲು, ಸಂಶೋಧಿಸಲು ಮತ್ತು ವಿಶ್ಲೇಷಿಸಲು ಮೊದಲು ಮಾಡಿದರು. ಆ ಲಭ್ಯ ಮಾಹಿತಿಗಳನ್ನು ಮೂಲವಾಗಿಟ್ಟುಕೊಂಡು ಸ್ವತಃ ತಮ್ಮ ಅಧ್ಯಯನದ ಫಲಗಳನ್ನು ಒಂದುಗೂಡಿಸಿ ಕರ್ನಾಟಕದಲ್ಲೂ ಹಲವಾರು ಬುಡಕಟ್ಟುಗಳ ಅಧ್ಯಯನವನ್ನು ಕೈಗೊಂಡಿದ್ದಾರೆ. ವಿಶ್ವವಿದ್ಯಾಲಯಗಳ ಸಮಾಜ ವಿಜ್ಞಾನಿಗಳು ಈ ಬಗೆಯ ಎಚ್ಚರ ಮತ್ತು ಜಿಜ್ಞಾಸೆಯಿಂದ ಬುಡಕಟ್ಟುಗಳ ಬಗ್ಗೆ ಹಲವು ಮುಖ್ಯ ಮಾಹಿತಿಗಳನ್ನು ಕಲೆ ಹಾಕಿದ್ದಾರೆ. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಉಪಸಂಸ್ಕೃತಿ ಮಾಲೆ, ಕರ್ನಾಟಕ ಜಾನಪದ ಅಕಾಡೆಮಿ ಪ್ರಕಟಿಸಿದ ಕರ್ನಾಟಕದ ಬುಡಕಟ್ಟುಗಳು ಎಂಬ ಎರಡು ಬೃಹತ್ ಗ್ರಂಥಗಳು ಹೀಗೆ ದೊರೆತ ಮಾಹಿತಿಗಳನ್ನು ಒಂದೆಡೆ ಸಂಕಲ್ಪಿಸಿಕೊಟ್ಟಿವೆ. ಆದರೂ ಅತ್ಯಂತ ಸೂಕ್ಷ್ಮವಾಗಿ, ಸಾಂಸ್ಕೃತಿಕವಾಗಿ, ಸಾಮಾಜಿಕವಾಗಿ ಹಾಗೂ ವೈಚಾರಿಕವಾಗಿ ಇವುಗಳ ಕೂಲಂಕಷ ಅಧ್ಯಯನ ನಡೆಯಬೇಕಾಗಿದೆ. ಇಂತಹ ಸಂದರ್ಭದಲ್ಲಿ ನಮ್ಮ ಕನ್ನಡ ವಿಶ್ವವಿದ್ಯಾಲಯದ ಬುಡಕಟ್ಟು ಮತ್ತು ಇತಿಹಾಸ ವಿಭಾಗಗಳ ಕೆಲವು ವಿದ್ವಾಂಸರು ಈ ಬಗೆಯ ಗಂಭೀರ ಕ್ಷೇತ್ರ ಕಾರ್ಯ, ಅಧ್ಯಯನ, ಚಿಂತನೆ ಮತ್ತು ಪ್ರಕಟಣೆಗಳಲ್ಲಿ ತಮ್ಮನ್ನು ಪ್ರಾಮಾಣಿಕವಾಗಿ ತೊಡಗಿಸಿಕೊಂಡ ಫಲವಾಗಿ ನಮ್ಮ ಪ್ರಸಾರಾಂಗ ಈ ಶೋಧನೆಯ ಫಲಿತಗಳನ್ನು ಪುಸ್ತಕ ರೂಪದಲ್ಲಿ ಪ್ರಕಟಿಸುತ್ತಿದೆ. ಇಂತಹ ಪ್ರಕಟಣೆಗಳಲ್ಲಿ ಡಾ.ವಿರೂಪಾಕ್ಷಿ ಪೂಜಾರಹಳ್ಳಿ ಅವರ ಚಿತ್ರದುರ್ಗ ಜಿಲ್ಲೆಯ ಬುಡಕಟ್ಟು ವೀರರು ಎಂಬ ಈ ಕೃತಿ ಕರ್ನಾಟಕದ ಬಹುಸಂಖ್ಯಾತ ಬೇಡ ಬುಡಕಟ್ಟು ಜನಾಂಗದ ವಿಶಿಷ್ಟ ಅಧ್ಯಯನವನ್ನು ಮತ್ತು ಚಿಂತನೆಯನ್ನು ಒಳಗೊಂಡಿದೆ. ಚಿತ್ರದುರ್ಗ ಜಿಲ್ಲೆಯ ಮುಖ್ಯ ಬುಡಕಟ್ಟುಗಳಲ್ಲಿ ಒಂದಾದ ಮ್ಯಾಸಬೇಡರ ಚರಿತ್ರೆ ಮತ್ತು ಸಾಂಸ್ಕೃತಿಕ ವಿವರಗಳನ್ನು ಈ ಅಧ್ಯಯನ ಒಳಗೊಂಡಿದೆ. ಈ ಜನಾಂಗದ ಸಾಹಿತ್ಯ ಮತ್ತು ಸಂಸ್ಕೃತಿಯ ಬಗ್ಗೆ ಈಗಾಗಲೇ ಕೆಲವು ಕೃತಿಗಳು ಪ್ರಕಟವಾಗಿದ್ದರೂ ಈ ಬುಡಕಟ್ಟಿನ ವೀರರನ್ನು ಮತ್ತು ಅವರ ಕಾರಣದಿಂದಾಗಿ ಹುಟ್ಟಿಕೊಂಡ ಸಾಂಸ್ಕೃತಿಕ ನಡವಳಿಕೆಗಳ ವಿವರಗಳನ್ನು ಈ ಕೃತಿ ಇಲ್ಲಿ ಪ್ರಾಮಾಣಿಕವಾಗಿ ದಾಖಲಿಸಿದೆ. ಶ್ರದ್ಧಾಪೂರ್ವವಾದ ಮತ್ತು ಪ್ರಾಮಾಣಿಕವಾದ ಕ್ಷೇತ್ರ ಕಾರ್ಯ ಹಾಗೂ ಅವುಗಳ ಅತಿ ಸಮೀಪದ ಸಂಬಂಧ ಹಾಗೂ ತಿಳುವಳಿಕೆಗಳ ಕಾರಣಗಳಿಂದ ಈ ಕೃತಿಗೆ ಒಂದು ಅಧಿಕೃತತೆ ದೊರಕಿದಂತಾಗಿದೆ. ಚಿತ್ರದುರ್ಗ ಜಿಲ್ಲೆಯ ಎಲ್ಲ ಮುಖ್ಯ ಸ್ಥಳಗಳನ್ನು, ಅಲ್ಲಿನ ಇತಿಹಾಸ ಹೇಳುವ ಕಥೆಗಳನ್ನು, ಜನಾಂಗದ ಹಿರಿಯರು ತಮ್ಮ ನೆನಪಿನ ಗಣಿಯಲ್ಲಿ ತುಂಬಿಕೊಂಡ ಅಪರೂಪದ ಮಾಹಿತಿಗಳನ್ನು ಹಾಗೂ ಪ್ರತ್ಯಕ್ಷ ಸಂದರ್ಶದಿಂದ ಲಭ್ಯವಾದ ಮುಖ್ಯಾಂಶಗಳನ್ನು ಈ ಅಧ್ಯಯನ ತನ್ನಲ್ಲಿ ಗರ್ಭೀಕರಿಸಿ ಕೊಂಡಿದೆ. ಶ್ರೀ ವಿರೂಪಾಕ್ಷಿ ಪೂಜಾರಹಳ್ಳಿ ಅವರು ಮ್ಯಾಸಬೇಡರ ಬಗೆಗೆ ದೊರೆಯುವ ಹಳೆಯ ಮತ್ತು ಹೊಸದಾದ ಎಲ್ಲ ಸಂಗತಿಗಳನ್ನು ಸಾಹಿತ್ಯದ ಮೂಲದಿಂದ ಮಾತ್ರವಲ್ಲದೆ ವ್ಯಕ್ತಿ ಸಂದರ್ಶನ, ದಿನಪತ್ರಿಕೆಗಳು, ನ್ಯಾಯಾಲಯದ ದಾಖಲೆಗಳು, ದೇವ ತಾಣಗಳಲ್ಲಿ ದೊರೆಯುವ ಹಾಗೂ ಜನಾಂಗಕ್ಕೆ ಸಂಬಂಧಿಸಿದ ಸಮಾಲೋಚನೆ, ವ್ಯಾಜ್ಯ ಹಾಗೂ ನ್ಯಾಯತೀರ್ಮಾನಗಳ ಬಗೆಗಿನ ಲಿಖಿತ ದಾಖಲೆಗಳು ಇತ್ಯಾದಿಗಳ ಮೂಲಕ ಕೂಡ ವಾಸ್ತವತೆಗೆ ಹತ್ತಿರವಾದ ದಾಖಲೆಗಳನ್ನು ಸಂಗ್ರಹಿಸಲು ಪರಿಶ್ರಮವಹಿಸಿದ್ದಾರೆ. ಒಂದೇ ಮಾಹಿತಿಗಾಗಿ ಹತ್ತಾರು ಬಾರಿ ಹತ್ತಾರು ಜನರನ್ನು ಸತ್ಯಶೋಧಕ್ಕಾಗಿ ಸಂಪರ್ಕಿಸುವುದು ಅವರಿಗಿರುವ ಗಂಭೀರ ಶ್ರದ್ಧೆಯನ್ನು ಅಭಿವ್ಯಕ್ತಿಸುತ್ತದೆ. ನಾಗರಿಕತೆಯ ಇಷ್ಟಾನಿಷ್ಟ ತೆಕ್ಕೆಗೆ ತನ್ನನ್ನು ಒಳಗುಗೊಳಿಸುತ್ತಿರುವ ಈ ವಿಶಿಷ್ಟ ಬುಡಕಟ್ಟು ಜನಾಂಗ ಬದಲಾವಣೆಗೊಳ್ಳುತ್ತಿರುವ ಬಗೆಗೂ ಈ ಸಂಶೋಧಕರ ಕಣ್ಣು ಹರಿದಿದೆ. ಆದರೂ ಈ ನಾಗರಿಕತೆಯ ಸೂಕ್ಷ್ಮ ಆಕ್ರಮಣದ ನಡುವೆಯೂ ತಮ್ಮ ಮೂಲ ಲಕ್ಷಣಗಳನ್ನು ಸಾಕಷ್ಟು ಮಟ್ಟಿಗೆ ಉಳಿಸಿಕೊಂಡಿರುವ ಈ ಜನಾಂಗದ ಆಧುನಿಕ ಪರಿಸ್ಥಿತಿಯನ್ನು ಮೂಲಪರಿಸ್ಥಿತಿಯೊಡನೆ ತಾಳೆ ನೋಡುವ ಪ್ರಜ್ಞೆಯೂ ಸಹ ಇಲ್ಲಿ ಕೆಲಸ ಮಾಡಿದೆ. ಒಟ್ಟಿನಲ್ಲಿ ಡಾ.ವಿರೂಪಾಕ್ಷಿ

ಪೂಜಾರಹಳ್ಳಿ ಅವರು ಮ್ಯಾಸಬೇಡರ ಅಧ್ಯಯನಕ್ಕೆ ಸಂಬಂಧಿಸಿದ ಅಭ್ಯಾಸಪೂರ್ಣವಾದ ಹಾಗೂ ಮಾಹಿತಿ ಪೂರ್ಣವಾದ ಒಂದು ವಿಶೇಷ ಕೃತಿಯನ್ನು ಜನಾಂಗದ ಅಧ್ಯಯನಕಾರರಿಗೆ ಈ ಮೂಲಕ ಒದಗಿಸಿದ್ದಾರೆ. ಅವರಿಗೆ ನನ್ನ ಹಾರ್ದಿಕ ಅಭಿನಂದನೆಗಳು.

**ಡಾ.ಎಚ್.ಜೆ. ಲಕ್ಕಪ್ಪಗೌಡ,**
ಕುಲಪತಿಗಳು.

# ಮೌಖಿಕ ಚರಿತ್ರೆಯೆಂಬ ಮಹಾಸಾಗರದಲ್ಲಿ ಈಜುವುದೆಂದರೆ...

ಮೌಖಿಕ ಚರಿತ್ರೆಯೆಂಬುದು ಅಲಿಖಿತ, ಅಪ್ರಕಟಿತ ಮಾಹಿತಿಗಳನ್ನು, ವೈಯಕ್ತಿಕ ನೆಲೆಯಲ್ಲಿ ಅಭಿವ್ಯಕ್ತಿಗೊಂಡಿದ್ದನ್ನು ಸೂಚಿಸುತ್ತದೆ. ಚರಿತ್ರೆಕಾರ ತನ್ನ ಅವಲೋಕನ ಮತ್ತು ಸಂವೇದನಾಶೀಲತೆಯಿಂದ ಇದನ್ನು ರಚಿಸುತ್ತಾನೆ. ಇಲ್ಲಿ ನಿರೂಪಕ ಮತ್ತು ರಚನೆ ಕಾರ್ಯ ಕೆಲಸಗಳನ್ನು ಎಚ್ಚರಿಕೆಯಿಂದ ನಿಭಾಯಿಸಬೇಕಾಗುತ್ತದೆ. ಚರಿತ್ರೆಯ ಘಟನೆಗಳ ಬಗ್ಗೆ ಜನರು ಏನು ಹೇಳುತ್ತಾರೋ ಅದೇ ಮೌಖಿಕ ಚರಿತ್ರೆ ಆಗುತ್ತದೆ. ಇದೆಲ್ಲಕ್ಕಿಂತ ವಿರುದ್ಧ ಪಥದಲ್ಲಿರುವುದು ಲಿಖಿತ ಇತಿಹಾಸ. ಶಾಸನ, ವೀರಗಲ್ಲು, ಮಾಸ್ತಿಕಲ್ಲು, ಶಿಲ್ಪ, ರೇಖಾಚಿತ್ರ, ದೇವಾಲಯ, ಸಮಕಾಲೀನ ದಾಖಲೆ, ಇತ್ಯಾದಿಯಾಗಿ ಲಭ್ಯವಿರುವ ಮಾಹಿತಿಯಿಂದಲೇ ಈವರೆಗಿನ ಚರಿತ್ರೆಯನ್ನು ನಿರೂಪಿಸಲಾಗಿದೆ. ಅದು ಚರಿತ್ರೆಯ ಶಿಸ್ತಿನೊಳಗೆ ವಾಸ್ತವಕ್ಕೆ ಮನ್ನಣೆಕೊಟ್ಟು ರಚಿಸಿರುವಂಥದ್ದದು, ಅದು ವಸಾಹತುಶಾಹಿ ಧೋರಣೆಯ ಅಧ್ಯಯನ ವಿಧಾನಗಳಿಂದ ಪ್ರಭಾವಿತಗೊಂಡಂತಿದೆ. ಶಾಸನಗಳನ್ನು ರಾಜನ ಸಾಮಂತರು ಹಾಕಿಸಿದ್ದರೂ ಅವು ರಾಜಪ್ರಭುತ್ವದ ಪರವಾಗಿದ್ದು, ಜನಸಾಮಾನ್ಯರ ಪಾತ್ರವನ್ನು ಕಡೆಗಣಿಸಿವೆ ಎನ್ನವುದುಂಟು. ಚರಿತ್ರೆಕಾರರು ರಚನೆಯ ಸಂದರ್ಭದಲ್ಲಿ ರಾಜಪ್ರಭುತ್ವಕ್ಕೆ ಮಹತ್ವಕೊಟ್ಟಿದ್ದರೆಂದರೆ ತಪ್ಪಲ್ಲ. ರಾಜ್ಯದ ಆರ್ಥಿಕ ಉತ್ಪಾದನೆಯಲ್ಲಿ ಎಲ್ಲರ ಸಹಕಾರ ಬೇಕಾಗಿದ್ದು, ವಿತರಣೆ ಮತ್ತು ಅನುಭೋಗದಲ್ಲಿ ರಾಜಪ್ರಭುತ್ವದ ಹಿಡಿತವಿತ್ತು. ಅಂದಿನಿಂದಲೂ ತಾರತಮ್ಯವನ್ನು ನಿವಾರಿಸಲಾಗದೆ ಉಳ್ಳವರು ಇಲ್ಲದವರೆಂಬ; ಅಕ್ಷರಸ್ಥರು ಮತ್ತು ಅನಕ್ಷರಸ್ಥರೆಂಬ ಬೇರ್ಪಡೆ ಬಿರುಕುಗಳು ಗೋಚರಿಸಿದವು. ಇದನ್ನರಿತ ಚರಿತ್ರೆಕಾರರು ತಮ್ಮ ಬರವಣಿಗೆ ವಿಧಾನವನ್ನು ಬದಲಿಸಿಕೊಂಡರು. ಅಮೆರಿಕದಲ್ಲಿ ರಿಚರ್ಡ್ ಡಾರ್ಸನ್ ಮೊದಲಾದವರು ಈ ಬಗೆಯ ಕೆಲಸ ಮಾಡಿರುವರು. ರಾಜಪ್ರಭುತ್ವ, ಯುದ್ಧ, ಸಂಘರ್ಷ ಮತ್ತು ಕೆಳವರ್ಗ ಅಲಕ್ಷಿತ ಜನಸಮುದಾಯಗಳ ಚರಿತ್ರೆಯನ್ನು ರಚಿಸಿರುತ್ತಾರೆ. ವಿದೇಶಿ ವಿಧಾನ ಅಳವಡಿಸಿಕೊಂಡು ರಾಷ್ಟ್ರದ ಚರಿತ್ರೆ ಬರೆದದ್ದು ರಾಷ್ಟ್ರೀಯವಾದಿ ಚರಿತ್ರೆ ಎನಿಸಿಕೊಂಡಿತು. ಮಾತೃ – ದೇಶ ಪ್ರೇಮದಿಂದ ರೂಪಿಸಿದ ಚರಿತ್ರೆ ವರ್ಣನೆ, ವೈಭವ ಎನಿಸುವುದುಂಟು. ಇಂದು ಆ ಕಲ್ಪನೆ ಬದಲಾಗಿದೆ. ಇಂಥಾ ಲಿಖಿತ ಚರಿತ್ರೆಯನ್ನೇ ವಾಸ್ತವವೆಂದು ತಿಳಿದಿದ್ದರು. ಕ್ರಮೇಣ ತಮ್ಮ ತಮ್ಮ ಚಿತ್ರಣಗಳನ್ನು ಹುಡುಕಲು ಹೊರಟಾಗ ಮರೆಯಾದದ್ದನ್ನು ನೋಡಿ ದುಃಖಿಸಿದರು. ಹೀಗಾಗಿ ಸಮಕಾಲೀನ ಸಿದ್ಧಾಂತಕ್ಕೆ ಪ್ರಾಚೀನದ ಬದುಕನ್ನು ಜನಪದ ಇತರ ಶಿಸ್ತುಗಳ ಮೂಲಕ ಕಟ್ಟಿಕೊಂಡ ಬೇಕೆಂಬುದು ನ್ಯಾಯ. ಚರಿತ್ರೆ ರಚನೆಯ ಸಂದರ್ಭದಲ್ಲಿ ಚರಿತ್ರೆಕಾರ ಘಟನೆಯ ವಸ್ತುನಿಷ್ಟ ವಿಶ್ಲೇಷಣೆಗೆ ಹೆಚ್ಚು ಮಹತ್ವ ಕೊಡುವುದು ಸಹಜ. ಇದರಲ್ಲಿ ಪೂರ್ವಗ್ರಹ, ಅಪವಾದಗಳಾಗಲಿ ಇರುವುದಿಲ್ಲವೆಂದಲ್ಲ. ಚರಿತ್ರಕಾರನ ಸತ್ಯದ ಪ್ರತಿಪಾದನೆಯೇ ಇತಿಹಾಸ ಎನ್ನುವುದಾದರೆ, ಸತ್ಯವಲ್ಲದ ದಾಖಲೆಗಳಲ್ಲಿ ಅಮೋಘವಾದ ಚರಿತ್ರೆ ಅಡಗಿರುವ (ರ) ಜನಸಾಮಾನ್ಯರ ಪಾಡೇನು?

ಮೌಖಿಕ ಚರಿತ್ರೆಗೆ ದೊರಕುವ ಮಾಹಿತಿಯ ಸರಕು ನಿಜವೆಂಬುದು ಮಾಹಿತಿದಾರನ ದೃಷ್ಟಿಯಲ್ಲಾದರೆ, ಚರಿತ್ರೆಕಾರನಿಗೆ ಇದನ್ನು ಹೇಗೆ ವಿಶ್ಲೇಷಿಸಬೇಕೆಂಬುದು ದೊಡ್ಡ ಸವಾಲಾಗುತ್ತದೆ. ಅನೇಕ ಭಿನ್ನ ಪಠ್ಯಗಳು ಇಲ್ಲಿ ಪರಿಣಾಮಕಾರಿಯಾಗಿರುತ್ತವೆ. ಮೌಖಿಕ ಚರಿತ್ರೆಯು ವರ್ತಮಾಣ ಕಾಲದಲ್ಲಿ ನಿರೂಪಣೆಗೊಳ್ಳುವುದರಿಂದ ಗತಕಾಲದ ಚಿತ್ರಣದಲ್ಲಿ ವರ್ಣನೆ, ರಮ್ಯ, ರಂಜನೆಗಳಲ್ಲದೆ ವೈವಿಧ್ಯತೆಗಳಿರುವುದು ಸಹಜ. ಒಡೆತನದಲ್ಲಿದ್ದ, ದಮನಕ್ಕೊಳಗಾದವರ ಚರಿತ್ರೆ ಅಸ್ಪಷ್ಟತೆಯಿಂದ ಕೂಡಿರುತ್ತದೆ. ಈ ಬಗೆಯ ಚರಿತ್ರೆ ಕೇವಲ ರಾಜಕೀಯ ಸಂಗತಿಗಳನ್ನಷ್ಟೇ ಅಲ್ಲದೆ, ನೀತಿ ರೂಢಿ, ಸಂಪ್ರದಾಯ, ಸಂಸ್ಕೃತಿ, ನಾಗರೀಕತೆಗಳ ಬಗ್ಗೆ ಬೆಳಕು ಚೆಲ್ಲುತ್ತವೆ. ಇಲ್ಲಿ ಜನಸಾಮಾನ್ಯರ

ಭಾವನೆಗಳ ಬುತ್ತಿ ಬಿಚ್ಚಿದಾಗ ಚರಿತ್ರೆಯ ಕಣಜವೇ ತೆರೆದಿಟ್ಟಂತೆ ಭಾಸವಾಗುವುದು. ಏನೆಲ್ಲಾ ಪರಿಕಲ್ಪನೆಗಳ ನಡುವೆಯೂ ದ್ವಂದ್ವಗಳ ನಿವಾರಣೆ ಮಾಡಿ ವಾಸ್ತವಕ್ಕೆ ವಾಲುವುದುಂಟು.

ಮಾನವ ನಿರ್ಮಿತ ಇತಿಹಾಸಪೂರ್ವ ಕಾಲದಲ್ಲಿ ಯಾವ ಭಾಷೆ ಬರವಣಿಗೆಗಳಿರಲಿಲ್ಲ. ಕ್ರಮೇಣ ಸಂಜ್ಞೆ, ಸಂಕೇತ, ನಂಬಿಕೆ, ದಂತಕಥೆಗಳು ಒಂದು ತಲೆಮಾರಿನಿಂದ ಮತ್ತೊಂದು ತಲೆಮಾರಿಗೆ ರವಾನೆಯಾದವು. ಇಂತಹವುಗಳನ್ನು ಸಂಗ್ರಹಿಸುವಾಗ ಸ್ಥಳೀಯ ಮೆರುಗು ಮೌಖಿಕ ಚರಿತ್ರೆಯಲ್ಲಿ ವ್ಯಾಪಕವಾಗಿ ಮಡಗು ಗಟ್ಟಿರುತ್ತದೆ. ಇತರ ನೆನಪುಗಳ ವಿವರ, ಇತಿಹಾಸ ದಾಖಲೆಗಳು, ಲಿಖಿತ ದಾಖಲೆಗಳು, ನಂಬಿಕೆಗಳು, ದಿನಪತ್ರಿಕೆಗಳಲ್ಲದೆ, ಹಳೆಯ ತಲೆಮಾರಿನ ಬಗ್ಗೆ ಹಿನ್ನೋಟ ಬೀರಿದಾಗ ಜನಪದರು ಕೊಡುವ ಮಾಹಿತಿಯು ಪ್ರಸ್ತುತವೆನಿಸುತ್ತದೆ. ಇಂದಿನ ಜನರು ಅನೇಕ ಸೌಲಭ್ಯಗಳನ್ನು ಹೊಂದಿರುವರು. ದೂರವಾಣಿ, ಅಂಚೆ ವ್ಯವಸ್ಥೆ, ಟೆಲಿಗ್ರಾಫ್, ದಿನಚರಿ, ನಿಯತಕಾಲಿಕ, ಇ – ಮೇಲ್ ಮೊದಲಾದವು ಮೌಖಿಕ ಚರಿತ್ರೆಯನ್ನು ಬರೆಯಲು ನೆರವಾಗುತ್ತವೆ.

ಮೌಖಿಕ ಚರಿತ್ರೆಯ ಆರಂಭ ಪ್ರಾಚೀನವಾದುದು. ಇದಕ್ಕೊಂದು ಸೈದ್ಧಾಂತಿಕ ರಚನೆಯ ಚೌಕಟ್ಟು ಸಿಕ್ಕಿದ್ದು ಇತ್ತೀಚೆಗೆ ಅನೇಕ ಚರಿತ್ರೆಕಾರರು ಈ ಬಗೆಯ ರಚನೆಯಲ್ಲಿ ತೊಡಗಿರುವರು. ಒಂದು ವಿಷಯವನ್ನು ನಿರ್ದಿಷ್ಟಪಡಿಸಿಕೊಂಡು ಅದಕ್ಕೆ ಊಹಾತ್ಮಕತೆ ರಚಿಸಿ, ಮಾಹಿತಿ ಸಂಗ್ರಹಿಸಬೇಕು. ಹೀಗೆ ಮಾಡುವಾಗ ಒಂದು ದಾಖಲೆ ಮಾಡುವುದು ಮತ್ತೊಂದು ಧ್ವನಿಮುದ್ರಣ, ಛಾಯಾಚಿತ್ರಣ ಮಾಡಿಕೊಳ್ಳುವುದುಂಟು. ಇದು ಮುಕ್ಕಾಲು ಪಾಲು ಕ್ಷೇತ್ರ ಕಾರ್ಯವನ್ನು ಅವಲಂಬಿಸಿರುತ್ತದೆ. ಹೀಗೆ ಹೊರಡುವಾಗ ಕ್ಯಾಮೆರಾ, ಟೇಪ್‌ರೆಕಾರ್ಡರ್, ವೀಡಿಯೋ ಇತ್ಯಾದಿ ಪರಿಕರಗಳನ್ನು ಉಪಯೋಗಿಸಿ ಕೊಳ್ಳಬೇಕಾಗುತ್ತದೆ. ಟೇಪ್‌ರೆಕಾರ್ಡರ್‌ಗಳ ಮೂಲಕ ಚಾರಿತ್ರಿಕ ಸಂಗತಿಗಳನ್ನು ಜನರಿಂದಲೇ ಸಂಗ್ರಹಿಸಲಾಗುವುದು. ಒಂದೇ ವಿಷಯಕ್ಕೆ ತಕ್ಕಂತೆ ಒಬ್ಬರಿಗಿಂತ ಇನ್ನೊಬ್ಬರು ಹೇಗೆ ಭಿನ್ನ ಮಾಹಿತಿ ನೀಡುತ್ತಾರೆಂಬುದನ್ನು ಎಚ್ಚರಿಕೆಯಿಂದ ಗುರುತಿಸಬೇಕು. ಮೌಖಿಕ ಚರಿತ್ರೆ ಒಂದು ರೀತಿಯ ಕಾರ್ಯಕ್ರಮವನ್ನು ಹೋಲುವಲ್ಲಿ ಅನನ್ಯತೆಯನ್ನು ಪ್ರದರ್ಶಿಸುತ್ತದೆ. ಸಂದರ್ಶನದಲ್ಲಿ ಮಾಹಿತಿದಾರ ತನ್ನ ಮಾನಸಿಕ ಸಾಮರ್ಥ್ಯಕ್ಕೆ ತಕ್ಕಂತೆ ವಿವರ, ಆಧಾರ ನೀಡುವುದರಿಂದ ತೃಪ್ತಿಕರ ಚರಿತ್ರೆ ರಚಿಸುವುದು ಚರಿತ್ರೆಕಾರನಿಗೆ ಎದುರಾಗುವ ದೊಡ್ಡ ಸವಾಲು. ಏನೇ ಮಾಡಿದರೂ ವ್ಯವಸ್ಥಿತ, ಕ್ರಮಬದ್ಧತೆಯನ್ನು ಕಾಪಾಡಿಕೊಳ್ಳಬೇಕು. ಸಂದರ್ಶನ ಸಮಯದಲ್ಲಿ ನಾನು ಪ್ರಶ್ನಾವಳಿಯನ್ನು ೩೫ ಪ್ರಶ್ನೆಗಳು ರೂಪಿಸಿಕೊಂಡು ಸಂಬಂಧಿಸಿದ ಎಲ್ಲಾ ಬಗೆಯ ಮಾಹಿತಿಯನ್ನು ತಕ್ಕಮಟ್ಟಿಗೆ ಸಂಗ್ರಹಿಸಿದೆನು. ಬೇಡರು ತಮ್ಮ ಮೂಲ ಪುರುಷನನ್ನು ದೇವತ್ವಕ್ಕೇರಿಸಿ ಆರಾಧಿಸುವುದು ಇಲ್ಲಿ ಕಂಡು ಬರುವ ವಿಶೇಷ. ತಮ್ಮ ವಂಶದ ವೀರನಿಗೆ ಪವಾಡ, ದಂತಕಥೆಗಳನ್ನು ಕಟ್ಟಿ ಹೇಳುವುದು ಮತ್ತು ಅವರನ್ನು ದೇವರೆಂದು ಗುಡಿಕಟ್ಟಿ ಹಬ್ಬ, ಜಾತ್ರೆಗಳನ್ನು ಮಾಡುವುದು ಸೋಜಿಗದ ಸಂಗತಿಯೇನಲ್ಲ.

ನಾನು ಸಂದರ್ಶನ ಮಾಡಿದ್ದು ಬುಡಕಟ್ಟು ವೀರನ ನೇರ ವಂಶಸ್ಥರನ್ನು, ಅನುಯಾಯಿಗಳನ್ನು ಮತ್ತು ಭಕ್ತಾದಿಗಳನ್ನು. ಇದಕ್ಕೆ ಸಂಬಂಧಿಸಿದ ವಾರಸುದಾರರನ್ನು ಸ್ಮರಿಸುವುದು ಉಚಿತ. ಅಷ್ಟೇ ಅಲ್ಲದೆ, ಆ ವೀರ ಮತ್ತು ದೇವರ ಭಕ್ತಾದಿಗಳನ್ನು ನೇರವಾಗಿ ಭೇಟಿ ಮಾಡಿ ಆ ದೇವಾಲಯಗಳನ್ನು, ಅವರು ವಾಸಿಸುವ ಪ್ರದೇಶವನ್ನು ಆ ಪರಿಸರದ ಇತರೆ ಎಲ್ಲಾ ಸಂಗತಿಗಳನ್ನು ಗಮನಿಸಲಾಗಿದೆ. ರೈತರಕೃಷಿಕ, ಅಕ್ಷರಸ್ಥ, ಅನಕ್ಷರಸ್ಥ, ಅಧಿಕಾರಿ, ಶಿಕ್ಷಕ, ಬಾಲಕ, ವೃದ್ಧರಲ್ಲದೆ ವಿವಿಧ ಪ್ರವೃತ್ತಿಯ ವ್ಯಕ್ತಿಗಳನ್ನು, (ಸ್ತ್ರೀ – ಪುರುಷ) ಸಂದರ್ಶಿಸಿರುವೆ. ಕುರುಡ, ಕಿವುಡರ ಮೂಲಕ ಹುಚ್ಚ ಮೊದಲಾದವರ ಕಾಟವನ್ನು ತಾಳಿಕೊಂಡು ಅವರ ಸಹೋದರ ಸಹಾಯಕರೊಂದಿಗೆ ಅಭಿಪ್ರಾಯ ಮತ್ತು ನೆನಪುಗಳನ್ನು ತಿಳಿದುಕೊಂಡೆ. ಅವರು ಸಾಂಕೇತಿಸುವ ಚಿಹ್ನೆಗಳ ಮೂಲಕ ತೋರಿಸುವುದನ್ನು ಕಂಡು ಕುತೂಹಲ ಹುಟ್ಟಿದ್ದು ನಿಜ. ಅದೊಂದು ವಿಸ್ಮಯ ಲೋಕವೆಂದು ನಾನು ಭಾವಿಸಿದೆ. ಅವರು ಹೇಳುವ ಕಥೆಗಳು ಈ ಲೋಕವನ್ನೇ ಮೀರಿದ್ದು, ಎಲ್ಲೋ ಹೊಸ ಲೋಕವನ್ನು ಪರಿಚಯಿಸಿದಂತಾಯಿತು. ನಾನು ಈ ಮ್ಯಾಸಬೇಡರ ಹಟ್ಟಿಯಲ್ಲಿ ಬೆಳೆದವನಾದರೂ ಹೊರಗಿನ ವ್ಯಕ್ತಿ ನೋಡುವ ದೃಷ್ಟಿಕೋನದಂತೆ ಆಂತರಿಕ ಮತ್ತು ಬಾಹ್ಯ ಸಂವೇದನೆಗಳಿಗೆ ನಿರ್ಬಂಧ ವಿಧಿಸಲಿಲ್ಲ. ಹಟ್ಟಿ, ಹಳ್ಳಿಯ ಪ್ರದೇಶಕ್ಕೆ ಒತ್ತುಕೊಟ್ಟು ಇಲ್ಲಿ ಮಾಹಿತಿ ಸಂಗ್ರಹಿಸಿರುವೆ. ಪಟ್ಟಣ, ನಗರ ಪ್ರದೇಶಗಳನ್ನು ಕಡೆಗಣಿಸಿಲ್ಲ. ತೆಲುಗು ಭಾಷೆಯ ಮಾಹಿತಿಯನ್ನು ಸುಲಭವಾಗಿ ಕನ್ನಡಿಕರಿಸಿಕೊಳ್ಳುತ್ತಿದ್ದೆನು. ನಾನು ದ್ವಿ

ಭಾಷಿಗನಾಗದ್ದರಿಂದಲೇ ಅನುಕೂಲವಾಯಿತು. ಇತ್ತೀಚೆಗೆ ನಾನಾ ಕ್ಷೇತ್ರಗಳಲ್ಲಿ ಪ್ರಗತಿದಾಯಕವಾಗಿ ಬೆಳೆಯುವ ಬೇಡರು ರೈತನ ಮತ್ತು ಅಧಿಕಾರಗಳ ಜೊತೆಗೆ ಪ್ರಭುತ್ವದ ಶಕ್ತಿ, ಆಗುಹೋಗುಗಳನ್ನು ಗಮನಿಸುವ ಜಾಣರಾಗುತ್ತಿದ್ದಾರೆ. ಇದು ಒಳ್ಳೆಯ ಬೆಳವಣಿಗೆ. ಹಳೆಯ ಮೈಸೂರಿನ ಬೇಡರು ನಾಗರಿಕತೆಯಲ್ಲಿ ಮುಂದಿದ್ದು ತುಂಬಾ ನಾಜೂಕಿನವರೆಂದು ಹೇಳಬಹುದು. ಹೊಸಮೈಸೂರಿನ ಬೇಡರು ಬಡತನ, ಅನುಭವಿಸಿದ ಯಾತನೆಗಳ ಮಧ್ಯೆ ಸ್ವಾಭಿಮಾನದ ಕಿಚ್ಚನ್ನು ಉಳಿಸಿಕೊಂಡಿದ್ದಾರೆ. ರಾಜಮನೆತನ, ಕೋಟೆ, ಕೊತ್ತಲು, ದೇವಾಲಯಗಳು ನಮ್ಮ ಕುರುಹುಗಳೆಂದು ಗರ್ಜಿಸುವುದುಂಟು.

ಚಿತ್ರದುರ್ಗ ಪರಿಸರದಲ್ಲಿ ಶ್ರೀಮಂತರು, ಮಧ್ಯಮ ಮತ್ತು ಸಾಮಾನ್ಯ ವರ್ಗದ ನಾಯಕರನ್ನು ನೋಡಬಹುದು. ಮೂಲಸಂಸ್ಕೃತಿಯೊಂದು ಆಧುನಿಕ ಸಂಸ್ಕೃತಿಯಲ್ಲಿ ಪ್ರಭಾವ ತಳಕು ಹಾಕಿಕೊಂಡಿರುವ ಸಂಗತಿಗಳು ಮುಖಾಮುಖಿಯಾಗುತ್ತಿವೆ. ತಮ್ಮ ಹಿರಿಮೆಯನ್ನು ಸಾಕ್ಷ್ಯಾಧಾರಗಳ ಮೂಲಕ ಹೇಳಿಕೊಳ್ಳುವುದು ಇವರ ಅನನ್ಯತೆಯನ್ನು ತೋರಿಸುತ್ತದೆ. ಚಿತ್ರದುರ್ಗ ಜಿಲ್ಲೆಯ ಬುಡಕಟ್ಟು ವೀರರು ಎಂಬುದು ತುಂಬಾ ವ್ಯಾಪಕವಾದ ವಿಷಯವಾಗಿದೆ. ಹೀಗಾಗಿ ಮ್ಯಾಸಬೇಡರನ್ನಷ್ಟೇ ಇಲ್ಲಿ ಅಧ್ಯಯನ ಮಾಡಲಾಗಿದೆ. ಇವರನ್ನು ಸಾಂಸ್ಕೃತಿಕ ನಾಯಕರೆಂದು ಕರೆಯಬಹುದಾಗಿದೆ. ನೂತನ ಜಿಲ್ಲೆಯಾಗುವ ಮೊದಲೇ ಈ ಕುರಿತು ಅಧ್ಯಯನ ಮಾಡುತ್ತಿದ್ದುದರಿಂದ ಹಳೆಯ ಚಿತ್ರದುರ್ಗ ಜಿಲ್ಲೆಯನ್ನು ಈ ವ್ಯಾಪ್ತಿಗೊಳಪಡಿಸಿಕೊಳ್ಳಲಾಗಿದೆ. ಇದಕ್ಕೆ ಪೂರಕವಾಗಿ ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ, ಹೊಸಪೇಟೆ, ದಾವಣಗೆರೆ ಜಿಲ್ಲೆಯ ಜಗಳೂರು ತಾಲೂಕುಗಳನ್ನು ಸಂದರ್ಶಿಸಿ ಈ ಬಗ್ಗೆ ಮಾಹಿತಿ ಸಂಗ್ರಹಿಸಿರುವೆ. ಸಂದರ್ಶನಕ್ಕೆಂದು ಹೋದಾಗ ಎದುರಾದ ಸಮಸ್ಯೆಗಳು ಒಂದು ಎರಡಲ್ಲ. ಸ್ತ್ರೀ ಪುರುಷರಿಬ್ಬರನ್ನು ಈ ಬಗ್ಗೆ ಕೇಳಿದಾಗ ಯಾವ ಉದ್ದೇಶಕ್ಕೆ ನೀವು ಇದನ್ನು ಮಾಡುತ್ತೀರಿ. ಇದರಿಂದ ನಿಮಗೇನು ಲಾಭ ಎಂದು ಕೇಳಿದರು. ನಾನು ಇದು ನಮ್ಮ ಜನಾಂಗದ ಚರಿತ್ರೆ. ಎಲ್ಲರಿಗೂ ತಿಳಿಯಬೇಕು ನಮ್ಮ ಸಾಂಸ್ಕೃತಿಕ ಚರಿತ್ರೆ, ರಾಜಕೀಯ ಚರಿತ್ರೆ ಎಲ್ಲಿ ದಾಖಲಾಗಿದೆ ತೋರಿಸಿ ಎಂದಾಗ ಅವರು ಹೇಳಿದ ಮಾತುಗಳಿಂದ ನನಗೆ ಕಣ್ಣೀರು ಹುಕ್ಕಿ ಬಂತು. ಪ್ರಾಚೀನ ಚರಿತ್ರೆ ದುರಂತವಾದುದು. ಸಮುದ್ರದಲ್ಲಿ ಮೀನು ಹಿಡಿದಂತೆ, ಬಣವಿಯಲ್ಲಿ ಸೂಜಿ ಹುಡುಕಿದಂತಾಗುತ್ತದೆ ಇವರ ಚರಿತ್ರೆ.

ಭೇಟಿ ಕೊಟ್ಟಾಗ ಮಾಹಿತಿದಾರನಿಗೆ ಪೂರ್ವದಲ್ಲಿ ತಿಳಿಸಿಲ್ಲದಿದ್ದರೆ, ಅವರಿಗೆ ಪುನಃ ದಿನಾಂಕ ಗೊತ್ತುಪಡಿಸಿ, ಮತ್ತೇ ಸಂದರ್ಶಿಸುತ್ತಿದ್ದೆ. ಮೊದಲು ಕೊಟ್ಟ ಮಾಹಿತಿಗೂ ಅನಂತರ ಕೊಟ್ಟ ಮಾಹಿತಿಗೂ ವ್ಯತ್ಯಾಸಗಳಿರುವುದನ್ನು ಖಚಿತಪಡಿಸಿಕೊಳ್ಳುತ್ತಿದ್ದೆ. ಹೀಗೆ ಯಾವುದು ಸತ್ಯಕ್ಕೆ ಹತ್ತಿರದ ಸಂಗತಿಯೂ ಅದನ್ನೇ ಅವಲಂಬಿಸುತ್ತಿದೆ. ಈ ಬಗ್ಗೆ ಪತ್ರ ಬರೆದು, ಫೋನ್ ಮಾಡಿ ಆ ಸ್ಥಳಕ್ಕೆ ಹೋಗಿ ಅವರನ್ನು ಸಂದರ್ಶಿಸುತ್ತಿದ್ದೆ. ಅಲ್ಲಿ ಹೇಳಿಕೆ, ಕಥೆ, ಗೀತೆಗಳಲ್ಲದೆ, ದಿನಪತ್ರಿಕೆ, ಕಾನೂನು ದಾಖಲೆ, ದೇವರ ರೆಕಾರ್ಡ್, ಕಟ್ಟೇಮನೆ ಪತ್ರ, ಗುಡಿಕಟ್ಟೆಗಳ ವ್ಯಾಜ್ಯ ತೀರ್ಮಾನಗಳ ಪತ್ರಗಳನ್ನು ಪಡೆದು ಪರಿಶೀಲಿಸತೊಡಗಿದೆನು.

ಅಧಿಕಾರಿಯನ್ನು ಕಛೇರಿ ಮತ್ತು ಮನೆಯಲ್ಲಿ, ರೈತನನ್ನು ಹೊಲ ಮತ್ತು ಮನೆಯಲ್ಲಿ ಸಂದರ್ಶಿಸಿದಾಗ ಅನೇಕ ಒಳನೋಟಗಳು ಅಂಕುರಿಸುತ್ತಿದ್ದವು. ಹೆಸರು, ಜಾತಿ, ದೇವರು, ವೀರರ ಆರಾಧನೆ, ಸ್ಥಳ ಮೊದಲಾದವುಗಳನ್ನು ಅಭಿಮಾನ, ಆನಂದದಿಂದ ವಿವರಿಸುತ್ತಿದ್ದರು. ಒಬ್ಬೊಬ್ಬ ವ್ಯಕ್ತಿಯನ್ನು ಸಂದರ್ಶನ ಮಾಡುವುದು ಉಚಿತವೆಂದು ಸಾಮೂಹಿಕ ಸಂಘಟನೆಗಳನ್ನು ಸಂದರ್ಶಿಸುವುದಕ್ಕೆ ಮಹತ್ವ ಕೊಡಲಿಲ್ಲ. ಒಂದು ಸಾರಿ ಸಂದರ್ಶಿಸಿದ ನಂತರ ತೃಪ್ತಿಕರ ಮಾಹಿತಿ ಸಿಗಲಿಲ್ಲವೆಂದರೆ, ಅದೇ ಜನಾಂಗದ ಬೆಡಗಿನ, ಮನೆತನದವರನ್ನು ಬೇರೆಲ್ಲಿರುವುದೆಂದು ಹುಡುಕಿ ಅದಕ್ಕಿಂತ ಉತ್ತಮ, ವಾಸ್ತವದ ಮಾಹಿತಿಯನ್ನು ಪಡೆಯುತ್ತಿದ್ದೆ. ಮಾಹಿತಿ ಪಡೆದ ನಂತರ ದಿನಾಂಕ, ಸ್ಥಳ ಬರೆದು ಸಹಿ ಮಾಡುತ್ತಿದ್ದೆನು. ಪ್ರಾಚ್ಯಾವಶೇಷಗಳನ್ನು ಛಾಯಾಚಿತ್ರ ತೆಗೆದುಕೊಂಡು, ಸ್ಥಳೀಯ ಸಾಹಿತ್ಯ, ಸಾಂಸ್ಕೃತಿಕ, ಚಾರಿತ್ರಿಕ ಸಂಘಟನೆಗಳನ್ನು ಸಂದರ್ಶಿಸಿರುವೆನು. ಸರ್ಕಾರಿ, ಖಾಸಗಿ ಉದ್ಯೋಗಿಗಳು, ದೇವರ ಪೂಜಾರಿಗಳು, ನಾಯಕ ಜನಾಂಗದ ಗಣ್ಯರು, ಮಠಾಧೀಶರು ಮೊದಲಾದವರನ್ನು ಕಂಡು ಈ ಬಗ್ಗೆ ಚರ್ಚಿಸಿ, ಮಾಹಿತಿ ಪಡೆದು ದಾಖಲಿಸಿರುವೆನು.

ಮ್ಯಾಸಬೇಡರು ಇಂದು ಆಧುನಿಕ ಜಗತ್ತಿಗೆ ತಮ್ಮನ್ನು ಅರ್ಪಿಸಿಕೊಂಡು ವಿವಿಧ ಕ್ಷೇತ್ರಗಳಲ್ಲಿ ತಮ್ಮ ಅನನ್ಯತೆಯನ್ನು ಎತ್ತಿ ತೋರಿಸಿಕೊಳ್ಳುತ್ತಿದ್ದಾರೆ. ಒಂದೆಡೆ ಪಾರಂಪರಿಕ ಸಾಂಸ್ಕೃತಿಕ ಲಕ್ಷಣಗಳನ್ನು ಉಳಿಸಿಕೊಂಡು ಬರುವುದು ಮತ್ತು ಪರಿವರ್ತನಾಶೀಲ

ಸಮಾಜಕ್ಕೆ ಹೊಂದಿಕೊಳ್ಳುವುದುಂಟು. ಈ ಹಿನ್ನೆಲೆಯಲ್ಲಿ ಅವರ ಮೌಖಿಕ ಪರಂಪರೆಯನ್ನು ಚರಿತ್ರೆಯಲ್ಲಿ ದಾಖಲಿಸುವ ಪ್ರಸ್ತುತತೆಯಿದೆ. ತಮ್ಮ ಪ್ರಾಚೀನ ಸಂಸ್ಕೃತಿಯ ಕವಲುಗಳು ಕುಸಿಯುತ್ತಿದ್ದು, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸಂಸ್ಥಾನ, ಪಾಳೆಯಪಟ್ಟು, ಕಟ್ಟೆಮನೆ, ಗುಡಿಕಟ್ಟೆ, ದೊರೆಮನೆತನಗಳು ಇಂದು ಹೀನಾಯ ಪರಿಸ್ಥಿತಿಯನ್ನು ಎದುರಿಸುತ್ತಿವೆ. ಜನಸಾಮಾನ್ಯರಾದ ಮ್ಯಾಸಬೇಡರು ಮತ್ತು ರಾಜಪ್ರಭುತ್ವದಲ್ಲಿ ಬೇಡರ ರಾಜಮನೆತನಗಳನ್ನು ಸೂಕ್ಷ್ಮವಾಗಿ ಅವಲೋಕಿಸುತ್ತಿದ್ದು, ಅಲಕ್ಷಿಸಲ್ಪಟ್ಟ ವೀರರನ್ನು ಅವರ ಆರಾಧನಾ ಕ್ಷೇತ್ರಗಳನ್ನು ಇಲ್ಲಿ ಸಮಗ್ರವಾಗಿ ಅಧ್ಯಯನ ಮಾಡಲಗಿದೆ ಎಂದು ಹೇಳಲಾರೆ. ಮರೆಯಾದ ಅನೇಕ ಸಂಗತಿಗಳಿವೆ. ಅಂಥವುಗಳನ್ನು ಮುಂದಿನ ಕೃತಿಯಲ್ಲಿ ಪರಿಷ್ಕರಿಸಿಕೊಳ್ಳುವೆ. ಓದುಗರಾದ ತಾವು ಈ ಬಗ್ಗೆ ತಮ್ಮ ಅನಿಸಿಕೆಗಳನ್ನು ತಿಳಿಸಿದರೆ ನನ್ನ ಶ್ರಮಕ್ಕೆ ತಕ್ಕ ಪ್ರತಿಫಲವೆಂದು ಭಾವಿಸುವೆ, ಹೆಮ್ಮೆ ಪಡೆಯುವೆ.

ನನ್ನ ಈ ಬಗೆಯ ಶೈಕ್ಷಣಿಕ ಬೆಳವಣಿಗೆಗೆ ಕಾರಣರಾದವರು ಅನೇಕರು. ಅವರಲ್ಲಿ ನನ್ನ ಅಜ್ಜಿ ಮೊದಲಿಗರು. ಮನೆಯೇ ಮೊದಲ ಪಾಠಶಾಲೆ. ತಾಯಿಯೇ ಮೊದಲ ಗುರು ಎನ್ನುವುದುಂಟು. ಆದರೆ ಶಾಲೆಗಿಂತ ನನ್ನ ಅಜ್ಜಿ ಕಲಿಸಿದ್ದೆ ಹೆಚ್ಚು. ಅಪ್ಪ ಪೂಜಾರಿ ಸಣ್ಣ ಪಾಲಯ್ಯ, ತಾತ ದಿ.ಪೆದ್ದ ಓಬಯ್ಯ ಮತ್ತು ಅಜ್ಜಿ ದಿ.ತೋಟದ ಪಾಲಮ್ಮನವರನ್ನು ಸ್ಮರಿಸಿ ಅವರಿಗೆ ಹೃತ್ಪೂರ್ವಕ ಕೃತಜ್ಞತೆಗಳನ್ನು ತಿಳಿಸುವೆನು.

ಅಜ್ಜಿ ನನ್ನನ್ನು ಶಾಲೆಗೆ ಬಲಾತ್ಕಾರವಾಗಿ ಕಳುಹಿಸುತ್ತಿದ್ದಳು. ಆಗ ನನ್ನನ್ನು ಹೊಡೆದು ಬಡಿದು ಹೆಗಲ ಮೇಲೆ ಹೊತ್ತುಕೊಂಡು ಹೋಗಿ ಬಿಟ್ಟು ಬರುತ್ತಿದ್ದ ಮೋಟಬೋರಯ್ಯ ಮತ್ತು ತೋಟದ ಮುಕ್ಕಣ್ಣನವರನ್ನು ಸ್ಮರಿಸುವೆ. ವಿವಿಧ ಹಂತಗಳಲ್ಲಿ ನೇರವಾಗಿ ವಿಶೇಷ ಕಾಳಜಿ ತೋರಿದ ಶಿಕ್ಷಕರು ಅನೇಕ ಮಂದಿ, ಬಿ.ಬಸಪ್ಪ, ಜಿ. ಹನುಮಂತಪ್ಪ, ಕೆ.ಎಂ.ತಿಪ್ಪೇಸ್ವಾಮಿ, ಎನ್.ಬಿ. ತಿಮ್ಮಣ್ಣ, ಎನ್.ರಾಜಣ್ಣ, ಎ.ಬಸಪ್ಪ, ಡಿ.ಬೋರಪ್ಪ, ಜಿ.ಸರ್ವಮಂಗಳ, ರಾಜಾರಾಮಹೆಗಡೆ ಮೊದಲಾದವರನ್ನು ನೆನಪಿಸಿಕೊಳ್ಳುವೆ.

ಎಂ.ಎ. ಮುಗಿದಾಗ ಉದ್ಯೋಗದ ಅಲೆದಾಟದಲ್ಲಿ ನೆರವಾದ ಯಶೋಧರಮ್ಮ ಡಿ. ಬೋರಪ್ಪ, ಬಿ.ಬೋರಯ್ಯ, ಬಂಜಯ್ಯ, ಪಾಪಯ್ಯ, ಗೆಳೆಯ ಜಿ.ಎಸ್. ತಿಪ್ಪೇಸ್ವಾಮಿ, ವಿಶ್ವನಾಥ, ಬಿ.ಬಸವರಾಜ ಮೊದಲಾದವರ ಸ್ಮರಣೆ ಅಗತ್ಯವೆನಿಸುವುದು.

ಸಂಶೋಧನೆಗೆ ಪದಾರ್ಪಣೆ ಮಾಡಿದಾಗ ಪ್ರೊ.ಲಕ್ಷ್ಮಣ್ ತೆಲಗಾವಿ ಅವರು ಮಾರ್ಗದರ್ಶನ ನೀಡಿ ಪಿಎಚ್.ಡಿ ಪದವಿ ಪಡೆಯಲು ಕಾರಣರಾಗಿದ್ದಾರೆ. ಹಿಂದಿನ ಕುಲಪತಿಗಳಾದ ಡಾ.ಚಂದ್ರಶೇಖರ್ ಕಂಬಾರ, ಡಾ.ಎಂ.ಎಂ.ಕಲಬುರ್ಗಿ ಮತ್ತು ಇಂದಿನ ಕುಲಪತಿಗಳಾದ ಡಾ.ಎಚ್.ಜೆ.ಲಕ್ಕಪ್ಪಗೌಡ, ಕುಲಸಚಿವರಾದ ಡಾ.ಕೆ.ವಿ.ನಾರಾಯಣ ಡೀನ್ ಡಾ.ಹಿ.ಚಿ.ಬೋರಲಿಂಗಯ್ಯ, ಅಧ್ಯಯನಾಂಗದ ಪ್ರೋ. ಕರೀಗೌಡ ಬೀಚನಹಳ್ಳಿ, ಡಾ.ಕೆ.ಆರ್. ಸಂಧ್ಯಾರೆಡ್ಡಿ ಮೊದಲಾದವರನ್ನು ಸ್ಮರಿಸುವುದು ಉಚಿತ. ಬದುಕಿನ ಏಳು – ಬೀಳುಗಳಲ್ಲಿ ಮುಖ್ಯವಾದುದನ್ನು ಆರಿಸಿಕೊಳ್ಳುವಲ್ಲಿ ನಾನು ಪ್ರಾಯಾಸಪಟ್ಟು ವಿಳಂಬಿತನಾದಾಗ ಮಿತ್ರರು ಸಹಕರಿಸಿದ್ದಾರೆ. ವಿಭಾಗ ಸಹೋದ್ಯೋಗಿಗಳು, ಆಗಿನ ಸಂಶೋಧನಾ ಮಿತ್ರರನ್ನು ಮರೆಯುವುದಾದರೂ ಹೇಗೆ, ಮಡದಿ ಮಕ್ಕಳು, ಬಂಧುಗಳು ಇಲ್ಲಿ ನೆರವಾಗಿದ್ದಾರೆ. ಸಂದರ್ಶನದಲ್ಲಿ ಜಗಳೂರು, ಗಂಜಿಗಟ್ಟೆ, ಕಾತ್ರಿಕಟ್ಟೆ, ವಲಸೆ, ಕುಮತಿ, ಮೊಳಕಾಲ್ಮೂರು, ಚಳ್ಳಕೆರೆ, ಹಿರೇಹಳ್ಳಿ, ನಾಯಕನಹಟ್ಟಿ ಮೊದಲಾದ ಸ್ಥಳಗಳಿಗೆ ಹೋದಾಗ ನೆರವಾದವರ ಹೃದಯಕ್ಕೆ ಹೃದಯ ವಂದನೆಗಳನ್ನು ಸಲ್ಲಿಸುವೆ. ಅಂದವಾಗಿ ಡಿ.ಟಿ.ಪಿ. ಮಾಡಿದ. ವೈ ಎಂ. ಶರಣಬಸವ ಮತ್ತು ಪ್ರಸಾರಾಂಗದ ಸಹಾಯಕ ನಿರ್ದೇಶಕ ಶ್ರೀ ಸುಜ್ಞಾನಮೂರ್ತಿ, ಶ್ರೀ ಕೆ.ಎಲ್. ರಾಜಶೇಖರ್, ಕಲಾವಿದ ಶ್ರೀ ಕೆ.ಕೆ.ಮಕಾಳಿ, ಹಗಲುರಾತ್ರಿ ಸಂಶೋಧನೆ ಮಾಡಿ ಹುಚ್ಚನಾಗುವೆ ಎನ್ನುವ ಎಲ್ಲರನ್ನು ನಾನು ಹೃತ್ಪೂರ್ವಕವಾಗಿ ಸ್ಮರಿಸಿಕೊಳ್ಳುತ್ತಾ ಕೃತಜ್ಞತೆಗಳನ್ನು ತಿಳಿಸುವೆನು. ಈ ಪುಸ್ತಕ ಓದುಗರಾದ ನಿಮಗೂ ಸಹಾ.

**ಡಾ.ವಿರೂಪಾಕ್ಷಿ ಪೂಜಾರಹಳ್ಳಿ**

# ಬೇಡರ ಸಾಂಸ್ಕೃತಿಕ ನಾಯಕರು

ಬೇಡರ ಸಾಂಸ್ಕೃತಿಕ ನಾಯಕರು ಎಂದು ಮಾತನಾಡುವಾಗ ಡಾ. ವಿರೂಪಾಕ್ಷಿ ಪೂಜಾರಹಳ್ಳಿಯ 'ಚಿತ್ರದುರ್ಗ ಜಿಲ್ಲೆಯ ಬುಡಕಟ್ಟು ವೀರರು' ಕೃತಿಯನ್ನು ಉಲ್ಲೇಖಿಸ ಬಹುದು. ಪ್ರಸ್ತುತ ಪ್ರಬಂಧದ ಚರ್ಚೆಯನ್ನು ಅವರ ಪ್ರಸ್ತಾವನೆಯ ಭಾಗದ ಉಲ್ಲೇಖ ದಿಂದಲೇ ಪ್ರಾರಂಭಿಸುತ್ತೇನೆ. ಆಧುನಿಕ ಸಂಸ್ಕೃತಿಯಿಂದ ನಮ್ಮ ಪ್ರಾಚೀನ ಸಂಸ್ಕೃತಿ ನೆಲಕಚ್ಚು ವಂತಾಗಿದೆ. ಬುಡಕಟ್ಟು ವೀರರನ್ನು ಆರಾಧಿಸುವ ಬೇಡರು ಇತರರ ಪ್ರಭಾವಕ್ಕೆ ಒಳಗಾಗಿ ಶ್ಯುತಿ ಪಡೆದ ದೇವರನ್ನು ಪೂಜಿಸುತ್ತಾಅನುಯಾಯಿಗಳಾಗುತ್ತಾರೆ. ಜೊತೆಗೆ ತಮ್ಮ ವಂಶದ ಅಥವಾ ಪರಂಪರೆಯ ಪೂರ್ವಿಕ ವ್ಯಕ್ತಿಯನ್ನು ಆರಾಧಿಸುವುದುಂಟು. ಮ್ಯಾಸಬೇಡರ ವಿಶೇಷತೆಯೆಂದರೆ ಎಂಥ ಜಗದ್ವಿಖ್ಯಾತ ದೇವರಗಳಿದ್ದರೂ ತಮ್ಮ ಮಾತೃ ದೇವತೆಗಳಿಗೆ ಮೊದಲ ಆಧ್ಯತೆ ಕೊಡುವರು. ಆದುದರಿಂದ ಇಂಥಾ ವೀರರ ಸಾಂಸ್ಕೃತಿ ಬದುಕು ಅಜ್ಞಾತವಾಗಿದ್ದನ್ನು ತೆರೆದು ತೋರಿಸಬೇಕಾಗಿದೆ (ಪುಟ ೭).

ಈ ಉಲ್ಲೇಖವನ್ನು ಗಮನಿಸಿದರೆ ಕೆಲವು ಅಪಸ್ವಷ್ಯವಾಗುತ್ತದೆ. ಸಮುದಾಯಗಳನ್ನು ಅಧ್ಯಯನ ಮಾಡುವ, ದುಂಡು ಹೇಳಿಕೆಗಳನ್ನು ಸಾರಾಸಗಾಟಾಗಿ ನೀಡುವ, ಸಾಮಾನ್ನೀಕರಣದ ವ್ಯಾಖ್ಯಾನ ಜನಪ್ರಿಯ ಮಾದರಿ. ಈ ಮಾದರಿ ಒಂದು ಸಮುದಾಯದ ಅಂತಸತ್ವದ ಸೂಕ್ಷ್ಮ ಒಳನೋಟಗಳನ್ನು ಬಿಟ್ಟುಕೊಂಡುತ್ತದೆ. ಅಂತೆಯೇ ಒಂದು ಸಿದ್ಧಮಾರಿಯಲ್ಲಿ ಇಡಿಸಮುದಾಯದ ವಿಶ್ಲೇಷಣೆಗಳನ್ನು ಒರಟು ಒರಟಾಗಿ ತುರುಕಿದಂತಾಗುತ್ತದೆ. ಇದು ವಿರೂಪಾಕ್ಷಿ ಪೂಜಾರಳ್ಳಿಯವರ ಒಬ್ಬರ ಸಮಸ್ಯೆಯಲ್ಲಿ ಸಂಸ್ಕೃತಿಯಿಂದ ನಮ್ಮ ಪ್ರಾಚೀನ ಸಂಸ್ಕೃತಿ ನೆಲಕಚ್ಚುವಂತಾಗಿದೆ. ಎನ್ನುವುದು ಒಂದು ಜನಪ್ರಿಯ ವ್ಯಾಖ್ಯಾನ ಸರಿ ಇದನ್ನು ನಾವೇ ಹೇಳುತ್ತಿದ್ದೇವಾ ಸಮುದಾಯ ಹೇಳುತ್ತಿದೆಯಾ? ಅಥವಾ ಅಧ್ಯಯನಕಾರರು ಆಧುನಿಕತೆಯ ಸೌಲಭ್ಯಗಳೆಲ್ಲವನ್ನೂ ಬಳಸಿಕೊಂಡು, ಸಮುದಾಯ ಮಾತ್ರ ಆಧುನಿಕತೆಯ ಪ್ರಭಾವಕ್ಕೆ ಒಳಗಾಗಬಾರದು ಎನ್ನುವ ಪಕ್ಷಪಾತ ತೋರುತ್ತಿದ್ದೇವೆಯೆ? ಹೋಗಲಿ ಈ ವ್ಯಾಖ್ಯಾನವನ್ನು ಪರೀಕ್ಷಿಸಲು ಸಮುದಾಯಗಳನ್ನು ಸೂಕ್ಷ್ಮವಾಗಿ ಗ್ರಹಿಸಿ ಅದರ ಫಲಿತಗಳ ನ್ನೇನಾದರೂ ನೋಡಿದ್ದೇವೆಯೇ? ಇಲ್ಲ. ನನ್ನ ಅಧ್ಯಯನದ ಮಿತಿಯೊಳಗೆ ಕನ್ನಡದಲ್ಲಿ ಸಮುದಾಯಗಳನ್ನು ತುಂಬಾ ಸೂಕ್ಷ್ಮವಾಗಿ ಗ್ರಹಿಸಿ ಅದರ ಅಂತಸತ್ವದ ಒಳಹುಗಳನ್ನು ಹಿಡಿಯುವ ಒಂದೇ ಒಂದು ಅಧ್ಯಯನ ಸಿಕ್ಕಂತೆ ಕಾಣುವುದಿಲ್ಲ. "ಬುಡಕಟ್ಟು ವೀರರನ್ನು ಆರಾಧಿಸುವ ಬೇಡರು ಇತರರ ಪ್ರಭಾವಕ್ಕಗೆ ಒಳಗಾಗಿ ಖ್ಯಾತಿ ಪಡೆದ ದೇವರನ್ನು ಪೂಜಿಸುತ್ತಾ ಅನುಯಾಯಿಗಳಾಗುತ್ತಾರೆ" ಈ ವ್ಯಾಖ್ಯಾನವು ಸಹ ಬುಡಕಟ್ಟು ಅಧ್ಯಯನದ ಸಾರ್ವತ್ರಿಕ ನಂಬಿಕೆ. ಯಾಕಾಗಿ ಇತರ ದೇವರುಗಳ ಪ್ರಭಾವ ಬುಡಕಟ್ಟುಗಳ ಮೇಲೆ ಆಗುತ್ತಿದೆ? ಬುಡಕಟ್ಟುಗಳೇಕೆ ಇತರ ದೇವರುಗಳನ್ನು ಆರಾಧಿಸುವ ಕಡೆ ಚಲಿಸುತ್ತಿದ್ದಾರೆ? ಎಂದು ನಾವು ಪ್ರಶ್ನಿಸಿಕೊಂಡು ಉತ್ತರ ಉಡುಕವುದಿಲ್ಲ.

ಈ ಪ್ರವೇಶಿಕೆಯ ಚರ್ಚೆಗೆಕಾರಣ ಕರ್ನಾಟಕದಲ್ಲಿ ಸಮುದಾಯಗಳನ್ನು ದುಂಡಾಗಿ ಗ್ರಹಿಸುವ ಮಾದರಿಗಳ ಕಟ್ಟೆಯಾಗಿ ನೆಲೆಯೂರಿವೆ. ಹಾಗಾಗಿ ನಮಗೆ ಸೂಕ್ಷ್ಮವಾಗಿ ಸಮುದಾಯಗಳ ಚಲನೆಯನ್ನು ಹಿಡಿಯಲು ಸಾಧ್ಯವಾಗಿಲ್ಲ. 'ಕರ್ನಾಟಕದಲ್ಲಿ ಸಾಂಸ್ಕೃತಿಕ' ನಾಯಕರು ಪದ ಅಧ್ಯಯನಗಳ ಹೊಸ ಪ್ಯಾಶನ್ನಿನಂತೆ ಮತ್ತೆ ಮತ್ತೆ ಬಳಕೆಯಾಗುತ್ತಿದೆ. ಈ ಅಧ್ಯಯನಗಳ ಮೂಲ ಆಶಯ 'ಅಜ್ಞಾತವಾಗಿದ್ದ ಸಾಂಸ್ಕೃತಿಕ ವೀರರ ಬದುಕನ್ನು ಸಮುದಾಯಗಳಿಗೆ ತೆರೆದು ತೋರಿಸಬೇಕು' ಎನ್ನುವುದು. ಸಮುದಾಯದ ಸ್ಮೃತಿಲೋಕ ದಿಂದಲೇ 'ಸಾಂಸ್ಕೃತಿಕ ನಾಯಕರ' ಜೀವನಚಿತ್ರವನ್ನು ಪಡೆದ ಅಧ್ಯಯನಕಾರರು, ಮತ್ತೆ ಸಮುದಾಯಕ್ಕೆ ತೆರೆದು ತೋರಿಸುತ್ತೇವೆ ಎಂದು ಹೊರಡುವ ಕ್ರಮವೇ ವಿಚಿತ್ರವಾಗಿದೆ. ಆದರೆ ಸಾಂಸ್ಕೃತಿಕ ನಾಯಕರನ್ನು ಸಾಂಸ್ಕೃತಿ ಶಕ್ತಿಯನ್ನಾಗಿ ರೂಪಿಸುವ ಮೂಲಕ ಆ ಸಮುದಾಯದೊಳಗೆ 'ಆತ್ಮವಿಶ್ವಾಸ'ವನ್ನು ಬೆಳೆಸುವ ಕಡೆ ಈ ಅಧ್ಯಯನಗಳು ಚಲಿಸ ಬೇಕಾಗಿದೆ. ಈ ಬಗೆಯ ಚಲನೆ ನನಗೆ ಗೊತ್ತಿರುವಂತೆ 'ಮಂಟೇಸ್ವಾಮಿ' ಕುರಿತ ಅಧ್ಯಯನ ಗಳಲ್ಲಿ ಮಾತ್ರ ನಡೆಯುತ್ತಿದೆ. ಉಳಿದಂತೆ ಕರ್ನಾಟಕದಲ್ಲಿ ಮೈಲಾರಲಿಂಗ, ಜುಂಜಪ್ಪ, ಮಾದೇಶ್ವರ, ಯಲ್ಲಮ್ಮ, ಸಿರಿ,

ಗಾದ್ರಿ ಪಾಲನಾಯಕ, ಇನ್ನೂ ಮಾರಕ್ಕೂ ಹೆಚ್ಚು ಸಾಂಸ್ಕೃತಿಕ ನಾಯಕರ ಅಧ್ಯಯನಗಳು ನಡೆಯುತ್ತಿವೆ. ಇವುಗಳ ಚಲನೆ ಮಾತ್ರ ಜನಪ್ರಿಯ ನಂಬಿಕೆಯ ಕಡೆ ಸಾಗಿದೆ.

ಬೇಡ ಸಮುದಾಯದ 'ಸಾಂಸ್ಕೃತಿಕ ವೀರರ' ಅಧ್ಯಯನಗಳಿಗೂ ಮೇಲಿನ ಸರಹದ ಮಿತಿಗಳಿವೆ. ಈ ಹೊತ್ತು ಬೇಡ ಸಮುದಾಯ ಸಾಂಸ್ಕೃತಿ ನಾಯಕರನ್ನು ಅಧ್ಯಯನ ಮಾಡುವುದೆಂದರೆ ಇತರೆ ಸಮುದಾಯಗಳಿಗೆ ಈ ಸಮುದಾಯದ ಸಾಂಸ್ಕೃತಿಕ ಚರಿತ್ರೆಯನ್ನು ತೋರಿಸುವುದು ಎಂಬ ಅರ್ಥಪಡೆದಿದೆ. ಈಗ ಸಮುದಾಯಗಳು ರಾಜಕೀಯ ಸೌಲಭ್ಯಗಳನ್ನು ಪಡೆದು ಸಬಲವಾಗುವತ್ತ ಹೆಜ್ಜೆ ಇಟ್ಟಿವೆ. ಇಲ್ಲಿಯೂ ಸಹ ಸಮುದಾಯದ ಕಲಿತ ಸುಶಿಕ್ಷಿತರು ಒಂದು ಸಮುದಾಯದ ಮೂಲಕ ಈ ಸಮುದಾಯಕ್ಕೆ ಪಾರಂಪರಿಕ ಚರಿತ್ರೆ ಇದೆ. ಆದರೆ ವರ್ತಮಾನದಲ್ಲಿ ಅಸಹನೀಯವಾಗಿ ರೂಪಕಗಳನ್ನು ಈ ಕಾಲದ ಸಮುದಾಯ ಶಕ್ತಿಯಾಗಿಸಿ ಕೊಂಡು ಬಲಗೊಳ್ಳಬೇಕೆಂಬ ನಿಲುವ ಬೇಡಸಮುದಾಯಗಳನ್ನು ಪಡೆದ ಆಶಯಗಳು ಅನ್ನಿಸುವುದಿಲ್ಲ.

ಮ್ಯಾಸಬೇಡರಲ್ಲಿ ಸಾಂಸ್ಕೃತಿಕ ನಾಯಕ ಆರಾಧನ ಲೋಕವೇ ಇದೆ. ಈ ನಾಯಕರ 'ಕಥನ'ವನ್ನು ಹೇಳುವುದಕ್ಕೂ ಈಗ ಸಮುದಾಯ ಆ ನಾಯಕರನ್ನು ಆರಾಧನೆಗಳ ಭಾಗವಾಗಿ ನಾಯಕರ ಕಥನಗಳನ್ನು ಕಟ್ಟುವ ಒಂದು ಕ್ರಮವಿದೆ. ಎಂ.ಜಿ. ಈಶ್ವರಪ್ಪ, ಕರಿಶೆಟ್ಟಿ ರುದ್ರಪ್ಪ, ಕೃಷ್ಣಮೂರ್ತಿ ಹನೂರ್, ಪುಟ್ಟಣ್ಣ ಎಂ.ಎಸ್. ಲಕ್ಷ್ಮಣ್ ತೆಲಗಾವಿ, ವಿರೂಪಾಕ್ಷಿ ಪೂಜಾರಹಳ್ಳಿ ಮುಂತಾದವರ ಅಧ್ಯಯನಗಳನ್ನು ಇದರ ಭಾಗವಾಗಿ ಪರಿಶೀಲಿಸಬಹುದು. ಈ ಬಗೆಯ ಅಧ್ಯಯನದಿಂದ ಸಾಧ್ಯವಾದದ್ದು, ಕರ್ನಾಟಕದ ತಳಸಮುದಾಯಗಳ ಚರಿತ್ರೆಗೆ ಪೂರಕವಾಗಿ ಬೇಡರನ್ನು ಗುರುತಿಸಿದ್ದು. ಅಂತೆಯೇ ಕರ್ನಾಟಕದ ಇತರೆ ಸಮುದಾಯ ಗಳೊಂದಿನ ಸಾಂಸ್ಕೃತಿ ಕೊಡುಕೋಳೆಗಳನ್ನು ಅಧ್ಯಯನ ಮಾಡುವ ಮೂಲಕ ಅಖಂಡ ಕರ್ನಾಟಕ ಮಾದರಿಯ ಚರಿತ್ರೆಯ ಕಲ್ಪನೆಯನ್ನು ಒಡೆದು ಪ್ರಾದೇಶಿಕ ಚರಿತ್ರೆಯನ್ನು ಕಟ್ಟಾಯಿಸಾಧ್ಯವಾಯಿತು. ಯಾವ ಸಮುದಾಯ 'ಅಕಾಡೆಮಿಕ್' ಶಿಸ್ತಿಗೆ ಒಳಪಡಿಸುವುದೇ ಅಸ್ಪೃಶ್ಯತೆ ಎನ್ನುಗ್ರಹಿಕೆಗಳನ್ನು ಪರೋಹಿತಶಾಹಿ ಅಧ್ಯಯನಕಾರರು ರೂಪಿಸಿದ್ದರೋ, ಅಂತಹ ಮಾದರಿಯನ್ನು ಈ ಬಗೆಯ ಅಧ್ಯಯನಗಳು ಒಡೆದವು.

ಆದರೆ ಈಬಗೆಯ ಅಧ್ಯಯನಗಳು ಮತ್ತೆ ಸಮುದಾಯಕ್ಕೆ ಮರಳಿ ಆ ಮೂಲಕ ಹೊಸ ಜಾಗ್ರತೆ ಉಂಟಾಗುತ್ತದೆಯೋ? ಕೇಳಿಕೊಳ್ಳಬೇಕಾದ ಪ್ರಶ್ನೆ. ಹೆಜ್ಜೆಂದರೆ ಆ ಸಮುದಾಯ 'ಕಲಿತ'ವರು ಅದರಲ್ಲೂ ಸಮುದಾಯದ ಬಗೆಗೆ ಸ್ವತಃ ಅಭಿಮಾನವಿದ್ದು, ತನ್ನ ಸಮುದಾಯದ ಸಾಂಸ್ಕೃತಿಕ ಚರಿತ್ರೆಯ ಬಗೆಗೆ ತಿಳಿಯಬೇಕೆಂಬ ಹಂಬಲವಿರುವ ಕೆಲವೇ ಕೆಲವರು ಮಾತ್ರ ಈ ಅಧ್ಯಯನಗಳನ್ನು ಓದಬಲ್ಲರು. ಈ ಅಧ್ಯಯನಗಳನ್ನೇ ಉಪನ್ಯಾಸಗಳ ಮೂಲಕ ಸಮುದಾಯಕ್ಕೆ ತಲುಪಿಸುವ ಕೆಲಸವನ್ನು ವಿಶ್ವವಿದ್ಯಾಲಯಗಳು ಮಾಡುತ್ತಿವೆ. ಉದಾಹರಣೆ ಹಂಪಿ ಕನ್ನಡ ವಿಶ್ವವಿದ್ಯಾಲಯದ ವಾಲ್ಮೀಕಿ ಅಧ್ಯಯನ ಪೀಠದಿಂದ, ಕೂಡ್ಲಿಗಿ, ಮರಿಯಮ್ಮನಹಳ್ಳಿ, ಕೊಪ್ಪಳ ಮುಂತಾದ ಕಡೆ ಉಪನ್ಯಾಸ ಕಾರ್ಯ ಕ್ರಮಗಳನ್ನು ಕೂಡಿತು. ಆದರೆ ಸೆಮಿನಾರಿನಲ್ಲಿ ಪ್ರಬಂಧಮಂಡಿಸುವವರನ್ನು ಅಟಾಕಿ ಬೆರಳೆಣಿಕೆಯ ಕೇಳುಗರು ಮಾತ್ರ ಹಾಜರಿದ್ದರು. ಇದು ಏನನ್ನು ಸೂಚಿಸುತ್ತದೆ? ಈ ಬಗೆಯ ಅಕಾಡೆಮಿಕ್ ಅಧ್ಯಯನಗಳು ಸಮುದಾಯದಿಂದ ದೂರ ಉಳಿಯುತ್ತಿದೆ ಎನ್ನುವುದು ಮೊದಲ ನೋಟಕ್ಕೆ ಗೋಚರಿಸುವ ಸತ್ಯ.

ಬೇಡರ ಸಾಂಸ್ಕೃತಿಕ ನಾಯಕರ ಕಥನವನ್ನು ನೋಡುತ್ತಿದ್ದಾರೆ. 'ಪಶುಪಾಲಕ' ಸಂಸ್ಕೃತಿ ಯಲ್ಲಿ ಹುಟ್ಟಿಕೊಂಡಹವು. ಪ್ರಭುತ್ವದ ಜೊತೆ ನೇರ ಸಂಘರ್ಷವನ್ನು ಏರ್ಪಡಿಸಿಕೊಂಡವರು. ಮ್ಯಾಸ ಬೇಡರ ಸಾಂಸ್ಕೃತಿಕ ನಾಯಕ ಜಗಳೂರ ಜಿನಿಗೂ ಮತ್ತು ತಿರುಪತಿಯ ವೆಂಕಟೇಶ್ವರನಿಗೂ ನಡೆದಿರುವ ವಾಗ್ವಾದ ಮ್ಯಾಸಬೇಡರ ಜನತದ ಸಾಹಿತ್ಯದಲ್ಲಿ ಪ್ರಖ್ಯಾತ ವಾದದ್ದು. ಮಂಟೇಸ್ವಾಮಿ ಕಲ್ಯಾಣದಲ್ಲಿ ಬಸವಣ್ಣನನ್ನು ಮುಖಾಮುಖಿರುಗಳು ರೀತಿಯಲ್ಲೇ ಜಗಳೂರಜ್ಜೈ ವೆಂಕಟೆಶನನ್ನು ಮುಖಾಮುಖಿಯಾಗುತ್ತಾನೆ.

# ತರೀಕೆರೆ ಸರ್ಜಪ್ಪನಾಯಕ ಮತ್ತು ಬ್ರಿಟಿಷರು

ಭಾರತದಲ್ಲಿ ಪರಕಿಯರನ್ನು ಹೊರದೂಡುವ ದೇಶಿಯರ ಪ್ರಯತ್ನ ಮಹತ್ವ ಘಟನೆಯಾಗಿದೆ. ಕರ್ನಾಟಕದಲ್ಲಿಯೂ ಅದೊಂದು ರೀತಿಯಲ್ಲಿ ವಿಶೇಷ ಘಟನೆಯಾಗಿ ಸಂಭವಿಸಿದ್ದು ಸ್ಮರಣೀಯ. ಈ ಪೈಕಿ ತರೀಕೆರೆ ಪಾಳೆಯಗಾರರು ಹೊರತಲ್ಲ. ಸರ್ಜಾರಂಗಪ್ಪ ನಾಯಕ ಮತ್ತು ಅವನ ಮಗ ಸರ್ಜಾಹನುಮಪ್ಪನಾಯಕರು ಬ್ರಿಟಿಷರ ವಿರುದ್ಧ ಹೋರಾಟ ನಡೆಸಿದವರಲ್ಲಿ ಅಗ್ರಗಣ್ಯರಾಗಿದ್ದಾರೆ. ಸರ್ಜಪ್ಪನಾಯಕನನ್ನು ಕುರಿತು ಕರ್ನಾಟಕದ ಚರಿತ್ರೆಯಲ್ಲಿ ನಿಖರವಾಗಿ ಚಿತ್ರಿಸಿಲ್ಲ. ಅವನ ಹುಟ್ಟು, ಬಾಲ್ಯ, ಶಿಕ್ಷಣ, ಯೌವನ, ಅವಸಾನ ಹೀಗೆ ಅವನ ಜೀವನದ ವಿವಿಧ ಮುಖಗಳನ್ನು ಬಿಂಬಿಸುವಲ್ಲಿ ಚರಿತ್ರೆಕಾರರು ವಿಫಲರಾಗಿ ರುವುದು ಸಹಜ. ಕಾರಣ ಈ ಕಾಲಘಟ್ಟದ ಚರಿತ್ರೆಯ ಘಟನೆಗಳು ಇತಿಹಾಸದಲ್ಲಿ ದಾಖಲಾಗದೆ, ಜನರ ಬಾಯಲ್ಲಿ ನರ್ತಿಸುವುದರಿಂದ ಚರಿತ್ರೆಯ ಘಟನೆಯೊಂದು ನಾನಾ ಬಗೆಯಾಗಿ ಜೀವಂತಿಕೆ ಪಡೆದುಕೊಂಡಿದೆ. ಜನಪದ ಕಥೆ, ಲಾವಣಿ, ಕಥನ ಗೀತೆ, ಜನಪದ ಗೀತೆಗಳಲ್ಲಿ ವರ್ಣಿತವಾಗಿರುವ ಸಂಗತಿಗಳ ಮೂಲಕ ಚರಿತ್ರೆಯನ್ನು ಕಟ್ಟಿಕೊಡುವ ಹೊಸ ಆಯಾಮವಿದೆ.

ಸರ್ಜಾಹನುಮಪ್ಪನಾಯಕನ ತಂದೆ ಸರ್ಜಾರಂಗಪ್ಪನಾಯಕ (೧೮೩೧-೩೭) ಮಡಿದ ತರುವಾಯ, ಸರ್ಜಾಹನುಮಪ್ಪನಾಯಕನನ್ನು ಬೆಂಗಳೂರಿಗೆ ಕರೆದೊಯ್ಯುತ್ತಾರೆ. ಕ್ರಿ.ಶ. ೧೮೩೪ರಲ್ಲಿ ಗುಟ್ಟಹಳ್ಳಿ ಅರಮನೆ ಪರಿಸರದ ವನವಿಹಾರದಲ್ಲಿ ಈತನಿಗೆ ಮೂರು ಬಾರಿ ಗಲ್ಲಿಗೇರಿಸಿದರು. ಪ್ರಾಣ ಹೋಗಲಿಲ್ಲವಾದ ಕಾರಣ ಬ್ರಿಟಿಷರು ಪ್ರಾಣ ದಾನ ನೀಡಿದ್ದನ್ನು ವಿರೋಧಿಸಿ ತನ್ನ ಕೈಯಿಂದಲೇ ನೇಣು ಹಾಕಿಕೊಂಡು ಪ್ರಾಣ ಬಿಡುತ್ತಾನೆ. ಹೀಗೆ ಹುತಾತ್ಮ ನಾಗುವುದು ಸರ್ಜಾಹನುಮಪ್ಪನಾಯಕನ ವಾಸ್ತವ ಘಟನೆಯೆಂದು ಒತ್ತಿಹೇಳುವಂತಿಲ್ಲ. ಚಿಕ್ಕಮಗಳೂರು ಜಿಲ್ಲಾ ಗ್ಯಾಸೆಟಿಯರ್‌ನಲ್ಲಿ ಸರ್ಜಪ್ಪನಾಯಕನ ಸಾವಿನ ಬಗ್ಗೆ ಹೀಗೆ ತಿಳಿಸಲಾಗಿದೆ. In october ೧೮೩೧, the British took over the government of mysore. They issued a proclamation severely warning the rebels against their continued operations. Then, while some Insurgents surrendered and others carried on their defiant activities for some time more up to ೧೮೩೩ AD. Sarjappa Nayaka of the family of the old Tarikere chiefs, who tried to continue the fight, was captured about the same time in Kanara which had been annexed by the British (ಪು. ೫೫) ಎಂದು ದಾಖಲಿಸಲಾಗಿದೆ.

ಚಿಕ್ಕಮಗಳೂರು ಜಿಲ್ಲೆಯ ತರೀಕೆರೆ ಪರಿಸರದಲ್ಲಿ ಕಲದುರ್ಗ ಮತ್ತು ಕಾಮನದುರ್ಗ ಗಳಲ್ಲಿ ಕೋಟೆಗಳಿವೆ. ಇಲ್ಲಿ ಪಾಳೆಯಗಾರರು ಆಳ್ವಿಕೆ ನಡೆಸಿದ್ದು, ನಗರ ದಂಗೆಯಲ್ಲಿ ಬೂದಿ ಬಸಪ್ಪನಾಯಕನೊಂದಿಗೆ ಸರ್ಜಪ್ಪನಾಯಕ (೧೮೩೩) ಒಂದಾಗಿ ಬ್ರಿಟಿಷರ ವಿರುದ್ಧ ಹೋರಾಡುತ್ತಾರೆ. ಕೆಲವು ದಾಖಲೆಗಳಲ್ಲಿ ೧೮೩೧ ಎಂದು ಉಲ್ಲೇಖವಾಗಿದೆ. ತರೀಕೆರೆ ಪಾಳೆಯಗಾರರು ಮೂಲತಃ ಬೇಡ ಬುಡಕಟ್ಟಿಗೆ ಸೇರಿದ್ದು, ವಾಲ್ಮೀಕಿ, ವ್ಯಾಧ, ನಾಯಕ, ಪುಳಿಂದ, ಕಿರಾತ, ಶಬರ ಎಂದು ಕರೆಸಿಕೊಂಡ ಯೋಧ ಹಾಗೂ ಸೈನಿಕ ವೃತ್ತಿಯ ಸಮುದಾಯ ವಾಗಿದೆ. ಮೊದಲಿನಿಂದಲೂ ಇವರು ಹೋರಾಡುತ್ತಲೇ ಬ್ರಿಟಿಷರನ್ನು ಹೊರದೂಡಲು ಸತತ ಪ್ರಯತ್ನ ನಡೆಸಿದ್ದಾರೆ.

ಜನಪದರು ಕಟ್ಟಿಕೊಂಡಿರುವ ಕಥನ ಕಾವ್ಯ(ಖಂಡಕಾವ್ಯ)ದಲ್ಲಿ ಚಾರಿತ್ರಿಕ ಪುರುಷನಾದ ಸರ್ಜಪ್ಪನಾಯಕ ಹಾರುವರ ನಿಂಗಮ್ಮ(ಬ್ರಾಹ್ಮಣ)ನನ್ನು ಉಪಪತ್ನಿಯಾಗಿಟ್ಟು ಕೊಂಡಿದ್ದ ರಿಂದ, ನಿಂಗಮ್ಮನ ಅಣ್ಣ ವೆಂಕಪರಾಯ ಹಾಗೂ ಗೋವಿಂದರಾಯರು ಇವನ ಸಾವಿಗೆ ಕುತಂತ್ರ ನಡೆಸುತ್ತಾರೆ. ಚಿತ್ರದುರ್ಗ, ಬಳ್ಳಾರಿ ಮತ್ತು ದಾವಣಗೆರೆ ಜಿಲ್ಲೆಗಳಲ್ಲಿರುವ ಬೇಡ ನಾಯಕರು ಸರ್ಜಪ್ಪನಾಯಕನ ಕಥನ ಕಾವ್ಯವನ್ನು ಕರುಣಾಜನಕವಾಗಿ ಹಾಡುತ್ತಾರೆ. ಇಲ್ಲಿ ಬೇಡರ ಮತ್ತು ಬ್ರಾಹ್ಮಣರ ನಡುವೆ ಸಾಮಾಜಿಕ ಸಂಘರ್ಷವನ್ನು ಕಾಣುತ್ತೇವೆ. ಏಕಕಾಲದಲ್ಲಿ ಸರ್ಜಪ್ಪನಾಯಕ ಬ್ರಾಹ್ಮಣರ ಮತ್ತು ಬ್ರಿಟಿಷರ ವಿರುದ್ಧ ಹೋರಾಟ ಮಾಡುವುದು ದೊಡ್ಡ ಸಾಹಸವಾಗಿದೆ. ಇಲ್ಲಿ ವಿವಿಧ ವೃತ್ತಿ, ಆಯಗಾರರು, ವಿವಿಧ ಜಾತಿಯವರು ಈ ಪಾಳೆಯ ಪಟ್ಟಿನಲ್ಲಿ ಹೊಂದಿದ್ದ ಪಾತ್ರವನ್ನು ಇಲ್ಲಿ ಬೆಳಕಿಗೆ ತರುವುದು ಅಗತ್ಯ. ಸರ್ಜಪ್ಪನ ಜೀವನ

ಶೋಕ, ದುಃಖದಿಂದ ಕೂಡಿದೆ. ತಂದೆ-ತಾಯಿಗಳಲ್ಲಿ ಹಿತವಚನ ಕೇಳಿದ್ದರೆ ಬಹುಶಃ ಸರ್ಜಪ್ಪನ ಬದುಕು ಬದಲಾಗುತ್ತಿತ್ತೇನೋ ಆದರೆ ಹಠಮಾರಿತನ ಧೋರಣೆಯಿಂದ ಹಾಗೂ ಒಬ್ಬ ಸೂಳೆಯಿಂದ ಹತನಾಗುವ ಅಪಕೀರ್ತಿಯನ್ನು ಕಥನ ಕಾವ್ಯದಲ್ಲಿ ತಿಳಿಸುತ್ತದೆ.

ಕರ್ನಾಟಕದಲ್ಲಿ ಹತ್ತೊಂಬತ್ತನೆಯ ಶತಮಾನವು ಅನೇಕ ಪರಿವರ್ತನೆಗಳನ್ನು ಸೃಷ್ಟಿಸಿದೆ. ಬ್ರಿಟಿಷರು ಮತ್ತು ಸ್ಥಳೀಯರ ನಡುವೆ ನಡೆದ ದಂಗೆಗಳೇ ಇದಕ್ಕೆ ಕಾರಣ. ಸರ್ಜಪ್ಪನಾಯಕನ ಸಾವು ದುರಂತಮಯವಾದುದು. ಸಾವಿನ ಘಟನೆಯಿಂದಲೇ ಆತನ ವ್ಯಕ್ತಿತ್ವಕ್ಕೆ ಅಸಾಧಾರಣ ಮೆರಗು ಬಂದಿದೆ.

**ಜಾನಪದ ಸಾಹಿತ್ಯ ಕ್ಷೇತ್ರದಲ್ಲಿ ಸರ್ಜಪ್ಪನಾಯಕ**

ಕರ್ನಾಟಕದ ಜಾನಪದ ಕ್ಷೇತ್ರವು ತನ್ನ ಪ್ರಕಾರಗಳನ್ನು ವಿವಿಧ ಬಗೆಯಾಗಿ ಜೀವಂತ ಗೊಳಿಸಿಕೊಂಡಿರುವುದು ಸ್ಪಷ್ಟ. ಅವುಗಳೆಂದರೆ ಜನಪದ ಕಥನಗೀತೆಗಳು, ಗೀತೆ, ಗದ್ಯಕಥನ, ಹಾಡು, ಐತಿಹ್ಯ, ಲಾವಣಿ, ಪುರಾಣ, ಜನಪದ ಮಹಾಕಾವ್ಯ ಇತರ ಪ್ರಕಾರಗಳನ್ನು ಇಲ್ಲಿ ಪಟ್ಟಿ ಮಾಡಬಹುದು.

ಕಥನ ಕಾವ್ಯ ಹಾಗೂ ಗೀತೆ ಜನಪದ ಸಾಹಿತ್ಯದ ಬಹುಮುಖ್ಯ ಪ್ರಭೇದ. ಕಥನ ಕಾವ್ಯ ಗೀತೆಗಳು ಗ್ರಾಮಾಂತರ ಜನತೆಯ ಮನರಂಜನೆಯ ಮುಖ್ಯ ಸಾಧನವಾಗಿ ಉಳಿದುಬಂದಿದೆ. ಜನಪದ ಕಥನ ಸಾಹಿತ್ಯ ಆಶಯವಾಗಿದೆ. ಇಲ್ಲಿ ಹೆಣ್ಣಿನ ದುಃಖವನ್ನು, ಸಂಕಷ್ಟವನ್ನು, ತ್ಯಾಗವನ್ನು ಬಲಿದಾನವನ್ನು ಸಮರ್ಥವಾಗಿ ಚಿತ್ರಿಸುವುದು, ಸಮರ್ಪಕವಾಗಿ ಪ್ರತಿನಿಧಿಸುವ ಅಪರಿಮಿತ ಕಥನಗೀತೆಗಳು ಕನ್ನಡ ಜನಪದ ಸಾಹಿತ್ಯದ ಅನರ್ಘ್ಯ ರತ್ನಗಳೇ ಆಗಿವೆ. ಇಂಥ ಗಂಭೀರ ಸ್ವರೂಪದ ಕಥೆಗಳನ್ನು ಹೆಣ್ಣುಮಕ್ಕಳೇ ಹಾಡುತ್ತಾರೆ. ಕೆಲವು ಕಡೆ ಗಂಡಿನ ತ್ಯಾಗ, ದುಃಖ, ಶೋಕ, ಕುತಂತ್ರ, ಅನ್ಯಾಯ, ಪರಿತಪಿಸುವುದು, ಪ್ರೇಮ ಸಂಬಂಧ ಘಟನೆಗಳು ರಂಜನೀಯವಾಗಿರುತ್ತವೆ. ಕಥನಗೀತೆಗಳು ತ್ರಿಪದಿಯಲ್ಲಿ ಬರುತ್ತಿರುವುದು ಹೆಚ್ಚು. ಚೊಕ್ಕ ಮಧುರವಾದ ಚಿಕ್ಕ ಕಾವ್ಯ ಎಂದು ಇದಕ್ಕೆ ಕರೆಯಲಾಗಿದೆ. ಆದರೆ ಸರ್ಜಪ್ಪ ನಾಯಕನ ಕಥನ ಕಾವ್ಯ ಹಾಡುಗಾರನ ನಾಲಿಗೆಯ ಮೇಲೆ ನರ್ತಿಸುವಾಗ ಪಂಚಪದಿಯಲ್ಲಿ ನಿರೂಪಣೆಗೊಂಡಿದೆ. ಉದಾ. ಉತ್ತರದೇವ, ಈರೋಬಿ, ನಾಗವ್ವ, ಚಿಕ್ಕೊಳು ಹಿರಿದಿಮ್ಮವ್ವ, ಹುಳಿಯಾರು ಕೆಂಚಮ್ಮ, ಸಂಪನ್ನೆ, ಕೊಂತಮ್ಮ, ಹೊನ್ನಮ್ಮ ಮೊದಲಾದವುಗಳಿಗೆ ಇವನನ್ನು ಹೋಲಿಸಿದಾಗ ಭಿನ್ನವಾಗಿ ಕಂಡುಬರುತ್ತದೆ.

'ಜನಪದ ಕಥನ ಗೀತೆಗಳು' ಎಂಬ ಕೃತಿಯನ್ನು ೧೯೫೮ರಲ್ಲಿ ಕ.ರಾ.ಕೃ ರಚಿಸಿ ಜನಪದ ಸಾಹಿತ್ಯ ಅಕಾಡೆಮಿ ಮೂಲಕ ಪ್ರಕಟಿಸಿದ್ದಾರೆ. ಮೇಲೆ ಕಥನ ಗೀತೆ ಬಗ್ಗೆ ತಿಳಿಸಿರುವಂತೆ ಈ ಕೃತಿಯಲ್ಲಿ ನಾಲ್ಕು ವಿಭಾಗಗಳಿವೆ. ೧. ಅಂಬಿಗರ ಮತ್ತು ಇತರ ಹಾಡುಗಳು ೨. ಉತ್ತರದೇವಿ ಮತ್ತು ಇತರ ಹಾಡುಗಳು ೩. ಪಿರಿಯಾಪಟ್ಟಣದ ಕಾಳಗ ಮತ್ತು ಇತರ ಹಾಡುಗಳು ೪. ಚೆನ್ನಿಜೋಗಯ್ಯ ಮತ್ತು ಇತರ ಹಾಡುಗಳು ಇಲ್ಲಿ ಅನಾವರಣಗೊಂಡಿವೆ. ಪೌರಾಣಿಕ ಕಥನ ಗೀತೆಗಳಲ್ಲಿ ಈಶ್ವರಿ, ಪಾರ್ವತಿ, ಗಂಗೆ, ಕೃಷ್ಣ ರುಕ್ಮಿಣಿಯರನ್ನು ಜನಪದ ವಕ್ತೃಗಳು ಆಪ್ತಬಂಧುಗಳಂತೆ ಕಂಡಿದ್ದಾರೆ. ಕಥನಗೀತೆ, ಕಾವ್ಯಗಳು, ಜನಪದ ಕ್ಷೇತ್ರದಲ್ಲಿ ಮುಖ್ಯ ಪಾತ್ರವಹಿಸುತ್ತವೆ. ಜನಪದರ ಹೃದಯದ ರಾಗ-ಭಾವಗಳಿಗೆ ಸಮೀಪ ವರ್ತಿಯಾಗಿರುತ್ತವೆ.

ಜನಪದ ಸಾಹಿತ್ಯ ಪ್ರಕಾರಗಳಲ್ಲಿ ಗದ್ಯಕಥನಗಳು, ಗೀತೆಗಳು, ಕೆಲಸದ ಹಾಡುಗಳು, ಐತಿಹ್ಯ, ಕಥನಗೀತೆ, ಮಹಾಕಾವ್ಯ, ಗದ್ಯಕಥನಗಳಲ್ಲಿ ಪುರಾಣ, ಕಟ್ಟುಕತೆ, ಆಶಯ ಮತ್ತು ವರ್ಗ ಮುಖ್ಯವಾಗಿರುತ್ತದೆ.

ಕನ್ನಡ ಜನಪದ ಗ್ರಂಥಗಳಲ್ಲಿ ಪ್ರಮುಖವಾದವು : ಪಟ್ಟೊಳೆ ಪಳಮೆ, ಹುಟ್ಟಿದ ಹಳ್ಳಿ-ಹಳ್ಳಿಯ ಹಾಡು, ಜೀವನ ಸಂಗೀತ, ಮಲ್ಲಿಗೆ ದಂಡೆ, ಜನತೆಯ ಸಂಸ್ಕೃತಿ, ನಾಡಪದ ಗಳು, ಜನಪದ ಕಥನಗೀತೆಗಳು, ಕರ್ನಾಟಕದ ವೃತ್ತಿಗಾಯಕರು, ಜಾನಪದ ಸ್ವರೂಪ, ಜಾನಪದ

ಅಧ್ಯಯನ, ಹೊನ್ನ ಬಿತ್ತೆವು ಹೊಲಕೆಲ್ಲ, ಗ್ರಾಮೀಣ, ಸಂಗ್ಯಾಬಾಳ್ಯಾ, ಕನ್ನಡ ಜನಪದ ಗೀತೆಗಳು, ಜಾನಪದ ಸಾಹಿತ್ಯ ದರ್ಶನ, ಫ್ಲೀಟರು ಸಂಗ್ರಹಿಸಿದ ಐದು ಲಾವಣಿಗಳು, ಮಲೆಯ ಮಾದೇಶ್ವರ, ಆನ್ವಯಿಕ ಜಾನಪದ, ಕನ್ನಡದ ಸಾವಿರ ಒಗಟುಗಳು, ಹೆಸರ ಹೇಳ್ತೀನಿ ಒಡಪಕಟ್ಟಿ, ಭಾರತೀಯ ಪರಂಪರೆ ಹಾಗೂ ಸಾಹಿತ್ಯದಲ್ಲಿ ಒಗಟು ಇತರ ಗ್ರಂಥಗಳು ಇತ್ತೀಚೆಗೆ ಸಾಕಷ್ಟು ಪ್ರಕಟವಾಗಿವೆ. ಬುಡಕಟ್ಟು ಮತ್ತು ಜಾನಪದ ನೆಲೆಯಲ್ಲಿ ರಚನೆಗೊಂಡ ಗಾದರಿಪಾಲನಾಯಕ ಮತ್ತು ಚಿತ್ರದುರ್ಗ ಜಿಲ್ಲೆಯ ಬುಡಕಟ್ಟು ವೀರರು ಕೃತಿಗಳು ಮೌಖಿಕ ಮತ್ತು ಸ್ಥಳೀಯ ಚರಿತ್ರೆಯನ್ನು ಒಳಗೊಂಡಿವೆ. ಇಂಥ ಕೆಲವು ಕೃತಿಗಳಲ್ಲಿ ಸರ್ಜಪ್ಪನಾಯಕನ ಪ್ರಸ್ತಾಪ ಬರುತ್ತದೆ.

ಗ್ರಾಮೀಣ ಪ್ರದೇಶದ ಗೀತೆಗಳಲ್ಲಿ ಕೆಲಸದ ಹಾಡುಗಳು ಇಂದಿಗೂ ಪ್ರಚಲಿತದಲ್ಲಿವೆ. ಬೀಸುವ ಪದ, ಹಂತಿ ಹಾಡು, ಕುಟ್ಟುವ ಹಾಡು, ನಾಟಿಯ ಹಾಡು, ಲಾಲಿಯ ಪದ, ಸಂಪ್ರದಾಯದ ಹಾಡು, ಆಚರಣೆಯ ಹಾಡು, ಅಂಟಿಗೆ-ಪಂಟಿಗೆ ಪದ, ಮದುವೆ ಮತ್ತು ಒಸಗೆಯ ಹಾಡು, ಮೊಹರಂ ಪದ, ಡೊಳ್ಳಿನ ಪದ, ಹರದೇಶಿ-ನಾಗೇಶಿ ಮೊದಲಾದವುಗಳಿವೆ.

'ಕನ್ನಡ ಜನಪದ ಗೀತೆಗಳು' ಎಂಬ ಗ್ರಂಥವನ್ನು ೧೯೫೫ರಲ್ಲಿ ಡಾ. ಬಿ.ಎಸ್. ಗದ್ದಗಿ ಮಠರು ಕರ್ನಾಟಕ ವಿಶ್ವವಿದ್ಯಾಲಯದ ಪಿಎಚ್.ಡಿ ಪದವಿಗಾಗಿ ಅರ್ಪಿಸಿದ ಈ ನಿಬಂಧ ಸಂಗ್ರಹ ರೂಪದಿಂದ ೧೯೬೨ರಲ್ಲಿ ಪ್ರಕಟವಾಗಿರುತ್ತದೆ. ಜನಪದ ಗೀತೆಗಳಿಗೆ ಸಂವಾದಿಯಾಗಿ ಲೋಕಗೀತೆಗಳೆಂದು ಗದ್ಗಿಮಠರು ಕರೆದಿರುವುದು ವಿಶೇಷ.

ಫ್ಲೀಟರ ಐದು ಲಾವಣಿಗಳು ಇಂಗ್ಲಿಷ್‌ನಲ್ಲಿ ೧೮೮೫ರಲ್ಲಿ ಪ್ರಕಟವಾಗಿವೆ. ಕ್ಯಾತನಹಳ್ಳಿ ರಾಮಣ್ಣ ಸಂಪಾದಕರಾಗಿ ಪ್ರಕಟಿಸಿದ್ದಾರೆ. ಇದರಲ್ಲಿ ಸಂಗೊಳ್ಳಿ ರಾಯಣ್ಣನ ದಂಗೆ, ಆದಾಯ ತೆರಿಗೆ, ಹಲಗಲಿಯ ಬೇಡರು, ಸಂಗ್ಯನ ಅಪರಾಧ ಮತ್ತು ಸಾವು, ಕಿತ್ತೂರ ಚನ್ನವ್ವನ ಸೊಸೆ ಎಂಬ ಲಾವಣಿಗಳಿವೆ. ಕರ್ನಾಟಕದ ರಾಜ, ಮಂತ್ರಿ, ರಾಣಿ ಇತರ ವ್ಯಕ್ತಿಗಳ ಬಗ್ಗೆ ಹುಟ್ಟಿಕೊಂಡ ಕಥನ ಕಾವ್ಯ, ಗೀತೆ, ಲಾವಣಿಗಳು ಪ್ರಮುಖವಾದವು. ಕುಮಾರರಾಮನನ್ನು ಇಲ್ಲಿ ಉದಾಹರಿಸಬಹುದು. ಆದರೆ ಪಾಳೆಯಗಾರರ ಬಗ್ಗೆ ಹುಟ್ಟಿಕೊಂಡ ಜನಪದ ಸಾಹಿತ್ಯ ವಿಶೇಷವಾಗಿರುವಂತದ್ದು. ತರೀಕೆರೆಪಾಳೆಯಗಾರರು ಬ್ರಿಟಿಷರ ವಿರುದ್ಧ ಹೋರಾಟ ಮಾಡುವುದು ಸಹಜ. ಈ ಹೋರಾಟದ ಘಟನೆ ಚರಿತ್ರೆ ಮತ್ತು ಜನಪದ ಕ್ಷೇತ್ರಗಳಲ್ಲಿ ಭಿನ್ನ ರೂಪ ತಳೆದಿರುವುದುಂಟು. ಬ್ರಿಟಿಷರ ದಾಖಲೆ, ಕೃತಿಗಳಲ್ಲಿ ವಸ್ತುಸ್ಥಿತಿಗೂ ನಮ್ಮ ಜನಪದರು ಕಟ್ಟಿರುವ ಕಥೆಗೂ ವ್ಯತ್ಯಾಸಗಳಿವೆ. ಹಾಗಾಗಿ ಸ್ಥೂಲವಾಗಿ ಕೆಲವು ದಾಖಲೆಗಳ ಮೂಲಕ ಇಲ್ಲಿ ಅವಲೋಕಿಸಲಾಗಿದೆ. ಸರ್ಜಪ್ಪನಾಯಕನ ಸಾವಿನ ಬಗ್ಗೆ ಲಭ್ಯವಿರುವ ಜನಪದ ಸಾಹಿತ್ಯ ಹೀಗಿದೆ. ಸರ್ಜಾನ, ಆಂಗ್ಲರೆದುರು ತೋಪಿಗೆ ಅಳಲಿಲ್ಲ. ಧೈರ್ಯದಲ್ಲಿ ಎದೆಯೊಡ್ಡಿ ಆಳಿದ ಸರ್ಜಾನ, ಕಥನದಲ್ಲಿ ವೀರನಾಗಿ ಎದ್ದುಬಂದ ನಿಂಗಿಯ ಮೋಸದಲ್ಲಿ ಸಿಲುಕಿ ಆಂಗ್ಲರಲ್ಲಿ ಗಲ್ಲಿಗೆದುರು ಗಂಡಾಗಿ ಬದುಕಿದ ಪ್ರಾಣಭಿಕ್ಷೆಯ ಬೇಡದೆಯೆ ಕೈಯಾರೆ ನೇಣೆಗೇರಿದ.

ಒಟ್ಟಾರೆ ಹೇಳುವುದಾದರೆ, ಸರ್ಜಪ್ಪನಾಯಕ ಬ್ರಿಟಿಷರ ವಿರುದ್ಧ ಹೋರಾಡುವುದು, ಆತನನ್ನು ಕಳ್ಳನೆಂದು ಕರೆದಿರುವುದು ಸಂಘರ್ಷಕ್ಕೆ ನಾಂದಿ ಹಾಡಿದ್ದು ಸ್ಪಷ್ಟ. ಸಾಮಾನ್ಯ ಪಾಳೆಯಗಾರ ಅಪಾರ ಸಂಖ್ಯೆಯ ಬ್ರಿಟಿಷ್ ಸೈನ್ಯವನ್ನು ಎದುರಿಸುವುದಾದರೂ ಹೇಗೆ? ಬ್ರಿಟಿಷ್ ಅಧಿಕಾರಿಗಳು ಈತನನ್ನು ಬೆಂಗಳೂರಿನ ಗುಟ್ಟಹಳ್ಳಿ ಅರಮನೆ ಆವರಣದಲ್ಲಿ ಗಲ್ಲಿಗೆ ಹಾಕಿದಾಗ ಸಾಯುವುದಿಲ್ಲ, ತಾನೇ ಕೊರಳಿಗೆ ಉರುಲು ಹಾಕಿಕೊಂಡು ಸಾಯುತ್ತಾ ನೆಂದು ತಿಳಿಸಲಾಗಿದೆ. ಸೂಳೆ ನಿಂಗಮ್ಮನ ಕಥೆ ಇಲ್ಲಿ ಉಪಕಥೆಯಾಗಿ ವ್ಯಕ್ತಿ ಕಥನಕ್ಕೆ ಪೂರಕವೆಂಬಂತೆ ಬಂದಿರಬೇಕು.

**ಆಧಾರ ಸೂಚಿ**

೧. ಬಿ.ಎನ್. ಸತ್ಯನ್ (ಸಂ.), ಚಿಕ್ಕಮಗಳೂರು ಡಿಸ್ಟ್ರಿಕ್ಟ್ ಗ್ಯಾಸೆಟಿಯರ್.

೨. ಗೊ.ರು. ಚನ್ನಬಸಪ್ಪ (ಸಂ.), ಹೊನ್ನ ಬಿತ್ತೇವು ಹೊಲಕೆಲ್ಲ, ತರೀಕೆರೆ.

೩. ಜಿ.ಶಂ. ಪರಮಶಿವಯ್ಯ, ೧೯೬೯, ದಕ್ಷಿಣ ಕರ್ನಾಟಕದ ಜನಪದ ಕಾವ್ಯ ಪ್ರಕಾರಗಳು, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

೪. ಸೆಬಾಸ್ಟೀಯನ್ ಜೊಸೇಫ್, ೧೯೯೭, ಕರ್ನಾಟಕ ಚರಿತ್ರೆ ಸಂಪುಟ. ೬, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ ೫೮೩ ೨೭೬.

೫. ಅಬ್ದುಲ್ ಸತ್ತಾರ್, ೧೯೯೬, ತರೀಕೆರೆ ಪಾಳೆಯಗಾರರು, ಪಾಂಡವಪುರ.

೬. ವಿರೂಪಾಕ್ಷಿ ಪೂಜಾರಹಳ್ಳಿ (ಸಂ.), ೨೦೦೬, ತರೀಕೆರೆ ಪಾಳೆಯಗಾರ ಸರ್ಜಪ್ಪನಾಯಕನ ಕಥನ ಕಾವ್ಯ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ ೫೮೩ ೨೭೬.

೭. ವಿರೂಪಾಕ್ಷಿ ಪೂಜಾರಹಳ್ಳಿ (ಸಂ.), ೨೦೦೬, ವಾಲ್ಮೀಕಿ ಸಮುದಾಯದ ಪ್ರಾತಃಸ್ಮರಣೀಯರು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ ೫೮೩ ೨೭೬.

೮. ಈ ಬಗ್ಗೆ ತರೀಕೆರೆ, ನಾಯಕನಹಟ್ಟಿ, ಯರ್ಜೇನಹಳ್ಳಿ (ಮೊಳಕಾಲ್ಮೂರು ತಾ.)ಗುಡೇಕೋಟೆ, ಜರಿಮಲೆ ಪಾಳೆಯಗಾರರ ವಂಶೀಕರು ತಮ್ಮದೇ ಆದ ಅನುಭವಗಳನ್ನು ತಿಳಿಸುತ್ತಾರೆ. ಬೆಂಗಳೂರಿನ ಕರ್ನಾಟಕ ಲೋಕಾಯುಕ್ತರ ಕಚೇರಿಯಲ್ಲಿ ಎಸ್.ಪಿ. ಆಗಿರುವ ಸನ್ಮಾನ್ಯ ಶ್ರೀ ಎಸ್. ರಂಗಸ್ವಾಮಿ ಅವರು ಈ ಸರ್ಜಪ್ಪನಾಯಕನ ಬಗ್ಗೆ ತಮ್ಮ ತಾತ, ಸಂಬಂಧಿಕರು ತಿಳಿಸುವ ವಿಚಾರಗಳನ್ನು ತಿಳಿಸಿರುತ್ತಾರೆ. ಅವರಿಗೆ ಕೃತಜ್ಞತೆಗಳು.

# ೧. ಪ್ರಸ್ತಾವನೆ

ಜಗತ್ತಿನಲ್ಲಿ ಇಂದು ಪ್ರತಿಯೊಂದು ಜನಸಮುದಾಯವು ಜ್ಞಾನ ಮತ್ತು ಅರಿವಿನ ಪ್ರಭಾವದಿಂದ ತಮ್ಮ ಪ್ರಾಚೀನತೆ, ಪರಂಪರೆ ಮತ್ತು ಸಂಸ್ಕೃತಿಯನ್ನು ಚರಿತ್ರೆಯ ಕನ್ನಡಿಯಲ್ಲಿ ನೋಡಿಕೊಳ್ಳುತ್ತಿರುವುದು ಸಹಜ. ಚರಿತ್ರೆಯಲ್ಲಿಯೇ ದಾಖಲಾಗದವರು ತಮ್ಮ ತಮ್ಮ ಮೂಲಗಳನ್ನು ನೋಡಿಕೊಳ್ಳುವಲ್ಲಿ ವಿಫಲರಾದರು. ಅವಮಾನಿತರಾದರು. ತಮಗೆ ತಾವೇ ನಿಂದಿಸಿಕೊಂಡರು. ಏಕೆಂದರೆ ಚರಿತ್ರೆಯಲ್ಲಿ ದಾಖಲಾಗಲು ನಾವು ಅರ್ಹರೋ ಅಲ್ಲವೇ ಎಂಬ ಭಾವನೆಯಿಂದ, ಈ ಹಿಂದೆ ಚರಿತ್ರೆ ಬರೆದವರೆಲ್ಲ ಮೇಲ್ವರ್ಗದ ಮತ್ತು ಪುರೋಹಿತಶಾಹಿ ಅದನ್ನು ಪೋಷಿಸುವಂತಹ ವಸಾಹತುಶಾಹಿ ಧೋರಣೆಗಳಿಂದ ಪ್ರೇರಿತರಾದವರು. ಇವರು ಸ್ಥಳೀಯರನ್ನು, ಜನಸಾಮಾನ್ಯರನ್ನು ಚರಿತ್ರೆಯಲ್ಲಿ ದಾಖಲಿಸಲು ಹಿಂದೇಟು ಹಾಕಿದರು. ಅಂದಿನ ಪ್ರಸ್ತುತತೆ ರಾಜಪ್ರಭುತ್ವವನ್ನು ಹೊಗಳುವುದು ಮತ್ತು ವಸಾಹತುಗಾರರನ್ನು ನಂಬಿಸುವುದಾಗಿತ್ತು. ಬ್ರಿಟಿಷರು ಇಲ್ಲಿನ ಪಂಡಿತರನ್ನು ಪೋಷಿಸುತ್ತಲೇ ಶೋಷಣೆ ಕೂಡ ಮಾಡುತ್ತಿದ್ದರು.

ಕಾಲಕಾಲಕ್ಕೆ ಚರಿತ್ರೆ ರಚನೆಯಲ್ಲಿ ಬದಲಾವಣೆ ಕಂಡು ಬಂದಿತು. ಇದು ಯುರೋಪಿನ ವಿಧಾನಕ್ಕೆ ವ್ಯತಿರಿಕ್ತವಾದ ಭಾರತೀಯ ಅಥವಾ ದೇಶೀ ನೆಲೆಗಳನ್ನು ಗಟ್ಟಿಗೊಳಿಸಿಕೊಳ್ಳುವಂತದ್ದು, ಸ್ವಾತಂತ್ರ್ಯಪೂರ್ವದಲ್ಲಿ ಬ್ರಿಟಿಷ್ ಮಾದರಿ ಶಿಕ್ಷಣ ಪಡೆದ ಚರಿತ್ರೆಕಾರರು ಅವರು ಮೆಚ್ಚುವಂತೆ ಚರಿತ್ರೆ ಬರೆದರು. ಸ್ಥಳೀಯರಿಗೆ ದ್ರೋಹ ಬಗೆದರೆಂದರೆ ತಪ್ಪಾಗದು. ೨೦ನೇ ಶತಮಾನದ ಮಧ್ಯಭಾಗದಲ್ಲಿ ಏಷಿಯಾ, ಆಫ್ರಿಕಾಖಂಡಗಳಲ್ಲಿ ಕೆಳಸ್ತರದವರನ್ನು ಕುರಿತಂತೆ ಅಧ್ಯಯನಗಳು ಸಾಗಿದವು. ಕೆಳಸ್ತರ ಅಥವಾ 'ಸಬಾಲ್ಟ್ರನ್' ಎಂದರೆ ತುಳಿತಕ್ಕೊಳಗಾದವರು, ಅಂಚಿನಲ್ಲಿರುವವರು, ತಳವರ್ಗದವರು ಹೀಗೆ ಅನಾಮಧೇಯವಾಗಿ ಉಳಿದುಕೊಂಡು ಬಂದವರ ಸಾಮಾಜಿಕ,

ಆರ್ಥಿಕವಾಗಿ, ರಾಜಕೀಯವಾಗಿ ತುಳಿತಕ್ಕೆ ಒಳಗಾದವರ ಚರಿತ್ರೆ ಎಂಬುದು ಬಹುತೇಕ ವಿದ್ವಾಂಸರ ಅಭಿಪ್ರಾಯ. ಭಾರತದಲ್ಲಿ ಈ ಅಧ್ಯಯನ ಕ್ರಮ ಇತ್ತೀಚೆಗೆ ಹೊಸ ಆಯಾಮವನ್ನು ಸೃಷ್ಟಿಸಿದೆ.

ಭಾರತದಲ್ಲಿ ಪ್ರಾಚೀನ ಕಾಲದಿಂದಲೂ ಜೀವಿಸುತ್ತಿರುವ ಈ ಸಮುದಾಯಗಳು ತಮ್ಮ ಗುರುತಿಗಾಗಿ ಸದಾ ಚಡಪಡಿಸುತ್ತಿದ್ದವು. ಸ್ವಾತಂತ್ರ್ಯ ಹೋರಾಟದಂಥ ಸಂದರ್ಭದಲ್ಲಿ ಅವು ವ್ಯಕ್ತಪಟ್ಟವು. ಭಾರತದ ರಾಷ್ಟ್ರೀಯತೆ ಬಗ್ಗೆ ನಿಜವಾದ ಕಾಳಜಿ ಹುಟ್ಟಿದ್ದು ಕೆಳಸ್ತರದ ಸಮುದಾಯಗಳಿಂದ. ಅನ್ನ – ಆಹಾರದಷ್ಟೇ ಅವರಿಗೆ 'ರಾಷ್ಟ್ರ'* ಎಂಬುದು ಮಹತ್ವದ ವಿಚಾರವಾಗಿತ್ತು. ಇಂತಹವರ ಹೋರಾಟ, ಅರ್ಭಟಗಳು ಮೂಕರೋದನದಂತೆ ಈವರೆಗೆ ಕಂಡುಬರುತ್ತಿದ್ದವೆಂದರೆ ತಪ್ಪಾಗದು. ಛಿದ್ರಗೊಂಡ ಜನಸಮುದಾಯಗಳು ಐಕ್ಯತೆ, ರಾಷ್ಟ್ರೀಯತೆ, ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವ ಮೊದಲಾದ ಸಂಗತಿಗಳಿಗಾಗಿ ಒಗ್ಗಟ್ಟಾಗಿ ಹೋರಾಡಲು ವೇದಿಕೆ ಸಿದ್ಧಪಡಿಸಿಕೊಂಡವು. ಇದನ್ನು ಬುಡಕಟ್ಟು ಜನರ ಹೋರಾಟವೆಂತಲೂ ಕರೆಯಬಹುದಾಗಿದೆ. ಅಥವಾ ರಾಷ್ಟ್ರೀಯತೆಗಾಗಿ ಕೆಳಸ್ತರದವರ ಹೋರಾಟವೆಂತಲೂ ಕರೆಯಬಹುದಾಗಿದೆ. ಮೇಲ್ವರ್ಗದ ಪ್ರಭುತ್ವ, ಪ್ರತಿಗಾಮಿತನವನ್ನು ವಿರೋಧಿಸುತ್ತಾ, ಮಾನಸಿಕವಾಗಿ ಬಡತವನ್ನು ಬಹಿರಂಗಪಡಿಸುವ ಕೆಲಸವು ನಡೆಯಿತು. ರೈತ, ಸಣ್ಣ ಹಿಡುವಳಿದಾರ, ಬುಡಕಟ್ಟು ಜನರ ಹೋರಾಟ, ರಾಷ್ಟ್ರೀಯತೆಯನ್ನು ಕಟ್ಟುವ ಹಾದಿಯಲ್ಲಿ ತಳವರ್ಗದವನರನು ಬೆಳಕಿಗೆ ತರುವ ಪ್ರಯತ್ನ ಹೊಸದು. ಇವರನ್ನು ಗುರುತಿಸುವ, ವಿಶ್ಲೇಷಿಸುವ ಕ್ರಮಗಳು ಈವರೆಗೆ ವ್ಯವಸ್ಥಿತವಾಗಿ ನಡೆದಿಲ್ಲ. ಇದು ಚರಿತ್ರೆಗೆ ಬರೆದ ದ್ರೋಹವೂ ಅಥವಾ ಚರಿತ್ರೆಯಲ್ಲಿ ದಾಖಲಾಗದವರಿಗೆ ಬಗೆದ ದ್ರೋಹವೋ ಭಾರತದ ಪ್ರಜೆಗಳಾದ ನಾವು ಸಾಮಾನ್ಯರಲ್ಲಿ ಸಾಮಾನ್ಯರಾಗಿ ಚಿಂತಿಸಬೇಕಾಗಿದೆ. ಇಂಥವರ ಸಾಲಿಗೆ ಕರ್ನಾಟಕದ ಬೇಡ, ನಾಯಕ – ವಾಲ್ಮೀಕಿ ಸಮುದಾಯವನ್ನು ಸೇರಿಸಬಹುದು. ಇದೊಂದು ಬುಡಕಟ್ಟು ಎನಿಸಿಕೊಂಡರೂ ತನ್ನ ಲಕ್ಷಣ ಚರಿತ್ರೆ ಮತ್ತು ಸಂಸ್ಕೃತಿಯನ್ನು ಎಲ್ಲೂ ಬೆತ್ತಲೆಗೊಳಿಸಿ ಕೊಂಡಿಲ್ಲದಿರುವುದು ಖೇದಕರ ಸಂಗತಿ.

ಈ ಹಿನ್ನೆಲೆಯಲ್ಲಿ ಕರ್ನಾಟಕದ ಬೇಡ ಜನಾಂಗದವರನ್ನು ಕುರಿತು ಅಧ್ಯಯನ ಮಾಡುವ ನಿಟ್ಟಿನಲ್ಲಿ ವಿಶೇಷವಾಗಿ ಇಲ್ಲಿ ಚಿತ್ರದುರ್ಗ ಜಿಲ್ಲೆಯ ಬೇಡರ ಸಾಂಸ್ಕೃತಿಕ, ಬುಡಕಟ್ಟು ವೀರರನ್ನು ಕುರಿತು ಅಧ್ಯಯನ ಮಾಡುವ ಉದ್ದೇಶವನ್ನಿಟ್ಟುಕೊಳ್ಳಲಾಗಿದೆ. ಈ ಜನಸಮುದಾಯದ ಸಂಸ್ಕೃತಿ, ಆಚಾರ ವಿಚಾರ, ಜಾನಪದ ಹಾಗೂ ನಾಗರಿಕತೆಗಳ ನಡುವೆ ತಳಕುಹಾಕಿಕೊಂಡಿರುವ ವ್ಯಕ್ತಿ ಆರಾಧನೆಯ ಹಿನ್ನೆಲೆಯನ್ನು ಬೆಳಕಿಗೆ ತರುವ ಹುಡುಕಾಟದ ಪ್ರಯತ್ನ ಇದಾಗಿದೆ. ಎಲ್ಲಾ ಬುಡಕಟ್ಟುಗಳಿರುವಂತೆ ವೈವಿಧ್ಯಮಯ ಸಾಂಸ್ಕೃತಿಕ ಪರಂಪತೆಯಿದ್ದರೂ ಬೇಡ ಜನಾಂಗ ಚರಿತ್ರೆಯ ವಿವಿಧ ಕಾಲಘಟ್ಟಗಳಲ್ಲಿ ದಾಖಲಾಗದೆ ಇರುವುದು ದುರದೃಷ್ಟಕರ.

ಹಿಂದೆ ಜೀವನಕ್ಕಾಗಿ ಗೆಡ್ಡೆ – ಗೆಣಸುಗಳನ್ನಷ್ಟೇ ಆಶ್ರಹಿಸಿದೆ ಬೇಟೆಯನ್ನು ವೃತ್ತಿಯಾಗಿಸಿಕೊಂಡಿದ್ದರು. ಅನಂತರ ರೂಪುಗೊಂಡಿದ್ದು, ಪಶುಪಾಲನೆ, ಈ ಎರಡು ಹಂತಗಳಲ್ಲೂ ಒಂದೆಡೆ ನೆಲೆಸದೆ ಕಾಡಿನಲ್ಲಿ ಅಲೆಮಾರಿ ಬದುಕನ್ನು ಸಾಗಿಸದ ಇವರು ಮುಂದೆ ಕೃಷಿಕರಾಗಿ ಒಂದೆಡೆ ನೆಲೆಸುವ ಪ್ರಯತ್ನ ಕೈಗೊಂಡರು. ವ್ಯವಸಾಯಕ್ಕೆ ಅಗತ್ಯವಾದ ಭೂಮಿಗಾಗಿ ಕಾಡನ್ನು ಕಡಿದು ನಾಡಿನ ನೆಲೆಯನ್ನು ಶೋಧಿಸಿಕೊಂಡರು. ಹೀಗೆ ನೆಲೆಗೊಂಡ ಗುಂಪುಗಳ ನಾಯಕತ್ವ ಅಥವಾ ಮುಖಂಡತ್ವದ ಮುಂದುವರಿಕೆಯಿಂದ ಸಾಮ್ರಾಜ್ಯಗಳ ಒಡನಾಟದವರೆಗೂ ತಮ್ಮ ಸ್ಥಾನಮಾನಗಳನ್ನು ಬೆಳೆಸಿಕೊಂಡರು.

ಮೂಲತಃ ದ್ರಾವಿಡ ಗುಂಪಿನವರಾದ ಬೇಡರು ವೇದಗಳ ಕಾಲದಲ್ಲಿ ಮತ್ತು ಇತರೆ ಸಂದರ್ಭಗಳಲ್ಲಿ ವಿವಿಧ ವೃತ್ತಿಗಳಿಗೆ ಅಂಟಿಕೊಂಡು ನೆಲಸತೊಡಗಿದರು. ನಾಡಿನ ಶ್ರೇಣೀಕೃತ ವ್ಯವಸ್ಥೆಯ ಭಾಗವಾಗಿ ಕ್ರಮೇಣ ತಮ್ಮ ಜನಪದವನ್ನು ಗಣರಾಜ್ಯಗಳ ಮಟ್ಟದಲ್ಲಿ ಗುರುತಿಸಿಕೊಂಡರು. ಪುರಾಣದ ಪುಟಗಳಲ್ಲಿ ಕಿರಾತ, ನಿಷಾದ, ವಾಧ್ಯ, ಶಬರ, ಪುಳಿಂದ ಮೊದಲಾದ ಹೆಸರಿನ ಪಂಡಗದವರು ಪ್ರೇರಣೆ ಸಂಕೇತಗಳಾಗಿರುವರು. ಪ್ರಾಚೀನ ಭಾರತದ 'ಶಬರ' ಎಂಬ ನಾಡು; ನಿಷಾದ ಎಂಬ ರಾಜ್ಯಗಳಿದ್ದುದನ್ನು ಇಲ್ಲಿ ಪೂರಕವಾಗಿ ನೆನಪಿಸಿಕೊಳ್ಳಬಹುದು. ಅಲ್ಲದೇ, ನಳದಮಯಂತಿ ಕಥೆಯ ನಳಮಹಾರಾಜ 'ನಿಷಾದ' ರಾಜ್ಯದ ಅರಸನಾಗಿದ್ದನೆಂಬುದೂ ಗಮನಾರ್ಹ ಅಂಶವಾಗುತ್ತದೆ.

ಜಾತಿ, ಮತ, ಧರ್ಮಗಳ ಹಿನ್ನೆಲೆಗಳ ಬೆಂಬಲವಿಲ್ಲದೆ, ಆರ್ಥಿಕ, ಸಾಮಾಜಿಕ ಚಾರಿತ್ರಿಕ ಪ್ರೇರಣೆಗಳಿಲ್ಲದೆ ವೈಯಕ್ತಿಕ ಶ್ರಮ ಸಾಹಸ – ಸಾಧನೆಗಳಿಂದ ಮೇಲೆ ಬಂದವರು ಹಲವರು ಮಾತ್ರ. ರಾಮಾಯಣದ ಕರ್ತೃ ವಾಲ್ಮೀಕಿ, ಶಬರಿ, ಗುಹಾ, ಧರ್ಮವ್ಯಾಧ. ಬೇಡರ ಕಣ್ಣಪ್ಪ ಮೊದಲಾದವರು ಬೇಡರೇ ಆಗಿದ್ದರೂ, ಪೂರ್ವಸ್ಥಿತಿಗಳನ್ನು ಮೀರಿ ಅಪಾರ ಸಾಧನೆ ತೋರಿದ ಅಪ್ರತಿಮ ಸಾಹಸಿಗಳಾಗಿದ್ದಾರೆ. ಅಲ್ಲದೆ, ಮಹಾಭಾರತದಲ್ಲಿ ಬರುವ ಏಕಲವ್ಯನ ಪಾತ್ರ ವಿಶಿಷ್ಟವಾದುದು.

ಚಾರಿತ್ರಿಕವಾಗಿ ನೋಡುವುದಾದರೆ ಮೌರ್ಯರ ಕಾಲದಲ್ಲಿ ಬೇಡರು ಬೇಟೆಯನ್ನೇ ನಂಬಿದ್ದರು. ರಾಜಾಶ್ರಯ ಕೈ ತಪ್ಪಿದಾಗ ವಲಸೆ ಆರಂಭಿಸಿರಬೇಕು. ಬಹುಶಃ ಬೇಟೆಯಲ್ಲಿದ್ದು, ರಾಜ ಪೋಷಣೆಯ ವಿವಿಧ ವೃತ್ತಿಗಳನ್ನು ಹಂಬಲಿಸಿ, ಪ್ರೇರಣೆಯಿಂದಲೂ ಅವುಗಳಲ್ಲಿ ನಿರತರಾಗಿರಬೇಕು. ಅಶೋಕನ ಅಹಿಂಸೆ ಪ್ರತಿಪಾದನೆಗೆ ಮೊದಲು ಬಲಿಯಾದವರು, ಶರಣಾದವರೆಂದರೆ ಬೇಡರು. ಶಾತವಾಹನರ ಕಾಲಕ್ಕೆ ಇಕ್ಷ್ವಾಕು ವಂಶದ ದೊರೆಗಳು ಬೇಡರನ್ನು 'ಮಹಾತಳವಾರ' ಎಂಬ ಹುದ್ದೆಗೆ ನೇಮಿಸಿಕೊಂಡಿದ್ದರು. ಹೀಗೆ ಗಂಗರ ಕಾಳದಲ್ಲಿ ಬೇಡರನ್ನು ಸೈನ್ಯಕ್ಕೆ ಸೇರಿಸಿಕೊಂಡಿದ್ದರಿಂದ ಆ ರಾಜ್ಯದ ಸಾರ್ವಭೌಮತ್ವ ಇಮ್ಮಡಿಯಾಯಿತೆಂಬುದರಲ್ಲಿ ಅನುಮಾನವಿಲ್ಲ. ಕದಂಬ, ಪಲ್ಲವರ ಕಾಲದಲ್ಲಿ ರಾಜ್ಯಗಳಿಂದ ರಾಜ್ಯಕ್ಕೆ ವಲಸೆ ಹೋಗುವುದು ಸರ್ವೇಸಾಮಾನ್ಯವಾಗಿತ್ತು. ರಾಷ್ಟ್ರಕೂಟರ ಕಾಲಕ್ಕೆ ಇವರು ಸೈನ್ಯದ ತುಕಡಿಗಳಿಗೆ ಮುಖಂಡರಾಗಿ 'ನಾಯಕ' (Field Marshall) ಎಂಬ ಹುದ್ದೆ ಮತ್ತು ಬಿರುದನ್ನು ಪಡೆದರು. ಚಾಲುಕ್ಯರ ಸಾಮ್ರಾಜ್ಯದಲ್ಲಿ ಸಂಘಟಿತ ಸೈನಿಕ ಪಡೆಗಳ ನೇತಾರರಾಗಿ ರಾಜಕೀಯ ಚುಕ್ಕಾಣಿ ಹಿಡಿಯಲು ಹಂಬಲಿಸುತ್ತಿದ್ದರು. ಹೊಯ್ಸಳರ ಕಾಲದಲ್ಲಿ ಬೇಡರ ಸೈನ್ಯ ಮಾತ್ರ ರಕ್ಷಣೆಗೆ ಏಕೈಕ ವರ್ಗವಾಗಿತ್ತು. ಇವರು ದಂಡನಾಯಕರಾಗಿ ಚಿಕ್ಕಪುಟ್ಟ ನಾಡುಗಳಿಗೆ ಒಡೆಯರಾಗಿ ಕಾರ್ಯನಿರ್ವಹಿಸಿದ್ದುಂಟು.

ಜೀವನ ನಿರ್ವಹಣೆಗಾಗಿ ಬೇಟೆ ಹಾಗೂ ಪಶುಪಾಲನೆಯನ್ನೇ ನಂಬಿ ಬದುಕುವ ಬೇಡರ ಗುಂಪು ಒಂದಡೆಯಿದ್ದರೆ, ರಾಜರಿಂದ ಮನ್ನಣೆ ಪಡೆದು ಅಧಿಕಾರದ ಸವಿ ಕಂಡು, ಅನುಭವಿಸುವ ಮತ್ತೊಂದು ಬೇಡರ ಗುಂಪು ಸಂಘಟಿತ ಸಮಾಜವಾಗಿತ್ತು. ಇಂತಹ ಗುಂಪಿನಲ್ಲಿ ಸೆಟೆದು ನಿಂತು ವಿರೋಧಿಗಳ ನಡುವೆ ಪುಟಿದು ಬಂದು ಕೆಚ್ಚೆದೆಯಿಂದ ರಾಜ್ಯ ಸ್ಥಾಪಿಸಿದವರು ಕುಮ್ಮಟದ ನಾಯಕ ಅರಸರು.

ಜಟಿಂಗರಾಮನ ಪರಮಭಕ್ತರಾದ ಕುಮ್ಮಟದ ಅರಸರು ಮೂಲತಃ ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರು ಪರಿಸರದಲ್ಲಿದ್ದವರು. ತರುವಾಯ ಸಂಡೂರು ಪರಿಸರದ ಹೊಸಮಲೆದುರ್ಗದಲ್ಲಿ (ಮೊದಲ ರಾಜಧಾನಿ) ರಾಜ್ಯಾಳ್ವಿಕೆಗೆ ನಾಂದಿ ಹಾಡಿದರು. ಮುಂದೆ ಆನೆಗುಂದಿ ಆಸುಪಾಸಿನಲ್ಲಿ ರಾಜ್ಯವನ್ನು ಸ್ಥಾಪಿಸಿ ಕುಮ್ಮಟದುರ್ಗದಲ್ಲಿ ನೆಲೆಸಿದರು. ಇವರ ರಾಜ್ಯ ವಿಸ್ತಾರವು ವಿಶಾಲವಾಗಿತ್ತು. ಈ ಅರಸರಲ್ಲಿ ಮುಮ್ಮಡಿ ಸಿಂಗೆಯನಾಯಕ, ಕಂಪಲಿರಾಯ ಮತ್ತು ಕುಮಾರರಾಮ ಪ್ರಮುಖರು.

ಇವರ ಸಂಬಂಧಿಗಳೆಂದು ಹೇಳಲಾಗುವ ಭಾವಸಂಗಮದ ಪುತ್ರರು ಹರಿಹರ ಮತ್ತು ಬುಕ್ಕರಾಯ ವಿಜಯನಗರ ಸಾಮ್ರಾಜ್ಯಕ್ಕೆ ಅಡಿಗಲ್ಲಿಟ್ಟರು. ಈ ಸಾಮ್ರಾಜ್ಯದಲ್ಲಿ ಬೇಡರು ಸೈನ್ಯದ ದಂಡನಾಯಕರಾಗಿ, ತಳವಾರರಾಗಿ ಮತ್ತು ರಾಜನಿಗೆ ಆತ್ಮೀಯ ಬೇಟೆಗಾರರಾಗಿಯೂ ಕಾರ್ಯನಿರ್ವಹಿಸಿದರು. ಮೆಚ್ಚುವ ಸಂಗತಿಯೆಂದರೆ, ವಿಜಯನಗರ ಸಾಮ್ರಾಜ್ಯದ ಅವಧಿಯಲ್ಲಿ 'ಬೇಡರಪಡೆ' ಅತೀ ಪ್ರಬಲವಾದ ಸೈನ್ಯದ ತುಕಡಿಯಾಗಿತ್ತು. ಅನೇಕ ಯುದ್ಧಗಳಲ್ಲಿ ಜಯಗಳಿಸಿದ್ದರಿಂದ ದೊರೆತ ಉಂಬಳಿ ಭೂಮಿಗಳನ್ನು ಇಂದಿಗೂ ಭೋಗಿಸುವರು. ತಾಳಿಕೋಟೆ ಪರಿಸರದ ರಕ್ಕಸತಂಗಡಿಯಲ್ಲಿ ನಡೆದ ಯುದ್ಧದಲ್ಲಿ ಬೇಡರ ಪಡೆ ಹತವಾದ ಸಂಖ್ಯೆಯನ್ನು ೪೦ ಸಾವಿರ ಎಂದು ವಿದೇಶಿ ಯಾತ್ರಿಕ ಅಭಿಪ್ರಾಯಪಡುತ್ತಾನೆ.

ವಿಜನಗರೋತ್ತರದಲ್ಲಿ ಆನೆಗುಂದಿ ಅರಸರು ಬೇಡರಿಗೆ ದೊರೆಗಳಾಗಿದ್ದರು. ಬೇಡರ ಅರಮನೆ ಮತ್ತು ಗುರುಮನೆಗಳೆರಡಕ್ಕೂ ಆನೆಗುಂದಿ ಕೇಂದ್ರಸ್ಥಳವಾಗಿತ್ತು. ತಮ್ಮ ಕುಲ, ಜಾತಿ ಇತ್ಯಾದಿ ವಿವಾದಗಳಿಗೆ ನ್ಯಾಯಪಂಚಾಯ್ತಿ ಮಾಡುತ್ತಿದ್ದವರು ಇವರೇ. ಹೀಗಾಗಿ ಈ ದೊರೆಗಳು ಬೇಡರನ್ನು ವಿವಿಧ ಹುದ್ದೆಗಳಿಗೆ ನೇಮಿಸಿದ್ದುಂಟು. ಆಗಿನ ಕಾಲಕ್ಕೆ ನರಪತಿಗಳೆಂದು ಕರೆಯುವ ಆನೆಗುಂದಿ ಅರಸರು 'ಮ್ಯಾಸ ಬ್ಯಾಡ್ಕಿ ನಾಯಕತನ' ಎಂಬ ಗೌರವ ಹುದ್ದೆ ನೀಡಿದ್ದರು. ಬೇಡರಲ್ಲಿ, ಬೇಟೆಗಾರ ವರ್ಗಕ್ಕೆ ಸೇರಿದ ಗುರಿಕಾರ (ಕುಲದ ನಾಯಕ) ಅಧಿಕಾರಯುಕ್ತ

ಸ್ಥಾನಗಳಿಗೆ ಮೀಸಲಾಗಿದ್ದ. ಇತ್ತೀಚೆಗೆ ಕಮಲಾಪುರದ ಗುರಿಕಾರ ಕಾಟಯ್ಯನ ಬಳಿಯಿರುವ ಕಂಚಿನಪತ್ರ ದೊರೆತಿದ್ದು, ಮೇಲಿನ ಸಂಗತಿಯನ್ನು ತಿಳಿಯಬಹುದಾಗಿದೆ.

ತಮ್ಮ ಪಾತ್ರವನ್ನು, ಸ್ಥಾನಮಾನವನ್ನು ವಿಜಯನಗರದಲ್ಲಿ ಗುರುತಿಸಿಕೊಂಡ ಪ್ರತಿಯೊಬ್ಬ ದಂಡನಾಯಕ, ಅಧಿಕಾರಿಗಳು ಸಾಮ್ರಾಜ್ಯದ ಅವಸಾನದಲ್ಲಿ ಸ್ವಾತಂತ್ರ್ಯ ಪಾಳೆಯಗಾರರಾದರು. ರಾಜಕೀಯದ ಏಳು – ಬೀಳುಗಳಲ್ಲಿ ಹೆಚ್ಚು ಅನುಭವ ಪಡೆಯದ ಪಾಳೆಯಗಾರರು ಅಪಾರ ವೆಚ್ಚವನ್ನು ಕೋಟೆ ಕೊತ್ತಲು ಕಟ್ಟಿಲು ಮತ್ತು ಕಂದಕ ತೋಡಲು ವ್ಯಯಿಸಿದರು. ಹರಪನಹಳ್ಳಿ, ಚಿತ್ರದುರ್ಗ, ತರೀಕೆರೆ, ಬಸವಾಪಟ್ಟಣ, ಸಂತೆಬೆನ್ನೂರು, ರಾಯದುರ್ಗ, ಗುಡೆಕೋಟೆ, ಜರಿಮಲೆ, ನಾಯಕನಹಟ್ಟಿ, ಸುರಪುರ, ದೇವದುರ್ಗ ಮುಂತಾದ ಪಾಳೆಯಪಟ್ಟುಗಳಲ್ಲಿ ಬೇಡರು ತಮ್ಮ ಸಾಂಸ್ಕೃತಿಕ ವೈವಿಧ್ಯತೆಯನ್ನು ಪ್ರತಿನಿಧಿಸಿದ್ದಾರೆ. ಪಾಳೆಯಗಾರಿಕೆ ಎಂಬುದು ಮುಳ್ಳಿನ ಹಾಸಿಗೆಯಾಗಿತ್ತು. ಸಂಪತ್ತಿನ ಕ್ರೋಢೀಕರಣವನ್ನು ಕಪಟತನದಿಂದ ದೋಚುವುದೇ ಆ ಕಾಲದ ವಾಡಿಕೆಯಾಗಿತ್ತು. ರಾಜ್ಯಗಳನ್ನು ಸ್ಥಾಪಿಸಿ, ಖನಾಜ ಭದ್ರಪಡಿಸಿದಾಗ ಹೈದರಾಲಿ, ಟಿಪ್ಪುರವರ ದಂಡೆಯಾತ್ರೆಗಳಿಂದ ಇವರು ತತ್ತರಿಸಿ ಹೋದರು. ಅನೇಕ ಬೇಡರು ಸೆರೆಯಾಗಿ, ಅವರ ಸೈನಿಕರಾಗಿ ನರಳಿದ್ದು ದುರಂತಮಯ ಚಿತ್ರಣ.

ಟಿಪ್ಪುವಿನಿಂದ ಅಪಾರ ನೋವು, ನಷ್ಟ ಅನುಭವಿಸಿದವರು ಚಿತ್ರದುರ್ಗದ ಪಾಳೆಯಗಾರರು, ಇವರ ಅವನತಿಯ ತರುವಾಯ ರಾಜಕೀಯವಾಗಿ ಚೇತರಿಸಿಕೊಳ್ಳಲು ಸನ್ನದ್ಧರಾಗುವ ಸಂದರ್ಭಕ್ಕೆ ಬ್ರಿಟಿಷರು ಕರ್ನಾಟಕವನ್ನು ಮುತ್ತಿದರು. ಹೀಗೆ ರಾಜಕೀಯ ಸವಿಯನ್ನು ನೆಮ್ಮದಿಯಾಗಿ ಯಾವೊಬ್ಬ ಬೇಡ ಪಾಳೆಯಗಾರನು ಅನುಭವಿಸಲಿಲ್ಲ. ಮೈಸೂರು ಒಡೆಯರ ಆಳ್ವಿಕೆಯಲ್ಲಿಯೂ ಬೇಡರ ಸ್ಥಿತಿಗತಿ ಅಷ್ಟಕಷ್ಟೆ ಸೀಮಿತವಾಗಿತ್ತು.

ಬ್ರಿಟಿಷರು ರಾಜಕೀಯ ಚುಕ್ಕಾಣಿ ಹಿಡಿದ ಬಳಿಕ ಪಾಳೆಯ ಪಟ್ಟುಗಳನ್ನು ಮಟ್ಟಹಾಕಿದ್ದು ಗಮನಾರ್ಹ. ಆ ಮೂಲಕ ದೊರೆಗಳಿಗೆ ಮಾಶಾಸನ ಜಾರಿ ಮಾಡಿದರಲ್ಲದೆ, ತಳವಾರಿಕೆ, ಪೊಲೀಸ್, ಕಾವಲುಗಾರಿಕೆ ಮೊದಲಾದ ಹುದ್ದೆಗಳಿಗೆ ಇವರನ್ನು ನೇಮಿಸಿಕೊಂಡರು. ಬ್ರಿಟಿಷ್ ಅಧಿಕಾರಿ ಮತ್ತು ಬರಹಗಾರ ವರ್ಗವು ಇಲ್ಲಿನ ಜನಸಮುದಾಯಗಳನ್ನು 'ಕ್ರಿಮಿನಲ್ ಟ್ರೈಬ್ಸ್' ಎಂದು ದಾಖಲಿಸಿದೆ. ಎಲ್ಲರೂ ಹೀಗೆ ಇರಲಿಲ್ಲ. ಬೇಡರನ್ನು ಕಳ್ಳರು, ಸುಲಿಗೆ, ದರೋಡೆಕೋರರೆಂದು ನಮೂದಿಸಿದ್ದಾರೆ. ಬ್ರಿಟಿಷರ ಕಾಲಕ್ಕೆ ಕೃಷಿ ಹೀಗೆ ವಿವಿಧ ವೃತ್ತಿಗಳಲ್ಲಿ ವಿಸ್ತರಣೆಗೊಳ್ಳದೆ ಮೇಲಿನ ವೃತ್ತಿಗಳನ್ನು ಅವಲಂಬಿಸಿರಬಹುದು. ಇಂದು ಮಾತ್ರ ಆ ಚಿತ್ರಣ ಬದಲಾಗಿದೆ. ಬ್ರಿಟಿಷರ ಕಾನೂನು ನಿಯಮಗಳನ್ನು ವಿರೋಧಿಸಿದ ಪ್ರಥಮ ವೀರರೇ ಹಲಗಲಿ ಬೇಡರು. ಕ್ರಿ.ಶ. ೧೮೫೭ರ ದಂಗೆಯ ಶಸ್ತ್ರಾಸ್ತ್ರ ನಿಷೇಧ ಕಾಯಿದೆಯನ್ನು ಉಲ್ಲಂಘಿಸಿ, ಬ್ರಿಟಿಷರಿಗೆ ತಕ್ಕಪಾಠ ಕಲಿಸಿದ ಏಕೈಕ ಜನಸಮುದಾಯ ಹಗಲಿಯ ಬೇಡರು ಮಾತ್ರ, ಮದ್ರಾಸ್, ಮುಂಬಾಯಿ ಪ್ರಾಂತ್ಯಗಳಲ್ಲಿ ಬೇಡರ ಬದುಕು ಹೀನಾಯವಾಗಿತ್ತು. ಕೈತಪ್ಪಿದ ಪಾಳೆಯಗಾರಿಕೆಯಿಂದ ಜೀವಿಸುವುದು ಕಷ್ಟವಾಯಿತು ಸಣ್ಣಪುಟ್ಟ ಕಾರಣಗಳಿಗಾಗಿ ಬ್ರಿಟಿಷರು ಬೇಡರನ್ನು ನಿಂದಿಸುತ್ತಿದ್ದರು. ಸರ್ವಪ್ಪನಾಯಕ ಮೈಸೂರು ಭಾಗದಲ್ಲಿ ಕಂಡು ಬಂದರೆ, ಮುಂಬಾಯಿ (ಪ್ರಾಂತ) ಕರ್ನಾಟಕದಲ್ಲಿ ವೀರಸಿಂಧೂ ಲಕ್ಷಣನೇ ಬ್ರಿಟಿಷರನ್ನು ಮೆಟ್ಟಿನಿಂತ ಮೊದಲ ವೀರ. ಇವರ ದುರಂತ ಸಾವು ಬೇಡರ ರೊಚ್ಚಿಗೆ, ಹುಮ್ಮಸ್ಸಿನ ಹೋರಾಟಕ್ಕೆ ಕ್ರಾಂತಿಯ ಕಿಡಿಯಾಯಿತು. ಛಲದಿಂದ ಬ್ರಿಟಿಷರ ವಿರುದ್ಧ ಹೋರಾಡಲು ಹವಣಿಸಿದ ಬೇಡರು, ಸ್ವಾತಂತ್ರ್ಯ ಹೋರಾಟದಲ್ಲಿ ತಮ್ಮನ್ನು ಅರ್ಪಿಸಿಕೊಂಡರು. ಉದಾ: ಧೊಂಡಿಯ ವಾಘ.

ವಸಾಹತುಶಾಹಿಪೂರ್ವದಲ್ಲಿದ್ದ ಬೇಡರ ಬದುಕು ವಸಾಹತು ಕಾಲದಲ್ಲಿ ಶೋಚನೀಯವೆಂಬಂತೆ ಕಂಡುಬಂದರೆ, ಅನಂತರ ಬದಲಾದ ಸ್ಥಿತಿಯನ್ನು ಕಾಣಬಹುದು. ಈ ವಸಾಹತೋತ್ತರ ಸಂದರ್ಭದಲ್ಲಿ ಇವರ ಸ್ಥಿತಿಗತಿ ಕುರಿತು ವಿದ್ವಾಂಸರು ಅಧ್ಯಯನ ನಡೆಸಿದ್ದಾರೆ. ಸಮಪಾಲು ಸಮಬಾಳಿಗಾಗಿ ಹೋರಾಟ ಮುಂದುವರೆದು ಪ್ರಗತಿಪಥದಲ್ಲಿ ಸಾಗಿದ್ದು ವಿಶೇಷ. ಆಧುನಿಕೋತ್ತರ ಅಧ್ಯಯನ ಕ್ರಮಗಳು ಇವರ ಬಗ್ಗೆ ಸಾಕಷ್ಟು ಬೆಳಕು ಚೆಲ್ಲುತ್ತವೆ. ಬೇಡರ ಪಾಲಿಗೆ ಶ್ರಮ ಮಾನದಂಡವಾದುದಲ್ಲದೆ, ಪರಿವರ್ತನೆಯ ಬದುಕಿಗೆ ಸಂಕೇತ. ಇಷ್ಟೆಲ್ಲಾ ಪರಂಪರೆಯುಳ್ಳ ಬೇಡರ ಬದುಕು ಇನ್ನು ಡೋಲಾಯಮಾನ ಸ್ಥಿತಿಯಲ್ಲಿದೆ. ಸುಧಾರಣಾ ಜೀವನಕ್ರಮ ಒಗ್ಗಿಹೋಗಿದ್ದರೂ ಸಹ ಬೇಟೆಯು

ಆಚರಣೆ ರೂಪದಲ್ಲಿ ಜೀವಂತಿಕೆ ಪಡೆದಿದೆ. ಪಶುಪಾಲನೆ ಆರ್ಥಿಕ ನಿರ್ವಹಣೆಗೆ ಹಾಸುಹೊಕ್ಕಾಗಿದೆ. ಕುರಿ, ಆಡು, ದನ, ಎಮ್ಮೆ, ಎತ್ತು, ಕರುಗಳೇ ಗ್ರಾಮೀನ ಆರ್ಥಿಕ ಸಂಪತ್ತು. ಇಂದು ಕೃಷಿಯಲ್ಲಿ ಸಂಪ್ರದಾಯಿಕ ಬೆಳೆಗಳನ್ನು ಬೆಳೆದರೆ ಲಾಭವಿಲ್ಲ. ವಿದೇಶಿ ಬೀಜಗಳನ್ನು ತಂದರೆ ಹೆಚ್ಚು ಇಳುವರಿ ಬಂದು ಲಾಭ ಪಡೆಯಬಹುದು. ಆದರೆ ಇದು ರೈತರ ಪಾಲಿಗೆ ಮೋಸ ಎನಿಸುತ್ತದೆ. ಮುಕ್ತ ವ್ಯಾಪಾರ ನೀತಿಯಿಂದ ಮತ್ತು ಜಗತ್ತೇ ಧ್ರುವೀಕರಣಗೊಳ್ಳುವಾಗ ಒಬ್ಬ ಸಾಮಾನ್ಯ ವ್ಯಕ್ತಿ ಬಗ್ಗೆ ಕಿಂಚಿತ್ತು ಆಲೋಚಿಸದೆ ಮುನ್ನುಗ್ಗುವರೇ ಹೆಚ್ಚು. ಸರಿಯಾಗಿ ಬೆಳೆ ಬರಲಿಲ್ಲವೆಂದರೆ ತಮ್ಮ ಮನೆದೇವರ ಹಬ್ಬ ಮಾಡಲಿಲ್ಲ. ದೇವರ ತೀರ್ಥ ಹಾಕಲಿಲ್ಲ ಎಂಬ ನಂಬಿಕೆಗಳಿವೆ. ಸರ್ಕಾರ ಇವರಿಗೆ ಪರಿಶಿಷ್ಟವರ್ಗವೆಂದು ಕರೆದು ಅನೇಕ ಸೌಲಭ್ಯಗಳನ್ನು ಕಲ್ಪಿಸಿದೆ. ಆದರೂ ಗಿರಿಜನರಾದ ಬೇಡರು ಇಂಥಾ ಸೌಲಭ್ಯಗಳಿಂದ ವಂಚಿತರಾಗಿರುವರು. ಮುಂದುವರೆದ ಬೇಡರ ನಾಗರಿಕ ಸಮಾಜಕ್ಕೆ ಸರ್ಕಾರದ ಯೋಜನೆಗಳು ತಲುಪುವುದು ವಿಷಾದನೀಯ. ಮ್ಯಾಸಬೇಡರಂಥ ಬುಡಕಟ್ಟು ಜನರಿಗೆ ನಾಗರಿಕತೆಯ ಸೋಂಕಿನ ಸುಳಿವೆ ಇಲ್ಲ. ಇಂದು ಅಂಥ ಪರಧಿಗೆ ಬರುವಲ್ಲಿ ತಲ್ಲೀನರಾಗಿದ್ದಾರೆ.

ಹೀಗೆ ಬೇಡರು ಭವ್ಯವಾದ ಸಾಂಸ್ಕೃತಿಕ ಪರಂಪರೆಯನ್ನು ಹೊಂದಿದ್ದರೂ, ಚರಿತ್ರೆಯ ಪುಟಗಳಲ್ಲಿ ಮರೆಯಾಗಿರುವ ಸಂದರ್ಭಗಳೇ ಹೆಚ್ಚು. ವಿಜಯನಗರ ಪೂರ್ವ ಮತ್ತು ವಿಜಯನಗರೋತ್ತರ ಸಂದರ್ಭದಲ್ಲಿ ಈ ಬುಡಕಟ್ಟಿನ ವೀರರು ತಾಯಿನಾಡಿನ ರಕ್ಷಣೆಗಾಗಿ ಹೋರಾಡಿರುವುದು ಸ್ಮರಣೀಯ. ಬೇಟೆ, ಪಶುಪಾಲನೆ ಮತ್ತು ಕೃಷಿ ಅವಸ್ಥೆಗಳಲ್ಲಿ ಪ್ರಾಣಿ, ಭೂಮಿ, ಹೆಣ್ಣು ಮತ್ತು ಸಂಪತ್ತಿಗಾಗಿ ಕಾದಾಡುತ್ತಿದುದು ವಾಸ್ತವ ಸಂಗತಿ. ಇವುಗಳನ್ನು ಜನಪದರು ವಿವಿಧ ರೀತಿಯಲ್ಲಿ ಕಥೆ ಕಟ್ಟಿ ಹಾಡುತ್ತಾರೆ. ಸತ್ತ ವ್ಯಕ್ತಿಯನ್ನು ದೇವರೆಂದು ಪರಿಗಣಿಸಿ ಆಚರಿಸುವ ಸಂಪ್ರದಾಯವಿದೆ. ಇಲ್ಲಿ ಪುರುಷನೇ ವ್ಯಕ್ತಿ ಆರಾಧನೆಯ ಕೇಂದ್ರ ಬಿಂದು. ಅಂದರೆ ದೈವತ್ವಕ್ಕೇರಿದ ವ್ಯಕ್ತಿ ಎಂದು ತಿಳಿಯಬೇಕು. ಸ್ತ್ರೀಯರು ಸಹ ಈ ಹಂತವನ್ನು ಮೀರಿದ್ದರು.

ಬುಡಕಟ್ಟು ವೀರರು ಅಥವಾ ಸಾಂಸ್ಕೃತಿಕ ನಾಯಕರು ಮ್ಯಾಸಬೇಡರಂತೆ ಇತರೆ ಸಮುದಾಯಗಳಲ್ಲಿಯೂ ಕಂಡು ಬರುತ್ತಾರೆ. ಮುಖ್ಯವಾಗಿ ಮಧ್ಯಕಾಲದಲ್ಲಿ ಕಂಡು ಬರುವ ಇವರ ಪಾತ್ರ ಚರಿತ್ರೆಯ ಯಾವ ದಾಖಲೆಯಲ್ಲಿಯೂ ಸಿಗುವುದಿಲ್ಲ. ಜನರ ಬಾಯಲ್ಲಿ ಮಾತ್ರ ಇಂದಿಗೂ ಜೀವಂತಿಕೆ ಪಡೆದುಕೊಂಡಿದೆ ಇವರ ಮೌಖಿಕ ಇತಿಹಾಸ, ಅನುಕೂಲಕ್ಕೆ ತಕ್ಕಂತೆ ದೇವಾಲಯ, ಶಾಸನ, ಶಿಲ್ಪ, ಕೆರೆ – ಕಟ್ಟೆ, ಕೋಟೆ – ಕೊತ್ತಳಿಗಳು ಇಲ್ಲಿನ ಅಧ್ಯಯನಕ್ಕೆ ನೆರವಾಗುತ್ತವೆ.

ಆಧುನಿಕ ಸಂಸ್ಕೃತಿಯಿಂದ ನಮ್ಮ ಪ್ರಾಚೀನ ಸಂಸ್ಕೃತಿ ನೆಲಕಚ್ಚುವಂತಾಗಿದೆ. ಬುಡಕಟ್ಟು ವೀರರನ್ನು ಆರಾಧಿಸುವ ಬೇಡರು ಇತರರ ಪ್ರಭಾವಕ್ಕೆ ಒಳಗಾಗಿ ಖ್ಯಾತಿ ಪಡೆದ ದೇವರನ್ನು ಪೂಜಿಸುತ್ತಾ ಅನುಯಾಯಿಗಳಾಗುತ್ತಾರೆ. ಜೊತೆಗೆ ತಮ್ಮ ವಂಶದ ಅಥವಾ ಪರಂಪರೆಯ ಪೂರ್ವಿಕ ವ್ಯಕ್ತಿಯನ್ನು ಆರಾಧಿಸುವುದುಂಟು. ಮ್ಯಾಸಬೇಡರ ವಿಶೇಷತೆಯೆಂದರೆ ಎಂಥ ಜಗದ್ವಿಖ್ಯಾತ ದೇವರುಗಳಿದ್ದರೂ ತಮ್ಮ ಮಾತೃ ದೇವತೆಗಳಿಗೆ ಮೊದಲ ಆದ್ಯತೆಕೊಡುವರು. ಆದುದರಿಂದ ಇಂಥಾ ವೀರರ ಸಾಂಸ್ಕೃತಿಕ ಬದುಕು ಅಜ್ಞಾತವಾಗಿದ್ದುದನ್ನು ತೆರೆದು ತೋರಿಸಬೇಕಾಗಿದೆ.

ಇಲ್ಲಿ ವೀರ, ಅವನ ಲಕ್ಷಣಗಳು, ವೀರರ ಸಾಧನೆ, ಸೋಲು, ಸಾವು, ಆಚರಣೆ, ಸಂಪ್ರದಾಯ, ವಾಸ್ತುಶಿಲ್ಪ, ಇತ್ಯಾದಿ ಅಂಶಗಳನ್ನು ಪರಿಗಣಿಸಲಾಗುತ್ತದೆ. ಇವರು ಪಾಳೆಯಗಾರರು ಆಗದೇ, ತೀರಾ ಪುರೋಹಿತ ವರ್ಗಕ್ಕು ಸೇರದೆ ಆಧ್ಯಾತ್ಮ ರೂಪದ ವೀರಪರಾಕ್ರಮಿಗಳಂತೆ ಕಂಡುಬರುವರು. ಇವರು ಮಾಡಿದ ಸಾಧನೆ ಕಡಿಮೆಯಾದರೂ, ಅಂದಿಗೆ ಅದು ಮೌಲ್ಯಯುತವಾಗಿತ್ತು. ಅಂದಿನ ಜೀವನ ಮೌಲ್ಯಗಳಲ್ಲಿ ಅದು ಬೆರೆತು ಹೋಗಿದ್ದರಿಂದ ಜನಪದ ಸಾಹಿತ್ಯದಲ್ಲಿ ಆ ಬಗ್ಗೆ ಮಾಹಿತಿ ಲಭಿಸುವುದು. ಗಾದರಿ ಪಾಲನಾಯಕ, ಜಗಳೂರು ಪಾಪನಾಯಕ, ಕೊಡಗಲು ಬೊಮ್ಮಯ್ಯ, ಯರಗಾಟನಾಯಕ, ಗಾಜನಾಯಕ, ದಡ್ಡಿಸೂರನಾಯಕ, ಯರಮಂಚಿನಾಯಕ, ಪೆದ್ದಯ್ಯ ಮೊದಲಾದ ವೀರರ ಚರಿತ್ರೆಯು ಅಮೋಘವಾದುದು. ಇವರ ಚರಿತ್ರೆ ಎಲ್ಲೂ ದಾಖಲಾಗಿಲ್ಲ. ಕೇವಲ ಮೌಖಿಕ ಸಾಹಿತ್ಯವನ್ನಷ್ಟೇ ಬಳಸಿಕೊಂಡು ಮೇಲಿನ ವೀರರು ಮತ್ತು ಅವರ ಪೂರ್ವಿಕರು, ಇಂದಿನ ವೀರರು ಇತ್ಯಾದಿಯಾಗಿ ವಿಶ್ಲೇಷಿಸುವ ಉದ್ದೇಶವನ್ನು ಹೊಂದಲಾಗಿದೆ.

ಪ್ರಸ್ತುತ ವಿಷಯದ ವ್ಯಾಪ್ತಿ ಚಿತ್ರದುರ್ಗ ಜಿಲ್ಲೆಗೆ ಸಂಬಂಧಿಸಿದ್ದರೂ ನೆರೆಯ ಜಿಲ್ಲೆಗಳಾದ ದಾವಣಗೆರೆ ಮತ್ತು ಬಳ್ಳಾರಿ ಜಿಲ್ಲೆಗಳ ಜಗಳೂರು ಮತ್ತು ಕೂಡ್ಲಿಗಿ, ಹೊಸಪೇಟೆ ತಾಲೂಕುಗಳನ್ನು ಅಧ್ಯಯನಕ್ಕೊಳಪಡಿಸಿಕೊಳ್ಳಲಾಗಿದೆ. ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರು, ಚಳ್ಳಕೆರೆ, ಹೊಳಲ್ಕೆರೆ, ಚಿತ್ರದುರ್ಗ ತಾಲೂಕುಗಳಲ್ಲಿ ಬೇಡರ ಆರಾಧನಾ ಕ್ಷೇತ್ರಗಳೀವೆ. ಈ ಎಲ್ಲಾ ಪ್ರದೇಶಗಳಲ್ಲಿ ವೀರರ ಆಚರಣೆ, ರೂಢಿ, ಸಂಪ್ರದಾಯಗಳನ್ನು ಜನಾಂಗದ ವೈಶಿಷ್ಟ್ಯಗಳೊಂದಿಗೆ ವಿವರಿಸುವ ಅಗತ್ಯವಿದೆ. ಕಾಲ, ವ್ಯಾಪ್ತಿ ನಿಖರವಾಗಿಲ್ಲದ್ದರಿಂದ ಮಧ್ಯಕಾಲವೆಂದು ಕರೆದುಕೊಳ್ಳಲಾಗಿದೆ.

ಬೇಡರ ಸಾಂಸ್ಕೃತಿಕ ಲಕ್ಷಣಗಳಲ್ಲಿ ಬುಡಕಟ್ಟು ವೀರನ ಜನನ, ಬೆಳವಣಿಗೆ, ಸಾಧನೆ, ಶಿಕ್ಷಣ, ಉದ್ಯೋಗ ಅಥವಾ ವೃತ್ತಿ ಇತ್ಯಾದಿ ಸಂಗತಿಗಳು ವ್ಯಕ್ತಿತ್ವದ ಮಾನದಂಡವಾಗಿದೆ. ಯಾವೊಬ್ಬ ವೀರನ ಜನನದ ಸ್ಪಷ್ಟ ಕಾಲಮಾನ ತಿಳಿದುಬಂದಿಲ್ಲ. ಕೆಲವೇ ವರ್ಷಗಳ ಹಿಂದೆ ಚಿರತೆಯೊಂದಿಗೆ ಕಾದಾಡಿ ಮಾಡಿದ ಪೆದ್ದಯ್ಯ (ಯರಮಂಚಯ್ಯ) ನನ್ನು ನೂರಾರು ವರ್ಷಗಳ ಹಿಂದಿನವನೆಂದು ಉತ್ಪ್ರೇಕ್ಷಿಸಿ ಹೇಳುವುದುಂಟು. ಹೀಗಾಗಿ ಇಲ್ಲಿ ಕಾಲಮಾನವನ್ನು ನಿರ್ದಿಷ್ಟವಾಗಿ ಇಟ್ಟುಕೊಂಡಿಲ್ಲ. ಒಟ್ಟು ಅಧ್ಯಯನದ ವ್ಯಾಪ್ತಿಯನ್ನು ಹತ್ತನೇ ಶತಮಾನದಿಂದ ಇಪ್ಪತ್ತನೆಯ ಶತಮಾನದವರೆಗೆ ಆಯ್ದುಕೊಳ್ಳಲಾಗಿದೆ. ಪ್ರಮುಖವಾಗಿ ೧೯ – ೧೭ನೇ ಶತಮಾನಗಳಲ್ಲಿನ ಸಾಂಸ್ಕೃತಿಕ ಹೆಗ್ಗುರುತುಗಳು ಕಂಡು ಬರುವುದರಿಂದ ಆ ಕಾಲಕ್ಕೆ ಮಹತ್ವ ಕೊಡಲಾಗಿದೆ. ಇಲ್ಲಿ ಸಾಮಾನ್ಯ ವ್ಯಕ್ತಿ ವೀರನಾಗುವ ಬಗೆ, ಸಾಧನೆ, ಸಂಸ್ಕೃತಿಯ ಲಕ್ಷಣಗಳ ಮೂಲಕ ಇತರೆ ಸಮಕಾಲೀನ ಸಂದರ್ಭ, ಲಕ್ಷಣಗಳನ್ನು ಗಮನಿಸಿ ಕಾಲಮಾನದ ಮೂಲಕ ಪರಂಪರೆಯನ್ನು ಗುರುತಿಸಬೇಕಾಗಿದೆ.

ಚರಿತ್ರೆಯಲ್ಲಿ ಸ್ಥಾನ ಸಿಗದವರು, ಜನಪದರ ಬಾಯಲ್ಲುಳಿದ ಬೇಡ ವೀರರನ್ನು ಅಸಾಧಾರಣ ಪಟ್ಟಿಕಟ್ಟಿ ಉದಾತ್ತೀಕರಿಸಿದ್ದಾರೆ. ಇವರಿಗೆ ಸ್ಥಾನ ದೊರಕಿಸಿ ಕಾಲಮಾನ ನಿರ್ಣಯಿಸುವುದಲ್ಲದೆ, ಅವರ ವಿಚಾರಧಾರೆಯನ್ನು, ನೈತಿಕ ಮೌಲ್ಯಗಳನ್ನು ಇಂದಿನ ಸಮಾಜಕ್ಕೆ ತಿಳಿಸುವ ಪ್ರಸ್ತುತತೆಯಿದೆ. ಈ ಬಗ್ಗೆ ಅಧಿಕೃತ ಯಾವ ದಾಖಲೆಗಳು ಇವರ ಬಗೆಗೆ ಬೆಳಕು ಚೆಲ್ಲುತ್ತಿಲ್ಲ. ಮಹಿಳೆಯರ ಸಂದರ್ಭಗಳನ್ನು ಇಲ್ಲಿ ಸೂಕ್ಷ್ಮವಾಗಿ ಅವಲೋಕಿಸಿದೆ. ಬುಡಕಟ್ಟು ವೀರ, ನಾಯಕ, ಅವನ ತಂದೆ – ತಾಯಿ, ಸಹಸಂಬಂಧಿಗಳು ಬಳಸುವ ಪರಿಕರಗಳು, ಪ್ರಾಣಿ – ಪಕ್ಷಿಗಳ ಬಗೆಗಿನ ಆ ಕಾಲದ ನಂಬಿಕೆಗಳು ಅನಾವರಣಗೊಳ್ಳುವುದು ಅರ್ಥಪೂರ್ಣ. ಜನರ ಮೌಖಿಕ ಸಾಹಿತ್ಯವನ್ನು ಚರಿತ್ರೆ ರಚನೆಗೆ ತರುವುದು ತೀರಾ ಕಷ್ಟದ ಕೆಲಸ. ಪ್ರಾಥಮಿಕ ಆಕರಗಳು ಅಲ್ಪವಾಗಿ ದೊರೆತಿರುವುದರಿಂದ ಹೆಚ್ಚಾಗಿ ಜನಪದ ಸಾಹಿತ್ಯವನ್ನೇ ಆಶ್ರಯಿಸಬೇಕಾಗುತ್ತದೆ. ಆದರೂ ಚರಿತ್ರೆಗೆ ಇತರ ಅಂತರಶಿಸ್ತುಗಳನ್ನೊಳಪಡಿಸಿಕೊಂಡು ಬುಡಕಟ್ಟು ವೀರರ ಸಾಂಸ್ಕೃತಿಕ ಚರಿತ್ರೆಯನ್ನು ವಿಶ್ಲೇಷಿಸಲಾಗುವುದು.

ಸಮಕಾಲೀನ ದಾಖಲೆಗಳು ಮರೆಯಾಗಿದ್ದು, ಅವುಗಳಿಂದ ಹುಟ್ಟಿಕೊಂಡ ಭಿನ್ನಪಾಠಗಳನ್ನು, ಪುನಃ ಬರೆದ ಹಸ್ತಪ್ರತಿಗಳನ್ನು ಇಲ್ಲಿ ಬಳಸಿಕೊಳ್ಳಲಾಗಿದೆ. ಇವುಗಳಲ್ಲಿ ಪುರಾಣ, ಪ್ರತೀತಿಗಳೇ ಹೆಚ್ಚು. ಆಂತರಿಕ, ಬಾಹ್ಯ ವಿಮರ್ಶೆ ಮೂಲಕ ಶೋಧಿಸಿ ತಕ್ಕಮಟ್ಟಿಗೆ ವಿವರಿಸಬೇಕಾಗಿದೆ. ಮೊದಲೇ ಹೇಳಿದಂತೆ ಬುಡಕಟ್ಟು ವೀರರು ಜನಪದದ ಬಾಯಲ್ಲಿ ಉಳಿದಿರುವುದರಿಂದ ಇದು ಆ ಜನಸಾಮಾನ್ಯರ ಇತಿಹಾಸವಾಗಬಹುದು. ಹಾಗಾಗಿ ಇದರಲ್ಲಿನ ಇತಿಹಾಸದ ಸಂಗತಿಗಳನ್ನು ಜನಪದ ರಂಗಭೂಮಿಯಲ್ಲಿ ನಾಟಕವಾಡಿಸಿದಂತೆ ಆಗಿದೆ. ನಿಖರವಾದ ಇತಿಹಾಸ ಯಾವುದು ಎಂಬ ಸಂಶಯ ಬರುವುದು ಸ್ಪಷ್ಟ. ಏಕೆಂದರೆ ಜನರ ಕಥೆ, ಕಾವ್ಯಗಳನ್ನು ಕಟ್ಟಿ ನಿರೂಪಿಸುವ ವಿಧಾನ ಎಷ್ಟರಮಟ್ಟಿಗೆ ಚರಿತ್ರೆಯಾಗಬಹುದು. ಇದರಲ್ಲಿ ಸತ್ಯಾಂಶಗಳನ್ನು ಹುಡುಕುವ ಗೋಜಾದರೂ ಏಕೆ? ಇದು ಒಂದು ಕಾಲಘಟ್ಟದ ಸಾಂಸ್ಕೃತಿಕ ಬದುಕು ಎಂದರೆ ಸಮಂಜಸವಾದೀತು.

ಇಲ್ಲಿನ ಬುಡಕಟ್ಟು ವೀರರು ಒಂದೇ ಸಮುದಾಯಕ್ಕೆ ಸೀಮಿತವಾಗಿದ್ದರಿಂದ ಸಮಗ್ರ ಚಿತ್ರಣ ಕಾಣುವುದಿಲ್ಲ. ಆದರೂ ಜಾತಿ ಸಂಘಟನೆ, ಮತಾಂತರ ಪ್ರವೃತ್ತಿಗಳನ್ನು ಅಲ್ಲಗಳೆಯುವಂತಿಲ್ಲ. ಈ ಎಲ್ಲಾ ಕಾರಣಗಳಿಂದ ಪ್ರಶ್ನಾವಳಿ ತಯಾರಿಸಿ ಸಹಸ್ರಾರು ಮಂದಿಯನ್ನು

ಸಂದರ್ಶಿಸಿ ಮಾಹಿತಿ ಸಂಗ್ರಹಿಸಲಾಗಿದೆ. ಇದರೊಂದಿಗೆ ಸೋಬಾನೆ ಜನಪದಗೀತೆ, ಲಾವಣಿ ಹೀಗೆ ಉಪಯುಕ್ತ ಮಾಹಿತಿಯನ್ನು ಬಳಸಿಕೊಳ್ಳಲಾಗಿದೆ.

'ಚಿತ್ರದುರ್ಗ ಜಿಲ್ಲೆಯ ಬುಡಕಟ್ಟು ವೀರರು' ಅಧ್ಯಯನದ ಸ್ವರೂಪ ಪ್ರಾದೇಶಿಕ ಮತ್ತು ಮೌಖಿಕ ಚರಿತ್ರೆಯ ಅಧ್ಯಯನ ವಿಧಾನವಾಗಿದೆ. ಕಾಲಾನುಕ್ರಮವಾಗಿ ವಿಶ್ಲೇಷಿಸುವಾಗ ಮೌಖಿಕ ಆಕರಗಳನ್ನು ಬಳಸಿಕೊಳ್ಳುವುದೇ ಹೆಚ್ಚು. ಇವೆ ಜನಪದ ಕಥೆಗಳಂತೆ ಕಂಡು ಬಂದರೂ ಸಾಂಸ್ಕೃತಿಕ ಸಂಕಥನಗಳಾಗಿರುವಂತಿವೆ. ಹೀಗಾಗಿ ಶಾಸನ, ವೀರಗಲ್ಲು, ದೇವಾಲಯ ಮೊದಲಾದವುಗಳಲ್ಲದೆ, ಅಪ್ರಕಟಿತ ಹಸ್ತಪ್ರತಿ, ಪತ್ರಗಳನ್ನು ಇಲ್ಲಿ ಗಮನಿಸಿದ್ದು, ಆಕರಗಳೆಂದು ಪರಿಗಣಿಸಲಾಗಿದೆ.

**೧.೧) ಚಿತ್ರದುರ್ಗ ಜಿಲ್ಲೆಯ ಭೌಗೋಳಿಕ ಪರಿಚಯ**

ಏಷ್ಯಾ ಖಂಡದಲ್ಲೇ ಅತಿ ಪ್ರಾಚೀನ ನಿವೇಶನ ಮತ್ತು ಚರಿತ್ರೆ ಹೊಂದಿದ ಜಿಲ್ಲೆ ಚಿತ್ರದುರ್ಗ. ಮಧ್ಯ ಕರ್ನಾಟಕದಲ್ಲಿರುವ ಚಿತ್ರದುರ್ಗ ಉತ್ತರ ಕರ್ನಾಟಕ ಮತ್ತು ದಕ್ಷಿಣ ಕರ್ನಾಟಕಕ್ಕೆ ರಾಯಭಾರಿಯಂತಿದೆ. ಆಂಗ್ಲರ ಕಾಲದಲ್ಲಿ ಚಿಟಲ್‌ಡ್ರೂಗ್ ಎಂದು ಹೆಸರಿತ್ತು. ಅದಕ್ಕೂ ಹಿಂದೆ ಸೀತಳ ಅಥವಾ ಚಿತ್ರಕಲ್ಲು ದುರ್ಗ, ಚಿತ್ತರಕಲ್ಲು, ಸಿದ್ಧರಕಲ್ಲು, ಚಿತ್ತಮಲೆಗುಡ್ಡ ಎಂದು ಕರೆಯುತ್ತಿದ್ದರು. ಮಧ್ಯಕಾಲದಲ್ಲಿ ಸೂಳ್ಗಲ್ಲು, ಸೂಳನಕಲ್ಲು, ಬೊಮ್ಮತ್ತನಕಲ್ಲು ಬೆಮ್ಮತ್ತನೂರು ಅಥವಾ ಬೆಮ್ಮತ್ತೂರು ಎಂದು ಕರೆಯುತ್ತಿದ್ದರ ಬಗ್ಗೆ ಉಲ್ಲೇಖಗಳಿವೆ.

ಈ ಜಿಲ್ಲೆಯ ಮೇರೆಗಳೆಂದರೆ ಉತ್ತರಕ್ಕೆ ಬಳ್ಳಾರಿ, ಪೂರ್ವಕ್ಕೆ ಅನಂತಪುರ (ಆಂಧ್ರಪ್ರದೇಶ) ಆಗ್ನೇಯ ದಿಕ್ಕಿಗೆ ತುಮಕೂರು, ಪಶ್ಚಿಮಕ್ಕೆ ದಾವಣಗೆರೆ, ವಾಯುವ್ಯ ಧಾರವಾಡ ಮತ್ತು ನೈಋತ್ಯಕ್ಕೆ ಚಿಕ್ಕಮಗಳೂರು ಜಿಲ್ಲೆಗಳಿಂದ ಸುತ್ತುವರೆಯಲ್ಪಟ್ಟಿದೆ. ಮೊದಲು ಚಿತ್ರದುರ್ಗ ಜಿಲ್ಲೆಯಲ್ಲಿ ೯ ತಾಲ್ಲೂಕುಗಳಿದ್ದವು. ದಾವಣಗೆರೆ ನೂತನ ಜಿಲ್ಲೆಯಾದ ತರುವಾಯ ದಾವಣಗೆರೆ, ಹರಿಹರ ಮತ್ತು ಜಗಳೂರು ತಾಲೂಕುಗಳ ಈ ಜಿಲ್ಲೆಗೆ ಸೇರ್ಪಡೆಯಾದವು. ಉಳಿದಂತೆ ಚಳ್ಳಕೆರೆ, ಹೊಳಲ್ಕೆರೆ, ಹೊಸದುರ್ಗ, ಹಿರಿಯೂರು ಚಿತ್ರದುರ್ಗ ಮತ್ತು ಮೊಳಕಾಲ್ಮೂರುಗಳು ಮಾತ್ರ ಚಿತ್ರದುರ್ಗ ಜಿಲ್ಲೆಯಲ್ಲಿವೆ.

ಚಿತ್ರದುರ್ಗ ಜಿಲ್ಲೆ ೧೩೩೪ ಮತ್ತು ೧೫೨೦ ರ ಅಕ್ಷಾಂಶ ಮತ್ತು ೭೫೩೭ ಮತ್ತು ೭೭೦೧ ರೇಖಾಂಶದಲ್ಲಿದೆ. ಜಿಲ್ಲೆಯ ವಿಸ್ತೀರ್ಣ ೧೦.೮೨೫ ಚ.ಕಿ.ಮೀ ಇದ್ದು, ಉತ್ತರ ದಕ್ಷಿಣವಾಗಿ ೮೮ ಮೈಲಿ, ಪೂರ್ವ – ಪಶ್ಚಿಮವಾಗಿ ಸುಮಾರು ೧೦೦ ಮೈಲಿದೆ. ವಿಸ್ತಾರದಲ್ಲಿ ರಾಜ್ಯದ ಜಿಲ್ಲೆಗಳಲ್ಲಿ ೭ನೇ ಸ್ಥಾನ ಪಡೆದಿತ್ತು. ಈಗ ಬದಲಾಗಿದೆ. ಈ ಜಿಲ್ಲೆ ದಖನ್ ಪ್ರಸ್ಥಭೂಮಿ ಭಾಗವಾಗಿದ್ದು, ರಾಜ್ಯದಲ್ಲಿ ಕಡಿಮೆ ಮಳೆ ಬೀಳುವಲ್ಲಿ ಇದು ಎರಡನೇ ಸ್ಥಾನದಲ್ಲಿದೆ. ವಾರ್ಷಿಕ ಮಳೆ ೬೫೫ ಮಿ.ಮೀ. ಇದೆ. ಆಗಾಗ ಜಿಲ್ಲೆ ಅನಾವೃಷ್ಟಿಗೆ ಒಳಗಾಗಿ ಬರಗಾಲವನ್ನು ಅನುಭವಿಸುತ್ತದೆ.

ಚಿತ್ರದುರ್ಗ ಪ್ರದೇಶವೆಂದರೆ ಬೆಟ್ಟ – ಗುಡ್ಡ, ಕೋಟೆಗಳು ಗೋಚರಿಸುವುದು ಸಹಜ. ಸ್ಥಳೀಯವಾಗಿ ಅವುಗಳಿಗೆ ನಾನಾ ಹೆಸರುಗಳಿಂದ ಕರೆದುಕೊಂಡಿದ್ದಾರೆ. ಅವುಗಳಲ್ಲಿ ಮೊಳಕಾಲ್ಮೂರು ತಾಲೂಕಿನ ಜಂಟಿಂಗರಾಮೇಶ್ವರ ಬೆಟ್ಟ (೩೪೬೯ ಅಡಿ), ಬ್ರಹ್ಮಗಿರಿ (೨೩೧೭) ನುಂಕಪ್ಪನ ಗುಡ್ಡ (೩೦೨೨), ಜೋಗಪ್ಪನ ಗುಡ್ಡ (೨೯೩೭), ಹೊಳಲ್ಕೆರೆ ತಾಲೂಕಿನ ದೊಡ್ಡಹಟ್ಟಿ, ರಂಗಪ್ಪನ ಗುಡ್ಡ, ವಡ್ಡರಗುಡ್ಡ, ಹೊಸದುರ್ಗ ತಾಲೂಕಿನ ನೀರಗುಡ್ಡ, ಕೊಟಕಲ್ ಗುಡ್ಡ, ತಿರುಮಲ ದೇವರಗುಡ್ಡ, ಹಾಲುರಾಮೇಶ್ವರ, ಹಿರಿಯೂರು ತಾಲೂಕಿನ ಉತ್ತರ ಸರಣಿ ಬೆಟ್ಟ, ಹಿಂದಸಕಟ್ಟೆ ಮತ್ತು ಚಿತ್ರದುರ್ಗ ತಾಲೂಕಿನ ಜೋಗಿಮಟ್ಟಿ (೩೮೦೩), ಧವಳಪ್ಪನಗುಡ್ಡ (೩೨೮೫), ಭೀರನಕಲ್ಲುಗುಡ್ಡ (೩೮೬೩), ಈಚಲುಗುಡ್ಡ (೩೮೦೪), ಓಬಳದೇವರಗುಡ್ಡ ಮುಂತಾದವುಗಳು ಕಂಡು ಬರುತ್ತದೆ.

ಜಲ ಸಂಪತ್ತಿನಲ್ಲಿ ಈ ಜಿಲ್ಲೆ ಮಹತ್ತರವಾದ ಸ್ಥಾನವೇನು ಪಡೆದಿಲ್ಲ. ವೇದಾವತಿ, ಚಿನ್ನಹಗರಿ (ಜನಿಗೆಹಳ್ಳ), ಸುವರ್ಣಮುಖಿ ಮುಂತಾದ ನದಿಗಳು ಹರಿದು ನೀರಾವರಿ ಸೌಲಭ್ಯವನ್ನು ಅಲ್ಪವಾಗಿ ಕಲ್ಪಿಸಿವೆ. ಈ ಜಿಲ್ಲೆಯಲ್ಲಿ ವೇದಾವತಿ ನದಿ ೨೦೮ ಕಿ.ಮೀ. ಜನಗಿಹಳ್ಳ

(೧೨ಲಕಿ.ಮೀ) ಸುವರ್ಣಮುಖಿ ಹಳ್ಳ ೧೧ ಕಿ,.ಮೀ ಹರಿದು ೨೦೨೦ ಎಕರೆಗೆ ನೀರೊದಗಿಸುತ್ತದೆ. ಭದ್ರಾ ಜಲಾಶಯದಿಂದ ೪೭,೪೬೦ ಎಕರೆ, ವಾಣಿವಿಲಾಸದಿಂದ ೧೦,೦೦೦ ಹೆಕ್ಟೇರ್, ಗಾಯತ್ರಿ ಜಲಾಯಶಯದಿಂದ ೬೨೮ ಹೆಕ್ಟೇರು ರಂಗಯ್ಯನದುರ್ಗ ಜಲಾಶಯದಿಂದ ಸು.೧೦೦೦ ಎಕರೆಗೆ ನೀರಾವರಿ ಸೌಲಭ್ಯವಾಗಿದೆ. ಚಂದ್ರವಳ್ಳಿ, ರಾಣಿಕೆರೆ, ನಾಯಕನಹಟ್ಟಿ, ಭರಮಸಾಗರ, ಗೌರಸಮುದ್ರ, ನಾಗಸಮುದ್ರ, ಗೋನೂರು, ಪರಶುರಾಂಪುರ, ಬುಕ್ಕಂಬುದಿ ಮುಂತಾದ ಪ್ರಾಚೀನ ಕೆರೆಗಳಿಂದಲೂ ನೀರಾವರಿಯಾಗುತ್ತದೆ.

ಈ ಜಿಲ್ಲೆಯ ಪ್ರಮುಖ ನದಿ ವೇದಾವತಿ. ವೇದ ಮತ್ತು ಅವತಿ ಎಂಬ ಎರಡು ಹೊಳೆಗಳು ಸೇರಿ ವೇದಾವತಿ ನದಿಯಾಗಿ ಹರಿಯುತ್ತದೆ. ಹೊಸದುರ್ಗದ ಮೂಲಕ ಮತ್ತೋಉ ಸಮೀಪದಿಂದ ಹರಿದುಬಂದು ಬ್ರಹ್ಮಗಿರಿದುರ್ಗದಿಂದ ವಾಣಿವಿಲಾಸ ಸಾಗರ ಸೇರುತ್ತದೆ. ನಂತರ ಹಿರಿಯೂರು ತಾಲೂಕಿನಿಂದ ಚಳ್ಳಕೆರೆ ತಾಲೂಕನ್ನು ಪ್ರವೇಶಿಸಿ ಘಟಪರ್ತಿಯಿಂದ ಆಂಧ್ರಕ್ಕೆ ಹರಿದು, ತರುವಾಯ ಚಿನ್ನಹಗಿರಿ ನದಿಯನ್ನು ಕೂಡುವುದು. ಜನ್ನಿಗೆಹಳ್ಳ ಅಥವಾ ಚಿನ್ನಹಗರಿ ನದಿ ಈ ಭಾಗದ ಜನರಿಗೆ ಪವಿತ್ರವಾದುದು. ಈ ನದಿ ಆಧ್ಯಾತ್ಮಿಕವಾಗಿಯೂ, ಸಾಂಸ್ಕೃತಿಕವಾಗಿಯೂ ಬೇಡರಿಗೆ ಆವಾಸ ನೆಲೆಯಾಗಿದೆ. ಗಂಗೆ ಪೂಜೆ, ಹಬ್ಬ, ಜಾತ್ರೆಗಳಲ್ಲದೆ, ವಾಸಿಸುವ ಮನೆಗೆ ಆಪು ಕೊಯ್ಯಲು, ಮೀನು ಹಿಡಿಯಲು, ಕುರಿ ಮೇಕೆಗಳನ್ನ ಮೇಯಿಸಲು ಮತ್ತು ಮಡುವಿನಲ್ಲಿ ಸ್ನಾನ ಮಾಡಿಸಲು ನೆರವಾಗಿದೆ. ಈ ನದಿ ಚಿತ್ರದುರ್ಗ ಸಮೀಪದ ಬೆಟ್ಟಗಳಲ್ಲಿ ಹುಟ್ಟಿ ಹೊಳಲ್ಕೆರೆ ಚಿತ್ರದುರ್ಗ, ಜಗಳೂರು ತಾಲ್ಲೂಕುಗಳ ಮೂಲಕ ಕೂಡ್ಲಿಗಿ ತಾಲೂಕಿನಲ್ಲಿ ಹರಿದು ಮುಂದೆ ರಾಯದುರ್ಗ ತಾಲೂಕನ್ನು ಪ್ರವೇಶಿಸಿ ತುಂಗಾಭದ್ರಾ ನದಿಯನ್ನು ಸೇರುತ್ತದೆ. ಇದಕ್ಕೆ ಮೊಳಕಾಲ್ಮೂರು ಸಮೀಪ ರಂಗಯ್ಯದುರ್ಗ ಜಲಾಶಯವನ್ನು ನಿರ್ಮಿಸಿದ್ದಾರೆ. ಭಟ್ಟರಹಳ್ಳಿ, ದೇವಸಮುದ್ರ ಕೆರೆಗಳ ನೀರು ಬಂದು ಆ ನದಿಯನ್ನು ಸೇರುತ್ತದೆ.

ಸ್ವರ್ಣಮುಖಿ ಇಲ್ಲಿನ ಪ್ರಮುಖ ಹೊಳೆ. ಇದರ ಮೂಲ ತುಮಕೂರು ಜಿಲ್ಲೆ. ಚಿತ್ರದುರ್ಗ ಜಿಲ್ಲೆಯಲ್ಲಿ ಸು.೭ ಕಿ.ಮೀ. ಹರಿಯುತ್ತದೆ. ಹಿರಿಯೂರು ತಾಲೂಕು ಇಕ್ಕನೂರಿನ ಬಳಿ ಈ ಹೊಳೆ ನದಿಯನ್ನು ಸೇರುತ್ತದೆ. ಚಳ್ಳಕೆರೆ ತಾಲೂಕಿನ ರಾಣಿಕೆರೆಗೆ ಪೀಡರ್‌ನಾಲೆ, ಹಿರಿಯೂರು ಧರ್ಮಪುರ ಪೀಡರ್ ನಾಲೆಗಳಿಂದ ನೀರಾವರಿ ಕೃಷಿ ನಡೆಯುತ್ತದೆ. ಇನ್ನು ನೀರಾವತಿ ಯೋಜನೆಗಳನ್ನು ಕೈಗೊಳ್ಳುವುದು ಸೂಕ್ತ.

ಈ ಜಿಲ್ಲೆಯ ೩೭೦ ಕಿ.ಚ.ಮೈಲಿಗಳ ವ್ಯಾಪ್ತಿಯಲ್ಲಿ ೩೦ ರಕ್ಷಿತ ಅರಣ್ಯ ಪ್ರದೇಶಗಳಿವೆ. ಹೆಚ್ಚು ಭಾಗ ಕಣಶಿಲೆಯ ಬೋಳು ಬೆಟ್ಟಗಳಿಂದ ಕೂಡಿದ್ದು, ಅಲ್ಲಲ್ಲೇ ಕಣಿವೆಗಳಿಂದ ಕೂಡಿದೆ. ಬೆಟ್ಟದ ಸಾಲು ದಕ್ಷಿಣ ಆಗ್ನೇಯದಿಂದ ಉತ್ತರ ವಾಯುವ್ಯದ ಕಡೆಗೆ ಸಮಾನಂತರದಲ್ಲಿ ಸಾಗಿವೆ. ಪೂರ್ವದ ಸಾಲು ಹಿರಿಯೂರಿನ ಪಶ್ಚಿಮದಿಂದ ಕಂಡುಬರುತ್ತದೆ.

ಅರಣ್ಯ ಪ್ರದೇಶ ಜಿಲ್ಲೆಯಲ್ಲಿ ವ್ಯಾಪಕವಾಗಿದೆ. ಮುತ್ತಿಗಾರಹಳ್ಳಿ ಕಾಯ್ದಿಟ್ಟ ಅರಣ್ಯದಲ್ಲಿ ಸು.೧೨ ಮೈಲು ಉದ್ದ ರಸ್ತೆ ಹಾದು ಹೋಗುತ್ತದೆ. ಇಂಥಾ ಬೃಹತ್ ಅರಣ್ಯಗಳು ಕಡಿಮೆಯಿದ್ದು, ಈ ಪ್ರದೇಶದಲ್ಲಿ ಇದು ಸುಂದರವನ ತೋಪು, ನದಿ, ಹಳ್ಳ – ಕೊಳ್ಳಗಳಿಂದ ಕೂಡಿದೆ. ತೋಟ, ಸಸ್ಯ ಕ್ಷೇತ್ರದಲ್ಲಿ ಪರಿಸರ ಸಂಬಂಧಿತ ಕೆಲಸಗಳನ್ನು ಮಾಡುತ್ತಾರೆ. ಫಲವತ್ತಾದ ಮಣ್ಣಿಲ್ಲದ್ದರಿಂದ ನಿರೀಕ್ಷಿತ ಬೆಳೆ ಪಡೆಯುವುದು ಕಷ್ಟ. ಇಲ್ಲಿನ ಸಸ್ಯ ಕ್ಷೇತ್ರಕ್ಕೆ 'ಇಂದಿರಾ ಪ್ರಿಯದರ್ಶಿನಿ' ಪ್ರಶಸ್ತಿ ಲಭಿಸಿದೆ.

**೧.೨) ಚಿತ್ರದುರ್ಗ ಜಿಲ್ಲೆಯ ಚಾರಿತ್ರಿಕ ಹಿನ್ನೆಲೆ**

ಚಿತ್ರದುರ್ಗ ಎಂದೊಡನೆ ಸಾಕು ಕೋಟೆ – ಕೊತ್ತಲಗಳ ಪ್ರದೇಶ ಕಣ್ಣಿಗೆ ಗೋಚರವಾಗುತ್ತದೆ. ಕರ್ನಾಟಕದ ಮೂಲೆ ಮೂಲೆಗೂ ಜಿಲ್ಲೆಯ ಚರಿತ್ರೆ ಮನೆಮಾತಾಗಿದೆ ಎಂದರೆ ತಪ್ಪಲ್ಲ. ಅಸಾಧಾರಣವಾದ ಸಾಧನೆಗಳ ಪ್ರತೀಕ ಹುಟ್ಟಿಕೊಂಡ ಕಥೆಗಳು ಅಪಾರ ಕುತೂಹಳ ಕೆರಳಿಸುವ ಕೋಟೆ, ದೇವಾಲಯ, ಮುದ ನೀಡುವ ಸರಳ ಭಾಷೆ ಇತ್ಯಾದಿ ಲಕ್ಷಣಗಳಿಂದ ಈ ಜಿಲ್ಲೆ ನಾಡಿನ ಉದ್ದಗಲಕ್ಕೂ ಚಿರಪರಿಚಿತ.

ಚಂದ್ರವಳ್ಳಿಯ ಭೂಶೋಧನೆಗಿಂತ ಮೊದಲು (೧೯೨೯) ಚಿತ್ರದುರ್ಗದ ಇತಿಹಾಸವನ್ನು ಪುರಾಣ, ದಂತಕಥೆಗಳ ಮೂಲಕ ದ್ವಾಪರಯುಗದಿಂದ ಹೇಳುತ್ತಾ ಬರುತ್ತಿದ್ದರು. ಸ್ಥಳೀಯರು ಭಾರತ ದೇಶದೊಂದಿಗೆ ಸಂಬಂಧ ಕಲ್ಪಿಸದೇ ಮಹಾಭಾರತದ ಮೂಲಕ ಗುರುತಿಸುತ್ತಾರೆ. ಚಿತ್ರದುರ್ಗ ಬೆಟ್ಟದಲ್ಲಿ, ಹಿಡಿಂಬಾಸುರ ವಾಸಿಸುತ್ತಿದ್ದನೆಂಬ ಪ್ರತೀತಿಯಿದೆ. ಪಾಂಡವರು ವನವಾಸ ಬಂದಾಗ ಕುಂತಿಯ ರಾಜಕುಮಾರನಾದ ಭೀಮನಿಗೆ ಮತ್ತು ಹಿಡಂಬಾಗೆ ಯುದ್ಧ ನಡೆದುದು ಇಲ್ಲಿಯೇ. ಇಂದಿಗೂ ಇವರ ಸಂಕೇತಕ್ಕೆ ಹಿಡಂಬೇಶ್ವರ ಮತ್ತು ಸಿದ್ದೇಶ್ವರ ದೇವಾಲಯಗಳೇ ಸಾಕ್ಷಿ. ಹಿಡಂಬೇಶ್ವರ, ಧರ್ಮೇಶ್ವರ, ಭೀಮೇಶ್ವರ, ಫಾಲ್ಗುಣೇಶ್ವರ, ನಕುಲೇಶ್ವರ ಮತ್ತು ಸಹದೇವೇಶ್ವರ ದೇವಾಲಯಗಳನ್ನು ನಿರ್ಮಿಸಲಾಯಿತು. ಮಹಾಭಾರತದ ಕಥೆ ಪ್ರಕಾರ ಭೀಮ ಹಿಡಂಬಿ ಎನ್ನುವ ರಾಕ್ಷಸಿಯನ್ನು ಮದುವೆಯಾಗುತ್ತಾನೆ. ಇವಳು ಹಿಡಿಂಬಾ ರಾಕ್ಷಸನ ತಂಗಿ. ಇವರು ವಾಸಿಸಿದ್ದರೆಂದು ಹೇಳಲಾಗುವ ಕುಂತಲನಗರ ಅಥವಾ ಕುಪ್ಪಟುರು ಎನ್ನುವ ರಾಜಧಾನಿ ಶಿವಮೊಗ್ಗದ ಉತ್ತರಕ್ಕುಂಟು.

ಚಿತ್ರದುರ್ಗ ಜಿಲ್ಲೆಯಲ್ಲಿ 'ಅಸುರ' ಎಂಬ ಸ್ಥಳದಿಂದ ಹರಿಹರ, ದಾವಣಗೆರೆ ನಿರ್ಮಾಣವಾಗಿದೆ ಎನ್ನುತ್ತಾರೆ. ಒಂದು ಮೂಲಕ ಕಥೆಯ ಪ್ರಕಾರ ದೈತ್ಯ ಎನ್ನುವ ಗುಹಸುರ, ದೇವರನ್ನು ಒಲಿಸಿಕೊಳ್ಳುವಲ್ಲಿ ಹರಿ ಮತ್ತು ಹರರ ಪಾತ್ರ ದೊಡ್ಡದು. ಜನಮೇಜಯನೆಂದು ಖ್ಯಾತನಾದ ಅರ್ಜುನನ ಮೊಮ್ಮಗ ಚಕ್ರಾಧಿಪತ್ಯ ಸ್ಥಾಪಿಸಿ ಕಿಷ್ಕಿಂಧೆಯನ್ನು ಆಳಿದವನೆಂದು ಹೇಳಲಾಗುತ್ತದೆ.

ರಾಮಾಯಣದ ಸಂಬಂಧವನ್ನು ಸಾರುವ ಜಂಟಿಂಗರಾಮೇಶ್ವರ, ಬ್ರಹ್ಮಗಿರಿ ಪ್ರದೇಶಗಳು ಈ ಜಿಲ್ಲೆಯ ಮೊಳಕಾಲ್ಮೂರು ತಾಲೂಕಿನಲ್ಲಿವೆ. 'ಜಟಾಯು' ಎಂಬ ಪಕ್ಷಿ ಸೀತೆಯನ್ನು ಕದ್ದು ಒಯ್ಯುತ್ತಿದ್ದ ರಾವಣನನ್ನು ತಡೆದಾಗ ಅವನಿಂದ ಸಂಹಾರಕ್ಕೊಳಗಾಯಿತು. ಪುರಾಣದ ಕಾಲದಲ್ಲಿ, ಈ ಪ್ರದೇಶವನ್ನು 'ಅಸುರರನಾಡು' ಎನ್ನುತ್ತಿದ್ದರು. ಈಗ ಅಸುರರು, ರಾಕ್ಷಸರು, ದೈತ್ಯರು ಎಂದು ಸಾಂಪ್ರದಾಯಿಕವಾಗಿ ವ್ಯಾಖ್ಯಾನಿಸುತ್ತಾರೆ. ಬುಡಕಟ್ಟು ಜನರು ಹೆಚ್ಚಿಸುವುದರಿಂದ ಸಹಜವಾಗಿ ಬ್ರಾಹ್ಮಣ ಧರ್ಮವನ್ನು ಇವರು ವಿರೋಧಿಸಿದ್ದರು. ಇಂಥಾ ವೈರುಧ್ಯಗಳು ಚರಿತ್ರೆಯ ಎಲ್ಲಾ ಕಾಲಘಟ್ಟಗಳಲ್ಲೂ ಕಾಣಬರುತ್ತವೆ.

ಈ ಜಿಲ್ಲೆಯಲ್ಲಿ ಶಿಲಾಯುಗ, ಆದಿಶಿಲಾಯುಗ, ಮಧ್ಯಶಿಲಾಯುಗ ಮತ್ತು ನವಶಿಲಾಯುಗ, ಬೃಹತ್ ಶಿಲಾಸಂಸ್ಕೃತಿ ಮುಂತಾದ ನೆಲೆಗಳನ್ನು ಶೋಧನೆ ಮಾಡಿದ್ದಾರೆ. ಇಲ್ಲಿನ ನಾಗರಿಕತೆಯನ್ನು ಸಿಂಧೂ, ಕ್ರೇಟ್ ಮತ್ತು ಸುಮರ್‌ಗೆ ಹೋಲಿಸಿದ್ದಾರೆ. ಕ್ರಿ.ಪೂ. ೩ರಲ್ಲಿರುವಂತೆ ಸ್ಥಳೀಯರು 'ರೊಪ್ಪ ಸಂಸ್ಕೃತಿ'ಯನ್ನು ಹೊಂದಿದ್ದರು. ಇವರ ಕಾಲಮಾನ ಕ್ರಿ.ಪೂ. ೮೦೦೦ ದಿಂದ ೬೦೦೦ ಎನ್ನಲಾಗಿದೆ.

ಐತಿಹಾಸಿಕವಾಗಿ ಇಲ್ಲಿ ಗಿರಿಕಂದರಗಳಿರುವುದರಿಂದ ಬೇಟೆಗಾರಿಕೆ ಸಮುದಾಯಗಳಿದ್ದವು. ಕ್ರಿ.ಪೂ. ೪ನೇ ಶತಮಾನದಲ್ಲಿ ನಂದರು ಇಲ್ಲಿ ಆಳ್ವಿಕೆ ನಡೆಸಿದ್ದಾರೆ. ಪುರಾಣಗಳ ಪ್ರಕಾರ ಕಲಿಂಗವನ್ನು ರಾಜಧಾನಿವಾಗಿ ಮಾಡಿಕೊಂಡು ಇಡೀ ಭಾರತವನ್ನು ಆಳುವುದರ ಬಗ್ಗೆ ಕಾಲವೇಲನ ಹಥಿಗುಂಪುಶಾಸನದಲ್ಲಿದೆ. ಕ್ರಿ.ಪೂ. ೭ನೇ ಶತಮಾನದಲ್ಲಿ ನಂದರು, ಕುಂತಲ ಪ್ರದೇಶವನ್ನು ಮೈಸೂರು ಪ್ರದೇಶದ ೧/೩ ಭಾಗವನ್ನು ಆಳುತ್ತಿದ್ದರು. ಉತ್ತರ ಭಾರತ, ಸಿಲೋನ್, ಕುಂತಲ ಪ್ರದೇಶಗಳನ್ನು ಆಳುದವರು ನಂದರು, ಕದಂಬ ರಾಜವಂಶಕ್ಕೆ ಸಂಬಂಧಿಸಿದವರು.

ಮೌರ್ಯರು ಇಲ್ಲಿ ಪ್ರಬಲವಾಗಿದ್ದುದರ ಬಗ್ಗೆ, ರಾಜ್ಯಾಳ್ವಿಕೆ, ಪ್ರಜಾಸೇವೆ ಇತ್ಯಾದಿ ವಿವರಗಳನ್ನು ಶಾಸನಗಳು ತಿಳಿಸುತ್ತವೆ. ಸಾಂಪ್ರದಾಯಿಕವಾಗಿ ನಂದ ಸಾಮ್ರಾಜ್ಯ ಅಶೋಕನ ಕಾಲದಲ್ಲಿ ಮೌರ್ಯ ಸಾಮ್ರಾಜ್ಯದೆದುರು ನಿತ್ರಾಣರಾಗಿದ್ದ ಪರಿಸ್ಥಿತಿ ಉಂಟಾಗುತ್ತದೆ. ಟಿಬೆಟ್‌ನ ಇತಿಹಾಸಕಾರ ತಾರನಾಥನು ಅಶೋಕನ ತಂದೆ ಬಿಂದುಸಾರನ ಅವಧಿಯಲ್ಲಿ ಇಲ್ಲಿಗೆ ಬಂದಿದ್ದನಂತೆ.

ಅಶೋಕನ ಶಾಸನಗಳನ್ನು ೧೮೯೨ರಲ್ಲಿ ಬಿ.ಎಲ್. ರೈಸ್ ಅವರು ಆಗಿನ ಮೈಸೂರು ಪ್ರಾಂತ್ಯದ ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರು ತಾಲೂಕಿನಲ್ಲಿ ಮೂರು ಶಾಸನಗಳನ್ನು ಶೋಧಿಸಿದ್ದಾರೆ. ಸಿಲೋನಿನ ಮಹಾವಂಶದ ಪ್ರಕಾರ ಅಶೋಕ ಚಕ್ರವರ್ತಿ ಮೈಸೂರು

ಪ್ರದೇಶದೊಂದಿಗೆ ಸಂಬಂಧಹೊಂದಿದ್ದ ಎನ್ನುತ್ತವೆ. ಅಶೋಕನ ಶಿಲಾಶಾಸನ ಚಿನ್ನಹಗರಿ ನದಿ ದಂಡೆಯ ಮೇಲಿರುವ ಸಿದ್ದಾಪುರದ ಬಳಿಯಿದೆ. ಇದರ ಸಾರ ಸಂಗತಿಯೆಂದರೆ: ದೇವನಾಮ್‌ಪ್ರಿಯರು ರಾಜನಿಗೆ (ಆಯಪುತ), ಅಧಿಕಾರಿಗಳಿಗೆ (ಮಹಾಮಾತ್ರರು) ಸುವರ್ಣಗಿರಿ ಮುಖ್ಯ ಕೇಂದ್ರದಿಂದ ಹೇಳಿದ ವಿಚಾರಗಳಿವೆ. ರಾಜನೀತಿಯಲ್ಲಿ, ಅಹಿಂಸೆಯನ್ನು ಅಳವಡಿಸಿದ ಸಂಗತಿ ಅಶೋಕನ ಕೀರ್ತಿಗೆ ಸಾಕ್ಷಿ.

ಮೌರ್ಯರ ನಂತರ ಕದಂಬರು ಈ ಪ್ರದೇಶದಲ್ಲಿ ಆಳ್ವಿಕೆ ನಡೆಸುತ್ತಾರೆ. ಚಂದ್ರವಳ್ಳಿಕೆರೆ, ಶಾಸನ, ದೇವಾಲಯಗಳು ಇವರ ಕಾಲದ ಹೆಗ್ಗುರುತುಗಳು. ಗಂಗರು, ಚಾಲುಕ್ಯರು ಆಳಿದ ಬಗ್ಗೆ ತಿಳಿದುಬರುತ್ತದೆ. ತೈಲಪ, ವಿಕ್ರಮಾದಿತ್ಯ ಅರಸರ ಕಾಣಿಕೆಗಳು ಅಪಾರ. ಚೋಳರ ಆಳ್ವಿಕೆಯಲ್ಲಿ ಅನೇಕ ಯುದ್ಧಗಳು ಇಲ್ಲಿ ಸಂಭವಿಸಿವೆ. ನೊಳಂಬವಾಡಿಯನ್ನು ಜಗದೇಕ ಪಾಂಡ್ಯ ಮತ್ತು ವಿಜಯ ಪಾಂಡ್ಯ ಪಡೆಯಲು ಹವಣಿಸುತ್ತಿದ್ದರು. ಹೊಯ್ಸಳರ ಕಾಲದಲ್ಲಿ ಅನೇಕ ಸುಧಾರಣೆಗಳನ್ನು ಕಂಡಿದೆ ಈನಾಡು. ಪೆರುಮಾಳದೇವ ದಂಡನಾಯಕ ಇಲ್ಲಿನ ಆಡಳಿತ ಉಸ್ತುವಾರಿಯನ್ನು ನೋಡಿಕೊಳ್ಳುತ್ತಿದ್ದರೆ ಈ ಜಿಲ್ಲೆಗೆ ಎರಡನೇ ಬಲ್ಲಾಳ ಸಾಕಷ್ಟು ಪ್ರೋತ್ಸಾಹಿಸಿದ್ದ. ತರುವಾಯ ವಿಜಯನಗರ ಕಾಲದಲ್ಲಿ ಇದು ಹೃದಯ ಭಾಗವಾಗಿತ್ತು. ದೇವರಾಯ ಚಿತ್ರದುರ್ಗದ ಕಲಾಪೋಷಣೆ, ಇತರೆ ಸುಧಾರಣೆಗಳನ್ನು ಮಾಡಿರುವುದು ಸ್ಮರಣೀಯ. ಬೇಟೆಗೆ ಬಂದ (ಗಜಬೇಟೆಗಾರ) ಪ್ರೌಢದೇವರಾಯ ಇಲ್ಲಿನ (ಮೊಳಕಾಲ್ಮೂರು) ಹಳ್ಳಿಗಳನ್ನು ಇನಾಂ ಕೊಡುತ್ತಾನೆ. ದೇವರ ಪೂಜೆಗೆ ಎಣ್ಣೆಯನ್ನು ಹಾಕಿಸುವುದನ್ನು ತಿಳಿಸುತ್ತದೆ ಇಲ್ಲಿನ (ಮಚ್ಚೆನಹಳ್ಳಿ) ಶಾಸನ.

ವಿಜಯನಗರದ ಅರಸರಿಂದ ನಿಯೋಜಿಸಲ್ಪಟ್ಟ ಸ್ಥಳೀಯ ಪಾಳೆಯಗಾರರು ಇಲ್ಲಿ ಭವ್ಯ ಆಡಳಿತ ನಡೆಸಿದ್ದಾರೆ. ಸುಮಾರು ಎರಡು ಶತಮಾನಗಳಿಗೂ ಹೆಚ್ಚು ಕಾಲ ಈ ಪಾಳೆಯಗಾರರು ಆಳ್ವಿಕೆ ನಡೆಸಿದ್ದು ಸ್ಪಷ್ಟ. ಅವರಲ್ಲಿ ಪ್ರಮುಖರೆಂದರೆ ತಿಮ್ಮಣ್ಣನಾಯಕ, ಚಿಕ್ಕಣ್ಣನಾಯಕ, ಭರಮಪ್ಪನಾಯಕ, ಕಸ್ತೂರಿ ರಂಗಪ್ಪನಾಯಕ, ಮದಕರಿನಾಯಕ ಹೀಗೆ ವಿವಿಧ ಕ್ಷೇತ್ರಗಳಲ್ಲಿ ಅಭಿವೃದ್ಧಿಗೊಂಡ ಚಿತ್ರದುರ್ಗಕ್ಕೆ ಮಹಾತಿರುವು ಬಂದಿದ್ದು ಪಾಳೆಯಗಾರರಿಂದಲೇ ಇವರ ಆಳ್ವಿಕೆ ಅವಧಿಯಲ್ಲಿ ಅನೇಕ ಸಮಾಜ ಸುಧಾರಣಾ ಕೆಲಸಗಳಾಗಿವೆ. ಇವರ ಸಮಕಾಲೀನರಾಗಿ ಹರತಿ, ಮುತ್ತೋಡು, ನಾಯಕನಹಟ್ಟಿ, ಮೊಳಕಾಲ್ಮೂರು, ರಾಯದುರ್ಗ ಮೊದಲಾದವು ಆಳ್ವಿಕೆ ನಡೆಸಿದ ಪಾಳೆಯಪಟ್ಟುಗಳು.

ಮೈಸೂರು ಅರಸ ೩ನೇ ಕೃಷ್ಣರಾಜ ಒಡೆಯರ ಕಾಲದಲ್ಲಿ ೬ ಫೌಜುದಾರಿಗಳು ೧೦೧ ಉಪವಿಭಾಗದ ತಾಲೂಕುಗಳಿದ್ದವು. ಚಿತ್ರದುರ್ಗ ಜಿಲ್ಲೆಗೆ ೧೩ ತಾಲೂಕುಗಳು ಅಂದು ಸೇರಿದ್ದವು. ೧೮೩೪ರಲ್ಲಿ ೬ ಫೌಜುದಾರಿಗಳನ್ನು ೪ ವಿಭಾಗಗಳಾಗಿ ಮಾಡಲಾಯಿತು. ಬೆಂಗಳೂರು ನಗರ, ಚಿತ್ರದುರ್ಗ ಮತ್ತು ಅಷ್ಟಗ್ರಾಮ. ಮಧುಗಿರಿ ಚಿತ್ರದುರ್ಗಕ್ಕೆ ಮತ್ತು ಅಷ್ಟಗ್ರಾಮ ಮಂಜರಾಬಾದ್‌ಗೆ ಸೇರಿದ್ದವು. ಫೌಜು ದಾರಿ ಕೇಂದ್ರ ಸ್ಥಳ ತುಮಕೂರಾಗಿತ್ತು. ಪ್ರತಿಯೊಂದು ವಿಭಾಗದಲ್ಲಿ ಯುರೋಪಿಯನ್ ಸೂರಿನ್‌ಟೆಂಡೆಂಟ್ ನ್ಯಾಯಾಂಗದ ಅಧಿಕಾರ ಪಡೆಯುತ್ತಿದ್ದ.

೧೮೬೨ರಲ್ಲಿ ಬೌರಿಂಗ್ ಕಮಿಷನರ್ ಆಗಿದ್ದಾಗ ರಾಜ್ಯವನ್ನು ೮ ಜಿಲ್ಲೆಗಳಾಗಿ ವಿಭಾಗಿಸುತ್ತಾನೆ. ಅದರಲ್ಲಿ ಚಿತ್ರದುರ್ಗವೂ ಒಂದಾಗಿತ್ತು. ೮ ಜಿಲ್ಲೆಗಳು ಸೇರಿ ೩ ವಿಭಾಗಗಳನ್ನು ಮಾಡಿದ್ದರು. ಎಲ್ಲಾ ವಿಂಗಡಣೆಗಳು ಜಿಲ್ಲಾ ಸೂಪರಿಟೆನ್‌ಡೆಂಟ್ ಅಧೀನದಲ್ಲಿರುತ್ತಿದ್ದವು. ೧೮೭೯ರಲ್ಲಿ ಕಮಿಷನ್ ಪುನರ್ ಜಾಗೃತಿಗೊಂಡಿತು. ರಾಜ್ಯದ ಅಧಿಕಾರವನ್ನು ಚೀಫ್ ಕಮೀಷನರ್ಸ್ ಮತ್ತು ಅಮಿಲ್ದಾರರಿಗೆ ಹಂಚಿದ್ದರು.

೧೮೬೩ರಲ್ಲಿ ಚಿತ್ರದುರ್ಗ ವಿಭಾಗ ರದ್ದಾಯಿತು. ಇದು ನಗರ ವಿಭಾಗಕ್ಕೆ ಮತ್ತು ತುಮಕೂರು ಜಿಲ್ಲೆ ಹೊಸದಾಗಿ ಆದ ನಂದಿದುರ್ಗ ವಿಭಾಗಕ್ಕೆ ಸೇರಿದವು. ಸಿರಾ ತಾಲೂಕು ೧೮೬೫ರವರೆಗೆ ಚಿತ್ರದುರ್ಗ ಜಿಲ್ಲೆಯಲ್ಲಿತ್ತು. ಅನಂತರ ಅದು ತುಮಕೂರು ಜಿಲ್ಲೆಗೆ ವರ್ಗವಾಯಿತು. ೧೮೮೬ರಲ್ಲಿ ಚಿತ್ರದುರ್ಗ ಜಿಲ್ಲೆ ಪುನರ್ ವಿಂಗಡಣೆ ಮಾಡುವಾಗ ಪಾವಗಡ ತಾಲೂಕು ತುಮಕೂರು ಜಿಲ್ಲೆಗೆ ಸೇರಿತು. ಸ್ವತಂತ್ರ ಜಿಲ್ಲೆಯಾಗಿ ರೂಪು ಪಡೆದ ನಂತರ ಸ್ವಾತಂತ್ರ್ಯ ಹೋರಾಟ, ಏಕೀಕರಣದ ಸಂದರ್ಭದಲ್ಲಿ ಮಹತ್ತರ ಬದಲಾವಣೆ ಕಂಡಿದೆ ಚಿತ್ರದುರ್ಗ ಜಿಲ್ಲೆ.

೧೯೪೭ರಲ್ಲಿ ಸ್ವಾತಂತ್ರ್ಯ ಪಡೆದಾಗ ಚಿತ್ರದುರ್ಗ ಜಿಲ್ಲೆ ಎಲ್ಲಾ ಕ್ಷೇತ್ರಗಳಲ್ಲಿಯೂ ಹಿಂದೆ ಉಳಿದಿತ್ತು. ಪಂಚವಾರ್ಷಿಕ ಯೋಜನೆಗಳ ಮೂಲಕ ಗ್ರಾಮೀಣ ಅಭಿವೃದ್ಧಿ ಮಾಡುವುದರ ಮೂಲಕ ಪರಿವರ್ತನೆ ಕಂಡು ಬಂದಿದೆ. ಇಂದು ಎಲ್ಲಾ ಕ್ಷೇತ್ರಗಳಲ್ಲಿಯೂ ಚಿತ್ರದುರ್ಗ ಮುನ್ನಡೆ ಸಾಧಿಸಿದ್ದುದು ನಿಜ. ಎಸ್.ನಿಜಲಿಂಗಪ್ಪ ದೊಡ್ಡ ಸಿದ್ದವ್ವನಹಳ್ಳಿ ಈ ಜಿಲ್ಲೆಯ ಪ್ರತಿನಿಧಿಯಾಗಿ ರಾಜ್ಯ ಮುಖ್ಯಮಂತ್ರಿಗಳಾಗಿದ್ದರು. ಈ ಸಂದರ್ಭದ ಚಿತ್ರದುರ್ಗ ಜಿಲ್ಲೆಗೆ ಕೀರ್ತಿ ಬಂತೆ ಹೊರತು ಪ್ರಗತಿಪರ ಕೆಲಸಗಳಾಗಲಿಲ್ಲ. ಈ ಕೊರತೆಯನ್ನು ನೀಗಿಸಲು ಅನೇಕ ನಾಯಕರು ಮುಂದಾದರು. ದಿ.ಎ.ಭೀಮಪ್ಪ ನಾಯಕ ಅವರು ಈ ಜಿಲ್ಲೆಯಲ್ಲಿ ಪರಿವರ್ತನ ಕೆಲಸ ಕಾರ್ಯಗಳನ್ನು ಮಾಡಿ ತೋರಿಸಿದರು. ಇವರ ಸಾಧನೆಯ ಪ್ರತೀಕ ಅನೇಕ ಶಿಕ್ಷಣ ಸಂಸ್ಥೆ, ಕಚೇರಿಗಳು ನಿರ್ಮಾಣವಾದವು. ಇವರ ಸಮಕಾಲೀನರಾದ ಹೊ.ಚಿ.ಬೋರಯ್ಯನವರು ಸಹಕಾರಿ ಕ್ಷೇತ್ರದಲ್ಲಿ ಸಾಕಷ್ಟು ಬದಲಾವಣೆ ತಂದು ಜನಾನುರಾಗಿಯಾಗಿದ್ದರು. ಈ ಇಬ್ಬರು ಮಾಜಿ ಸಚಿವರುಗಳೇ ಆಗಿದ್ದವರು. ದಿ.ವೀರೇಂದ್ರಪಾಟೀಲ್, ದಿ.ದೇವರಾಜಅರಸು, ದಿ.ನಿಜಲಿಂಗಪ್ಪನವರ ಅವಧಿಯಲ್ಲಿ ಚಿತ್ರದುರ್ಗ ಜಿಲ್ಲೆ ಪ್ರಗತಿ ಹಂತಕ್ಕೆ ಮುಂದಾಯಿತು. ಹಿರಿಯೂರಿನ ಮಾರಿಕಣಿವೆ ಜಲಾಶಯದ ನೀರಿನ ಸದುಪಯೋಗ ಮತ್ತು ಮೊಳಕಾಲ್ಮೂರು ತಾಲೂಕಿನಲ್ಲಿ ಹೊಸದಾಗಿ ನಿರ್ಮಾಣ ಕಾರ್ಯ ಕೈಗೊಂಡ ರಂಗಯ್ಯನದುರ್ಗ ಜಲಾಶಯವನ್ನು ಪೂರ್ಣಗೊಳಿಸಲು ಇಂದಿನವರೆಗೂ ಕಾಯಬೇಕಾಯಿತು. ಹತ್ತಿ ಗಿರಣಿ, ಕೃಷಿ ಮಾರುಕಟ್ಟೆ, ಎಣ್ಣೆ ಮಿಲ್, ಮೊದಲಾದವು ಈ ಜಿಲ್ಲೆಯ ಆರ್ಥಿಕ ವಹಿವಾಟಿಗೆ ಕಾರಣವಾಗಿವೆ.

ಕಳೆದೆರಡು ದಶಕಗಳಿಂದ ಗ್ರಾಮ ಪಂಚಾಯ್ತಿ, ತಾಲೂಕು ಪಂಚಾಯ್ತಿ ಮತ್ತು ಜಿಲ್ಲಾ ಪಂಚಾಯ್ತಿಗಳ ಮೂಲಕ ಅಧಿಕಾರ ವಿಕೇಂದ್ರೀಕರಣವನ್ನು ಮಾಡಲಾಯಿತು. ಹೋಬಳಿ, ತಾಲೂಕು ಘಟಕಗಳು ಅಧಿಕಾರ ಮತ್ತು ಜನತೆಯ ಆಶೋತ್ತರ ಕೇಂದ್ರಗಳಾದವು. ಪ್ರಾಚೀನ ಪರಂಪರೆಯೊಂದಿಗೆ ರಾಜಪ್ರಭುತ್ವ ಮೆರುಗು ದೊರೆತ ಇಂಥ ಸ್ಥಳಗಳು ಪ್ರಸಿದ್ಧಿ ಪಡೆಯುವುದರಲ್ಲಿ ಯಾವ ಅಡ್ಡಿ ಆತಂತಕಗಳಿರಲಿಲ್ಲ. ನಾಯಕನಹಟ್ಟಿ, ಬಿ.ಜಿ.ಕೆರೆ, ರಾಂಪುರ, ಪರಶುರಾಂಪುರ, ನೇರ್ಲಗುಂಟೆ, ಸಿರಿಗೆರೆ, ಕಲ್ಲೇದೇವರಪುರ, ಯರಬಳ್ಳಿ, ಐಮಂಗಲ ಮೊದಲಾದ ಸ್ಥಳಗಳು ಗ್ರಾಮಪಂಚಾಯ್ತಿ ಘಟಕಗಳಾಗಿ, ಹೋಬಳಿ ಕೇಂದ್ರಗಳಾಗಿ ಮಹತ್ವ ಪಡೆದಿವೆ.

ವಿಶೇಷವೆಂದರೆ ಚಿತ್ರದುರ್ಗ ಜಿಲ್ಲೆಯಲ್ಲಿ ಬುಡಕಟ್ಟು ಜನರು ಇನ್ನೂ ಗ್ರಾಮಗಳಿಗೆ ಬಾರದೆ ಹಟ್ಟಿ, ಕಪಿಲೆ, ತೋಟ, ಅಡವಿಗಳಲ್ಲಿ ಜೀವಿಸುತ್ತಿರುವುದು. ಪ್ರತಿಯೊಂದು ಹಟ್ಟಿಯಲ್ಲಿಯು ಚರಿತ್ರೆ ಮತ್ತು ಸಂಸ್ಕೃತಿ ನಿರ್ಮಾಣಗೊಂಡಿರುತ್ತದೆ. ಬಹುತೇಕ ಬುಡಕಟ್ಟು ಜನರು ಕೆರೆ, ಬಾವಿ ನೀರನ್ನು ಅಡವಿಯ ಸೌದೆಯನ್ನು ಅವಲಂಬಿಸಿರುವರು. ಹೆಚ್ಚಾಗಿ ಒಣಬೇಸಾಯ ಮಾಡುವ ಇವರು, ನೀರಾವರಿ ಕೃಷಿಯಲ್ಲಿಯೂ ಹೆಚ್ಚಿನ ಉತ್ಪಾದನೆ ಇತ್ತೀಚೆಗೆ ಕಂಡಿದ್ದಾರೆ. ಜನಸಾಮಾನ್ಯರ ಚರಿತ್ರೆಯೇ ಇಲ್ಲಿ ಪ್ರಧಾನವಾದುದು. ಹಿಂದೆ ಆಳಿದ ಪಾಳೆಯಗಾರರನ್ನು ಸ್ಮರಿಸುತ್ತಾ ಅವರ ಧೈರ್ಯ, ಪರಾಕ್ರಮಗಳನ್ನು ಕೊಂಡಾಡುವುದು ತಮ್ಮ ವಂಶಜರಿಗೆ ಈ ಹೆಸರುಗಳನ್ನು ಇಡುವುದು ರೂಢಿಯಲ್ಲಿದೆ.

ಒಟ್ಟಾರೆ ಚಾರಿತ್ರಿಕವಾಗಿ ಚಿತ್ರದುರ್ಗ ಜಿಲ್ಲೆ ವಿವಿಧ ಹಂತಗಳಲ್ಲಿ ಬೆಳೆದು ಬಂದಿರುವುದನ್ನು ಗುರುತಿಸಬಹುದು. ಇದಕ್ಕೊಂದು ತಿರುವು ಸಿಕ್ಕಿದ್ದು ಚಿತ್ರದುರ್ಗದ ಪಾಳೆಯಗಾರರಿಂದ, ಪಾಳೆಯಗಾರರ ಬಗೆಗೆ ಲಭ್ಯವಿರುವ ಜನಪದ ಸಾಹಿತ್ಯವನ್ನು ಅವಲೋಕಿಸಿದರೆ ಗತಕಾಲದ ವೈಭವವನ್ನು ತಿಳಿಯಬಹುದಾಗಿದೆ. ಏಕೀಕೃತ ಆಡಳಿತ ನಡೆಸಿದ ಪಾಳೆಯಗಾರರು ತಮ್ಮ ಅವಧಿಯಲ್ಲಿ ಇತರರಿಗೆ ಪ್ರೋತ್ಸಾಹ ಕೊಟ್ಟಿದ್ದರು. ಆದರೂ ಸ್ಥಳೀಯರ ಹೊಂದಾಣಿಕೆಗೆ ವಿರೋಧಿ ಅರಸರ ಪ್ರತಿರೋಧ ಎದುರಾದದ್ದು ದುರದೃಷ್ಟಕರ. ಹೈದರ್, ಟಿಪ್ಪುವಿನ ನಂತರ ಇಲ್ಲಿನ ಅರಸರು ಸಣ್ಣ ಪುಟ್ಟ ಹುದ್ದೆಗಳಲ್ಲಿದ್ದ ಪ್ರತಿನಿಧಿಗಳಿಗೆ ಸ್ವಾತಂತ್ರ್ಯ ನಿರ್ವಹಣೆಯನ್ನು ಕೊಟ್ಟಂತಾಯಿತು. ಈ ಒಂದು ಮನೆತನಗಳು ಇಂದು ನಾನಾ ಬಗೆಯಲ್ಲಿ ಬಎಳವಣಿಗೆಯಾಗಿವೆ. ಕಲಾಸ್ಮಾರಕಗಳು, ಯಾತ್ರಾಸ್ಥಳಗಳು, ಐತಿಹಾಸಿಕ ನೆಲೆಗಳು, ಬುಡಕಟ್ಟು ಕೇಂದ್ರಗಳು ಇಲ್ಲಿ ಕಂಡು ಬರುತ್ತವೆ. ಇವುಗಳ ಬಗೆಗೆ ಜನಪದರ ಇತಿಹಾಸವು ಚಾಲ್ತಿಯಲ್ಲಿದೆ.

* * *

* ‘ರಾಷ್ಟ್ರ’ (National) ಎಂಬ ಪದವನ್ನು ೧೮೮೫ ರಲ್ಲಿ ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ಸ್ಥಾಪಿಸುವಾಗ ಬ್ರಿಟಿಷರು ಬಳಸಿದ್ದರು.



# ೧. ಬುಡಕಟ್ಟುಗಳ ಪರಿಚಯ

ಇಂದು ಬುಡಕಟ್ಟು ಸಮುದಾಯಗಳನ್ನು ಆಧುನಿಕ ಜಗತ್ತಿಗೆ ಪರಿಚಯ ಮಾಡಿಕೊಡಬೇಕಾದ ಅಗತ್ಯತೆಯಿದೆ. ಒಂದು ಬುಡಕಟ್ಟಿನಲ್ಲಿ ಒಬ್ಬಿಬ್ಬರು ಸುಶಿಕ್ಷಿತ ನಾಗರಿಕರಾಗಿ, ಉಳಿದವರು ಅರಣ್ಯ ವಾಸಿಗಳಾದುದೇ ಹೆಚ್ಚು. ಈ ಬುಡಕಟಟು ಜನರು ನಾಗರಿಕತೆಯ ಸೋಂಕಿಗೂ ಸಿಗದೆ, ಪ್ರಾಚೀನ ಸಂಸ್ಕೃತಿಯನ್ನು ಉಳಿಸಿಕೊಳ್ಳದೇ ಡೋಲಾಯಮಾನ ಸ್ಥಿತಿಯಲ್ಲಿದ್ದಾರೆ. ಇವರ ಮೂಲ ವೃತ್ತಿ ಬೇಟೆ. ಸರ್ಕಾರ ಬೇಟೆಯನ್ನು ನಿಷೇಧಿಸಿದ್ದರೂ ಅದು ಆಚರಣೆಯಲ್ಲಿದೆ. ಪಶುಪಾಲನೆ, ಕೃಷಿ ಚಟುವಟಿಕೆಗಳಲ್ಲಿ ಬುಡಕಟ್ಟು ಜನರು ಪರಿವರ್ತಿತಗೊಂಡರೂ ನೆಮ್ಮದಿಯ ಬದುಕಿಗೆ ಹಾತೊರೆಯುವರು.

ಭಾರತದಲ್ಲಿ ವಸಾಹತುಶಾಹಿ ಸಂದರ್ಭವು ಬುಡಕಟ್ಟು ಜನರ ಇತಿಹಾಸ ರಚನೆಗೆ ಒತ್ತುಕೊಟ್ಟಿತು. ಬ್ರಿಟಿಷ್ ಅಧಿಕಾರಿಗಳು, ವಿದ್ವಾಂಸರು, ಕ್ರೈಸ್ತ ಮಿಷನರಿಗಳು, ಪ್ರವಾಸಿಗರು ಬುಡಕಟ್ಟಿನ ಬಗ್ಗೆ ತಳೆದ ನಿಲುವುಗಳನ್ನು ವರದಿ, ದಿನಚರಿ ಇತರೆ ಕೃತಿಗಳಲ್ಲಿ ಕಾಣಬಹುದು. ಸ್ವಾತಂತ್ರ್ಯಪೂರ್ವ ಮತ್ತು ನಂತರದಲ್ಲಿ ಇವರ ಬಗ್ಗೆ ಅನೇಕ ವಿಧವಾದ ಸಂಶೋಧನೆಗಳು ನಡೆದಿವೆ. ಎಡ್ಗರ್ ಥರ್ಸ್ಟನ್, ವೆರಿಯರ್ ಎಲ್ವಿನ್ ಇತರರು ಪ್ರಮುಖರಾಗಿರುವರು.

‘ಬುಡಕಟ್ಟು’ ಎಂದರೆ ಕುಟುಂಬ, ಕುಲ, ಸಮೂಹ ಎಂಬರ್ಥವಿದೆ. ಆಂಗ್ಲಭಾಷೆಯ ‘ಟ್ರೈಬ್ಸ್’ಗೆ ಸಂವಾದಿಯಾಗಿ ಕನ್ನಡದಲ್ಲಿ ಬುಡಕಟ್ಟು ಎಂದೇ ಕರೆಯುತ್ತಾರೆ. ಪ್ರಾಚೀನ ಲ್ಯಾಟಿನ್ ಭಾಷೆಯಲ್ಲಿ ಟ್ರೈಬ್ಸ್ ಎಂಬ ಪದ ಉಗಮವಾಯಿತು. ಮೊಟ್ಟಮೊದಲ ಗ್ರೀಕ್ – ರೋಮನ್‌ನ ವಿದ್ವಾಂಸರು ಲ್ಯಾಟಿಯಂ ಪ್ರದೇಶದಲ್ಲಿ ವಾಸಿಸುತ್ತಿದ್ದ ಜನರಿಗೆ ಆ ರೀತಿ ಕರೆದರು. ಒಂದೇ ಕುಟುಂಬದ, ರಕ್ತ ಸಂಬಂಧಿಕರಿಗೆ ಸಮುದಾಯಕ್ಕೆ ಬುಡಕಟ್ಟು ಎನ್ನಲಾಗುವುದು. ಆದಿವಾಸಿ, ಮೂಲನಿವಾಸಿ, ಗಿರಿಜನ, ವನ್ಯಜಾತಿ, ಜನಜಾತಿ ಎಂದು ಸಹ ಕರೆಯುವರು. ಒಂದು ಸಮಾಜಕ್ಕೆ ಕುಟುಂಬವೇ ಮೂಲಘಟಕ ಮತ್ತು ಆಧಾರ ಕುಟುಂಬಗಳು ಸೇರಿ ಸಮುದಾಯ, ಹಟ್ಟಿಗಳು ನಿರ್ಮಾಣವಾದವು.

ಚಿತ್ರದುರ್ಗ ಜಿಲ್ಲೆಯ ಬುಡಕಟ್ಟು ಜನರ ಸ್ವರೂಪ ತೀರಾ ಭಿನ್ನವಲ್ಲದಿದ್ದರೂ ಪ್ರತ್ಯೇಕ ಲಕ್ಷಣಗಳು ಕಂಡು ಬರುತ್ತವೆ. ಒಂದು ಪ್ರದೇಶಕ್ಕೆ ಸೀಮಿತವಾಗಿ ರಾಜಕೀಯ ಸಾಮಾಜಿಕ ಹೊಣೆಗಾರಿಕೆಯನ್ನು ನಿಭಾಯಿಸುತ್ತಾರೆ. ಜೀವನಶೈಲಿ, ಆಚಾರ – ವಿಚಾರ ಆಡಳಿತ ಇತರ ಎಲ್ಲಾ ಲಕ್ಷಣಗಳಲ್ಲಿ ಏಕತೆ, ಸ್ವಾತಂತ್ರ್ಯವನ್ನು ಹೊಂದಿದ್ದರೆ ಬುಡಕಟ್ಟು ಎಂದು ಕರೆಯಬಹುದು. ಬುಡಕಟ್ಟುಗಳು ಭೂ ಪ್ರದೇಶದಲ್ಲಿ ವಿಕಾಸಗೊಳ್ಳುತ್ತಾ ಹೋದಂತೆ ಪರಿವರ್ತನೆ ಕಂಡುಬಂತು. ಗೊಲ್ಲರು ಮತ್ತು ಬೇಡರು ಹೀಗೆ ವಿಕಾಸ ಹೊಂದಿದ ಬುಡಕಟ್ಟುಗಳಾಗಿವೆ.

ಬೇಡರಿಗೆ ಪ್ರಕೃತಿಯೇ ಮನೆ, ಬೇಟೆ ಅವರ ಆಹಾರ. ಚಿತ್ರದುರ್ಗ ಜಿಲ್ಲೆಯಲ್ಲಿ ೧೯೯೧ರ ಜನಗಣತಿಯ ಪ್ರಕಾರ ಬೇಡ ಅಥವಾ ನಾಯಕ ಜನಾಂಗಕ್ಕೆ ಸೇರಿದ ಸು.೨,೨೨,೭೬೩ ಬುಡಕಟ್ಟು ಜನರಿದ್ದರು. ಇವರಲ್ಲಿ ಬಹುಪಾಲು ಮ್ಯಾಸ ನಾಯಕರು. ಇಲ್ಲಿನ ಬೇಡರು ಬೇಟೆ, ಪಶುಪಾಲನೆಯನ್ನು ಅವಲಂಬಿಸಿದ್ದರು. ಇಂದು ಕೃಷಿಯಲ್ಲಿ ತೊಡಗಿರುವುದು ಗಮನಾರ್ಹ. ಸಾಮಾಜಿಕ ಹಾಗೂ ರಾಜಕೀಯ ಒತ್ತಡಗಳಿಂದಾಗಿ ಬೇಟೆಗಾರಿಕೆ ಹವ್ಯಾಸ ಕಲೆ ಅಥವಾ ಹಿಂದಿನ ಪರಂಪರೆಯ ಅನುಕರಣೆಯಾಗಿದೆ. ಇವರಂತೆ ಗೊಲ್ಲರು, ಜೇನುಕುರುಬರು, ಸೋಲಿಗರು, ಗೊಂಡರು ಎಂಬ ಬುಡಕಟ್ಟುಗಳು ಕಂಡು ಬರುತ್ತವೆ. ಮ್ಯಾಸಬೇಡರು ತಮ್ಮ ಪರಂಪರೆಯ, ಸಂಸ್ಕೃತಿಯ ಹೆಗ್ಗುರುತುಗಳನ್ನು ಮೈಗೂಡಿಸಿಕೊಂಡಿದ್ದಾರೆ. ಅವರ ಜೀವನಶೈಲಿ, ಆಹಾರ ಉಡುಗೆ – ತೊಡುಗೆ, ಆಚಾರ – ವಿಚಾರಗಳಲ್ಲಿಯೂ ಹಿಂದಿನ ಲಕ್ಷಣಗಳನ್ನು

ಕಾಣುತ್ತೇವೆ. ಕಾಡಿನಲ್ಲೇ ವಾಸಿಸುವುದರಿಂದ ಕಾಡು ಬೇಡರೆಂದು ಕರೆಯುವರು. ಪ್ರಕೃತಿ ಆರಾಧಕರಾದ ಬೇಡರು ಪಿತೃ ಆರಾಧಕರಾಗಿ, ಬುಡಕಟ್ಟು ವೀರರನ್ನು ತಮ್ಮ ದೇವರೆಂದು, ಮೂಲಪುರುಷನೆಂದು ನಂಬಿಕೊಂಡಿದ್ದಾರೆ. ಭಾರತದಲ್ಲಿನ ಬುಡಕಟ್ಟುಗಳ ಲಕ್ಷಣಗಳಿಗೂ ಮತ್ತು ಕರ್ನಾಟಕದ ಬುಡಕಟ್ಟುಗಳ ಲಕ್ಷಣಗಳಿಗೂ ಹೋಲಿಕೆಯಲ್ಲಿ ಕೆಲವು ವೈರುಧ್ಯಗಳಿರುವುದುಂಟು.

**ಬೇಡ ಬುಡಕಟ್ಟು ಸಮುದಾಯದ ಪರಿಚಯ**

ಮಾನವನ ಉಗಮದ ತರುವಾಯ ಪ್ರತಿಯೊಬ್ಬರೂ ಬೇಟೆಗಾರರೇ ಆಗಿದ್ದರು. ವಿಕಾಸ ಹೊಂದುತ್ತಾ ಒಂದೊಂದೇ ಸಮುದಾಯಗಳು ಶ್ರೇಣೀಕೃತಗೊಂಡವು. ಹೀಗೆ ಪುರಾತನ ಕಾಲದಿಂದಲೂ ಬೇಡರಿಗೆ ಚಾರಿತ್ರಿಕ ಮಹತ್ವವಿದೆ. ಭಾರತದಲ್ಲಿ ಇವರನ್ನು ಕಿರಾತ, ಶಬರ, ಮಾಧ್ಯ, ಪುಲಿಂದ, ಬಿಲ್, ಕೋಳಿ, ನಿಷಾಧ, ನಾಯಕ, ವಾಲ್ಮೀಕಿ ಇತರ ಹೆಸರುಗಳಿಂದ ಕರೆಯುತ್ತಾರೆ. ಮಾನವ ಜನಾಂಗಗಳಲ್ಲಿ (ಖಚಿಛಿes) ಇವರು ಪ್ರೊಟೊ ಆಸ್ಟ್ರಾಲಾಯಿಡ್‌ಗೆ ಸೇರಿದವರು. ಭಾರತದಲ್ಲಿ ದ್ರಾವಿಡ ಸಂಸ್ಕೃತಿಯ ಲಕ್ಷಣಗಳನ್ನು ಹೊಂದಿರುವ ಬೇಡರು ಆರ್ಯ ಸಂಸ್ಕೃತಿಯ ಪ್ರಭಾವಕ್ಕೆ ಸಿಲುಕಿದ್ದಾರೆ. ಉತ್ತರ ಭಾರತದಲ್ಲಿನ ಬೇಡರು ಮಂಗೋಲಿಯನ್ ಬುಡಕಟ್ಟಿಗೆ ಸೇರಿರುತ್ತಾರೆ. ವಿವಿಧತೆಯಲ್ಲಿ ಏಕತೆ ಕಾಣುವ ವಿಶಿಷ್ಟತೆ ಭಾರತದಲ್ಲಿದೆ. ಇಂಥಾ ವೈಶಿಷ್ಟ್ಯಗಳ ಪೈಕಿ ಭೌಗೋಳಿಕ, ಜನಾಂಗಿಕ ಸಂಗತಿಗಳು ಪ್ರಮುಖವಾದವು. ಯಾವುದೇ ಪ್ರದೇಶ, ದೇಶ, ಹಳ್ಳಿ ಹೀಗೆ ಭೌಗೋಳಿಕ (ನೆಲಸುತಾಣ) ಪ್ರದೇಶದಲ್ಲಿ ಸ್ಥಳೀಯರಿಗಿಂತ ಹೊರಗಿನವರೆ ಬುದ್ಧಿವಂತಿಕೆಯಿಂದ ದಬ್ಬಾಳಿಕೆ ನಡೆಸಿರುವುದು ಇತಿಹಾಸ. ಇದನ್ನು ಪ್ರಾಯೋಗಿಕವಾಗಿಯೂ ಇಂದು ಹೋಲಿಸಿ ನೋಡಬಹುದು. ಸಮಾನರಾದವರೊಡನೆ, ಒಂದು ದೇಶ, ಜನಾಂಗ ಧರ್ಮಕ್ಕಿಂತ ಹೊರಗಿನ ಶಕ್ತಿ ಆಳ್ವಿಕೆ ನಡೆಸಿದ್ದೇ ಹೆಚ್ಚು. ಇದಕ್ಕೆ ಉದಾಹರಣೆ ಆರ್ಯರು, ಹೂಣರು, ಪರ್ಶಿಯನ್ನರು, ಸಿಥಿಯನ್ನರು, ಪೋರ್ಚುಗೀಸರು, ಫ್ರೆಂಚರು, ಇಂಗ್ಲಿಷರು ಮತ್ತು ಡಚ್ಚರನ್ನು ಹೆಸರಿಸಬಹುದು. ಇವರು ತನ್ನ ದೇಶವಲ್ಲದೆ, ಅನ್ಯ ದೇಶಗಳಲ್ಲಿ ಸಂಚರಿಸಿ ವ್ಯಾಪಾರ, ರಾಜ್ಯಾಳ್ವಿಕೆ ನಡೆಸಿದ್ದು ಗಮನಾರ್ಹ. ಇಂಥ ಪರಕೀಯರನ್ನು ಆದಿಯಲ್ಲಿ ಸಪ್ತಸಿಂಧು, ಗಂಗಾನದಿಯ ಬಯಲಿನಲ್ಲಿ ಎದುರಿಸಿದವರು ಕಿರಾತರು. ಭಾರತೀಯ ಚರಿತ್ರೆ ಮತ್ತು ಸಂಸ್ಕೃತಿಯ ಹಿನ್ನೆಲೆಯಲ್ಲಿ ಆದಿವಾಸಿ, ಗಿರಿಜನರಾದ ಕಿರಾತರು ಅಥವಾ ವಾದ್ಯರ ಚರಿತ್ರೆ ರೋಮಾಂಚನವಾದುದು. ರಾಹುಲ ಸಾಂಕೃತ್ಯಾಯನ ಅವರು ದಿವೋದಾಸ, ವೊಲ್ಗಾ – ಗಂಗಾ, ಮತ್ತು ಜಯಯೌದೇಯ ಕೃತಿಗಳಲ್ಲಿ ಈ ಸಂಗತಿಯನ್ನು ಚರ್ಚಿಸುತ್ತಾರೆ. ಕಿರಾತರು, ಶಬರರು ಆರ್ಯರೊಡನೆ ಯುದ್ಧಮಾಡಿ ಗೆದ್ದ ಉದಾಹರಣೆಗಳಿವೆ. ಕಿರಾತರ ಗೆರಿಲ್ಲಾ ಯುದ್ಧಕ್ಕೆ ಆರ್ಯ, ಪಡೆಗಳು ತತ್ತರಿಸಿ ಹೋಗಿದ್ದವಂತೆ. ಈ ಹಿನ್ನೆಲೆಯಲ್ಲಿ ಆರ್ಯರನ್ನು ಎದುರಿಸಿದವರಲ್ಲಿ ಕಿರಾತರು ಪ್ರಮುಖರು. ನಿಷಾದ ಮತ್ತು ಕಿರಾತ, ದಾಸ – ದಸ್ಯು ಮೊದಲಾದವರು ಆರ್ಯ – ಮಂಗೋ ಲಾಯ್ಡ್, ಆಸ್ಟ್ರಿಕ್, ದ್ರಾವಿಡ ಮತ್ತು ಇಂಡೋ ಆರ್ಯನ್ ಅಥವಾ ಇಂಡೋ ಯುರೋಪಿಯನ್‌ಗಳ ವರ್ಣ ಸಂಕರದ ಪರಿಣಾಮ ಭಾರತೀಯ ಮಾನವನಾಗಿ ವಿಕಾಸ ಹೊಂದಿದ್ದಾರೆ. ಆರ್ಯ ಮತ್ತು ದ್ರಾವಿಡ ಜನಾಂಗಗಳ ಮೂಲ ಮತ್ತು ಪ್ರಾಚೀನತೆ ಬಗ್ಗೆ ಇನ್ನು ಚರ್ಚೆ, ವಿವಾದಗಳು ನಡೆಯುತ್ತಿವೆ. ಭಾರತೀಯ ಜನಾಂಗ ಶಾಸ್ತ್ರಗಳಲ್ಲಿ ಆದಿಔಷ್ಟ್ರೇಯ (ಪ್ರೊಟೊ ಆಸ್ಟ್ರಾಲಾಯಿಡ್) ಭಾರತದ ಮೂಲನಿವಾಸಿಗಳನ್ನು ವ್ಯಾಧೀಯ ಅಥವಾ ಚಾಷ್ಟ್ರೇಯ ಎಂದು ಬಳಸುತ್ತಿದ್ದಾರೆ. ಈ ಬಗ್ಗೆ ಇನ್ನು ಖಚಿತವಾಗಿ ಹೇಳಬೇಕೆಂದರೆ ಆದಿಔಷ್ಟೇಯ ಔಷ್ಟ್ರೇಯರಿಗಿಂತ ಮೊದಲು ವಾಸವಾಗಿದ್ದ ಜನ ಎಂದಾಗುತ್ತದೆ. ಮಾನವ ಬುಡಕಟ್ಟಿನ ಬಗ್ಗೆ, ಈ ಜನಾಂಗದ ಬಗ್ಗೆ ಸಿದ್ಧಾಂತ ಮಂಡಿಸುತ್ತದೆ. ಈ ಬಗ್ಗೆ ಹರಪ್ಪ, ಮೊಹೆಂಜದಾರೊ, ಮಸ್ಕಿ, ತಕ್ಷಶಿಲಾ, ಚಂಗಲ್‌ಪೇಟೆ ಇತರ ನಿವೇಶನಗಳ ಉತ್ಖನನದಲ್ಲಿ ದೊರೆತ ಅವಶೇಷಗಳೇ ಸಾಕ್ಷಿ. ಇವು ಭಾರತದಲ್ಲಿ ವಿವಿಧ ಜನಾಂಗ, ಪಂಗಡಗಳಿದ್ದ ಬಗ್ಗೆ ಬೆಳಕು ಚೆಲ್ಲುತ್ತವೆ.

ಆರ್ಯರಿಗಿಂತಲೂ ಪೂರ್ವದಲ್ಲಿ ವ್ಯಾಧೀಯ (ಬೇಡ) ಜನಾಂಗದಿಂದ ದ್ರಾವಿಡ ಮಾದರಿಯ ಜನಾಂಗ ಭಾರತದಲ್ಲಿತ್ತೆಂಬುದು ನಿರ್ವಿವಾದ. 'ಗಿರಿವಾಸಿಗಳಾದ ವ್ಯಾಧೀಯರು ಬಯಲು ಪ್ರದೇಶಗಳಿಗೆ ಬಂದ ಮೇಲೆ ಅವರು ಯಾವ ರೀತಿ ಪರಿವರ್ತನೆ ಹೊಂದುವರೆಂಬುದನ್ನು ಎಚ್ಚರಿಕೆಯಿಂದ ಎಂದೂ ಗಮನಿಸಿಲ್ಲ. ಅನೇಕ ಗಿರಿಜನರಾದರೂ ಮೈದಾನ ಪ್ರದೇಶಗಳಿಗೆ ಕಾಲಕ್ರಮದಲ್ಲಿ ಇಳಿದು ಬಂದು ನೆಲೆಸಿದ್ದಾರೆ.

[1] ಉತ್ತರ ಭಾರತದ ರಾಜಮಹಲ್, ಬಿಹಾರಗಳಲ್ಲಿ ಮುಂಡಾ, ಸಂತಾಲ ಗಿರಿಜನರಿದ್ದರು. ದ್ರಾವಿಡ ಲಕ್ಷಣಗಳನ್ನು ಅನೇಕ ಗಿರಿಜನರು ಹೊಂದಿದ್ದರು. ವ್ಯಾಧೀಯರಂತೆ ಮಾಲೆ, ಸಂತಾಲರ – ವಲಸೆಗಾರಿಕೆ ಹೊಂದಿದ್ದರು. ಉಸ್ಮಾನ್‌ಹಿಲ್ ಎಂಬುವರ ಪ್ರಕಾರ ವ್ಯಾಧ ಶಿರೋರೂಪವು ಶೇ.೩೩.೧ರಷ್ಟು ಲಂಬ ಶಿರೋಲಕ್ಷಣವನ್ನು ತೋರಿಸುತ್ತಾರೆ. ಮೊಹೆಂಜೋದಾರೊವಿನಲ್ಲಿ ಅತಿಲಂಬ ಶಿರೋಲಕ್ಷಣದ ತಲೆಬುರುಡೆಗಳು ವ್ಯಾಧಿಯ ಲಕ್ಷಣಗಳೇ ಆಗಿವೆ.

ಭಾರತದ ನಿವಾಸಿಗಳೆಲ್ಲರೂ ಮೂಲದಲ್ಲಿ ವ್ಯಾಧ ಜನಾಂಗವಾಗಿದ್ದು, ಕ್ರಮೇಣ ವಿವಿಧ ದರ್ಜೆಗಳನ್ನು ತೋರ್ಪಡಿಸಿಕೊಂಡಿದ್ದಾರೆ. ಇವರು ಸಿಂಹಳದ ವ್ಯಾಧದಂತೆ ಮೂಲ ಲಕ್ಷಣಗಳನ್ನು ಹೋಲುತ್ತಾರೆ. ವ್ಯಾಧ ಜನಾಂಗವು ಒಂದಾನೊಂದು ಕಾಲದಲ್ಲಿ ಈ ದೇಶದಲ್ಲಿ ವಿಶಾಲ ವ್ಯಾಪಿಯಾಗಿದ್ದು ತನ್ನ ವಲಸೆ ಹೋಗುವ ಕಾಲಗತಿಯಿಂದ ಪ್ರಾಯಶಃ ಅಲ್ಲಿಂದ ಹೊರಟು ಹೋಯಿತೆಂಬುದನ್ನು ತೋರಿಸುತ್ತದೆ. ಭಾರತದ ಹೊರಗೂ ವ್ಯಾದ ಜನಾಂಗದ ಪುಟ್ಟ ಪ್ರದೇಶಗಳಿವೆಂದು ಹೇಳಲಾಗುತ್ತದೆ. ದಕ್ಷಿಣ ಅರೇಬಿಯಾದ ಹಧ್ಮತ್ ಎಂಬಲ್ಲಿ ವಾದ್ಯ ಜನಾಂಗದ 'ಕೂನ್' ಎಂಬ ಪ್ರದೇಶವಿದೆ. ಆಫ್ಘಾನಿಸ್ತಾನದ ಹೆಲ್‌ಮಾಂಡ್ ನದಿಯ ಇಕ್ಕೆಲಗಳಲ್ಲಿ, ಆಸ್ಟ್ರೇಲಿಯಾ ಮೂಲನಿವಾಸಿಗಳಲ್ಲಿ ಮುರ್ರೇಯಿಯನ್ ಪ್ರಭೇದಕ್ಕೆ ಸೇರಿದ ಬೆಸ್ತ ಜನಾಂಗವಿದ್ದ ಉಲ್ಲೇಖಗಳಿವೆ (ಅಶೋಕನ ಕಂದಹರ್ ಶಾಸನ ಸಹ ಇದನ್ನು ತಿಳಿಸುತ್ತದೆ)

ಈಗಾಗಲೇ ಭಾರತದಲ್ಲಿ 'ಗುಹೆ, ಗಿರಿಗಳಲ್ಲಿ ವಾಸ ಮಾಡುವ ವ್ಯಾಧ ಜನರನ್ನು ಗಿರಿಜನರೆಂದು ಕರೆದಿದ್ದಾರೆ. ವ್ಯಾಧರ ದೈಹಿಕ ಲಕ್ಷಣಗಳಲ್ಲಿ ಸ್ವಲ್ಪಮಟ್ಟಿಗೆ ಭಿನ್ನತೆಗಳಿವೆ. ಎಡ್ಗರ್ ಥರ್ಸ್ಟನ್‌ರು ವನ್ಯಕಣಿಕರು ಮತ್ತು ಗ್ರಾಮ ವಾಸೀ ಕಣಿಕರಲ್ಲಿ ಇಂಥಾ ವ್ಯತ್ಯಾಸವನ್ನು ಗುರುತಿಸುತ್ತಿದ್ದಾರೆ. ಈ ಹಿಂದೆ ತಿಳಿಸಿರುವಂತೆ ವ್ಯಾಧರ ಮೊಟ್ಟಮೊದಲ ಘರ್ಷಣೆ ಆರ್ಯ ಧಾಳಿಕಾರರೊಡನೆ. ಆರ್ಯರು ತಮ್ಮ ಭಾಷೆಯನ್ನು ಅವರ ಮೇಲೆ ಹೇರಿದರು. ಈ ಆಕ್ರಮಣಕಾರೀ ಆರ್ಯರ ಮೂಲ ಜನಾಂಗ ಲಕ್ಷಣಗಳು ಸ್ವಲ್ಪ ಮಾತ್ರವೂ ನಮಗಿಂದು ದೊರಕುವುದಿಲ್ಲ. ಆದರೆ ಪರಸ್ಪರ ಸಂಪರ್ಕದಿಂದ ವ್ಯಾಧರು ಮತ್ತು ಭಾರತೀಯ ಆರ್ಯರು ಬಹಳ ರೂಪಾಂತರ ಹೊಂದಿದಂತೆ ತೋರುತ್ತದೆ. ತೋಡರಿಗೆ ೭೪ರ ಹತ್ತಿರ ಶೃಂಗವಂದು ಕಂಡುಬರುವುದು. ಇವರು ಉತ್ತರ ಭಾರತದ ಮೂಲನಿವಾಸಿಗಳೆಂಬುದನ್ನು ಮತ್ತಷ್ಟು ಹೆಚ್ಚಾಗಿ ಸಮರ್ಥಿಸುತ್ತದೆ. ಇಲ್ಲೂ ಕೂಡ ೭೪ರ ಹತ್ತಿರದ ಶೃಂಗವೂ ೭೨ರ ಹತ್ತಿರದ ಭಾರತೀಯ ಆರ್ಯಶೃಂಗದ ವೈವಿಧ್ಯವೆಂದು ತೋರುತ್ತದೆ.[2] ಅತೀ ಕುಬ್ಜತನ ವ್ಯಾಧರ ಲಕ್ಷಣ. ದ್ರಾವಿಡರ ಇಂಥಾ ವಾಧ ಬುಡಕಟ್ಟಿನಿಂದ ಹುಟ್ಟಿ ಬಂದಿದ್ದಾರೆ. ಹೀಗೆ ವ್ಯಾಧ ಜನಾಂಗದೊಡನೆ ಮಿಶ್ರಿತಗೊಂಡು ಇತರ ಸಮುದಾಯಗಳು ಉದಯವಾಗಿರಬೇಕು. ಕರ್ನಾಟಕದಲ್ಲಿ ಹಾವನೂರು ವರದಿ ಪ್ರಕಾರ ೧೭ ಪರ್ಯಾಯ ಹೆಸರುಗಳಿಂದ ಇವರು ಗುರುತಿಸಿಕೊಂಡಿದ್ದಾರೆ. ೧೯೯೧ ಡಿಸೆಂಬರ್‌ನಲ್ಲಿ ೪ (ಜಾತಿಯ ಪ್ರಭೇದ) ಹೆಸರುಗಳನ್ನು ಸಂವಿಧಾನದಲ್ಲಿ ಪುನಃ ಅಂಗೀಕರಿಸಿ ಪರಿಶಿಷ್ಟ ವರ್ಗಕ್ಕೆ ಸೇರಿಸಲಾಗಿದೆ.

ಬೇಟೆಯ ಮೂಲಕ ಬೇಡ ಎಂಬ ಜಾತಿ ನಿರ್ಮಾಣವಾಗಿದೆ. ಇಂದಿಗೂ ಬೇಟೆಗಾರರಿಗೆ ಬೇಡರೆಂದೇ ಕರೆಯುವರು. ಬೇಡರು ಯಾವುದಕ್ಕೂ ಅಂಜದವರು. ಬೇಟೆ, ಪಶುಪಾಲನೆ ಮತ್ತು ಕೃಷಿ ಚಟುವಟಿಕೆಗಳಲ್ಲಿ ನಿಪುಣರಾಗಿದ್ದರು. ಹೀಗೆ ರಾಜಪ್ರಭುತ್ವದ ಪದವಿಗಳವರೆಗೂ ಇವರು ಅರ್ಹರಾಗಿದ್ದರು. ಬಿಲ್ಲುಬಾಣ ಹಿಡಿದು ಬೇಟೆಯಾಡುವುದಷ್ಟೇ ಅಲ್ಲ. ಸೈನಿಕರಾಗಿ, ನಾಯಕರಾಗಿ, ತಳವಾರರಾಗಿ ಕೆಲಸ ನಿರ್ವಹಿಸಿದ್ದಾರೆ. ಕ್ಷತ್ರಿಯರು, ವೀರಯೋಧ ಜನಾಂಗದವರಾದ ಬೇಡರು ಹಿಂದೂಧರ್ಮದ ಚೌಕಟ್ಟಿನಲ್ಲಿಯೇ ಪ್ರತ್ಯೇಕ ಧರ್ಮವನ್ನು ಸೃಷ್ಟಿಸಿಕೊಂಡಿರುವರು.

ಪ್ರಾಚೀನ ಕಾಲದಲ್ಲಿ ಕಿರಾತರ ಬದುಕು ವೈವಿಧ್ಯಮಯವಾಗಿತ್ತು. ಆರ್ಯರ ಕಾಲದಲ್ಲಿ ಕಿರಾತರ ಹಣ್ಣು, ವನಸ್ಪತಿ, ಆಯುರ್ವೇದಗಳಲ್ಲಿ ಪರಿಣಿತಿ ಪಡೆದಿದ್ದರು. ಕಿರಾತರು, ಶಬರರು ಕ್ಷತ್ರಿಯರೆಂದು, ಶೂದ್ರರೆಂದು ಕರೆಸಿಕೊಂಡಿದ್ದು, ಅನಂತರದ ಹೊಸ ಬೆಳವಣಿಗೆಗೆ ಎನ್ನಬಹುದು. ಮಹಾಭಾರತದಲ್ಲಿ ಶೂದ್ರನಾದ ಬೇಡ, ರಾಮಾಯಣದಲ್ಲಿ, ಪರ್ಯಾಯ ದ್ವೀಪದೊಳಗೆ ದರೋಡೆಕೋರರು, ಹಸಿಮಾಂಸ ತಿನ್ನುವ ನಿಸರ್ಗ ಪ್ರಿಯರಾಗಿದ್ದರು. ಭಾರತದಲ್ಲಿ ಪಶ್ಚಿಮ ದಿಕ್ಕಿಗಿರುವ ಕಾಮರೂಪದಲ್ಲಿ ಪ್ರಬಲ ಅರಸ 'ಪ್ರಗ್ಜೊತಿ' ಕುರುಕ್ಷೇತ್ರ ಕಾಳಗದಲ್ಲಿ ಬೇಡರ ಸೈನ್ಯ ಪ್ರಬಲವಾಗಿ ಹೋರಾಡಲು ಕಾರಣನಾದನು. ಕ್ರಿ.ಶ.೭ನೇ ಶತಮಾನದಲ್ಲಿ ಹಿಮಾಲಯ ಪ್ರದೇಶದಿಂದ ವಿಸ್ತರಣೆಗೊಂಡು ಕಿರಾತರು, ಪಂಜಾಬ್, ವಿಂದ್ಯಾಪರ್ವತಗಳಲ್ಲಿ ವಸಾಹತು ನೆಲೆಗಳನ್ನು ಸ್ಥಾಪಿಸಿಕೊಂಡರು. ಕಿರಾತರೇ ವ್ಯಾಪಕವಾಗಿ ನೆಲೆಸಿದ್ದು ಕಿರಾತ ದೇಶದಲ್ಲಿ

ದುದ್‌ಕೋಶಿ ಮತ್ತು ಕರ್ಕಿನದಿ (ನೇಪಾಳ) ದಂಡೆ ಮೇಲೆ ಈ ಕಿರಾತ ದೇಶವಿತ್ತು. ಇಂಥದ್ದೇ ಗುಜರಾತಿನ ದೇವರಗುಡ್ಡದ ಹತ್ತಿರ ಕಿರಾತ ದೇಶವೊಂದಿತ್ತು.

ದಕ್ಷಿಣ ಭಾರತದ ಬೇಡರು ಬೇಟೆಗಾರರಾಗಿ ಕಂಡು ಬರುತ್ತಾರೆ. ನಾಯಕತನ ಶೂರ, ಸ್ವಾಭಿಮಾನಗಳಿಂದ ಕೂಡಿರುವ ಇವರನ್ನು ಕರ್ನಾಟಕದ ರಜಪೂತರೆಂದು ಕರೆಯುವರು. ಮಲೆಪರೆಂದು, ಗಿರಿಜನರೆಂದು, ಬೇಡರ ಪಡೆಗಳೆಂದು ಶಾಸನಗಳಲ್ಲಿ ಉಲ್ಲೇಖಿಸಲಾಗಿದೆ. ಕರ್ನಾಟಕದ ಮಟ್ಟಿಗೆ ಬೇಡರನ್ನು ಉಲ್ಲೇಖಿಸುವ ಮೊದಲ ಶಾಸನ ಗದ್ದೆಮನೆ ಶಾಸನ. ಕ್ರಿ.ಶ. ೭ನೇ ಶತಮಾನದಲ್ಲಿ ಬೇಡರ ಪ್ರತ್ಯೇಕ ರಾಜ್ಯಗಳಿದ್ದವೆಂದು ತಿಳಿದುಬರುತ್ತದೆ. ಫ್ರಾನ್ಸಿಸ್ ಬುಕಾನನ್ ಎಂಬ ವಿದೇಶಿ ವಿದ್ವಾಂಸ ಕದಂಬರು ಬೇಡರೆಂದು ವಿವರಿಸಿದ್ದಾನೆ. ಬೇಡರನ್ನು ಉಲ್ಲೇಖಿಸುವ ಶಾಸನಗಳಿರುವುದು ಹೆಚ್ಚಾಗಿ ಮಲೆನಾಡಿನಲ್ಲಿ, ನಾನಾ ಬಗೆಯಾಗಿ ಹೋರಾಡಿ, ಮಡಿದ ಸಾಹಸಗಾಥೆಗಳನ್ನು ಇವು ಉತ್ತರಿಸುತ್ತವೆ. ಶಾತವಾಹನರ ಕಾಲಕ್ಕೆ ತಳವಾರ ಎಂದು ಕರೆಸಿಕೊಂಡು ಹುದ್ದೆಯಲ್ಲಿದ್ದ ಬೇಡರು, ರಾಷ್ಟ್ರಕೂಟರ ಕಾಲಕ್ಕೆ 'ನಾಯಕ' ಪದವಿಗೆ ಬಡ್ತಿ ಪಡೆದಂತಾಯಿತು. ವಿಜಯನಗರ ಪೂರ್ವದಲ್ಲಿಯೇ ಮಹಾನಾಯಕಚಾರ್ಯ ಎಂಬ ಬಿರುದುಗಳನ್ನು ಗಳಿಸಿದ್ದರು.

ಕರ್ನಾಟಕದ ಬೇಡರ ಪರಿಚಯವೇ ಅನಗತ್ಯ! ಅಷ್ಟೊಂದು ಪ್ರಸಿದ್ಧಿ ಗಾಂಭೀರ್ಯತೆಯನ್ನು ತಾಳಿದೆ ಈ ಜನಾಂಗ. ಈ ನಾಡಿನ ಮೂಲನಿವಾಸಿಗಳಲ್ಲಿ ಬೇಡರು ಮೊದಲ ಪಂಕ್ತಿಯಲ್ಲಿ ನಿಲ್ಲುತ್ತಾರೆ. ಇವರು ಅಪ್ಪಟ ಬುಡಕಟ್ಟಿನ ಜನರೆಂಬುದು ವಾಸ್ತವ. ಗಂಗರ ೧ನೇ ಶಿವಮಾರನ ಕ್ರಿ.ಶ. ೭೧೩ ರ ಶಾಸನದಲ್ಲಿ ಕಿರಾತ ಹೆಣ್ಣು ನವಕಾಮನ ಆಸ್ಥಾನದಲ್ಲಿ ನರ್ತಿಕಿಯಾಗಿದ್ದಳಂತೆ. ಇವರ ಅಭ್ಯುದಯವನ್ನು ಸಹಿಸದ ಗಂಗ ಕೊಂಗುಣಿವರ್ಮ, ಧರ್ಮರಾಜ ಶಿವಮಾರನು ಕ್ರಿ.ಶ. ೯೭೩ರಲ್ಲಿ ಕಿರಾತರನ್ನು ಹತ್ತಿಕ್ಕಿದ್ದರು. ಬೇಡರು ತಮ್ಮ ಅಸ್ತಿತ್ವವನ್ನು ಬಿಗಿಗೊಳಿಸಿಕೊಂಡಿದ್ದು, ರಾಷ್ಟ್ರಕೂಟರ ಕಾಲದಲ್ಲಿ, ಗಂಗರ ಕಾಲದಲ್ಲಿ ಅಪಾರ ಸಂಖ್ಯೆಯಲ್ಲಿ ಸೈನ್ಯಕ್ಕೆ ಸೇರಿದ ಇವರು ಇಲ್ಲಿ ನಾಯಕರೆಂದು ಕರೆಸಿಕೊಂಡರು. ಕ್ರಿ.ಶ.೯೫೪ರ ಶಾಸನದಲ್ಲಿ ೩ನೇ ಕನ್ನರದೇವನು ಬನವಾಸಿ ೧೨,೦೦೦ ಜಿಲ್ಲೆಯಲ್ಲಿ ಬೇಡರು ಕಳ್ಳರಾಗಿ, ದಾರಿಗಳ್ಳರಾಗಿ ದನಗಳನ್ನು ಅಲ್ಲದೇ, ಬ್ರಾಹ್ಮಣರಿಗೆ ಉಪಟಳ ಕೊಡುತ್ತಿದ್ದರು. ಕ್ರಮೇಣ ನಾಡಗಾವುಂಡರಾಗಿ ಪ್ರಮುಖ ಹುದ್ದೆಗಳನ್ನು ಕೆಲವರೇ ಪಡೆದುಕೊಂಡರು.

ಬೇಡರು ಮೂಲತಃ ಬೇಟೆ ಮತ್ತು ಪಶುಪಾಲನಾ ವೃತ್ತಿಗಳಿಗೆ ಸೇರಿದವರೆಂಬುದಕ್ಕೆ ಇವರ ಮಹಿಳೆಯರು ಸಹ ಬೇಟೆ ಜೊತೆ ವಿವಿಧ ವೃತ್ತಿಗಳಲ್ಲಿ ತೊಡಗಿಕೊಂಡಿದ್ದು ಗಮನಾರ್ಹ. ಪಶುಪಾಲನೆಯಲ್ಲಿ ತೊಡಗಿದ ಬಗ್ಗೆ ಕ್ರಿ.ಶ. ೯೭೭ರ ಶಾಸನ ಬೆಳಕು ಚೆಲ್ಲುತ್ತದೆ. ಪಶ್ಚಿಮ ಚಾಲುಕ್ಯರ ಕಾಲದಲ್ಲಿ ರಟ್ಟರನ್ನು ಇತರ ವಿರೋಧಿಗಳನ್ನು ಹತ್ತಿಕ್ಕಿದ್ದು ಬೇಡರ ಸಾಧನೆಗೆ ಕಿರೀಟಪ್ರಾಯವೇ ಸರಿ. ಬೇಡರು ಯುದ್ಧದಲ್ಲಿ ತಂದುಕೊಟ್ಟ ಜಯಕ್ಕಾಗಿ ದಾನದತ್ತಿಗಳನ್ನು ಪಡೆದಿರುವುದು ಹೆಮ್ಮೆಯ ಸಂಗತಿ. ಹೀಗೆ ಉನ್ನತ ಹುದ್ದೆಗಳಿಗೆ ಅಲಂಕರಿಸುವಲ್ಲಿನ ಸ್ಪರ್ಧೆ ಅಗತ್ಯವೂ ಅನಿವಾರ್ಯವೂ ಆಗಿತ್ತು.

ಕ್ರಿ.ಶ.೧೧೧೭ರಲ್ಲಿ ಹೊಯ್ಸಳ ವಿಷ್ಣುವರ್ಧನ ಬಿಟ್ಟಿದೇವನು ಕಿರಾತ ಮುಖ್ಯಸ್ಥರನ್ನು, ಶಕ್ತಿಶಾಲಿ ವೀರರನ್ನು ತನ್ನ ಸಹಾಯಕ್ಕೆ ನೇಮಿಸಿಕೊಂಡಿದ್ದ. ಇದೇ ಸಂದರ್ಭದಲ್ಲಿ ಹೊಯ್ಸಳರಿಗೂ ಮತ್ತು ಸೇವುಣರಿಗೂ ಯುದ್ಧ ನಡೆದಾಗ ಬೇಡ ಸೈನಿಕರ ಶ್ರಮ ಹೊಯ್ಸಳರ ಪರವಾಗಿದ್ದುದು ನಿರ್ಣಾಯಕ ಅಂಶ. ವಿಷ್ಣುವರ್ಧನನ ನೆಚ್ಚಿನನಾದ ಬೇಟೆಯ ತಿಪ್ಪೆಯನಾಯಕನಿಗೆ ಸೋವೆನಾಯಕಿತಿ, ಮಾಚವೆನಾಯಕಿತಿ ಎಂಬ ಹೆಂಡತಿಯರಿದ್ದರು. ಅಂದು ವೃತ್ತಿಗಳಲ್ಲಿ, ರಾಜಪ್ರಭುತ್ವದಲ್ಲಿ ಹೊಂದಾಣಿಕೆಯಿದ್ದು, ವಿವಾಹಗಳು ಸಾಮಾನ್ಯವಾದ ನಿರ್ಧಾರದೊಂದಿಗೆ ನಡೆಯುತ್ತಿದ್ದವು.

ವಿಜಯನಗರ ಕಾಲದಲ್ಲಿ ಮುಕ್ಕಾಲು ಭಾಗ ಸೈನಿಕರು, ಪ್ರಜೆಗಳು, ಸೇವಕರು ಬೇಡರೇ ಆಗಿದ್ದರೆಂಬ ಹೆಗ್ಗಳಿಕೆ ಮಾತು ಸುಳ್ಳಲ್ಲ. ಇವರಿಗೂ ಪೂರ್ವದಲ್ಲಿ ಕಮ್ಮಟದುರ್ಗದ ಮುಮ್ಮಡಿ ಸಿಂಗೇಯನಾಯಕ, ಕಂಪಿಲರಾಯ ಮತ್ತು ಕುಮಾರರಾಮರು ಪೂವಾಲಿ ಬೆಡಗಿನ ನಾಯಕವಂಶಸ್ಥರಾಗಿದ್ದರು. ಕುಮಾರರಾಮನ ತಾಯಿ ಹರಿಯಾಲದೇವಿ ಗುಜ್ಜಲ ವಂಶದವಳು. ಚಿಕ್ಕರಾಜ್ಯವಾದರೂ ಕುಮ್ಮಟದುರ್ಗ

ಇತಿಹಾಸದಲ್ಲಿ ಅಗ್ರಸ್ಥಾನ ಪಡೆದಿದೆ. ಇವರ ಭಾವನಾದ ಸಂಗಮನ ಮಕ್ಕಳೇ ಹರಿಹರ ಮತ್ತು ಬುಕ್ಕ. ಇವರು ವಿಜಯನಗರ ಸಾಮ್ರಾಜ್ಯಕ್ಕೆ ಅಡಿಗಲ್ಲು ಹಾಕಿದರು. ಪ್ರಸಿದ್ಧ ಇತಿಹಾಸಕಾರರಾದ ಡಾ.ಭಂಡಾರಕರ್, ಡಾ.ವಿ.ಎಸ್. ಸ್ಮಿತ್ ಮತ್ತು ಪಂಡಿತ ರಾಮಕೃಷ್ಣ ಶಾಸ್ತ್ರಿ ಮೊದಲಾದವರು ಅಭಿಪ್ರಾಯಪಡುವಂತೆ: 'ಹಕ್ಕ – ಬುಕ್ಕರು ಪ್ರಾತಪರುದ್ರನ ಸೇನೆಯಲ್ಲಿದ್ದರು. ಅವನು ಪರಾಭವಗೊಂಡಾಗ ಕಂಪಿಲಿಗೆ ಹೋಗಿ ಸೇರಿಕೊಂಡರೆಂದೂ, ಕಂಪಿಲರಾಯನು ಬೇಡರ ಜಾತಿಗೆ ಸೇರಿದವನೆಂದೂ ಆದ್ದರಿಂದ ಹಕ್ಕಬುಕ್ಕರು ಕೂಡ ಕಂಪಿಲರಾಯನ ಜಾತಿಯವರೇ ಆಗಿದ್ದರೆಂಬ ಸಂಗತಿ ಗಮನಾರ್ಹವಾದುದು. ಹೀಗಾಗಿ ವಿಜಯನಗರದ ಸ್ಥಾಪನೆಗೆ ಬೇಡರೇ ಕಾರಣರಾದುದನ್ನು ಅಲ್ಲಗಳೆಯುವಂತಿಲ್ಲ. ವಿಜಯನಗರ ಸೈನ್ಯದಲ್ಲಿ ಬಹುಸಂಖ್ಯೆಯ ಬೇಡರ ಕಾಲಾಳು ಪಡೆಯಿತ್ತು. ಅಮರನಾಯಕರೆಂದು ಅನೇಕ ಪ್ರಯೋಜನಗಳನ್ನು ಇವರು ಪಡೆದುಕೊಂಡರು. ವಿಜಯನಗರದ ಅರಸರು ಮುಸಲ್ಮಾನರ ವಿರುದ್ಧ ಹೋರಾಡಲು ಬೇಡಪಡೆಯವರನ್ನು ಆಶ್ರಯಿಸಿದ್ದರು. ಬಿ.ಎಲ್.ರೈಸ್‌ರು ತಮ್ಮ ಗ್ಯಾಸೆಟಿಯರ್‌ನಲ್ಲಿ ತಿಳಿಸಿರುವಂತೆ 'ತಾಳಿಕೋಟೆ ಯುದ್ಧದಲ್ಲಿ ಬೇಡ ಜನಾಂಗದ ೭೨ ಸಂಸ್ಥಾನದ ನಾಯಕರು ಶಕ್ತಿ ಸಾಹಸ ತೋರಿಸಿ ಕಷ್ಟಕ್ಕೀಡಾದುದು ಚರಿತ್ರೆ ಪುಟಗಳಲ್ಲಿ ರಾರಾಜಿಸುತ್ತದೆ. ರಕ್ಕಸಗಿ – ತಂಗಡಗಿ ಯುದ್ಧ ೧೫೬೫ ಜನವರಿ ೨೩ರಂದು ನಡೆದಾಗ ಸು.೪೦ ಸಾವಿರ ಬೇಡರ ಪಡೆ ಹತವಾಯಿತೆಂದು ವಿದೇಶಿ ಪ್ರವಾಸಿ (ಪಿರಿಸ್ತಾ) ಹೇಳಿದ್ದಾನೆ. ಈ ಸಂಗತಿಯನ್ನು ಬಳ್ಳಾರಿ ಜಿಲ್ಲೆಯ ಹಿರಿಯ ತಲೆಮಾರಿನ (ಬೇಡ – ನಾಯಕ) ವ್ಯಕ್ತಿಗಳು ನಿಜವೆಂದು ಒಪ್ಪುತ್ತಾರೆ. ಆದ್ದರಿಂದಲೇ ನಮ್ಮ ಹೆಣ್ಣು ಮಕ್ಕಳು ಗಂಡನಿಲ್ಲದ್ದರಿಂದ ದೇವದಾಸಿಯವರಾದರೆಂದು ಮರುಕಪಡುತ್ತಾರೆ. ಬೇಡರು ತೋರಿದ ಸಹಾಯ, ದಂಡನಾಯಕತ್ವಗಳಿಗೆ ವಿಜಯನಗರದ ಅರಸ ಸದಾಶಿವರಾಯ ೧೫೬೭ರಲ್ಲಿ 'ಬೇಡರಿಗೆ ಸ್ವಾಯತ್ತತೆಯನ್ನು ದಯೆಪಾಲಿಸಿದ್ದು' ಸ್ಮರಣೀಯ. ಅದೇ ವರ್ಷ ರಾಮರಾಯನ ತಮ್ಮನ್ನು ಪ್ರಸಿದ್ಧ ರಿಜೆಂಟನು ಆಗಿದ್ದ ತಿರುಮಲರಾಯ ರಕ್ಕಸಗಿ ತಂಗಡಗಿಯಲ್ಲಿ ಬೇಡರನ್ನು ತೊಡಗಿಸಿಕೊಂಡಿದ್ದಕ್ಕೆ ಬೇಡರ ಮುಖ್ಯಸ್ಥ ಕಾಮಗೇತಿ ಮದಕೇರಿ ನಾಯಕನಿಗೆ ಚಿತ್ರದುರ್ಗ, ಹೊಳಲ್ಕೆರೆ ಇತರೆ ಸ್ಥಳಗಳನ್ನು ಅಮರಮಾಗಣಿಯಾಗಿ ಬಿಟ್ಟುಕೊಟ್ಟ. ಇವನ ತಮ್ಮ ಗುಲ್ಲಿಯಪ್ಪನಾಯಕನಿಗೂ ಸಹ ಉಂಬಳಿ ಕೊಡಲಾಯಿತು.

ವಿಜಯನಗರದಲ್ಲಿ ಸೈನಿಕರಾಗಿ, ದಂಡುಹೋದ ಸ್ಥಳಗಳಲ್ಲಿ ವಸತಿ ಹೂಡುತ್ತಾ, ತಂಗಿರುತ್ತಿದ್ದ ಸ್ಥಳಗಳಲ್ಲಿ ನಾಯಕರು, ಸೈನಿಕರು ಕ್ರಮೇಣ ಪಾಳೆಯಗಾರರಾದರು. ೧೫ – ೧೬ನೇ ಶತಮಾನದಲ್ಲಿ ಇವರು ಏಳಿಗೆಯಾದರೂ ೧೭ನೇ ಶತಮಾನದ ಶಾಸನಗಳಲ್ಲಿ ಪಾಳೆಯಗಾರ ಪದದ ಉಲ್ಲೇಖವಿದೆ. ಪಾಳೆಯಗಾರರು ಆಕಾಲಕ್ಕೆ ರಾಜಪ್ರಭುತ್ವ ಪಡೆದ ಕೆಳದರ್ಜೆಯ (ವರ್ಗ) ಜನರು. ಸರಿಯಾದ ಸ್ಥಾನಮಾನ ಸಿಗದ ಪರಾಕ್ರಮಿಗಳು ಹೋರಾಟದ ಮೂಲಕ ಪ್ರಭುತ್ವ ಪಡೆದರು. ಇವರಿಗೆ ಇಂದು ನೀಚಾರ್ಥವಾಗಿ ಕರೆಯುತ್ತಿರುವುದು ವಿಪರ್ಯಾಸ. ಬೇಡರೇ ಮೊದಲ ಪಾಳೆಯಗಾರರಾದರೂ ಅನಂತರದಲ್ಲಿ ಇತರ ಜನಾಂಗದವರು ಈ ರೀತಿ ಪ್ರಭುತ್ವ ಹೊಂದಿದರು. ಇಂಥ ಪಾಳೆಯಗಾರಿಕೆಯಿಂದ ಅತಿ ದೂರದಲ್ಲಿದ್ದವರು ಮ್ಯಾಸಬೇಡರು. ಇವರಿಗೆ ರಾಜಪ್ರಭುತ್ವಕ್ಕಿಂತ ತಮ್ಮ ಸಂಸ್ಕೃತಿ, ಸಂಪ್ರದಾಯ, ನಾಗರಿಕತೆ ಹೆಚ್ಚು ಮಹತ್ವವಾಗಿ ಕಾಣಿಸಿತು. ಸಾಂಸ್ಕೃತಿಕ ರಾಜಪ್ರಭುತ್ವಕ್ಕಿಂತ ತಮ್ಮ ಸಂಸ್ಕೃತಿ, ಸಂಪ್ರದಾಯ, ನಾಗರಿಕತೆ ಹೆಚ್ಚು ಮಹತ್ವವಾಗಿ ಕಾಣಿಸಿತು. ಸಾಂಸ್ಕೃತಿಕ ರಾಜಪ್ರಭುತ್ವವನ್ನು ನಾಯಕನಹಟ್ಟಿಯಲ್ಲಿ ಸ್ಥಾಪಿಸಿದರು. ನಾಯಕನಹಟ್ಟಿ ಸಮೀಪದ ಹೊಸಗುಡ್ಡ (ರಾಮದುರ್ಗ) ಈ ಹಿನ್ನೆಲೆಯಲ್ಲಿ ಮಹತ್ವಾವಾದುದು.

ನಾಗರಿಕತೆಯೊಂದಿಗೆ ರಾಜಕೀಯ ನಿಪುಣತೆ ಪಡೆದ ಬೇಡರು ಅಲ್ಲಲ್ಲಿ ಪಾಳೆಯಪಟ್ಟುಗಳನ್ನು ಸ್ಥಾಪಿಸಿಕೊಂಡರು. ಅವುಗಳೆಂದರೆ; ಚಿತ್ರದುರ್ಗ, ಗುಡೆಕೋಟೆ, ಜರಿಮಲೆ, ರಾಯದುರ್ಗ, ಮೊಳಕಾಲ್ಮೂರು, ರತ್ನಗಿರಿ, ನಿಡಗಲ್ಲು, ಶಿರಾ, ಬಳ್ಳಾರಿ, ಪೆನುಗೊಂಡ, ಮದಗಮಾಸೂರು, ಇಕ್ಕೇರಿ, ಸ್ವಾದಿ, ಚಂದಾವರ, ಹರ್ತಿಕೋಟೆ, ಹಾಗಲವಾಡಿ, ವಾಗಿನಗೇರಾ, ಸುರಪುರ, ಬಿದನೂರು, ಮುಂಡಿಕೋಟೆ, ಮಟ್ಟಿ, ಕಡಪೆ, ತಲಕೇರಿ (ಚೇರಿ), ಬೆಳಗುತ್ತಿ, ಕುಮ್ಮಟದುರ್ಗ, ಆನೆಗುಂದಿ, ಮಂಗಳೂರು, ಬಸವಾಪಟ್ಟಣ, ಬೇಲೂರು, ಹಲಲೆಕೋಟೆ, ಬಾಣವಾರ, ಚಿಕ್ಕನಾಯಕನಳ್ಳಿ, ಕೊಲ್ಲಾಪುರ, ಬಂಕಾಪುರ, ನಂದೀಯಾಳ, ದಾವನಹಳ್ಳಿ, ಕಿತ್ತೂರು, ತಂಜಾವೂರು, ಮಧುರೇ, ಬಾದಾಮಿ, ದೊರಮಲೆ, ಗೋನೂರು, ನನ್ನಿವಾಳ, ಮಿಡಿಗೇಶಿ, ಪಾವಗಡ, ಶಿವರ, ಐಮಂಗಲ, ಪುರವರ, ಬಾಗೂರು, ಗುತ್ತಿ, ಚೆನ್ನಪಟ್ಟಣ, ಮಲೇದುರ್ಗ, ಕನಕಗಿರಿ, ಗುರುಗುಂಟಾ ಲೇಪಾಕ್ಷಿ, ಆದವಾನಿ, ಚಂದ್ರಗಿರಿ, ದೊಡ್ಡೇರಿ, ತಲಕಾಡು, ರಾಯಚೂರು, ರಾಣ್ಯ, ಹದಿನಾಡು, ಯಳಂದೂರು,

ಕಾರುಗನಹಳ್ಳಿ, ಹುಳಿಯಾರು, ಕೊರಟಗಿ, ಹೊನ್ನುಡುಕಿ, ಹಂಪನಹಳ್ಳಿ, ಕರಜಿಗಿ, ಹುಚ್ಚಂಗಿದುರ್ಗ, ಮತ್ತೋಡು ಮೊದಲಾದವುಗಳನ್ನು ಹೆಸರಿಸಬಹುದು.

ಕರ್ನಾಟಕದ ಉತ್ತರ ಭಾಗದಲ್ಲಿ ವಾಗಿನಗೇರಾದ ಬೇಡರು ಮೊಘಲರ ಔರಂಗಜೇಬನಿಂದ ಅನೇಕ ತೊಂದರೆಗಳನ್ನು ಎದುರಿಸಬೇಕಾಯಿತು. ಇವರು ಮೊಘಲ, ಮರಾಠ ಮತ್ತು ಮುಸ್ಲಿಂ ಅರಸರನ್ನು ಎದುರಿಸಿದ್ದು, ಅನಿವಾರ್ಯವಾಗಿ ಅವರ ಅಧೀನ ಮತ್ತು ಹಿಡಿತದಲ್ಲಿದ್ದುದು ದುರದೃಷ್ಟಕರ. ಔರಂಗಜೇಬನು ಬೇಡರ ಸಾಹಸ, ಧೈರ್ಯಗಳನ್ನು ಒಪ್ಪಿಕೊಂಡು ಮನಸಾರೆ ಹೊಗಳಿರುತ್ತಾನೆ.

ಮೈಸೂರು ಪ್ರದೇಶದಲ್ಲಿ ಹೈದರಾಲಿ ಮತ್ತು ಟಿಪ್ಪುಸುಲ್ತಾನರ ಆಳ್ವಿಕೆ ಪಾಳೆಯಗಾರರಿಗೆ ನುಂಗಲಾರದ ತುತ್ತಾಗಿತ್ತು. ವಿದೇಶಿಯರನ್ನು ಹಿಮ್ಮೆಟ್ಟಿಸಲು ಸ್ಥಳೀಯರನ್ನು ಒಂದು ಗೂಡಿಸುವಲ್ಲಿ ವಿಫಲನಾದ ಟಿಪ್ಪು ಸ್ಥಳೀಯರನ್ನು ಸೋಲಿಸುವುದರೊಂದಿಗೆ ತನ್ನ ಪರಾಕ್ರಮವನ್ನು ಹೆಚ್ಚಿಸಿಕೊಂಡರೂ ವಿದೇಶಿಯರನ್ನು ಹೊರದೂಡುವಲ್ಲಿ ಇಂಥವರ ಅಗತ್ಯವನ್ನು ಗಾಳಿಗೆ ತೂರಿದ್ದು, ಅವನ ಅವಸಾನಕ್ಕೆ ಕಾರಣವಾಯಿತು. ಇದಲ್ಲದೆ, ಕರ್ನಾಟಕದ ಕೆಲವು ಭಾಗಗಳನ್ನು ತನ್ನ ಅಧೀನಕ್ಕೆ ತೆಗೆದುಕೊಂಡ ಹೈದರನು ಅಸಂಖ್ಯಾತ ಬೇಡರನ್ನು ಇಸ್ಲಾಂಗೆ ಪರಿವರ್ತಿಸಿದನಂತೆ. ಇನ್ನೊಂದು ದುರಂತವೆಂದರೆ; ಶ್ರೀರಂಗ ಪಟ್ಟಣದ ಯುದ್ಧದಲ್ಲಿ ೧೦,೦೦೦ ಸಾವಿರ ಬೇಡರನ್ನು ಬಂಧಿಸಿದ್ದು, ಇವು ಬೇಡರ ಏಳಿಗೆಗೆ ಮುಳ್ಳಿನ ಹಾದಿಯಾಗಲು ಕಾರಣವಾದವು.

ಇಂಥಾ ನಾನಾ ಸಂಕಷ್ಟಗಳ ನಡುವೆ ಬೇಡರು ಪ್ರಜಾಪಾಲನೆ ಮಾಡಿದ್ದು, ಶ್ಲಾಘನೀಯ. ಹೀಗೆ ೧೭ ಮತ್ತು ೧೮ನೇ ಶತಮಾಣದಲ್ಲಿ ಬೇಡರು ಕರ್ನಾಟಕದ ರಾಜಕೀಯ ಕ್ಷೇತ್ರದಲ್ಲಿ ಪ್ರಬಲಶಾಲಿಗಳಾಗಿದ್ದರು. ಸ್ವಾಮಿನಿಷ್ಠೆಗೆ ಹೆಸರಾದ ಬೇಡರು ನಿಸ್ವಾರ್ಥದಿಂದ ಗೆಲುವು ತಂದುಕೊಟ್ಟ ಉದಾಹರಣೆಗಳಿವೆ. ಈ ಸಾಹಸಕ್ಕೂ ಏನೋ ವಿಲಿಯಂ ಸ್ಮಿತ್ ಎಂಬ ಇತಿಹಾಸಕಾರನು 'ಜಗತ್ತಿನಲ್ಲಿ ಬೇಡರಷ್ಟು ಶೂರರು ಸಿಗಬಹುದು. ಆದರೆ ಬೇಡರಿಗಿಂತ ಶೂರ ದೊರೆಯಲಾರರು' ಎಂದಿದ್ದಾನೆ.

ನಾಲ್ಕನೇ ಮೈಸೂರು (ಆಂಗ್ಲೋ) ಯುದ್ಧದಲ್ಲಿ ಬ್ರಿಟಿಷರ ಮೈತ್ರಿಕೂಟದಿಂದ ಹತನಾಗುವ ಮುನ್ನ ಟಿಪ್ಪುಸುಲ್ತಾನ, ತನ್ನ ವಾರಸುದಾರಿಕೆಯನ್ನು ವಹಿಸಿಕೊಳ್ಳಲು ಅರ್ಹರಾದ ಇಬ್ಬರು ಮಕ್ಕಳನ್ನು ಒತ್ತೆಯಿಟ್ಟಿದ್ದು, ಈ ನಾಡಿನ ರಕ್ಷಣೆಗಾಗಿ ವಿದೇಶಿಗಳೊಂದಿಗಿನ ಮೈತ್ರಿ, ನೆಪೋಲಿಯನ್‌ನೊಂದಿಗೆ ಪತ್ರ ಸಂಪರ್ಕ ಸ್ನೇಹಿತ ಒಪ್ಪಂದಗಳಿಸಿದರೂ ಸೋಲು ಅನಿವಾರ್ಯವಾಯಿತು. ಬ್ರಿಟಿಷರನ್ನು ಕೊನೆಯ ಎದುರಿಸುವುದು ದುಸ್ತರವಾದ ಕಾರ್ಯವಾಗಿತ್ತು. ಏಕೆಂದರೆ ನೆರೆಹೊರೆಯವರೆಲ್ಲಾ ಬ್ರಿಟಿಷರೊಂದಿಗೆ ಒಪ್ಪಂದ ಮಾಡಿಕೊಂಡಿದ್ದರು; ಮರಾಠರು, ಹೈದರಾಬಾದಿನ ನಿಜಾಮ ಸ್ಥಳೀಯ ಕೆಲ ಸಂಸ್ಥಾನಗಳು. ಟಿಪ್ಪುವಿನ ನಂತರ ಅವನ ಆಳ್ವಿಕೆಯಲ್ಲಿದ್ದ ಪ್ರದೇಶವನ್ನು ಇವರು ಹಂಚಿಕೊಂಡರು. ಬಳ್ಳಾರಿ ಪ್ರದೇಶವನ್ನು ಹೈದರಾಬಾದ್ ನಿಜಾಮನಿಗೆ, ಉತ್ತರ ಕರ್ನಾಟಕದ ಭಾಗವನ್ನು ಮರಾಠರಿಗೆ ಹೀಗೆ ಹಂಚಿದರು. ಬಳ್ಳಾರಿ ಪ್ರದೇಶದಲ್ಲಿ ಪರಿಸ್ಥಿತಿ ಕುರಿತು ನಿಜಾಮ ಸಹಾಯಕ ಸೈನ್ಯ ಪದ್ಧತಿಗೆ ಸಹಿ ಹಾಕಿ ಕರ್ನೂಲು, ಕಡಪಾ, ಅನಂತಪುರ ಮತ್ತು ಬಳ್ಳಾರಿ ಜಿಲ್ಲೆಗಳನ್ನು ದತ್ತಿ ಮಂಡಲವೆಂದು ಬ್ರಿಟಿಷರಿಗೆ ಬಿಟ್ಟುಕೊಟ್ಟ ಅಧಿಪತ್ಯಕ್ಕೆ ಸೇರಿದವು. ಉಳಿದ ಭಾಗಗಳು ಬಾಂಬೆ ಕರ್ನಾಟಕ, ಮೈಸೂರು ಸಂಸ್ಥಾನ ಸಂಡೂರು ಸಂಸ್ಥಾನ, ಕೊಡಗು ಸಂಸ್ಥಾನಗಳಿದ್ದದನು ಗಮನಿಸಬಹುದು. ಹೈದರಾಬಾದ್ ಕರ್ನಾಟಕದ ವ್ಯಾಪ್ತಿಗೆ ಬೀದರ್, ಗುಲ್ಬರ್ಗಾ, ರಾಯಚೂರು ಮತ್ತು ಕೊಪ್ಪಳ ಜಿಲ್ಲೆ ಬರುತ್ತವೆ. ಹೀಗೆ ಹರಿದು ಹಂಚಿಹೋದ ಕರ್ನಾಟಕದಲ್ಲಿ ಬ್ರಿಟಿಷರ ಆಳ್ವಿಕೆ ರಾರಾಜಿಸುತ್ತಿತ್ತು. ಸಣ್ಣಪುಟ್ಟ ಸಂಸ್ಥಾನಗಳು ಇವರ ಅಧೀನದಲ್ಲಿ (ಒಬ್ಬ ಏಜೆಂಟ್‌ನಿದ್ದ) ಆಳ್ವಿಕೆ ನಡೆಸುವ ಪರಿಸ್ಥಿತಿ ಉಂಟಾಗಿದ್ದಿತು.

ಮದ್ರಾಸ್ ಅಧಿಪತ್ಯಕ್ಕೆ ಸೇರಿದ ಬಳ್ಳಾರಿ ಪ್ರದೇಶದಲ್ಲಿ ಆಡಳಿತ ಕಾರ್ಯ ಚುರುಕುಗೊಂಡವು. ಮೊದಲ ಕಲೆಕ್ಟರ್‌ನಾಗಿ ಸರ್. ಥಾಮಸ್‌ಮನ್ರೋ ೧೮೦೦ರಲ್ಲಿ ಆಡಳಿತ ಪ್ರಾರಂಭಿಸುತ್ತಾನೆ. ಇವನು ೭ ವರ್ಷ ಕಾಲ ಕಲೆಕ್ಟರ್‌ನಾಗಿ, ನಂತರ ಗವರ್ನರ್ ಜನರಲ್‌ನಾಗಿ ಆಡಳಿತ ನಡೆಸುವಾಗ ಅನೇಕ ಕಾರ್ಯಯೋಜನೆ, ಕಾಯ್ದೆ ಕಾನೂನು ಜಾರಿಗೆ ತಂದ. ಇವನು ಮಾಡಿದ ಮೊದಲ ಕೆಲಸವೆಂದರೆ ಸು.೮೦ ಮಂದಿ ಪಾಳೆಯಗಾರರಿಂದ ಕಪ್ಪು – ಕಾಣಿಕೆ ಒಪ್ಪಿಸಿಕೊಂಡನಲ್ಲದೆ, ಹಂತ ಹಂತವಾಗಿ ಅವರನನು ಮಟ್ಟಹಾಕಲು ಹವಣಿಸಿ

ಯಶಸ್ವಿಯಾದನು. ಇವನ ಕ್ರೂರ ನೀತಿಗಳ ವಿರುದ್ಧ ೧೮೦೩ರಲ್ಲಿ ಪಾಳೆಯಗಾರ ವಂಶಸ್ಥರು ಬಳ್ಳಾರಿಯಲ್ಲಿ ದಂಗೆ ನಡೆಸುತ್ತಾರೆ. ಇದರಿಂದ ಕಂಗೆಟ್ಟ ಮನ್ರೋ ಪಾಳೆಯಗಾರರ ವಾರಸುದಾರರನ್ನು ಸೈನಿಕ, ತಳವಾರ, ನೀರಗಂಟಿ, ಗೌಡ, ದಳವಾಯಿ, ಪಟೇಲ ಇತರ ಸಮಾಧಾನಕರ ಹುದ್ದೆಗಳಿಗೆ ನೇಮಿಸುವಲ್ಲಿ ವಿಶ್ವಾಸಕ್ಕೆ ಪಾತ್ರನಾದರೂ, ತಮ್ಮ ಪ್ರಭುತ್ವಗಳನ್ನು ಕಳೆದುಕೊಂಡ ಪಾಳೆಯಗಾರರ ಹೃದಯಗಳನ್ನು ಸಮಾಧಾನಪಡಿಸುವಲ್ಲಿ ಸೋತ.

ಬ್ರಿಟಿಷರ ಆಳ್ವಿಕೆ ದಿನದಿಂದ ದಿನಕ್ಕೆ ವಿಸ್ತೃತಗೊಳ್ಳುತ್ತಿದ್ದಂತೆ ತಮ್ಮ ಅಸ್ತಿತ್ವದ ಪ್ರಶ್ನೆ ಎದುರಾದುದು ಬೇಡರಿಗೆ ಎಂದರೆ ಅತಿಶಯೋಕ್ತಿಯಾಗಲಾರದು. ಇವರು ಶಸ್ತ್ರಾಸ್ತ್ರಗಳನ್ನು ಹೊಂದಿರುವ ಜನರಿಂದ ನಮಗೆ ಅಪಾಯ ತಪ್ಪಿದ್ದಲ್ಲವೆಂದು ಖಚಿತಪಡಿಸಿಕೊಂಡರು. ಹೀಗೆ ಸಂಭವಿಸಬಹುದಾದ ಘಟನೆಗಳನ್ನು ತಪ್ಪಿಸಲು (ತಮ್ಮ ಮೇಲೆ) ೧೮೫೭ರಲ್ಲಿ ನಿಶ್ಯಸ್ತ್ರಿಕರಣ ಕಾಯ್ದೆಯನ್ನು ಜಾರಿಗೆ ತಂದರು. ಇದನ್ನು ಮೊಟ್ಟಮೊದಲು ವಿರೋಧಿಸಿದವರು. ಕರ್ನಾಟಕದ ಬೇಡರು. ಹಿರಿಮೆಯನ್ನು ಹೊಂದಿರುವ, ನಾಡ ಪ್ರೇಮವನ್ನು ತೋರ್ಪಡಿಸುವ ಕಿಚ್ಚಿನ ಬೇಡರಿಗೆ ಇದು ನುಂಗಲಾರದ ತುತ್ತಾಯಿತು. ಆಧುನಿಕ ಗಾಳಿಗೆ ಸಿಲುಕಿದ ಮುಧೋಳ ತಾಲೂಕಿನ ಹಲಗಲಿ ಬೇಡರು ಬ್ರಿಟಿಷರ ಈ ಕಾಯ್ದೆಯನ್ನು ವಿರೋಧಿಸಿ ದಂಗೆ ಎದ್ದು ಹೋರಾಟ ನಡೆಸಿದರು. ಇದು ಭಾರತದಾದ್ಯಂತ ಸುದ್ದಿ ಮಾಡಿತು. ಅನೇಕ ಬೇಡರ ವೀರಮಣಿಗಳು ಈ ಸ್ವಾತಂತ್ರ್ಯ ಹೋರಾಟದ ಮೊದಲ ಹಂತದಲ್ಲಿ ಪಾಲ್ಗೊಂಡಿದ್ದು, ಅವಿಸ್ಮರಣೀಯ. ಇವರು ಆತ್ಮರಕ್ಷಣೆಗಿಂತ ದೇಶ ರಕ್ಷಣೆಗೆ ಕೊಟ್ಟಿದ್ದ ಮಹತ್ವದಿಂದ ಇಂದಿಗೂ ಹಲಗಲಿ ಬೇಡರೆಂದರೆ ಭಾರತದ ಬುಡಕಟ್ಟು ಜನರ ಹೋರಾಟಗಳಲ್ಲಿ ಇವರನ್ನು ಅಗ್ರಪಂಕ್ತಿಯಲ್ಲಿಟ್ಟು ನೋಡುತ್ತಾರೆ. ಇವರಲ್ಲಿ ಅನೇಕರು ಮಡಿದು ಹುತಾತ್ಮರಾದರು. ಜಡಿಗ್ಯಾ, ಬ್ಯಾಳರು (ವೀರಮರಣದ ಸ್ಮಾರಕವಿದೆ) ಇವರಲ್ಲಿ ಪ್ರಾರ್ಥಃ ಸ್ಮರಣೀಯರು.

ಹಲಗಲಿಯ ಬೇಡರಂತೆ ಅದೇ ಪರಿಸರಕ್ಕೆ ಹೊಂದಿಕೊಂಡ ಸಿಂಧೂರಿನ ಬೇಡರ ಪಾತ್ರವು ಅಮೋಘವಾದುದು. ಇಲ್ಲಿ ವೀರಸಿಂಧೂರ ಲಕ್ಷ್ಮಣನು (ಬೀಳಗಿ ತಾ, ಬಾಗಲಕೋಟೆ ಜಿ) ಸಹಾ ಬ್ರಿಟಿಷರ ವಿರುದ್ಧ ಹೋರಾಟ ಮಾಡಿದ್ದು, ಗಮನಾರ್ಹ. ಇವನು ಬ್ರಿಟಿಷರನ್ನು ಹೊರದೂಡಲು ನಡೆಸಿದ ಚಟುವಟಿಕೆಗಳು ಜನಮೆಚ್ಚುವಂಥವು. ಆದ್ದರಿಂದಲೇ ಇವನು ಬ್ರಿಟಿಷರಿಗೆ ಸಿಂಹಸ್ವಪ್ನವಾಗಿದ್ದನು. ಕೊನೆಯಲ್ಲಿ ಇವನನ್ನು ಸ್ಥಳೀಯರೇ ಬ್ರಿಟಿಷರಿಗೆ ಹಿಡಿದುಕೊಟ್ಟು, ಇವನು ದುರಂತ ಮರಣ ಹೊಂದಲು ಕಾರಣರಾದರು. ಸಿಂಧೂರ ಲಕ್ಷ್ಮಣನಂಥ ಏಕಾಂಗಿವೀರ ಈ ನಾಡಿನ, ದೇಶದ ಪ್ರೇಮಕ್ಕಾಗಿ ಆಂಗ್ಲರನ್ನು ಹೊರಗಟ್ಟಲು ನಡೆಸಿದ ಪ್ರಯತ್ನಗಳು ವಿಫಲವಾದರೂ ಅವನ ಸಾಧನೆ ಪ್ರಶಂಸನೀಯವಾದುದು. ಇವರ ಬಗ್ಗೆ ಲಾವಣಿಗಳು ಪ್ರಚಲಿತದಲ್ಲಿವೆ.

ಸ್ವಾತಂತ್ರ್ಯ ಹೋರಾಟ ಮತ್ತು ಕರ್ನಾಟಕದ ಏಕೀಕರಣದಲ್ಲಿ ಬೇಡರ ಪಾತ್ರವನ್ನು ಗೌಣಮಾಡುವಂತಿಲ್ಲ. ಚಿತ್ರದುರ್ಗ, ಬಳ್ಳಾರಿ, ತುಮಕೂರು, ದಾವಣಗೆರೆ, ಕೊಪ್ಪಳ, ಧಾರವಾಡ, ಗದಗ ಮೊದಲಾದ ಜಿಲ್ಲೆಗಳಲ್ಲಿ ಅನೇಕ ಜನ ಸ್ವಾತಂತ್ರ್ಯ ಹೋರಾಟಗಾರರನ್ನು ಇಲ್ಲಿ ಸ್ಮರಿಸುವುದು ಅಗತ್ಯ. ಸ್ವಾತಂತ್ರ್ಯ ನಂತರದಲ್ಲಿ ಬೇಡರು ಅಭಿವೃದ್ಧಿ ಪಥಕ್ಕೆ ಕಾಲಿಟ್ಟರು. ಪರಿಶಿಷ್ಟ ವರ್ಗಕ್ಕೆ ಸೇರಿಸಿದ ತರುವಾಯ ವಿವಿಧ ಕ್ಷೇತ್ರಗಳಲ್ಲಿ (ಮೀಸಲಾತಿ) ಮುನ್ನಡೆಗೆ ಕಾರಣವಾಯಿತು. ರಾಜಪ್ರಭುತ್ವ ಮರೆಯಾಗಿ ಪ್ರಜಾಪ್ರಭುತ್ವ ಬಂದಾಗ ಹೊ.ಚಿ.ಬೋರಯ್ಯ, ದಿ.ಎ. ಭೀಮಪ್ಪ ನಾಯಕ, ತಿಪ್ಪೇಸ್ವಾಮಿ ಮೊದಲಾದವರು ಆಡಳಿತ ನಡೆಸಿರುತ್ತಾರೆ.

ಬೇಡರ ಸಂಸ್ಕೃತಿಯನ್ನು ಅಧ್ಯಯನ ಮಾಡುವಾಗ ಕರ್ನಾಟಕದಲ್ಲಿರುವ ಎಲ್ಲಾ ಬೇಡರ ಸ್ಥಿತಿಗತಿಗಳು ಏಕರೀತಿಯವೆಂದು ಭಾವಿಸಿದರೆ ತಪ್ಪಾಗುತ್ತದೆ. ಹರಿದು ಹಂಚಿಹೋಗಿದ್ದ ಕರ್ನಾಟಕದ ಪ್ರಾಚೀನ ಕಥೆಗಳು ದುರಂತಮಯ. ಹಳೆ ಮೈಸೂರು ಮತ್ತು ಹೊಸ ಮೈಸೂರು ಪ್ರದೇಶಗಳೆಂದು ವಿಭಾಗಿಸಿ ನೋಡಿದರೂ ತಳಕು ಹಾಕಿಕೊಂಡಿರುವ ಸಂಗತಿಗಳು ಮೈನವಿರೆಳಿಸುತ್ತವೆ. ಹೀಗೆ ಹೈದರಾಬಾದ್, ಮುಂಬಾಯಿ ಮತ್ತು ಮದ್ರಾಸ್ ಕರ್ನಾಟಕಗಳನ್ನು ಅವಲೋಕಿಸಬೇಕಾಗುತ್ತದೆ. ಮಧ್ಯಕರ್ನಾಟಕದಲ್ಲಿ ನಾಯಕ, ವಾಲ್ಮೀಕಿ ಮತ್ತು ಮ್ಯಾಸನಾಯಕರು ಹೆಚ್ಚಾಗಿ ನೆಲೆಸಿದ್ದಾರೆ.

ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ರಾಜಮನೆತನದವರು, ಮಧ್ಯಮ ವರ್ಗದವರು ಮತ್ತು ಶ್ರೀ ಸಾಮಾನ್ಯರೆಂದು ಬೇಡರಲ್ಲಿ ನೋಡಬಹುದು. ಬೀದರ್, ಗುಲ್ಬರ್ಗಾ, ರಾಯಚೂರು ಮತ್ತು ಕೊಪ್ಪಳ ಜಿಲ್ಲೆಗಳಲ್ಲಿ ಬೇಡರ ಬದುಕು ಹೀನಾಯವಾಗಿದೆ. ಈ ಪ್ರದೇಶ ಫಲವತ್ತಾಗಿದ್ದರೂ ವಿವಿಧ ಅರಸರು ಇದನ್ನು ವಶಪಡಿಸಿಕೊಂಡು ಕಬ್ಬಿನ ರಸ ಹೀರಿದ ಸಿಪ್ಪೆಯಾಗಿ ಮಾಡಿದ್ದಾರೆ. ಕ್ರಿ.ಶ.೧೭೨೪ ರಿಂದ ೧೯೪೮ರವರೆಗೆ ಹೈದರಾಬಾದ್ ನಿಜಾಮನ ಅಧೀನದಲ್ಲಿ ಈ ಪ್ರದೇಶಗಳಿದ್ದವು. ವಚನ ಚಳವಳಿ, ಇಸ್ಲಾಂ ಧರ್ಮದ ಪ್ರಭಾವ. ಮುಸ್ಲಿಮರ ಆಳ್ವಿಕೆ, ನಿಜಾಮನ ಆಳ್ವಿಕೆ ಇಲ್ಲಿನ ಪ್ರಮುಖ ಸಂಗತಿಗಳು. ಮಿಶ್ರ ಭಾಷೆ, ಸಂಸ್ಕೃತಿಗಳ ತವರೂರು ಹೈದರಾಬಾದ್ ಕರ್ನಾಟಕವಾಗಿದೆ. ಆದಿಲ್‌ಶಾಹಿ ಮತ್ತು ನಿಜಾಮ ಕಪಿಮುಷ್ಠಿಯಲ್ಲಿ ಬೇಡರು ರಾಜ್ಯಾಳ್ವಿಕೆ ನಡೆಸಿರುವುದು ಹೆಮ್ಮೆಯ ಸಂಗತಿ. ಆನೆಗುಂದಿ, ಕುಮ್ಮಟದುರ್ಗ, ಕ್ಯಾದಿಗೆರಾ ಮುದಲ್ಲು, ಹುಲಿಹೈದರ, ಕನಕಗಿರಿ, ತಾವರೆಗೆರಾ, ಗುರುಗುಂಟಾ, ಯರಮರಸ್, ದೇವದುರ್ಗ, ತಗ್ಗಿಹಾಲ, ಸುರಪುರ, ವಾಗಿನಗೇರಾ, ಅರಿಕೇರಿ, ವನದುರ್ಗ ಮೊದಲಾದ ಸಂಸ್ಥಾನಗಳನ್ನು ಹೆಸರಿಸಬಹುದು. ಇಂದಿಗೂ ಇಲ್ಲಿ ರಾಜವಂಶೀಯರು ನೆಲೆಸಿರುವರು. ಮಧ್ಯಮ ವರ್ಗದಲ್ಲಿ ಅಧಿಕಾರಿಗಳು, ಜಮೀನ್ದಾರಿಗಳು ಮತ್ತು ಕೂಲಿ ಕಾರ್ಮಿಕರು, ಕೃಷಿಕರು ಮೂರನೇಯ ವರ್ಗದಲ್ಲಿ ಕಂಡುಬರುತ್ತಾರೆ. ಇಲ್ಲಿ ದೊರೆ, ರಾಜನೆಂದು ಕರೆಸಿಕೊಳ್ಳುವ ವರ್ಗ ಶ್ರೇಷ್ಠವಾದುದು ಎಂದು ನಂಬಲಾಗಿದೆ. ಇವರಲ್ಲಿ ಬೇಟೆ, ಪಶುಪಾಲನೆ ಮತ್ತು ಕೃಷಿ ಚಟುವಟಿಕೆಗಳಲ್ಲದೆ, ವ್ಯಾಪಾರ ವಹಿವಾಟನ್ನು ನೋಡಬಹುದಾಗಿದೆ. ಫಲವತ್ತಾದ ದೋಹಬಾ ಪ್ರದೇಶದಲ್ಲಿ ಬೇಡರು ಹೆಚ್ಚಾಗಿ ನೆಲಸಿರುವರು. ಆದರೆ ಜಮೀನುಗಳನ್ನು ಹೊಂದಿಲ್ಲ. ಇದ್ದುದನ್ನು ಮಾರಿಕೊಂಡು ಆ ದಣಿಯನ ತ್ತಿರ ದುಡಿಯುತ್ತಾರೆ. ಪಾಮನಾಯಕನ ಮೂಲಕ ಸ್ಥಾಪನೆಯಾದ ಸುರಪುರ ಸಂಸ್ಥಾನ ರಾಜಾವೆಂಕಟಪ್ಪನಾಯಕ (೧೮೫೮) ವರೆಗೆ ಇರುತ್ತದೆ. ಸ್ವಾತಂತ್ರ್ಯ ಹೋರಾಟದಲ್ಲಿ ಬ್ರಿಟಿಷರು ಈತನನ್ನು ಕೊಲೆಮಾಡಿಸಿದಾಗ ಇಡೀ ಬೇಡ ಸಮುದಾಯವೇ ಅನಾಥವಾದಂತಾಯಿತು. ಇಲ್ಲಿನ ಬೇಡರು ವಸಾಹತುಶಾಹಿಯನ್ನು, ನಿಜಾಮನ ಪ್ರಭುತ್ವವನ್ನು ಮತ್ತು ರಜಕಾರರ ಹಾವಳಿಯನ್ನು ಒಟ್ಟೊಟ್ಟಿಗೆ ವಿರೋಧಿಸಿದ್ದು ವಿಶೇಷ. ಸಾಮಾಜಿಕವಾಗಿ ರಾಜಮರ್ಯಾದೆಗಳು ಮುಂದುವರೆದಿದ್ದವು. ಶ್ರೇಷ್ಟ ಕನಿಷ್ಟರೆಂದು ಬೇಡರಲ್ಲಿ ಗುರುತಿಸುತ್ತಿದ್ದರು.

ರಾಮೋಶಿಗಳು ಮಹಾರಾಷ್ಟ್ರದ ಪ್ರಭಾವದಿಂದ ಇಲ್ಲಿ ನೆಲೆಸಿರುವರು ಅವರ ಸಂಸ್ಕೃತಿ ಬೇಡರಿಗಿಂತ ಭಿನ್ನವೇನು ಅಲ್ಲ. ಬೇಡರಲ್ಲಿ ಚಿಕ್ಕಮಕ್ಕಳಿಗೆ ಮದುವೆ ಮಾಡುವ ಕಾರ್ಯಕ್ರಮವಿತ್ತು. ಕಟ್ಟುನಿಟ್ಟಿನ ನಿಯಮಗಳು ಸಮಾಜದಲ್ಲಿ ಪಾವಿತ್ರ್ಯವನ್ನು ಕಾಪಾಡುತ್ತಿದ್ದವು. ಮದುವೆ, ವಿಚ್ಛೇದನ, ಪಿತ್ರಾರ್ಜಿತ ಆಸ್ತಿ, ಧಾರ್ಮಿಕತೆ ಇವರ ಲಕ್ಷಣಗಳಿಂದ ಕರ್ನಾಟಕದ ಉಳಿದ ಬೇಡರಿಗಿಂತ ಇಲ್ಲಿ ವಿಶೇಷತೆಗಳಿವೆ.

ಮುಂಬಾಯಿ ಮತ್ತು ಉತ್ತರಕರ್ನಾಟಗಳ ಜನಜೀವನದಲ್ಲಿ ಅಷ್ಟೇನು ಬದಲಾವಣೆಗಳು ಕಂಡುಬರುವುದಿಲ್ಲ. ವಸಾಹತುಶಾಹಿ ಆಡಳಿತಗಾರರು ಈ ಹಿಂದೆ ಬರೆದ ವರದಿ ಮತ್ತು ಗ್ಯಾಸೆಟಿಯರ್‌ಗಳು ಅವರದೇ ಆದ ಪೂರ್ವಗ್ರಹಗಳಿಂದ ಕೂಡಿವೆ. ಅವರ ಆಡಳಿತಕ್ಕೆ ಅನುಕೂಲವಾದ ಸಂಗತಿಗಳನ್ನು ತಿಳಿಸುತ್ತಾ, ಜನರ ಮನವೊಲಿಸುವಲ್ಲಿ ಮುಂದಾಗಿದ್ದರು. ಉದಾ:ಒಂದು ಜಾತಿಯನ್ನು ಅಪರಾಧ ಜನಾಂಗ (Criminal Race) ವೆಂದು ಕರೆದು ಇನ್ನೊಂದನ್ನು ಉತ್ತಮವೆಂದು ಹೆಸರಿಸುತ್ತಿದ್ದರು. ಈ ಭಾಗದಲ್ಲಿ ಬೇಡರು, ಕುರುಬರು, ಕಬ್ಬಲಿಗರಲ್ಲಿ ಸಾಮ್ಯತೆಗಳಿವೆ. ದಕ್ಷಿಣ ಕರ್ನಾಟಕದಲ್ಲಿ ಬೇಡರು,. ಗೊಲ್ಲರು ಅಣ್ಣ ತಮ್ಮಂದಿರೆಂದು ಕರೆದುಕೊಳ್ಳುವಂತೆ, ಉತ್ತರ ಕರ್ನಾಟಕದಲ್ಲಿ ಬೇಡರು ಮತ್ತು ಕುರುಬರು ಕರೆದುಕೊಳ್ಳುವರು. ಬೆಳಗಾವಿ ಸಮೀಪ ಚಿಕ್ಕಲದಿನ್ನೆಯ ಬೇಡ ಪಾಳೆಯ ಪಟ್ಟಾಗಿತ್ತು. ಇವರಲ್ಲಿ ಮರಗೀಬೇಡರು, ದಾಸಬೇಡರು, ನಾಯಕ ಮಕ್ಕಳು ಎಂಬ ಒಳಜಾತಿಗಳಿವೆ. ಇವರ ಕುಲದೇವತೆ ದುರಗಮ್ಮ, ಎಲ್ಲಮ್ಮ ಮತ್ತು ಹನುಮಂತ. ಈ ಬೇಡರು ಕಳ್ಳತನ, ದರೋಡೆ ಮಾಡುಲ್ಲಿ, ನಿಪುಣರು, ಸಾರಾಯಿ ಕುಡಿಯುವುದು, ಸಿಕ್ಕ ಪ್ರಾಣಿ ಮಾಂಸ ಸೇವಿಸುವುದು ವಿಶೇಷ. ತಮ್ಮಲ್ಲಿಯೇ ಮದುವೆ ಕಾರ್ಯಕ್ರಮಗಳನ್ನು ಮಾಡಿಕೊಳ್ಳುವ ಇವರು ವಿಧವೆ – ಮುತ್ತೈದೆಯರೆಂದು ತಾರತಮ್ಯ ಮಾಡುವುದಿಲ್ಲ. ಬೇಡರು ಬೇಟೆಯನ್ನು ಸಾಂಪ್ರದಾಯಿಕವಾಗಿ ಉಳಿಸಿಕೊಂಡು ಬಂದಿದ್ದಾರೆ. ಉತ್ತರ ಕರ್ನಾಟಕ ಹಳ್ಳಿಗಳಲ್ಲಿ ತಳವಾರಕೇರಿ, ಬೇಡರಕೇರಿ, ನಾಯಕರ ಕೇರಿಗಳಿವೆ.

ಹೀಗೆ ಕರ್ನಾಟಕದ ವಿವಿಧ ಭಾಗಗಳಲ್ಲಿ ಬೇಡರ ಬದುಕು ಸುಧಾರಣೆ ಹಂತದಲ್ಲಿದ್ದು, ಇನ್ನು ಕೆಲವು ಕಡೆ ಹೀನಾಯಗೊಂಡಿರುವುದುಂಟು. ಇವೆರಡರ ಪೈಕಿ ತೀರಾ ಹಿಂದುಳಿಯದೆ ಅಷ್ಟೇನು ಮುಂದುವರೆಯದೆ ತಟಸ್ಥಗೊಳ್ಳದೆ ಇರುವುದು ಮ್ಯಾಸಬೇಡರ ಸಂಸ್ಕೃತಿಯ ವಿಶೇಷ. ಮೂರನಾಲ್ಕು ಶತಮಾನಗಳಿಂದ ಬುಡಕಟ್ಟಿನ ನಂಬಿಕೆ, ಆಚರಣೆ, ಪದ್ಧತಿಗಳನ್ನು ಯಥಾವತ್ತಾಗಿ ಉಳಿಸಿಕೊಂಡು ಬಂದಿದ್ದಾರೆ. ಜಾಗತೀಕರಣ ಪ್ರಕ್ರಿಯೆಯಲ್ಲಿ ಬೇಡರು ವಿವಿಧ ಕ್ಷೇತ್ರಗಳಲ್ಲಿ ತಮ್ಮ ಅನನ್ಯತೆಯನ್ನು ಉಳಿಸಿಕೊಳ್ಳಲು ಶ್ರಮಿಸುತ್ತಿದ್ದಾರೆ. ಮದ್ರಾಸ್ ಕರ್ನಾಟಕ ಬಳ್ಳಾರಿ ಜಿಲ್ಲೆಯಲ್ಲಿ ಅನೇಕ ವೈಶಿಷ್ಟ್ಯತೆಗಳನ್ನು ಗುರುತಿಸಬಹುದು. ನಾಯಕರಿಗೆ ಮೀಸಲಾತಿ ಸಿಕ್ಕಾಗ ವಿವಿಧ ರಂಗಗಳಲ್ಲಿ ಬೆಳೆಯಲು ಅಸ್ಪದವಾಯಿತು. ಸಂಘಟನೆ, ಹೋರಾಟ, ಚಳುವಳಿಗಳು ನಡೆದವು. ಎಲ್.ಜಿ. ಹಾವನೂರು ಆಯೋಗ, ನಾಯಕ ಜನಾಂಗದ ಸಂಘಟನಾತ್ಮಕ ಚಳವಳಿಗಳು, ವೈಚಾರಿಕ ಕ್ರಾಂತಿ, ಮೀಸಲಾತಿಗಾಗಿ ಹೋರಾಟ ಕೃಷಿ ಮತ್ತು ವೈಜ್ಞಾನಿಕ ಕ್ರಾಂತಿ, ಸಂಶೋಧನಾ ಕ್ರಾಂತಿ, ಇಂದಿನ ಬೇಡರ ಸ್ಥಿತಿಗತಿಗಳನ್ನು ಅವಲೋಕಿಸಿದಾಗ ನಿಜಕ್ಕೂ ಸೋಜಿಗವಾಗುತ್ತದೆ. ಸ್ವಾತಂತ್ರ್ಯ ದೊರೆತು ೫೫ ವರ್ಷಗಳಲ್ಲಿ ಏನೆಲ್ಲಾ ಪಲ್ಲಟಗಳಾಗಿರುವುದಕ್ಕೆ ನಮ್ಮಲ್ಲಿನ ಅನೈಕ್ಯತೆ, ಅಪವಿತ್ರ, ಮೈತ್ರಿ, ಒಡೆದು ಆಳುವ ನೀತಿ ಮೊದಲಾದ ಸವಾಲುಗಳು ಮತ್ತು ಜವಾಬುಗಳನ್ನು ನಾಯಕ ಜನಾಂಗ ಇಂದು ಎದುರಿಸುವಲ್ಲಿ ಸಜ್ಜುಗೊಂಡಿದೆ.

* * *

# ೩. ವೀರರು: ತಾತ್ವಿಕ ಚಿಂತನೆ

**೩.೧. ವೀರರ (ತ್ವ) ಪರಿಕಲ್ಪನೆ**

ಒಂದು ಸಮುದಾಯದಲ್ಲಿ ಮಾನವೀಯ ಮೌಲ್ಯಗಳಿಗೆ ಅನುಗುಣವಾಗಿ ವ್ಯಕ್ತಿಯನ್ನು ಗೌರವಿಸಲಾಗುತ್ತದೆ. ಅವು ಅವನ ಗುಣ, ನಡವಳಿಕೆ, ಸಾಮರ್ಥ್ಯ, ವರ್ತನೆ, ಭೌತಿಕತೆ ಹಾಗೂ ಬೌದ್ಧಿಕತೆಯ ಸಂಕೇತವಾಗಿರುತ್ತವೆ. ಇತರರಿಗಿಂತ ಭಿನ್ನವಾದ ಸಾಧನೆ ಅಥವಾ ಸಾಹಸಮಯ ಕಾರ್ಯಗಳನ್ನು ಮಾಡಿದವರಿಗೆ ವೀರತ್ವದ ಪಟ್ಟ ಕಟ್ಟುತ್ತಾರೆ.

ಎಡರು – ತೊಡರುಗಳಿಗೆ ಎದೆಗುಂದದೆ ಕೈಗೊಂಡ ಕಾರ್ಯದ ಸಂಕಲ್ಪವನ್ನು ಉತ್ಸಾಹದಿಂದ ಸಾಧಿಸಿ ಸತ್ತವನನ್ನು 'ವೀರ'ನೆನ್ನುತ್ತಾರೆ. ವೀರತ್ವವೆಂಬುದು ಉತ್ತಮ ಪ್ರಕೃತಿಯವರ ಉದಾತ್ತ ಸ್ವಭಾವ. ಅದನ್ನು ಪರೋಪಕಾರ, ಭಕ್ತಿ, ದಯೆ, ದಾನ, ತ್ಯಾಗ ಪ್ರೇಮ ಹೀಗೆ ಯಾವ ಸ್ವಭಾವದಲ್ಲಾದರೂ ಗುರುತಿಸಬಹುದು. ಭಕ್ತಿಯಲ್ಲಿ ಬೇಡರಕಣ್ಣಪ್ಪ, ತ್ಯಾಗ, ದಾನಗಳಲ್ಲಿ ಕರ್ಣ, ಸತ್ಯದಲ್ಲಿ ಹರಿಶ್ಚಂದ್ರ! ಪ್ರೇಮದಲ್ಲಿ ಕೃಷ್ಣ, ಯುದ್ಧದಲ್ಲಿ ಅರ್ಜುನ ಹೀಗೆ ಹಲವು ಬಗೆಯ ವೀರರನ್ನು ಗುರುತಿಸಬಹುದು.

ಪುರಾಣ ಮತ್ತು ಇತಿಹಾಸದಲ್ಲಿ ಸಾಹಸಮಯ ವ್ಯಕ್ತಿಗಳನ್ನು, ಮಹಾನಾಯಕ, ವೀರ, ಶೂರ, ಧೀರ, ಧೀರೋದಾತ್ತ ಪರಾಕ್ರಮಿ ಎಂದು ಗುರುತಿಸಿರುವುದುಂಟು. ಇಂಥ ವೀರರ ಜೀವನ ಚಿತ್ರಣ ಆ ಕಾಲದ ಸಾಂಸ್ಕೃತಿಕ ಚರಿತ್ರೆಯಲ್ಲಿ ದಾಖಲಾಗಿದೆ. ಇಂದು ಬದಲಾವಣೆಗೊಳ್ಳುತ್ತಿರುವ ಜನಸಮುದಾಯಗಳಲ್ಲಿ ವೀರರ ಲಕ್ಷಣಗಳು ಸಹಾ ಬದಲಾಗುತ್ತವೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪೂಜೆ, ನಿರಂಕುಶ ಅಥವಾ ರಾಜಪ್ರಭುತ್ವದಲ್ಲಿ ರಾಜನೇ ನಾಯಕ. ಅವನನ್ನು ವೀರನೆಂದು ಪರಿಗಣಿಸಲಾಗಿದೆ. ಜನಸಮುದಾಯದ ಗಣ್ಯವ್ಯಕ್ತಿ, ಮುಖಂಡನಿಗೂ ಆ ರೀತಿ ಕರೆಯಲಾಗಿದೆ. ವೀರನನ್ನು Hero ಗಿಂತಲೂ Leader ಎಂಬ ಪದದ ಮೂಲಕ ಬುಡಕಟ್ಟು ಜನರು ಗುರುತಿಸುತ್ತಾರೆ.

ವೀರತ್ವದ ಕಲ್ಪನೆ ಪ್ರಾಚೀನ ಕಾಲದಿಂದಲೂ ರೂಢಿಯಲ್ಲಿದೆ. ವ್ಯಕ್ತಿಯ ಆರಾಧನೆಗೆ ಇದು ಪೂರಕ ಎಂದರೂ ತಪ್ಪಲ್ಲ. ಅಸಾಮಾನ್ಯ ಸಾಧನೆ ತೋರಿ ವೀರನೆನಿಸಿದವನು, ಕೆಲವು ದಿನಗಳಲ್ಲಿ ಆಧ್ಯಾತ್ಮ ಪುರುಷನಾಗಲೂಬಹುದು. ಇಂತಹ ಲಕ್ಷಣ ಬುಡಕಟ್ಟು ವೀರರಲ್ಲಿ ಸಾಮಾನ್ಯವಾಗಿ ಕಂಡುಬರುತ್ತದೆ. ಜನಪದ ಪರಿವಲಯದಲ್ಲಿ ಇಂಥಾ ಅನೇಕ ವೀರರನ್ನು ಕುರಿತು ವಿವರಗಳು ವರ್ಣನೆಗಳು ಹೇರಳವಾಗಿ ದೊರೆಯುತ್ತವೆ.

ಲಿಖಿತ ಚರಿತ್ರೆಯಲ್ಲಿ ಕಂಡು ಬರುವ ವೀರನ ಆಸೆ – ಆಕಾಂಕ್ಷೆಗಳಿಗೂ ಮೌಖಿಕ ಪರಂಪರೆ ಕಟ್ಟಿಕೊಡುವ ವೀರನ ಆಶಯಗಳಿಗೂ ಭಿನ್ನತೆಗಳಿವೆ. ಉದಾ: ನಮ್ಮ ಜನಪದ ಸಾಹಿತ್ಯದಲ್ಲಿ ಕಂಡು ಬರುವ ಕುಮಾರರಾಮನ ವೀರತ್ವವನ್ನು ಗುರುತಿಸುವುದು ಅವನು ಪರದಾರ ಸೋದರತ್ವವನ್ನು ಪಾಲಿಸಿದನೆಂಬ ಕಾರಣಕ್ಕಾಗಿ.

ಜಗತ್ತಿನ ಚರಿತ್ರೆಯಲ್ಲಿ ವೀರ ಪರಂಪರೆ ರೋಮಾಂಚನ ಸಂಗತಿಯಾಗಿ ದಾಖಲಾಗಿದೆ. ಗ್ರೀಸ್‌ನ ಐತಿಹಾಸಿಕ ಚಕ್ರವರ್ತಿ ಸೀಜರ್ ಫ್ರೆಡರಿಕ್‌ನಿಗೆ ಜಗತ್ತನ್ನೇ ಜೈಸಬೇಕೆಂಬ ಹಂಬಲವಿತ್ತು. ಪರ್ಶಿಯಾದ ಮಹಾನ್ ಚಕ್ರವರ್ತಿ ಅಲೆಗ್ಸಾಂಡರ್‌ನೂ ವಿಶ್ವವನ್ನು ಗೆಲ್ಲುವ ಆಸೆ ಹೊಂದಿದ್ದ. ೧೯ನೇ ಶತಮಾನದಲ್ಲಿ ನೆಪೋಲಿಯನ್ ಬೊನಾಪಾರ್ಟೆ ಇಡೀ ಭೂಮಂಡಲವನ್ನು ನಿಯಂತ್ರಿಸುವ ಹೆಬ್ಬಯಕೆ ಹೊಂದಿದ್ದ. ಸಾಮಾನ್ಯವಾಗಿ ಚಕ್ರವರ್ತಿಗಳು ಇಂಥಾ ಗುರಿ – ಉದ್ದೇಶ ಹೊಂದಿರುತ್ತಾರೆ. ಆದರೆ ಒಂದು ಬುಡಕಟ್ಟಿನ ವೀರ, ವ್ಯಕ್ತಿ ಯಜಮಾನನ ಆಸೆ – ಆಕಾಂಕ್ಷೆಗಳು ಬೇರೆಯಾಗಿರುತ್ತವೆ.

ವೀರರು ಹೆಚ್ಚಾಗಿ ರಾಜ್ಯಾಡಳಿತ, ಕ್ರೀಡೆ, ಬೇಟೆ, ಪಶುಪಾಲನೆ ಮತ್ತು ಕೃಷಿ ವ್ಯವಸ್ಥೆಯ ಕ್ಷೇತ್ರಗಳಲ್ಲಿ ಕಂಡು ಬರುತ್ತಾರೆ. ವೀರನ ಲಕ್ಷಣ, ಸಾಧನೆಗಳಿಗೆ ಆರ್ಥಿಕಾಭಿವೃದ್ಧಿಯೂ ಮಾನದಂಡವಾಗಿತ್ತು. ವೀರನೊಬ್ಬ ಅಜ್ಞಾನ ಸಮುದಾಯಕ್ಕೆ ವೀರನಾಗಿದ್ದರೂ, ನಾಗರಿಕ ಜಗತ್ತಿನಲ್ಲಿ, ಅನಾಮಧೇಯನಾಗಿರುತ್ತಾನೆ. ರಾಜಪ್ರಭುತ್ವಗಳು ಸಾಹಸ, ಪರಾಕ್ರಮ, ಶಕ್ತಿ ಪ್ರದರ್ಶನಕ್ಕೆ ಪ್ರೋತ್ಸಾಹಿಸುತ್ತಿದ್ದವು. ಆದ್ದರಿಂದ ಸೈನಿಕರು, ಮಾಂಡಲಿಕರು, ಸಾಮಂತರು, ಪ್ರಜೆಗಳು ದೃಢಕಾಯತೆಯನ್ನು ಕಾಪಾಡಿಕೊಳ್ಳುತ್ತಿದ್ದರು. ವೀರರು ಯುದ್ಧ ಬೇಟೆ ಅಂಗ ರಕ್ಷಣೆ ರಾಜನ ಪ್ರಾಣ ರಕ್ಷಣೆ ಮಾಡುತ್ತಿದ್ದರು. ರಾಜಕೀಯ ದೃಷ್ಟಿಯಿಂದ ಕರ್ನಾಟಕದ ಪಾಲಗೆ ೧೦ನೇಯ ಶತಮಾನದಿಂದ ೧೭ನೇ ಶತಮಾನದ ಮಧ್ಯದವರೆಗಿನ ಕಾಲವು ವೀರ ಸತ್ಯವನ್ನು ಕಾಯ್ದುಕೊಂಡಿತ್ತೆಂದರೆ ತಪ್ಪಾಗಲಾರದು. ನಿರಂತರ ಯುದ್ಧ ಆಕ್ರಮಣ ಮುತ್ತಿಗೆ, ಸೋಲು ಗೆಲುವುಗಳಲ್ಲಿ ರಾಜವಂಶಗಳು ತೂಗುಯ್ಯಾಲೆಯಾಡುತ್ತಿದ್ದ ಕಾಲವದು. ಈ ಪ್ರಭಾವಗಳಿಂದ ಅಂದಿನ ಧಾರ್ಮಿಕ ತತ್ವಗಳು ಮತ್ತು ಕಲಾತ್ಮಕ ಪರಿಸರದಲ್ಲಿ ವೀರತ್ವವು ವಿಜೃಂಭಿಸಿರುವುದನ್ನು ಕಾಣಬಹುದು. ಅಂದಿನ ಕಲೆ, ವಾಸ್ತುಶಿಲ್ಪ ಹಾಗೂ ಸಾಹಿತ್ಯ ಪ್ರಕಾರಗಳಲ್ಲಿ ವೀರತ್ವದ ನಿರೂಪಣೆಗೆ ಮೊದಲ ಆದ್ಯತೆ ಇತ್ತು. ಯುದ್ಧ ವೀರರನ್ನು ಸೈನಿಕರನ್ನು ಹುರಿದುಂಬಿಸುವುದಕ್ಕಾಗಿಯೇ ಸಾಹಿತ್ಯ ಪ್ರಕಾರಗಳೂ ರೂಪುಗೊಳ್ಳುತ್ತಿದ್ದವು. ಇದಕ್ಕೆ ಪಂಪ – ರನ್ನರ ವಿಕ್ರಮಾರ್ಜುನವಿಜಯಂ ಮತ್ತು ಸಾಹಸಭೀಮವಿಜಯಂ ಕಾವ್ಯಗಳ ಶೀರ್ಷಿಕೆಗಳು ಪೂರಕವಾಗುತ್ತವೆ. ಅಲ್ಲದೆ, ಅಂದಿನ ವೀರಗಲ್ಲುಗಳಲ್ಲಿ ಉಕ್ತವಾಗಿರುವ

ಜಿತೇನ ಲಭ್ಯತೇ ಲಕ್ಷ್ಮೀ…
ಮೃತೇನಾಪಿ ಸುರಾಂಗನಾ |
ಕ್ಷಣ ವಿದ್ವಂ ಸಿನಿಕಾಯೇ
ಕಾ ಚಿಂತಾ ಮರಣೇ ರಣೇ ||

ಯುದ್ಧವನ್ನು ಜೈಸಿದ್ದಾದರೆ ಲಕ್ಷ್ಮೀ ಲಭಿಸುತ್ತಾಳೆ. ಮೃತನಾದರೆ (ವೀರತ್ವವನ್ನು ಮೆಚ್ಚಿ) ಅಪ್ಸರಾಸ್ತ್ರೀಯರು ಒಲಿಯುತ್ತಾರೆ. ಆದ್ದರಿಂದ ಕ್ಷಣ ಕಾಲಕ್ಕೆ ನಾಶವಾಗುವ ದೇಹದ ಮೋಹದಿಂದ ಯುದ್ಧಭೂಮಿಯಲ್ಲಿ ಸಾಯುವುದಕ್ಕೆ ಹೆದರಬೇಡ ಎಂಬಂಥ ಶಾಸನಗಳನ್ನು ಪರಿಗಣಿಸಬಹುದು. ಹೀಗೆ ಶಾಸನ ಮತ್ತು ಶಿಷ್ಟ ಸಾಹಿತ್ಯದಲ್ಲಿ ಉಲ್ಲೇಖವಾಗಿರದ ಅನೇಕ ವೀರರನ್ನು ಮೌಖಿಕ ಪರಂಪರೆಯ ಆಕರದಿಂದ

ಕಟ್ಟಿಕೊಡುವುದು ತೀರಾ ಅನಿವಾರ್ಯವಾಗಿದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ದೇಶವನ್ನು ಕಾಯುವ ಸೈನಿಕರನ್ನು ವೀರರೆನ್ನುತ್ತಾರೆ. ಕುಸ್ತಿಯಲ್ಲಿ ಭಾಗವಹಿಸಿ ಜೈಸುವ

[1] ಜಟ್ಟಿ, ಪೆಲ್ವಾನ್ ಎಂದು ಕರೆಸಿಕೊಳ್ಳುತ್ತಾರೆ. ವೀರರ ಆರಾಧನೆ ಗ್ರೀಸ್, ರೋಮ್, ಈಜಿಪ್ಟ್, ಚೀನಾ ಮುಂತಾದ ದೇಶಗಳಲ್ಲಿ ಪ್ರಾಚೀನ ಕಾಲದಿಂದಲೂ ಕಂಡುಬಂದರೂ, ಭಾರತದಲ್ಲಿ ಸಿಂಧೂ ಬಯಲಿನ ನಾಗರಿಕತೆ, ವೇದಗಳ ಸಂಸ್ಕೃತಿ ಕಾಲಘಟ್ಟಗಳಿಂದಲೂ ಭಾರತದಲ್ಲಿ ಸಿಂಧೂ ಬಯಲಿನ ನಾಗರಿಕತೆ, ವೇದಗಳ ಸಂಸ್ಕೃತಿ ಕಾಲಘಟ್ಟಗಳಿಂದಲೂ ಅನೂಚಾನವಾಗಿ ಬೆಳೆದುಬಂದಿದೆ. ರಾಜ, ಮಂತ್ರಿ, ಪಾಳೆಯಗಾರ ಇಂಥವರನ್ನು ವೀರರು ಎಂದು ಹೆಚ್ಚಾಗಿ ನೆನಪಿಸಿಕೊಳ್ಳುವುದುಂಟು. ಸರ್ಜಪ್ಪನಾಯಕ, ಕೆಂಪೇಗೌಡ, ಸಿರಾದ ರಂಗಪ್ಪನಾಯಕ, ಮದಕರಿನಾಯಕ, ಕೊಡಗಿನ ಲಿಂಗರಾಜ, ಕುಮಾರರಾಮ, ಕಿತ್ತೂರುರಾಣಿ ಚೆನ್ನಮ್ಮ, ಸಂಗೊಳ್ಳಿರಾಯಣ್ಣ, ಸಿಂಧೂರ ಲಕ್ಷ್ಮಣ, ಹಲಗಲಿ ಜಡಗ – ಬ್ಯಾಳಾ, ಮುಂಡರಗಿ ಭೀಮರಾಯ ಮುಂತಾದ ಸಾಹಸಮಯ ಸಂಸ್ಥಾನಿಕರನ್ನು ಅವರ ಸಾಧನೆಯಿಂದ ವೀರರೆಂದು ಹೆಸರಿಸುತ್ತಾರೆ. ಇಂದು ಸೈನ್ಯದಲ್ಲಿ ಅಪ್ರತಿಮ ಸಾಧನೆ ತೋರಿದವರಿಗೆ 'ಪರಮವೀರಚಕ್ರ', ಅರ್ಜುನ ಕ್ರೀಡೆಗಳಲ್ಲಿ 'ಏಕಲವ್ಯ' ಎಂಬ ಪ್ರಶಸ್ತಿಗಳನ್ನು ನೀಡಿ ಗೌರವಿಸುತ್ತಾರೆ.

**ವೀರ ಪದದ ಅರ್ಥ ಮತ್ತು ವ್ಯಾಪ್ತಿ**

'ವೀರ' ಎಂಬ ಪದಕ್ಕೆ ಸಮನಾದ, ಪರ್ಯಾಯವಾದ ೨೦ಕ್ಕೂ ಹೆಚ್ಚು ಅರ್ಥ ಮತ್ತು ಲಕ್ಷಣಗಳಿವೆ. 'ವೀರ' ಎಂದರೆ ಶೌರ್ಯದಿಂದ ಕೂಡಿದ ಪೌರುಷದ, ಶೂರನಾದ, ಪರಾಕ್ರಮಿಯಾದ, ಬಲಿಷ್ಠನಾದ, ಶಕ್ತಿಯುತನಾದ, ಶ್ರೇಷ್ಠನಾದ, ಉತ್ತಮವಾದ ಇತರ ಲಕ್ಷಣಗಳನ್ನು ಹೆಸರಿಸಿದ್ದಾರೆ. ಕಲಿ, ಶೂರ, ಶೌರ್ಯ, ಕಲಿತನ, ನಟ, ಪಾತ್ರಧಾರಿ, ಬೆಂಕಿ (ಅಗ್ನಿ) ಮಗ, ಗಂಡ, ಜಿ, ವಿಷ್ಣು, ವೀರಭದ್ರ ಎಂದು ಕನ್ನಡ ಶಬ್ದಕೋಶದಲ್ಲಿ ತಿಳಿಸಲಾಗಿದೆ. ಆಧುನಿಕ ಲಕ್ಷಣಗಳಿಂದ ಪ್ರಾಚೀನ ಮೌಲ್ಯಗಳನ್ನು 'ವೀರನ' ಲಕ್ಷಣಗಳಿಗೆ ಸಮೀಕರಿಸಿದಂತೆ ಮಾಡಲಾಗಿದೆ.

ಕಾವ್ಯ ಮತ್ತು ನಾಟಕಗಳಿಗೆ ಸಂಬಂಧಿಸಿದಂತೆ 'ವೀರ' ರಸವೂ ಒಂದು 'ವೀರ' ಎಂಬುದು ಇಪ್ಪತ್ತೇಳು ಶೈವಾಗಮಗಳಲ್ಲೂ ಬರುತ್ತದೆ. ಮಹಾಭಾರತದ ಉಲ್ಲೇಖ ಹೀಗಿದೆ: ಪೂರ್ವಜರನ್ನು ಯುದ್ಧದಲ್ಲಿ ಕಳೆದುಕೊಂಡಿದ್ದು, ಫಾಲ್ಗುಣ, ಶುದ್ಧಪ್ರತಿಪದೆಯಂದು ಯುದ್ಧ ಯೋಗ್ಯವಾದ ವೈಭವ, ಆಡಂಬರಗಳೊಂದಿಗೆ ದೇವರ ದರ್ಶನಕ್ಕೆ ಹೋಗುವ ಪುರುಷನೇ ಶೂರ ಎನ್ನಲಾಗಿದೆ. ಯುದ್ಧ ಮಾಡುವ ಶಕ್ತಿವಂತನಿಗೆ ಶೂರ, ಸಾಹಸತನವಷ್ಟೇ ಅಲ್ಲದೆ ಮಾನಸಿಕ ದಿಟ್ಟತನ ಇರಬೇಕಿತ್ತು.

ಮಧ್ಯಕಾಲೀನ ಕರ್ನಾಟಕದಲ್ಲಿ ವೀರ ಎಂಬುದು ಬಿರುದಾಗಿದ್ದು, ವೀರರಲ್ಲಿ ಶ್ರೇಷ್ಠನಾದವನಿಗೆ ವೀರ ಚೂಡಾಮಣಿ ಎನ್ನುತ್ತಾರೆ. ವೀರ ಮತ್ತೊಬ್ಬ ವೀರನನ್ನು ಸೋಲಿಸಿದರೆ ಅವನಿಗೆ ವೀರ ಝುಳಪ್ಪ ಎಂಬ ಬಿರುದಿತ್ತು. ವೀರನಾದವನು ಕೈಯಲ್ಲಿ ಕಂಕಣವೆಂಬ ಆಭರಣವನ್ನು ಕಟ್ಟಿಕೊಳ್ಳುತ್ತಾನೆ. ಸಾಹಸ ಕೆಲಸ, ಪೌರುಷದ ಕೆಲಸ ಮಾಡಿದರೆ ವೀರಕಾರ್ಯ ಎಂದು ಸಮಾಜ ಗೌರವಿಸುತ್ತಿತ್ತು. ಇಂಥಾ ವೀರರು ಮಡಿದರೂ ಅಂಥವರ ಬಗ್ಗೆ ಹುಟ್ಟಿಕೊಳ್ಳುವ ವೀರಕಾವ್ಯಗಳು ಅವರ ಶೌರ್ಯ ಸಾಹಸಗಳನ್ನು ವರ್ಣಿಸುತ್ತವೆ.

ಪರಾಕ್ರಮಿಗಳ, ಸಾಹಸಿಗರ ಸಂತತಿಯನ್ನು ವೀರಕುಲವೆನ್ನುತ್ತಾರೆ. ವೀರರು ಹೋರಾಡುವ ಸ್ಥಳಕ್ಕೆ ವೀರಕ್ಷೇತ್ರ ಎನ್ನುವರು. ಯುದ್ಧಭೂಮಿಯಲ್ಲಿ ಕಾದಾಡುತ್ತಾ ಕೊನೆಯುಸಿರೆಳೆದ ಸೈನಿಕರ ಸಾವನ್ನು 'ವೀರಮರಣ' ವೆಂದು ಉಲ್ಲೇಖಿಸುತ್ತಾರೆ. ಈ ಮರಣದ ಮೂಲಕ ಸಿಗುವ ಇಂಥ ಸದ್ಗತಿಯನ್ನು 'ವೀರಸ್ವರ್ಗ'ವೆಂದು ಕರೆಯುತ್ತಾರೆ. ಶೂರರಾದ ಕ್ಷತ್ರಿಯರು ಸಾಹಸ ಕಾರ್ಯಗಳನ್ನು ಪ್ರದರ್ಶಿಸಿರುವುದಕ್ಕೆ ವೀರಗಲ್ಲುಗಳೇ ಸಾಕ್ಷಿ.

ಪ್ರಾಣಾರ್ಪಣೆ ಮಾಡಿಕೊಂಡ ವೀರನ ನೆನಪಿಗೆ ವೀರಗಲ್ಲನ್ನು ನೆಡುವ ಪದ್ಧತಿಯಿತ್ತು. ಯುದ್ಧ, ಬೇಟೆ, ಗೋಗ್ರಹಣ, ಮಹಿಳೆಯರ ಮಾನರಕ್ಷಣೆ ಹೀಗೆ ನಾನಾ ಕಾರಣಗಳಿಗಾಗಿ ವೀರಗಲ್ಲುಗಳನ್ನು ಕೆತ್ತಿಸಿದ್ದಾರೆ. ಹಿಂದೆ ಶೂರ, ವೀರರಿಗೆ 'ವೀರಗಾಣಿಕೆ' ಇತ್ತು. ಪ್ರತ್ಯೇಕ ಧರ್ಮಕ್ಕೆ ವೀರಧರ್ಮವೆಂದು, ವೀರನ ತಾಯಿಗೆ ವೀರಮಾತೆ ಅಥವಾ ವೀರಜನನಿ ಎಂದೂ, ಪತ್ನಿಗೆ ವೀರಪತ್ನಿ ಎಂದು ನಮ್ಮ ರಾಜ್ಯದ ರಕ್ಷಣೆ ಹೊತ್ತು ಸಮರ ಸಾಧನೆಯ ಹೋರಾಟವನ್ನು ಮಾಡಿದ ರಾಣಿಯನ್ನು 'ವೀರರಾಣಿ' ಎಂದು ಕರೆಯುತ್ತಿದ್ದರು. ಉದಾ: ವೀರರಾಣಿ ಕಿತ್ತೂರು ಚೆನ್ನಮ್ಮ ಶತೃಗಳನ್ನು ಕೊಂದ ಒನಕೆ ಓಬವ್ವನಿಗೆ 'ವೀರ ವನಿತೆ' ಎಂದು ಚಿತ್ರದುರ್ಗದ ಕೋಟೆಯನ್ನು ಕಾಪಾಡಿದ ಮಹಾಸಾಧ್ವಿಯೆಂದು ದಾಖಲಿಸಲಾಗಿದೆ.

ಬಸವಣ್ಣನವರ ವಚನ: 'ವೀರನಾದರೆ ವೈರಿಗಳು ಮೆಚ್ಚಬೇಕು' ಎಂಬಲ್ಲಿ ವೀರ ದಿಟ್ಟತನ ಸಾಹಸ, ಧೈರ್ಯ, ಹೋರಾಟದ ಗುಣಗಳು ಶತೃಗಳಲ್ಲಿ ಅಚ್ಚರಿ ಮೂಡಿಸುವಂತಿರಬೇಕು. ಎಂಬಲ್ಲಿ ವೀರನ ಲಕ್ಷಣ, ಕೈಚಳಕ, ಕೌಶಲ್ಯ ಇತ್ಯಾದಿ ಅಂಶಗಳನ್ನು ತಿಳಿಯಬಹುದು. ಒಟ್ಟಾರೆ ಹೇಳುವುದಾದರೆ, ಊರಿನ ಸತ್ಕಾರ್ಯ, ಹೆಣ್ಣಿನ ಮಾನಸಂರಕ್ಷಣೆ, ಗೋರಕ್ಷಣೆ ಇತ್ಯಾದಿ ಸಾಹಸಗಳನ್ನು ಮಾಡುವವನು ವೀರ ಎನಿಸಿಕೊಳ್ಳುತ್ತಾನೆ. ವೀರ ಶಕ್ತಿಯನ್ನು ಸತ್ಕಾರ್ಯಕ್ಕೆ ಬಳಸಿಕೊಂಡವನು. ದೇಶಕ್ಕಾಗಿ ದೇಹ ಮತ್ತು ಪ್ರಾಣ ಅರ್ಪಣೆ ಮಾಡಿದವನಿಗೆ ಬಹುತೇಕ ವೀರ ಎಂದು ಹೆಸರಿಡುತ್ತಾರೆ.

**ಬುಡಕಟ್ಟು ವೀರರು**

ಬುಡಕಟ್ಟು ಸಮುದಾಯಗಳು ಇಂದು ಅನೇಕ ರೀತಿಯ ಸಂಕಷ್ಟಗಳನ್ನು ಎದುರಿಸುವುದನ್ನು ಕಾಣಬಹುದಾಗಿದೆ. ಜೊತೆಗೆ ಪ್ರಾಚೀನ ಪರಂಪರೆಯ ಸಂಗತಿಗಳನ್ನು ಮೆಲುಕು ಹಾಕುವುದುಂಟು. ಬುಡಕಟ್ಟು ವೀರರನ್ನು ತಮ್ಮ ಮೂಲಪುರುಷರೆಂದು ನಾಯಕರೆಂದು ಕರೆದುಕೊಳ್ಳುತ್ತಾರೆ. ಇದು ಪಿತೃ ಆರಾಧನೆಯನ್ನು ಹೋಲುತ್ತದೆ. ಗೊಲ್ಲರಲ್ಲಿ, ಮ್ಯಾಸ ಬೇಡರಲ್ಲದೆ, ಇತರ ಅನೇಕ ಬುಡಕಟ್ಟುಗಳಲ್ಲಿ ಈ ವೈಶಿಷ್ಟ್ಯವನ್ನು ಉಳಿಸಿಕೊಂಡು ಬಂದಿರುವುದು ಗಮನಾರ್ಹ. ಬುಡಕಟ್ಟು ಜನಸಮುದಾಯಗಳಿಗೆ ಅರಣ್ಯವೇ ಅವಾಸಸ್ಥಾನವಾಗಿರುವುದು ಪ್ರಕೃತಿ ಆರಾಧಕರೇ ಬುಡಕಟ್ಟು ಜನರು. ಇವರಿಗೆ ಪ್ರಕೃತಿಗೂ ಅವಿನಾಭಾವ ಸಂಬಂಧವಿದೆ. ಇವರನ್ನು ಹೊರತುಪಡಿಸಿದರೆ ಋಷಿಗಳು ಕಾಡಿಗೆ ಹೋಗಿ ತಪಸ್ಸು ಮಾಡುತ್ತಾರೆ. ಮಹಾಕಾವ್ಯಗಳಲ್ಲಿ ರಾಮ, ಲಕ್ಷ್ಮಣ, ಸೀತೆಯರು ರಾಮಾಯಣದಲ್ಲಿ ಮತ್ತು ಪಾಂಡವ ಸಹೋದರರು ಮಹಾಭಾರತದಲ್ಲಿ ವನವಾಸ ಹೋಗುವುದನ್ನು ಚಿತ್ರಿಸಲಾಗಿದೆ. ಬುಡಕಟ್ಟು ವೀರರನ್ನು ಈ ಬಗೆಯಲ್ಲಿ ಮತ್ತು ಧಾರ್ಮಿಕ ನೆಲೆಯಲ್ಲಿ ರಚಿಸಿರುವುದುಂಟು. ಈ ಜನರು ತಮ್ಮ ಪ್ರಾಚೀನ ವೀರರನ್ನು ದೇವತೆಗಳನ್ನಾಗಿ ಆರಾಧಿಸುತ್ತಾರೆ. ತಿರುಪತಿ ವೆಂಕಟೇಶ್ವರನನ್ನು ಬೇಟೆಗಾರರ ದೇವರೆಂದು, ಶ್ರೀಶೈಲ ಮಲ್ಲಿಕಾರ್ಜುನನ್ನು ಬುಡಕಟ್ಟು ಜನರ ಮೂಲದೈವವೆಂದು ನಂಬಿಕೊಂಡಿದ್ದಾರೆ. ಇಂದಿಗೂ ತಮ್ಮ ಮೂಲಗಳನ್ನು ಈ ದೈವಗಳೊಂದಿಗೆ ಸಮೀಕರಿಸಿಕೊಳ್ಳುವುದುಂಟು. ಬೇಡರಲ್ಲಿ ಬರುವ ವೀರರು ಬುಡಕಟ್ಟಿನ ಹಿನ್ನೆಲೆಯ ಪ್ರಭಾವದಂತೆಯೇ ಶೈವ ಮತ್ತು ವೈಷ್ಣವ ಧರ್ಮಗಳಲ್ಲದೆ, ಶಕ್ತಿಯ ಆರಾಧನೆಯನ್ನು ರೂಢಿಸಿಕೊಂಡಿರುವರು.

ಬುಡಕಟ್ಟು ವೀರರು ತಮ್ಮ ಕುಲಾಚಾರ ಪದ್ಧತಿ, ನ್ಯಾಯತೀರ್ಮಾನ, ವಿವಾಹ, ಇತರ ಪದ್ಧತಿಗಳಿಂದ ಪ್ರಧಾನ ವ್ಯಕ್ತಿಗಳಾಗಿ ಗೋಚರಿಸುತ್ತಾರೆ. ಪಟ್ಟಣ ಮತ್ತು ಗ್ರಾಮೀಣ ಬುಡಕಟ್ಟು ಜನರ ಸ್ಥಿತಿಗತಿಗಳನ್ನು ಭಿನ್ನವೆಂಬುದು ಸ್ಪಷ್ಟ. ಶಿಷ್ಟ ಕಾವ್ಯಗಳಲ್ಲಿ ಬರುವ ವೀರರಿಗಿಂತ ಬುಡಕಟ್ಟು ಸಂಪ್ರದಾಯದ ಮೌಖಿಕ ಪರಂಪರೆಯ ವೀರರ ಆರಾಧನೆ ಜನಮನದಲ್ಲಿ ಜೀವಂತಿಕೆ ಪಡೆದಿದೆ. ಕಥನ ಗೀತೆಗಳಲ್ಲಿ ಐತಿಹಾಸಿಕ ವ್ಯಕ್ತಿಯನ್ನು ಗುಣಗಾನ ಮಾಡಿರುವುದೇ ಹೆಚ್ಚು. ಅದಕ್ಕಿಂತಲೂ ಪೌರಾಣಿಕ ವೀರನನ್ನು ಬಹುಬೇಗ ಜನಪ್ರಿಯಗೊಳಿಸಿ ಆರಾಧಿಸುವುದನ್ನು ನೋಡಬಹುದಾಗಿದೆ. ಒಂದು ಪ್ರದೇಶಕ್ಕೆ ಸೀಮಿತವಾದ ವೀರರು ಒಂದು ಜನಾಂಗ ಮತ್ತು ಸಂಸ್ಕೃತಿಯ ಪರಧಿಯನ್ನು ಧಾಟಿ ನಿಲ್ಲುತ್ತಾರೆ. ಇಂದಿಗೆ ಸುಮಾರು ೫ – ೬ ಶತಮಾನಗಳಿಂದ ಇಂಥ ವೀರ ಪರಂಪರೆಗೆ ಚಾರಿತ್ರಿಕ ಮಹತ್ವವಿದೆ.

ಬುಡಕಟ್ಟು ವೀರರು ಬೇಟೆ, ಪಶುಪಾಲನೆ ಮತ್ತು ಕೃಷಿ ವೃತ್ತಿಗಳ ಜೊತೆಜೊತೆಗೆ ರಾಜಪ್ರಭುತ್ವಕ್ಕೂ ನಿರ್ಣಾಯಕ ವ್ಯಕ್ತಿಗಳಾಗಿದ್ದುದುಂಟು. ಹೀಗಾಗಿ ಅನೇಕ ಪಾಳೆಯಪಟ್ಟುಗಳಿಗೆ ಒಡೆಯರಾಗಿ ಆಳಿದರು. ರಾಜ್ಯ ಸಾಮ್ರಾಜ್ಯಗಳಲ್ಲಿ ಸೈನಿಕರಾಗಿ ದಂಡಾಧಿಪತಿಗಳಾಗಿ ಕೆಲಸ ನಿರ್ವಹಿಸಿದ್ದರು. ವಿಜಯನಗರ ಸಾಮ್ರಾಜ್ಯದ ಅವನತಿಯ ಸಣ್ಣಪುಟ್ಟ ಸಂಸ್ಥಾನಗಳ ಏಳಿಗೆಗೆ ಅಸ್ಪದವಾಯಿತು. ಪಾಳೆಯಗಾರರು ಸ್ವಾತಂತ್ರ್ಯರಾಗಿ ಆಳ್ವಿಕೆ ನಡೆಸಿದ್ದು, ಈ ಹಂತದಲ್ಲಿಯೇ, ನಾಯಕನಪಟ್ಟ ಪಾಳೆಯಗಾರರು, ಗುಡೆಕೋಟೆ, ಜರಿಮಲೆ ಮೊದಲಾದ ಪಾಳೆಯಗಾರರು ತಮ್ಮ ಮೂಲಗಳನ್ನು ಬೇರೆ ಬೇರೆಯಾಗಿ ಹೊಂದಿರುತ್ತಾರೆ. ಕಾಟೆಮಲ್ಲನಾಯಕ ಆಂಧ್ರದಿಂದ ವಲಸೆ ಬಂದು ನಾಯಕನಹಟ್ಟಿ ಸಮೀಪ ರಾಮದುರ್ಗದ ಹತ್ತಿರ ತಳವೂರಿನ ನಂತರ ರಾಜ್ಯ ಸ್ಥಾಪನೆಗೆ ವಿಜಯನಗರದ ಅರಸರು ಪ್ರೋತ್ಸಾಹಿಸಿರುವುದನ್ನು ತಿಳಿಯಬಹುದು.

ಕಾಡಿನ ಸಂಸ್ಕೃತಿಯ ರೂಢಿಸಿಕೊಂಡಿದ್ದ ಬೇಡರು ರಾಜಪ್ರಭುತ್ವದೊಡನೆ ಹೊಂದಾಣಿಕೆ ಮಾಡಿಕೊಂಡಿದ್ದು ಸವಾಲುಗಳನ್ನು ಎದುರಿಸಿದಂತಾಗಿತ್ತು. ಬುಡಕಟ್ಟು ವೀರ ರಾಜನನ್ನೇ ಹತ್ತಿಕ್ಕುವ ಸಾಮರ್ಥ್ಯ ಹೊಂದಿರುತ್ತಿದ್ದ ಮತ್ತು ಅರಸನಿಗಿಂತಲೂ ಹೆಚ್ಚು ಖ್ಯಾತಿ ಮತ್ತು ಆರಾಧನೆಗೊಳಪಡುತ್ತಿದ್ದ.

**ಸಾಂಸ್ಕೃತಿಕ ವೀರರು**

ಮಾನವನ ಜೀವನ ವಿಧಾನಗಳ ಒಟ್ಟು ಮೊತ್ತವೇ ಸಂಸ್ಕೃತಿ. ರೀತಿ, ನೀತಿ ನಡವಳಿಕೆಗಳ ಪರಿಷ್ಕರಣೆಗಳು ಸಂಸ್ಕೃತಿಯೆಂಬ ಯಂತ್ರದ ಮೂಲಕ ಆಗುತ್ತವೆ. ಆದರೂ ಸಂಸ್ಕೃತಿ ಮಾನವನ ರೂಪಿತ ಜಗತ್ತಿನಲ್ಲಿ ಬಹುವ್ಯಾಪಕವಾಗಿ ಬೆಳವಣಿಗೆಯಾಗಿದೆ. ಪ್ರಾಚೀನ ಕಾಲದಿಂದಲೂ ಒಂದು ಜನಾಂಗದ, ಧರ್ಮದ ಮತ್ತು ಪ್ರದೇಶದ ಜನಸಮುದಾಯಗಳಲ್ಲಿ ವೀರರು ಕಂಡುಬಂದಿದ್ದಾರೆ. ಕನ್ನಡ ಸಾಹಿತ್ಯದಲ್ಲಿಯೂ ಗಮನಿಸಬಹುದು. ಪಂಪ ವಿಕ್ರಮಾರ್ಜುನ ವಿಜಯದಲ್ಲಿ ಅರಿಕೇಸರಿಯನ್ನು ಅರ್ಜುನನೊಡನೆ ಸಮೀಕರಿಸಿರುವುದು. ರನ್ನ ಸಾಹಸ ಭೀಮ ವಿಜಯದಲ್ಲಿ ಸತ್ಯಾಶ್ರಯ, (ತೈಲಪ) ನನ್ನು ಭೀಮನೊಡನೆ ಹೋಲಿಸಿ ಗುಣಗಾನ ಮಾಡಿರುವುದು ಆ ಕಾಲದ ವೀರತ್ವದ ಮೆರುಗನ್ನು ಸಾರ್ವತ್ರಿಕಗೊಳಿಸುವ ಸಾರು ಲೋಕೈಕ ಪರಮ ಕರ್ತವ್ಯವೆಂಬಂತೆ ಭಾವಿಸಲಾಗಿತ್ತು.

ಕುಮಾರರಾಮ ಬೇಡ ಜನಾಂಗದ ಆರಾಧ್ಯದೈವ. ಅವನು ಐತಿಹಾಸಿಕ ವ್ಯಕ್ತಿಯೂ ಹೌದು, ಬುಡಕಟ್ಟು ವೀರನು ಹೌದು. ಹೇಗೆಂದರೆ ಅವನ ರಾಜ್ಯಾಳ್ವಿಕೆಗಿಂತ ಗೋಗ್ರಹಣಮಾಡಿ ಪಶುಗಳನ್ನು ಸಂರಕ್ಷಿಸಿ ಬುಡಕಟ್ಟು ಜನರ ಪ್ರೀತಿಗೆ ಪಾತ್ರವಾಗಿದ್ದು, ಶ್ಲಾಘನೀಯ. ವೀರನೆನಿಸಿಕೊಳ್ಳಲು ಸಮಾಜದಲ್ಲಿ ಏನೆಲ್ಲಾ ಪರಿವರ್ತನೆಗಳನ್ನು ಸಾಧಿಸಬೇಕಾಗಿತ್ತು. ಚಿತ್ರದುರ್ಗ ಜಿಲ್ಲೆ ಬುಡಕ್ಟು ಜನರ ಗಣಿಯಾಗಿದೆ. ಮೊಳಕಾಲ್ಮೂರು ತಾಲೂಕಿನ ಕಪ್ಪಡಬಂಡಹಟ್ಟಿಯಲ್ಲಿರುವ ಪೆದ್ದಯ್ಯನ ವೀರಗಲ್ಲು ೧೦ನೇ ಶತಮಾನದಲ್ಲಿ ಕೆತ್ತಿರುವುದಾಗಿದೆ. ವೀರನ ಪರಂಪರೆ ಇಂದಿಗೂ ಬೆಳೆದಿದೆ ಎಂಬುದಕ್ಕೆ ಇದು ಉದಾಹರಣೆ. ಗೊಲ್ಲರಲ್ಲಿಯೂ ಚಿತ್ತಯ್ಯ, ಸಿರಯಣ್ಣ ಮೊದಲಾದವರು ಕಂಡು ಬರುತ್ತಾರೆ. ವಿಶೇಷವೆಂದರೆ ಬುಡಕಟ್ಟು ನೆಲೆಗಳ ಮೇಲೆ ಅಲ್ಲಿನ ನಾಯಕನ ಪ್ರಭಾವ ಹೆಚ್ಚಾಗಿರುತ್ತದೆ. ಹಟ್ಟಿಯನ್ನು ಕಟ್ಟಿದವನು, ಜನಾಂಗದ ಹಿರಿಯನು, ಎಲ್ಲಕ್ಕೂ ಮುಂದಾಳತ್ವ ವಹಿಸುವವನು, ಸಾಂಸ್ಕೃತಿಕ ವೀರರನ್ನು ಪುರಾಣದ ವೀರರಿಗೆ ಸಮವೆಂದು ಆರಾಧಿಸುವುದುಂಟು. ಆ ಪರಂಪರೆ ಹಾಗೆಯೇ ಮುಂದುವರೆಯುತ್ತದೆ. ಪ್ರಸಿದ್ಧ ಯಾತ್ರಾಸ್ಥಳಗಳಿಗೆ ತಮ್ಮ ಮೂಲ ವ್ಯಕ್ತಿಗಳ ಹೆಸರಿನಲ್ಲಿ ಪೂಜೆ ಸಲ್ಲಿಸಿ ಬರಲು ಹೋಗುತ್ತಾರೆ. ಹಂಪೆ, ಆನೆಗುಂದಿ ಬೇಡರಿಗೆ ಮೂಲ ನೆಲೆಗಳಾಗಿವೆ. ಪ್ರತಿ ವರ್ಷ ಇಲ್ಲಿಗೆ ಬೇಡರು ಬಂದು ಹೋಗುತ್ತಾರೆ. ಐತಿಹಾಸಕ ವೀರ ವ್ಯಕ್ತಿಗಿಂತಲೂ ಸ್ಥಾನಮಾನಗಳಿಸಿದ ಬುಡಕಟ್ಟು ಸಾಂಸ್ಕೃತಿಕ ವೀರ ಆ ಸಮುದಾಯದ ಎಲ್ಲದಕ್ಕೂ ಕಾರಣಿಭೂತನಾಗಿರುತ್ತಾನೆ. ಈ ಹಿನ್ನೆಲೆಯಲ್ಲಿ ನೇತಾರನಾಗಿ ಹೊಸ ಪರಿವರ್ತನೆಗೆ ನಾಂದಿ ಹಾಡಿದ ಕಾರಣ ಅವನು ಆ ಸಮುದಾಯದ ಸಾಂಸ್ಕೃತಿಕ ನಾಯಕನಾಗಿ ಉಳಿಯುತ್ತಾನೆ.

ಹಿಂದೆ ಸಾಂಸ್ಕೃತಿಕ ವೀರ ಎಂದು ಕರೆಯುವ ಪದ್ಧತಿ ಇರಲಿಲ್ಲ. ಆಧುನಿಕ ಪರಿಕಲ್ಪನೆಗಳು ಬಂದಾಗ, ವಿದ್ವಾಂಸರು ಇಂಥಾ ಚೌಕಟ್ಟನ್ನು ರೂಪಿಸಿದರು. ವೀರ ಎಂದರೇನು? ತಿಳಿದುಕೊಂಡರೆ 'ಸಾಂಸ್ಕೃತಿಕತೆ'ಯನ್ನು ಅವಲೋಕಿಸುವುದು ಅಗತ್ಯವಾಗಿದೆ. ಜನರ ಜೀವನ

ಮೌಲ್ಯಗಳಿಗೆ, ಮಹತ್ತರವಾದ ಪರಿವರ್ತನೆಯನ್ನು ತಂದುಕೊಟ್ಟ ಹರಿಕಾರ ವೀರನಿರಬಹುದಾಗಿದೆ. ಒಂದು ಸಮುದಾಯದ ಪುರಾಣ, ಜಾನಪದ, ಐತಿಹ್ಯ, ಪ್ರತೀತಿಗಳಲ್ಲಿ ತನ್ನ ಜನರಿಗೆ ಸಂಸ್ಕೃತಿಯನ್ನು ರೂಪಿಸಿದ ಅಥವಾ ತಂದುಕೊಟ್ಟ ವ್ಯಕ್ತಿಗೆ ಸಾಂಸ್ಕೃತಿಕ ವೀರ ಎನ್ನಲಾಗುತ್ತದೆ. ಮನುಷ್ಯನ ಪಾತ್ರವಲ್ಲದೆ, ಪ್ರಾಣಿ ಸ್ವರೂಪದ ಚರಿತ್ರೆ ಸುತ್ತಮುತ್ತಲಿನ ವ್ಯಕ್ತಿಯನ್ನು ಮೇಲಿನಂತೆ ಸಂಕೇತಿಸಲಾಗುವುದು. ವೀರನು ಉತ್ತಮವಾದ ವಸ್ತುಗಳನ್ನು ಕೊಟ್ಟರೆ, ಉತ್ಪಾದಿಸಿದರೆ, ಆತನೇ ಸೃಷ್ಟಿಸಿದರೆ ಅಂತಹವುಗಳು ಸಂಸ್ಕೃತಿ ನಿರ್ಮಾಣದ ಲಕ್ಷಣಗಳು. ಆಹಾರ, ಕಲೆ, ಸಾಧನ ಮತ್ತು ಜನರ ನಡಾವಳಿಗಳು ಆ ವೀರನಿಂದ ಬಳುವಳಿಯಾಗಿ ಬಂದಿರುತ್ತವೆ. ಸೂರ್ಯ, ಬೆಂಕಿ, ಬೇಸಿಗೆ, ಮಳೆ ದೇವರು ಮೊದಲಾದವುಗಳನ್ನು ಸಾಂಸ್ಕೃತಿಕ ವೀರನಾದವನು ತನ್ನ ಜನರಿಗಾಗಿ ಕದಿಯುವ ಅಥವಾ ಜಯಿಸುವ ಪ್ರಸಂಗ ಬರುತ್ತದೆ. ಬಂಧನದಿಂದ ಬಿಡಿಸುವುದು, ಮಾರುತಗಳನ್ನು ನಿಯಂತ್ರಿಸುವುದು, ಹುರುಳಿಕಾಯಿ ಇತರೆ ಧಾನ್ಯಗಳ ಉತ್ಪಾದನೆ, ಪ್ರಾಣಿ – ಸಸ್ಯಗಳಿಗೆ ಒಂದು ಸಾಂಕೇತಿಕ ಗುರುತನ್ನು ನೀಡಲಾಗುತ್ತದೆ. ಮಳೆ ಬರುವುದನ್ನು ನದಿಗಳ ಗತಿಯನ್ನು ನಿರ್ಧರಿಸುವುದು ವೀರನೇ. ಅಲ್ಲದೇ, ಬಿತ್ತನೆ ಉಳುಮೆ, ಕೃಷಿ ಚಟುವಟಿಕೆಗಳಲ್ಲಿ ತೊಡಗಿರುವಾಗ ಹಾಡು ಮತ್ತು ನೃತ್ಯಗಳನ್ನು ತಿಳಿಸುವವನು ವೀರ. ತನ್ನ ಪರಿಸರದಲ್ಲಿ ಲಭ್ಯವಿರುವ ಗಿಡಮೂಲಿಕೆಗಳ ಮೂಲಕ ನಾಟಿ ಔಷಧಿಯನ್ನು ಜನರಿಗೆ ಕೊಡುತ್ತಾನೆ.

ಸಾಂಸ್ಕೃತಿಕ ವೀರನೆಂದರೆ ಅತಿಮಾನುಷ ಕಲ್ಪನೆಯಿತ್ತು. ವಸಾಹತು ಲೇಖಕರು ಜಗತ್ತಿನ ಎಲ್ಲಾ ವೀರರಿಗಿಂತ ಇಲ್ಲಿನವರು ಭಿನ್ನ ಎಂಬುದನ್ನು ಅರಿತರು. ಆಗ ವೀರನ ಬಗೆಗಿನ ನಂಬಿಕೆಗಳನ್ನು ನಮ್ಮವರು ಕಂಡುಕೊಂಡದ್ದೂ ಬೇರೆ. ಸಾಂಸ್ಕೃತಿಕ ವೀರ ಬಹುತೇಕ ಪ್ರಾಣಿ – ಪಕ್ಷಿ ರೂಪವನ್ನು ತಾಳಿರುತ್ತಾನೆ. ಜನರ ಪ್ರತಿನಿಧಿಯಾಗಿಯೂ ಸಾಂಸ್ಕೃತಿಕ ವೀರ ಕಂಡು ಬರುವನು. ಬೆಳಕನ್ನು ತಂದುಕೊಟ್ಟಿದ್ದು, ಬಂಧನಕ್ಕೊಳಗಾಗಿದ್ದ ನೀರು, ಬೇಟೆಯನ್ನು ಬಿಡಿಸುತ್ತಾನೆ. ತೆರಿಗೆ ವಿಧಿಸುವುದು, ವಿಧಿ – ಆಚರಣೆಗಳನ್ನು ಮಾಡುವುದು ದುಷ್ಟ ಶಕ್ತಿಯಿಂದ ಜಗತ್ತನ್ನು ವಿಮೋಚನೆಗೊಳಿಸುವ ಮನೋಭಾವ ವೀರನಲ್ಲಿರುತ್ತದೆ. ಈ ಭೂಮಿಯ ಮೇಲೆ ಮಾನವ ಜೀವನಾರಂಭ ಮಾಡಿದಾಗ ಆಗ ಅವನೊಬ್ಬ ಸಾಂಸ್ಕೃತಿಕ ವೀರನೇ ಆಗಿದ್ದ. ಅವನಿಗೆ ಮಾನವ ಸಂಕುಲವೇ ಬೆಳೆಯಿತು. ಪ್ರಾಣಿಗಳಲ್ಲಿ ಹೀಗೆ ಅಮಿಬಾ, ಚಿಂಪಾಂಜಿ, ಗೊರಿಲ್ಲಾಗಳನ್ನು ಉದಾಹರಿಸಬಹುದು. ಧ್ರುವ ಪ್ರದೇಶಗಳ್ಲಲಿ ವರ್ಷಕ್ಕೆ ಎರಡು ದಿನಗಳು ಮಾತ್ರ. ೬ ತಿಂಗಳು ಕತ್ತಲು, ೬ ತಿಂಗಳು ಬೆಳಕು. ಆಯಾ ಅವಧಿಗಳಲ್ಲಿ ಸಾಂಸ್ಕೃತಿಕ ಚಟುವಟಿಕೆಗಳು ಹೊಸ ಹೊಸ ರೂಪ ಪಡೆಯುತ್ತವೆ.

ಬುಡಕಟ್ಟು ಜನರ ಆವಾಸ ನೆಲೆ ಕಾಡೆ ಆಗಿರುವುದರಿಂದ ಕಾಡಿನಲ್ಲಿ ವೀರರು ಪವಾಡಗಳನ್ನು ಮಾಡುವುದುಂಟು. ಪ್ರಾಣಿ – ಮನುಷ್ಯರ ನಡುವೆ ಸಂಬಂಧ ಕಲ್ಪಿಸುವುದು, ಹೊಂದಾಣಿಕೆ ಮಾಡುವ, ಪರಿವರ್ತನೆಗಳು ಕಂಡುಬರುತ್ತವೆ. ಸಾಂಸ್ಕೃತಿಕ ವೀರ ಆರ್ಥಿಕ, ಧಾರ್ಮಿಕ ಮತ್ತು ಸಾಮಾಜಿಕ ಕಟ್ಟಳೆಗಳನ್ನು ಬಿಟ್ಟುಕೊಟ್ಟಂಥ ವ್ಯಕ್ತಿ. ಸಾಂಸ್ಕೃತಿಕ ವೀರನನ್ನು ಉದಾತ್ತೀಕರಿಸುವ ಅನುಯಾಯಿಗಳು ಅವನಿಗೆ ಅನೇಕ ಜನ ಹೆಂಡಿರು, ಮಕ್ಕಳು, ಸಹೋದರರು ಇರುವರೆಂದು ಹೇಳುತ್ತಾರೆ. ಇವರುಗಳ ನಡುವಿನ ವ್ಯತ್ಯಾಸ, ಲಕ್ಷಣಗಳು ಪರಸ್ಪರ ಭಿನ್ನವಾಗಿರುವಂಥವು. ಸಾಂಸ್ಕೃತಿಕ ವೀರನ ಸಾಧನೆಗಳು ವರ್ತಮಾನದ ಘಟನೆಗಳಿಗೆ ಕಾರ್ಯಕಾರಣ ಸಂಬಂಧವನ್ನು ಸೂಚಿಸುತ್ತವೆ. ಪುರಾಣಪುರುಷರಂತೆ ಸಾಂಸ್ಕೃತಿಕ ವೀರರು ಆರಂಭದಲ್ಲಿ ಸಾಧನೆ ತೋರಿ ಮರೆಯಾದ ನಂತರ ಅವರನ್ನು ದೇವರಾಗಿ ಮಾಡಿಕೊಂಡಿರುತ್ತಾರೆ. ಮೊದಲಿದ್ದ ಸಾಂಸ್ಕೃತಿಕ ವೀರ ಎಂಬುದು ಕಳಚಿಕೊಂಡು ದೇವತೆರೂಪ ಸಿಗುತ್ತದೆ ಆ ವ್ಯಕ್ತಿಗೆ. ಮ್ಯಾಸಬೇಡರ ಸಾಂಸ್ಕೃತಿಕ ವೀರರು ಒಂದು ರೀತಿಯಲ್ಲಿ ಬುಡಕಟ್ಟನ್ನು ಕಟ್ಟಿ, ಸಂಸ್ಕೃತಿ ನಿರ್ಮಿಸಿದ 'ಬುಡಕಟ್ಟು ಸಂಸ್ಕೃತಿಯ ನಾಯಕರು' ಆಗಿರುವರು.

ಬುಡಕಟ್ಟುಗಳಲ್ಲಿ ವೀರನಾಗಿ ಆ ಸಂಸ್ಕೃತಿಯ ನಾಯಕನಾಗಿ ಒಂದು ಹಂತಕ್ಕೆ ಶರಣನಾಗಿ ಸ್ಥಾನ ಪಡೆಯುವ ಔಚಿತ್ಯವು ಬೆಳೆದುಬಂದಿದೆ. ಮಲೆಮಹದೇಶ್ವರ ಮಂಟೇಸ್ವಾಮಿ, ತಿಪ್ಪೇಸ್ವಾಮಿ, ಜಗಳೂರು ಪಾಪನಾಯಕ, ಗಾದರಿಪಾಲನಾಯಕ ಮೊದಲಾದವರು ಸಾಂಸ್ಕೃತಿಕ ವೀರನಾಯಕರಾಗಿ ನಂತರ ಶರಣರಾಗಿರುವುದು ಗಮನಾರ್ಹ. ತಿಪ್ಪೇಸ್ವಾಮಿ ಮಧ್ಯಕಾಲದಲ್ಲಿದ್ದ ಒಬ್ಬ ಬೇಡ ಶರಣ. ನಾಯಕನಹಟ್ಟಿ ಪಾಳೆಯಗಾರರಿಗೆ ಗುರುಗಳಾಗಿದ್ದರು. ಬೇಡರಿಗೆ ಈತ ಮನೆದೇವರಾಗಿದ್ದಾನೆ. 'ಮಾಡಿದವರಿಗೆ ನೀಡು ಭಿಕ್ಷೆ' ಎಂಬ ಸಿದ್ಧಾಂತದಿಂದ ತಳವರ್ಗ, ಕೂಲಿಕಾರ್ಮಿಕರಿಗೆ 'ಕಾಯಕ' ಅರಿವನ್ನು ತಂದುಕೊಟ್ಟು ಕೀರ್ತಿಶಾಲಿ, ಯಾವುದೇ ಒಂದು ಸಮುದಾಯ ತಮ್ಮ ಅನನ್ಯತೆಯನ್ನು

ಉಳಿಸಿಕೊಳ್ಳಲು ಹಂಬಲಿಸುತ್ತದೆ. ವ್ಯಕ್ತಿ ಮೂಲಕವೋ, ಸಂಕೇತದ ಮೂಲಕವೋ ಶಾಶ್ವತಗೊಳಿಸುವ ಸಲುವಾಗಿ ಒಬ್ಬ ವ್ಯಕ್ತಿಯನ್ನು ರೂಪಿಸುವುದು, ನೇತಾರರಾಗಿ ಮಾಡುವುದು ಅವರ ಮನ್ನಣೆಗೆ ಪ್ರಿಯವಾಗಿದೆ. ರಾಜಪ್ರಭುತ್ವಕ್ಕಿಂತ ಬುಡಕಟ್ಟುಗಳ ಪ್ರಭುತ್ವ ಸಮಾಜದ ಮೇಲೆ ವ್ಯಾಪಕ ಪ್ರಭಾವ ಬೀರಿರುವುದನ್ನು ಸ್ಮರಿಸಬಹುದಾಗಿದೆ.

**ಮ್ಯಾಸಬೇಡರ ವೀರರ ಸಾಂಸ್ಕೃತಿಕ ಸಂದರ್ಭಗಳು**

ಚಿತ್ರದುರ್ಗ ಜಿಲ್ಲೆಯಲ್ಲಿ ಕಂಡುಬರುವ ಬೇಡ ಮತ್ತು ಗೊಲ್ಲರ ಸಮುದಾಯಗಳು ಪ್ರಾಚೀನ ಕಾಲದ ಬುಡಕಟ್ಟುಗಳು. ಇವೆರಡರಲ್ಲೂ ವೀರರನ್ನು ಗುರುತಿಸಬಹುದಾಗಿದೆ. ಮ್ಯಾಸಬಡರಲ್ಲಿ ವಿಶೇಷವಾಗಿ ಪಿತೃಪ್ರಧಾನತೆ ಮೂಲಕ ಪಾರಂಪರಿಕವಾಗಿ ತಮ್ಮ ಪೂರ್ವಜರನ್ನು ಆರಾಧಿಸಿಕೊಂಡು ಬರುವುದು ಇಂದಿಗೂ ಪ್ರಚಲಿತವಿದೆ. ಸತ್ತ ವ್ಯಕ್ತಿಯನ್ನು ಹೂಳುವಾಗ ಅನೇಕ ವಿಧಿ – ಆಚರಣೆಗಳನ್ನು ಮಾಡುವರು. ಆಕಸ್ಮಿಕ ಮತ್ತು ಅಸಹಜ ಸಾವುಗಳಿಗೆ ಸಿಲುಕಿದ ಶವವನ್ನು ಸುಡಲಾಗುತ್ತದೆ.

ಹೀಗೆ ಅಡವಿ – ಬೆಟ್ಟ – ಗುಡ್ಡಗಳಲ್ಲಿ ವಾಸಿಸುತ್ತಿದ್ದ ಮ್ಯಾಸಬೇಡರು ತಮ್ಮ ಬುಡಕಟ್ಟು ಸಂಪ್ರದಾಯವನ್ನು ಗಟ್ಟಿಗೊಳಿಸಲು ಮತ್ತು ಸಂಸ್ಕೃತಿಯನ್ನು ಉಳಿಸಿಕೊಳ್ಳಲು ನಿರಂತರವಾಗಿ ಶ್ರಮಿಸಿದರು. ಒಂದೊಂದು ಬೆಡಗಿನವರು ತಮ್ಮ ಹಿರಿಯ ವ್ಯಕ್ತಿಯನ್ನು ಆರಾಧಿಸುವ, ಸ್ಮರಣೆ ಮಾಡುವುದನ್ನು ಕಾಣಬಹುದು. ಇಲ್ಲಿನ ವೀರರು ದೇಶರಕ್ಷಣೆಯನ್ನು ತನ್ನ ಸಂಸ್ಕೃತಿಯ ರಕ್ಷಣೆಯೆಂದು ಭಾವಿಸಿಕೊಮಡರು. ತಮ್ಮ ಬದುಕೇ ರಾಷ್ಟ್ರ ರಕ್ಷಣೆ, ಅಭಿವೃದ್ಧಿಯ ಸಂಕೇತವೆಂಬುದು ಬುಡಕಟ್ಟು ಲೋಕದ ಸಾರ್ವತ್ರಿಕ ಅಭಿಪ್ರಾಯವಾಗಿದೆ. ಇಲ್ಲಿ ಸಮಾಜ ಮೆಚ್ಚುವ ಕೆಲಸ ಮಾಡಿದರೆ ವ್ಯಕ್ತಿಯನ್ನು ಗೌರವಿಸಲಾಗುತ್ತಿತ್ತು. ಇಂಥ ಅನೇಕ ಸಾಂಸ್ಕೃತಿಕ ವೀರರಿಂದ ಮ್ಯಾಸಬೇಡರ ಸಂಸ್ಕೃತಿ ಅಭಿವೃದ್ಧಿಯಾಯಿತು.

ಮ್ಯಾಸಬೇಡರ ಸಂಸ್ಕೃತಿಯಲ್ಲಿ ದೇವರುಗಳ ಸ್ಥಾಪನೆ, ಹಬ್ಬ – ಹರಿದಿನ, ನ್ಯಾಯತೀರ್ಮಾನಕ್ಕೆ ಕಟ್ಟೇಮನೆ, ದೇವರ ಮನೆಗಳು ಇಲ್ಲಿ ಪ್ರಮುಖ ಲಕ್ಷಣಗಳಾಗಿವೆ. ಈ ಕೆಲಸ ಮಾಡಲಿಕೆ ೭ ಜನ ಹಿರಿಯರು, ೩ ಜನ ನಾಯಕರು ಇದ್ದರು. ಇಂದು ಈ ವಿಧಾನವಿಲ್ಲ, ತುಂಬಾ ಮಾರ್ಪಾಟು ಆಗಿದೆ. ಇವರಲ್ಲಿ ವ್ಯಾಜ್ಯ, ವಿವಾದಗಳನ್ನು ತಮಗೆ ತಾವೇ ಬಗೆಹರಿಸಿಕೊಳ್ಳುತ್ತಿದ್ದರು. ಈ ರೀತಿ ಇರುವಾಗ ಹೆಣ್ಣು, ಹೊನ್ನು ಮತ್ತು ಮಣ್ಣಿಗಾಗಿ, ಸಾಮಾಜಿಕ ಕಟ್ಟುಪಾಡಿಗಾಗಿ ಇಲ್ಲಿನ ವೀರರು ಹೋರಾಡಿ ಮಡಿದುದು ಸ್ಪಷ್ಟವಾಗಿದೆ. ಲೌಕಿಕ ಜಂಜಾಟಗಳಲ್ಲಿ ಮಿಂದು ಅದರಾಚೆಗೆ ಹೊರ ಸೆಳೆವ ವೀರನ ವ್ಯಕ್ತಿತ್ವವು ಅನುಕರಣೀಯವಾದುದು.

ಗಾದರಿಪಾಲನಾಯಕ ಪಶುಪಾಲಕನಾಗಿ ಇಡೀ ಸಮುದಾಯವನ್ನು ಆಳುವ ಶಕ್ತಿಯಿದ್ದರೂ, ಅವನು ದನಗಾಹಿಯಾಗಿ ಅಪಾರ ಸೇವೆ ಸಲ್ಲಿಸಿದ. ಆಕಳುಗಳ ರಕ್ಷಣೆಗಾಗಿ ಹುಲಿಗಳೊಡನೆ ಹೋರಾಡಿ ಮಡಿದುದು, ನಂತರ ಇಬ್ಬರು ಮಡದಿಯರು ಸಹಗಮನ ಅನುಸರಿಸಿದ್ದು ಗಮನಾರ್ಹ. ಇವನನ್ನು ಜನಪದ ಸಾಹಿತ್ಯ ಆಧ್ಯಾತ್ಮಿಕ ಪುರುಷನಾಗಿ ಜನಪದರು ಕಾಣುತ್ತಾರೆ.

ಶರಣನಂತೆ ಸ್ಥಾನ ಪಡೆದ ಜಗಳೂರು ಪಾಪನಾಯಕನು ಒಬ್ಬ ಸಾಮಾನ್ಯ ಪಶುಪಾಲನಾಗಿದ್ದ. ತಿರುಪತಿಯಾತ್ರೆ, ಜ್ಞಾನೋದಯದಿಂದ ವಾಕ್‌ಶುದ್ಧಿ ಇತ್ತು. ಪವಾಡ ಪುರುಷನಾಗಿರುವಾಗ ಜಗಪತಿರಾಯ ಎಂಬ ಅರಸ ಇವನನ್ನು ಕೊಲೆ ಮಾಡಿಸುತ್ತಾನೆ. ಇವನ ಹೋರಾಟ ಸಾಹಸಗಳು ವಿಸ್ಮಯಕರವಾಗಿವೆ.

ಯರಗಾಟ ನಾಯಕನು ಸಹಾ ಪಶುಪಾಲಕ, ವಲಸೆ ಹೋಗಿ ದನ ಮೇಯಿಸಿಕೊಂಡು ಬರುತ್ತಿದ್ದುದು ಸಾಮಾನ್ಯ. ಈ ವೀರ ಹೆಣ್ಣಿಗಾಗಿ ಏನೆಲ್ಲಾ ಸಾಹಸ ಮಾಡಿ ಪಡೆದರೂ, ಜೀವಿಸುವ ಸುಖ ನೆಮ್ಮದಿ, ಅವಕಾಶ ಸಿಗಲಿಲ್ಲ. ಇವನಂತೆಯೇ ಕೊಡಗಲು ಬೊಮ್ಮಯ್ಯ, ಬರ್ಬರ ಆಳ್ವಿಕೆಯಲ್ಲಿ, ಕ್ರೂರವಾದ ತೆರಿಗೆಗಳಿಂದ ಜನದಂಗೆ ಎದ್ದಿದ್ದರು. ಸಾಹಸಿಯಾಗಿದ್ದರೂ ಲಂಪಟನಾಗಿದ್ದಾನೆ. ಪರಸ್ತ್ರೀಯರನ್ನು ಕದ್ದದ್ದು ಒಂದು

ತಪ್ಪಾದರೆ ಕೊಲ್ಲುವ ಹೇಯ ಕೃತ್ಯವನ್ನು ಎಸಗುತ್ತಾನೆ. ಈ ವಿಚಾರವನ್ನು ದಡ್ಡಿಸೂರನಾಯಕ ಗಾದಿ (ಜ) ನಾಯಕ ಕಥೆಗಳಲ್ಲಿ ಅವಲೋಕಿಸಬಹುದು. ಮಂದೆಗೆ ಚಿರತೆ ದಾಳಿ ಮಾಡಿದಾಗ ಯರಮಂಚಯ್ಯ ಅದನ್ನು ಹೊಡೆದು ತಾನು ಮಡಿದ ಸಂಗತಿಯು ಪಶುಗಳ ರಕ್ಷಣೆಗೆಂಬುದು ಗಮನಾರ್ಹ. ಇವನ ವೀರಗಲ್ಲು ಇಂದಿಗೂ ಆರಾಧನೆಗೊಳಪಟ್ಟಿದೆ. ಹೀಗಾಗಿ ಪಶುಪಾಲಕರಾಗಿ ತಮ್ಮ ದನಗಳನ್ನು ಹುಲಿ, ಚಿರತೆ, ಸಿಂಹ ಕಿರಬಗಳಂಥ ಕಾಡುಪ್ರಾಣಿಗಳಿಂದ ರಕ್ಷಿಸಲು ಪ್ರಾಣವನ್ನೇ ಮುಡುಪಾಗಿಟ್ಟು ಹೋರಾಡಿದ ಯರಮಂಚಯ್ಯನ ಮಗ ಪೆದ್ದಯ್ಯನ ಸಾಧನೆ ಅವಿಸ್ಮರಣೀಯವಾದುದು.

ಮ್ಯಾಸಬೇಡರ ಬುಡಕಟ್ಟು ವೀರರ ಸಾಂಸ್ಕೃತಿಕ ಸಂದರ್ಭಗಳು ಕಾರ್ಯಕಾರಣಕ್ಕೆ ತೀರಾ ಹತ್ತಿರವಾಗಿರುತ್ತವೆ. ಈ ಸಂಬಂಧವನ್ನು ಕಾರಣ ಮತ್ತು ಕಾರ್ಯಗಳ ಮೂಲಕ ಒಂದು ಘಟನೆಯನ್ನು ವಿಶ್ಲೇಷಿಸಲಾಗುವುದು. ಇವರ ಬಗೆಗೆ ಜನಮನರಲ್ಲಿನ ರೋಮಾಂಚನವಾದ ಕಥೆಗಳು ಲಭ್ಯ. ಬೇಟೆಯಾಡುವ ಸಂದರ್ಭ, ಕೊಲ್ಲುವ ಪ್ರಾಣಿ, ಹತನಾಗುವ ಬೇಟೆಗಾರ, ಸಹಗಮನ ಅನುಸರಿಸುವ ಪತ್ನಿಯರ ಬಗ್ಗೆ ವೀರಗಲ್ಲು – ಮಾಸ್ತಿ ಕಲ್ಲುಗಳೇ ಸಾಕ್ಷಿ. ಪಶುಪಾಲನೆಯಲ್ಲಿ ತುರುಕಾಳಗ ಮಾಡಿದ ಸತ್ತ ವ್ಯಕ್ತಿಯನ್ನು, ಹೆಣ್ಣಿನ ಮಾನರಕ್ಷಣೆ ಕಾಪಾಡಿದವನನ್ನು ವೀರನೆಂದು ಕರೆಯುವುದು ಸ್ಪಷ್ಟ. ಸಮಕಾಲೀನ ಸಮಾಜಕ್ಕೆ ಅಸಾಧ್ಯವಾದ ಘಟನೆ ಎಂದು ತೋರಿ ಬಂದಾಗ, ಆ ಮೂಲಕ ವೀರನಾಗುವ ಪರಿ ಜನಪದರೇ ನಿರ್ಣಯಿಸುತ್ತಾರೆ.

* * *

# ೪. ಬೇಡ – ನಾಯಕ ವೀರರ ಆರಾಧನಾ ಕ್ಷೇತ್ರಗಳು (1)

**೪.೧ ವೀರರ ಆರಾಧನೆ**

ಬೇಡ ಸಮುದಾಯದಲ್ಲಿ ವೀರರನ್ನು ಮತ್ತು ಅವರ ಆರಾಧನಾ ಕ್ಷೇತ್ರಗಳನ್ನು ಗುರುತಿಸಬಹುದಾಗಿದೆ. ಅಖಿಲ ಕರ್ನಾಟಕದ ವ್ಯಾಪ್ತಿಯಲ್ಲಿ ಇಂಥ ಕ್ಷೇತ್ರಗಳು ವ್ಯಾಪಕವಾಗಿರುವುದು ಚಿತ್ರದುರ್ಗ ಜಿಲ್ಲೆಯಲ್ಲಿ. ಇಲ್ಲಿ ವೀರ ಎಂದರೆ ಯಾರು? ಅವರ ಸಾಧನೆ ಏನು? ಅವರನ್ನು ವೀರ ಎಂದು ಕರೆಯುವ ಮಾನದಂಡ ಯಾವುದು ಎಂಬ ಪ್ರಶ್ನೆ ಎದುರಾಗುತ್ತದೆ. ವೀರರ ಲಕ್ಷಣಗಳು ಪ್ರಾದೇಶಿಕವಾಗಿ ಭಿನ್ನವಾಗಿವೆ. ಪರಂಪರೆ ಮತ್ತು ಸಮಕಾಲೀನತೆಗಳ ನಡುವೆ ಸ್ಥಳ, ವೃತ್ತಿಗಳ ಬಗ್ಗೆ ಭಾವನಾತ್ಮಕವಾದ ಬೆಸುಗೆಯಿದೆ. ಆರಾಧಿಸುವ ವರ್ಗವು ಶೈವ ಮತ್ತು ವೈಷ್ಣವ ಪರಂಪರೆಯಲ್ಲಿ ಬೇಡರು ಗುರುತಿಸಿಕೊಂಡಿದ್ದಾರೆ. ಬೇಡನಾಯಕ ವೀರರು ರಾಜಪ್ರಭುತ್ವಕ್ಕಿಂತ ಸಾಂಸ್ಕೃತಿಕ ಕ್ಷೇತ್ರದಲ್ಲಿ ಪ್ರಸಿದ್ಧರಾಗಿರುವುದುಂಟು. ಆರಾಧನೆಗೊಳಪಡುವ ವೀರರು ದೈವತ್ವಕ್ಕೇರುವ ಮುನ್ನ ತನ್ನ ಒಡೆಯನಿಗೆ ಪ್ರಾಣಾರ್ಪಣೆಯಾಗಲಿ, ಆತ್ಮಬಲಿದಾನಗಳಂಥ ಯಾವ ವಿಧವಾದ ಸಾವನ್ನು ಹೊಂದಿರಲಿಲ್ಲ ಎಂದು ಹೇಳುವಂತಿಲ್ಲ. ಇವರ ಸಾವು ಅಸಹಜವಾದುದು. ಮತ್ತು ವೈಯಕ್ತಿಕವಾಗಿ ತನ್ನ ಸಂಸ್ಕೃತಿಗೆ ಸಂಬಂಧಪಟ್ಟದ್ದು. ವೀರನ ಹೋರಾಟದ ಲಕ್ಷಣಗಳು ಕಾಲಕಾಲಕ್ಕೆ ಬದಲಾಗುತ್ತವೆಯಾದರೂ ಬೇಡನಾಯಕ ವೀರರಲ್ಲಿ ಇಂಥಾ ಬದಲಾವಣೆ ಕಾಣಲಾಗದು. ದನಕರುಗಳ ರಕ್ಷಣೆ, ಕುರಿಮಂದೆಗಳ ರಕ್ಷಣೆ, ಹೆಣ್ಣಿನ ಮಾನರಕ್ಷಣೆ, ಸಂಸ್ಕೃತಿ ರಕ್ಷಣೆ, ದೈವ ನಂಬಿಕೆಗಳಲ್ಲಿ ವೀರರು ಸಾಹಸವೆಸಗಿರುವರು. ಇಂಥ ಮಡಿದ ವೀರನ ಸಥಳ ಅಥವಾ ಸಮಾಧಿಗೆ ಪೂಜಾಕಾರ್ಯಗಳಲ್ಲದೆ, ಹಬ್ಬ – ಆಚರಣೆಗಳು ರೂಢಿಯಲ್ಲಿವೆ.



ಬೇಡವೀರನೊಬ್ಬ ಹೋರಾಡಿ ಮಡಿದ ಚಿತ್ರ, ಪೂಜಾರಹಳ್ಳಿ

ಪರಲೋಕ ಮತ್ತು ಪುನರ್ಜನ್ಮವನ್ನು ನಂಬುವ ಬೇಡರು ತಮ್ಮ ಪರಂಪರೆಯಂತೆ ಪಿತೃಋಣ, ಋಷಿಋಣ, ದೇವಋಣಗಳನ್ನು ತೀರಿಸುವುದು ಸಹಜ. ಮುಕ್ತಿ ಪಡೆಯಲು ಮದುವೆ ಮಕ್ಕಳಾಗಬೇಕು; ವಿದ್ಯಾಭ್ಯಾಸ, ಪೂಜೆ, ದಾನ, ನೀತಿಗಳು ಅವಶ್ಯಕತೆವೆನಿಸಿವೆ. ಉದಾ: ಬುದ್ಧ ವೈಶಾಖ ಶುದ್ಧ ಪೂರ್ಣಿಮೆಯಂದು ಜನಿಸಿದ್ದು ಮನೆ ತೊರೆದದ್ದು ಮತ್ತು ಧರ್ಮ ಬೋಧಿಸಿದ್ದು, ನಿರ್ವಾಣ ಹೊಂದಿದ್ದು ಅದೇ ದಿನ. ಹೀಗಾಗಿ ಮೇ ತಿಂಗಳ ಬುದ್ಧಪೂರ್ಣಿಮಾ ಬೌದ್ಧರಿಗೆ ಪವಿತ್ರದಿನ. ಈ ಮೂರು ವೈಶಾಖ ಪುಣ್ಯ ತಿಥಿಯಲ್ಲಿ ಬರ್ಮಾ, ಸಿಂಹಳ, ಸಯಾಂ ಮೊದಲಾದ ರಾಷ್ಟ್ರಗಳಲ್ಲಿ ಉತ್ತಮ ವೈಭವ, ಸಂಭ್ರಮದಿಂದ 'ಬುದ್ಧ ದಿನ' ಆಚರಿಸುತ್ತಾರೆ. ಬೌದ್ಧ ಧರ್ಮವನ್ನು ಅಪ್ಪಿಕೊಂಡವರು ೫ ತತ್ವಗಳಾದ ಕೊಲ್ಲುವುದಿಲ್ಲ, ಕಳುವು ಮಾಡುವುದಿಲ್ಲ, ಅತ್ಯಾಚಾರ ಮಾಡುವುದಿಲ್ಲ. ಸುಳ್ಳು ಹೇಳುವುದಿಲ್ಲ, ಮದ್ಯ ಕುಡಿಯುವುದಿಲ್ಲ ಎಂಬುವುಗಳನ್ನು ಪಾಲಿಸಬೇಕಿತ್ತು. ಬೋಧಿ, ಗಯಾ, ಲುಂಬುಣಿ ಇವರಿಗೆ ಪವಿತ್ರ ಸ್ಥಳಗಳು. ಹೀಗೆ ಬೇಡರಿಗೆ ಒಂದು ಧರ್ಮ, ಮತ ಮತ್ತು ಒಬ್ಬ ನೇತಾರನ ಮೂಲಕ ವೀರನ ಅಥವಾ ಸಂತನ ಆರಾಧನೆ ಇಲ್ಲ.


ವೀರರ ಆರಾಧನೆ ಹೆಚ್ಚಾಗಿ ದ್ರಾವಿಡ ಸಮುದಾಯಗಳಲ್ಲಿ ಕಂಡು ಬರುತ್ತವೆ. ಬೇಟೆ, ಪಶುಪಾಲನಾ ವೃತ್ತಿಗಳಲ್ಲಿ ನಿರತರಾದವರು ತಮ್ಮ ಪೂರ್ವಜನರನ್ನು ಆರಾಧಿಸುವುದುಂಟು. ತೀರಾ ಭಿನ್ನವೆಂಬಂತೆ ಚಿತ್ರದುರ್ಗ ಜಿಲ್ಲೆಯ ಬೇಡರಲ್ಲಿ ಈ ಬಗೆಯ ಲಕ್ಷಣಗಳನ್ನು ನೋಡಬಹುದು. ಇದೇ ತಾಲೂಕಿನ ಬೊಚ್ಚಬೋರಯ್ಯಹಟ್ಟಿಯ ನಾಯಕರು ತಮ್ಮ ಪೂರ್ವಜನಾದ ಗಾದರಿಪಾಲನಾಯಕನಿಗೆ ಅವನ ಸಮಾಧಿ ಸ್ಥಳವಾದ ಮಿಂಚೇರಿ (ಗಾದ್ರಿಮಲೈಬೆಟ್ಟ) ಅರಣ್ಯಕ್ಕೆ ವರ್ಷಕ್ಕೊಮ್ಮೆ ಯಾತ್ರೆ ಹೋಗುವುದು ವಿಶೇಷ. ಜಗಳೂರು ಪಾಪನಾಯಕ ಮೊದಲಾದ ವೀರರ ಬಗ್ಗೆ ಇಂಥ ಆಚರಣೆಗಳಿವೆ.

ಪವಾಡ, ಧಾರ್ಮಿಕ ವೈಶಿಷ್ಟ್ಯ, ಸಂತನ ಸಮಾಧಿ, ಸಂತನ ನಿವಾಸ ಮೊದಲಾದ ಸ್ಥಳಗಳಿಗೆ ತೀರ್ಥಯಾತ್ರೆ ಹೋಗುವುದು ಸಹಜ. ತೀರ್ಥಯಾತ್ರೆ ಕುರಿತಂತೆ ೨೪ ವಿಧವಾದ ಅರ್ಥ ಮತ್ತು ಆಚರಣೆಗಳಿವೆ. ಬೇಡರಲ್ಲಿಯೂ ತೀರ್ಥಯಾತ್ರೆ ಹೋಗುವ ಸಂಪ್ರದಾಯವಿದೆ. ಇವರ ಕೆಲವು ಬೆಡಗುಗಳಲ್ಲಿ, ಈ ಬಗ್ಗೆ ನಿರ್ಬಂಧ ಹಾಗೂ ನಿಷೇಧಗಳಿವೆ. ಶ್ರೀಶೈಲಕ್ಕೆ ಹೋಗುವವರು ತಿರುಪತಿಗೆ ಹೋಗುವಂತಿಲ್ಲ. ಹಾಗೆಯೇ ಕಾಳಹಸ್ತಿಗೆ ಹೋಗುವವರು ಕೂಡ. ಗರ್ಭಿಣಿಯಾದ ಪತ್ನಿ ಅಸಹಜ ಸಾವನ್ನಪ್ಪಿದರೆ, ಗೋವಧೆ ಮಾಡಿದರೆ, ನರಮನುಷ್ಯನನ್ನು ಕೊಂದರೆ ಹೀಗೆ ನಾನಾ ಪಾಪ ಕೃತ್ಯಗಳನ್ನೆಸಗಿದವರು ನದಿ ತೀರದ ಯಾತ್ರಸ್ಥಳಗಳಿಗೆ ಹೋಗುತ್ತಾರೆ. ಅವು ಬೇಡರಿಗಷ್ಟೇ ಸೀಮಿತವಾಗಿರುವುದಿಲ್ಲ.

## ೪.೨ ಆರಾಧನಾ ಸ್ವರೂಪ

ಬೇಡರು ತಮ್ಮ ಬುಡಕಟ್ಟಿನ ಲಕ್ಷಣಗಳನ್ನು ಉಳಿಸಿಕೊಂಡು ಬಂದಿರುವುದರಿಂದ ಆಧುನಿಕ ಮತ್ತು ಪರಂಪರಾಗತ ಸಂಗಿತಗಳ ನಡುವೆ ದ್ವಂದ್ವಗಳು ಏರ್ಪಡುವುದು ಸಹಜ. ತಾನು ಮತ್ತು ತನ್ನ ಜನಾಂಗದ ನೇತಾರರನ್ನು ಲಿಖಿತ – ಮೌಖಿಕ ಪ್ರಕಾರಗಳಲ್ಲಿ ಜೀವಂತಗೊಳಿಸಿಕೊಂಡಿರುವುದನ್ನು ಇಂದಿಗೂ ನೋಡಬಹುದಾಗಿದೆ. ಹಿಂದೂ ಧರ್ಮದ ವ್ಯಾಪ್ತಿಯಲ್ಲಿಯೇ ಬುಡಕಟ್ಟು ಸಮುದಾಯಗಳು ತಮ್ಮದೇ ಆದ ಪ್ರತ್ಯೇಕತೆಯನ್ನು ಉಳಿಸಿಕೊಂಡಿವೆ. ಅದು ವೀರರ ಆರಾಧನೆಯಾಗಿರಬಹುದು, ಸತಿಪದ್ಧತಿ ಯಾಗಿರಬಹುದು. ಇತರೆ ಯಾವುದೇ ಆರಾಧನಾ ಲಕ್ಷಣಗಳಿರುವ ಪದ್ಧತಿ, ರೂಢಿ ಸಂಪ್ರದಾಯಗಳು ವ್ಯಕ್ತಿ ನೆಲೆಯಲ್ಲಿ ಪೂಜಾರ್ಹಗೊಳ್ಳುತ್ತಿರುವುದು ಬೇಡರ ಸಾಂಸ್ಕೃತಿಕ ಲೋಕದೃಷ್ಟಿಯ ವೈಶಿಷ್ಟ್ಯ.

ಬೇಡರು ತಮ್ಮ ಪರಂಪರಾನುಗತವಾಗಿ ಬಂದಿರುವ ಬಳುವಳಿಗಳಲ್ಲಿ ಹುಟ್ಟು ಸಾವಿನ ನಡುವೆ ಇರುವ ಬದುಕಿನ ಸಾಮರಸ್ಯಕ್ಕೊಂದು ಅರ್ಥವನ್ನು ಕಲ್ಪಿಸಿಕೊಂಡಿದ್ದಾರೆ. ಹೀಗೆ ಕಲ್ಪಿಸಿಕೊಂಡಿರುವ ಅಂಶಗಳ ಪೈಕಿ ವೀರರ ಆರಾಧನೆಯು ಒಂದು. ಪುರುಷ ಪ್ರಧಾನ ಕುಟುಂಬ, ಪಶುಪಾಲನೆ ಬೇಟೆಯ ಸ್ಥಿತ್ಯಂತರಗಳನ್ನು ಮೀರಿ – ಅವುಗಳ ನಡುವೆ ತಾನೊಂದು ಸಾಧನೆ ಮಾಡುವ ಕಾಯಕಕ್ಕೆ ಸಿಕ್ಕ ಮರ್ಯಾದೆಯು ಮೇಲಿನಂತಿರುತ್ತದೆ. 'ಹುಟ್ಟು'ವುದಕ್ಕೆ ಮಹತ್ವ ಕೊಡದ ಬುಡಕಟ್ಟು ಜನರು ಬದುಕಿಗೆ, ಸಾಧನೆಗೆ ಮತ್ತು ಮೃತ್ಯುವಿಗೆ ಪ್ರಾಮುಖ್ಯತೆ ಕೊಟ್ಟಿರುವುದಕ್ಕೆ ಬೇಡರೇ ಉದಾಹರಣೆ. ಇವರು ತಮ್ಮ ವೀರರು ಗತಕಾಲದಲ್ಲಿ ಸಾಧಿಸಿದ ಕ್ರಿಯೆಯಿಂದ ಪಾವನಗೊಳ್ಳುವೆವೆಂಬ ಕಾರಣಕ್ಕೆ ಏನೋ ಅತೀ ಹೆಚ್ಚಾಗಿ ರೂಢಿಸಿಕೊಂಡಿರುವ ಲಕ್ಷಣಗಳು ತೋರಿಬರುತ್ತವೆ.



ವೀರರ ಹೆಸರಿನ ಹಿರಿಯರ ಹಬ್ಬ

ರಾಜಪ್ರಭುತ್ವದಲ್ಲಿ 'ವೀರ'ನಾದವನು ಸಾವಿಗೆ ಅಂಜಿಕೆ – ಅಳುಕುತ್ತಿರಲಿಲ್ಲ. ಸಾವಿನ ಬಗ್ಗೆ ಅಷ್ಟೊಂದು ಪವಿತ್ರ ಭಾವನೆ ನೆಲೆಯೂರಿತ್ತು. ರಾಜಮನ್ನಣೆ, ಪ್ರಜಾಮನ್ನಣೆ ಹಾಗೂ ತನ್ನ ಇಷ್ಟಾ ಪರಿವಾರದ ಒಪ್ಪಿಗೆಯು ಇಲ್ಲಿ ಮಾನ್ಯವಾಗಿದೆ. ಪರಾಕ್ರಮ, ಸಾಹಸ, ಜೋಳವಾಳಿ, ಸಹಗಮನ, ವೀರಸ್ವರ್ಗಗಳ ಚರ್ಚೆ ಈ ಹಿಂದೆಯೇ ನಡೆದಿತ್ತು. ಅವು ಕಲಿತನದ ಲಕ್ಷಣಗಳೆಂಬ ಭಾವನೆಗೆ ಜೋತುಬಿದ್ದು ಕಿಚ್ಚು, ಅರಿವು, ದಾನ, ಅಭಿಮಾನ, ರಕ್ಷಣೆ, ಧರ್ಮ, ಸಾಧನೆ, ಸತ್ಯಗುಣ, ಶೌಚಗುಣಗಳು ಮೇಳೈಸಿದವು. ವೀರನ ಗುಣಗಳು ಮಣ್ಣಿನಿಂದ ದಕ್ಕುತ್ತಿದ್ದವು. 'ಸತ್ತರೆ ಸ್ವರ್ಗ – ಗೆದ್ದರೆ ರಾಜ್ಯ' ವೆಂಬ ಸಿದ್ಧಾಂತಕ್ಕೆ ಒಳಗಾದ ಎಲ್ಲಾ ನಾಯಕನ ಪಾಡು ಅಲೌಕಿಕತೆಯಲ್ಲಿ ಆರಾಧನೆಗೆ ಆಸ್ಪದವಾಯಿತು.

ಬೇಡರು ಸ್ಥಳೀಯ ವ್ಯಕ್ತಿಯನ್ನೇ ಆರಾಧಿಸುವುದು ಹೆಚ್ಚು. ಅಭಿಮಾನವೋ ಅಥವಾ ಪ್ರಾದೇಶಿಕ ಭಿನ್ನತೆಯೋ ಗೊತ್ತಿಲ್ಲ. ವಾಲ್ಮೀಕಿ, ಬೇಡರಕಣ್ಣಪ್ಪ, ಶಬರಿ, ಏಕಲವ್ಯ ಮೊದಲಾದವರನ್ನು ಸ್ಮರಿಸುತ್ತಾರೆಯೇ ಹೊರತು ಆರಾಧಿಸುವಲ್ಲಿ ಉದಾಸೀನತೆಯಿದೆ. ಪವಿತ್ರಸ್ಥಳ, ವ್ಯಕ್ತಿ, ಪ್ರಸಂಗದಲ್ಲಿ ಪಾಲ್ಗೊಂಡು, ರಕ್ಷಿಸಿ ಕಾಪಾಡಿದ ವೀರನ ಮನೋಭಾವವು ಶ್ಲಾಘನೀಯ. ಆದಿಯಲ್ಲಿ ಇದನ್ನು ಧರ್ಮಕೇಂದ್ರಿತ ನೆಲೆಯಲ್ಲಿ

ಗ್ರಹಿಸಿದ್ದರಿಂದ ಕ್ರಮೇಣ ಅದು ಅಧ್ಯಾತ್ಮಿಕ ಸ್ವರೂಪಕ್ಕೆ ಬಂದಿತು. ಒಬ್ಬ ವ್ಯಕ್ತಿಯ ತ್ಯಾಗವು ಅವನ ಗುಣ – ವಿಶೇಷತೆಯನ್ನು ಇಮ್ಮಡಿಗೊಳಿಸಿದೆ. ಸತ್ಯ, ಪ್ರಾಮಾಣಿಕತೆ, ಭಾಷೆ ತಪ್ಪಿಲ್ಲದವರ ಪಾಡು ಸಹಾ ವೀರತ್ವದ ಸಂಕೇತ. ಶೌಚ, ವೀರಶ್ರೀ ಗುಣಗಳಿಗೆ ನಾವು ಮಹಾಭಾರತದ ಕರ್ಣ – ಅರ್ಜುನರನ್ನು ಉಲ್ಲೇಖಿಸುತ್ತೇವೆ. ಪೌರಾಣಿಕ ವೀರರ ಆರಾಧನೆಗಿಂತ ಚಾರಿತ್ರಿಕ ಕಾಲಘಟ್ಟದ ಜನಪದ ವೀರರ ಚಾರಿತ್ರಿಕ ಸಂಗತಿಗಳು ತೀರಾ ರೋಮಾಂಚನಕಾರಿಯಾಗಿವೆ.

ಕರ್ನಾಟಕ ಸಾಂಸ್ಕೃತಿಕ ಚರಿತ್ರೆಯಲ್ಲಿ ಆತ್ಮಬಲಿದಾನವು ಧಾರ್ಮಿಕ ಮತ್ತು ಲೌಕಿಕ ಕ್ಷೇತ್ರಗಳೆರಡಲ್ಲೂ ಚಾಲ್ತಿಯಲ್ಲಿತ್ತು. ಹೆಣ್ಣಿನ ಮಾನರಕ್ಷಣೆ ಕಾಪಾಡಿ ವೀರತ್ವ ಮೆರೆದವರು ಒಂದೆಡೆಯಾದರೆ, ಗೋಗ್ರಹಣ ಮಾಡಿದ್ದು, ಗೋರಕ್ಷಣೆ – ಕಾಳಗ ನಡೆದದ್ದು ಸ್ಮರಣೀಯ. ಮೇಲೆ ತಿಳಿಸಿರುವಂತೆ ಆತ್ಮ ಬಲಿದಾನದಲ್ಲಿ ಧಾರ್ಮಿಕ ಮತ್ತು ಲೌಕಿಕವೆಂಬ ಪ್ರಕಾರಗಳಿವೆ. ಇವುಗಳಲ್ಲಿ ಪುನಃಜೈನ ಮತ್ತು ಹಿಂದೂಧರ್ಮಗಳ ಲಕ್ಷಣಗಳು ಬೇರೆ ಬೇರೆ. ಧಾರ್ಮಿಕ ಬಲಿದಾನವು ಆದರ್ಶ ಮತ್ತು ಮೌಲ್ಯ ಪಾಲನೆಗಳ ಸಾರ್ಥಕ ಬದುಕಿಗೆ ಅಸ್ಪದವಾದರೆ; ಲೌಕಿಕವು ರಾಜಪ್ರಭುತ್ವದ ಆದೇಶದಂತೆ ಪಾಲಿಸಲಾಗುತ್ತಿತ್ತು. ಬೇಡರಲ್ಲಿ ಮೊದಲನೆಯ ಅಂಶ ಪ್ರಚಲಿತದಲ್ಲಿದೆ. ಎರಡನೇಯ ಪ್ರಕಾರಕ್ಕೆ ರಾಜನ ಅನುಮತಿ ಯಿದ್ದರೂ ಇಲ್ಲದಿದ್ದರೂ ಕೃತ್ಯಗಳು ಸಂಭವಿಸುತ್ತಲೇ ಇದ್ದವು. ಬೇಡರು ಅಪಾರ ಸಂಖ್ಯೆಯಲ್ಲಿ ಮರಣಹೊಂದಿ ರಾಜಮನ್ನಣೆಗಳಿಸಿದರೂ ಅವರ ವಿವರ ಲಭ್ಯವಿಲ್ಲ. ಹೀಗೆ ಲೌಕಿಕ ಕ್ಷೇತ್ರದಲ್ಲಿ ಜೊಳವಳಿ, ವೇಳೆವಾಳಿ (ಸ್ತ್ರೀ), ಸಹಗಮನ, ಅನುಗಮನ, ವೇಳೆ ಉಂಳಿ (ಪುರುಷ) ವೆಂಕವಾಳಿ, ಕಿಳ್ಗುಂಟೆ ಎಂಬ ಸಾವಿನ ಪ್ರಭೇದಗಳು ರಾಜಪ್ರಭುತ್ವದಲ್ಲಿದ್ದವು.

ಮೇಲಿನಂತೆ ಸಾವಿನ ಪ್ರಕಾರಗಳಲ್ಲಿ ಬೇಡರು ತಮ್ಮನ್ನು ತಾವು ತೊಡಗಿಸಿಕೊಂಡಿರುವುದು ವಿರಳ. ಅಸ್ಪಷ್ಟ ಹಲವು ಉಲ್ಲೇಖಗಳು ಈ ಬಗ್ಗೆ ಬೆಳಕು ಚೆಲ್ಲುತ್ತವೆ. ಆದರೆ ತಮ್ಮ ಸಂಸ್ಕೃತಿಯ ಹಿತದೃಷ್ಟಿಯಿಂದ ತ್ಯಾಗ ಮಾಡಿರುವುದು ಸ್ಪಷ್ಟ. ಬೇಟೆ, ಪಶುಪಾಲನೆ ಕ್ಷೇತ್ರಗಳಲ್ಲಿ ಬೇಡ ವೀರರು ರಕ್ಷಣೆ ಸಾಧಿಸಿದ್ದು ಗಮನಾರ್ಹ. ಹುಲಿಯೊಡನೆ, ಶತೃಗಳೊಡನೆ ಹೋರಾಡಿ ಮಡಿದು, ಅವನ ಸಮಾಧಿಗೆ ಪೂಜಾರ್ಹ ಸ್ಥಾನ ತುಂಬಿರುವುದು ಉಲ್ಲೇಖನೀಯ. ‘ಅಸಹಜ’ ಸಾವು ದೈವತ್ವಕ್ಕೇರುವ ವ್ಯಕ್ತಿಗೆ ಹಾಸುಹೊಕ್ಕಾಗಿದ್ದ ಕಾಲವು ಜನಮನ್ನಣೆಗಳಿಸಿತ್ತೆಂದು ಒತ್ತಿಹೇಳುವಂತಿಲ್ಲ!

ದಾಯಾದಿಗಳ, ತನ್ನ ಬುಡಕಟ್ಟಿನ ರಕ್ಷಣೆ, ಸಂಸ್ಕೃತಿಯ ವೃದ್ಧಿಗಾಗಿ ನಡೆಸಿದ ಹೋರಾಟದ, ಪರಾಕ್ರಮ, ಶೌರ್ಯ ಸಾಹಸಗಳ ಸಂಕೇತವು ಆರಾಧನೆಯ ಇನ್ನೊಂದು ಮುಖ. ಬೇಡನಾಯಕ ವೀರರ ಆರಾಧನೆಯು ಸಾಂಸ್ಕೃತಿಕ ಚರಿತ್ರೆಯ ಪರಧಿಯಲ್ಲಿಯೇ ಅನಾವರಣಗೊಂಡಿದೆ. ತಲೆಮಾರುಗಳಿಂದ ತಲೆಮಾರಿಗೆ ರವಾನೆಯಾಗುವ ಆಧ್ಯಾತ್ಮಿಕ ಸರಕು ಒಂದು ಹಂತಕ್ಕೆ ಜನಪದರಲ್ಲಿ ತಟಸ್ಥಗೊಳ್ಳುವ ಔಚಿತ್ಯವು ಸಂಭವಿಸುವುದು ವಿಚಿತ್ರ; ಇದು ಅಷ್ಟೇ ಪರಿಣಾಮಕಾರಿ ಅಂಶ.

**೪.೩ ಆರಾಧನಾ ಕ್ಷೇತ್ರಗಳು**

‘ಕ್ಷೇತ್ರ’ವು ಭೌಗೋಳಿಕವಾಗಿ, ನದಿ ಬೆಟ್ಟ ಸುಂದರ ಪರಿಸರದಲ್ಲಿ ನಿರ್ಮಾಣವಾಗಿರುತ್ತದೆ. ಒಂದು ಸ್ಥಳ, ಕ್ಷೇತ್ರವೆಂದು ಕರೆಸಿಕೊಳ್ಳುವಲ್ಲಿ ಅಲ್ಲಿ ನಡೆದ ಚಾರಿತ್ರಿಕ, ಸಾಂಸ್ಕೃತಿಕ ಘಟನೆಗಳ ಪ್ರಭಾವದ ಮೇಲೆಯೇ ಎಂದು ಹೇಳಬಹುದು. ಜಾತ್ರೆ, ಯಾತ್ರೆ ಮತ್ತು ತೀರ್ಥಯಾತ್ರೆಗಳ ವ್ಯಾಪ್ತಿಯನ್ನು ಕ್ಷೇತ್ರ ಹೊಂದಿರುತ್ತದೆ. ಈ ಮಟ್ಟಿಗೆ ಪ್ರಗತಿ ಹೊಂದಿರಬೇಕಾದರೆ ಅಷ್ಟಕ್ಕೆ ಇಲ್ಲಿನ ಪವಾಡವನ್ನು ಬಿಂಬಿಸುವ ಸಂಗತಿಗಳಾವುವು ಎಂಬ ಅವಲೋಕನವು ಮುಖ್ಯವೆನಿಸುತ್ತದೆ. ‘ಕ್ಷೇತ್ರ’ ಪುರಾಣ, ಪ್ರತೀತಿ, ಆಧ್ಯಾತ್ಮಿಕ ನಂಬಿಕೆಗಳಿಂದ ಮಾನ್ಯವಾಗಿರುವುದುಂಟು. ಜಾತ್ರೆ, ಪದ್ಧತಿ, ಆಚಾರಣೆ, ಸಂಪ್ರದಾಯಗಳು ಅವರ ಮೆರುಗನ್ನು ಕಾಲಕಾಲಕ್ಕೆ ಇಮ್ಮಡಿಗೊಳಿಸುವಲ್ಲಿ ಅನುಮಾನವಿಲ್ಲ. ಬೇಡನಾಯಕ ವೀರರ ಆರಾಧನಾ ಕ್ಷೇತ್ರಗಳನ್ನು ಗುರುತಿಸುವಾಗ ಕರ್ನಾಟಕದ ಹೊರಗಿರುವ ಆರಾಧನೆ ಕ್ಷೇತ್ರಗಳು ಮತ್ತು ಕರ್ನಾಟಕದಲ್ಲಿನ ಆರಾಧನಾ ಕ್ಷೇತ್ರಗಳೆಂದು ವಿಂಗಡಿಸಲಾಗಿದೆ. ಆ ಮೂಲಕ ಪ್ರಾಚೀನ ಕಾಲ, ಮಧ್ಯ ಕಾಲ ಮತ್ತು ಆಧುನಿಕ ಕಾಲಘಟ್ಟದ ಕ್ಷೇತ್ರಗಳನ್ನು ಪರಿಚಯಿಸುತ್ತಾ ಬೇಡ ವೀರರ ದೇವಾಲಯಗಳ ಅವಲೋಕನವು ಈ ವ್ಯಾಪ್ತಿಯಲ್ಲಿದೆ. ಪ್ರಾಚೀನ ಕಾಲದ ಕ್ಷೇತ್ರಗಳು ಪುರಾಣ, ದಂತಕಥೆಗಳಿಂದ

ಜನಾರ್ಕಷಣೆಗೊಂಡಿವೆ. ಮಧ್ಯಕಾಲೀನ ಕ್ಷೇತ್ರಗಳು ಐತಿಹಾಸಿಕವಾಗಿ ಪ್ರಾಮುಖ್ಯತೆ ಪಡೆದಿದ್ದು, ಆಧುನಿಕ ಕ್ಷೇತ್ರಗಳು ಆಧ್ಯಾತ್ಮಿಕ ಕ್ಷೇತ್ರಗಳಾಗಿ ಬಲಸಂವರ್ಧನೆ ಗೊಂಡಿರುವುದು ಗಮನಾರ್ಹ.

ಬೇಟೆಯೊಂದಿಗೆ ಜೀವಿಸತೊಡಗಿದ ಬೇಡರ ನೆಲೆ ಕಾಡು. ನಿಸರ್ಗ ರಮಣೀಯ ಸ್ಥಳಗಳಿಗೆ ಇವರೇ ಒಡೆಯರು. ಸಸ್ಯ ಸಂಪತ್ತು. ವನ್ಯ ಸಂಪತ್ತು ಇವರಿಗೆ ದಕ್ಕುತ್ತಿದ್ದು, ಗುಹೆ, ಗುಂಡಾರ, ಕಲ್ಲಾಸರೆಗಳು ಆವಾಸ ನೆಲೆಗಳಾಗಿದ್ದವು. ಹೀಗಿರುವಾಗಲೂ ಬೆಟ್ಟ, ಗುಡ್ಡ, ನದಿ, ಹಳ್ಳಿ – ಕೊಳ್ಳಗಳನ್ನು ಆರಾಧಿಸುವ ಮನೋಭಾವ ಉದಯಿಸಿರಬೇಕು. ಕಾಡಿನಿಂದ ನಾಡಿಗೆ ಪದಾರ್ಪಣೆ ಮಾಡಿದ ಬೇಡನಿಗೆ ಕಾಡಿನ ಕ್ಷೇತ್ರಗಳು ಪಥ್ಯವೆನಿಸದೆ ಪವಿತ್ರವಾಗಿರುವುದು ಇಂದಿಗೂ ನೋಡಬಹುದು. ಇಂಥ ಕ್ಷೇತ್ರಗಳು ಸಾಮಾನ್ಯ ಹಟ್ಟಿಗಳೇ ಆಗಿವೆ. ನಗರ, ಪಟ್ಟಣಗಳನ್ನು ಇಲ್ಲಿ ಕ್ಷೇತ್ರವೆಂದು, ಬೇಡರು ನೆಲಸಿದ್ದರೆಂದು ಹೇಳುವುದು ಕಷ್ಟ. ಪ್ರಾದೇಶಿಕವಾಗಿ ಇಂಥ ಕ್ಷೇತ್ರಗಳು ಎಲೆಮರೆಕಾಯಿಯಂತಿವೆ.

**೪.೪ ಆರಾಧನಾ ಕ್ಷೇತ್ರಗಳ ತಾತ್ವಿಕ ಚಿಂತನೆ**

ಮಾನವ ತನ್ನ ಇಚ್ಛೆ ಮತ್ತು ಭಕ್ತಿಯ ಸಂಕೇತಕ್ಕನುಗುಣವಾಗಿ ವಾಸಿಸುವ ನೆಲೆಯಲ್ಲಿಯೇ ಪೂಜಿಸುವ ಕಲೆಯನ್ನು ಸ್ಥಾಪಿಸಿಕೊಂಡ. ಕಾಲಕಾಲಕ್ಕೆ ಪರಿವರ್ತನೆ ವಲಸೆ, ಸಂದಿಗ್ಧ ಪರಿಸ್ಥಿತಿಗಳಲ್ಲಿ ಪ್ರಕೃತಿ ಆರಾಧನೆಯು ರೂಢಿಗೆ ಬಂತು. ಹೀಗೆ ವ್ಯಕ್ತಿಗಳು ತಮ್ಮ ಅಭೂತಪೂರ್ವ ಭಾವನೆಗಳನ್ನು ಪ್ರಕೃತಿಯೊಂದಿಗೆ ಹಂಚಿಕೊಂಡಿದ್ದು ಸ್ಮರಣೀಯ.

ಕರ್ನಾಟಕದ ಮಟ್ಟಿಗ ಚಿಂತಿಸುವಾಗ ಸತ್ತವ್ಯಕ್ತಿಗೆ ಸಮಾಜದಲ್ಲಿ ಗೌರವಕೊಟ್ಟು ಆರಾಧಿಸುವ ಪ್ರಕ್ರಿಯೆಯಿದೆ. ಮತಧರ್ಮ, ಜಾತಿಗಳ ಪರಧಿಯೊಳಗೆ ಆರಾಧನಾ ಸ್ಥಳಗಳು ಕಂಡು ಬರುತ್ತವೆ. ಸಾಂಕೇತಿಕವಾಗಿ ವಿವಿಧ ಸಮುದಾಯಗಳು ಆರಾಧನಾ ಕಟ್ಟಡಗಳನ್ನು ಕಟ್ಟಿಕೊಂಡಿವೆ. ದೇವಾಲಯ, ಮಠ, ಮಂದಿರ, ಸಮಾಧಿ, ಗದ್ದುಗೆ, ಚರ್ಚು, ಮಸೀದಿ, ಗುರುದ್ವಾರ, ಬಸದಿ, ಚೈತ್ಯಾಲಯ ಹೀಗೆ ವಿವಿಧ ಕಾಲಘಟ್ಟದಲ್ಲಿ ಈ ಬಗೆಯ ಆಧ್ಯಾತ್ಮ ಕುರುಹುಗಳನ್ನು ನೋಡಬಹುದು.

ಬೌದ್ಧ ಧರ್ಮದ ಕುರುಹುಗಳು ಪ್ರಾಚೀನ ಕರ್ನಾಟಕದಲ್ಲಿದ್ದದ್ದು ಉಲ್ಲೇಖನೀಯ. ಬೌದ್ಧ ವಿಹಾರ (ಚೈತ್ಯಾಲಯ) ಗಳು ಕರ್ನಾಟಕದಲ್ಲಿದ್ದ ಬಗ್ಗೆ ಉತ್ತಮ ಉದಾಹರಣೆಯೆಂದರೆ; ಟಿಬೆಟ್‌ಯನ್ನರು ನಿರಾಶ್ರಿತರಾಗಿ ಬಂದು ವಸತಿ ನೆಲೆಗಳನ್ನು ಕಟ್ಟಿಕೊಂಡು ಬೌದ್ಧ ವಿಹಾರಗಳನ್ನು ನಿರ್ಮಿಸಿಕೊಂಡಿರುವರು, ಉತ್ತರ ಕನ್ನಡ ಜಿಲ್ಲೆಯ ಮುಂಡಗೋಡಿನ ವಿಹಾರ ಮನಮೋಹಕವಾಗಿದೆ. ಐಹೊಳೆಯ ಚೈತ್ಯಾಲಯ ಪ್ರಾಚೀನ ಕುರುಹು. ಹೀಗೆ ಕರ್ನಾಟಕದ ವಿವಿಧ ಭಾಗಗಳಲ್ಲಿ ಕಂಡುಬರುತ್ತವೆ.

ಜೈನಧರ್ಮದ ನೆಲೆಗಳು ಕರ್ನಾಟಕಾದ್ಯಂತ ಕಂಡುಬಂದಿದೆ. ಜೈನ ಬಸದಿಗಳೆಂದರೆ ಬೆಳಗಾವಿಯ ಕಮಲ ಬಸದಿ, ಹುಂಚದ ಪಂಚಬಸದಿ, ಮೂಡಬಿದರೆಯ ಸಾವಿರಕಂಬ ಬಸದಿ, ಕಾರ್ಕಳದ ಚತುರ್ಮುಖ ಬಸದಿ, ಲಕ್ಷ್ಮೇಶ್ವರ ಶಂಖಬಸದಿ ಹಾಗೂ ಐಹೊಳೆಯ ವೇಣುಬಸದಿ ಗಮನಾರ್ಹವಾದವು. ಶ್ವೈತಾಂಬರ ಜೈನರು ತಮ್ಮ ವಾಸಸ್ಥಳಗಳಲ್ಲಿ ತೀರ್ಥಂಕರರ ಬಸದಿಗಳನ್ನು ಕಟ್ಟಿಕೊಂಡಿರುವುದು ಇತ್ತೀಚಿಗೆ ಕಾಣುತ್ತೇವೆ.

ಕರ್ನಾಟಕದಲ್ಲಿ ತೀರ್ಥಕ್ಷೇತ್ರ ಮತ್ತು ಪ್ರಸಿದ್ಧ ದೇವಾಲಯಗಳಿರುವುದು ನಮ್ಮ ಹೆಮ್ಮೆ, ಹಂಪೆಯ ವಿರೂಪಾಕ್ಷ, ಗೋರ್ಕಣದ ಮಹಾಬಲೇಶ್ವರ, ಉಳವಿಯ ಚನ್ನಬಸವೇಶ್ವರ, ಮೇಲುಕೋಟೆಯ ಚೆಲುವನಾರಾಯಣ, ಘಾಟಿಯ ಸುಬ್ರಹ್ಮಣ್ಯ, ಧರ್ಮಸ್ಥಳದ ಮಂಜುನಾಥ, ಮೈಸೂರಿನ ಚಾಮುಂಡೇಶ್ವರಿ, ನಂಜನಗೂಡಿನ ನಂಜುಂಡೇಶ್ವರ, ಮುರುಡೇಶ್ವರದ ಮುರುಡೇಶ್ವರ, ಕೊಲ್ಲೂರಿನ ಮುಕಾಂಬಿಕೆ, ಶೃಂಗೇರಿಯ ಶಾರದಾಂಬೆ, ಹೊರನಾಡಿನ ಅನ್ನಪೂರ್ಣೇಶ್ವರಿ, ದೇವಸೂಗೂರಿನ ಅಮೇಶ್ವರ, ಸವದತ್ತಿಯ ಎಲ್ಲಮ್ಮ,

ಉಚ್ಚಂಗಿಯ ಉಚ್ಚಂಗೆಮ್ಮ, ಮೈಲಾರದ ಮೈರಾಲಿಂಗ, ಕಟೀಲಿನ ದುರ್ಗಾಪರಮೇಶ್ವರಿ, ಉಡುಪಿಯ ಕೃಷ್ಣ, ಆದಿಚುಂಚನಗಿರಿಯ ಭೈರವೇಶ್ವರ, ಹುಲುಗಿಯ ಹುಲಿಗೆಮ್ಮ, ಗುಲಬರ್ಗದ ಶರಣಬಸವೇಶ್ವರ, ಶಿರಸಿಯ ಮಾರಿಕಾಂಬೆ ಪ್ರಮುಖ ದೇವಾಲಯಗಳಾಗಿವೆ.

ಮಹಮ್ಮದಿಯರು ತಾವು ವಾಸಿಸುವ ಸ್ಥಳಗಳಲ್ಲಿ ಮಸೀದಿಗಳನ್ನು ಕಟ್ಟಿಕೊಂಡು ಪ್ರಾರ್ಥನೆ ನಡೆಸುವುದುಂಟು. ನಂತರ ಸಮಾಧಿ (ದರ್ಗಾ) ಗಳಿಗೆ ಪೂಜಿಸುತ್ತಾರೆ. ಉದಾ: ಗುಲಬಗರ್ಯ ಬಂದೇನವಾಜ, ಬಾಬಾ ಬುಡನಗಿರಿಯ ದಾದಾಹಯತ್, ಲಕ್ಷ್ಮೇಶ್ವರ ದಾದಪೀರ ಅಳಂದೆಯ ಲಾಡ್ಲೆಪೀರ, ಕೌತಾಳಮ್ಮಿನ ಖಾದರಲಿಂಗ, ಬೆಂಗಳೂರಿನ ಮಸ್ತಾನಸೂಬ್ ದರ್ಗಾಗಳು ಪ್ರಮುಖವಾಗಿವೆ.

ಕ್ರೈಸ್ತರು ಕರ್ನಾಟಕದಲ್ಲಿ ತಮ್ಮ ಅಸ್ತಿತ್ವವನ್ನು ಉಳಿಸಿಕೊಂಡಿರುವುದಕ್ಕೆ ಚರ್ಚುಗಳೇ ಕಾರಣ. ಬೆಂಗಳೂರಿನ ಸಂತಮೇರಿ, ಸಂತಮಾರ್ಕ್, ಸಂತೆಜೋಸೆಫ್, ಮೈಸೂರಿನ ಸಂತ ಫಿಲೋಮಿನಾ ಚರ್ಚ್, ಮಂಗಳೂರಿನ ಸಂತಮಿಲ್‌ಗ್ರೇಶ್, ಅಲೋಶಿಯಸ್, ಹರಿಹರದ ಆರೋಗ್ಯಮಾತೆ, ಬಳ್ಳಾರಿಯ ಕ್ಯಾಥೋಲಿಕ್ ಮತ್ತು ಪ್ರೊಟೆಸ್ಟೆಂಟ್ ಚರ್ಚುಗಳು ಪ್ರಮುಖವೆನಿಸಿವೆ. ಕ್ರೈಸ್ತರಂತೆ ಸಿಖ್ಖರು ಗುರುದ್ವಾರವನ್ನು ಬೀದರ್‌ನಲ್ಲಿ ಸ್ಥಾಪಿಸಿಕೊಂಡಿರುವುದು ಗುರುನಾನಕ್ ಸ್ಮರಣೆಗಾಗಿ. ಸಿಖ್ಖರು ಪಾಂಚ್‌ಪ್ಯಾರೆ ಎಂದು ಗೌರವಿಸುವ ೫ ಗುರುದ್ವಾರಗಳಲ್ಲಿ ಇದೂ ಒಂದಾಗಿದೆ.

ಮಠ – ಪೀಠಗಳನ್ನು ವಿವಿಧ ಸಮುದಾಯದವರು ಸ್ಥಾಪಿಸಿಕೊಂಡಿರುವುದುಂಟು. ಇವುಗಳಲ್ಲಿ ಹಲವು ಪ್ರಾಚೀನ ಪರಂಪರೆ ಪಡೆದಿದ್ದರೆ, ಕೆಲವು ಆಧುನಿಕವಾಗಿ ಸ್ಥಾಪನೆಗೊಂಡಿರುವುದುಂಟು. ಲಿಂಗಾಯುತರು, ಬ್ರಾಹ್ಮಣರು, ಒಕ್ಕಲಿಗರು ಹೀಗೆ ಮೇಲ್ವರ್ಗದವರು, ಆರಂಭದಲ್ಲಿ ಮಠಗಳನ್ನು ಹೊಂದಿದ್ದರು. ಲಿಂಗಾಯಿತರ ಮಠಗಳೆಂದರೆ; ಆದಿಚುಂಚನಗಿರಿಮಠ, ತುಮಕೂರಿನ ಸಿದ್ಧಗಂಗಾಮಠ, ಚಿತ್ರದುರ್ಗದ ಮುರುಘಾಮಠ, ಸಿರಿಗೆರಿಯ ತರಳಬಾಳಮಠ, ಡಂಬಳದ ತೋಂಟದಾರ್ಯ ಮಠ, ಹುಬ್ಬಳ್ಳಿ ಮೂರುಸಾವಿರ ಮಠ, ಮೈಸೂರಿನ ಸುತ್ತೂರು ಮಠ, ಇಳಕಲ್ಲಿನ ಚಿತ್ತರಗಿ ಮಹಾಂತಸ್ವಾಮಿ ಮಠ, ಭಾಲ್ಕಿಯ ಪಟ್ಟದೇವರ ಮಠ, ಕಾಶಿಯ ಜಂಗಮವಾಡಿ ಮಠಗಳು ಪ್ರಮುಖವಾಗಿವೆ. ಪಂಚಚಾರ್ಯರ ಬಾಳೆಹೊನ್ನೂರಿನ ರಂಭಾಪುರಿ ಮಠ ಮತ್ತು ಉಜ್ಜೀನಿ ಮರುಳಸಿದ್ಧೇಶ್ವರ ಮಠ ಗಮನಾರ್ಹವಾಗಿವೆ. ಶೃಂಗೇರಿಯ ಶಂಕರಮಠ ಸ್ಮಾರ್ತ ಬ್ರಾಹ್ಮಣರದ್ದು, ಉಡುಪಿಯಲ್ಲಿರುವ ಪೇಜಾವರ, ಪುತ್ತಿಗೆ, ಫಲಿಯಾರು, ಆದಮಾರು, ಶಿಗ್ಗರು, ಸೋದೆ, ಕಾಣಿಯಾರು ಇತರ ಅಷ್ಟಮಠಗಳು ಮಾಧ್ವರ ಮಠಗಳಾಗಿವೆ. ಮಾಧ್ವ ಸಂಪ್ರದಾಯದಲ್ಲಿ ರಾಘವೇಂದ್ರ ಮಠ ಉತ್ತಾರಾಧಿಮಠ, ವ್ಯಾಸರಾಯ ಮಠ ಮೊದಲಾದವುಗಳಿವೆ. ಶ್ರೀವೈಷ್ಣವರು ಪರಕಾಲಮಠ (ಮೈಸೂರು) ಯತಿರಾಜಮಠ (ಮೇಲುಕೋಟೆ) ಗಳನ್ನು ಹೊಂದಿದ್ದಾರೆ. ಹುಂಚ, ಸಿಂಗನಗದ್ದೆ (ನರಸಿಂಹರಾಜಪುರ), ಮೂಡಬಿದರೆ, ಶ್ರವಣಬೆಳಗೊಳ, ಸೋದೆ ಹಾಗೂ ಕಾರ್ಕಳಗಳಲ್ಲಿ ದಿಗಂಬರ ಜೈನ ಮಠಗಳಿವೆ.

ಕಳೆದ ದಶಕಗಳಲ್ಲಿ ದೇವಾಂಗ, ಕುರುಬ, ಬೇಡ, ಲಂಬಾಣಿ ಸಮುದಾಯದ ಏಳು ಮಠಗಳನ್ನು ಸ್ಥಾಪಿಸಿಕೊಂಡಿರುವರು. ಕಾಗಿನೆಲೆ (ಕನಕಗುರುಪೀಠ) ಮಠ ಕುರುಬರದು. ಹಂಪಿಯಲ್ಲಿ ದೇವಾಂಗಮಠ, ರಾಜಹಳ್ಳಿಯಲ್ಲಿ ವಾಲ್ಮೀಕಿ ಮಠಗಳಂತೆ ಲಂಬಾಣಿಗರ ಸೇವಾಲಾಲ್ ಮಠಗಳಿವೆ. ಇಂದಿಗೂ ಹೊಸಮಠ ಮತ್ತು ಗುರುಗಳ ನೇಮಕ ನಡೆಯುವುದುಂಟು.

ವಿನೂತನ ಬೆಳವಣಿಗೆಯಿಂದ ಧಾರ್ಮಿಕ ನೆಲೆಗಳಿಗೆ ಯಾತ್ರೆ ಹೋಗುವ ಪರಿಪಾಠದಿಂದ ಜಾತ್ರೆಗಳು ಜರುಗುತ್ತವೆ. ಬೇಡರ ನೆಲೆಗಳು ವಿರಳವಾದರೂ ಪ್ರಾದೇಶಿಕ ಸ್ಥಳಗಳ ಮಹತ್ವವನ್ನು ಅಲ್ಲಗೆಳೆಯುವಂತಿಲ್ಲ.

---

[1] ನೋಡಿ : ವಾಲ್ಮೀಕಿ ಕಿರಣ (ಸ್ಮರಣ ಸಂಚಿಕೆ) ೧೯೯೮, ಪು. ೫೨-೫೫

# ೪. ಬೇಡ – ನಾಯಕ ವೀರರ ಆರಾಧನಾ ಕ್ಷೇತ್ರಗಳು (2)

**೪.೫ ಕರ್ನಾಟಕದ ಹೊರಗಿರುವ ಬೇಡರ ಆರಾಧನಾ ಕ್ಷೇತ್ರಗಳು**

ಕರ್ನಾಟಕದಲ್ಲಿ ನೆಲೆಸಿರುವ ಬೇಡನಾಯಕರು ತಮ್ಮ ಅಪೂರ್ವ ಆರಾಧನಾ ಕ್ಷೇತ್ರಗಳನ್ನು ಕರ್ನಾಟಕದಾಚೆಗೂ ಹೊಂದಿದ್ದಾರೆಂಬುದು ಮಹತ್ವದ ಸಂಗತಿ. ಒಂದಿಲ್ಲೊಂದು ರೀತಿಯಲ್ಲಿ ಇವರು ಆ ಪ್ರದೇಶಗಳೊಡನೆ ನಿಕಟ ಸಂಬಂಧ ಹೊಂದಿರುವರು. ಪ್ರಾಚೀನ ಸಂದರ್ಭದಲ್ಲಿ ಏಕೀಕೃತವಾಗಿದ್ದ ಪ್ರದೇಶಗಳು ಇಂದು ಪ್ರತ್ಯೇಕವಾದ ಗಡಿಗಳನ್ನು ಹೊಂದಿರುವುದರಿಂದ ಇವರನ್ನು ಗಡಿಯಾಚೆಗೂ ನೋಡಬಹುದಾಗಿದೆ. ಅಂದು ಇಂಥ ತಾರತಮ್ಯ ಇದ್ದಂತಿಲ್ಲ. ಈ ಹಿನ್ನೆಲೆಯಲ್ಲಿ ಕೆಲವು ಕ್ಷೇತ್ರಗಳನ್ನು ಇಲ್ಲಿ ಪರಿಚಯಿಸಲಾಗಿದೆ.

**ತಾಮಸ ನದಿ ಮತ್ತು ಚಿತ್ರಕೂಟ:** ಕಿರಾತ ಜನಾಂಗಕ್ಕೆ ಪವಿತ್ರವಾದ ನದಿ ತಾಮಸ. ವಾಲ್ಮೀಕಿ ತಪಸ್ಸು ಮಾಡಿದ್ದು, ಇದರ ದಂಡೆಯ ಮೇಲೆ, ಆ ಆಶ್ರಮದ ಹೆಸರು ಚಿತ್ರಕೂಟ. ಈ ಆಶ್ರಮ ಚಿತ್ರಕೂಟ ಪರ್ವತದ (ಮಧುರ) ಪರಿಸರದಲ್ಲಿತ್ತಲ್ಲದೆ, ಇಂದಿನ ಅಲಹಾಬಾದ್‌ನ ಆಗ್ನೇಯ ದಿಕ್ಕಿಗೆ ೧೮ ಮೈಲು ದೂರವಿರುವ ಗಂಗಾನದಿ ದಡದಲ್ಲಿದೆ.

ವಾಲ್ಮೀಕಿ ರಾಮಾಯಣದ ಕರ್ತೃ; ಭಾರತದ ಮಹಾಕವಿಗಳಲ್ಲೊಬ್ಬರು. ಪೂರ್ವಾಶ್ರಮದಲ್ಲಿ ಇವನೊಬ್ಬ ಬೇಟೆಗಾರ. ಸಂಪ್ರದಾಯದಂತೆ ಇವನ ಮೂಲ ಹೆಸರು ರತ್ನಾಕರ. ಕಳ್ಳತನ, ದರೋಡೆಯಲ್ಲಿ ನಿರತನಾದ ಈತನಿಗೆ ನಾರದನಿಂದ ಪರೀಕ್ಷೆ ನಡೆಯಿತು. ನಿನ್ನ ಅಪರಾಧಕ್ಕೆ ನಿನ್ನ ಹೆಂಡತಿ – ಮಕ್ಕಳು ಬಾಧ್ಯಸ್ಥರೇ (ಪಾಲುದಾರರು) ಎಂದು ಕೇಳಲು ತಿಳಿಸಿದ. ಅವನು ತನ್ನ ಪರಿವಾರವನ್ನು ವಿಚಾರಿಸಲಾಗಿ ನಿನ್ನ ಅಪರಾಧಕ್ಕೆ ನೀನೇ ಹೊಣೆ ಎಂದರು. ಇದರಿಂದ ಮನಃಪರಿವರ್ತನೆಗೊಂಡ ವಾಲ್ಮೀಕಿಗೆ 'ಮರ' ಎಂಬ ರಾಮವಾಣಿಯ್ನನು ವಾಚಿಸುವಂಥೆ ನಾರದ (ಸಪ್ತರ್ಷಿಗಳು) ಆದೇಶಿಸಿದ. ಅಂದಿನಿಂದ ಅವನಿಗೆ ಜ್ಞಾನೋದಯದ ಉತ್ತುಂಗ ಶಿಖರ ತಲುಪಿ ಮಹಾಕಾವ್ಯ ರಚಿಸಿದ್ದು, ಪೂಜನೀಯ ಗ್ರಂಥಗಳಲ್ಲಿ ಅಗ್ರಮಾನ್ಯವಾಗಿದೆ. ಈತನ ಮಂದಿರಗಳು ಅಲ್ಲಲ್ಲಿ ನಿರ್ಮಾಣಗೊಂಡಿದ್ದರೂ, ಚಿತ್ರಕೂಟವು ಮಹತ್ವ ಕ್ಷೇತ್ರವೆನಿಸಿದೆ.

**ಕಾಳಹಸ್ತಿ:** ಇದು ಆಂಧ್ರದ ಕರ್ನೂಲು ಜಿಲ್ಲೆಯಲ್ಲಿರುವ ಧಾರ್ಮಿಕ ಯಾತ್ರಾಸ್ಥಳ. ಪ್ರಾಚೀನ ಕಾಲದಿಂದಲೂ ಇದು ನಾನಾ ಕಾರಣಗಳಿಗಾಗಿ ಚಾರಿತ್ರಿಕ ಮಹತ್ವ ಪಡೆದಿದೆ. ಶೈವ ಸಂಪ್ರದಾಯದ ಶಲಾಕ ಪುರುಷರಲ್ಲಿ (೬೩) ಒಬ್ಬರಾದ ಬೇಡರ ಕಣ್ಣಪ್ಪನ ನೆಲುಸುನಾಡಿರುವುದೇ ಇಲ್ಲಿಗೆ ಸಮೀಪದಲ್ಲಿರುವ ಪುಟ್ಟಾಪಿನಾಡು. ಬೇಡರ ಕಣ್ಣಪ್ಪನ ಪ್ರಸಿದ್ಧ ದೇವಾಲಯ ಇಲ್ಲಿದೆ. ಇದಕ್ಕೆ ವಿವಿಧ ಅರಸರು ಪೋಷಿಸಿದ್ದು, ವಿಜಯನಗರದ ಶ್ರೀಕೃಷ್ಣದೇವರಾಯ ಅನುಪಮ ಕಾಣಿಕೆ ಸಲ್ಲಿಸಿದ್ದಾನೆ. ದಕ್ಷಿಣ ಭಾರತದ ಬೇಡನಾಯಕರು ಇಂದಿಗೂ ಇದನ್ನು ಪ್ರಧಾನವಾಗಿ ಪೂಜಿಸುತ್ತಾರೆ. ಕಣ್ಣಪ್ಪನ ದೇವಾಲಯಗಳು ಕರ್ನಾಟಕದಲ್ಲಿದ್ದು. ಆತನ ಹೆಸರನ್ನು ಬೇಡರ ಮಕ್ಕಳಿಗೆ, ಸಂಘಗಳಿಗೆ ಇಟ್ಟುಕೊಳ್ಳುವುದು ಅಭಿಮಾನಪೂರ್ವಕ ಸಂಗತಿ.

**ಶ್ರೀಶೈಲ:** ಗೋದಾವರಿ ನದಿಪರಿಸರದಲ್ಲಿ ಶ್ರೀಶೈಲ ಕ್ಷೇತ್ರವಿದೆ. ಬೇಡರು ತಮ್ಮ ಮೂಲನೆಲೆ, ಪುಣ್ಯಕ್ಷೇತ್ರ ಶ್ರೀಶೈಲ ಪ್ರದೇಶವೆಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ. ಇಲ್ಲಿ ಮಲ್ಲಿಕಾರ್ಜುನ ದೇವರು ಪ್ರಸಿದ್ಧವಾದುದು. ಪಸುಪಾಲಕ ದೇವರೆಂದು ಇದನ್ನು ಕರೆಯುವುದುಂಟು. ಬೇಡರು ಮಲ್ಲಯ್ಯನೆಂದು ಈ ದೇವರಿಗೆ ಕರೆದು, ಇಲ್ಲಿನ ದನಗಳಿಗೆ ಮಲ್ಲಯ್ಯನ ಎತ್ತುಗಳೆಂದು ಕರೆದು (ದೇವರ ಎತ್ತುಗಳು) ಕರ್ನಾಟಕಕ್ಕೆ ಬಂದಿರಬೇಕು. ಇಂದಿಗೂ ಅವರು ಹರಕೆಗಳನ್ನು ತೀರಿಸಲು ಇಲ್ಲಿಗೆ ಬರುತ್ತಾರೆ. ಈ ಎತ್ತುಗಳು ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರು ತಾಲೂಕಿನ ಕಮರ ಕಾವಲಿನಲ್ಲಿವೆ. ಶ್ರೀಶೈಲಕ್ಕೆ ಹೋಗುವುದರ ಬದಲು ರಾಯದುರ್ಗದ ಕೆಳಗಿರುವ ಹುಚ್ಚಮಲ್ಲಯ್ಯನ (ಉಡೆಗೋಳ) ದೇವಾಲಯಕ್ಕೆ ಪೂಜಾಕಾರ್ಯಗಳನ್ನು ಮುಗಿಸಿಕೊಂಡು ಬರುತ್ತಾರೆ. ಶೈವ ಸಂಪ್ರದಾಯದ ಬೇಡರು ಇವರ ಅನುಯಾಯಿಗಳು.

[1]
**ತಿರುಪತಿ:** ಮಹಾಕ್ಷೇತ್ರವಾದ ತಿರುಪತಿ ಭಾರತದಲ್ಲಿಯೇ ಅತಿ ಹೆಚ್ಚು ಪ್ರಸಿದ್ಧ ಯಾತ್ರಾಸ್ಥಳ. ಶ್ರೀಕೃಷ್ಣ ಕೊಳಲಿನ ನಾದಕ್ಕೆ ಬೇಡರು ಬೇಟೆಯಿಂದ ವಿಚಲಿತರಾಗಿ ಇಲ್ಲಿಗೆ ಧಾವಿಸಿದಂತೆ. ಬೇಡರ ಪಡೆಯು ಶ್ರೀಕೃಷ್ಣನನ್ನು ಪ್ರಾಣಿಯೆಂದು ಬಗೆದು ಬಾಣಬಿಡಲು ಅವನ ಕಾಲಿನ ಹೆಬ್ಬೆರಳು ಊನಾಗುತ್ತದೆ. ತಿರುಪತಿಯಲ್ಲಿ ಶ್ರೀಕೃಷ್ಣ ಸಮಾಧಿ ಮಾಡಿದರೆಂಬ ನಂಬಿಕೆಗಳಿವೆ. ಇಲ್ಲಿರುವ ವೆಂಕಟೇಶ್ವರ ಮೂಲದಲ್ಲಿ ಬೇಟೆಗಾರರ ದೇವರೆಂಬುದು ಗಮನಾರ್ಹ. ಕರ್ನಾಟಕದ ಬೇಡ ನಾಯಕರ ಕೆಲವು ಪಂಗಡಗಳು ಇವನ ಅನುಯಾಯಿಗಳು, ಜಗಳೂರು ಪಾಪನಾಯಕ, ತಿರುಪತಿ ಯಾತ್ರೆ ಕೈಗೊಂಡು, ಧಾರ್ಮಿಕ ಮಹಾಪುರುಷನೆಂದು ಖ್ಯಾತನಾಗಿರುವುದು ಇತಿಹಾಸ.

**ಮಂತ್ರಾಲಯ:** ತುಂಗಭದ್ರಾ ನದಿ ದಂಡೆಯ ಮೇಲೆ ಈ ಯಾತ್ರಾಕ್ಷೇತ್ರವಿದೆ. ನಾಯಕ ಅರಸು ಮನೆತನಕ್ಕೆ ಸಂಬಂಧಿಸಿದ ಕುರುಹು ಇಲ್ಲಿ ದೊರೆತಿದೆ. ಕುಮಾರರಾಮನ ಅಜ್ಜಿ ಅಥವಾ ಕಂಪಲಿರಾಯನ ತಾಯಿಯ ಹೆಸರು ಮಂಚಾಲಮ್ಮ. ಇವಳು ಆಂಧ್ರದವಳಾಗಿದ್ದು, ಮಂತ್ರಾಲಯವು ತವರೂರಾಗಿತ್ತು. ಇವಳು ತೀರಿಕೊಂಡಾಗ ಮಂತ್ರಾಲಯದಲ್ಲಿ ಸಮಾಧಿ ಮಾಡುತ್ತಾರೆ. ತರುವಾಯ ಭವ್ಯ ದೇವಾಲಯವನ್ನು ನಿರ್ಮಿಸಿರುವರು. ಮಂಚಾಲಮ್ಮನ ಸಮಾಧಿ ದೇವಾಲಯವಾಗಿ ಅನಂತರ ರಾಘವೇಂದ್ರ ಸ್ವಾಮಿಗಳ ನೆಲೆಯಾಯಿತು. ಅಕ್ಕಪಕ್ಕದಲ್ಲಿ ಎರಡು ದೇವಾಲಯಗಳಿವೆ. ಬ್ರಿಟಿಷ್ ಕಲೆಕ್ಟರ್ ಸರ್.ಥಾಮಸ್ ಮನ್ರೋ (೧೮೦೦) ಇದಕ್ಕೆ ಇನಾಂಭೂಮಿಯನ್ನು ಕೊಡುತ್ತಾನೆ. ಬೇಡರು ಇಂದಿಗೂ ಇಲ್ಲಿ ಯಾತ್ರೆ ಹೋಗುವ ಪರಿಪಾಠ ಬೆಳೆಸಿಕೊಂಡಿದ್ದಾರೆ.

ಭಾರತದಲ್ಲಿ ಬೇಡ ಜನಾಂಗವನ್ನು ಪ್ರತಿನಿಧಿಸಿರುವ ಕ್ಷೇತ್ರಗಳು ಹಲವು. ಆಂಧ್ರಪ್ರದೇಶದ ಅಹೋಬಲಂನ ಉಗ್ರನರಸಿಂಹಸ್ವಾಮಿ ಕ್ಷೇತ್ರ ಪವಿತ್ರವಾದುದು. ಮಹಾರಾಷ್ಟ್ರದ ಸಾಂಗ್ಲಿಯಲ್ಲಿ ಉಮ್ಮೊಜಿನಾಯಕನೆಂಬ ಸ್ವಾತಂತ್ರ್ಯ ಹೋರಾಟಗಾರನ ಆರಾಧನಾ ಕ್ಷೇತ್ರವಿದ್ದು, ಹಬ್ಬ – ಜಾತ್ರೆಗಳು ನಡೆಯುತ್ತವೆ. ಹೀಗೆ ಮಹಾನ್ ವ್ಯಕ್ತಿಗಳನ್ನು ಸಂಕೇತಿಸುವ ಸ್ಥಳ ಹಾಗೂ ಪ್ರದೇಶಗಳು ಹಲವು. ಶ್ರೀ ಮಹರ್ಷಿ ವಾಲ್ಮೀಕಿ – ಉತ್ತರಪ್ರದೇಶ, ಏಕಲವ್ಯ – ಹಸ್ತಿನಾಪುರ (ದೆಹಲಿ), ಹಿರಣ್ಯ ಕಶಿಪು (ಹಸ್ತಿನಾಪುರ), ಧರ್ಮವ್ಯಾಧ – ಉತ್ತರ ಪ್ರದೇಶ, ಬೇಡರಕಣ್ಣಪ್ಪ – ಕಾಳಹಸ್ತಿ (ಆಂಧ್ರ) ತಿರುಮಲನಾಯಕ – ಮಧುರೆ (ತಮಿಳುನಾಡು), ವೀರಪಾಂಡ್ಯ ಕಟ್ಟಮೊಮ್ಮನಾಯ – ಪಂಜಾಕುರುಟ್ಟ (ತಮಿಳುನಾಡು), ಪೆರಿಯಾರ್ ರಾಮಸ್ವಾಮಿ ನಾಯಕರ್ – ಈರೋದ್ (ತಮಿಳುನಾಡು), ರಾಜಸಿನ್ನನಾಯಕ (ಚೆನ್ನೈ) ರಾಜಕೃಷ್ಣಪ್ಪನಾಯಕ – ಚಂದ್ರಗಿರಿ (ಆಂಧ್ರಪ್ರದೇಶ), ರಾಜಕೃಷ್ಣಪ್ಪನಾಯಕ – ಉದಯಗಿರಿ (ಆಂಧ್ರಪ್ರದೇಶ), ಸತ್ಯಹರಿಶ್ಚಂದ್ರ – ಮಗಧ, ಗುಹಾ – ಉತ್ತರಪ್ರದೇಶ, ತಿಮ್ಮಾಜಿನಾಯಕ್ – ಮಹಾರಾಷ್ಟ್ರ, ಭಕ್ತಕನಕದಾಸ – ತಂಜಾವೂರು (ತಮಿಳುನಾಡು) ಆನೆಗುಂದಿ ಮತ್ತು ಕಾಗಿನೆಲೆ (ಕರ್ನಾಟಕ) ಪುರುಷರಲ್ಲದೇ ಮಹಿಳೆಯರನ್ನು ಗುರುತಿಸಬಹುದಾಗಿದೆ. ಶಬರಿ – ಹಂಪಿ (ದಕ್ಷಿಣಭಾರತ) ಸೀತೆ – ಕಠ್ಮಂಡು (ನೇಪಾಳ), ರಾಣಿತಿಮ್ಮಜಮ್ಮ – ಚಿತ್ರದುರ್ಗ, ಪೂರ್ಣಮ್ಮ ರಾಣಿ – ಚಿತ್ರದುರ್ಗ, ರಾಮಲಕ್ಕನಾಯಕಿ – ಕೋಲಾರ ಮೊದಲಾದ ವ್ಯಕ್ತಿ ಸ್ಥಳಗಳನ್ನು ಹೆಸರಿಸಬಹುದು.

ಪುರಾಣ ವ್ಯಕ್ತಿ, ಆಧ್ಯಾತ್ಮಿಕ ಪುರುಷರನ್ನು ಸಂಕೇತಿಸುವ ಸಮಾಧಿ – ದೇವಾಲಯಗಳು ಪ್ರಸ್ತುತವೆನಿಸಿವೆ. ವಾಲ್ಮೀಕಿ ಮಂದಿರಗಳು – ಅಮೃತಸರ (ಪಂಜಾಬ್), ಕಠ್ಮಂಡು (ನೇಪಾಳ), ದೆಹಲಿ (ಹರಿಯಾಣ), ರಾಜಸ್ಥಾನ, ಪಂಜಾಬ್, ಉತ್ತರ ಪ್ರದೇಶ, ಬಿಹಾರ, ಒರಿಸ್ಸಾ, ರಾಜ್ಯಗಳಲ್ಲಿವೆ. ಕರ್ನಾಟಕದ ಕೂಡ್ಲಿಗಿ (ಬಳ್ಳಾರಿ), ಆಯನೂರು (ಶಿವಮೊಗ್ಗ), ಹುಬ್ಬಳ್ಳಿ, ಧಾರವಾಡ (ಧಾರವಾಡ) ಗದಗ (ಗದಗ) ಮೊದಲಾದವು ನೋಡಬಹುದು. ಬೇಡರಕಣ್ಣಪ್ಪ ಮಂದಿರಗಳು ಶ್ರೀಕಾಳಹಸ್ತಿ, ಚಿತ್ತೂರು (ಆಂಧ್ರಪ್ರದೇಶ), ನ್ಯಾಮತಿ (ಶಿವಮೊಗ್ಗ) ಕನ್ನನಾಯಕ – ಶಿವಮೊಗ್ಗ, ಶ್ರೀ ಕಾಳಹಸ್ತೇಶ್ವರ – ಕಣ್ಣಪ್ಪ ದೇವಾಲಯ, ಬೆಂಗಳೂರು, ಚಿತ್ರದುರ್ಗ ಇತರ ಸ್ಥಳಗಳು ಉಲ್ಲೇಖನಾರ್ಹ.

**೪.೬ ಕರ್ನಾಟಕದಲ್ಲಿ ಆರಾಧನಾ ಕ್ಷೇತ್ರಗಳು**

ಬೇಡರಿಗೆ ಭೌಗೋಳಿಕವಾಗಿ ನದಿ, ಬೆಟ್ಟ – ಗುಡ್ಡ, ಮರಗಳು ಪೂಜನೀಯ ತಾಣಗಳಾಗಿವೆ. ಕರ್ನಾಟಕದಲ್ಲಿ ಇಂಥಾ ಅಜ್ಞಾನ ಸ್ಥಳಗಳನ್ನು ಬೆಳಕಿಗೆ ತರುವುದು ಅವಶ್ಯ. ಉತ್ತರ ಕನ್ನಡ ಜಿಲ್ಲೆಯಲ್ಲಿ ಹಾನಗಲ್ಲು, ಸಿರ್ಸಿ, ಸಿದ್ಧಾಪುರ, ಅನಿಲಗೋಳ ಇತರ ಸ್ಥಳಗಳಲ್ಲಿ ಕುಮಾರರಾಮನ

ಆರಾಧನಾ ಕ್ಷೇತ್ರಗಳಿರುವುದು ಗಮನಾರ್ಹ. ಹಬ್ಬ ಜಾತ್ರೆಗಳು ಇಲ್ಲಿ ನಡೆಯುವುದು ವಿಶೇಷ. ಧಾರವಾಡ ಜಿಲ್ಲೆಯ ಕೆಲವು ಹಳ್ಳಿಗಳಲ್ಲಿ ಮೇಲಿನಂತೆ ಕಾಣಬಹುದು. ಧಾರವಾಡದಲ್ಲಿರುವ 'ವಾಲ್ಮೀಕಿ ಮಂದಿರ' ಕರ್ನಾಟಕಕ್ಕೆ ಮಾದಿ. ಬೆಳಗಾಂ ಜಿಲ್ಲೆಯಲ್ಲಿ ಸೂಲದ ಈರಪ್ಪ (ಅಥಣಿ), ಚಿಕ್ಕಲದಿನ್ನೆಯ ದೊಡ್ಡನಾಯಕರನ್ನು ಆರಾಧಿಸಲಾಗುತ್ತದೆ. ಹಾವೇರಿ ಜಿಲ್ಲೆಯ ಕಾಗಿನೆಲೆಯಲ್ಲಿ ಬೇಡರಕಣ್ಣಪ್ಪನ ದೇವಾಲಯವಿರುವುದಲ್ಲದೆ, ವರ್ಷದಲ್ಲಿ ಆಗಾಗ ಬೇಡರು ಹಬ್ಬ – ಜಾತ್ರೆಗಳನ್ನು ಆಚರಿಸುತ್ತಾರೆ.

'ತಲ' ಮತ್ತು 'ಕಾಡು' ಎಂಬ ಬೇಡರಿಂದ 'ತಲಕಾಡು' ನಿರ್ಮಾಣವಾಗಿದೆ. ಬೇಡರು ಇಲ್ಲಿ ಪೂರ್ವಜರನ್ನು ಆಚರಿಸುವ ಹಬ್ಬಹರಿದಿನಗಳನ್ನು ಮಾಡುತ್ತಾರೆ. ಚಾರಿತ್ರಿಕ ಮಹತ್ವ ಪಡೆದ ಈ ಸ್ಥಳ ಕಾವೇರಿ ನದಿ ಪರಿಸರದ ತೀರ್ಥಕ್ಷೇತ್ರಗಳಲ್ಲಿ ಪ್ರಮುಖವಾದುದು. ಪಶ್ಚಿಮಘಟ್ಟಗಳ ಸರಹದ್ದಿನಲ್ಲಿರುವ ಕಲ್ಲತ್ತಗಿರಿಯ ವೀರಭದ್ರೇಶ್ವರ ದೇವಾಲಯದಲ್ಲಿ ಬೇಡರಕಣ್ಣಪ್ಪನ ವಿಗ್ರಹವಿದೆ. ಹಂಪಿ ವಿರೂಪಾಕ್ಷಸ್ವಾಮಿ ದೇವಾಲಯದಲ್ಲಿ ಎರಡು ಮೂರು ಶಿಲ್ಪಗಳಲ್ಲಿ ಬೇಡರಕಣ್ಣಪ್ಪನನ್ನು ಚಿತ್ರಿಸಲಾಗಿದೆ. ಆದಿಚುಂಚನಗಿರಿ ಚುಂಚನಕಟ್ಟೆಯಲ್ಲಿ ಬೇಡರು ಆರಂಭದ ಜೀವನ ನಡೆಸಿದ ಮೂಲನೆಲೆ. ಭೈರವನ ಆರಾಧಕರಾದ ಬೇಡರು ರಾಜ್ಯಾಳ್ವಿಕೆ ನಡೆಸಿದ್ದುಂಟು. ಚಿತ್ರದುರ್ಗ ಜಿಲ್ಲೆ ಚಳ್ಳಕೆರೆ ತಾಲೂಕಿನ ಉಳ್ಳಾರ್ಥಿ ಬೋರೆ ದೇವರು, ಗುಡಿಹಳ್ಳಿ ಓಬಳದೇವರು. ದಾವಣಗೆರೆ ಜಿಲ್ಲೆ ಜಗಳೂರು ತಾಲೂಕಿನ ಕಾಮಗೇತನಹಳ್ಳಿಯ ಸೂರೆದೇವರು. ಚಳ್ಳಕೆರೆ ತಾಲೂಕಿನ ರುದ್ರಮ್ಮನಹಳ್ಳಿ ನಲುಜೆರುವಯ್ಯ ಮೊದಲಾದ ಸಣ್ಣಪುಟ್ಟ ಕ್ಷೇತ್ರಗಳು ಎಲಮರೆಕಾಯಿಯಂತೆ ಖ್ಯಾತಿ ಪಡೆದಿವೆ.

**ಪ್ರಾಚೀನ ಆರಾಧನಾ ಕ್ಷೇತ್ರಗಳು**

ಪ್ರಾಚೀನ ಕರ್ನಾಟಕದಲ್ಲಿ ಬೇಡರಕ ಕುರುಹುಗಳು ಸಿಗುವುದು ವಿರಳ. ಕೋಲಾರ ಜಿಲ್ಲೆಯ ಆವನಿಬೆಟ್ಟದಲ್ಲಿ ವಾಲ್ಮೀಕಿ ತಪಸ್ಸು ಮಾಡಿದ್ದನೆಂದು, ಶ್ರೀರಾಮ – ಸೀತೆಯವರು ಕೋಟೆಯನ್ನು ಕಟ್ಟಿಸಿದ್ದರೆಂಬ ನಂಬಿಕೆಗಳಿವೆ. ಅವನಿ ಮಾತ್ರ ವಾಲ್ಮೀಕಿ ಹೆಸರಿನ ಮೂಲಕ ಪ್ರಸಿದ್ಧ ಕ್ಷೇತ್ರವಾಗಿದೆ. ಕಿಷ್ಕಿಂಧೆಯಲ್ಲಿ 'ಶಬರಿ' ಶ್ರೀರಾಮನ ಬರುವಿಕೆಗಾಗಿ ತಪಸ್ಸು ಮಾಡಿದ್ದು ಸ್ಮರಣೀಯ. ಆನೆಗುಂದಿ, ತಲಕಾಡು, ನೀರ್ಥಡಿ ಮೊದಲಾದ ಕ್ಷೇತ್ರಗಳು ಆರಂಭದಲ್ಲಿ ಬೇಡರ ಆವಾಸ ಕೇಂದ್ರಗಳಾಗಿದ್ದವು.

**ಕಂಪಳರಂಗ ಕ್ಷೇತ್ರ:** ಚಿತ್ರದುರ್ಗ ಜಿಲ್ಲೆ ಮೊಳಕಾಲ್ಮೂರು ತಾಲ್ಲೂಕಿನಲ್ಲಿರುವ ಕಂಪಳ ದೇವರಹಟ್ಟಿ ಮಹಾಕ್ಷೇತ್ರವು ಚಿನ್ನಹಗರಿ ನದಿದಂಡೆಯ ಮೇಲಿದೆ. ಪ್ರಾಚೀನ ಬೇಡರ ನೆಲೆಯಾದ ಇಲ್ಲಿ ಶಿಲಾಯುಗದ ನೆಲೆಗಳು, ಮಾನವಾಕೃತಿ ಕಲ್ಲುಗಳು (ರಾಕ್ಷಸ ಕಲ್ಲುಗಳು) ಮುಖ್ಯವೆನಿಸಿವೆ. ಸ್ಥಳೀಯರು ತಮ್ಮ ಪವಿತ್ರ ಭಾವನೆಗಳನ್ನು ಆಧ್ಯಾತ್ಮಿಕವಾಗಿ ಹಂಚಿಕೊಂಡಿದ್ದಾರೆ. ಇದಕ್ಕೆ ಚಿಕ್ಕಕುಮತಿ ಎಂಬ ಮತ್ತೊಂದು ಹೆಸರಿದೆ.

ನಾಯಕರ ಮೂಲ ನೆಲೆಯಾದ ಕಂಪಳ ಕ್ಷೇತ್ರ ಕರ್ನಾಟಕದ ತಿರುಪತಿಯಿದ್ದಂತೆ. ವೈಷ್ಣವ ಸಂಪ್ರದಾಯದ ಮಹಾಕ್ಷೇತ್ರಗಳಲ್ಲಿ ಇದು ಒಂದು. ಶ್ರೀಕೃಷ್ಣ ಇಲ್ಲಿ ಬೇಡರನ್ನು ಬೇಟೆಯಿಂದ ಸ್ಥಿತ್ಯಂತರಗೊಳಿಸಿದ್ದನಂತೆ. ಪ್ರಾಣಿ ಹಿಂಸೆಗೆ ವಿದಾಯ ಹೇಳಿದ ಬೇಡರಿಗೆ ಇದು ವರದಾನವಾದ ನೆಲೆ. ಶ್ರೀ ಕೃಷ್ಣನ ಸಂಹಾರವಾಗಿರುವವರೆಗೆ ಒಂದು ಪಂಗಡದಲ್ಲಿದ್ದ ಬೇಡರು ಮತ್ತು ಗೊಲ್ಲರೆಂದು ಇಬ್ಭಾಗವಾಯಿತಂತೆ. ಇಲ್ಲಿ ಸಾಂಸ್ಕೃತಿಕ ಸಂಘರ್ಷ ನಡೆದು ಬೇಟೆಯ ಬೇಡ ಬೇಟೆ ತೊರೆದು ಪಶುಪಾಲನೆ ಕೈಗೊಂಡಿದ್ದು, ಗೊಲ್ಲರು ಗೋಪಾಲಕರಾಗಿ ಮುಂದುವರೆದಿದ್ದು, ಮೇಲಿನ ಘಟನೆ ದೃಢೀಕರಿಸುತ್ತದೆ. ಅಂದಿನಿಂದ ಬೇಡರು ಬೇಟೆ, ಪ್ರಾಣಿ ಹಿಂಸೆ ಕೈಬಿಟ್ಟು ಮಾನವ ಕುಲದ ಒಳತಿಗಾಗಿ ಶ್ರಮಿಸಲು ಕರೆ ನೀಡಿ, ಗೋಪಾಲನೆ ಮಾಡಲು ೧೨ ಸಾಲಿಗ್ರಾಮ, ಕೊಳಲು, ಮುತ್ತಿನ ಗೆಜ್ಜೆ (ಮುತ್ತಿನ ಕಾಲ್ಚೆಂಡೆ) ಗಳನ್ನು ಕೊಟ್ಟಿದ್ದರು. ವರ್ಷಕ್ಕೆ ಎರಡು – ಮೂರು ಬಾರಿ ಗುಗ್ಗರಿ ಹಬ್ಬ, ದೀಪಾವಳಿ ಮೊದಲಾದವು ಜರುಗುತ್ತವೆ. ತೀರಾ ಕಟ್ಟುನಿಟ್ಟಿನ ಹಬ್ಬಗಳಲ್ಲಿ ಆಚರಣೆಗಳನ್ನು 'ಕರಿನಾರು' ಬೆಡಗಿನವರು ಮಾಡಿಕೊಂಡು ಬಂದಿದ್ದಾರೆ. ಇಂಥ ಸಂಪ್ರದಾಯಗಳನ್ನು ನಾಯಕ ಯಜಮಾನರು ರೂಢಿಸಿ ಉಳಿಸಿಕೊಂಡು ಬಂದಿರುವರು. ಬೇಡರು ಆಂಧ್ರದಿಂದ ವಲಸೆ (ತಿರುಪತಿ) ಬಂದು ನೆಲೆಸಿದ್ದು ಇಲ್ಲಿಯೇ. ನಂತರ ಆನೆಗುಂದಿ, ಕಂಪಲಿ, ಎಕ್ಕೆಗೊಂದಿ, ಚಿತ್ರದುರ್ಗ, ನಾಯಕನಹಟ್ಟಿಗಳ ಕಡೆ ಚದುರಿದರು. ಇಲ್ಲಿ ಕಂಪಳರಂಗ, ಗಾದರಿಪಾಲನಾಯಕ, ಗಾದರಿಪಾಲನಾಯಕ, ಪಾಪನಾಯಕ ದೇವರುಗಳ ದೇವಾಲಯಗಳಿದ್ದು,

ಅನೇಕ ಆಚರಣೆಗಳಿದ್ದವು. ಗಾದರಿಪಾಲನಾಯಕ, ಪಾಪನಾಯಕ ದೇವರುಗಳ ದೇವಾಲಯಗಳಿದ್ದು, ಅನೇಕ ಆಚರಣೆಗಳಿದ್ದವು. ಸಂಸ್ಕೃತಿಯ ಮೂಲಕ ರಾಷ್ಟ್ರೀಯ ಐಕ್ಯತೆಯನ್ನು ಸಾಧಿಸಲು ಬೇಡರು ಆಗಾಗ ಇಲ್ಲಿ ಸೌಹಾರ್ದಯುತ ಕಾರ್ಯಕ್ರಮಗಳನ್ನು ಮಾಡುತ್ತಾರೆ.

**ಭೈರವ ಕ್ಷೇತ್ರ:** ಮಹಾಕ್ಷೇತ್ರವೆನಿಸಿದ ಆದಿಚುಂಚನಗಿರಿಯಲ್ಲಿ ಭೈರವ ಕ್ಷೇತ್ರವಿದೆ. ಆರಂಭದಲ್ಲಿ ಬೇಟೆಯೊಂದಿಗೆ ನಿರತರಾದ ಬೇಡರು ಕಾಡು ಕಡಿದು ವ್ಯವಸಾಯ ಮಾಡಿದ ಮೂಲನೆಲೆಯಿದು. ಬೇಡರು ಭೈರವನ ಅನುಯಾಯಿಗಳಾಗಿದ್ದು, ತಮ್ಮ ಹೆಸರುಗಳನ್ನು ಬೋರಯ್ಯ, ಬೋರಪ್ಪನೆಂದು ಕರೆದುಕೊಳ್ಳುತ್ತಾರೆ. ಒಕ್ಕಲಿಗರು ಇಲ್ಲಿನ ಬೇಡರನ್ನು ಓಡಿಸಿ, ವಸಾಹತು ಸ್ಥಾಪಿಸಿದರಂತೆ, ಇಲ್ಲಿಂದ ಬಂದ ಬೇಡರು ಬಹುಶಃ ಚಿತ್ರದುರ್ಗ ಪರಿಸರದಲ್ಲಿ ನೆಲೆಸಿರಬೇಕು. ಈ ಜಿಲ್ಲೆಯಲ್ಲಿ ಭೈರವನ ಸಹಸ್ರಾರು ದೇವಾಲಯ ನೆಲೆಗಳಿವೆ. ಹಬ್ಬ – ಜಾತ್ರೆಗಳು ಜರುಗುವುದು ವಿಸ್ಮಯ.

**ಮಲೆಮಾದೇಶ್ವರ ಕ್ಷೇತ್ರ:** ಶಿವ ಪಾರ್ವತಿಗೆ 'ನೀನು ಭೂಲೋಕಕ್ಕೆ ಹೋಗಿ ಬೇಡರವಳಾಗಿ ಹುಟ್ಟು' ಎಂದು ಶಾಪ ಕೊಟ್ಟಿದ್ದನ್ನು ಈ ಗ್ರಾಮ ನೆನಪಿಸುತ್ತದೆ. ಶಿವನು ಬೇಡನಾಗಿ ಇಲ್ಲಿಗೆ ಬಂದಿದ್ದನೆಂಬುದು ಪ್ರತೀತಿ. ಕೊನೆಗೆ ಶಿವ – ಪಾರ್ವತಿಯರು ಬೇಡ – ಬೇಡತಿಯರಾಗಿ ಮದುವೆಯಾದ ಸ್ಥಳ 'ಮಲೆಮಾದೇಶ್ವರ ಬೆಟ್ಟ' ವೆಂದು ಕರೆಯಲಾಗುತ್ತದೆ. ಬೇಡ ಪರಿವಾರದ ತಮ್ಮಡಿಗಳೆಂದು ಕರೆಸಿಕೊಳ್ಳುವವರು ಇದರ ಪೂಜಾರಿಗಳು, ಹಬ್ಬ ಜಾತ್ರೆಗಳು ನಡೆಯುವಾಗ ಅಪಾರ ಸಂಖ್ಯೆಯ ಭಕ್ತಾದಿಗಳು ಸೇರುತ್ತಾರೆ.

**ತಲಕಾಡು:** ಕಾವೇರಿ ನದಿ ದಂಡೆಯ ಮೇಲಿರುವ ಕ್ಷೇತ್ರವೇ ತಲಕಾಡು. ಮೈಸೂರು ಜಿಲ್ಲೆಯ ಟಿ.ನರಸೀಪುರ ತಾಲೂಕಿನಿಂದ ಸಮೀಪದಲ್ಲಿದೆ. ಆದಿಯಲ್ಲಿ ಇದು ತಲಕಾಡಿನ ಗಂಗರ ರಾಜಧಾನಿ ಕೇಂದ್ರ. ಈ ಗ್ರಾಮದ ಹಿನ್ನೆಲೆ ಹೀಗಿದೆ. ತಲ ಮತ್ತು ಕಾಡು ಬೇಡರಿಗೆ ಒಲಿದ ಲಿಂಗದಿಂದ ಪರಿಣಾಮಕಾರಿಯಾದುದು ತಲಕಾಡಿನ ನಿರ್ಮಾಣ. ತಲ ಮತ್ತು ಕಾಡರಿಬ್ಬರು ದರೋಡೆಕೋರರು, ಕಳ್ಳರಾಗಿದ್ದರು. ಒಂದು ಹಂತಕ್ಕೆ ಪರಿವರ್ತನೆಗೊಂಡಾಗ ತಲಕಾಡಿನ ಕ್ಷೇತ್ರ ಜನಪ್ರಿಯಗೊಂಡಿತ್ತು. ಮರುಳೇಶ್ವರ, ಈಶ್ವರ ಮೊದಲಾದ ದೇವಾಲಯಗಳಿದ್ದು, ಹಬ್ಬ, ಜಾತ್ರೆ ಇತರ ಆರಾಧನೆಯು ಸಾಗಿಬಂದಿದೆ.

**ನುಂಕೆಮಲೆ:** ಚಿತ್ರದುರ್ಗ ಜಿಲ್ಲೆ, ಮೊಳಕಾಲ್ಮೂರು ತಾಲೂಕಿನಲ್ಲಿರುವ ಪ್ರಸಿದ್ಧ ಗಿರಿಧಾಮ ನುಂಕೆಮಲೆ. ಇದರ ಪರಿಸರದಲ್ಲಿ ಬೇಡರು ವ್ಯಾಪಕವಾಗಿ ನೆಲಸಿರುವರು. ವರ್ಷಕ್ಕೊಮ್ಮೆ ಜರುಗುವ ನುಂಕಪ್ಪನ ಜಾತ್ರೆಯಲ್ಲಿ ಕೊಮ್ಮನಪಟ್ಟೆ ಬೇಡರು 'ಸಿಡಿ' ಆಡುತ್ತಾರೆ. ಇದೊಂದು ರೀತಿಯಲ್ಲಿ ಉಗ್ರವಾದ ಆಚರಣೆ. ಇಲ್ಲಿ ನಡೆಯುವ ವಿವಿಧ ಆಚರಣೆಗಳ ಪೈಕಿ ಕದಂಬರ ಅರಸರು ನಿರ್ಮಿಸಿದ ದೇವಾಲಯಗಳಿಗೆ ಪೂಜಿಸುತ್ತಾರೆ. ನುಂಕಪ್ಪ ಮತ್ತು ಆತನ ಸಹೋದರಿ ತುಪ್ಪದಮ್ಮನ ದೇವಾಲಯಗಳಿವೆ. ಬೇಡರ ಪವಿತ್ರಕ್ಷೇತ್ರಗಳಲ್ಲಿ ಇದು ಮಹತ್ವವೆನಿಸಿದೆ.



ಸಿಡಿ ಹಾಡುವ ಮುನ್ನ ಕಬ್ಬಿಣದ ಮಳೆಗಳನ್ನು ಚೆನ್ನಿಗೆ ಏರಿಸುವ ದೃಶ್ಯ

**ಅಶೋಕ ಸಿದ್ಧಾಪುರ:** ಮೊಳಕಾಲ್ಮೂರು ತಾಲೂಕಿನ ಚಿನ್ನಹಗರಿನದಿ ದಂಡೆಯ ಮೇಲೆ ಈ ಸ್ಥಳವಿದೆ. ಇಲ್ಲಿನ ಕಂಪಳದೇವರ ಗುಡಿ ಮನಮೋಹಕವಾಗಿರುತ್ತದೆ. ಈ ಪರಿಸರದಲ್ಲಿರುವ ಜಟಿಂಗ ರಾಮೇಶ್ವರದಲ್ಲಿ ಕುಮಾರ ರಾಮನ ಗರಡಿ ಮನೆಯಿದೆ. ವ್ಯಕ್ತಿಗಳ ಹೆಸರಿನಲ್ಲಿ ಆರಾಧಿಸುವ ಪದ್ಧತಿಗಳನ್ನು ಇಲ್ಲಿ ಪಟ್ಟಿ ಮಾಡಬಹುದಾಗಿದೆ. ವಾರಾಹಿಯಾದ ಮಾರಮ್ಮನನ್ನು ಬೇಡರು ತಮ್ಮ ಮನೆದೇವತೆಯನ್ನಾಗಿ ಸ್ವೀಕರಿಸಿದ್ದು, ಕುರಿ, ಕೋಣಗಳ ಬಲಿ ನಿರಂತರವಾಗಿ ನಡೆಯವುದು ವಿಶೇಷ.

**ಆನೆಗುಂದಿ:** ಕೊಪ್ಪಳ ಜಿಲ್ಲೆ, ಗಂಗಾವತಿ ತಾಲೂಕಿನ ಪ್ರಾಚೀನ ಗ್ರಾಮ ಆನೆಗುಂದಿ. ವಾಲ್ಮೀಕಿ, ಬೇಡ, ನಾಯಕ ಜನಾಂಗದ ಮೂಲ ನೆಲೆ. ಬೇಟೆಯಲ್ಲಿ ನಿರತರಾದ ಬೇಡರಿಗೆ ಇದು ಆವಾಸಸ್ಥಾನವಾಗಿತ್ತು. 'ಶಬರಿ'ಯ ನೆಲೆ ಇದರ ಪಕ್ಕದಲ್ಲಿದೆ. ಬೇಡರಿಗೆ ಅರಮನೆ ಮತ್ತು ಗುರುಮನೆಗಳೆರಡು ಆನೆಗುಂದಿಯೇ ಕೊಡಗಲುಬೊಮ್ಮ ಇಲ್ಲಿನ ಕೋಟೆಯನ್ನು ನುಚ್ಚುನೂರು ಮಾಡಿ ೧೨ ಪೆಟ್ಟಿಗೆ ದೇವರುಗಳನ್ನು ತೆಗೆದುಕೊಂಡು ಹೋಗುತ್ತಾನೆ.

**ಕಬ್ಬಳ ಕಾಶೀಪುರ:** ಚನ್ನಗಿರಿ ತಾಲೂಕಿನಲ್ಲಿರುವ ಕರೆಬಿಳಚಿ, ಶಾಂತಿಸಾಗರ (ಸೂಳೆಕೆರೆ) ಕಬ್ಬಳ ಕಾಶೀಪುರ ಗ್ರಾಮಗಳು ಮಹತ್ವವಾಗಿವೆ. ಬೇಟೆರಂಗನಾಥಸ್ವಾಮಿ ದೇವಾಲಯವು ಬೆಟ್ಟದ ಮೇಲಿದೆ. ೧೮ನೇ ಶತಮಾನಕ್ಕೂ ಪೂರ್ವದಲ್ಲಿ ಇದು ನಿರ್ಮಾಣವಾಗಿದೆ. ಬೇಟೆಗಾರ ಬಿಲ್ಲು – ಬಾಣ ಹಿಡಿದು ಬೇಟೆಗಾರನಂತೆ ವಿಗ್ರಹವು ವಿಷ್ಣುವನ್ನು ಹೋಲುವುದು. ಆಗಾಗ ಹಬ್ಬ – ಜಾತ್ರೆಗಳಲ್ಲಿ ಸಡಗರ ಸಂಭ್ರಮವಿರುತ್ತದೆ.



ಸಿಡಿ ದೃಶ್ಯ

**ಮೈಸೂರು:** ಚಾಮುಂಡಿಬೆಟ್ಟದ ಅಧಿದೇವತೆ ಚಾಮುಂಡೇಶ್ವರಿಯನ್ನು ಇಲ್ಲಿನ ಪರಿವಾರ ನಾಯಕರು ಆರಾಧಿಸುವರು. ಬೇರೆ ದೇವತೆಯನ್ನು ಆರಾಧಿಸಿದರೂ ತಮ್ಮ ವಂಶದ ನಾಯಕರನ್ನು ಆರಾಧಿಸುವ ಕ್ರಮ ಗಮನಾರ್ಹ. ಮಾರನಾಯಕನು ಇಲ್ಲೊಂದು ದೇವಾಲಯವನ್ನು ನಿರ್ಮಿಸಿದನಂತೆ. ಸ್ತ್ರೀ ಮತ್ತು ಪುರುಷ ದೇವತೆಗಳ ಆರಾಧನೆಯು ಇಲ್ಲಿ ರೂಢಿಯಲ್ಲಿದೆ.



ಸಿಡಿ ದೃಶ್ಯ, ನುಂಕಮಲೆ

**ಚಾಮರಾಜನಗರ:** ಈ ಜಿಲ್ಲೆಯ ಬಾಗಳಿಯಲ್ಲಿ (ಟಿ.ನರಸೀಪುರ ರಸ್ತೆ) ಮುದ್ದಗಲ್ಲಮ್ಮನ ಆರಾಧನೆಯನ್ನು, ಇಲ್ಲಿರುವ ವಿರಗಲ್ಲನ್ನು ಪರಿವಾರದ ಸಮುದಾಯದವರು ಆರಾಧಿಸುತ್ತಾರೆ. ಈ ಭಾಗದ ಇತರೆಡೆಗಳಲ್ಲಿ ಕಣ್ಣಪ್ಪನ ಶಿಲ್ಪಗಳನ್ನು, ಶೈವ ಕಥೆಗಳಲ್ಲಿ ಬರುವ ವ್ಯಕ್ತಿಗಳ ಬಗೆಗಿನ ಪೂಜ್ಯ ಭಾವನೆ ಪ್ರಚಲಿತದಲ್ಲಿದೆ.

**ಕಾಗಿನೆಲೆ:** ಬ್ಯಾಡಗಿ ತಾಲೂಕಿನಲ್ಲಿರುವ 'ಕಾಗಿನೆಲೆ' ಕನಕದಾಸರ ಮುಕ್ತಿಕ್ಷೇತ್ರ, ಆದಿಕೇಶವ ಇಲ್ಲಿನ ದೈವ. ಸಂಗಮೇಶ್ವರ, ಮಲ್ಲೇಶ್ವರ, ಸೋಮೇಶ್ವರ, ಕಾಳಹಸ್ತೀಶ್ವರ, ವೀರಭದ್ರ, ಲಕ್ಷ್ಮೀನರಸಿಂಹ, ಆದಿಕೇಶವ, ಕಲ್ಮೇಶ್ವರ ದೇವಾಳಯಗಳಿವೆ. ಕನಕಗುರು ಪೀಠವಿದ್ದು, ಪಶುಪಾಲಕ ಪಂಗಡದವರು ಇಲ್ಲಿಗೆ ನಡೆದುಕೊಳ್ಳುವರು. ಬೇಡರಲ್ಲಿ ವೈಷ್ಣವ ಭಕ್ತರು ಮತ್ತು ದಾಸರು ಇಲ್ಲಿಗೆ ನಡೆದುಕೊಳ್ಳುವುದು ವಾಸ್ತವ.

**ನೀರ್ಥಡಿ ರಂಗನಾಥ:** ಬೇಡ ವಂಶದ ತಿಮ್ಮಣ್ಣನಾಯಕನ ಮೂಲ ಸ್ಥಳ. ಇಲ್ಲಿನ ವ್ಯಕ್ತಿಗಳ ಸಂಕೇತವಾಗಿ ತಮ್ಮ ಸಂಸ್ಕೃತಿ, ವ್ಯಕ್ತಿ 'ಇತರ ಪ್ರಕೃತಿಯ ಸಂಕೇತಗಳ ಮೂಲಕ ಭಕ್ತಿಗೆ ಹೆಸರಾದ ರಂಗನಾಥನನ್ನು ಬೇಡರು ಆರಾಧಿಸುವುದು ಸ್ಪಷ್ಟ.

ಪ್ರಾಚೀನ ಕಾಲದ ಅನೇಕ ಕ್ಷೇತ್ರಗಳು ಖ್ಯಾತಿ ಪಡೆದಿದ್ದು, ಮರೆಯಾದಂಥವು ಹಲವು. ಬೇಡರ ಮೂಲ ಪುರುಷರ ನೆಲೆಗಳನ್ನು, ಹೆಸರುಗಳನ್ನು ಸಮೀಕ್ಷಿಸಬಹುದು. ಸಂಸ್ಕೃತಿ ನಿರ್ಮಾಪಕರಲ್ಲಿ ಮಂದಭೂಪಾಲ, ಅಂಭೋಜರಾಜ, ಶುಕ್ಲಮಲ್ಲಿನಾಯಕ, ದಾನಸಾಲಮ್ಮ, ಚಂಚುಲಕ್ಷ್ಮಿ, ಪೆದ್ದಕ್ಕರಾಯಲದೇವಿ, ಭಾನುಕೋಟಿರಾಜು, ಸೂರಪ್ಪರಾಜು, ಸೆಟ್ಲುಪಟ್ಟಪ್ಪರಾಜು, ಕೋರ್ಲಿಮಲ್ಲಿರಾಜು, ಕಾಕುಮಂಚಿರಾಜು, ಪಾಪನ್ನರಾಜು ಮತ್ತು ತಿಪ್ಪಂಡರಾಜು ಮೊದಲಾದವರು ಕಂಡುಬರುತ್ತಾರೆ.

---

[1] ನೋಡಿ : ವಾಲ್ಮೀಕಿ ಕಿರಣ (ಸ್ಮರಣ ಸಂಚಿಕೆ) ೧೯೯೮, ಪು. ೫೨-೫೫

# ೪. ಬೇಡ – ನಾಯಕ ವೀರರ ಆರಾಧನಾ ಕ್ಷೇತ್ರಗಳು (3)

**೪.೬.೨ ಮಧ್ಯಕಾಲೀನ ಆರಾಧನಾ ಕ್ಷೇತ್ರಗಳು**

ಬೇಡರಿಗೆ ಮಹತ್ವವನ್ನು, ಪರಿವರ್ತನೆಯನ್ನು ತಂದುಕೊಟ್ಟಿದ್ದು ಮಧ್ಯಕಾಲ. ಕ್ರಿ.ಶ.ಸು.೧೦ನೇ ಶತಮಾನದಿಂದ ೧೯ನೇ ಶತಮಾನದವರೆಗೆ ಇದರ ಕಾಲವ್ಯಾಪ್ತಿಯಿದೆ. ಈ ನಡುವೆ ಬರುವ ಸಾಂಸ್ಕೃತಿಕ ಮತ್ತು ಬುಡಕಟ್ಟು ವೀರರ ಚರಿತ್ರೆ ಅಸ್ಪಷ್ಟವಾದುದೂ ಕಾಲಾತೀತವಾದ್ದರಿಂದ ಮರುಜೋಡಣೆಯ ಅವಶ್ಯಕತೆಯಿದೆ. ಇಂಥ ವೀರರು ಸಾಂಸ್ಕೃತಿಕವಾಗಿ ಮಹತ್ವ ಪಡೆದಿದ್ದು, ಜನರ ಬಾಯಲ್ಲಿ ಜೀವಂತವಾಗಿದ್ದು ಚರಿತ್ರೆಯಲ್ಲಿ ಮಾತ್ರ ದಾಖಲಾಗದಿರುವುದು ವಿಷಾದನೀಯ. ಗಂಜಿಗಟ್ಟೆಯ ಗಾದರಿಪಾಲನಾಯಕ, ಜಗಳೂರು ಪಾಪನಾಯಕ, ವಲಸೆಯ ಯರಗಾಟನಾಯಕ, ಹಿರೇಹಳ್ಳಿಯ ದಡ್ಡಿ ಸೂರನಾಯಕ, ರುದ್ರಮ್ಮನಹಳ್ಳಿಯ ನಲುಜೆರುವಯ್ಯ, ರಾವಲುಕುಂಟ ಮುತ್ತಿಗಾರಹಳ್ಳಿಯ ಕೊಡಗಲು ಬೊಮ್ಮನಾಯಕ, ಗಲಗಲ್ಲು ಗಾಜನಾಯಕ, ನಾಯಕನಹಟ್ಟಿ ತಿಪ್ಪೇಸ್ವಾಮಿ ಮೊದಲಾದವರು ಇಲ್ಲಿ ಪ್ರಾಮುಖ್ಯತೆ ಪಡೆದಿರುವರು. ನಾಯಕಹಟ್ಟಿ ದೊರೆ ಕಾಟಮಲ್ಲಪ್ಪ ನಾಯಕನ ಸಮಾಧಿ ಜಗಳೂರು ತಾಲೂಕಿನ ಬಿದರಕೆರೆ ಬಳಿಯಿದ್ದು, ಗುಹೇಶ್ವರನ ಬೆಟ್ಟವೆಂದು ಖ್ಯಾತಿ ಪಡೆದಿದೆ. ನಾಯಕನಹಟ್ಟಿ ಹೋಬಳಿಯ ಹೊಸಗುಡ್ಡದ ಬಳಿಯ ಕಾಟಮಲ್ಲನಾಯಕನ ಸಮಾಧಿಯಿದ್ದು ಆರಾದಿಸಲಾಗುತ್ತದೆ (ಇಲ್ಲಿ ಅರಸರ ಹೆಸರು ಬೇರೆ ಬೇರೆ ಇರಬೇಕು) ಬೇಡರು ಈ ಸಮಾಧಿಗೆ ಆರಾಧಿಸುವುದು ಪ್ರಚಲಿತದಲ್ಲಿದೆ. ನೀರ್ಥಡಿ ಎಮ್ಮೆ ಹಟ್ಟಿ ಮಧ್ಯದಲ್ಲಿರುವ ಚಿತ್ರದೇವರ ಗುಡಿಯನ್ನು ಗಂಗನಾಯಕ ನಿರ್ಮಿಸಿರುವುದು ಸ್ಮರಣೀಯ. ವೈ.ಎನ್.ಹೊಸಕೋಟೆಯಲ್ಲಿ ಯಲ್ಲಪ್ಪ ನಾಯಕ ಅರಸನ ಸಮಾಧಿಯು ದೇವಾಲಯವಾಗಿ ಮಾರ್ಪಟ್ಟಿದೆ.

**ಗಂಜಿಗಟ್ಟೆ:** ದೇವರ ಗಂಜಿಗಟ್ಟೆಯೆಂದು ಪ್ರಸಿದ್ಧ ಪಡೆದ ಈ ಸ್ಥಳ ಚಿತ್ರದುರ್ಗ ಜಿಲ್ಲೆ ಹೊಳಲ್ಕೆರೆ ತಾಲೂಕಿನ ಸಾಸಲು – ಮುತ್ತಗನೂರು ಮತ್ತು ಅಂದನೂರುಗಳ ಮಧ್ಯೆ ಬರುತ್ತದೆ. ಸಿರಿಗೆರೆಯಿಂದ ಪಶ್ಚಿಮಕ್ಕೆ ಇಪ್ಪತ್ತು ಕಿ.ಮೀ. ದೂರದಲ್ಲಿದೆ. ಪ್ರಾಚೀನ ಗ್ರಾಮವಾದ ಇದು ಸಮೃದ್ಧ ಕಾಡು ಬೆಟ್ಟ – ಗುಡ್ಡಗಳನ್ನು ತನ್ನ ಮಡಿಲಲ್ಲಿ ಹುದುಗಿಸಿಕೊಂಡಿದೆ. ಈ ಪರಿಸರದಲ್ಲಿನ 'ಗಾದ್ರಿಮಲೆಬೆಟ್ಟ'ವು ಧಾರ್ಮಿಕ ಆರಾಧನಾ ಕ್ಷೇತ್ರವೆಂಬುದು ಗಮನಾರ್ಹ. ಗ್ರಾಮ ಚಿಕ್ಕದಾದರೂ, ಚೊಕ್ಕವಾಗಿರುವ ಪರಿಸರ ಹಿತವೆನಿಸುವುದು. ಇಲ್ಲಿರುವ ಬೇಡರು ಮೂಲತಃ ಹಂಪೆ – ಆನೆಗುಂದಿಯಿಂದ ವಲಸೆ ಬಂದವರೆಂದು ತಿಳಿಸುವರು. ಕಂಪ್ಲಿ ನರಸಿಂಹ ದೇವರೇ ಈ ವಲಸೆಗೆ ಕಾರಣ. ಹೀಗಾಗಿ ಈ ದೇವಾಲಯವು ಇಲ್ಲಿ ಪ್ರಸಿದ್ಧವಾಗಿದೆ. ಕ್ರಿ.ಶ. ೯ ರಿಂದ ೧೬ನೇ ಶತಮಾನದ ನಡುವಿನ ಕಾಲಘಟ್ಟವು ಈ ಬೇಡರ ಸಾಂಸ್ಕೃತಿಕ ಚರಿತ್ರೆಯನ್ನು ಅನಾವರಣಗೊಳಿಸುವುದು.



ಗಾದರಿಪಾಲನಾಯಕ ದೇವಸ್ಥಾನದ ವಿಹಂಗಮನೋಟ, ಗಂಜಿಗಟ್ಟೆ

ಗಂಜಿಗಟ್ಟೆ ಬೇಡ ಜನಾಂಗದ ಪ್ರಾಚೀನ ಆರಾಧನಾಕ್ಷೇತ್ರ. ಬೇಡರು ತಮ್ಮ ಬೇಡಕಗಂಪಳದೊಂದಿಗೆ ಇಲ್ಲಿಗೆ ಬಂದು ನೆಲೆಯೂರಿದರಂತೆ. ಕಂಪಲಿನರಸಿಂಹನ ಮೂಲಕ ಇಲ್ಲಿ ಶೈವ ಮತ್ತು ವೈಷ್ಣವ ಪಂಥಗಳ ಬೇಡರಿಗೆ ಹೊಂದಾಣಿಕೆ ಏರ್ಪಟ್ಟಿದೆ. ಇಲ್ಲಿ ಬರುವ ಗಾದರಿಪಾಲನಾಯಕನೆಂಬ ಪಶುಪಾಲಕನು ಶೈವ ಪಂಥದ ಪ್ರಭಾವಕ್ಕೊಳಗಾಗಿರುವನು. ಇವನು ದನ ಕಾಯುವಾಗ ತನ್ನ ತುರುಮಂದೆಗೆ ಹುಲಿದಾಳಿಯಿಟ್ಟ ಕಾರಣ ಅದನ್ನು ತನ್ನ ಸಹೋದರ ಚೆನ್ನಪಾಲನಾಯಕನ ನೆರವಿನೊಂದಿಗೆ ಕೊಲ್ಲುವಲ್ಲಿ ಯಶಸ್ವಿಯಾದ. ಇಂಥಾ ಘಟನೆಯನ್ನು ಮೌಖಿಕ ಪರಂಪರೆಯಲ್ಲಿ ತೀರಾ ರಂಜನೆ, ವರ್ಣನೆಗೊಳಿಸಿರುವುದು ಗಮನಾರ್ಹ ಸಂಗತಿ.

ಪಶುಗಳಿಗೆ ಮತ್ತು ಜನರಿಗೆ ಬರಗಾಲ ಆವರಿಸಿದಾಗ ಹುಲ್ಲು ನೀರು ಮೇವಿಗಾಗಿ ಬೇಡರು ವಲಸೆ ಹೋಗುವುದು ಸಹಜ. ಒಮ್ಮೆ ಇಂಥ ಪ್ರಸಂಗದಲ್ಲಿ ಗಾದರಿಪಾಲನಾಯಕ ತನ್ನ ದನಕರುಗಳೊಂದಿಗೆ ಸಮೃದ್ಧ ಹುಲ್ಲುನೀರಿಗಾಗಿ ಮಲೆನಾಡು ಪ್ರದೇಶಕ್ಕೆ ತೆರಳುತ್ತಾನೆ. ಇವನೊಂದಿಗೆ ಬೇಡಗಂಪಳವು ಇರುತ್ತದೆ. ಹೀಗೆ ರೊಪ್ಪಕಟ್ಟಿಕೊಂಡಿರುವಾಗ ಹುಲಿ ದಂಪತಿಗಳಿಗೂ ಮತ್ತು ಗಾದರಿಪಾಲನಾಯಕನಿಗೆ ಪರಸ್ಪರ ಒಪ್ಪಂದವಾಗಿರುತ್ತದೆ. ಒಪ್ಪಂದ ಕಾರಣ ಹುಲಿಗಳು ದನಗಳನ್ನು ತಿನ್ನಬಾರದು. ಹುಲಿಮರಿಗಳನ್ನು ದನಗಳ ರೊಪ್ಪದಲ್ಲಿ ಸಾಕುವುದಾಗಿತ್ತು. ಭಾವನನ್ನು ಕಾಣಲು ಬಂದ ಚಿತ್ತಣ – ಕಾಟಣ್ಣನವರ ಕಡೆಗೆ ರೊಪ್ಪದಲ್ಲಿದ್ದ ಹುಲಿಮರಿಗಳು ಕಂಡವು. ದನಕರುಗಳನ್ನು ಇವು ತಿನ್ನುತ್ತವೆಂದು ಅವುಗಳನ್ನು ಕೊಲ್ಲುತ್ತಾರೆ. ಇನ್ನೊಂದು ಕಥೆಯ ಪ್ರಕಾರ ಕೇಡು ಅಜ್ಜಿನಾಡು ಕಡಿಯುತ್ತಾನೆ. ಹೀಗೆ ಒಪ್ಪಂದ ತಿಳಿಯದ

ಅಪರಾಧಕ್ಕೆ ಗಾದರಿಪಾಲನಾಯಕ ಗುರಿಯಾಗಿ ಹುಲಿದಂಪತಿಗಳೊಂದಿಗೆ ಕಾಳಗ ನಡೆದು 'ಮಿಂಚೇರಿ' ಹಳ್ಳದಲ್ಲಿ ಸಾಯುತ್ತಾನೆ. ಅಲ್ಲಿಯೇ ಹುಲಿಗುಡ್ಡ ಮತ್ತು ಗಾದರಿಪಾಲನಾಯಕನ ಸಮಾಧಿಗಳಿವೆ. ಇವನು ಸತ್ತ ನಂತರ ಮಡದಿಯರಾದ ಕಂಚವ್ವ ಕಾಮವ್ವನವರುಗಳು ಸಹಗಮನ ಕೈಗೊಳ್ಳುವರು. ಇಲ್ಲಿರುವ ಮಹಾಸತಿ ಕಲ್ಲುಗಳಿಗೆ 'ಗಾದರಿಪಾಲನಾಯಕ' ದೇವರೆಂದು ಕರೆಯಲಾಗುತ್ತದೆ. ಚಿತ್ರದುರ್ಗ, ತಾಳ್ಯದ ನಾಯಕರು 'ಗಾದರಿಪಾಲನಾಯಕ' ದೇವರ ಹೆಸರಿನಲ್ಲಿ ಎರಡು ಶಾಸನಗಳನ್ನು ಹಾಕಿಸಿದ್ದಾರೆ. ಸುಂದರ ದೇವಾಲಯ, ಶಾಸನಶಿಲ್ಪ, ಹೊಂಡ ಮೊದಲಾದವು ಪ್ರಾಮುಖ್ಯತೆ ಪಡೆದಿವೆ.

[1]



ಜಗಳೂರಿನ ಕೋಟೆ ಕೊತ್ತಲು (ಕೋಟೆ ಚೌಡಮ್ಮನ ಗುಡಿ)

ಗಂಜಿಗಟ್ಟೆಯಲ್ಲಿ 'ಗಾದರಿದೇವರ' ಹೆಸರಿನ ಮೇಲೆ 'ಕಾಳನಹಬ್ಬ'ವನ್ನು ವರ್ಷಕ್ಕೊಮ್ಮೆ 'ಭರತಹುಣ್ಣಿಮೆ'ಯಲ್ಲಿ ಆಚರಿಸುತ್ತಾರೆ. ಹೀಗೆ ವರ್ಷಕ್ಕೆ ಎರಡು ಜಾತ್ರೆಗಳು ಸಂಭವಿಸುತ್ತವೆ. ಆಗಾಗ ಭಕ್ತಾದಿಗಳ ಅಪೇಕ್ಷೆಯಂತೆ, ಪೂಜಾಕಾರ್ಯಗಳು ನಡೆಯುವುದುಂಟು. ಚಿತ್ರದುರ್ಗ ಜಿಲ್ಲೆಯ ಬೊಚ್ಚಬೋರಯ್ಯನಹಟ್ಟಿ. ಚಳ್ಳಕೆರೆ ತಾಲೂಕಿನ ನನ್ನಿವಾಳ, ಜುಂಜುರುಗುಂಟೆ, ಚೆನ್ನಬಸಯ್ಯಹಟ್ಟಿ, ರಾಮಸಾಗರ, ಬಿ.ಜಿ.ಕೆರೆ ಮೊದಲಾದ ಸ್ಥಳಗಳಲ್ಲಿ ಹಬ್ಬ ಜಾತ್ರೆಗಳನ್ನು ಮಾಡುತ್ತಿದ್ದಾರೆ. ಈ ವ್ಯಕ್ತಿಯ ಆರಾಧನಾ ಕ್ಷೇತ್ರಗಳು ಚಿತ್ರದುರ್ಗ, ಬಳ್ಳಾರಿ ಮತ್ತು ದಾವಣಗೆರೆ ಜಿಲ್ಲೆಗಳಲ್ಲಿ ವ್ಯಾಪಕವಾಗಿ ಕಂಡುಬರುತ್ತವೆ.

**ಜಗಳೂರು:** ದಾವಣಗೆರೆ ಜಿಲ್ಲೆಯಲಿರುವ ಜಗಳೂರು ತಾಲೂಕು ಕೇಂದ್ರ, ಮಧ್ಯಕಾಲೀನ ಸಂದರ್ಭದಲ್ಲಿ ಜಗಳೂರು ಪಾಪನಾಯಕನೆಂಬ ಸಂತ ನೆಲಸಿ ಜೀವೈಕ್ಯಗೊಂಡ ಕ್ಷೇತ್ರವೇ ಜಗಳೂರು. ಈತನ ಪೂರ್ವ ಚರಿತ್ರೆ ಹೀಗಿದೆ. ಮೂಲತಃ ಪಶುಪಾಲಕರಾದ ಕೋರ್ಲಮಲ್ಲಿನಾಯಕ ಬಾಳಿದ ಪಟ್ಟಮ್ಮನಿಗೆ ಈ ಮಗ ಅಡವಿಯಲ್ಲಿ ಪವಾಡ ಸದೃಶ್ಯನಾಗಿ ಜನಿಸಿದ. ಪಿತೃಪಾಲನೆಯಂತೆ ಚಳ್ಳಕೆರೆ, ನನ್ನಿವಾಳ ಪರಿಸರದಲ್ಲಿ ದನಕಾಯುತ್ತಿದ್ದ. ಹೀಗೆ ಸ್ಥಳೀಯರ ಪ್ರಭಾವವೋ ಆಧ್ಯಾತ್ಮಿಕ ಪರಿವರ್ತನೆ ಏನೋ ಅಲ್ಲಲ್ಲಿ ಹಣ ಸಂಗ್ರಹಿಸಿ ತಿರುಪತಿಯಾತ್ರೆ ಕೈಗೊಂಡ. ಹೀಗೆ ಯಾತ್ರೆ ಹೋಗಿ ಅಲ್ಲಿ ಮಾಡಿದ, ತೋರಿದ ಪವಾಡಗಳು ಜನರನ್ನು ಬೆರಗುಗೊಳಿಸುವಂಥವು. ಶಿವ – ಪಾರ್ವತಿಯರಿಂದ ಆಶೀರ್ವಾದವನ್ನು ಪಡೆದ ಪಾಪನಾಯಕ ಜನರಿಗೆ ತನ್ನ ಬುದ್ಧಿವಾದವನ್ನು, ಪ್ರವಚನ ಮಾಡುವ ವಿಚಾರಗಳನ್ನು ಅಲ್ಲಿನ ದೊರೆ ಜಗಪತಿರಾಯ ಖಂಡಿಸುತ್ತಿದ್ದ. ಜಗಳೂರು ಪಾಪನಾಯಕನ ಪವಾಡ, ಭಕ್ತಿಯನ್ನು ಕಂಡು ಸಹಿಸದ ದೊರೆ ಅವನನ್ನು ಅನೇಕ ವಿಧಗಳಲ್ಲಿ ಪರೀಕ್ಷೆಗೆ ಒಳಪಡಿಸಿ, ಕಂದಕತೋಡಿ ಹಿಂಸಾತ್ಮಕವಾಗಿ ಕೊಲ್ಲಿಸಿದ. ತರುವಾಯ ಅಲ್ಲಿ ನೆಲಮಾಳಿಗೆ ರೂಪದ ದೇವಾಲಯವನ್ನು ಅವನ ಐಕ್ಯವಾದ ಸಮಾಧಿಯಲ್ಲಿ ಕಟ್ಟಲಾಯಿತು. ಇಲ್ಲಿರುವ ಕೋಟೆ, ಗದ್ದುಗೆ, ಪಾದಕಟ್ಟೆ ಮತ್ತು ದೇವಾಲಯ ಹಾಗೂ ವೀರಗಲ್ಲುಗಳು ಇನ್ನಷ್ಟು ಬೆಳಕು ಚೆಲ್ಲುತ್ತವೆ.

ಜಗಳೂರು ಪಾಪನಾಯಕ ಪವಾಡ ಪುರುಷನಾಗಿ, ದೈವಾಂಶಸಂಭೂತವಾಗಿ ಜನಪ್ರಿಯಗೊಂಡವನು. ಅವನ ನೆಲೆ ಧಾರ್ಮಿಕ ಕ್ಷೇತ್ರವಾಗಿ, ವೀರರಾಧನೆ ಕ್ಷೇತ್ರವಾಗಿ ಲೋಕವಿಖ್ಯಾತಿ ಪಡೆಯಿತು. ಇಂದು ಬೇಡರು ಸೂರೆದೇವ ಪಾಪನಾಯಕ, ಕೋರೇಲು ಪಾಪನಾಯಕ, ಪರದೇಶಿ ಪಾಪನಾಯಕ, ಜೋಗದೇವರು ಎಂದೆಲ್ಲಾ ಕರೆಯಲಾಗುತ್ತದೆ. ವರ್ಷಕ್ಕೊಮ್ಮೆ ಎರಡುಬಾರಿ ಹಬ್ಬ – ಜಾತ್ರೆಗಳಾಗುವಾಗ ಅಸಂಖ್ಯಾತ ಭಕ್ತಾದಿಗಳು ಸೇರುವರು.

ಮೂಲಸಮಾಧಿ ಸ್ಥಳದ ಗುಡಿಯನ್ನು ದೇವಾಲಯವಾಗಿ ಪರಿವರ್ತಿಸಿ ಕಟ್ಟಿಸಿದವರು ಕಮಲಾಪುರದ ಗಲಗಲ್ಲು ಸೂರಯ್ಯ. ವಿಶಾಲವಾದ ಮಂಟಪ, ಗರ್ಭಗೃಹಗಳನ್ನೊಳಗೊಂಡಿದೆ ಈ ದೇವಾಲಯ. ದೊರೆ ಇವನನ್ನು ಕಾಲು ಕಡಿಸಿದ ಕಾರಣಕ್ಕೋ ಏನೋ, ಬೇಡರು ಕುರಿಯನ್ನು ಬಲಿಕೊಡುವಾಗ ಶಿರವನ್ನು ಕಡಿದರೆ ಇಲ್ಲಿ ಮೊದಲು ಮುಂಗಾಲುಗಳನ್ನು ಕಡಿದು ಅದನ್ನು ಮೂರು ಹೆಜ್ಜೆ ನಡೆಸಿ ತರುವಾಯ ಕುತ್ತಿಗೆ ಕೊಯ್ಯುತ್ತಾರೆ. ಈ ರೀತಿಯ ಪದ್ಧತಿ, ಚಾರಿತ್ರಿಕ ಘಟನೆ ಮಸುಕಾಗಿದೆ. ಇಂದು ಬೇಡರ ಪಂಗಡದವರಿಗೆ ಮನೆದೇವರಾಗಿರುವ ಪಾಪನಾಯಕ, ಬೇಡರ ಮಕ್ಕಳಿಗೂ ಆ ಹೆಸರಿಟ್ಟಿರುವುದು ಸಾರ್ಥಕದ ಪ್ರತೀಕ. ವಿಶೇಷವೆಂದರೆ ಜಗಳೂರು ಪಾಪನಾಯಕ ತಿರುಪತಿಯ ವೆಂಕಟರಮಣನ ಭಕ್ತನಾದರೂ ಅವನ ಅನುಯಾಯಿಗಳು ಮಾತ್ರ ಶೈವ, ವೈಷ್ಣವ ಪಂಥದ ಬೇಡರಲ್ಲದೆ, ಲಿಂಗಾಯತ, ಬ್ರಾಹ್ಮಣರು ಸೇರಿದಂತೆ ಇತರ ಸಮುದಾಯದವರು ಆರಾಧಿಸುತ್ತಾರೆ. ಹೊಸಪೇಟೆ ತಾಲೂಕಿನ ಕಮಲಾಪುರ, ಪಾಪಿನಾಯಕನಹಳ್ಳಿ, ಕೂಡ್ಲಿಗಿ, ಸಂಡೂರು, ದಾವಣಗೆರೆ, ಚಳ್ಳಕೆರೆ, ಹಿರಿಯೂರು, ಮೊಳಕಾಲ್ಮೂರು ತಾಲೂಕುಗಳ ಕೆಲವು ಗ್ರಾಮಗಳಲ್ಲಿ ಈತನ ದೇವಾಲಯಗಳಿದ್ದು ಹಬ್ಬ – ಜಾತ್ರೆಗಳಾಗುತ್ತವೆ.

**ನಾಯಕನಹಟ್ಟಿ:** ಚಿತ್ರದುರ್ಗ ಜಿಲ್ಲೆ, ಚಳ್ಳಕೆರೆ ತಾಲ್ಲೂಕಿನಲ್ಲಿರುವ ಪ್ರಸಿದ್ಧ ಕ್ಷೇತ್ರವೇ ನಾಯಕನಹಟ್ಟಿ. ಇಲ್ಲಿರುವ 'ತಿಪ್ಪೇಸ್ವಾಮಿ' ಅನೇಕ ಸಮುದಾಯಗಳಿಗೆ ಆರಾಧ್ಯ ದೈವ. ಕ್ರಿ.ಶ.ಸು.೧೯ – ೧೭ನೇ ಶತಮಾನದಲ್ಲಿ ಬಾಳಿ – ಬದುಕಿದ ಕರ್ಮಜೀವಿ – ಕಾಯಕಯೋಗಿಯಾದ ತಿಪ್ಪೇಸ್ವಾಮಿ ಮ್ಯಾಸನಾಯಕರ ದಾನ ಸಾಲಮ್ಮನ ಸಂತತಿಗೆ ಸೇರಿದವನು (ಮಗ). ಇವಳ ತಂಗಿಯ ಮಗನೆಂದು ಈತನಿಗೆ ಕರೆಯಲಾಗಿದೆ. ಹಟ್ಟಿಮಲ್ಲಪ್ಪನಾಯಕ ಇಲ್ಲಿ ಪಾಳೆಯಗಾರನಾಗಿದ್ದಾಗ ಈತ ಸಮಾಜ ಸುಧಾರಕನಾಗಿ, ಜನಕಲ್ಯಾಣಕ್ಕೆ ಅರ್ಪಿಸಿಕೊಂಡ ಮಹಾತ್ಯಾಗಿಯಾಗಿದ್ದನಂತೆ. ರಾಯದುರ್ಗದಿಂದ ನಾಯ್ಕನಹಟ್ಟಿಗೆ ಬಂದು ನೆಲೆಸಿದ್ದು, ಫಣಿಯಪ್ಪನೊಂದಿಗೆ ಸ್ನೇಹ, ಸತ್ತ ಎಮ್ಮೆಯನ್ನು ಬದುಕಿಸಿದ್ದು, ಈತನ ಕೆಲವು ಪವಾಡಗಳಾಗಿವೆ. ಮಾಡಿದವರಿಗೆ ನೀಡು ಭಿಕ್ಷೆ' ಎಂಬ ಸಿದ್ಧಾಂತದ ಪ್ರತಿಪಾದಕನಾದ ತಿಪ್ಪೇಸ್ವಾಮಿ ಧಾರ್ಮಿಕ ಮಹಾಪುರುಷನು ಆಗಿದ್ದ. ನಾಯಕನಹಟ್ಟಿ ಸಮೀಪ ಹೊಸಗುಡ್ಡದ ಹತ್ತಿರ 'ದೊಡ್ಡಕೆರೆ'ಯನ್ನು ಕಟ್ಟಿಸಿದ್ದು ಗಮನಾರ್ಹ. ಈ ಕೆರೆ ಕೋಡಿ ಬಿದ್ದಾಗ ತೆಪ್ಪೋತ್ಸವ ನಡೆಯುವುದು ಈ ಸ್ವಾಮಿಯ ಸ್ಮರಣೆಗಾಗಿ ಚಿಕ್ಕಕೆರೆಯು ಹೊರಮಠದ ಮುಂಭಾಗದಲ್ಲಿದೆ.



ತಿಪ್ಪೇರುದ್ರಸ್ವಾಮಿಯ ದರ್ಶನಕ್ಕೆ ನೂಕು ನುಗ್ಗಲು, ನಾಯಕನಹಟ್ಟಿ

ಪ್ರತಿವರ್ಷ ಮಾರ್ಚ್ ತಿಂಗಳಲ್ಲಿ ಬೃಹತ್ ಜಾತ್ರೆಯಾದರೆ, ನವೆಂಬರ್ ಡಿಸೆಂಬರ್‌ನಲ್ಲಿ ಕಾರ್ತಿಕೋತ್ಸವವು ನಡೆಯುವುದು ಸ್ಪಷ್ಟ. ಅಕ್ಕಪಕ್ಕದ ಜಿಲ್ಲೆ – ನೆರೆಯ ರಾಜ್ಯದ ಭಕ್ತಾದಿಗಳು ವರ್ಷಕ್ಕೊಮ್ಮೆ ನಡೆಯುವ ಜಾತ್ರೆಯಲ್ಲಿ ಭಾಗವಹಿಸುತ್ತಾರೆ. ತಿಪ್ಪೇಸ್ವಾಮಿಯ ಲೋಕಕಲ್ಯಾಣ ಕೆಲಸಗಳಿಂದ ಆತ ಬಹುಜನಪ್ರಿಯನಾಗಿರುವನು. ಹೊರಮಠದಲ್ಲಿ ಈತನ ಜೀವೈಕ್ಯ ಸಮಾಧಿಯಿದೆ. ಬೇಡರು ಇಲ್ಲಿನ ಪೂಜಾರಿಗಳಾಗಿದ್ದು, ವಿಶೇಷ: ಸ್ವಾಮಿಯ ಮನ್ನಣೆಗೂ ಪಾತ್ರರಾಗಿರುವಂತಿದೆ. ಬೇಡರು ತಿಪ್ಪೇಸ್ವಾಮಿಗೆ ನೇರವಾಗಿ ಪ್ರಾಣಿಬಲಿ 'ಕೊಡದೆ, ತಾವು ಬಂದು ತಂಗಿದ ಸ್ಥಳದಲ್ಲಿ ಬೇಟೆ ಕಡಿದು 'ಪರುವು' ಮಾಡಿಕೊಳ್ಳುತ್ತಾರೆ. ಶಕ್ತಿ, ಸಾಹಸ, ಪರಾಕ್ರಮದ ದ್ಯೋತಕವಾಗಿ ಆರಾಧನೆಗೊಳಪಡುವ ಬೇಡರ ವೀರರೇ ಹೆಚ್ಚು ಜನಪ್ರಿಯವಾಗದರೆ, ತಿಪ್ಪೇಸ್ವಾಮಿಯ ವ್ಯಕ್ತಿತ್ವವೇ ಬೇರೆ ಬಗೆಯದು. ಈ ಸಾಧು – ಸಂತನ ಪೂರ್ವ ಚರ್ಚೆಗಳು ಖಚಿತವಾಗಿ ನಡೆದಂತಿಲ್ಲ. ಈ ಬಗ್ಗೆ ಹೊಸಬೆಳಕು ಚೆಲ್ಲಬೇಕಿದೆ. ನಾಯಕನಹಟ್ಟಿ ನಾಯಕರಿಗೆ ಒಂದು ಕಟ್ಟೆಮನೆಯಾಗಿ, ದೊರೆಯನ್ನು ಹೊಂದಿದೆ. ಇಂಥ ಆಧ್ಯಾತ್ಮಿಕ ನೆಲೆ ನಾಯಕರ ನೆಲೆಯಾಗಿ ಬಹುಜನಪ್ರಿಯಗೊಳ್ಳುವಲ್ಲಿ ಅನುಮಾನವಿಲ್ಲ.



ತಿಪ್ಪೇಸ್ವಾಮಿ ಜೀವೈಕ್ಯ ಸಮಾಧಿಯಾದ ಸ್ಥಳ, ನಾಯಕನಹಟ್ಟಿ

**ವಲಸೆ:** ಬಳ್ಳಾರಿ ಜಿಲ್ಲೆ ಕೂಡ್ಲಿಗಿ ತಾಲೂಕಿನಲ್ಲಿರುವ ಪುಟ್ಟಗ್ರಾಮ 'ವಲಸೆ'.[2] ಚಾರಿತ್ರಿಕವಾಗಿ ತುಂಬಾ ಮಹತ್ವವುಳ್ಳದ್ದು. ಶಿಲಾಯುಗದ ಮಾನವ ಜೀವಿಸಿದ ಕುರುಹುಗಳು ಇಲ್ಲಿಗೆ ಸಮೀಪದ ಕುಮತಿ ಗ್ರಾಮದಲ್ಲಿ ದೊರೆತಿವೆ. ಚಿನ್ನಹಗರಿ ನದಿ ದಂಡೆಯ ಮೇಲಿರುವ ಈ ಗ್ರಾಮ ಯರಗಾಟನಾಯಕನ ದೇವಾಲಯ (ಸಮಾಧಿ) ಇರುವುದರಿಂದ ತುಂಬಾ ಪ್ರಸಿದ್ಧಿ. ದಾನಸಾಲಮ್ಮನ ಸಂತತಿಗೆ ಸೇರಿದ ತಂಗಡಲ ತಮ್ಮವ್ವ ಇವನ ತಾಯಿ, ಪುವ್ವಾಲು ರಾಯವ್ವ, ಇವರ ಹೆಂಡತಿ. ವಡಪಲು ತಮ್ಮಯ್ಯ ಆತ್ಮೀಯ ಗೆಳೆಯ. ಒಮ್ಮೆ ಕ್ಷಾಮ ಬಂದಾಗ

ದನಕರುಗಳ ಹುಲ್ಲು ನೀರಿಗಾಗಿ ವಲಸೆ ಹೋಗುತ್ತಾ ಚಿತ್ರದುರ್ಗ ಪ್ರದೇಶದ ತಮಟಕಲ್ಲು ಪರಿಸರದಲ್ಲಿ ನೆಲೆಸುವನು. ಹೀಗಿರುವಾಗ ತಮಟಕಲ್ಲು ಪ್ರದೇಶದಲ್ಲಿ ನಾಯಕಸಾನಿ ಓಬವ್ವನ ಸೌಂದರ್ಯಕ್ಕೆ ಮರುಳಾಗಿ ಅವಳನ್ನು ಪಡೆಯುವುದಕ್ಕೆ ನಾನಾ ಬಗೆಯಾಗಿ ಹೋರಾಟ ನಡೆಸುತ್ತಾನೆ. ಈ ಹಿಂದೆ ಗುಜಗುತ್ತಲ ಖ್ಯಾತಯ್ಯನು ಇವಳನ್ನು ಮೋಹಿಸಲು ವಿಫಲನಾಗಿದ್ದು, ಯರಗಾಟನ ವಿರುದ್ಧ ಸೇಡು ತೀರಿಸಿಕೊಳ್ಳಲು ಆಗಾಗ ಹವಣಿಸುತ್ತಿದ್ದ. ತಪಲೇಟಕೆರೆ ಸಮೀಪದಲ್ಲಿ ಹಸುಗಳಿದ್ದವು. ಒಮ್ಮೆ ಓಬವ್ವ ತನ್ನನ್ನು ವಶಪಡಿಸಿಕೊಳ್ಳುವ ಗಂಡು ಬಾಗೇನಾಳು ಕಾಮನಾಯಕನ ಅರಮನೆಯಲ್ಲಿರುವ ಬಂಜೆ ಆಕಳಿನ ಮಾಂಸ ತಂದುಕೊಟ್ಟರೆ, ಅವನೊಡನೆ ಸಂಬಂಧ ಬೆಳೆಸುವ ಇಚ್ಛೆ ತೋರಿಸಿದ್ದಳು. ನಿಡಗಲ್ಲುಗೆ ಹೋಗಿದ್ದ ಕಾಮನಾಯಕನನ್ನು ಮರೆಮಾಚಿ ಹಸುವನ್ನು ಪಡೆಯಲು ಯರಗಾಟನಾಯಕ ಅನೇಕ ಮೂಟೆಗಳ ಬಟ್ಟೆಗಳನ್ನು ತಂದು ಹಸುವಿನ ಗಂಟೆಗೆ ಕಟ್ಟಿ ತನ್ನ ವಶಕ್ಕೆ ತೆಗೆದುಕೊಂಡ. ಈ ಸಾಹಸ ಮಾಡುವಾಗ ಕಂಚಿನ ಬಾಗಿಲಿನ ಶಬ್ದ ಅರಸನಿಗೆ ಕೇಳಿ ಅವನು ಆತುರವಾಗಿ ಧಾವಿಸುತ್ತಿರುವಷ್ಟರಲ್ಲಿ ಒಬ್ಬವ್ವನಿಗೆ ಇದರ ಮಾಂಸದ ತುಂಡುಗಳು ರುಚಿಸಿದವು. ಯರಗಾಟನಾಯಕ ಸಾಹಸದ ಮೂಲಕ ಗೆದ್ದುಕೊಂಡ ಓಬವ್ವಳೊಂದಿಗೆ ಪ್ರಣಯದಲ್ಲಿ ಬೆರೆಯುವ ಅವಕಾಶವೇ ಸಿಗಲಿಲಲ. ಇವಳ ಪ್ರೀತಿ ಕೇಳಿ ಭಗ್ನಿಯಾಗಿದ್ದ ಗುಜಗುತ್ತಲು ಖ್ಯಾತನು ಬಿಲ್ಲಿನಿಂದ ಬಾಣ ಹೊಡೆದು ಇವನನ್ನು ಸಾಯಿಸುತ್ತಾನೆ. ಬಾಣ ಬಿದ್ದ ಸ್ಥಳ ಬೆಳಗಟ್ಟ ಸಮೀಪದಲ್ಲಿರುವ ಸಾಸಲುಹಟ್ಟಿ, ಹೀಗೆ ಹೆಣ್ಣಿಗಾಗಿ ಹೋರಾಡಿ ಮಡಿದ ವೀರನ ಶವವನ್ನು ಹೊತ್ತು ತರುವಾಗ ದಿನಗಳೇ ಕಳೆದಿದ್ದಾವಂತೆ. ಕೊಳೆತು ನಾರುವ ಶರೀರವನ್ನು ಮುಸ್ಟಲಗುಮ್ಮಿ ಹತ್ತಿರ ಇಟ್ಟು 'ದಿಂಪಗುಡ್ಡೆ'ಯಾಗಿ (ಶವ ಇಳಿಸಿದ ಜಾಗ) ಮಾಡಿದ್ದಾರೆ. ನಂತರ ವಲಸೆ ಹತ್ತಿರ ಸಮಾಧಿ ಮಾಡಿರಬೇಕು. ಹೆಣ ವಲಸಾದುದರಿಂದ 'ವಲಸೆ' ಗ್ರಾಮದ ನಿರ್ಮಾಣ ಆಗಿರುವಂತಿದೆ. ಬೇಡ ಜನಾಂಗದ ಮೀಸಲಾರು, ನಡುಗಡ್ಡೆಯವರು ಪೂಜಿಸುತ್ತಿರುವುದನ್ನು ಇಂದಿಗೂ ನೊಡಬಹುದು. (ಪಶುಪಾಲಕ ವೀರನಾದ ಯರಗಾಟನಾಯಕನ ಸತ್ತ ಹೆಣಕ್ಕೆ ಅವನ ತಾಯಿ ಹಾಲು ಕರೆದಾಗ ಪ್ರಾಣ ಬಿಟ್ಟನೆಂಬ ನಂಬಿಕೆಯಿದೆ) ಯರಗಾಟನಾಯಕನ ದೇವಾಲಯಗಳು, ಹೆಸರಿನ ವ್ಯಕ್ತಿಗಳು ಚಿತ್ರದುರ್ಗ, ಬಳ್ಳಾರಿ ಜಿಲ್ಲೆಗಳಲ್ಲಿ ಕಂಡುಬರುವುದುಂಟು. ಈತನ ಆರಾಧನಾ ಸ್ಥಳಗಳು ಸಾಸಲಹಟ್ಟಿ (ಚಿತ್ರದುರ್ಗ ತಾ, ಡಿ.ಬೋರಪ್ಪನವರು ದೇವಾಲಯವನ್ನು ಕಟ್ಟಿಸಿದ್ದಾರೆ. ವಲಸೆ (ಕೂಡ್ಲಿಗಿ – ತಾ) ಮೊದಲಾದ ಸ್ಥಳಗಳಲ್ಲಿ ಕಂಡುಬರುತ್ತವೆ. ಗುಗ್ಗರಿಹಬ್ಬ, ದೀಪಾವಳಿಗಳನ್ನು ಇಲ್ಲಿ ಮಾಡಲಾಗುತ್ತದೆ.



ಗುಹಾಂತರ ದೇವಾಲಯ, ರಾಮದುರ್ಗ, ನಾಯಕನಹಟ್ಟಿ

**ಮುತ್ತಿಗಾರಹಳ್ಳಿ – ರಾವಲಕುಂಟ (ಉಪ್ಪುವಂಕ – ವಡಕ್ಕಟ್ಟ)**

ಮೊಳಕಾಲ್ಮೂರು ತಾಲೂಕಿನ ಬೃಹತ್ ಅರಣ್ಯವನ್ನು ಹೊಂದಿರುವುದೇ ಮುತ್ತಿಗಾರಹಳ್ಳಿ ಕಮರಕಾವಲು. ವಿಜಯನಗರದ ಅರಸರು ಮಲ್ಲಯ್ಯನ ಎತ್ತುಗಳಿಗಾಗಿ ಸು.೩೦೦ ಎಕರೆಗಳಷ್ಟು ಅರಣ್ಯವನ್ನು ಬೇಡರಿಗೆ ಇನಾಂ ನೀಡಿದ್ದೇ ಮೇಲಿನ ಕಾವಲು. ಇಲ್ಲಿ ರಾವಲಕುಂಟ, ಬೊಮ್ಮಗೊಂಡನ ಕೆರೆ, ಊಟವಂಕ, ವಡಕ್ಕಟ್ಟ ಮೊದಲಾದ ನಿವೇಶನ ನೆಲೆಗಳು ಕಂಡುಬರುತ್ತವೆ. ಇವು ಚಿತ್ರದುರ್ಗ ಮತ್ತು ರಾಯದುರ್ಗದ ಪಾಳೆಯಗಾರರಿಂದಲೂ ಧಾರ್ಮಿಕವಾಗಿ ಖ್ಯಾತಿಗೊಂಡಿದೆ. ಈ ಭಾಗವನ್ನು ಗುತ್ತಿಬೊಮ್ಮತಿರಾಜು ಎಂಬ ಸಾಮಂತ ನೋಡಿಕೊಳ್ಳುತ್ತಿದ್ದ.


ಮುತ್ತಿಗಾರಹಳ್ಳಿ ಕೋಟೆ

ಮುತ್ತಿಗಾರಹಳ್ಳಿ ಅರಣ್ಯದಲ್ಲಿ ಹಿಂದೆ ಕೊಳಗಲು (ಡಗು) ಬೊಮ್ಮನಾಯಕನೆಂಬ ನಿರಂಕುಶ ದೊರೆಯಿದ್ದ. ಇವನು ಮ್ಯಾಸಬೇಡರ ೧೨ ಪೆಟ್ಟಿಗೆ ದೇವರುಗಳನ್ನು ಆನೆಗುಂದಿ ಕೋಟೆಯಿಂದ ತೆಗೆದುಕೊಂಡು ಬಂದು ಪ್ರತಿಷ್ಠಾಪಿಸಿ ತನ್ನ ಪಂಥದಲ್ಲಿ ಗೆದ್ದ ಪ್ರಸಂಗವಿದೆ. ಹೀಗೆ ವೀಳ್ಯದಿಂದ ಜಯಶಾಲಿಯಾದವನಿಗೆ (ಪಾಳೆಯಗಾರ) ರಾಜನನ್ನಾಗಿ ಮಾಡಿದ್ದರು. ಆರಂಭದಲ್ಲಿ ಆಳ್ವಿಕೆ ಜನಪರವಾಗಿದ್ದರೂ, ಕ್ರಮೇಣ ಭೀಕರವಾಗಿ ಪರಿಣಮಿಸಿತು. ಇವನು ವಿಧಿಸಿದ ತೆರಿಗೆಗಳೆಂದರೆ: ಗಂಡು ಸಂತತಿಯಾಗಿ ಹುಟ್ಟಿದ ಪ್ರತಿ ಪ್ರಾಣಿಯ ಕರುಗಳನ್ನು, ಬೆಣ್ಣೆ, ತುಪ್ಪ, ಹಣ್ಣು, ಹಂಪಲುಗಳಲ್ಲದೆ; ಹೊಸದಾಗಿ ಮದುವೆಯಾದವರು ಮೊಗ್ಗಲು ತೆರಿಗೆ ಕೊಡುವ ಅನಿಷ್ಟ ತೆರಿಗೆಯಿತ್ತು. ಈ ತೆರಿಗೆ ಕೊಡದಿದ್ದರೆ ನೂತನ) ಮಧುಮತಿ ಇವನೊಡನೆ ಮೊದಲ ರಾತ್ರಿ ಕಳೆಯಬೇಕಿತ್ತು. ಜನರಿಗೆ ಇದು ನುಂಗಲಾರದ ತುತ್ತಾಯಿತು. ವಿರೋಧಿಗಳಿಂದ ಹತ್ತಿಕ್ಕಲು ಸತತ ಪ್ರಯತ್ನಿಸಿದ ಯರಮಂಚಿನಾಯಕ ಇವನನ್ನು ಅಧಃಪತನಗೊಳಿಸಲು ನಾಯಕನಹಟ್ಟಿ ಹತ್ತಿರವಿರುವ ಕುದಾಪುರದಲ್ಲಿ ಸಭೆ ಕರೆದ. ಎಲ್ಲಾ ನಾಯಕರು ಸೇರಿ ಅಂದು ಕೊಡಗಲು ಬೊಮ್ಮನ ಅವಾಸಾನವೇ ಸೂಕ್ತ ಎಂಬ ಅಭಿಪ್ರಾಯ ವ್ಯಕ್ತಪಟ್ಟಿತು. 'ಒಣಗಿದ ಮರ ಚಿಗುರಬೇಕು – ಚಿಗುರಿದ ಮರ ಒಣಗಬೇಕು' ಎಂಬ ನಿಯಮ ಅಳವಡಿಸಿಕೊಂಡರು. ಇದರಿಂದ ಕುಪಿತನಾದ ಬೊಮ್ಮನಾಯಕ ಪರಿಪರಿಯಾಗಿ ಆಲೋಚನೆಯಲ್ಲಿ ತೊಡಗಿದ. ಅಂದು ತನ್ನ ತಂಗಿ ದೇವಮ್ಮ ಸೊಪ್ಪು, ತರಲು ಕಾಡಿಗೆ ತೆರಳಿದ್ದಳು. ಇವನು ಸಹ ಬೇಟೆಗೆಂದು ಕಾಡಿಗೆ ಹೋಗಿ ಬೇಟೆಯಲಿ ತೊಡಗಿದಾಗ ಒಡಹುಟ್ಟಿದ ತಂಗಿ ದೇವಮ್ಮನೆಂದು ತಿಳಿಯದೇ ಕಾಡುಪ್ರಾಣಿಯೆಂದು ಬಾನಪ್ರಯೋಗಿಸಿದ. ದೇವಮ್ಮ ಸತ್ತಿದ್ದನ್ನು ಕಂಡು ಎದೆಗುಂದಿ ತಾನು ಸಹಾ ಮರಣವನ್ನುಪ್ಪುವ ದುರಂತ ಘಟನೆ ಸಂಭವಿಸುತ್ತದೆ. ಆಗ ನಾಯಕ ಮುಖಂಡರು ಸಮಾಧಾನಗೊಂಡರು. ಇವನ ಸಾವಿಗಾಗಿ ದೇವರನ್ನು ಪ್ರಾರ್ಥಿಸುವುದು ಆಶಯವೇ ಸರಿ. ಇವನ ನೆಲಸುನಾಡು ಮೊಳಕಾಲ್ಮೂರು – ರಾಯದುರ್ಗ ತಾಲೂಕುಗಳ ಮಧ್ಯಭಾಗ. ಗಲಗಲ್ಲಿನಲ್ಲಿ (ರಾಯದುರ್ಗ ತಾ) ದೇವಮ್ಮನ ದೇವಾಲಯವಿದೆ. ಜಾತ್ರೆ – ಉತ್ಸವಗಳಾಗುತ್ತವೆ. ನಾಯಕ ಮಕ್ಕಳಿಗೆ ದೇವಮ್ಮನ ಹೆಸರನ್ನಿಡುತ್ತಾರೆ. ಗೌರಸಮುದ್ರದಲ್ಲಿ ಬೊಮ್ಮನಾಯಕನ ದೇವಾಲಯವಿದೆ. ಜಾತ್ರೆ – ಉತ್ಸವಗಳಾಗುತ್ತವೆ. ನಾಯಕ ಮಕ್ಕಳಿಗೆ ದೇವಮ್ಮನ ಹೆಸರನ್ನಿಡುತ್ತಾರೆ. ಗೌರಸಮುದ್ರದಲ್ಲಿ ಬೊಮ್ಮನಾಯಕನ ದೇವಾಲಯವಿದ್ದು ಅದರ ಹೆಸರು ಬೊಮ್ಮದೇವರು. ಮಾರವ ಬುಟ್ಟುಗೋಲು, ಬೊಮ್ಮದೇವರ ಬುಟ್ಟಗಲೋರು ಇದನ್ನು ಆರಾಧಿಸುವರು. ಇತರೆ ಬೇಡರಹಟ್ಟಿಗಳಲ್ಲಿ ಇವರ ದೇವಾಲಯಗಳಿದ್ದು ಹಬ್ಬ – ಜಾತ್ರೆಗಳಾಗುತ್ತಿರುವುದು ವಿಶೇಷ.


ದಡ್ಡಿಸೂರನಾಯ್ಕನ ಹಿರೇಹಳ್ಳಿಕೋಟೆ

**ಹಿರೇಹಳ್ಳಿ : ಐವೋದಿ ಕ್ಷೇತ್ರ**

ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲೂಕಿನ ಗರಣಿಹಳ್ಳದ ಸಮೀಪದಲ್ಲಿ (ಚೆಳ್ಳಕೆರೆ ಬಳ್ಳಾರಿ ರಸ್ತೆ) ಈ ಗ್ರಾಮವಿದೆ. ಇಲ್ಲಿ ಬಹುಸಂಖ್ಯಾತರು, ನಾಯಕರು, ಸಣ್ಣಬೆಟ್ಟ ಗುಡ್ಡಗಳ ಸಾಲು, ದಿನ್ನೆಗಳಲ್ಲದೆ, ಆಂಧ್ರದ ಗಡಿ ಈ ಊರಿಗೆ ಸಮೀಪದಲ್ಲಿದೆ. ತೆಲುಗಿನಲ್ಲಿ 'ಪೆದ್ದಪಲ್ಲಿ' ಎಂಬ ಹೆಸರಿದೆ. ಹಿರಿಯರು ಕೂಡಿ ನಿರ್ಮಿಸಿದ ಹಳ್ಳಿ ಎಂದು ಹೇಳಲಾಗುತ್ತಿದೆ.



ದಡ್ಡಿಸೂರನಾಯಕನ ದೇವಾಲಯ, ಹಿರೇಹಳ್ಳಿ

ಇಲ್ಲಿನ ಪ್ರಸಿದ್ಧ ಹಾಗೂ ಮೂಲದೇವತೆ 'ದಡ್ಡಿಸೂರನಾಯಕ' ಇತರ ದೇವತೆಗಳೆಂದರೆ ಗಾದರಪಾಲನಾಯಕ, ಓಬಳದೇವರು ಇದ್ದರೂ ಅತೀ ಹೆಚ್ಚಿನ ಮಹತ್ವ ಮೊದಲನೆಯದಕ್ಕಿದೆ. ದಡ್ಡಿಸೂರನಾಯಕ ಒಬ್ಬ ಪಶುಪಾಲಕ. ಬೇಡರ ಕಾಪು ಕಂಪಳದೊಂದಿಗೆ ಮೊಳಕಾಲ್ಮೂರು – ರಾಯದುರ್ಗ – ಗಲಗಲ್ಲು ಪ್ರದೇಶದಲ್ಲಿ ನೆಲೆಸಿರುವಾಗ ಗಲಗಲ್ಲು ಗಾಜನಾಯಕನ ಪತ್ನಿಗೆ ಮನಸೋತಿರುತ್ತಾನೆ. ಒಮ್ಮೆ ಕುರಿ ಮದೆಯಲ್ಲಿ ವಾಸ್ತವ ಹೂಡಿದಾಗ ಕರಿಬಣ್ಣದ ಸೀರೆಯನ್ನುಟ್ಟು ಬಂದ ತನ್ನ ಪ್ರೇಯಸಿಯನ್ನು ಕಾಡುಪ್ರಾಣಿಯೆಂದು ಬಗೆದು ಬಾಣಬಿಟ್ಟ. ತುಂಬು ಗರ್ಭಿಣಿಯಾದ ಅವಳು ಸ್ಥಳದಲ್ಲಿಯೇ ಲಿಬಿಲಿಬಿ ಒದ್ದಾಡಿ ಸತ್ತಳು. ವಿಷಯ ತಿಳಿದ ಗಾಜನಾಯಕ ಸ್ಥಳಕ್ಕೆ ಬಂದು ನೋಡಲಾಗಿ ಇಬ್ಬರಿಗೂ ಕಾಳಗ ಏರ್ಪಡುತ್ತದೆ. ಅನೇಕ ಸೈನಿಕರು ಹತರಾದರು. ಕಾದಾಟದಲ್ಲಿ ಸೆಣೆಸಾಡಿದ ಗಾಜನಾಯಕ ಮರಣ ಹೊಂದಿದ. ನಂತರ ದಡ್ಡಿಸೂರನಾಯಕನು ಹಿರೇಹಳ್ಳಿಗೆ ಓಡಿಹೋಗಿ ನೆಲಮಾಳಿಗೆಯಲ್ಲಿ ಐಕ್ಯನಾದನೆಂದು, ವಿರೋಧಿಗಳು ಕೊಂದರೆಂದು ಸಹಾ ತಿಳಿದುಬರುತ್ತದೆ. ಇಂಥ ಪ್ರಸಂಗಗಳು ಬೇಡರಲ್ಲಿ ನಡೆಯುವುದು ಅಸಹಜವೇನಲ್ಲ. ಅವನ ಸಮಾಧಿ ಹಿರೇಹಳ್ಳಿಯಲ್ಲಿದ್ದು, ದಡ್ಡಿಸೂರನಾಯಕ ದೇವಾಲಯವೆಂದು ಖ್ಯಾತಿಗೊಂಡಿವೆ. ಹಬ್ಬ, ಜಾತ್ರೆ, ಉತ್ಸವಗಳು ಇಲ್ಲಿ ಜರುಗುತ್ತವೆ.

**ಗೌರಸಮುದ್ರ:** ಇದನ್ನು ಸಹಾ 'ಐವೋದಿ ಮಠ'ವೆಂದು ಬೊಮ್ಮನಾಯಕನ ಸಹೋದರಿ ಮಾರಮ್ಮನ ನೆಲೆ ಬೀಡೆಂದು ತಿಳಿಯಬಹುದಾಗಿದೆ. ಬೊಮ್ಮನಾಯಕನ ವಂಶಸ್ಥರಾದ ಮಾರವ ಬುಟ್ಟುಗೊಲರು ಇಲ್ಲಿನ ಬಹುಸಂಖ್ಯಾತರು. ಇಲ್ಲಿನ ಪ್ರಧಾನ ದೇವತೆ ಮಾರಮ್ಮ. ಪಕ್ಕದಲ್ಲಿ ಬೊಮ್ಮದೇವರ ಗುಡಿಯಿದೆ. ಆಕರ್ಷಕ ತಾಣಗಳಲ್ಲಿ ಇದು ಒಂದು.

ಮಾರಮ್ಮನ ಹಬ್ಬ ಪ್ರತಿವರ್ಷ ಆಗಸ್ಟ್ ಸೆಪ್ಟೆಂಬರ್ ತಿಂಗಳಿನಲ್ಲಿ ನಡೆಯುವಾಗ ಮ್ಯಾಸನಾಯಕರೇ ಇಲ್ಲಿನ ಬಹುಸಂಖ್ಯೆಆತ ಭಕ್ತಾದಿಗಳು. ರೂಢಿ – ಸಂಪ್ರದಾಯಗಳು ಇಲ್ಲಿ ತುಂಬಾ ವಿಶಿಷ್ಟವೆನಿಸಿವೆ. ಕೋಳಿ, ಕುರಿ, ಮೇಕೆಗಳನ್ನು ಬಲಿಕೊಡಲಾಗುತ್ತದೆ. ಜಾತ್ರೆಗೆ ನೆರೆಯ ಆಂಧ್ರದವರು ಬರುತ್ತಾರೆ. ಎತ್ತಿನಗಾಡಿಗಳೇ ಸಹಸ್ರಾರು ಸಂಖ್ಯೆಯಲ್ಲಿದ್ದು ಇತರ ಎಲ್ಲಾ ಬಗೆಯ ವಾಹನಗಳು ಬರುತ್ತವೆ. ಚಿತ್ರದುರ್ಗ ಜಿಲ್ಲೆಯಲ್ಲಿ ನಡೆಯುವ ಅತೀದೊಡ್ಡ ಜಾತ್ರೆಗಳ ಪೈಕಿ ಇದು ಪ್ರಮುಕವಾದುದು. ಜಾತ್ರೆ ಆಗುವುದು ಮಲಸಮುದ್ರ ತುಮ್ಮಲದಲ್ಲಿ. ಇಲ್ಲಿಗೆ ಸಮೀಪದ ಬುಕ್ಕಾಂಬುದಿ ಕರೆಯಿದ್ದು, ಇದರಂಗಳಲ್ಲಿ ಬೊಮ್ಮನಾಯಕನ ಸಮಾಧಿಯಿದೆ. ನಾನಾ ಜಾತಿಯ ಜನರು ಇಲ್ಲಿ ಪಾಲ್ಗೊಂಡು ವಿವಿಧ ಜವಾಬ್ದಾರಿಗಳನ್ನು ಹಂಚಿಕೊಳ್ಳುತ್ತಾರೆ. ತಮ್ಮ ಪೂರ್ವಜರ ಆರಾಧನೆಗಳು ಇದರೊಂದಿಗೆ ನಡೆಯುವುದು ಗಮನಾರ್ಹ.

ಊರಮಾರಮ್ಮ, ಕೊಡದ ಗುಡ್ಡದ ಮಾರಮ್ಮ, ಗೌರಸಮುದ್ರದ ಮಾರಮ್ಮನೆಂದು ಕರೆಯಲಾಗುವ ದೇವತೆಗಳ ದೇವಾಲಯಗಳು ನಾಯಕರ ಹಟ್ಟಿಗಳಲ್ಲಿ ಹೆಚ್ಚಾಗಿವೆ.



ಗೌರಸಮುದ್ರದ ಮಾರಮ್ಮ



ಬಂಡಿಗಾಡಿಗಳ ಸಮುಚ್ಚಯ, ಗೌರಸಮುದ್ರ

**ಓಬಣ್ಣನಹಳ್ಳಿ:** ಮೊಳಕಾಲ್ಮೂರು ತಾಲೂಕಿನ ಓಬಣ್ಣನಹಳ್ಳಿ ಚಾರಿತ್ರಿಕ ಮಹತ್ವ ಪಡೆದ ಗ್ರಾಮ. ನಾಯಕ ಜನಾಂಗದ, ಮೂಲಪುರುಷ, ಸಂಸ್ಕೃತಿ ನಿರ್ಮಾಪಕನಾದ ದಾರ್ಶನಿಕ ಪುರುಷ, ಯರಮಂಚಿ ನಾಯಕನ ನೆಲಸು ಪ್ರದೇಶವಿದು. ಇವನ ಸಮಾಧಿ, ವೀರಗಲ್ಲುಗಳು ಇಲ್ಲಿವೆ. ಇವನು ಸಂಸ್ಕೃತಿ ನಿರ್ಮಾಪಕನಾಗಿ 'ಜಾತಿಯಿಲ್ಲದವರಿಗೆ ಜಾತಿ, ಧರ್ಮ ಇಲ್ಲದವರಿಗೆ ಧರ್ಮದ ದೀಕ್ಷೆಕೊಟ್ಟ' ಗುರು ಎನ್ನಲಾಗಿದೆ. ನಾಯಕರ ಮಂದಲಾರು ಬೆಡಗಿನವರು ಇವನ ಅನುಯಾಯಿಗಳು. ಯರಮಂಚಿ ನಾಯಕ ಬೇಡರ ಸಂಸ್ಕೃತಿ ನಿರ್ಮಾಣದಲ್ಲಿ ನಿರ್ಣಾಯಕ ವ್ಯಕ್ತಿಯಾಗಿರುವನು. ಪೂಜಾರಿಗಳು, ೭ ಅಜ್ಜನೋರು, ೩ ಜನ ನಾಯಕರ ಪೈಕಿ ಇವನೇ ಶ್ರೇಷ್ಠ. ತನ್ನ ನಾಯಕತ್ವಲದಲಿ ಒಮ್ಮೆ ಬೋರುವನಿಗೆ ಪರವು ಮಾಡುವಾಗ ಇವನು ಬಂದು ತಡವಾದುದರಿಂದ ಎಲ್ಲಾ ಶುದ್ಧ ಕಾರ್ಯಗಳನ್ನು ಬೇರೆಯವರು ಮಾಡಿ ಮುಗಿಸುತ್ತಾರೆ. ಕೊನೆಗೆ ಬಂದು ನೋಡಿ ಕೋಪೋದ್ರೇಕಗೊಂಡ ನಾಯಕ ತನ್ನ ಹೆತ್ತ ಮಗನನ್ನೇ ಕೊಂದು ದೇವರಿಗೆ (ಕಡಿದು) ಅರ್ಪಿಸಿದ ಮಹಾದಾನಿ ಹೀಗಾಗಿ ಅಂದಿಗೆ ಅಣ್ಣ ತಮ್ಮಂದಿರಲ್ಲಿ ಬಿರುಕುಬಂತು. ಬೇರೆ ಬೇರೆ ಪಂಗಡ, ದೇವರುಗಳನ್ನು ಪ್ರತ್ಯೇಕವಾಗಿ ಮಾಡಿಕೊಂಡರು. ಹರಿಜನ, ಲಿಂಗಾಯತರೆನ್ನದೆ ಎಲ್ಲರೊಂದಿಗೂ ಇವನು ಬಾಂಧವ್ಯ ಬೆಳೆಸಿ, ಸ್ವಗೋತ್ರದಲ್ಲೇ ವಿವಾಹಕಾರ್ಯ ನಡೆಯುತ್ತದೆಯೇ ಹೊರತು ನನ್ನ ಇನ್ನೊಂದು ಪಂಗಡದೊಡನೆ ರಾಜಿಮಾಡಿಕೊಳ್ಳುವುದಿಲ್ಲವೆಂದು ಪ್ರತಿಜ್ಞೆ ಮಾಡಿದ್ದ.

ಯರಮಂಚಿನಾಯಕನ ವಂಶಸ್ಥರು ವಿಜಯನಗರದ ಕೊನೆ ಅವಧಿಯಲ್ಲಿ ಕಾಣಿಸಿಕೊಂಡು ಸಾಮಂತ ಅಧಿಕಾರಿಗಳಾಗಿದ್ದು, ಕಂಡುಬರುತ್ತದೆ. ಶಾಸನ, ವೀರಗಲ್ಲುಗಳು ಈ ಬಗ್ಗೆ ಸಾಕ್ಷಿಯಾಗಿವೆ. ಸಾಂಸ್ಕೃತಿಕವಾಗಿ ಆಂಧ್ರ – ಕರ್ನಾಟಕದಲ್ಲಿ ಇವನ ಆರಾಧನೆಯಿದ್ದು, ಹಬ್ಬಜಾತ್ರೆಗಳು ನಡೆಯುವುದುಂಟು. ಕಾತ್ರಿಕೆಹಟ್ಟಿಯಲ್ಲಿರುವ (ಕೂಡ್ಲಿಗಿ ತಾ) ಯರಮಂಚಯ್ಯನ ಕುಟುಂಬ ಈ ದೇವರ ಪೂಜಾರಿಗಳು,

ಯರಮಂಚನಾಯಕನಿಗೆ, ಗುರುವಯ್ಯನೆಂದು ಕರೆದು ವಿಶಿಷ್ಟ ರೀತಿಯಲ್ಲಿ ಆರಾಧನೆ ಮಾಡುತ್ತಿದ್ದಾರೆ. ಗುಗ್ಗರಿಹಬ್ಬ, ದೀಪಾವಳಿ ಹಬ್ಬಗಳು ಪ್ರಮುಖವೆನಿಸಿವೆ.

**ಗಲಗಲ್ಲು: ಗಾಜನಾಯಕನ ಕ್ಷೇತ್ರ**

ಆಂಧ್ರಪ್ರದೇಶದ ಅನಂತಪುರ ಜಿಲ್ಲೆ, ರಾಯದುರ್ಗ ತಾಲೂಕಿನಲ್ಲಿರುವ ಸಣ್ಣಗ್ರಾಮ 'ಗಲಗಲ್ಲು' ಕರ್ನಾಟಕದ ಗಡಿಯೊಂದಿಗೆ ಅವಿನಾಭಾವ ಸಂಬಂಧಹೊಂದಿದ್ದು, ಚಾರಿತ್ರಿಕ ಸಂಗತಿಗಳೊಂದಿಗೆ ತಳಕು ಹಾಕಿಕೊಂಡಿವೆ. ಮದ್ರಾಸ್ ಅಧಿಪತ್ಯದಲ್ಲಿ ರಾಯದುರ್ಗ ಬಳ್ಳಾರಿ ಜಿಲ್ಲೆಯ ಒಂದು ತಾಲೂಕು ಕೇಂದ್ರವಾಗಿತ್ತು.



ದೇವಮ್ಮ ಕೊಡಗಲುಬೊಮ್ಮನ ತಂಗಿ (ಗಲಗಲ್ಲು)

ಇಲ್ಲಿನ ಪ್ರಧಾನ ದೇವತೆಗಳು ಗಾಜನಾಯಕ ಮತ್ತು ದೇವಮ್ಮ ಗಾಜನಾಯಕ ವಿಜಯ ನಗರೋತ್ತರದ ಸಾಮಂತ ಅರಸನಾಗಿದ್ದು, ಚಿತ್ರದುರ್ಗದ ಅಧೀನದಲ್ಲಿದ್ದ ಕೈಲಾಸಕೊಂಡ, ತಾಟಚೆರವು, ಗೊಲ್ಲಹಳ್ಳಿ, ರಂಗಸಮುದ್ರ, ಕೋನಸಾಗರ ಮೊದಲಾದ ಪ್ರದೇಶಗಳು ಇವನಿಗೆ ಸೇರಿದ್ದವು. ವೇದಾವತಿ ನದಿ ದಂಡೆಯ ಮೇಲಿರುವ ಈ ಗ್ರಾಮ ಚಾರಿತ್ರಿಕ ಮಹತ್ವ ಪಡೆದದ್ದು ಮಧ್ಯಕಾಲದಲ್ಲಿ.

ಗಲಗಂಟೆ ಗಾಜನಾಯಕ ಬೇಡರಿಗೆ ದೇವರ ಸಮಾನವಾದ ವ್ಯಕ್ತಿ. ಬೋಸೆ ದೇವರ ಸಂಬಂಧಿ ಈ ಗಾಜನಾಯಕ. ಇವನ ರಾಜ್ಯಾಳ್ವಿಕೆ ಅಷ್ಟೊಂದು ವಿಸ್ತಾರಗೊಂಡತಿಲ್ಲ. ಪಶುಪಾಲಕರ ದೊರೆ ದಡ್ಡಿಸೂರನಾಯಕ ಮತ್ತು ಇವರನಿಗೆ ಕಾಳಗ ನಡೆದದ್ದು ಈ ಹಿಂದೆ ತಿಳಿಸಲಾಗಿದೆ. ಇವರ ಹೆಂಡತಿ ಬಗ್ಗೆ 'ಲಂಜಿ ಕಣಿವೆ' ಎಂಬ ಪ್ರದೇಶ ಇಂದಿಗೂ ಇದೆ. ಗಾಜನಾಯಕನ ಅಡಳಿತ ಪ್ರದೇಶ ಗುಡ್ಡ, ಬೆಟ್ಟ, ಅರಣ್ಯದಿಂದ ಕೂಡಿದ್ದಿತು. ೧೮ನೇ ಶತಮಾನದ ಮದ್ದುಗುಂಡುಗಳನ್ನು ತಯಾರಿಸುವ ಘಟಕವೊಂದು ಇಲ್ಲಿತ್ತು. ಬಹುಶಃ ಹೈದರ್ ಟಿಪ್ಪುಗಳ ಆಕ್ರಮಣ ತಡೆಯಲು ಚಿತ್ರದುರ್ಗದ ಅರಸರು ಇವನ ನೆರವಿನೊಂದಿಗೆ ಇಲ್ಲಿ ಮದ್ದು ತಯಾರಿಸುತ್ತಿದ್ದಿರಬೇಕು.




ದೇವಮ್ಮನ ಗುಡಿ, ಗಲಗಲ್ಲು

ಗಾಜನಾಯಕನ ಆಡಳಿತ ಪ್ರದೇಶದಲ್ಲಿ ಬೇಡರ ಸಂಖ್ಯೆ ವ್ಯಾಪಕವಾಗಿದ್ದಿತು. ತಿರುಪತಿಗೆ ಹೋಗುವುದು ಕಷ್ಟವೆಂದು ತಿರುಪತಿ ದೇವಾಲಯವನ್ನು ಸಾಂಕೇತಿಕವಾಗಿ ಇಲ್ಲಿ ಕಟ್ಟಿಸಲಾಗಿದೆ. ಸತ್ತ ಕೋತಿಗೂ ಕೂಡ ಶಾಸನ (೧೯೯೧) (ಮಂಗ) ಹಾಕಿರುವ 'ಕುತೂಹಲ ಘಟನೆ' ಇಲ್ಲಿ ಕಾಣಬಹುದಾಗಿದೆ. ಗಾಜನಾಯಕ ಟಿಪ್ಪುಸುಲ್ತಾನ್‌ನೊಂದಿಗೆ ಹೋರಾಡಿ ಮಡಿದನೆಂದು ಹೇಳುವುದುಂಟು (ದಡ್ಡಿ ಸೂರನಾಯಕನೊಂದಿಗೆ?) ಇಲ್ಲಿರುವ ಅಡಗುಪ್ಪ, ಊರುಕೊಂಡ (ಊರಿನ ಗುಡ್ಡ) ಹತ್ತಿರ ಮದ್ದುಗುಂಡು ತಯಾರಿಸುವ ಘಟಕ, ಯುದ್ಧದ ಆಯುಧಗಳು, ಇತರ ಸಲಕರಣೆಗಳನ್ನು ಕಂದಕದಲ್ಲಿಟ್ಟಿರುವುದನ್ನು ನೋಡಬಹುದಾಗಿದೆ. ಹೀಗೆ ವಿರೋಧಿಗಳೊಂದಿಗೆ ಕಾಳಗದಲ್ಲಿ ಹೋರಾಡಿ ಮಡಿದ ಬಗ್ಗೆ ಮೂರು ನಾಲ್ಕು ವೀರಗಲ್ಲುಗಳು ಸಾಬೀತು ಪಡಿಸುತ್ತವೆ. ನಾಯಕ ಜನಾಂಗದ 'ಹಚ್ಚೆವಳ್ಳೆರು' ಬೆಡಗಿನವರು ಈ ದೇವರನ್ನು ಆರಾಧಿಸುತ್ತಾರೆ.

**೪.೬.೩ ಆಧುನಿಕ ಆರಾಧನಾ ಕ್ಷೇತ್ರಗಳು**

ಕಪ್ಪಡ ಬಂಡಹಟ್ಟಿ: ಮೊಳಕಾಲ್ಮೂರು ತಾಲೂಕಿನಲ್ಲಿರುವ ಸಾಮಾನ್ಯ ಸಮಾಧಿಕ್ಷೇತ್ರ, ನೇರ್ಲಹಳ್ಳಿ ಕೋನಸಾಗರದ ಮಧ್ಯೆ ಇರುವ ಕಪ್ಪಡಬಂಡಹಟ್ಟಿಯಲ್ಲಿ ಇಪ್ಪತ್ತನೇಯ ಶತಮಾನದ ಯರಮಂಚಯ್ಯನ ಮಗ 'ಪೆದ್ದಯ್ಯ'ನೆಂಬ ವೀರನ ವೀರಗಲ್ಲಿದೆ. ಇದರ ವಿವರವೆಂದರೆ: ಚಿರತೆಯೊಡನೆ ಹೋರಾಡಿ ಸಮಾಧಿಯಾದ ಪೆದ್ದಯ್ಯನ ಸ್ಮಾರಕ ಇಂದು ಆರಾಧನಾ ದೇವತೆಯಾಗಿದೆ. ಪೂರ್ವಜರ ಪ್ರತೀಕವೆಂಬಂತೆ 'ಕರಿನಾರು' ಬೆಡಗಿನವರು ಇದಕ್ಕೆ ಹಬ್ಬ, ಆಚರಣೆಗಳನ್ನು ಮಾಡುತ್ತಿರುವರು. ನಾಲ್ಕು ಬಂಡೆಗಳ ನಡುವೆ ವೀರಗಲ್ಲಿದ್ದು, ಕಾಯಿ, ಹಣ್ಣು, ಎಡೆಯನ್ನು ನೈವೇದ್ಯೆ ಮಾಡಲಾಗುತ್ತದೆ. ಮ್ಯಾಸನಾಯಕರ ಮಂದಲಗೋತ್ರದ 'ಕರಿನಾರು' ಬೆಡಗಿನವರು ಪೂಜಿಸುತ್ತಿರುವ ಈ ವೀರಗಲ್ಲಿನ ಕಥೆಯನ್ನು ಕುರಿಮಂದೆಗೆ ಧಾಳಿ ಮಾಡಿದ ಚಿರತೆಯನ್ನು ಕೊಂದದ್ದು, ಕೋನಸಾಗರ ಗುಡ್ಡದಲ್ಲಿ ಈ ಘಟನೆ ಜರುಗಿದೆ. ಈ ಪ್ರದೇಶ ಅಷ್ಟೇ ಮಹತ್ವವಾಗಿದ್ದು, ಇಲ್ಲಿರುವ ಬೆಟ್ಟಕ್ಕೂ ಪೂಜಿಸುವುದುಂಟು. ಇಲ್ಲಿಗೆ ಸಮೀಪದ ತಿಪ್ಪೇರುದ್ರಸ್ವಾಮಿ ಬಿಳಿನೀರು ಚಿಲುಮೆ ಇದೆ.



ಕೈಲಾಸಕೊಂಡ ಪರ್ವತ ಪ್ರದೇಶ, ಮೊಳಕಾಲ್ಮುರು

ಹೀಗೆ ನಲುಜೆರುವಯ್ಯನೆಂಬ ವೀರನ ರುದ್ರಮ್ಮಹಳ್ಳಿ; ಗೋನೂರು, ನನ್ನಿವಾಳ ಮೊದಲಾದ ಸ್ಥಳಗಳಲಿ ಇತರೆ ವೀರರ ಆರಾಧನಾಕ್ಷೇತ್ರಗಳಿವೆ. ವೀರರ ಹೆಸರಿನಲ್ಲಿರುವ ಕೆಲವು ದೇವಾಲಯಗಳು ಇಂತಿವೆ: ಪಚ್ಚೆಪದಿ ದೊಡ್ಡ ತಿರುಮಲ ದೇವರು – ಬೇಡರೆಡ್ಡಿಹಳ್ಳಿ (ಚಳ್ಳಕೆರೆ ತಾ) ದಡ್ಲುಮಾರಮ್ಮ – ದೇವರಹಳ್ಳಿ (ನಾಯಕನಹಟ್ಟಿ – ಚಳ್ಳಕೆರೆ ತಾ), ಸ್ಥಳೀಯ ದೇವತೆ ಒಡ್ನಳ್ಳಿ ಮಾರಮ್ಮ – ನಾಯಕನಹಟ್ಟಿ, ಚೆಂತಗುಟ್ಲು ಬೋರೇ ದೇವರು – ಕುದಾಪುರ, (ಚಳ್ಳಕೆರೆ ತಾ) ಮಂದಬೊಮ್ಮದೇವರು – ದೊಣಮಂಡಲಹಟ್ಟಿ (ಚಳ್ಳಕೆರೆ ತಾ) ಮಂಗಪೋಟಿ ಓಬಳ ದೇವರು ಮತ್ತು ನಲ್ಲ ಚೆರುವು ಓಬಳದೇವರು – ರುದ್ರಮ್ಮನಹಳ್ಳಿ (ಚಳ್ಳಕೆರೆ ತಾ) ಮಲ್ಲಿನಾಯಕ ಬೊಮ್ಮದೇವರು – ವರವು (ಚಳ್ಳಕೆರೆ ತಾ) ಬಂಗಾರು ದೇವರು ನನ್ನಿವಾಳ ಚಳ್ಳಕೆರೆ ಬೋಸೆದೇವರು – ಬೋಸೆದೇವರಹಟ್ಟಿ (ಚಳ್ಳಕೆರೆ ತಾ) ಮಾಕನಡಕು ಓಬಳದೇವರು – (ಕೂಡ್ಲಿಗಿ – ತಾ), ನಲಗೇತಲಹಟ್ಟಿ, ಚನ್ನಕೇಶವ ಮತ್ತು ಚಿತ್ರದೇವರುಗಳನ್ನು ಈ ಹಿನ್ನೆಲೆಯಲ್ಲಿ ಗಮನಿಸಬಹುದಾಗಿದೆ. ಚಳ್ಳಕೆರೆ ಕಾಟಪ್ಪನಹಟ್ಟಿಯ ಕಾಟಮುಲಿಂಗೇಶ್ವರ, ವೇದಾವತಿ ನದಿ ದಂಡೆಯ ಮೇಲಿರುವ ಜುಂಜುರುಗುಂಟೆ, ಬುಕ್ಕಾಂಬುಧಿ, ಸೆಟ್ಟೂರು, ಸಿರವಾಳ, ಪಾವಗಡ, ನೀಡಗಲ್ಲು ಮೊದಲಾದ ಸ್ಥಳಗಳಲ್ಲಿ ವೀರರ ಆರಾಧನೆ ಕಂಡುಬರುತ್ತದೆ.

ಒಟ್ಟಾರೆ ಹೇಳುವುದಾದರೆ, ಪ್ರಾಚೀನ ಪರಂಪರೆ ಪಡೆದ ಬೇಡ ಜನಾಂಗ ತನ್ನನ್ನು ಅರ್ಪಿಸಿಕೊಂಡಿರುವ ಹಲವು ಕ್ಷೇತ್ರಗಳಲ್ಲಿ 'ಧಾರ್ಮಿಕಕ್ಷೇತ್ರ' ಮಹತ್ವದ್ದು. ತಮ್ಮ ಸಂಸ್ಕೃತಿಯ ನಿರ್ಮಾಣಕ್ಕಾಗಿ ತಮ್ಮ ಪ್ರಾಣವನ್ನೇ ಮುಡುಪಾಗಿಡುವುದು ಗಮನಾರ್ಹ. ಸ್ಥಳೀಯ ಮತ್ತು ಪ್ರಾದೇಶಿಕ ನೆಲೆಗಳಲ್ಲಿ ಇಂಥ ಕ್ಷೇತ್ರಗಳು ಜನಮನ್ನಣೆ ಪಡೆದರೂ, ಚಾರಿತ್ರಿಕ ಮಹತ್ವ ಕಳೆದುಕೊಂಡಿವೆ. ಕೇವಲ ಜನಪದ ಕಥೆಗಳಲ್ಲಿಯೇ ರಂಜನೀಯಗೊಳ್ಳುತ್ತಿರುವುದು ವಿಪರ್ಯಾಸ. ಈ ಹಿನ್ನೆಲೆಯಲ್ಲಿ ಬೇಡನಾಯಕ ವೀರರು ಕನ್ನಡನಾಡು, ನುಡಿ, ಸಂಸ್ಕೃತಿಗೆ ತಮ್ಮ ಅನುಪಮ ಸೇವೆ, ಕಾಣಿಕೆ ಮೂಲಕ ಬಲಿದಾನವಾಗಿರುವುದು ಚಿರಸ್ಮರಣೆ ಸಂಗತಿ ಎನ್ನಬೇಕು. ಇಂಥ ವೀರರ ನೆಲೆಗಳು ಕ್ಷೇತ್ರಗಳಾಗಿ, ಸಮಾಧಿಗಳು ದೇವಾಲಯಗಳಾಗಿವೆ. ವಿವಿದ ಬಗೆಯಲ್ಲಿ ಬೇಡರಿಗೆ ಪವಿತ್ರ ಕ್ಷೇತ್ರಗಳಾಗಿರುವುದು, ಚಾರಿತ್ರಿಕ ಮಹತ್ವ ದೊರೆತಿರುವುದು ಗಮನಾರ್ಹ.

* * *

# ೫. ಮ್ಯಾಸನಾಯಕ ಪರಂಪರೆಯಲ್ಲಿ ಬುಡಕಟ್ಟು ವೀರರು (1)

ಮ್ಯಾಸಬೇಡ (ನಾಯಕ) ಎನ್ನುವ ಬುಡಕಟ್ಟು ಚಿತ್ರದುರ್ಗ ಜಿಲ್ಲೆಯ ಪ್ರಾಚೀನ ಪರಂಪರೆ ಪಡೆದ ಜನಸಮುದಾಯವಾಗಿದೆ. 'ಮ್ಯಾಸ' ಎಂದರೆ ಮೇಯಿಸುವವರು. ವ್ಯಾಸ ಮಹಾಕವಿಯಿಂದ ಮ್ಯಾಸ ಪದ ನಿಷ್ಪತ್ತಿಯಾಗಿದೆ ಎನ್ನಲಾಗಿತ್ತು. ಇದಕ್ಕೆ ಮೇಷ ಎಂದರೆ ಕುರಿ. ಬೇಡರು ವೇಷಗಾರರಾಗಿದ್ದು, ಕ್ರಮೇಣ ಮ್ಯಾಸರೆಂದು ಆಗಿದ್ದಾರೆ ಎಂಬು ಅಭಿಪ್ರಾಯಗಳಿವೆ. ವಾಸ್ತವವಾಗಿ 'ಮ್ಯಾಸಬ್ಯಾಡ್ಕಿ ನಾಯಕತನ' ಎಂಬುದು ಗೌರವಾನ್ವಿತ ಹುದ್ದೆ. ಯಜಮಾನಿಕೆ, ಜನಾಂಗದ ಮುಖಂಡ ಅಥವಾ ಗುರಿಕಾರನಿಗೆ ಈ ಪದವಿ ಲಭಿಸುತ್ತಿತ್ತು. ಮ್ಯಾಸ ಎಂದರೆ ಶ್ರೇಷ್ಠ, ಎಂಜಲಾಗದ ಪದಾರ್ಥವನ್ನು ದೇವರಿಗೆ ನೈವೇದ್ಯ ಮಾಡುವವರು, ಸೈನ್ಯಕ್ಕೆ ಕಾಯ್ದಿಟ್ಟವರು ಎಂದೆಲ್ಲ ಕರೆಯಲಾಗಿದೆ. ಈ ಬಗ್ಗೆ ಸಾಕಷ್ಟು ಚರ್ಚೆಗಳು ನಡೆದಿವೆ. ಕಾಡಿನಲ್ಲಿ ವಾಸಿಸುತ್ತಾ, ತೆಲುಗು ಭಾಷೆ ಮಾತನಾಡುವುದು, ಚಲ್ಲಾಣ, ರುಮಾಲು ತೊಟ್ಟು ಕಂಬಳಿ ಹೊದ್ದು, ಕೈಯಲ್ಲಿ ಕೋಲು ಹಿಡಿದರೆ ಮ್ಯಾಸನಾಯಕನೆಂದು ನಿಖರವಾಗಿ ಹೇಳಬಹುದು. ಇನ್ನು ಸುಲಭವೆಂದರೆ ದೃಢಕಾಯ ದೇಹ, ಎತ್ತರವು ನೀಳವಾದ ಮೈಕಟ್ಟು, ವಕ್ರ ವಕ್ರ ವರ್ತನೆ (ಹಿಂದೆ), ಉದ್ದನೆ ಕೂದಲು, ಕೈಗೆ ಬಳೆ ಹೀಗೆ ನಾನಾ ಲಕ್ಷಣಗಳನ್ನು ಇವರು ಹೊಂದಿದ್ದರು. ಹೀಗೆ ಕಂಡವರನ್ನು ಮ್ಯಾಸಬೇಡರೆಂದು ಕರೆಯುವರು. ಅವರು ಹೆಮ್ಮೆ ಪಡುತ್ತಿದ್ದರು. ಇಂದು ಉದಾಸೀನ ಪಡೆದಂತೆ ಕಾಣಿಸುತ್ತದೆ. ಏಕವಚನದಲ್ಲಿ ವಾಚಿಸುವಂತಿಲ್ಲ. ಒಟ್ಟಾರೆ ಮ್ಯಾಸರು ಎಂಬುದು ಪಶುಪಾಲನೆಯಿಂದ ಬಂದ ಪದವಾದರೂ ರಾಜಕೀಯ ಮಹತ್ವ ಸಿಕ್ಕಿದ್ದು ವಿಜಯನಗರ ಕಾಲದಲ್ಲಿ. ಇಲ್ಲಿ ವಾಲ್ಮೀಕಿ, ಬೇಡ, ನಾಯಕ ಎಂಬ ಪರ್ಯಾಯ ಹೆಸರುಗಳಿಂದ ಕರೆಯುವ ಇವರಿಗೆ ಭವ್ಯ ಇತಿಹಾಸ ಇರುವುದನ್ನು ಗಮನಿಸಬಹುದು.

ತಮ್ಮ ಸಾಂಸ್ಕೃತಿಕ ಪರಂಪರೆಯಲ್ಲಿ ವಾಲ್ಮೀಕಿ, ಶಬರಿ, ಏಕಲವ್ಯ, ಬೇಡರಕಣ್ಣಪ್ಪ, ಕುಮಾರರಾಮ, ಮದಕರಿನಾಯಕ ಮತ್ತು ಎಚ್ಚಮನಾಯಕ ಮೊದಲಾದ ಚಾರಿತ್ರಿಕ ಪೌರಾಣಿಕ ವ್ಯಕ್ತಿಗಳನ್ನು ಹೆಮ್ಮೆಯಿಂದ ಆರಾಧಿಸುವರು. ಇವರಲ್ಲಿ ಕುಮಾರರಾಮನಷ್ಟು ದೈವತ್ವಕ್ಕೇರಿದ ವ್ಯಕ್ತಿ ಇನ್ನೊಬ್ಬನಿಲ್ಲ. ಮಧ್ಯಕಾಲೀನ ಸಂದರ್ಭದಲ್ಲಿ ಈ ಬುಡಕಟ್ಟು ವೀರರ ಪೈಕಿ ಹಲವರನ್ನು ಹೆಸರಿಸಬಹುದು. ಅವರುಗಳೆಂದರೆ ಶುಕ್ಲಮಲ್ಲಿನಾಯಕ, ಗಾದರಿಪಾಲನಾಯಕ, ಜಗಳೂರು ಪಾಪನಾಯಕ, ಕೊಡಗಲು ಬೊಮ್ಮಯ್ಯ, ಯರಮಂಚಿನಾಯಕ, ಯರಗಾಟನಾಯಕ, ಗಾಜನಾಯಕ, ದಡ್ಡಿಸೂರನಾಯಕ ಮತ್ತು ನಲುಜೆರುವಯ್ಯನನ್ನು ಹೆಸರಿಸಬಹುದು. ಇಂಥ ವೀರರನ್ನು ಚಿತ್ರದುರ್ಗ ಹಾಗೂ ಸುತ್ತಮುತ್ತಲ ಜಿಲ್ಲೆಗಳ ಬೇಡರು ಆರಾಧಿಸುವುದು ಕಂಡುಬರುತ್ತದೆ.

ವನವಾಸ ಮಾಡಿದ ಪೌರಾಣಿಕ ವ್ಯಕ್ತಿಗಳು: ಸೀತೆ, ಶ್ರೀರಾಮ, ಲಕ್ಷ್ಮಣ; ಪಾಂಡವರು ಮತ್ತು ಹರಿಶ್ಚಂದ್ರ ಚಂದ್ರಮತಿಯರಾದರೆ ಕಾಡು ಬೇಡರಿಗೆ ಮಾತ್ರ ಅನೂಚಾನವಾಗಿ ಆ ವಾಸಸ್ಥಾನವಾಗಿತ್ತು. ಅರಣ್ಯದ ಬಗೆಗಿನ ಬೇಡರ ನಂಬಿಕೆ, ನಡವಳಿಕೆ, ಭಾಷೆ, ಜೀವನಕ್ರಮ, ದೇವರ ಕಲ್ಪನೆ, ಆಚರಣೆಗಳು, ವಿಧಿಕ್ರಿಯೆಗಳು, ಅಲೆದಾಟ, ಬೇಟೆ, ಪಶುಪಾಲನೆ ಇವು ಇವರ ಸಂಸ್ಕೃತಿಯ ಪ್ರಮುಖ ಸಂಗತಿಗಳಾಗಿವೆ. ಇವರು ಕುಲದೇವರೆಂದು ಸೂರ್ಯ ಮತ್ತು ಚಂದ್ರನನ್ನು ಪೂಜಿಸುವರು. ಕುಲದೈವವೆಂದು ಭಾವಿಸಿರುವ ಪಕ್ಷಿ – ಪ್ರಾಣಿಗಳನ್ನು ಬೇಟೆಯಾಡುವುದಿಲ್ಲ. ಅವುಗಳನ್ನು ಬಲಿಕೊಡುವುದಿಲ್ಲ. ಇವುಗಳನ್ನು ಹೊರತು ಪಡಿಸಿದರೆ ಬೇಟೆ ಮತ್ತು ಬಲಿಗೆ ಬಳಸಲಾಗುತ್ತದೆ.

ಇಂದು ಗುಗ್ಗರಿಹಬ್ಬ, ಎತ್ತಿನಹಬ್ಬ, ದೀಪಾವಳಿ, ಶಿವರಾತ್ರಿ ಹಬ್ಬಗಳಲ್ಲಿ ವೈಶಿಷ್ಟ್ಯಪೂರ್ಣ ಜೀವನ ನಡೆಸುವ ಈ ಬೇಡರು ಈಚಲುಮರದ ಸಾಮಗ್ರಿಗಳು ಮತ್ತು ಉತ್ಪನ್ನಗಳನ್ನು ಉಪಯೋಗಿಸುವುದಿಲ್ಲ. ಹಾಗೂ ಈ ಮರದ ಕೆಳಗೆ ಕುಳಿತುಕೊಳ್ಳುವುದಿಲ್ಲ. ಕೋಳಿಯನ್ನು ಸಾಕುವುದು ಮತ್ತು ತಿನ್ನುವುದು ನಿಷೇಧ. ಊರುನಾಯಕರೊಡನೆ ಮದುವೆ ಮಾಡಿಕೊಂಡರೆ ತಮ್ಮ ಜಾತಿಯಿಂದ ಆತನನ್ನು ಬಹಿಷ್ಕರಿಸುತ್ತಿದ್ದರು. ಹೀಗೆ ಕಟ್ಟುನಿಟ್ಟಿನ ಸಂಪ್ರದಾಯಗಳು ಇಂದು ಸಡಿಲಗೊಂಡಿವೆ. ತಿರುಪತಿ ತಿಮ್ಮಪ್ಪ ಮತ್ತುಅಹೋಬಲ ನರಸಿಂಹದೇವರ ಭಕ್ತರ ವೈಷ್ಣವಪಂಥ ಹಾಗೂ ಶ್ರೀಶೈಲ ಮಲ್ಲಿಕಾರ್ಜುನನ ಅನುಯಾಯಿಗಳು ಶೈಪಂಥಗಳು ಇವರಲ್ಲಿವೆ. ಮಕ್ಕಳಿಗೆ ಶೈವ – ವೈಷ್ಣವ ಹೆಸರುಗಳಿಡುತ್ತಾರೆ. ವೀರನಾದವನು ಸಾಹಸ ತೋರಿ ಮಡಿದಾಗ ಸತಿಸಹಗಮನ ಆಚರಿಸುವುದು ಇವರಲ್ಲೂ

ಸಾಮಾನ್ಯವಾಗಿತ್ತು. ಈ ಬಗ್ಗೆ ವೀರಗಲ್ಲು, ಮಾಸ್ತಿಕಲ್ಲುಗಳು ಬೆಳಕು ಚೆಲ್ಲುತ್ತವೆ. ಅವನನ್ನು ತಮ್ಮ ವಂಶದ ಪೂರ್ವಿಕ ತಾತ, ತಂದೆಯೆಂತಲೂ 'ಹಿರಿಯರಗುಡಿ' ಎಂದು ಕರೆದು ಪೂಜಿಸುವರು. ಉದಾ: ಮೊಳಕಾಲ್ಮೂರು ತಾಲೂಕಿನ ಕಪ್ಪಡಬಂಡ್ಡಹಟ್ಟಿ (ನೇತ್ರನಹಳ್ಳಿ) ಯ ಪೆದ್ದಯ್ಯನ ವೀರಗಲ್ಲು. ಆದರೆ ಮ್ಯಾಸಬೇಡರ ಮೂಲ, ಬುಡಕಟ್ಟು ವೀರರ ಕಾಲಮಾನ ಸ್ಪಷ್ಟವಾಗಿ ತಿಳಿದುಬಂದಿಲ್ಲವಾದರೂ ಲಭ್ಯವಿರುವ ಮೌಖಿಕ ಆಧಾರಗಳ ಪ್ರಕಾರ ಈ ಮುಂದಿನಂತೆ ಅವಲೋಕಿಸಬಹುದು.

ಬೇಟೆ, ಪಶುಪಾಲನೆಯನ್ನು ನಂಬಿ ಬದುಕುವ ಬೇಡರು ಆದಿಯಲ್ಲಿ ಉತ್ತರಭಾರತದಿಂದ (ಕಿರಾತ ದೇಶ) ಬಂದವರೆಂದು ಹೇಳುತ್ತಾರೆ. ಹಿಮಾಲಯ ಪರ್ವತ, ಗಂಗಾನದಿ ಬಯಲಿನಲ್ಲಿ ಇವರು ಹೆಚ್ಚಾಗಿ ವಾಸಿಸುತ್ತಿದ್ದರು. ರಾಮಾಯಣದ ಸಂದರ್ಭದ ಐತಿಹಾಸಿಕ ಸ್ಥಳಗಳಲ್ಲಿ ಬೇಡರ ವಾಸವನ್ನು ತಳ್ಳಿಹಾಕುವಂತಿಲ್ಲ. ವಿಂಧ್ಯಾಪರ್ವತ, ನರ್ಮದಾ, ತಪತಿ, ಗೋದಾವರಿ, ಕೃಷ್ಣ ಇತರ ನದಿ ಪರಿಸರ, ಗಿರಿಕಂದರಗಳಲ್ಲಿ ವಾಸಿಸುತ್ತಿದ್ದರು. ಬಹುಶಃ ಇದಕ್ಕಾಗಿಯೇ ಬೇಡರು ಯಾರಿಗೆ ಹೆದರದವರೆಂದು ಏಕಾಂಗಿ ಜೀವನಕ್ಕೆ ಹೆಸರಾದವರೆಂದು ಕರೆಯಲಾಗಿದೆ. ಉದಾ: ಕಾಮಕೇತನ ವಂಶಸ್ಥರು ಮತ್ತು ಏಕಲವ್ಯನ ವಂಶಸ್ಥರು ಒಂದೇ. ಚಿತ್ರದುರ್ಗ ನಾಯಕರು ಈ ವಂಶಕ್ಕೆ ಸೇರಿದವರು. ದೆಹಲಿಯಿಂದ ಬಂದವರೆಂದು ಇವರ ಮೂಲವನ್ನು ಹೇಳಲಾಗುತ್ತದೆ.

ಪ್ರಾಚೀನ ಕಾಲದ ಬೇಡರ ಸ್ವರೂಪವೇ ಬೇರೆ ಬಗೆಯದು. ದೃಢಕಾಯ – ದೀರ್ಘ ದೇಹ, ಕೃಷ್ಣವರ್ಣವಿದ್ದು, ಬರಿಗಾಲಲ್ಲಿ, ಸಂಚರಿಸುತ್ತಿದ್ದರು. ಮೃಗಪಕ್ಷಿಗಳನ್ನು ಬೇಟೆಯಾಡಿ ಭಕ್ಷಿಸುತ್ತಿದ್ದರು. ಉಡಿಗೆ – ತೊಡಿಗೆಗಳಾಗಿ ಪ್ರಾಣಿಗಳ ಚರ್ಮ ಪಕ್ಷಿಗಳ ತುಪ್ಪಳ – ಗರಿ, ಮರದ ತೊಗಟೆ, ತಪ್ಪಲು, ಎಲೆ ಬಳಸುತ್ತಿದ್ದರು. ಇಂದಿಗೂ ಈ ಪದ್ಧತಿಯನ್ನು ಮೊಳಕಾಲ್ಮೂರು ತಾಲೂಕಿನ ಕಂಪಳದೇವರಹಟ್ಟಿ ಜಾತ್ರೆಯಲ್ಲಿ ನೋಡಬಹುದು. ಬೇಡರು ಬೇಟೆಗಾರರಾಗಿ, ಪಶುಪಾಲಕರಾಗಿ, ಪಾಳೆಯಗಾರರಾಗಿ ಆಳ್ವಿಕೆ ನಡೆಸಿದ್ದಾರೆ. ಇವರ ವೃತ್ತಿ, ವರ್ಣ, ಜಾತಿ, ವರ್ಗಗಳ ದೃಷ್ಟಿಯಿಂದ ಸಂಚಿಮ್ಯಾಸ, ವ್ಯಾಧ, ಪುಳಿಂದ, ಬಿಲ್ಲ ಏಕಲವ್ಯ (ಬೆಸ್ತ, ಅಂಬಿಗ, ಭಲ್ಲೂಕ) ಶಬರ, ನಿಷಾಧರುಗಳೆಂದು ವಿಂಗಡಿಸಲಾಗಿದೆ. ಇಂದು ಕರ್ನಾಟಕದಲ್ಲಿ ೧೭ ಪರ್ಯಾರ್ಯ ಜಾತಿಗಳು ನಾಯಕ ಅಥವಾ ಬೇಡ ಜನಾಂಗದಲ್ಲಿವೆ.

ಸೂರ್ಯ, ಚಂದ್ರ ಮತ್ತು ಭೂಮಿಯನ್ನು ದೇವರುಗಳೆಂದು ಪೂಜಿಸುವ ಬೇಡರಿಗೆ ಕಾಡು ಆರಾಧನೆಯ ನೆಲೆಯಲ್ಲಿದೆ, ವಾಸದ ಬೀಡಾಗಿತ್ತು. ಆರಾಧನೆಯಲ್ಲಿ ಸೂರ್ಯನಿಗೆ ಕೈಮುಗಿಯುವುದು ಬಹುಪ್ರಾಮುಖ್ಯವಾದುದು. ರಾಜನನ್ನು ಪ್ರತ್ಯೇಕ ದೈವವೆಂದು ಗೌರವಿಸುವುದು ಆತನು ರಾಜ್ಯಭಾರ ನಡೆಸುವ ದಿನಗಳಲ್ಲಿ ಮಾತ್ರ. ರಾಜ ಎಷ್ಟೇ ವೀರನೆನಿಸಿದರೂ ಮಡಿದನಂತರ ಅವನನ್ನು ಮರೆಯುತ್ತಾರೆಯೇ ಹೊರತು ದೇವರಿಗೆ ಸಮಾನವಾಗಿ ಕಾಣುವುದಿಲ್ಲ, ಆರಾಧಿಸುವುದಿಲ್ಲ. ಹಾಗೆ ಕಾಣದೆ ಇರುವ ಸಂಬರ್ಭಗಳಿವೆ. ಆದರೆ ಒಬ್ಬ ಬುಡಕಟ್ಟು ವೀರ ಮರಣಿಸಿದ ನಂತರ ಆ ಜನಾಂಗದವರಿಗೆ ಆರಾಧ್ಯದೈವವಾಗುತ್ತಾನೆ. ಉದಾ: ಪಶುಪಾಲಕನಾದ ಗಾದರಿಪಾಲನಾಯಕನಿಗೆ ಆಧ್ಯಾತ್ಮ ಪುರುಷ ಸ್ಥಾನ ಕಲ್ಪಿಸಿ, ದೇವರಾಗಿ ಪರಿಗಣಿಸಿದ್ದಾರೆ. ಅದರಂತೆ ದತ್ತಿದಾನ ನೀಡಿದ ಕಸ್ತೂರಿರಂಗಪ್ಪನಾಯಕ, 'ಗಾದ್ರಿಮಲೆಹೆಬ್ಬುಲಿ' ಎಂದು ಬಿರುದಾಂಕಿತನಾದ ಮದಕರಿನಾಯಕ ನಿಗೆ ರಾಜನ ಮನ್ನಣೆ ಹೊರತು ಜನರಿಂದ ಭಕ್ತಿ ಮನ್ನಣೆ ಸಿಗಲಿಲ್ಲ. ಜನಮನ್ನಣೆಗಳು ಸಿಕ್ಕರೂ ಅವನಿಗೆ ಸಮೂಹದ ಹೃದಯಗಳಲ್ಲಿ ದೈವತ್ವದ ಮನ್ನಣೆ ಲಭಿಸಲಿಲ್ಲ. ರಾಜರ ಪ್ರಾಬಲ್ಯವನ್ನು ವೀರತ್ವದಿಂದ ಅಳೆಯುತ್ತಾರೆ. ಆದರೆ ಬುಡಕಟ್ಟು ವೀರನನ್ನು ಆಧ್ಯಾತ್ಮ ಪುರುಷನೆಂದೂ ಅನುಭಾವಿಯೆಂದೂ ಕರೆಯುತ್ತಾರೆ.

**೪.೧ ಪುರಾಣಗಳಲ್ಲಿ ವೀರ ಬೇಡರ ಪರಂಪರೆಯ ವಿಕಾಸ**

'ನಳ' ಕೃತಯುಗದಲ್ಲಿ ಬರುವ ಪ್ರಸಿದ್ಧ ಪೌರಾಣಿಕ ಚಕ್ರವರ್ತಿ. ಇವನು ನಿಷದ ದೇಶದ ರಾಜನಾಗಿರುವಾಗ, ಬೇಡರಲ್ಲಿ ಎರಡು ಪಂಗಡಗಳಿದ್ದವಂತೆ. ಒಂದು ಪಂಗಡ ಬೇಟೆಯಲ್ಲಿ ನಿರತವಾಗಿದ್ದರೆ, ಮತ್ತೊಂದು ರಾಜ್ಯಾಳ್ವಿಕೆಯಲ್ಲಿತ್ತು ಎನ್ನಲಾಗಿದೆ. ನಿಷದದ ರಾಜನಾದ ನಳನು ಬೇಡರ ಪಡೆಯೊಂದಿಗೆ ಬೇಟೆಗೆ ಹೊರಡುತ್ತಾನೆ. ತನ್ನ ಸತಿ ದಮಯಂತಿಯೊಂದಿಗೆ ಕಾಡಿಗೆ ಬಂದಾಗ ಪತ್ನಿಯನ್ನು ತೊರೆದು ಅಗಲುತ್ತಾನೆ. ಅನಾಥೆಯಾಗಿ ದಮಯಂತಿ ಕಾಡಿನಲ್ಲಿ ಸಂಚರಿಸುವಾಗಿ ಸರ್ಪವೊಂದು ಅವಳ ಕಾಲಿಗೆ ಬಂದುಸುತ್ತಿಕೊಂಡಾಗ ಕಿರಿಚುವುದು,

ಅದನ್ನು ಕೇಳಿಸಿಕೊಂಡ ಬೇಟೆಗಾರ – ಬೇಡನೊಬ್ಬನು ಬಂದು ರಕ್ಷಿಸುವುದು ಇಂಥ ಅಂಶಗಳು ಅಂದಿನಿಂದಲೂ ಬೇಡರ ವೀರತ್ವದ ಸಂಕೇತಗಳಾಗುತ್ತವೆ.

ಇತರೆ ಎಲ್ಲಾ ಋಷಿ – ಮುನಿಗಳು ತಪಸ್ಸಿಗೆಂದು ನಾಡಿನಿಂದ ಕಾಡಿಗೆ ತೆರಳಿದರು. ಆದರೆ ವಾಲ್ಮೀಕಿ ಮೂಲತಃ ಕಾಡಿನಲ್ಲೇ ನೆಲೆಸಿ ಬೇಟೆಯಾಡುತ್ತಿದ್ದವನು. ತಪೋನಿರತನಾಗಿ ಜ್ಞಾನ ಸಂಪಾದಿಸಿ ನಾಡಿಗೆ ಪುರಾಣಗ್ರಂಥ ರಾಮಾಯಣ ಮಹಾಕಾವ್ಯವನ್ನು ಧಾರ್ಮಿಕ ಕೊಡುಗೆಯಾಗಿ ನೀಡಿದ್ದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ರಾಮಾಯಣದ ಶ್ರೀರಾಮಚಂದ್ರನನ್ನು ದೋಣಿಯಲ್ಲಿ ಗಂಗಾನದಿಯನ್ನು ದಾಟಿಸಿದ 'ಗುಹಾ'ನೆಂಬ ಒಬ್ಬ ಬೇಡರ ಮುಖಂಡ, ರಾಮನ ಆಪ್ತನಾಗಿದ್ದ. ಈತನಲ್ಲಿ ಬುಡಕಟ್ಟು ವೀರನ ಎಲ್ಲಾ ಲಕ್ಷಣಗಳನ್ನು ಕಾಣಬಹುದಾಗಿದೆ. ರಾಮಾಯಣ ಬರೆದ ವಾಲ್ಮೀಕಿ ಬೇಡರ ಕುಲದವನು. ಇವನ ಬದುಕಲ್ಲಿ ವೃತ್ತಿ – ಪ್ರವೃತ್ತಿ, ಅಜ್ಞಾನ – ಅರಿವು, ಕುರುಹುಗಳನ್ನು ದಾಟಿದ ಕ್ರಿಯಾತ್ಮಕತೆಯನ್ನು ಕಾಣುತ್ತೇವೆ. ಮೊದಲ ಹಂತದಲ್ಲಿ ಕಳ್ಳತನ, ದರೋಡೆ, ಸುಲಿಗೆ ಕಂಡುಬರುವುದು. ಎರಡನೇ ಹಂತದಲ್ಲಿ ಇವುಗಳ ಬಗ್ಗೆ ಅರಿವು ಮೇಳೈಸುತ್ತದೆ. ಮೂರನೇ ಹಂತದಲ್ಲಿ ಕ್ರೌಂಚಪಕ್ಷಿಯನ್ನು ಕೊಲ್ಲುವ ಬೇಡನ ಕೃತ್ಯದಿಂದ ಹಿಂಸೆಯ ಪರಿಕಲ್ಪನೆ ಹೊಂದು ಋಷಿಯಾಗುವ ಸನ್ನಿವೇಶ ಅಮೋಘವಾದದು. ಬೇಟೆಗಾರಿಕೆಯ ವೃತ್ತಿಯಲ್ಲಿ ತನ್ನಿಂದ ಘಟಿಸಿದ ಹಿಂಸೆಗೆ ಮುನಿದ ವಾಲ್ಮೀಕಿ ಮಹರ್ಷಿಯಾದ. ಮತ್ತೆ ಕಾಡಿನ ತನ್ನ ಆಶ್ರಮದಲ್ಲಿ ಪ್ರಾಣಿಪಕ್ಷಿಗಳ ಸಂರಕ್ಷಣೆಯನ್ನು ಮಾಡಿದ ಇದು ಬೇಡರ ಬದುಕಿನಲ್ಲಿ ವೃತ್ತಿ ಪ್ರವೃತ್ತಿಗಳಾಗಿ ಬೇಟೆಗಾರಿಕೆ – ಪಶುಪಾಲನೆಗಳು ರೂಪುಗೊಂಡಿದ್ದಕ್ಕೆ ನಿದರ್ಶನ. ಇವನು ಚಿತ್ರಿಸಿದ ಪಾತ್ರಗಳಲ್ಲಿ 'ಶಬರಿ' ಪ್ರಮುಖಳು. ಶ್ರೀರಾಮನ ಪರಮಭಕ್ತೆ. ತನ್ನ ಸಂಪೂರ್ಣ ಬದುಕನ್ನು ಅವನ ದರ್ಶನಕ್ಕಾಗಿ ಮೀಸಲಾಗಿಟ್ಟಿದ್ದಳು. ಕೊನೆಗೆ ರಾಮಬಂದಾಗ ಅವನಿಗೆ ಹಾಲ – ಹಂಪಲು (ಬೋರೆಹಣ್ಣು) ಗಳನ್ನು ಕೊಡುವುದು ಬೇಡರ ಆಹಾರ ಪದ್ಧತಿಯ ಹೊಂದಾಣಿಕೆಯನ್ನು ಸೂಚಿಸುತ್ತದೆ.

ಮೂರುಲೋಕದ ಗಂಡನೆಂದೂ ಸವ್ಯಸಾಚಿಯೆಂದೂ ಖ್ಯಾತನಾದ ಮಹಾಭಾರತದ ಅರ್ಜುನನಿಗೆ ಬಿಲ್ವಿದ್ಯೆಯಲ್ಲಿ ಸರಿಸಮ ಯಾರೂ ಇರಲಿಲ್ಲ. ಆದರೆ ಇವನನ್ನು ಮೀರಿಸುವಷ್ಟು ಬಿಲ್ವಿದ್ಯೆಯ ಸಾಮರ್ಥ್ಯ ಬೇಡನಾದ ಏಕಲವ್ಯನಿಗಿತ್ತು. ಅವನು ಪರೋಕ್ಷವಾಗಿ ತನ್ನ ಗುರುಗಳಾದ ಬೇಡ ಜನಾಂಗದ ಪ್ರಥಮ ದ್ರೋಹಿ (ಶೂದ್ರರಿಗೆ) ದ್ರೋಣಾಚಾರ್ಯರಿಗೆ ತನ್ನ ವಿದ್ಯಾ ಸಾಧನೆಯ ನೆಲೆಗೆ ಆಧಾರವಾದ ಹೆಬ್ಬೆರಳನ್ನೇ ಕಾಣಿಕೆಯಾಗಿ ನೀಡುತ್ತಾನೆ.

**೪.೨. ಜಾನಪದ (ಮೌಖಿಕ) ಪರಂಪರೆಯ ಬೇಡರ ವೀರನಾಯಕರು**

ಪ್ರಾಚೀನ ಕಾಲದಿಂದಲೂ ಬೇಡರು ಬೇಟೆ, ಪಶುಪಾಲನೆ, ಮೀನುಗಾರಿಕೆ, ದೋಣಿ ಸಾಗಾಣಿಕೆ ಕೆಲಸಗಳನ್ನು ಮಾಡಿದ್ದಾರೆ. ಮಧ್ಯಕಾಲದಲ್ಲಿ ಬಿಲ್ಲುಗಾರರಾಗಿ, ಬೇಟೆಗಾರರಾಗಿ, ಸಿಪಾಯಿಗಳಾಗಿ, ರಾಜರಾಗಿ, ಪಾಳೆಯಗಾರರಾಗಿ, ಚಕ್ರವರ್ತಿಗಳಾಗಿ, ಮಹಾಪುರುಷರೆಂದು ವಿವಿಧ ವೃತ್ತಿ, ಕಸುಬು, ಅಧಿಕಾರಗಳನ್ನು ಅನುಭವಿಸುತ್ತಾ ಬಂದಿದ್ದಾರೆ.

ವಾಸ್ತವವಾಗಿರುವ ಬೇಡರ ಜನಜೀವನ ಬೇರೆ, ಬೇಡರ ಕಥೆಗಳ ಜಗತ್ತೇ ಬೇರೆ. ಇವೆರಡರಲ್ಲಿ ಬೇಡರ ಸ್ಪಷ್ಟ ಚಿತ್ರಣ ಕಾಣುವುದು ಕಷ್ಟ. ಬೇಡರು ತಿಳಿಸುವ ಪ್ರಕಾರ ಮೊದಲು ನರ್ಮದಾನದಿ, ವಿಂಧ್ಯಾಪರ್ವತಗಳ ತಪ್ಪಲು, ದಂಡಕಾರಣ್ಯದಲ್ಲಿ ಜೀವಿಸುತ್ತಿದ್ದರು. ಬೇಟೆ, ಪಶುಪಾಲನೆ ಮಾಡುತ್ತಾ ಅಲ್ಲಿಂದ ವಲಸೆ ಬಂದರು. ಅವರಲ್ಲಿ ಪ್ರಮುಖರೆಂದರೆ: ಬುಟ್ಟಿಗಲೋರು, ಕಾಮಗೇತಿ, ಗುಜ್ಜಾಲರು ಇತ್ಯಾದಿ. ಬುಟ್ಟುಗಲೋರು ಸಂತತಿಯಲ್ಲಿ ಗುಪ್ತಬೊಮ್ಮತ್ತಿರಾಜು, ಬಂಗಾರುಬೊಮ್ಮತ್ತಿರಾಜು, ಜಡಲ ಬೊಮ್ಮತಿರಾಜು, ಹೊಟ್ಟೆಬೊಮ್ಮತ್ತಿರಾಜು, ಎರಿಬೊಮ್ಮತ್ತಿರಾಜು, ಮರಿಬೊಮ್ಮತ್ತಿರಾಜು, ಕೊಡಗ ಬೊಮ್ಮತಿರಾಜು ಇತರ ಅಣ್ಣ – ತಮ್ಮಂದಿರ ವಿವರಗಳು ದೊರೆಯುತ್ತವೆ. ಇವರು ಮೂಲತಃ ಪಶುಪಾಲಕರು. ಇವರಲ್ಲಿ ವಿವರಗಳು ದೊರೆಯುತ್ತವೆ. ಇವರಲ್ಲಿ ಕೆಲವರು ತಾವು ಶ್ರೀಶೈಲ, ವೈಕುಂಠ ಮತ್ತು ಕಾಶಿಗಳಿಂದ ಬಂದವರೆಂದು ತಿಳಿಸುತ್ತಾರೆ. ಹೀಗೆ ಬೇಡರ ಅನೇಕ ಮುಖಂಡರು ಒಂದೆಡೆ ಸೇರಿ ನೆಲೆಸುವಾಗ ತಮ್ಮ ವಿಭಿನ್ನ ಸಂಸ್ಕೃತಿಗೆ ಅಡಿಪಾಯ ಹಾಕಿದರು. ಮ್ಯಾಸ ಬೇಡರ ಸಂಸ್ಕೃತಿ ನಿರ್ಮಾಣವಾದುದು ಈ ವೀರರ ಹಂತದಿಂದಲೇ ಎಂದು ಗುರುತಿಸಬಹುದು. ಮೂಗನಾಯಕ

ಮಹಾಶಕ್ತಿಶಾಲಿ, ಬೇಡರ ಮುಖಂಡ ಮತ್ತು ಸಾಂಸ್ಕೃತಿಕ ವೀರನಾಗಿ ಕಂಡುಬರುತ್ತಾನೆ. ಇವನು ಬೇಡರ ಸಂಸ್ಕೃತಿ ನಿರ್ಮಾಣಕ್ಕೆ ಶ್ರಮಿಸಿದ ವೀರರಲ್ಲೊಬ್ಬ. ಇಲ್ಲಿ ಬುಡಕಟ್ಟು ವೀರನನ್ನು ಸಾಂಸ್ಕೃತಿಕ ವೀರನೆಂದೇ ಪರಿಗಣಿಸಲಾಗುವುದು. ಎಲ್ಲಾ ಸಂಸ್ಕೃತಿಗಳಿಗಲ್ಲವಾದರೂ ವೀರನು ಈ ಸಮುದಾಯಕ್ಕೆ ದೇವರ ಪ್ರತೀಕವಾಗಿರುತ್ತಾನೆ.

**ಮಂದಭೂಪಾಲ**

ಮಂದಭೂಪಾಲ ಮ್ಯಾಸಬೇಡರ ಮೂಲಪುರುಷ. ಇವನಿಗೆ ಕಾಡುಬೇಡವರಪುತ್ರ ಎಂದು ಬೇಡರು ಕರೆದಿರುವರು. ಮಹಾವಿಷ್ಣುವಿನ ಆಶೀರ್ವಾದ ಪಶುಗಳ ಮಂದೆಗೆ ಇದ್ದಂತೆಯೇ ಚೆಲುವಿನ ಮುದ್ದಾದ ಗಂಡುಮಗು ಸೃಷ್ಟಿಯಾಯಿತಂತೆ. ಈ ಮಗುವಿನ ಜೊತೆಯಲ್ಲಿ ಪರಮಾತ್ಮನ ಪ್ರಸಾದದಿಂದ ಒಂದು ಹೆಣ್ಣು ಮತ್ತು ಗಂಡು ಕರುಗಳೆರಡು ಜನಿಸಿದವು. ಶ್ರೀ ಮಹಾವಿಷ್ಣುವೂ ಲಕ್ಷ್ಮೀದೇವಿಯೂ ಈ ಮಗುವನ್ನು ಕಂಡು ಸಂತೋಷಪಟ್ಟರಲ್ಲದೆ, ಮಂದಭೂಪಾಲ ಎಂದು ನಾಮಕರಣ ಮಾಡಿದರು. ಜನಪದರ ಪ್ರಕಾರ ಪಶುಗಳ ಮಂದೆಯಲ್ಲಿ ಜನಿಸಿದುದರಿಂದ ಮಂದಭೂಪಾಲನೆಂದು ಅನ್ವರ್ಥನಾಮವಾಯಿತು (ಮಂದೆ = ತುರುಗಳ ದೊಡ್ಡಿ). ಈ ವಂಶದವರಿಗೆ 'ಮಂದಲಗೋತ್ರ' ಎಂದು ಕರೆಯಲಾಯಿತು.

[1] ಕರುವಿಗೆ (ಗಂಡು) ಪಂಪಾದ್ರಿ ಬಸವನೆಂದು ಪರಶಿವನಿಂದ ನಾಮಕರಣವಾಯಿತು. ಹೆಣ್ಣು ಕರುವಿಗೆ ಒಂಟಿಕೋಡಿನ ಬೆಳ್ಳಿ ಹಸುವೆಂತಲೂ ಕರೆದರು. ಈ ಬಗೆಗಿನ ಕಥೆಗಳಲ್ಲಿ ನರಸಿಂಹನ ಅವತಾರ ಲಕ್ಷ್ಮೀ ಜನ್ಮತಾಳುವುದು ಬೇಡನಾಯಕರನ್ನು (ಮೂರು ಲೋಕವನ್ನು) ಆಳಲು ಸಮರ್ಥ ನಾಯಕನೊಬ್ಬನಿಗೆ ದೇವತೆಗಳು ಚರ್ಚಿಸುವುದು ಕಂಡುಬರುತ್ತದೆ. ಪ್ರಕೃತಿ ಸೌಂದರ್ಯದಲ್ಲಿ ಬೇಡವೀರರ ಕಥೆಗಳು ತುಂಬಾ ರೋಮಾಂಚನ ಮತ್ತು ಅಷ್ಟೇ ಅದ್ಭುತ.

ಕೃಷಿ ಆಧಾರಿತ ಪ್ರತಿಯೊಂದು ಜನಾಂಗವೂ ಅಂಗವೈಶಿಷ್ಟ್ಯತೆಯಿಂದ ಕೂಡಿದ ಹಸು – ಕರುಗಳನ್ನು ದೈವಾವತಾರವೆಂದು ನಂಬುತ್ತಾರೆ. ಇಂಥವುಗಳನ್ನು ತಮ್ಮ ಕುಲದೈವರ ಕಾಡುಗಳಲ್ಲಿ ಬಿಟ್ಟುಬರುತ್ತಾರೆ. ಅಥವಾ 'ಕೋಲೆ ಬಸವನಾಟ'ದವರಿಗೆ ದಾನ ಕೊಡುತ್ತಾರೆ.

ಮಂದೆಗೆ ಕಾಡುಬೇಡರ ಆಗಮನವಾಗಿ ರೊಪ್ಪ ಅಥವಾ ಮಂದೆಯಲ್ಲಿದ್ದ ಮಗುವನ್ನು ಕಂಡು ಪುಳಕಿತರಾಗುವರು. ಈ ಪಾಳಯದ ನಾಯಕ ಗುಪ್ತಬೊಮ್ಮತಿರಾಜು. ಇವನು ಮಂದೆಗೆ ಬಂದು ಮಗುವನ್ನು ಕೈಗೆತ್ತಿಕೊಂಡು ಅದರ ಜನನ, ಸುಂದರ ಮೈಕಟ್ಟಿನ ಬಗ್ಗೆ ಪರಿಪರಿಯಾಗಿ ಚಿಂತಿಸುತ್ತಿದ್ದ; ಶಂಕೆ ಪಡುತ್ತಿದ್ದ. ಸೂರ್ಯ, ಚಂದ್ರರನ್ನು ಬೇಡುತ್ತಾ ಈ ಅನಾಥ ಮಗು (ದೇವತೆಗಳ ಮಗುವೋ ಏನೋ?) ಎಲ್ಲಿಯದೋ ಏನೋ ನಾನು ಸಾಕಬೇಕೆಂದಿರುವೆನೆಂದು ಬೇಡಿಕೊಂಡ. ಆಕಾಶವಾಣಿಯೊಂದು ಕೇಳಿಬಂದಂತೆ ಶ್ರೀಮಾನ್ ಮಹಾನ್ ವಿಷ್ಣುವಿನ ನಾಮತೀರ್ಥ ಪ್ರಸಾದದಿಂದ ಈ ಮಗು ಜನಿಸಿದೆ. ಪರಮಾತ್ಮನು ಮುಗ್ಧ ಭಕ್ತಿಗೆ ಮೆಚ್ಚಿ ಕೊಟ್ಟಿರುವನು. ಮಗುವನ್ನು ರಕ್ಷಿಸುವಂತೆ ತಿಳಿಸಿತು. ಇವನು ತನ್ನ ಪಾಳೆಯದಲ್ಲಿ ಮಂದಭೂಪಾಲನೆಂದು ನಾಮಕರಣ ಮಾಡುತ್ತಾನೆ.

ಅಪ್ರಾಪ್ತ ಬಾಲಕ ಮಂದಭೂಪಾಲ ತನ್ನ ಹಿರಿಯರ ಜಾಡಿನಲ್ಲಿ ಬೆಳೆಯಲಾರಂಭಿಸಿದ. ದನಗಾಹಿಯಾಗಿ, ಕೈಯಲ್ಲಿ ಕೊಡಲಿ, ಕೊಕ್ಕೆ, ಬಿಲ್ಲು, ಬಾಣಗಳನ್ನು ಹಿಡಿದು ಕಾಡಿನಲ್ಲಿ ಸಂಚರಿಸುತ್ತಾ ಪಶುಗಳನ್ನು ಕಾಯುತ್ತಿದ್ದ. ದಟ್ಟವಾದ ಕಾಡುಗಳಲ್ಲಿ ನಿರ್ಭೀತಿಯಿಂದ ಇದ್ದು, ಕ್ರೂರ ಮೃಗಗಳಿಗೆ ಅಂಜದೆ ಅಳುಕದೆ, ನದಿಯಲ್ಲಿ ಸ್ನಾನ, ಪೂಜೆ ಇತ್ಯಾದಿ ಕಾರ್ಯಗಳನ್ನು ಮುಗಿಸುತ್ತಿದ್ದ. ನರ್ಮದಾ ನದಿಯಲ್ಲಿ ಪ್ರತಿನಿತ್ಯ ಸಂಧ್ಯಾವಂದನೆ ಸಲ್ಲಿಸಿ ರಾಜ, ಮಂತ್ರಿ ಹೀಗೆ ಮುಖಂಡನಾಗಲು ದೇವರಲ್ಲಿ ಪ್ರಾರ್ಥಿಸಿಕೊಳ್ಳುತ್ತಿದ್ದ.

ಇವನು ವಯಸ್ಕನಾದಂತೆ ಗುಪ್ತಬೊಮ್ಮತಿರಾಜು ಮದುವೆ ಮಾಡಲು ಯೋಚಿಸಿದ. ಚಂದ್ರಗಿರಿ ಪರ್ವತ ಪ್ರಾಂತ್ಯದಲ್ಲಿ ಸುಂದರ ಲಕ್ಷಣವುಳ್ಳ ಹೆಣ್ಣನ್ನು ನೋಡಿಬಂದರು. ಅವಳ ಹೆಸರು ಪ್ರಮಿಳಾ. ಇವರಿಬ್ಬರಿಗೆ ಮದುವೆಯಾದ ಮೇಲೆ ಮಂದಭೂಪಾಲ ಬೇಡರ ಪಾಳೆಯಕ್ಕೆ 'ನಾಯಕ'ನೆಂದು ಮುಖಂಡತ್ವ ವಹಿಸಿಕೊಂಡ.[2]

ಮಂದ ಭೂಪಾಲನ ಪತ್ನಿ ಪ್ರಮೀಳಾ ದೈವಭಕ್ತಳಾಗಿ, ಗಂಡನೊಂದಿಗೆ ಅನ್ಯೋನ್ಯವಾಗಿ ಜೀವಿಸುತ್ತಿದ್ದಳು. ಪ್ರತಿನಿತ್ಯ ಇಬ್ಬರು ನದಿಯಲ್ಲಿ ಸ್ನಾನಮಾಡಿ, ಸೂರ್ಯ ನಾರಾಯಣನನ್ನು ಪೂಜಿಸುತ್ತಿದ್ದರು. ಮಂದಭೂಪಾಲ ಬುಟ್ಟುಗುಲೋರ ಕನ್ಯೆಯನ್ನು ಮದುವೆಯಾದ್ದರಿಂದ ಆ ಗೋತ್ರದ ಅಳಿಯನಾದ. ಇವನ ಪ್ರಭುತ್ವದಲ್ಲಿ ಮಂದಗೋತ್ರ ಮತ್ತು ಬುಟ್ಟಿಗಲೋರಗೋತ್ರವೆಂಬ ಎರಡು ಗೋತ್ರಗಳು ಹುಟ್ಟಿಕೊಂಡವು. ಮಂದಭೂಪಾಲ ಗುಪ್ತಗಿರಿಪುರದ ರಾಜಕೀಯದೊಂದಿಗೆ ಪಶುಪಾಲನೆಯು ಹೊಂದಿದ್ದ. ರೊಪ್ಪದಲ್ಲಿ ಮಲಗಿರುವಾಗ ಕನಸು ಬಿದ್ದು, ಪರಮಾತ್ಮ ಸಂತಾನ ಪ್ರಾಪ್ತಿ ಬಗ್ಗೆ ತಿಳಿಸಿದಂತಾಯಿತು. ಪ್ರಮೀಳಾ ಗರ್ಭಾವತಿಯಾದಳು. ಕಾಡಿನಲ್ಲಿದ್ದ ಬೇಡ ಸಮುದಾಯದವರು ಇವಳನ್ನು ಪ್ರೀತಿ ಮತ್ತು ಅಕ್ಕರೆಯಿಂದ ಅಲಂಕರಿಸಿ ಸೀಮಂತಕಾರ್ಯ ಮಾಡಿದರು. ಒಂಬತ್ತು ತಿಂಗಳುಗಳು ತುಂಬುತ್ತಿದ್ದಂತೆ ಗಂಡುಮಗುವಿಗೆ ಜನ್ಮನೀಡಿದಳು. ಪಾಳೆಯದಲ್ಲಿ ಅಂದು ಸಂಭ್ರಮವೋ ಸಂಭ್ರಮ. ಅನೇಕ ಕ್ರೀಡೆ, ಉತ್ಸವಗಳ ನಡುವೆ ಮಗುವಿಗೆ 'ಅಂಭೋಜರಾಜ'ನೆಂದು ಹೆಸರಿಟ್ಟರು.[3] ಇವನ ನಂತರ ಮಂದಭೂಪಾಲನಿಗೆ ೩ ಜನ ಗಂಡು ಮಕ್ಕಳು ಜನಿಸಿದರು. ತುಂಬೇರಾಜ, ಕಾಂಭೋಜರಾಜ ಮತ್ತು ಕಲ್ಲಿಮರಾಜ. ಹೀಗೆ ನಾಲ್ಕು ಜನರಿಗೆ ಬುಟ್ಟುಗಲೋರ ಗೋತ್ರದಲ್ಲಿ ಮದುವೆಮಾಡಿ, ರಾಜ್ಯಭಾರವನ್ನು ಅಂಭೋಜರಾಜನಿಗೆ ವಹಿಸಿದ.

**ಅಂಭೋಜರಾಜ**

ಮೇಲೆ ತಿಳಿಸಿರುವಂತೆ ಇವನು ಮಂದಭೂಪಾಲನ ಹಿರಿಯಪುತ್ರ. ತಂದೆಗೆ ವಾರ್ಧಿಕ್ಯ ಪ್ರಾಪ್ತಿಯಾಗುತ್ತಿದ್ದಂತೆ, ಯಜಮಾನಿಕೆಯನ್ನು ವಹಿಸಿಕೊಳ್ಳುತ್ತಾನೆ. ತಂದೆಯ ಕೊನೆಗಾಲದ ನಂತರ ಉತ್ತರಾಧಿಕಾರಿಯಾಗಿ ಗುಪ್ತಗಿರಿಗೆ ಸೇರಿದ ಪಾಳೆಯಗಳ ಉಸ್ತುವಾರಿಯನ್ನು, ಬೇಡರ ಪಡೆಗಳ ನಾಯಕತನವನ್ನು ಪಾಲಿಸಿದ ಜತೆಗೆ ಪಶುಪಾಲನೆ ಮತ್ತು ಬೇಟೆಯಲ್ಲಿಯೂ ಕಾಲಕಳೆಯುತ್ತಿದ್ದ.

ಇವನ ಆಳ್ವಿಕೆಯಲ್ಲಿ ಬೇಡರ ಮಹಿಳೆಯರು ಸಹಾ ಬೇಟೆಯಲ್ಲಿ ತೊಡಗಿದ್ದರು. ಈ ಬೇಡತಿಯರು ದೃಢಕಾಯರಾಗಿದ್ದು, ಪುರುಷನಂತೆ ಬಿಲ್ಲು – ಬಾಣ ಹಿಡಿದು ಬೇಟೆಯಾಡುತ್ತಿದ್ದರು. ಶುದ್ಧ ಆಡಳಿತ ನೀಡುವ ಸಲುವಾಗಿ ಅಂಭೋಜರಾಜ ಕುಲ – ಗೋತ್ರ ಇತರೆ ವ್ಯವಹಾರಗಳಿಗೆ ಸಂಬಂಧಿಸಿದ ನ್ಯಾಯ ತೀರ್ಮಾನಕ್ಕಾಗಿ ಪಾಳೆಯಗಳ ನಾಯಕರನ್ನು ಸಲಹೆಗಾರರನ್ನಾಗಿ ನೇಮಿಸಿಕೊಂಡ. ಹಬ್ಬ – ಹರಿದಿನಗಳಲ್ಲಿ ಬೇಡ ನಾಯಕರು ತಪ್ಪದೇ ಕಾಸು – ಮೀಸಲನ್ನು ತರಬೇಕಿತ್ತು. ಕಂಪಳದಲ್ಲಿ ಆ ವಿಪತ್ತು ಸಂಭವಿಸಿದರೆ ಎಲ್ಲರೂ ಸೇರಿ ನಿಭಾಯಿಸುತ್ತಿದ್ದರು. ಹೀಗೆ ಬೇಡರ ಪಡೆಗಳು ರಚ್ಚಗಟ್ಟೆ ಬಳಿ ನೆಲೆಯೂರಿ ವಿರೋಧಿಗಳ ಉಪಟಳವನ್ನು ಅಡಗಿಸುತ್ತಿದ್ದರು. ಅನ್ಯರ ಆಕ್ರಮಣವನ್ನು ಪ್ರಾಣದ ಹಂಗುಮೀರಿ ಹೋರಾಡಿ ತಡೆಯುತ್ತಿದ್ದುದು ವಿಶೇಷ. ಅಂಭೋಜರಾಜನ ಸಹೋದರರಾದ ತುಂಭೋಜರಾಜ, ಕಾಂಭೋಜರಾಜ, ಕಲ್ಲಿಮರಾಜರು ತನ್ನ ಅಣ್ಣನನ್ನು ಅನುಸರಿಸಿ ನಡೆಯುತ್ತಿದ್ದರು. ಗೋದಾವರಿ ನದಿ ತೀರದಲ್ಲಿ ಅಂಭೋಜರಾಜನ ೩ನೇ ತಮ್ಮ ಕಾಂಭೋಜನಿಗೆ ಒಂದು ಗಂಡು ಮಗುವಾಯಿತು. ಅವನಿಗೆ 'ಕಾಮಗೇತಿಭೂಪಾಲ' ಎಂದು ಹೆಸರಿಟ್ಟರು. ಬೆಳ್ಳಿ ಹಸುವಿನ ಆಶೀರ್ವಾದವು ಇವನಿಗಿತ್ತು.

ತನ್ನ ತಂದೆಯಂತೆ ಅಂಭೋಜರಾಜ ಉತ್ತಮ ಆಳ್ವಿಕೆ ನಡೆಸುತ್ತಿದ್ದನು. ಬೇಡಗಂಪಳವು ಕ್ರೌಂಚಟವಿಯಲ್ಲಿ ವಾಸಿಸುತ್ತಿದ್ದಾಗ ಬೇಟೆ, ಪಶುಪಾಲನೆ, ಗೆಡ್ಡೆ ಗೆಣಸು ಸಂಗ್ರಹಣೆಯಲ್ಲಿ ತಮ್ಮ ಸಾಹಸ ತೋರಿಸಿದ್ದಾರೆ. ಹುಲಿ, ಚಿರತೆ, ಸಿಂಹ, ಇತರೆ ಉಗ್ರಪ್ರಾಣಿಗಳ ಹತ್ಯೆ ಪ್ರತಿದಿನ ನಡೆಯುತ್ತಿತ್ತು. ಅಂಭೋಜರಾಜನಿಗೆ ಸಂತಾನ ಪ್ರಾಪ್ತಿ ಆಗಲಿಲ್ಲ. ಇದೇ ಕೊರಗು ಅನೇಕ ವರ್ಷಗಳವರೆಗೆ ಕಾಡಿತು. ಇದೇ ಹೊತ್ತಿನಲ್ಲಿ ದೈವಲೀಲೆಯಿಂದ ಪಂಪಾದ್ರಿಬಸವನಚಿಟ್ಟೆ ಗೊರಸಿನಲ್ಲಿ ವಿಭೂತಿ (ಶಿವನ) ಕಣ ಸೇರಿಕೊಂಡಿತು. ಇದು ದೊಡ್ಡಗಾತ್ರದಲ್ಲಿ ಬೆಳೆದು ಅದು ಸಂಚರಿಸಲಿಕ್ಕಾಗಲಿಲ್ಲ. ಪಂಪಾದ್ರಿ ಬಸವನಿಗೆ ನೋವು ಹೆಚ್ಚಾಗಿ ಹುಣ್ಣು ಬಂಡೆಗೆ ತಾಗಿ ಒಡೆದುಕೊಂಡಿತು. ಮಲೀನರಕ್ತ ಹಳ್ಳವಾಗಿ ಹರಿಯಿತು. ಈ ರಕ್ತದ ಮಡುವಿನಲ್ಲಿ ಚೆಂದದ ಮುದ್ದಿನ ಮಗುವೊಂದು ಕಾಣಿಸಿಕೊಂಡಿತು. ಅವನ ಹೆಸರೇ ಶುಕ್ಲಮಲ್ಲಿನಾಯಕ. ಹೀಗೆ ನಾನಾ ಕಾರಣಗಳಿಗಾಗಿ ಅಂಭೋಜರಾಜ ಶಾಪಗ್ರಸ್ಥನಾಗುತ್ತಾನೆ. ಮಿಕ್ಕ ಘಟನೆಗಳೆಲ್ಲವೂ ಮಹರ್ಷಿ ವಾಲ್ಮೀಕಿಯ ಆರಂಭದ ಜೀವನದಂತೆ ಕಂಡುಬರುತ್ತವೆ. ಹೀಗಾಗಿ ಜನಪದರು ಅಂಭೋಜರಾಜನನ್ನು ವಾಲ್ಮೀಕಿಯೆಂದು ಸಹ ನಂಬಿಕೊಂಡಿದ್ದಾರೆ.

**ಶುಕ್ಲಮಲ್ಲಿನಾಯಕ**

ಮ್ಯಾಸನಾಯಕರ ಸಂಸ್ಕೃತಿಯ ಸ್ಥಾಪಕರಲ್ಲಿ ಶುಕ್ಲಮಲ್ಲಿನಾಯಕನ ಹೆಸರು ಪ್ರಸಿದ್ಧವಾದುದು. ಜನಪದರು ಹೇಳುವಂತೆ ನರ್ಮದಾ, ಗೋದಾವರಿ ಮತ್ತು ಗಂಗಾನದಿ ಮಾರ್ಗಗಳಲ್ಲಿ ಶಿವನು ವಾಹನವೇರಿ ಬರುತ್ತಾನೆ. ಗೋದಾವರಿ ತೀರದ ಪ್ರಕೃತಿಗೆ ಮನಸೋತು ಶಿವಪೂಜೆ ಸಲ್ಲಿಸಲು ಚಿಲುಮೆ ತೋಡಿ ಗಂಗೆಯನ್ನು ಬರಮಾಡಿಕೊಂಡು ಮರಳಿನ ಲಿಂಗಮಾಡಿ ಗಂಗಾಮಾತೆಗೆ ಪೂಜೆ ಸಲ್ಲಿಸುತ್ತಾನಂತೆ. ಈ ಪೂಜೆ ಕಂಡ ಬ್ರಹ್ಮ, ವಿಷ್ಣು, (ಶಿವರು) ಸಹ ಅದೇ ರೀತಿ ಪೂಜೆ (ಗಂಗೆಗೆ), ದಾನಮಾಡಿ ತೆರಳುತ್ತಾರೆ. ಕೊನೆಗೆ ಅಂಭೋಜರಾಜನಿಗೆ ಸಂದರ್ಶನ ನೀಡುತ್ತಾರೆ.

ಅಂಭೋಜರಾಜನ ಹಸುಗಳಲ್ಲಿ ಪಂಪಾದ್ರಿ ಬಸವ ಎಂಬ ವೃಷಭ ಬಾಯಾರಿಕೆಯಿಂದ ನರಳುತ್ತಾ ತ್ರಿಮೂರ್ತಿಗಳು ಶಿವಗಂಗೆ ಪೂಜೆ ಸಲ್ಲಿಸಿದ ಸ್ಥಳಕ್ಕೆ ಬಂದಿತು. ಅಲ್ಲಿದ್ದ ಫಲಪುಷ್ಪಗಳನ್ನು ತಿಂದು ನೀರು ಕುಡಿಯಿತು. ಆಗ ಪರಮೇಶ್ವರನ ವಿಭೂತಿಯ ಕಣ ಪಂಪಾದ್ರಿ ಬಸವನ ಚಿಟ್ಟೆಗೊರಸಿನಲ್ಲಿ ಸೇರಿತಂತೆ. ಕ್ರಮೇಣ ಅಲ್ಲೇ ಬೆಳೆದು ಹುಣ್ಣು ದೊಡ್ಡ ಗಾತ್ರಕ್ಕೆ ಬೆಳೆದಾಗ ಅಂಭೋಜರಾಜ ತೆಗೆಯಲು ಯತ್ನಿಸಿ ವಿಫಲನಾದ. ಒಂಬತ್ತು ತಿಂಗಳ ನಂತರ ಶುಕ್ಲಪಕ್ಷದಂದು ಆ ಹುಣ್ಣಿಮೆಯಲ್ಲಿ ಗಂಡುಮಗು ಜನಿಸಿತು. ಅವನೇ ಶುಕ್ಲಮಲ್ಲಿನಾಯಕ. ಅವನನ್ನು ಅಂಭೋಜರಾಜ ಸಾಕಿ ಬೆಳೆಸಿದ.

ಗೋದಾವರಿ ತೀರದಲ್ಲಿ ಅಂಭೋಜರಾಜನ ಸಹೋದರರಲ್ಲಿ ಒಬ್ಬನಾದ ತುಂಬೇರಾಜನಿದ್ದ ಇವನ ಐದು ಜನ ಹೆಣ್ಣುಮಕ್ಕಳು ಬೇಟೆಗೆಂದು ಬಂದು ಸ್ನಾನಮಾಡುತ್ತಿದ್ದಾಗ ಈ ಮಗ ಅಳುವ ಶಬ್ದ ಕೇಳಿ ಬರುತ್ತಿತ್ತು. ಈ ಐದು ಜನರು ಮಗುವನ್ನು ರಕ್ಷಿಸಿ ಪಂಪಾದ್ರಿ ಬಸವನಿಗೆ ದೇವರು ಕೊಟ್ಟ ಫಲ ಎಂದು ತಿಳಿದರು. ಮಗುವನ್ನು ಗುಹೆಯಲ್ಲಿಟ್ಟಿದ್ದರು. ಅಂಭೋಜರಾಜನಿಗೂ ವಿಷಯ ತಿಳಿದು ಹೋಗಿ ನೋಡಿದ. ಇವರು ಶುಕ್ಲಪಕ್ಷದಿನ, ಮಲಿನ ರಕ್ತದಲ್ಲಿ ಹುಟ್ಟಿದ್ದ ಮಗುವನ್ನು ತಂದಿದ್ದರಿಂದ ಶುಕ್ಲಮಲಿನನಾಯಕನೆಂದು ಹೆಸರಿಸಿದರು. ಇವನು ಕ್ರಮೇಣ ಬೇಡ ಬುಡಕಟ್ಟಿನ ವ್ಯವಹಾರಗಳಿಗೆ, ಬೆಳವಣಿಗೆಗೆ ಕಾರಣನಾದ.

**ದಾನಸಾಲಮ್ಮ**

ಅಂಭೋಜರಾಜ ಮತ್ತು ಆತನ ಹೆಂಡತಿ ಮಧುಮತಿಗೆ ಮಕ್ಕಳಾಗಲಿಲ್ಲ. ಸಂತಾನ ಭಾಗ್ಯಕ್ಕಾಗಿ ಅವಳು ಸೂರ್ಯನಾರಾಯಣನನ್ನು ಪ್ರಾರ್ಥಿಸುತ್ತಿದ್ದಳು. ಅವಳು ಹೆತ್ತಂತ ಮಗುವಿಗೆ ದಾನಸಾಲಮ್ಮ ಎಂದು ಹೆಸರಿಟ್ಟರು. ಇವಳಿಂದ ತಂದೆತಾಯಿಗಳಿಗೆ ಉಳಿಗಾಲವಿಲ್ಲ ಎಂದಾಗ ಅಂಭೋಜರಾಜನ ತಮ್ಮನಾದ ಕಾಂಬೋಜರಾಜನಿಗೆ ಕೊಟ್ಟರು. ಇವಳು ಬೆಳೆದು ಪ್ರೌಢಾವಸ್ಥೆಗೆ ಬಂದಾಗ ಶುಕ್ಲಮಲ್ಲಿನಾಯಕನೊಂದಿಗೆ ಮದುವೆಯಾಗುತ್ತದೆ. ಗುಪ್ತಗಿರಿಯ ಬೇಡ ಪಳೆಯದವರೆಲ್ಲರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ದಾನಸಾಲಮ್ಮ ವಾರ್ಧಿಕ್ಯ ಪ್ರಾಪ್ತಿಯಾಗಿ ಮರೆಯಾದರೂ ಅವರ ವಂಶಪರಂಪರೆ ಇಂದಿಗೂ ಇದೆ. ಇವಳನ್ನು ತಮ್ಮ ಪೂರ್ವಜರ ಸಾಲಿಗೆ ಸೇರಿಸುವ ಬೇಡರು ಸ್ತ್ರೀ ದೇವತೆಯಾಗಿಯೂ ಪೂಜಿಸುವರು.

**ಚಂಚುಲಕ್ಷ್ಮಿ**

ಶುಕ್ಲಮಲ್ಲಿನಾಯಕ ಮತ್ತು ದಾನಸಾಲಮ್ಮನಿಗೆ ಜನಿಸಿದ ಮಗುವೆ ಚಂಚುಲಕ್ಷ್ಮಿ. ಇವರು ಸೂರ್ಯದೇವನ ಆರಾಧಕರು. ಮಂದಭೂಪಾಲನು (ದಾನಸಾಲಮ್ಮನ ಅಜ್ಜ) ಚಂದ್ರಗಿರಿ ಪ್ರಾಂತ್ಯದ ಬಂಗಾರಬೂದಿಕೋಟೆಯ ನೆಲಮಾಳಿಗೆಯಲ್ಲಿ ಸೂರ್ಯದೇವನ ಬೆಳಕು ಬೀಳುವ ಸ್ಥಳದಲ್ಲಿ ಅಲ್ಲಿನ ರಾಜ ಮತ್ತು ಮಂತ್ರಿ ಪದವಿಗಳಿಗಾಗಿ ತಪಸ್ಸು ಮಾಡುತ್ತಿದ್ದನಂತೆ. ದಾನಸಾಲಮ್ಮನ ತಾಯಿ ಮಧುಮತಿ ಇವಳನ್ನು ಪಡೆಯಲು

ಸೂರ್ಯದೇವರನ್ನು ಪ್ರಾರ್ಥಿಸಿದ್ದಳು. ದಾನಸಾಲಮ್ಮಳು ಸಹಾ ಸೂರ್ಯದೇವನು ಪತಿಯಾಗಬೇಕೆಂದು ಪ್ರಾರ್ಥಿಸುತ್ತಾಳೆ. ಶುಕ್ಲಮಲ್ಲಿನಾಯಕನನ್ನು ಮದುವೆಯಾದರು, ಇವಳಿಗೆ ಸೂರ್ಯದೇವನ ಮೋಹ ಹೋಗಿರಲಿಲ್ಲ.

ಮಗಳು ಚಂಚುಲಕ್ಷ್ಮಿ ಬೇಟೆಯಾಡಲು ಇಚ್ಛೆಪಟ್ಟಳಲ್ಲದೆ, ಬಿಲ್ಲುಬಾಣಗಳಿಂದ ತರಬೇತಿ ಪಡೆದಳು. ಪಶುಪಾಲಕರೊಂದಿಗೆ ಅರಣ್ಯಕ್ಕೆ ಹೋಗುತ್ತಿದ್ದಳು. ತಂದೆತಾಯಿಗಳಿಗೆ ಬಹಳ ಆನಂದವಾಯಿತು. ಗೋಕರ್ಣ ಪ್ರದೇಶದಲ್ಲಿ ಸಂಚರಿಸಿ ಗೆಡ್ಡೆಗೆಣಸು ಸಂಗ್ರಹಿಸುತ್ತಿದ್ದರು. ನಿರ್ಭೀತಿಯಿಂದ ಬೇಟೆಯಾಡಿ, ಕಾಡಿನ ನಿವಾಸಿಗಳೊಂದಿಗೆ ಮಧುರ ಬಾಂಧವ್ಯ ಸಾಧಿಸಿದ್ದಳು.

ವಯಸ್ಸಿಗೆ ಮೀರಿ ಚಂಚುಲಕ್ಷ್ಮಿ ಅಪ್ರತಿಮ ಸುಂದರಿಯಾಗಿ ಬೆಳೆದಳು. ಆಂಧ್ರದ ಚೆಲಮತ್ತೂರು ಎಂಬ ಕಾಡಿನಲ್ಲಿ ಬೇಡತಿಯಾಗಿದ್ದಳು ಚಂಚುಲಕ್ಷ್ಮಿ.[4] ಹಿರಣ್ಯ ಕಶ್ಯುಪವನ್ನು ಮಹಾವಿಷ್ಣುವು ನರಸಿಂಹಾವತಾರದಿಂದ ಕೊಂದು ವ್ಯಘ್ರನಾಗಿ ಆ ಕಾಡಿಗೆ ಪ್ರವೇಶಿಸುತ್ತಾನೆ. ಚಂಚುಲಕಷ್ಮಿಯ ಸೌಂದರ್ಯವನ್ನು ಕಂಡು ಶಾಂತನಾಗುತ್ತಾನೆ. ನರಸಿಂಹನು ಒಲಿದುಬಂದು ಇವಳನ್ನು ವಿವಾಹವಾಗುವನು. ಇವನು ಗುಹೆಯಲ್ಲಿ ವಾಸಿಸುತ್ತಾ, ಎಲ್ಲರಿಗೂ ದರ್ಶನ ಕೊಡುತ್ತಾನೆ. ಕಾಮಗೇತಿಭೂಪಾಲನಿಗೆ ಬೇಡರ ಮುಖಂಡರು ಕೋರಿಕೊಂಡಂತೆ ವಿಷ್ಣುವು ತನ್ನೆಲ್ಲ ಸ್ವತ್ತುಗಳನ್ನು ಬೇಡರಿಗೆ ಕೊಟ್ಟ. ಬಲಮುರಿಶಂಖು, ನಾಗಮುರಿಬೆತ್ತ, ರತ್ನಗಿರಿ ಗುದ್ದುಗೆ, ನಾಮತೀರ್ಥ, ಮುತ್ತಿನ ಕಾಲುಪೆಂಡೆ, ಶಂಖು, ಭವನಾಸಿ, ಚೆಪ್ಪುಕೊಡಲಿ, ಕುಕ್ಕೆ, ಉದಿ – ಪದಿ, ನೋಮನೇಮ ಕೊಟ್ಟರಂತೆ. ಚುಂಚುಲಕ್ಷ್ಮಿಯನ್ನು ಶ್ರೀಮನ್ನಾರಾಯಣ ವಿವಾಹವಾದ ತರುವಾಯ 'ನಾಯಕ' ಜಾತಿಗೆ ಎಲ್ಲಿಲ್ಲದ ಕೀರ್ತಿ, ಗೌರವ ಲಭಿಸಿತು. ಅಂದಿನಿಂದ ನಾಯಕನೆಂದು ಮಲ್ಲಿನಾಯಕ, ಮಂದಲೋರು ಎಂಬ ಎರಡು ಪಂಗಡಗಳು ಬೆಳೆದುಬಂದವು.

**ಪೆದ್ದಕ್ಕರಾಯಲದೇವಿ**


ಶುಕ್ಲಮಲ್ಲಿನಾಯಕ ಮತ್ತು ದಾನಸಾಲಮ್ಮನವರು ಗೋಕರ್ಣ ಪರ್ವತ ಪ್ರದೇಶದಲ್ಲಿರುತ್ತಾರೆ. ಒಂದು ದಿನ ಭಾರೀ ಮಳೆ ಸುರಿಯಿತು. ಬೇಡರು ತಮ್ಮ ಉಪಯೋಗಕ್ಕಾಗಿ ನಾನಾ ತರದ ಬೀಜಗಳನ್ನು ನೆಡುತ್ತಿದ್ದರು. ಇದನ್ನು ಕಂಡು ದಾನಸಾಲಮ್ಮ ತನ್ನ ಗಂಡ ಸಾಂಚಿ ಶಿಖನಾಯಕನಾದ ಶುಕ್ಲಮಲ್ಲನಾಯಕನಿಗೆ ಕುಂಬಳಕಾಯಿ ಬೀಜ ನೆಡಲು ಕೇಳಿದ್ದಳು. ಮಂದಗಿರಿಪುರದಲ್ಲಿರುವ ನನ್ನ ಅಣ್ಣ ಕಾಮಗೇತಿ ಭೂಪಾಲನನ್ನು ನೋಡಿಕೊಂಡು ಬರುವಾಗ ಕುಂಬಳಕಾಯಿ ಬೀಜಗಳನ್ನು ತರಲು ಹೇಳಿದಳು. ಇವುಗಳನ್ನು ತರಲು ಹೋದಾಗ ದಾರಿಯಲ್ಲಿ ವೃದ್ಧನ ದಯೆಯಿಂದ ಲಭಿಸುತ್ತದೆ. ಅಲ್ಲಿ ದೊರೆತ ಕುಂಬಳಕಾಯಿ ಬೀಜದಿಂದ ಬಳ್ಳಿಯಾಗಿ ಬೆಳೆದು ಕಾಯಿಬಿಟ್ಟಿತು. ಆ ಕುಂಬಳಕಾಯಿ ೭ ಹೋಳಾಯಿತು. ಅದನ್ನು ದಾರಿಗೆ ಹಾಕಿ ಬಂದಾಗ ಕುಂಬಳಕಾಯಿ ಹೆಣ್ಣು ಶಿಶುವಾಗಿ ಜನ್ಮಪಡೆಯಿತು. ಅವಳಿಗೆ ಪೆದ್ದಕ್ಕ ರಾಯಲದೇವಿ ಎಂದು ಕರೆದರು. ಕ್ರಮೇಣ ಇವಳಿಗೆ ವಡೇಲುಮಾರಿ, ಮುತ್ತಿಗಾರುಮಾರಿ, ಗೌರಸಮುದ್ರಮಾರಿ, ದಡ್ಡಿಲುಮಾರಿ ಮತ್ತು ಅಕ್ಕರಾಯಮ್ಮ ಎಂಬ ಹೆಸರುಗಳಿಂದ ಕರೆದು ಆರಾಧಿಸುತ್ತಾರೆ.

ಪೆದ್ದಕ್ಕರಾಯಲದೇವಿ ರೌದ್ರಾವತಾರ ತಾಳಿ ಕಾಡಿನಲ್ಲಿ ಸಂಚರಿಸುವಾಗ ಏಳು ದಿಕ್ಕುಗಳ್ಲಿ ಮಕ್ಕಳು ಅಳುವ ಶಬ್ದ ಕೇಳಿ ಬಂತು. ಹೋಗಿ ನೋಡಲಾಗಿ ಏಳು ಮಕ್ಕಳು ಕುಂಬಳಕಾಯಿ ಹೋಳುಗಳಲ್ಲಿ ಹುಟ್ಟಿದವರೆಂಬುದು ತಿಳಿದು ಅವರನ್ನೆತ್ತಿಕೊಂಡು ಬಂದು ಗುಹೆಯೊಳಗೆ ಏಳು ತೊಟ್ಟಿಲುಗಳನ್ನು ಕಟ್ಟಿ ಬೆಳೆಸಿದಳು. ಅವರುಗಳೆಂದರೆ ಭಾನು ಕೋಟಿರಾಜು, ಸೂರಪ್ಪರಾಜು, ಸೆಟ್ಲುಪಟ್ಟಪ್ಪರಾಜು, ಕೋರ್ಲಮಲ್ಲಿರಾಜು, ಕಾಕುಮಂಚಿರಾಜು, ಪಾಪನ್ನರಾಜು, ತಿಪ್ಪಂಡರಾಜು ಎಂದು ನಾಮಕರಣ ಮಾಡಲಾಯಿತು. ಇವರು ಸೂರ್ಯನ ವರದಿಂದ ಹುಟ್ಟಿದವರೆಂಬ ನಂಬಿಕೆಗಳಿವೆ. ನಂತರ ಶುಕ್ಲಮಲ್ಲಿನಾಯಕನ ಸಂತತಿ ವೃದ್ಧಿಯಾಯಿತು.

ಮ್ಯಾಸಬೇಡರೆಲ್ಲ ಸೇರಿ ಮಲ್ಲಿನಾಯಕನ ಗೋತ್ರಕ್ಕೆ ದೊರೆಪಟ್ಟ ಕಟ್ಟುತ್ತಾರೆ. ಹಿಂದೆ ಈ ಪದವಿಗಾಗಿ ಮಂದಭೂಪಾಲನು ದೊರೆಯಾಗಲು ತಪಸ್ಸು ಮಾಡಿ ಮೋಸ ಹೋದನು. ನಂತರ ಮಲ್ಲಿನಾಯಕನಿಗೆ ಅವಕಾಶ ಸಿಕ್ಕಿತು. ಮಲ್ಲಿನಾಯಕರು ದೊರೆಗಳಾಗಿ, ಮಂದಲಾರು

ದಳವಾಯಿಗಳಾಗಿ ಸೂರ್ಯ ಚಂದ್ರರವರೆಗೆ ನಡೆದುಕೊಂಡು ಹೋಗುವಂತೆ ಆದೇಶಿಸಲಾಯಿತು. ಶುಕ್ಲಮಲ್ಲಿನಾಯಕ ಹಾಗೂ ದಾನಸಾಲಮ್ಮನವರ ಪುತ್ರಿ ಪೆದ್ದಕ್ಕರಾಯಲದೇವಿ ಮತ್ತು ೭ ಜನ ಮಕ್ಕಳು ಕಾಡಿನಲ್ಲಿದ್ದರು. ಹೀಗೆ ಬೇಡರ ಸಂಸ್ಕೃತಿ ನಿರ್ಮಾಣದಲ್ಲಿ ಅನೇಕರು ಶ್ರಮಿಸಿರುವುದುಂಟು.

**ವಂಶ ಪರಂಪರೆ**




ನಾಯಕರ ಸಂಸ್ಕೃತಿ ಮತ್ತು ಪ್ರಭುತ್ವ

ಬೇಡನಾಯಕರು ತಮ್ಮ ಪ್ರಾಚೀನ ಪರಂಪರೆಯನ್ನು ರಕ್ಷಿಸಿಕೊಳ್ಳಲು ವಿವಿಧ ರೀತಿಯಲ್ಲಿ ಕಾರ್ಯೋನ್ಮುಖರಾಗುತ್ತಾರೆ. ಇವುಗಳಲ್ಲಿ ಪ್ರಮುಖವಾದವು ಕಟ್ಟೆಮನೆಗಳ ಸ್ಥಾಪನೆ, ನಾಯಕರ ನೇಮಕ, ದಾಸ ಮತ್ತು ಪೂಜಾರಿಗಳನ್ನು ಕಟ್ಟೆಮನೆ ಹಿರಿಯರು ಈ ರೀತಿ ಮಾಡಿರುತ್ತಾರೆ. ಮ್ಯಾಸಬೇಡರು ತಮ್ಮ (ತೆಲುಗು ಭಾಷೆ) ಬೆಡಗಿಗೆ ತಕ್ಕಂತೆ ದೇವರುಗಳನ್ನು ಸ್ಥಾಪಿಸಿಕೊಂಡಂತೆ ಕಟ್ಟೆಮನೆಗಳು ಹುಟ್ಟಿಕೊಂಡವು.

| | | |
|---|---|---|
| ೧. ರಾಯಲುಕಟ್ಟೆ | ಪದಿಮುತ್ತಿಗಾರು ಕಟ್ಟೇಮನೆ | ಮೊಳಕಾಲ್ಮುರು ತಾ. |
| ೨ ರಾಗಿಮಾನುಕಟ್ಟ | ಕಂಪಳದೇವರ ಕಟ್ಟೇಮನೆ | ಮೊಳಕಾಲ್ಮುರು ತಾ |
| ೩. ರಚ್ಚಕಟ್ಟ | ಕಲ್ಲೇದೇವರಪುರ ಕಟ್ಟೇಮನೆ | ಜಗಳೂರು ತಾ |
| ೪. ಅಲಕಲು ಕಟ್ಟ | ತಪಲೇಟಿ ಚೆರವು ಕಟ್ಟೇಮನೆ | ಚಿತ್ರದುರ್ಗ ತಾ |
| ೫. ಮೊಲಕಾಲ ಕಟ್ಟ | ಚಿಂತಗುಂಟ್ಲು ಕಟ್ಟೇಮನೆ | ಕುದಾಪುರ, ಚಳ್ಳಕೆರೆ ತಾ |
| ೬. ನಾಯಕನಹಟ್ಟಿ | ಹಟ್ಟಿಮಲ್ಲಪ್ಪನಾಯಕನ ಕಟ್ಟೇಮನೆ | ಚಳ್ಳಕೆರೆ ತಾ |
| ೭. ಗೋನೂರುಕಟ್ಟ | ಸೂರಪ್ಪನಾಯಕನಕಟ್ಟೇಮನೆ | ಚಿತ್ರದುರ್ಗ ತಾ |

| | | |
|---|---|---|
| ೮. ಏಕಲುಕಟ್ಟ | ಗೋನೂರು ಕಟ್ಟೇಮನೆ | ಚಿತ್ರದುರ್ಗ ತಾ |
| ೯ ನೂಕಲುಕಟ್ಟ | ನಾಯಕನಹಟ್ಟಿ ಕಟ್ಟೇಮನೆ | ಚಳ್ಳಕೆರೆ ತಾ |
| ೧೦ ಪೋಕಲಕಟ್ಟ | ನನ್ನಿವಾಳ ಕಟ್ಟೇಮನೆ | ಚಳ್ಳಕೆರೆ ತಾ |
| ೧೧ ಆಚಾರಕಟ್ಟ | ಕಾಮಗೇತನಹಳ್ಳೀ ಕಟ್ಟೇಮನೆ | ಚಳ್ಳಕೆರೆ ತಾ |
| ೧೨ ಗಿರಕಲ ಕಟ್ಟ | ಜಂಬುದ್ವೀಪಗಳ ಗುಡ್ಡೆಕಟ್ಟೇಮನೆ | ಚಳ್ಳಕೆರೆ ತಾ |
| ೧೩ ನನ್ನಿವಾಳಮುಕಟ್ಟ | ಚಿನ್ನಪಾಲನಾಯಕನ ಕಟ್ಟೇಮನೆ | ಚಳ್ಳಕೆರೆ ತಾ |

(ಆನಂತರ ೩ ಕಟ್ಟೇಮನೆಗಳು ಮಾತ್ರ ಇದ್ದವು. ಗೋನೂರು, ನಾಯಕನಹಟ್ಟಿ ಮತ್ತು ನನ್ನಿವಾಳ)

**ಮೂರು ಜನ ನಾಯಕರ ನೇಮಕ**

ಈ ಸಂಸ್ಕೃತಿಯ ಅಭಿವೃದ್ಧಿ, ಜಾತಿಕಲಹ, ನ್ಯಾಯತೀರ್ಮಾನಕ್ಕಾಗಿ ಈ ಜನಾಂಗದ ಹಿರಿಯರನ್ನು ಜಾತಿಸಂವಿಧಾನದಡಿಯಲ್ಲಿ ನಾಯಕನೆಂದು ನೇಮಿಸುತ್ತಾರೆ.

ಗಟ್ಟಿಮುತ್ತಿನಾಯಕ
ಮೀಸಲು ನಾಯಕ
ಬೋಸೇನಾಯಕ

**ಮೂರು ಜನಪೂಜಾರಿಗಳ ನೇಮಕ**
ಕಾಮಗೇತಿ
ನಲ್ಲಿಗೇತಿ
ಎರಿಪೋತಿ ಬುಲ್ಲುಡುಲು

**ಮೂರು ಜನದಾಸಯ್ಯಗಳು**
ಮುಂಡಾಸುದಾಸ, ಗೊಡಗುದಾಸ ಮತ್ತು ಬೋಡಿದಾಸ

**ಗೋತ್ರಗಳು (ಎರಡು)**

| **ಮಲ್ಲಿನಾಯಕ** | **೭ ಮಂದಿ ಹಿರಿಯರು** | **ಮಂದಲ** |
|---|---|---|
| ಬೋಡಿದಾಸನು | ಕಾಟಬ್ಬನವರು | ಗಜ್ಜಗನವನು |
| ಸಜ್ಜಲವಾನು | ಯರಗೋಡ್ಲವನು | ಬಿದ್ದನವನು |
| ಯರಗೋಡ್ಲವನು | ನಳಬಾಳಸಿವಾಡು | ಬುಡ್ಡುಬೋರುನವಾಡು |
| ನಲ್ಲಬಾಳಸಿವಾನು | ಗಡಗಿಲೋಡು | ಕಗ್ಗಲ್ಲವಾಡು |
| ನಲ್ಲಕ್ಕಿಯವನು | ವರಗನೋಡು | ಮಲ್ಲೂರುವಾಡು |

| | | |
|---|---|---|
| ವರನವನು | ಚೆನ್ನಮುತ್ತಿವಾಡು | ಯರಬೊಮ್ಮನಾಡು |
| ಚನ್ನಮುತ್ತಿಗನು | ಜೂಗನೋಡು | ಪರಮೇಶಿನವಾಡು |

೧೨ ಪೆಟ್ಟಿಗೆ ದೇವರುಗಳು

| | | | |
|---|---|---|---|
| ೧ | ಪಚ್ಚಪದಿ ದೊಡ್ಡ ತಿರುಮಲದೇವರು | ಬೇಡರೆಡ್ಡಿ ಹಳ್ಳಿ | ಚಳ್ಳಕೆರೆ ತಾ |
| ೨ | ಕಾಪುಕಂಪಳ ರಂಗಸ್ವಾಮಿ | ಕಂಪಳದೇವರಹಟ್ಟಿ | ಮೊಳಕಾಲ್ಮೂರು ತಾ |
| ೩ | ದಡ್ಲು ಮಾರಮ್ಮ | ದೇವರಹಳ್ಳಿ | ಚಳ್ಳಕೆರೆ |
| ೪ | ಚಿಂತಗುಟ್ಲ ಬೋರೇದೇವರು | ಖುದಾಪುರ | ಚಳ್ಳಕೆರೆ |
| ೫ | ಮಂದಬೊಮ್ಮ ದೇವರು | ದೊಣಮಂಡಲ ಹಟ್ಟಿ | ಚಳ್ಳಕೆರೆ |
| ೬ | ಪೆದ್ದಕ್ಕರಾಯಮ್ಮ (ಮಾರಮ್ಮ) | ಗೌರಸಮುದ್ರ | ಚಳ್ಳಕೆರೆ |
| ೭ | ಮಂಗಪೋಟಿ ಓಬಳದೇವರು | ತಾಳಿಕೆರೆ | ರಾಯದುರ್ಗ |
| ೮ | ನಲ್ಲಚೆರುವು ಓಬಳದೇವರು | ರುದ್ರಮ್ಮನಹಳ್ಳಿ | ಚಳ್ಳಕೆರೆ |
| ೯ | ಮಲ್ಲಿನಾಯಕ ಬೊಮ್ಮದೇವರು | ವರವು | ಚಳ್ಳಕೆರೆ |
| ೧೦ | ಬಂಗಾರಿದೇವರು | ನನ್ನಿವಾಳ | ಚಳ್ಳಕೆರೆ |
| ೧೧ | ಬೋಸೇ ದೇವರು | ಬೋಸೇದವರಹಟ್ಟಿ | ಚಳ್ಳಕೆರೆ |
| ೧೨ | ಮಾಕನಡಕು ಓಬಳದೇವರು | ಮಾಕನಡಕು | ಕೂಡ್ಲಿಗಿ |

* * *

[1] ತೆಲುಗಿನಮಂದ ಕನ್ನಡದ ಮಂದೆ, ಗುಂಪು, ವರ್ಗ, ಬೆಡಗು ಎಂದು ಆಗಿದೆ.

[2] ಬೇಡರ ಬುಡಕಟ್ಟಿನಲ್ಲಿ ಮೊಂಡಬೇಡರೆಂಬ ಪಂಗಡವಿದೆ. ಇವರು ಮೊಂಡ ವೃತ್ತಿಯಿಂದ ಭಿಕ್ಷೆ ಬೇಡಿ ಜೀವಿಸುತ್ತಾರೆ. ಮಂದವಾರು ಗೋತ್ರಕ್ಕೆ ಮೊಂಡರು ಸೇರಿದ್ದು, ಇಂದಿಗೂ ಅಣ್ಣತಮ್ಮಂದಿರೆಂಬ ಭಾವನೆ ಉಳಿದಿದೆ. ಮೊಂಡರು ಸಾಂಸ್ಕೃತಿಕವಾಗಿ ಇಂದು ಪರಿವರ್ತನೆಯ ಹಂತದಲ್ಲಿದ್ದಾರೆ.

[3] ಅಂಬು = ನೀರು, ಜ=ಹುಟ್ಟಿದ. ಇವರ ತಂದೆತಾಯಿಗಳು ನದಿ ನೀರಲ್ಲಿ ನಿಂತು, ದೇವರನ್ನು ಪ್ರಾರ್ಥಿಸಿದ್ದರಿಂದ ಮತ್ತು ಅದೇ ಸಮಯಕ್ಕೆ ಜನಿಸಿದ ಕಾರಣಕ್ಕೆ 'ಅಂಭೋಜರಾಜ'ನೆಂದು ಕರೆದರು.

[4] ಕದ್ರಿ ನರಸಿಂಹನೊಂದಿಗೆ ಚುಂಚುಲಕ್ಷ್ಮಿಯ ಕಥೆ ಹೆಣೆದುಕೊಂಡಿರುವುದುಂಟು. ಆಂಧ್ರಪ್ರದೇಶ ಅನಂತಪುರ ಜಿಲ್ಲೆಯ ಚೆಲಮತ್ತೂರಿನ ಅಡವಿಯಲ್ಲಿ ಲಕ್ಷ್ಮಿಯು ತನ್ನ ರೂಪವನ್ನು ಮರವೊಂದರಲ್ಲಿ ಬಿಟ್ಟು ಪುರಾಣ ಪ್ರಕಾರ ಸಂಚರಿಸಿದಳು. ಅಡವಿ ಚೆಂಚರದಂಪತಿಗಳು ನಾರದನ ನಿರ್ದೇಶನದ ಮೇರೆಗೆ ಹಣ್ಣನ್ನು ತಿಂದದ್ದರಿಂದ ಚುಂಚುಲಕ್ಷ್ಮಿ ಹುಟ್ಟಿದಳು. ನರಸಿಂಹ ಅವತಾರದಲ್ಲಿ ವಿಷ್ಣು ಚುಂಚುಲಕ್ಷ್ಮಿಯನ್ನು ಮದುವೆಯಾದ. ಆದಿಲಕ್ಷ್ಮಿಯು ತನ್ನ ರೂಪಕಾಂತಿಯನ್ನು ತೆಗೆದುದ್ದರ ಪರಿಣಾಮವಾಗಿ ಈ ಸೀಮೆಯ ಹೆಣ್ಣು ಮಕ್ಕಳ ಮುಖದಲ್ಲಿ ಕಳೆಬಾಡಿ ಹೋಗಿರುತ್ತದೆಂಬ ನಂಬಿಕೆಯಿದೆ. ಇದಕ್ಕೆ ಅತೀಯಾದ ಬಿಸಿಲಿನ ಉಷ್ಣಾಂಶವು ಕಾರಣವಿರಬಹುದು. ಈ ಕದರಿನರಸಿಂಹನಿಗೆ ಬೇಡರು, ಉಪ್ಪಾರ ಮತ್ತು ಮಾದಿಗರು ಒಕ್ಕಲುಗಳಲ್ಲಿ ಪ್ರಮುಖರು. ಇಂದಿಗೂ ತಮ್ಮವರಿಗೆ ಕದಿರಪ್ಪ, ಕದಿರಮ್ಮ, ಲಕ್ಷ್ಮಿ, ಲಕ್ಷ್ಮಿನರಸಪ್ಪ, ಲಕ್ಷ್ಮಿನರಸಮ್ಮ ಎಂದು ಹೆಸರಿಡುತ್ತಾರೆ. ಚೆಲಮತ್ತೂರಿನ ಅಡವಿಯಲ್ಲಿ ಕದರಿದ್ಯಾವರ ಕಣಿವೆಯಿದೆ. ನರಸಿಂಹನು ಚುಂಚುಲಕ್ಷ್ಮಿಯನ್ನು ವರೆಸಿ ವಿವಾಹವಾದ ಸ್ಥಳವಿದು. ಕಾಮದಹನದ ಹುಣ್ಣಿಮೆಯ ೭ನೇಯ ದಿನ ಕದರಿಯಲ್ಲಿ ನಡೆಯುವ ರಥೋತ್ಸವಕ್ಕೆ ೩ ದಿನ ಕಾಲ್ನಡಿಗೆಯಲ್ಲಿ ಬಂದು

ಇಲ್ಲಿಂದ ತೀರ್ಥವನ್ನು ಪಡೆದು ಮತ್ತೇ ೩ ದಿನ ಹಿಂತುರಿಗಿ ನಡೆದೇ ಹೋಗಬೇಕು. ನಂತರ ೭ನೇ ತೀರ್ಥವನ್ನು ಹಾಕಿದ ನಂತರವೇ ರಥ ಕದಲುವುದೆಂಬ ನಂಬಿಕೆಯಿದೆ. ಬೇಡನಾಯಕರು ಕದರಿನರಸಿಂಹ ಮತ್ತು ಚುಂಚುಲಕ್ಷ್ಮಿಯನ್ನು ಆರಾಧಿಸುವ ಸಂಪ್ರದಾಯಗಳು ಬೆಳೆದುಬಂದಿದೆ.

# ೬. ಚಿತ್ರದುರ್ಗ ಜಿಲ್ಲೆಯ ಬುಡಕಟ್ಟು ವೀರರು (1)

## ೬.೧. ಯರಮಂಚನಾಯಕ ಮ್ಯಾಸಮಂಡಳಿ ಮಹಾಸಂಸ್ಥಾನದ ಅಧ್ಯಕ್ಷ

**ಹಿನ್ನೆಲೆ**

ಮ್ಯಾಸಬೇಡರ ಮಹಾಸಂಸ್ಥಾನದ ಮೊದಲ ಅಧ್ಯಕ್ಷನೇ ಯರಮಂಚಿನಾಯಕ. ಜಾತಿ ಇಲ್ಲದವರಿಗೆ ಜಾತಿಕೊಟ್ಟ ಮಹಾಜಾತ್ಯಾತೀತ ವ್ಯಕ್ತಿ. ನೆಲೆಯಿಲ್ಲದವರಿಗೆ ಒಂದು ನೆಲೆಯನ್ನು ಕಲ್ಪಿಸಿದ ಧೀಮಂತನಾಯಕ. ಉದಾರವಾದಿ, ಸುಧಾರಣವಾದಿ, ಸಂಘಟನೆ ಚತುರನಾಗಿ, ದಾನಶೂರನಾಗಿ ಮ್ಯಾಸಬೇಡರ ಸಮುದಾಯಕ್ಕೆ ನಾಯಕನಾಗಿ ನೇಮಕಗೊಳ್ಳುತ್ತಾನೆ ಯರಮಂಚಿ.

[1]
**ಪುರಾಣಕಥೆ**

ಈ ವಂಶವು ಉದಯವಾಗುವುದು ದೇವಾನುದೇವತೆಗಳ ಅನುಗ್ರಹದಿಂದ. ಕ್ರಿ.ಶ. ೬೦೩ (ಶ.ಕ. ೫೨೫) ಸಾಧಾರಣನಾಮ ಸಂವತ್ಸರದ ಮಾಘಶುದ್ಧ ೨ರಲ್ಲಿ ತ್ರಿಮೂರ್ತಿಗಳಿಂದ ಏಳು ಜನ ಋಷಿಗಳು ಉದಯಿಸುತ್ತಾರೆ. ಭೂಕೈಲಾಸದಲ್ಲಿ ವಿಷ್ಣು, ಬ್ರಹ್ಮ, ಮಹೇಶ್ವರರು ಕೆಂಪುತೊರೆ ಎಂಬ ನದಿತೀರಕ್ಕೆ ಜಲಕ್ರೀಡೆಯಾಡಿ ಮೂರು ಮೂರ್ತಿಗಳನ್ನು ಸ್ಥಾಪಿಸಿ ಅವುಗಳಿಗೆ ಸ್ನಾನಮಾಡಿಸಿ ವಿಷ್ಣು, ಬ್ರಹ್ಮ ಶಂಕರನೆಂದು ನಾಮವನ್ನು ಧರಿಸುತ್ತಾರೆ. ಶಂಕರನು ವಿಭೂತಿ ಧರಿಸಲು ಆ ವಿಭೂತಿ ರವೆಯು ಚಿಲುಮೆಯಲ್ಲಿ ಬೀಳಲು ಪರಮಾತ್ಮನು ಪಂಪಾದ್ರಿ ಬಸವನನ್ನು ಚಿಲುಮೆಯಲ್ಲಿ ಇಳಿಸುವನು. ಪಂಪಾದ್ರಿ ಬಸವಣ್ಣನ ಚುಟ್ಟುಗೊರಸೆಯಲ್ಲಿ ವಿಭೂತಿ ರವೆಯು ಸೇರುವುದು. ತ್ರಿಮೂರ್ತಿಗಳು ಕೈಲಾಸಕ್ಕೆ ಪ್ರಯಾಣ ಬೆಳೆಸಿದರು. ವಿಭೂತಿ ರವೆ ಕಾಲಲ್ಲಿ ಸೇರಿ ದೊಡ್ಡ ಗಾತ್ರದ ಹುಣ್ಣಾಗಿ ಬಸವಣ್ಣನಿಗೆ ಹಗಲುರಾತ್ರಿ ಕಳೆಯುವುದೇ ಕಷ್ಟವಾಗಿತ್ತು. ಈ ಬಸವಣ್ಣನ ಮೇಲೆ ಪರಮೇಶ್ವರ ಲೋಕಸಂಚಾರ ಮಾಡುವಾಗ ಗೋದಾವರಿ ತೀರಕ್ಕೆ ಬಂದನು. ಇಲ್ಲಿಗೆ ಬರಲು ೯ ತಿಂಗಳು ಆಯಿತು. ಹುಣ್ಣು (ಕುರುವು) ಒಡೆದು ಕೀವು ರಕ್ತ ಸೋರುವುದರೊಂದಿಗೆ ಶಿಶುವೊಂದು ಕೆಳಕ್ಕೆ ಬಿದ್ದಿತು. ಪರಮೇಶ್ವರನು ಕೈಲಾಸಕ್ಕೆ ಇಲ್ಲಿಂದ ಹೊರಟುಹೋದನು.

ಆ ದಟ್ಟ ಕಾಡಿನಲ್ಲಿ ಮಗುವಿನ ಅಳಲನ್ನು ಕೇಳುವರೇ ಇರಲಿಲ್ಲ. ಆ ರೋಧನವು ಕೆಂಪು ವನಕ್ಕೆ ಕೇಳಿತು. ಅಲ್ಲಿದ್ದ ಮಂದಗಿರಿ ರಾಜನ ಮೊಮ್ಮಕ್ಕಳಾದ ೫ ಜನ ಕಾಡು ಸಂಚಾರಿಗಳು ಈ ಬಾಲಕನನ್ನು ಎತ್ತಿ ಮುದ್ದಾಡಿದರು. ಅವನಿಗೆ ಸೆಟ್ಲುಗಿರಿ ಶುಕ್ಲಮಲ್ಲಿರಾಜನೆಂದು ನಾಮಕರಣ ಮಾಡಿದರು. ಕೆಂಪು ವನದಲ್ಲಿ ಈ ಮಗುವಿಗೆ ಬಿದಿರು ಅಕ್ಕಿ, ಅಡವಿಜೇನು ಇತರ ಗೆಡ್ಡೆಗೆಣಸುಗಳನ್ನು ಕೊಟ್ಟು ಸಾಕುತ್ತಿದ್ದರು. ಹೀಗೆ ಬೆಳೆದು ಪ್ರಬುದ್ಧಮಾನಕ್ಕೆ ಬಂದಾಗ ಮಂದಗಿರಿ ಅರಸನ ಮಗಳಾದ ದಾನಸಾಲಮ್ಮನನ್ನು ಈ ಶುಕ್ಲಮಲ್ಲಿರಾಜನಿಗೆ ಮದುವೆಮಾಡಿದರು. ನೆರೆದಿದ್ದ ಅಡವಿ ಚೆಂಚರು ಸಂಪ್ರದಾಯ ಕೆಟ್ಟು ಹೋಯಿತೆಂದು ಕಣ್ಮರೆಯಾದರು. ದಾನಸಾಲಮ್ಮನನ್ನು ಕರೆದುಕೊಂಡು ಶುಕ್ಲರಾಜ ಶುಕ್ಲಗಿರಿ ಬೂದಿಕೋಟೆಯಲ್ಲಿ ನೆಲೆಸಿದ್ದನು. ಹೀಗಿರುವಾಗ ಒಮ್ಮೆ ಧಾರಾಕಾರವಾಗಿ ಮಳೆ ಸುರಿಯಿತು. ಇತರರಂತೆ ಅಂಭೋಜಿ – ತುಂಭೋಜಿ ನಗರದ ಪ್ರಜೆಗಳು ಹೊಲಗಳಿಗೆ ಬೀಜವನ್ನು ಬಿತ್ತುತ್ತಿದ್ದರು. ಇದನ್ನು ಕಂಡ ದಾನಸಾಲಮ್ಮ ತನ್ನ ಗಂಡನಿಗೆ ಮಂದಗಿರಿಗೆ ಹೋಗಿ ನನ್ನ ತಮ್ಮ ಕಾಮಗೇತಿ ಭೂಪಾಲನ ಹತ್ತಿರ ಕುಂಬಳಬೀಜವನ್ನು ತೆಗೆದುಕೊಂಡು ಬಾ ಎಂದು ಹೇಳಿ

ಕಳುಹಿಸಿದ್ದಳು. ಇದರಂತೆ ಶುಕ್ಲಮಲ್ಲಿರಾಜ ಮಂದಗಿರಿಗೆ ಹೋಗುವ ದಾರಿ ಮಧ್ಯದಲ್ಲಿ ಪರಮೇಶ್ವರನು ಬಡಜಂಗಮರೂಪಿಯಾಗಿ ಕಾಣಿಸಿಕೊಂಡು ೭ ಕುಂಬಳ ಬೀಜಗಳನ್ನು ಕೊಟ್ಟನು. ಅವನು ಕೊಟ್ಟ ೭ ಬೀಜಗಳನ್ನು ತಂದು ಹೆಂಡತಿಗೆ ಕೊಟ್ಟ. ದಾನಸಾಲಮ್ಮ ಸೂರ್ಯನ ಪರಮಭಕ್ತಳು. ಅವನನ್ನು ಕುರಿತು ತಪಸ್ಸು ಮಾಡುವಾಗ ಸೂರ್ಯನು ಅವಳ ತಪಸ್ಸಿಗೆ ಮೆಚ್ಚಿ ಪೂರ್ವಗಿರಿ ಸಮುದ್ರದಲ್ಲಿ ಸ್ನಾನ ಮುಗಿಸಿ ಅಲಂಕಾರದೊಂದಿಗೆ ಕಾಣಿಸಿಕೊಂಡಾಗ ದಾನಸಾಲಮ್ಮ ಅವನನ್ನು ಭ್ಮರಿಸುವಳು. ಇಂಥ ಹೊತ್ತಿನಲ್ಲಿ ೭ ಕುಂಬಳಿ ಬೀಜಗಳನ್ನು ತಿಪ್ಪೆಯಲ್ಲಿ ಹಾಕಿದಾಗ ಫಲವತ್ತಾಗಿ ಬೆಳೆದ ಬಳ್ಳಿಗಳು ಜನಸಾಮಾನ್ಯರಿಗೆ ಕಾಟಕೊಡಲಾರಂಭಿಸಿದವು. ಮಂದಗಿರಿ ಪ್ರಜೆಗಳು ರಾಜನಿಗೆ ದೂರು ಸಲ್ಲಿಸಿದರು. ರಾಜಾಜ್ಞೆಯಿಂದ ಬಳ್ಳಿಯನ್ನು ಏಳು ದಿನದಲ್ಲಿ ಕಿತ್ತು ನಾಶಪಡಿಸದಿದ್ದರೆ ಶಿಕ್ಷೆಗೆ ಒಳಗಾಗುವರೆಂದು ಡಂಗುರ ಸಾರಿಸಿದಳು. ಪ್ರಜೆಗಳು ದಾನಸಾಲಮ್ಮನಿಗೆ ಬಂಜೆ, ಲೋಬಿ ಎಂದೆಲ್ಲಾ ಮೂದಲಿಸುತ್ತಿದ್ದರು. ಬಳ್ಳಿಯು ಬಂಜೆ ಇವಳು ಬಂಜೆ ಎಂಬಂಥ ಮಾತುಗಳು ಇವಳ ಮನವನ್ನು ಕಲುಕಿದವು. ದಾನಸಾಲಮ್ಮ ತನ್ನ ಗಂಡನೊಂದಿಗೆ ಬಳ್ಳಿ ಹತ್ತಿರ ಬಂದು ಕೀಳಲು ದೊಡ್ಡದೊಂದು ಕುಂಬಳಕಾಯಿ ಕಾಣಿಸಿತು. ಅದನ್ನು ಮನೆಗೆ ತಂದು, ಪುರೋಹಿತರನ್ನು ಕರೆಸಿ ನಡೆದ ಪ್ರಸಂಗ ವಿವರಿಸಿದರು. ಮೊದಲ ಫಲ ತಿನ್ನಬಾರದೆಂದು ಬ್ರಾಹ್ಮಣರಿಗೆ ಅದನ್ನು ದಾನಕೊಟ್ಟರು. ಅದನ್ನು ತಂದು ಮನೆಯಲ್ಲಿ ಒಡೆದರೆ ಅದು ಹೋಳಾಗಲಿಲ್ಲದ್ದನ್ನು ಕಂಡ ಬ್ರಾಹ್ಮಣ ದಾನಸಾಲಮ್ಮನಿಗೆ ಹಿಂದಕ್ಕೆ ಕೊಟ್ಟು ಹೋದ. ಚಿಂತೆಗೀಡಾದ ದಾನಸಾಲಮ್ಮ ೧೨ ಜನ ಆಯಗಾರರಿಗೆ ಒಡೆಯಲು ಕೊಟ್ಟಿದ್ದರೆ ಅವರಿಂದಲೂ ಆಗಲಿಲ್ಲ. ಕೋಪೋದ್ರಿಕ್ತಳಾದ ನಾಗತಿ ಖಡ್ಗದಿಂದ ೭ ಭಾಗವಾಗಿ ತುಂಡರಿಸಿ ೭ ದಿಕ್ಕಿಗೆ ಹಾಕಿದಳು. ಗಂಡನೊಂದಿಗೆ ಪಾಲಗಿಡ ಸಮುದ್ರಕ್ಕೆ ನೀರು ತರಲು ಹೋದ ದಾನಸಾಲಮ್ಮನಿಗೆ ನೀರು ತುಂಬುವಾಗ ತನ್ನ ಸ್ತನಗಳಲ್ಲಿ ಹಾಲು ಉಕ್ಕುತ್ತಿತ್ತು (ಕುಚನೇತ್ರ). ನನಗೆ ಸಂತಾನವಿಲ್ಲ ಇದೇನಾಶ್ಚರ್ಯ ಹಾಲು ಬರುತ್ತಿದೆ ಎಂದು ದುಃಖಿತಳಾದಳು.

ತುಂಡರಿಸಿದ ಕುಂಬಳಕಾಯಿಂದ ತುಂಬಿನಲ್ಲಿ ದೊಡ್ಡಕ್ಕರಾಯಮ್ಮ, ೧ನೇ ಭಾಗಭಾನುಕೋಟಿರಾಜು, ೨ನೇ ಭಾಗ ತಿಪ್ಪಂಡರಾಜು, ೩ನೇ ಕಾಟಮಲೆರಾಜು, ೪ನೇ ಭಾಗ ಕೊಂಡಮಲೆ ರಾಜು, ೫ನೇ ಭಾಗ ಚೆನ್ನಪ್ಪರಾಜು, ೬ನೇ ಭಾಗ ಕಾಕಮಂಚಿರಾಜು, ೭ನೇ ಭಾಗ ಶೆಟ್ಲುಪಟ್ಟಪ್ಪರಾಜು ಜನಿಸಿದರು. ೭ ದಿನಗಳಿಗೆ ಮೊದಲು ಹುಟ್ಟಿದ ದೊಡ್ಡಕ್ಕೆ ರಾಯಮ್ಮ ೭ ಜನ ತಮ್ಮಂದಿರನ್ನು ಒಂದೇ ತೊಟ್ಟಿಲಿನಲ್ಲಿ ತೂಗುತ್ತಾ ಸಾಕಿ ಸಲಹುತ್ತಿದ್ದಳು. ಕಣ್ಣಾರೆ ಕಂಡ ಶುಕ್ಲಮಲಿರಾಜ, ದಾನಸಾಲಮ್ಮನವರು ಈ ಘಟನೆಯಿಂದ ಸತ್ಯಭಂಗವಾಯಿತೆಂದು ಮರಳಿ ಶುಕ್ಲಗಿರಿಗೆ ನಡೆದರು. ಆ ಪರ್ವತವು ಮಂದಗಿರಿ ಭೂಪಾಲನಾದ ಮಂದಕಾಮಗೇತಿರಾಜನಿಂದ ಅಲಂಕೃತಗೊಂಡಿತ್ತು. ಸೂರ್ಯನ ಕರುಣದಿಂದ ಉದ್ಭವಿಸಿದ ಶುಕ್ಲಮಲ್ಲಿರಾಜನನ್ನು ನೋಡಿದ ನಂದರಾಜನು ಕೃಷ್ಣನಾಮ ತೀರ್ಥದಿಂದ ಅವನಿಗೆ ನಮಸ್ಕರಿಸಿದನು. ಹಣೆಯಲ್ಲಿ ನಾಮವಿಟ್ಟುಕೊಂಡು ಶುಕ್ಲರಾಜನ ಪಾದವಿಡಿದು ನಮ್ಮಗಳಿಗೆ ನೀನು ಗುರುವಾಗೆಂದು ಬೇಡಿಕೊಂಡ. ಹೀಗಿರುವಾಗ ಪಾಲಗಿರಿ ಸಮುದ್ರ ಉಕ್ಕಿ ಶುಕ್ಲಗಿರಿ ಪರ್ವತವನ್ನು ಆವರಿಸಿ ಶುಕ್ಲ ಮಲ್ಲಿರಾಜು, ಮಂದರಾಜು ಇಬ್ಬರೂ ಮರಣ ಹೊಂದಿದರು.

ದೊಡ್ಡ (ಪೆದ್ದ) ಕ್ಕರಾಯಲದೇವಿ ತನ್ನ ೭ಜನ ತಮ್ಮಂದಿರನ್ನು ಬಂಗಾರು ರಾಜಕೋಟೆಯ ನೆಲಮಾಳಿಗೆಯಲ್ಲಿಟ್ಟುಕೊಂಡು ಸಾಕುತ್ತಿದ್ದಳು. ಮಂದಗಿರಿ ಸಂತತಿಗೆ ಸೇರಿದ ಗುಪ್ತ ಬೊಮ್ಮತ್ತರಾಜು, ಅವನ ವಂಶದಲ್ಲಿ ಜಡಲಬೊಮ್ಮತ್ತರಾಜು, ಮರಿಬೊಮ್ಮತ್ತರಾಜು, ಹೊಟ್ಟೆಬೊಮ್ಮತ್ತ ರಾಜು ಮತ್ತು ಬಂಗಾರಿ ಬೊಮ್ಮತ್ತರಾಜು, ಯರಪೋತು ಕರಿಬೊಮ್ಮ, ಇವರೆಲ್ಲರನ್ನು ಕರೆಸಿದ ದೊಡ್ಡಕ್ಕರಾಯಲದೇವಿ ಆನೆ – ಒಂಟೆಗಳನ್ನು ಹಿಡಿದುತಂದು, ದೊಡ್ಡ ಬಂಡೆ ಮೇಲೆ ಉಕ್ಕಿನ ಕಡಲೆಯನ್ನು ಬಿತ್ತಿಸಿ, ಅಫಸಲನ್ನು ಕಾಯಲು ಯರಿಪೋತು ಕರಿಬೊಮ್ಮನನ್ನು ನೇಮಿಸುವಳು. ಇವನಿಗೆ ದೇವಿಯ ಬೇವು ಭಂಡಾರದಿಂದ ೭೭ ಮಣ ಉಕ್ಕಿನ ಚಾಟಿಯನ್ನು ನಿರ್ಮಿಸಿ ಕೊಡುತ್ತಾಳೆ.

ಕರಿಬೊಮ್ಮನು ಚಾಟಿ ತೆಗೆದುಕೊಂಡು ಕಡಲೆ ಹೊಲಕ್ಕೆ ಹೋಗಲು ತುಂಬಾ ಗರ್ಭವಾದ ೭ ಸೂರ್ಯದೇವನ ಕುದುರೆಗಳು ಕಡಲೆಗಿಡಗಳನ್ನು ಮೇಯುತ್ತಿದ್ದವು. ಇವನು ತನ್ನ ಚಾಟಿಯಿಂದ ಹೊಡೆಯಲು ಅದು ಸಿಡಿಲಿನಂತೆ ಅಪ್ಪಳಿಸಿ ಶಬ್ದ ಕೇಳಿ ಬಂತು. ೭ ಕುದರೆಗಳು ಪಿಂಡಗಳನ್ನು ಅಲ್ಲೇ ಹಾಕಿ ಗಗನಮಾರ್ಗವಾಗಿ ಹೋದವು. ಅವುಗಳನ್ನು ತಂದು ದೊಡ್ಡಕ್ಕ ರಾಯಲದೇವಿಗೆ ಕೊಟ್ಟಾಗ ಅವುಗಳನ್ನು ರಕ್ಷಣೆ ಮಾಡಿದಳು. ಕ್ರಮೇಣ ೭ ಜನ ಭಾನುಕೋಟಿರಾಜು ೭ ದಿನಕ್ಕೆ ದೊಡ್ಡವಳಾದ ಅಕ್ಕರಾಯಲದೇವಿಯನ್ನು ಸಂದರ್ಶಿಸಿ

ತಮ್ಮ ಪೂರ್ವಚರಿತ್ರೆಗಳನ್ನು, ವಂಶಪರಂಪರೆಗಳ ವಿವರಗಳನ್ನು ಕೇಳಿಕೊಂಡರು. ಆಗ ಅವಳು ನಮ್ಮ ತಾತ ಸೂರ್ಯನು, ತಂದೆ ಶುಕ್ಲಮಲ್ಲಿರಾಜು, ತಾಯಿ ದಾನಸಾಲಮ್ಮ, ನಮ್ಮದು ಸೂರ್ಯ ಶುಕ್ಲಮಲ್ಲಿನಾಯ್ಕನ ಗೋತ್ರವೆಂದು ಹೇಳಿದಳು. ಭಾನುಕೋಟಿರಾಜರು ಸೂರ್ಯನ (ತಾತ) ಸಂದಿಸಲಿಕ್ಕೆ ಹೋಗುತ್ತೇವೆಂದಾಗ ಅಕ್ಕ ರಾಯಲಮ್ಮ ತಮ್ಮಂದಿರಾ ಹಿಂದೆ ಸೂರ್ಯನನ್ನು ಕಮಲಗಂದಿ ಪುಷ್ಪದೋಪಾದಿಯ ತಲೆಯಲ್ಲಿ ಮುಡಿಸಬೇಕೆಂದು ಜಟಂಗಿ, ಜಟಾಯು ಎಂಬ ಅಣ್ಣತಮ್ಮಂದಿರು ಗಗನ ಮಾರ್ಗವಾಗಿ ಹೋಗುವಾಗ ಸೂರ್ಯನ ಕಿರಣಗಳಿಗೆ ಸುಟ್ಟು ಬೂದಿಯಾಗಿ ಜಟಂಗಿ ಬೀಳಲು, ಜಟಾಯುವು ದೇಹವೆಲ್ಲ ಸುಟ್ಟು ಹೋದರೂ, ಮತ್ತೆ ಪ್ರಯತ್ನಿಸಿ ಶಾಪಕ್ಕೊಳಗಾದವು. ಜಟಾಯು ಕಿಷ್ಕಿಂಧೆ ಸರೋವರದಲ್ಲಿ ಬಿದ್ದು ಪ್ರಾಣಬಿಟ್ಟನು ಎಂದು ಹೇಳಿದಳು. ಭಾನುಕೋಟಿ ರಾಜರು ನಾವು ನಿಜವಾದ ಸೂರ್ಯನ ವಂಶದವರಾದ ರೆಸುಡುವುದಿಲ್ಲವೆಂದು ೭ ಕುದುರೆಗಳನ್ನೇರಿ ಹೋದರು. ಸೂರ್ಯನ ದರ್ಶನ ಸಿಕ್ಕು ನೀವಾರೆಂದು ವಿಚಾರಿಸಲು ಭಾನುಕೋಟಿ ರಾಜರು ನಿನ್ನ ರಭಸಕ್ಕೆ ಹುಟ್ಟಿದ ಮೊಮ್ಮಕ್ಕಳೆಂದು ಹೇಳುತ್ತಾರೆ. ಇವರ ಸತ್ಯ, ಪ್ರಮಾಣಿಕತೆ ಕಂಡ ಸೂರ್ಯದೇವನು ನೀವು ವಡೇಲು ಅಜ್ಜನವರು ಮತ್ತು ಸಪ್ತಷಿಗಳ ನಾಮವನ್ನು ಇಟ್ಟುಕೊಂಡು ಬಲಮುರಿ ಶಂಖು, ನಾಗಮುರಿಬೆತ್ತ, ಎತ್ತಿನ ಸುರಾಯಿ, ಮುತ್ತಿನ ಕಾಲುಪೆಂಡೆ, ಸೂರನಂದನ ಅಲಗು, ಧರ್ಮಗಿರಿ ಗದ್ದುಗೆ, ಭೂಚಕ್ರ ಗೊಡಗು, ಕೋರಿನಿಶಾನಿ, ಖಂಡುಗದ ಗಂಟೆ – ಇವಿಷ್ಟು ಗೌರವ ಬಿರುದುಗಳನ್ನು ಕೊಟ್ಟು ಭಾನುಕೋಟಿ ರಾಜರನ್ನು ಕಳುಹಿಸಿದ. ಬೂದಿಕೋಟೆಗೆ ಬಂದ ಅವರು ಅಲ್ಲಿ ಕಂಚಿನಕೋಟೆ, ರನ್ನದ ಗೋಪುರ ಕಟ್ಟಿ ಬಂಗಾರು ಭಾನುಕೋಟಿ ಎಂದು ಹೆಸರಿಟ್ಟು ನಗರವನ್ನಾಳುತ್ತಿದ್ದರು.

**ಯರಮಂಚಿನಾಯಕನ ಉದಯ**

ಭಾನುಕೋಟಿ ರಾಜನಿಗೆ ಯರಮಂಚಿನಾಯಕನು ಜನಿಸುವನು. ಕ್ರಮೇಣ ಇವನು ದೊಡ್ಡವನಾಗುತ್ತಲೆ ಅಂಭೋಜಿನಗರವನ್ನು ಸೇರಿ ಅಂಭೋಜಿರಾಯರಲ್ಲಿ ತ್ರಿಮೂರ್ತಿಗಳನ್ನು ನಿರ್ಮಾಣ ಮಾಡಿದ. ಒಂಟಿಕೊಂಬು ಬೆಲ್ಲಿ (ಬಲ್ಲಿ) ಆಕಳು ಪಂಪಾದ್ರಿ ಬಸವನನ್ನು ಶ್ರೀಕೃಷ್ಣನ ಪದವಿಯಿಂದ ಯರಮಂಚಿನಾಯಕನಿಗೆ ಕೊಟ್ಟಾಗ ಅದನ್ನು ಹೊಡೆದುಕೊಂಡು ಗೋಕರ್ಣಪರ್ವತಕ್ಕೆ ಬರುವನು. ಅಲ್ಲಿನ ಪಶುಪಾಲಕರಾದ ಕೆಂಗುರಿ ಗೊಲ್ಲರನ್ನು ತನ್ನ ಗೋತ್ರಕ್ಕೆ ಸೋರಿಸಿಕೊಂಡ. ಕೆಂಗುರಿ ಪದವಿಯನ್ನು ತೆಗೆದುಕೊಂಡು ಕರೇಪೂಜಾರ್ಲುಪುರಕ್ಕೆ (ಪೂಜಾರಹಳ್ಳಿ ಹಳೆಊರು) ಬಂದು ಮಂದಗಿರಿ ವೈಕುಂಠ ಶಂಕಿನಿಂದ ಹುಟ್ಟಿದ ತಾತಾಚಾರಿ – ತಿರುಮಲಾಚಾರಿ ಎಂಬ ಶರಣರನ್ನು ಭೇಟಿ ಮಾಡಿ ಕೆಲವು ಬಿರುದಾವಳಿಗಳನ್ನು ಪಡೆದು ಏಳುಮಳೇಲ್‌ಪುರವನ್ನು ಸೇರುವನು. ಅಲ್ಲಿ ಇಮ್ಮಡಿ ರಾಜು, ಮುಮ್ಮಡಿ ರಾಜರನ್ನು ಸೇರಿಸ ಮುಮ್ಮಡಿರಾಜನ ಮಗ ಮಳೇಲು ರಾಜನನ್ನು ಗೆದ್ವಾಲರಾಜ ಸೆರೆ ಹಿಡಿದಿದ್ದ. ಇವರೆಲ್ಲ ಸೇರಿ ಗೆದಗಿರಿಪುರಕ್ಕೆ ಹೋಗಿ ಗೆದ್ವಾಲ್‌ಪುರವನ್ನು ಜಯಿಸಿ, ಗೆದ್ವಾಲ್ ರಾಜನನ್ನು ಯರಮಂಚಿನಾಯಕ ಗೆದ್ದನು. ಕೆಲವು ಬಿರುದಾವಳಿಗಳನ್ನು ಪಡೆದು, ಆತನ ಮಗಳು ನನ್ನಮ್ಮನನ್ನು ಕರೆದುಕೊಂಡು, ಮಳೇಲು ರಾಜನನ್ನು ಬಿಡಿಸಿಕೊಂಡು ಬರುತ್ತಾರೆ. ಅಲ್ಲಿನ ಕಾಗೆ – ಗುಬ್ಬಿ, ಹದ್ದು – ಪಕ್ಷಿಗಳನ್ನು ಬಿಡದೆ ತರುತ್ತಿರುವಾಗ ಗೆದ್ವಾಲ್ ರಾಜನು ಯರಂಚಿಗೆ ಕೋರಿಕೊಂಡು ಅವುಗಳನ್ನು ಮರಳಿ ಪಡೆದುಕೊಂಡನು. ಅಲ್ಲಿಂದ ಶಾಂತಗಿರಿಗೆ ಬರಲು ಪರಶುರಾಮರಿಂದ ನಿರ್ಮಿತವಾದ ವೇದ ವ್ಯಾಸಮುನಿಯನ್ನು ಕೂಡ ಅಂಭೋಜಿ ಮಗಳು ಅಂಬ ಅಂಬಾಲಿಯರಿಗೆ ಸಂತಾನ ಪ್ರಾಪ್ತಿಸಿ, ಶಿವಗಂಗೆ ಮಾಳಮ್ಮಗೆ ಅಂಬೂವಾಸಿಯನ್ನು ಕೊದು, ಕಿಷ್ಕಿಂಧ ಪರ್ವತದಲ್ಲಿ ಕೃಷ್ಣನ ಶಾಪದಿಂದ ಕಿರಾತಕನಾದವನಿಗೆ ವಾಲ್ಮೀಕಿ ಪದವಿಯನ್ನು ಕೊಟ್ಟನು. ನಂತರ ಕಾಲನೇಮ ಪರ್ವತಕ್ಕೆ ಹೋಗಿ ಕಾಲಭೈರವ ಬೋರವನನ್ನು ನಿರ್ಮಾಣ ಮಾಡುತ್ತಾನೆ. ಇವೆಲ್ಲ ಕೆಲಸಗಳನ್ನು ಮುಗಿಸಿ ಬಂಗಾರುಭಾನು ಕೋಟೆಗೆ ಬರುವಾಗ ೩೦೦ ಸಾವಿರ ದೇವಕಂಪಳ ಕಲೆಸಿ ಭಾನುಕೋಟಿ ನಗರವನ್ನು ಆಳುತ್ತಿದ್ದನು. ಯರಮಂಚಿನಾಯಕ ಈ ಕಂಪಳಕ್ಕೆ ಬೋರವನೇ ದೇವರೆಂದು, ೩ ಮಂದಿ ಪೂಜಾರಿ, ೩ ಮಂದಿ ದಾಸಯ್ಯಗಳೆಂದು ನೇಮಿಸಿದನು.

**ಮ್ಯಾಸಮಂಡಳಿ ನಿರ್ಮಾಣ**

ನಾಯಕ ಜಾತಿಯನ್ನು ಸುಗಮವಾಗಿ ಬೆಳೆಸಲು ಎಲ್ಲರೂ ಐಕ್ಯವಾಗಿರಲು ಸನ್ನದ್ಧರಾದರು. ಯರಮಂಚಿನಾಯಕನು ಸತ್ಯ – ಶಾಪಗಳನ್ನು ಜನರಿಗೆ ತಿಳಿಸಲು ಮುನ್ನೂರು ಸಾವಿರ ದೇವಕಂಪಳಕ್ಕೆ ಮೇಸಮಂಡಲಿ ಎಂದು ನಾಮಕರಣ ಮಾಡಿದ. ಬಂಗಾರ ಭಾನುಕೋಟಿ ಪಟ್ಟಣ

ಬಿಟ್ಟು ಮೋಸ ಮಂಡಲಿಯನ್ನು ಕಲ್ಯಾಣಪುರಕ್ಕೆ ತಂದ ನಂತರ ನಿಡುಗಲ್ಲಿಗೆ ತಳವೂರಿದ. ನಿಡಗಲ್ಲಿನಲ್ಲಿ ೭ ಪುರಗಳನ್ನು ನಿರ್ಮಿಸಿ ಸತ್ಯ ಪ್ರಮಾಣಿಕತೆಯಿಂದ ಯರಮಂಚಿನಾಯಕನ ದಾಸನಾದ ಗಗ್ಗರಿದಾಸರಿ ಸತ್ಯದಿಂದ ಮೇಸ ಮಂಡಳಿಯನ್ನು ಆಳುತ್ತಿದ್ದ. ಕಾಲಾಂತರದಲ್ಲಿ ನಿಡಗಲ್ಲು ಅರಸನಾದ ಪಟ್ಟಳ್ಳಿನಾಯ್ಕನಿಗೆ ಮತ್ತು ಮೇಸ ಮಂಡಲಿಗೆ ಯುದ್ಧ ಜರುಗಿ ಯರಮಂಚಿನಾಯಕ, ಗಗ್ಗರಿದಾಸರಿಯನ್ನು ಅವನು ಪರೀಕ್ಷೆಗೊಳಪಡಿಸಿದನು. ನಿಮ್ಮ ಗಗ್ಗರಿದಾಸರಿಯನ್ನು ನಮ್ಮ ಮನೆಗೆ ಊಟಕ್ಕೆ ಕಳುಹಿಸಬೇಕೆಂದು ಯರಮಂಚಿಗೆ ಕೇಳಿಕೊಂಡರು. ದಾಸನು ಇನ್ನೊಬ್ಬರ ಮನೆಯಲ್ಲಿ ಊಟಮಾಡುವುದಿಲ್ಲ. ಬೇಕೆಂದರೆ ಲಂಕಣಿದೊಣಿಯ ಹತ್ತಿರ ಗಾರುಕುಣಿಗೆ ಅನ್ನವನ್ನು ನೀಡಿದರೆ ಕಳುಹಿಸುವೆ ಎಂದಾಗ ಪಟ್ಟಳ್ಳನಾಯ್ಕನು ಒಪ್ಪಿ ಅದನ್ನು ಮಾಡುತ್ತಾನೆ. ಕೋಳಿಸಾರು ಅನ್ನವನ್ನು ಗಾರುಕುಣಿಗೆ ಹಾಕಲು ಗಗ್ಗರಿದಾಸರಿ ಲಂಕನ ದೋಣಿಯಲ್ಲಿ ನಾಮತೀರ್ಥವನ್ನು ಮಾಡಿಬಂದು ಯರಮಂಚಿನಾಯಕನ ಧ್ಯಾನ ಮಾಡಲು ಕುಳಿತ. ಅನ್ನವನ್ನು ತಿನ್ನುವಾಗ ಕಣ್ಣುಗುಡ್ಡೆ ಜೋಲು ಬೀಳಲು ಅದನ್ನಿಡಿದು ಯರಮಂಚಿನಾಯಕನ ಹತ್ತಿರಕ್ಕೆ ಬಂದುಳಿಸುತ್ತಾನೆ. ಅದಕ್ಕೆ ಮೇಸಮಂಡಳಿಯವರು ಪಟ್ಟಳ್ಳನಾಯಕ್ಕನನ್ನು ಹಿಡಿದು ವಿಚಾರ ಮಾಡುವಾಗ ತಪ್ಪನ್ನು ಒಪ್ಪಿಕೊಂಡನು. ಅವರಿಗೆ ಭಂಗ ತರುವ ಪ್ರಯತ್ನ ಇದಾಗಿದ್ದಿತು. ಒಪ್ಪಿಕೊಂಡಂತೆ ಆ ನಾಯಕ ಯರಮಂಚಿಗೆ ೩ ಸೇರು ಬಂಗಾರ ಮಲ್ಲಿಗೆ ಹೂ, ೩ ಸೇರು ಬೆಳ್ಳಿ ಮಲ್ಲಿಗೆ ಹೂ ಕಪ್ಪ – ಕಾಣಿಗೆ ಕೊಟ್ಟು ಹೋಗುವನು. ಯರಮಂಚಿನಾಯಕ ಅಂಗೈಯಲ್ಲಿ ಮಲ್ಲಿಗೆ ಹೂಗಳನ್ನು ಹಿಡಿದು ಗಗ್ಗರಿದಾಸರಿ ಕಣ್ಣು – ಗುಡ್ಡೆಗಳಿಗೆ ಹಾಕಿ ಒತ್ತಿದಾಗ ಮೊದಲಿನಂತೆ ಆದವು. ಗಗ್ಗರಿದಾಸರಿಗೆ ಯರಮಂಚಿನಾಯಕನು 'ಗುಡ್ಡಬೋರ'ನೆಂದು ಹೆಸರಿಟ್ಟ. ತನ್ನ ಮೇಸ ಮಂಡಳಿಯನ್ನು ಕರೆದುಕೊಂಡು ಹೋಗಿ ಪಟ್ಟಳ್ಳನಾಯ್ಕನ ೧೨ ಜಲಿಗೆ ಎಮ್ಮೆಗಳನ್ನು ಹೊಡೆದುಕೊಂಡು ಬಂದರು. ಮೇಸ ಮಂಡಳಿಯವರು ಎಮ್ಮೆಗಳನ್ನು ಕೊಯ್ದು ಮಡಿಕೆಯಲ್ಲಿ ಬೇಯಿಸಲು ಪಟ್ಟಳ್ಳನಾಯ್ಕನು ದಂಡುದಳವನ್ನು ತೆಗೆದುಕೊಂಡು ಗಗ್ಗರಿದಾಸರಿ ನನ್ನ ಎಮ್ಮೆಗಳನ್ನು ಏಕೆ ಕೊಯ್ದನೆಂದು ವಿಚಾರಿಸಲು, ದಾಸರಿ ಒಪ್ಪಿಕೊಳ್ಳಲಿಲ್ಲ. ನಿನ್ನ ಎಮ್ಮೆಗಳನ್ನು ಕದ್ದಿಲ್ಲ. ವದ್ದಿನಕುಂಟೆ, ದದ್ದೇನಹಳ್ಳಿ, ರಂಗಸಮುದ್ರಗಳಲ್ಲಿ ಹೋಗಿ ರತರ ಬಳಿ ಕುಂಬಳಕಾಯಿ ತಂದು ಕುದಿಯಲು ಇಟ್ಟಿರುವೆವು ಎನ್ನುತ್ತಾನೆ. ಪಟ್ಟಳ್ಳನಾಯಕ ಒಪ್ಪದೆ ಹೋಗಿ ನೋಡಿದಾಗ ಕುಂಬಳ ತೊಳ (ವಪ್ಪು) ಹೊಳೆಯುತ್ತಿದ್ದವು ಆ ಪಾತ್ರೆಯಲ್ಲಿ. ಎಮ್ಮೆಗಳನ್ನು ಸಾಯಿಸಿಲ್ಲವೆಂದು ಪಟ್ಟಳ್ಳನಾಯಕನ ಮಾತು ಸುಳ್ಳಾಯಿತು.

**ಗಾದರಿಪಾಲನಾಯಕನ ತಾಣಕ್ಕೆ ಪ್ರಯಾಣ**

ಯರಮಂಚಿನಾಯಕನು ಕಾಲಕಳೆದಂತೆ ಮೇಸಮಂಡಳಿಯನ್ನು ತೆಗೆದುಕೊಂಡು ಮುಂಡೆ ಬಂಡೆಗೆ ಹೋಗುವನು. ಇಲ್ಲಿ ವಾಸಮಾಡುತ್ತಿರುವಾಗ ಇತರರ ಪರಿಚಯವು ಆಯಿತು. ಚಿತ್ತಯ್ಯ, ಕಾಟಯ್ಯ, ಗಾದರಿಪಾಲನಾಯಕರು ಪಶುಗಳನ್ನು ಮೇವು ನೀರಿಗಾಗಿ ಹೊಡೆದುಕೊಂಡು ಸೆಟ್ಟೂರು ಕಾವಲಿಗೆ ಬಂದಿದ್ದರು. ರೊಪ್ಪ ಕಟ್ಟಿಕೊಂಡು ಜೀವನ ಮಾಡುವಾಗ ಒಂದು ದಿನ ಗಾದರಿಪಾಲನಾಯಕನನ್ನು ಚಿತ್ತಯ್ಯ – ಕಾಟಯ್ಯ, ನೀನು ಹಾಲು ಮೊಸರನ್ನು ಮಾಡಿಕೊಂಡು ಬಾ ಎಂದು ಆಕಳುಗಳನ್ನು ಮೇಯಿಸಲಿಕ್ಕೆ ಹೊಡೆದುಕೊಂಡು ಹೋದರು. ರೊಪ್ಪದಲ್ಲಿ ಗಾದರಿಪಾಲನಾಯಕನಿದ್ದನು. ಆ ಕಾವಲಿನೊಳಗೆ ಹೆಣ್ಣು – ಗಂಡು ಹುಲಿಗಳು ಮರಿಗಳನ್ನು ಕರೆದುಕೊಂಡು ರೊಪ್ಪಕ್ಕೆ ಬರುತ್ತವೆ. ಅಲ್ಲಿದ್ದ ಗಾದರಿಪಾಲನಾಯಕ ಅವುಗಳಿಗೆ ಶರಣಾಗಿ ನಮ್ಮ ದನಕರುಗಳನ್ನು ಬೇಟೆಯಾಡಬೇಡಿರೆಂದು ಕೇಳಿಕೊಂಡ. ಹುಲಿ ದಂಪತಿಗಳು ಸಹ ಪರಸ್ಪರ ಚರ್ಚಿಸಿ ಅವನೊಂದಿಗೆ ಪ್ರಮಾಣವನ್ನು ಮಾಡುತ್ತವೆ. ಹುಲಿಮರಿಗಳನ್ನು ಇವನ ರೊಪ್ಪಕ್ಕೆ ಬಿಟ್ಟು ಹುಲಿಗಳು ಹೊರಟುಹೋದವು. ಗಾದರಿಪಾಲ ನಾಯಕನು ಹುಲಿಮರಿಗಳನ್ನು ರೊಪ್ಪದಲ್ಲಿ ಬಿಟ್ಟು ಹಾಲು ಮೊಸರನ್ನು ತೆಗೆದುಕೊಂಡು ಸೆಟ್ಟೂರಿಗೆ ಹೋಗುವನು. ಸೆಟ್ಟೂರಿನಲ್ಲಿ ಸೊಟ್ಟಪ್ಪನ ಮಗಳು ಕಾಮವ್ವ – ಎಂಬಾಕೆಯು ಇವನನ್ನು ಮೋಹಿಸಿ ಅಲ್ಲೆ ಉಳಿಯಲು ಅವನಿಗೆ ತಿಳಿಸಿದಳು. ಹುಲಿಮರಿಗಳನ್ನು ಮರೆತ ನಾಯಕ ರಾತ್ರಿ ಅಲ್ಲಿ ತಂಗಿದ್ದು, ಇತ್ತ ತಿಳಿಯಲಿಲ್ಲ. ಚಿತ್ತಯ್ಯ, ಕಾಟಯ್ಯ ಆಕಳುಗಳನ್ನು ಒಡೆದುಕೊಂಡು ರೊಪ್ಪಕ್ಕೆ ಬಂದಾಗ ಆಶ್ಚರ್ಯ ಕಾದಿತ್ತು. ರೊಪ್ಪದಲ್ಲಿದ್ದ ಹುಲಿ – ಮರಿಗಳನ್ನು ನೋಡಿ ಚಿಪ್ಪುಗೊಡ್ಡಲಿಯಿಂದ ಅವುಗಳನ್ನು ತುಂಡರಿಸಿದರು. ಮರುದಿನ ಗಾದರಿಪಾಲನಾಯಕ ಕಾಮವ್ವನನ್ನು ಕರೆದುಕೊಂಡು ರೊಪ್ಪಕ್ಕೆ ಬಂದು ಹುಲಿಮರಿಗಳನ್ನು ನೋಡಿದರೆ ಸತ್ತು ಬಿದ್ದಿದ್ದವು. ಹುಲಿಗಳಿಗೆ ಪ್ರಯಾಣ ಮಾಡಿದ್ದೆ ಎಂಥ ವಿಘ್ನವಾಯಿತೆಂದು ಕೊರಗುವನು.

ಈ ಸಂಗತಿ ಹುಲಿಗಳ ಕಿವಿಗೆ ಬಿದ್ದರೆ ನಮ್ಮನ್ನು ಉಳಿಸುವುದಿಲ್ಲ. ಬೇಗ ಬೇಗೆ ದನಕರುಗಳನ್ನು ಹೊಡೆದುಕೊಂಡು ಮೂರುಮಂದಿ ಕೂಡಿ ಪಲಾಯನಗೊಂಡು ರತ್ನಗಿರಿಗೆ ಬಂದರು. ರತ್ನಗಿರಿಯಲ್ಲಿ ಯರಮಂಚಿನಾಯಕ ಮೇಸ ಮಂಡಲಿ ಸಮ್ಮುಖದಲ್ಲಿ ನಡೆದ ಪ್ರಸಂಗವನ್ನು ವಿವರಿಸಿದರು. ಎಲ್ಲರೂ ಸೇರಿ ಬೋರವನ ನೇಮ (ಪೂಜೆ) ಮಾಡಲು ಒಪ್ಪಿದರು. ಗಾದರಿಗೆ ಸ್ವಪ್ನದಲ್ಲಿ ಹುಲಿಗಳು ಬಂದು ಮೇಸಮಂಡಲಿಯಿಂದ ಅಗಲಿಸಿ ಪಡವಲ ದಿಕಕಿಗೆ ಹುಲಿಗಳು ಬೆನ್ನತ್ತಿ ಹೋಗುತ್ತಿದ್ದವು. ಯರಮಂಚಿನಾಯಕ ಮೇಸಮಂಡಳಿಯನ್ನು ಕರೆದುಕೊಂಡು ಪೆನ್ನೋಬಳಿ, ಅಹೋಬಳಿ, ಬುಗ್ಗೋಬಳಿಗಳಲ್ಲಿ ಸಂಚರಿಸಿ ಕಾಟಂರಾಜನ ಕೋಟೆಗೆ ಬರುತ್ತಾನೆ.[2] ನಂತರ ರೇಣುಕಾಪುರಿ, ಬೂದಿಕೋಟೆ ಸಮೀಪ ಗೋಸಲಹೊಳೆ (ವೇದಾವತಿ) ಯಲ್ಲಿ ಸ್ನಾನ ಮಾಡಿದರು. ನಮ್ಮಲ್ಲಿ ಮ್ಯಾಸ ಮಂಡಲಿಯನ್ನು ಯಾರೊಬ್ಬರು ಹಿಂದುರುಗಿ ಹೊಳೆದಾಟಿ ಹೋದವರು ಏಳೂಗಡಿ ದಾಟಿದಂಗೆ ಎಂದು, ನಮ್ಮ ಮಂಡಲಿಗೆ ಕೊಲ್ಲಿಪಾಯಕ್ಕೆ ಸಂಬಂಧವಿಲ್ಲವೆಂದು ಆ ಹೊಳೆಯಲ್ಲಿ ಶಾಸನ ಬರೆಸಿದರು. ಲಿಂಗ ಮುದ್ರಿಕೆ ಮಾಡಿ ಬುಕ್ಕಾಂಬುದಿ, ಐಯೋದಿ ಸಿದ್ದಿಹಳ್ಳಿಪುರವನ್ನು ಯರಮಂಚಿನಾಯಕ ಕಟ್ಟಿಸಿ, ಅದಕ್ಕೆ ನೂರ ಒಂದು ಕೋಟೆ ಕಟ್ಟಿಸಿ ಬಂಗಾರದ ಕಳಸ ಸಾಲುಗೋಪುರಗಳನ್ನು ನಿರ್ಮಿಸುವುದಲ್ಲದೆ, ತನ್ನ ಪುರದ ಮಂದಲವಾರು ೯ ಅಜ್ಜನ ಕಾಮಗೇತಿಯನ್ನು ನೇಮಿಸಿ ಕಾಮಗೇತಿಯವರು ಬೆಂಕಿಮಿಡಿಗರ ಕೋಟೆಯನ್ನು ನಿರ್ಮಿಸಿದರು. ೯ ಸುತ್ತಿನ ಕೋಟೆಯೊಳಗೆ ೧೨ ಪೆಟ್ಟಿಗೆ ಮಂದಬೊಮ್ಮದೇವರು ಮಲ್ಲಿನಾಯಕ್ಕನ ಬೊಮ್ಮದೇವರು ೧೦೧ ಮಲ್ಲಿನಾಯ್ಕನವರು, ಕೋಟೆ ಒಂದು ಮಂದಲೋರು, ಕುಲಪಂಗಡವನ್ನು ೯ ಅಜ್ಜನವರು ನೇತೃತ್ವವಹಿಸಿದ್ದರು. ದೇವಕಂಪಳಕ್ಕೆ ೧೨ ಪೆಟ್ಟಿಗೆ ಸ್ಥಾಪನೆಮಾಡುವಾಗ ನರಕಾರಾಜನು ೯ ಅಜ್ಜರನ್ನು ೧೨ ಪೆಟ್ಟಿಗೆಗಳನ್ನು ಸೆರೆಹಿಡಿದಿದ್ದ. ಬೆಂಕಿಮಿಡಿಗರಕೋಟೆ ಸುತ್ತಲು ರನ್ನದ ಚಿನ್ನದ ಕೋಟೆ, ಕಂಚಿನಕೋಟೆ, ಉಕ್ಕಿನ ಕೋಟೆ ಎಂಬ ೬ ಕೋಟೆಗಳನ್ನು ಕಟ್ಟಿದ ನಂತರ ನರಕದ ಕೋಟೆ ಮುಚ್ಚಿದ್ದರು.

**ಅಜ್ಜನವರನ್ನು ಸೆರೆಹಿಡಿದುದು ಮತ್ತು ಬಂಧನದಿಂದ ಬಿಡುಗಡೆಗೊಳಿಸಿದ್ದು**


ಮೇಸಮಂಡಲಿಯ ೯ ಅಜ್ಜನವರು ಬರಲಿಲ್ಲವೆಂದು ಯರಮಂಚಿನಾಯಕನು ನರಕಾರಾಜನು ಸೆರೆ ಹಿಡಿದ ಸಂಗತಿ ತಿಳಿದುಕೊಂಡ. ನರಕಾಕೋಟೆಯನ್ನು ನೋಡಿ ಹಿಂದಕ್ಕೆ ಅಭೇದ್ಯವಾದುದರಿಂದ ಸುಲಭ ಸಾಧನೆಯಲ್ಲವೆಂದು ಡಂಗೂರ ಸಾರಿಸಿದ. ದೇವ ಕಂಪಳದಲ್ಲಿ ಯಾರೇ ಆದರೂ ಸರಿ ೯ ಅಜ್ಜನವರನ್ನು ೧೨ ಪೆಟ್ಟಿಗೆ ದೇವರುಗಳನ್ನು ಬಿಡಿಸಿಕೊಂಡು ತಂದವರಿಗೆ ಮೊದಲು ಹುಟ್ಟಿದ ಹೋರಿ, ಹೋತ, ಬೆಣ್ಣೆಮುದೆಗಳನ್ನು ಬಹುಮಾನ ಕೊಡುವುದಾಗಿ ಹೇಳಿದರು. ಯರಿಪೋತು ಕರಿಬೊಮ್ಮನ ವಂಶಕ್ಕೆ ಸೇರಿದ ಕೊಡಗು ಬೊಮ್ಮನು ವೀಳ್ಯೆವು ಹಿಡಿಯುತ್ತಾನೆ. ಅಪ್ರತಿಮ ಶಕ್ತಿಶಾಲಿಯಾಗಿದ್ದ ಬೊಮ್ಮನು ವರಾಹಾವತಾರದಿಂದ ನರಕವೆಲ್ಲ ಸುತ್ತಾಡಿ ಅಲ್ಲೋಲ – ಕಲ್ಲೋಲಮಾಡುವ ನಿಟ್ಟಿನಲ್ಲಿ ನರಕಾರಾಜನನ್ನು ಸಂಹರಿಸಿ ೯ ಅಜ್ಜನವರನ್ನು ಬಿಡಿಸಿಕೊಂಡು, ೧೨ ಪೆಟ್ಟಿಗೆಗಳನ್ನು ತಂದು ಯರಮಂಚಿನಾಯಕನಿಗೆ ಒಪ್ಪಿಸಿ ಕೀರ್ತಿಶಾಲಿಯಾದನು.

**ಕೊಡಗುಬೊಮ್ಮನ ದುರಾಡಳಿತದ ವಿರುದ್ಧ ಪ್ರತಿಭಟನೆ**

ಮೇಸಮಂಡಲಿಯವರು ಷರತ್ತಿನಂತೆ ಕೊಡುತ್ತಾ ಬಂದಿರುವ ಬಹುಮಾನವನ್ನು ಕಾಲಾಂತರದಲ್ಲಿ ನಿಲ್ಲಿಸಿದರು. ಇದರಿಂದ ಕೆಂಡಕಾರಿದ ಕೊಡಗುಬೊಮ್ಮನಿಗೆ ವಿದಾಯ ಹೇಳಿ ಅವನಿಗೆ ತೆರಿಗೆ ಕೊಡದೆ ರಾತ್ರೋರಾತ್ರಿ ಪಲಾಯನಮಾಡಿದರು. ಮೇಸಮಂಡಲಿ ಯರಮಂಚಿನಾಯಕ ರಾತ್ರಿಯಲ್ಲಿ ಹಟ್ಟಿಗಳನ್ನು ಕಿತ್ತುಕೊಂಡು ತನ್ನ ಪರಿವಾರವನ್ನು ರೇಕು (ಪುಲ) ಲಕುಂಟೆ, ಬೆಣ್ಣೆಮುದ್ದೇನಹಳ್ಳಿ, ಮಾಪೇನಹಳ್ಳಿ, ರೇಪೋನಹಳ್ಳಿಗಳಲ್ಲಿ ನೆಲಸುತ್ತಾ ಸಾಗಿದರು. ಯರಮಂಚಿನಾಯಕ ೧೨ ಪೆಟ್ಟಿಗೆಗೆ ಪಾಡ್ಯಮಾಡಬೇಕೆಂದು ೧೦೦೦ ಧಗಮು (ನಗಾರಿ) ಗಳನ್ನು ಕಟ್ಟಿಸಿ ದೇವರನ್ನು ಮಾಡುವ ಕಾಲದಲ್ಲಿ ಈ ಸಂಗತಿ ಕೊಡಗುಬೊಮ್ಮನಿಗೆ ತಿಳಿಯುತ್ತದೆ. ಬೊಮ್ಮ ಬಂದು ೧೦೦೦ ಧಗಮುಗಳನ್ನು ಹರಿದುಹೋಗುವಂತೆ ಒಡೆದು ಉಪದ್ರ ಕೊಡವನು. ಯರಮಂಚಿನಾಯಕ ಮೇಸಮಂಡಳಿಯನ್ನು ಯರಗುಂಟೆಗೆ (ಆಂಧ್ರ) ಸಾಗಿಸುತ್ತಾನೆ. ಕೊಡಗುಬೊಮ್ಮನು ಅಲ್ಲಿಗೂ ಬೆನ್ನತ್ತಿ ಅವರನ್ನು ಸೆರೆಹಿಡಿದು ತೆರಿಗೆ ವಸೂಲಿ ಮಾಡುವನು. ಯರಮಂಚಿನಾಯ್ಕತನ ಬಳಿಯಿದ್ದ ಮುಚ್ಚು ಕೊಳಗಗಳನ್ನು ಕೊಟ್ಟು 'ಮುಚ್ಚಲಗುಮ್ಮಿ' ಎಂದು ಹೆಸರಿಟ್ಟನು. ಮುಂದೆ ಹೋಗುವಾಗ

ಮಹದೇವಪುರ, ಬಾಗೇನಾಳುಪರಗಳಲ್ಲಿ ಕಕ್ಕಲುಬೆಂಚ ಪಾಢ್ಯ (ಪರವು) ಮಾಡಬೇಕಾದರೆ ೯ ಅಜ್ಜ ಕಾಮಗೇತಿ ಮದಕರಿ ಭೂಪಾಲನನ್ನು ಕಗ್ಗಲ್ಲೂ ಕಾಮಗೇತಿ ಎಂದು ಗೋತ್ರವನ್ನು ಗೊತ್ತುಪಡಿಸಿದರು. ನಂತರ ತಮ್ಮಟ ಕಲ್ಲಿಗೆ ಬಂದು ಯರಗುಂಟನಾಯಕನು ತಮ್ಮ ನಾಯ್ಕನ ಓಬವ್ವನನ್ನು ಮೋಹಿಸಿ ಓಬಳಗುಡ್ಡಕ್ಕೆ ಬಂದು ಅಲ್ಲಿ ಚಿತ್ತಯ್ಯ – ಕಾಟಯ್ಯ ಜನಿಗಿಯ ಹಾಲನ್ನು ಕರೆದು ಆನೆಮೇಲೆ ಹಾಲು – ಮೊಸರನ್ನು ಹೇರಿಕೊಂಡು ಯರಮಂಚಿನಾಯ್ಕನ ಹತ್ತಿರಬಂದರು. ಹೀಗೆ ಬರುವಾಗ ಜಾರಿಬಿದ್ದು ಹಾಲು ಮೊಸರು ಹಳ್ಳವಾಗಿ ಹರಿಯಿತು. ಹರಿದ ಹಳ್ಳಕ್ಕೆ ಜನಿಗಿಹಳ್ಳವೆಂದು ಶಾಸನ ಬರೆಸಿದರು. ಮೇಸಮಂಡಲಿಯನ್ನು ಯರಮಂಚಿನಾಯಕ ಗೌರೀಪುರದ ಹತ್ತಿರ ಬೃಹತ್ ಗಾತ್ರದ ಬೇವಿನಮರದ ಸಮೀಪ ಚಿಂತಕುಂಟ್ಲುಬೋರವನನ್ನು ನಿರ್ಮಾಣ ಮಾಡಿದರು. ನಮ್ಮ ದೇವರ ಹತ್ತಿರ ಸತ್ಯವಿದ್ದರೆ ನಾಳೆ ಸೂರ್ಯ ಹುಟ್ಟುವುದರೊಳಗೆ ಹಸೀಮರವು ಒಣಗಬೇಕೆಂದು ಕೈಮುಗಿಯಲು ಹಾಗೆಯೇ ಒಣಗಿಹೋಯಿತು. ಚಿಗುರಬೇಕೆಂದು ಕೋರಿಕೊಡಂತೆ ಸೂರ್ಯ ಹುಟ್ಟುವುದರೊಳಗೆ ಒಣಗಿದ ಮರವು ಚಿಗುರಿತು. ವೈಜ್ಞಾನಿಕವಾಗಿಯು ಇದನ್ನು ನಂಬಲು ಸಾಧ್ಯವೆಂದರೆ ಸುಟ್ಟ ಮರಕ್ಕೆ ನೀರು ಗೊಬ್ಬರ ಹಾಕಿದರೆ ಚಿಗುರುವುದು ಸಹಜ. ಒಂದೇ ದಿನದಲ್ಲಿ ಆಗುವುದು ಪವಾಡವೇ ಸರಿ!

ಯರಮಂಚಿನಾಯಕ ಮೇಸಮಂಡಲಿ ಅಜ್ಜನವರಿಗೆ ಕೈಮುಗಿದು ತಾತಾ ನಿನ್ನ ಸತ್ಯದಂತೆ ವಾರದೊಳಗೆ ಕೊಡಗುಬೊಮ್ಮನು ಸತ್ತರೆ ನಿನಗೆ ಒಂದು ಕಾಯಿ ಏಳು ಗುಂಡಿಗೆ ಹೊಡೆಸಿ ಒಂದೇ ಹೋತನ್ನು ಏಳು ಭಾಗವಾಗಿ ಕತ್ತರಿಸಿ ೧೦೧ ದೀಪಗಳನ್ನು ಹಚ್ಚಿ ಶುಕ್ಲಪರ್ವತಕ್ಕೆ ಕೈಮುಗಿದು ತಮ್ಮ ತಮ್ಮ ಹಟ್ಟಿಗಳಿಗೆ ತೆರಳಿದರು. ನಾಯಕನ ಕೋರಿಕೆಯಂತೆ ಭೋರವನ ಶಾಪದಿಂದ ಕೊಡಗುಬೊಮ್ಮನು ಮರಣಹೊಂದಿದನು. ವಿಷಯ ತಿಳಿದ ಸೂರಪ್ಪನಾಯಕ, ಚಿನ್ನಪಲ್ಲಿನಾಯಕ, ಕಸ್ತೂರಿರಂಗಪ್ಪನಾಯಕ, ದಳಪತಿ ಕಾಮಗೇತಿಯನ್ನು ಕರೆಯಿಸಿದರು. ಇವರೆಲ್ಲ ಸೇರಿ ನಮ್ಮಲ್ಲಿ ಸತ್ಯ ಇದೆಯೋ ಅಥವಾ ಯರಮಂಚಿ ನಾಯಕನಲ್ಲಿರುವುದೋ ಪರೀಕ್ಷಿಸಬೇಕೆಂದು ದೊಡ್ಡಶನಿವಾರದಂದು ಬೋರವನನ್ನು ಮಾಡಲು ತೀರ್ಮಾನಿಸುವರು. ಅದರಂತೆ ಯರಮಂಚಿಗೆ ಸುಳ್ಳು ಹೇಳಿಬಾ ಎಂದು ಕಾಮಗೇತಿಯನ್ನು ಅವನ ಹತ್ತಿರ ಕಳುಹಿಸುವರು. ಅವನು ಯರಮಂಚಿ ನಾಯಕನಿಗೆ ನಾಳೆ ಶನಿವಾರ ಮೇಸ ಮಂಡಲಿಯವರು ಚಿಂತಗುಂಟ್ಲುನಲ್ಲಿ ಪಾಡ್ಯ ಮಾಡುತ್ತಾರೆಂದು ತಿಳಿಸಿದ ವಾಸೆ ಕೊಯ್ದು ಪಾಡ್ಯ ಎತ್ತಲು ಹೋಮವು ತೀರಲಿಲ್ಲವಾದ್ದರಿಂದ ೩ ಮಂದಿ ನಾಯಕರು ಮೇಸ ಮಂಡಲಿಯನ್ನು ಕಾಮಗೇತಿ ನಿಮ್ಮಲ್ಲಿ ಸತ್ಯವಿಲ್ಲವೆಂದು ಮತ್ತು ದೊರೆಗಳಲ್ಲಿ ಸತ್ಯವಂತ ಮೂಲಪುರುಷ ಯರಮಂಚಿನಾಯಕನನ್ನು ಕರೆದುಬರಲು ಕಾಮಗೇತಿ ನಡೆದ ಪ್ರಸಂಗ ಎಲ್ಲರಿಗೂ ತಿಳಿಯಿತು. ೩ ಮಂದಿ ನಾಯಕರು, ಮೇಸ ಮಂಡಲಿ ಪಂಗಡ ಪಂಗಡವಾಗಿ ದಿಕ್ಕಪಾಲಾಗಿ ಓಡಿಹೋದರು. ಬುಲ್ಲುಡ್ಲುವನು ಬಂಗಾರದೇವರನ್ನು ತೀಟುಕಲ್ಲಿಗೆ ತೆಗೆದುಕೊಂಡು ಹೋದನು. ಕುಂಡರ್ಲುವನು ಓಬಳದೇವರನ್ನು ಶಿರಿವಾಳಕ್ಕೆ, ಕಂಚೋಬಳ ದೇವರನ್ನು ಮಳೆಲುಭೂಪನು ವರಮಾಲಿಗೆ (ಜರಿಮಾಲೆ) ಉಳಿದ ದೇವಗಂಪಳ ಚದುರಿಹೋಯಿತು. ಯರಮಂಚಿನಾಯಕನನ್ನು ಕಾಮಗೇತಿ ಕರೆದುಕೊಂಡು ಬರುವಷ್ಟರಲ್ಲಿ ಕುಲಜಾತಿಯ ಹತ್ತು ಹಲವು ಪಂಗಡಗಳಾಗಿ ಚೆಲ್ಲಾ – ಪಿಲ್ಲಿಯಾಗಿದ್ದಿತು.


ಗುಂಡುಬೋರವ ಚಿಂತಗುಂಟ್ಲ ಬೋರೆದೇವರು ಕುದಾಪುರ


ಚಿಂತಗುಂಟ್ಲ ಬೋರೆದೇವರ ದೇವಾಲಯ, ಕುದಾಪುರ

**ಜಾತೀಯ ಪುನರ್‌ಸಂಘಟನೆ**

ಯರಮಂಚಿನಾಯಕನು ಕುಲವೆಲ್ಲ ಚೆಲ್ಲಾಪಿಲ್ಲಿಯಾಗಿದ್ದು ಕಂಡು ಮಮ್ಮಲ ಮರುಗಿದನು. ಅತೀವ ದುಃಖಿತನಾಗಿ ಭೋರವನ (ಗೆ) ಹತ್ತಿರ ಶಪಥ ಮಾಡುವುದರೊಂದಿಗೆ ತನ್ನ ವಂಶಪರಂಪರೆಯಾಗಿ ಕಾಯಿ ಒಡೆಸುವುದಿಲ್ಲವೆಂದು, ಕೈಯೆತ್ತಿ ಮುಗಿಯುವುದಿಲ್ಲ ಎಂದು ತನ್ನ ಹಟ್ಟಿಗೆ ಮರಳಿದ. ಏಳು ಗುಂಡುಗಳನ್ನು ಹಾಕಿಸಿ ಒಂದೇ ಕಾಯಿ ಏಳು ಗುಂಡಿಗೆ ಹೊಡೆಯಿಸಿ ಹೆತ್ತ ಮಗನನ್ನೇ ಏಳು ವಾಸಿಗಳನ್ನಾಗಿ ಕೊಯ್ಯುತ್ತಾನೆ ನಾಯಕ. ನಂತರ ಕಾಮಗೇತಿ ಗುಡ್ಡುಬೋರನನ್ನು ೧೦೧ ದೀಪಗಳನ್ನು ಹಚ್ಚಿಶುಕ್ಲು ಪರ್ವತ್ಕೆ ಹೋಗಿ ತಿಪ್ಪಯ್ಯನಕೋಟೆ ಹತ್ತಿರ ಕೈಮುಗಿದು ಹಿಂದುರಿಗಿ ಬರುವಷ್ಟರಲ್ಲಿ ಮ್ಯಾಸಮಂಡಲಿ ತೀವ್ರ ಸಂಘಟನೆಗೊಂಡ ಜಾಮಾಯಿಸಿತ್ತು.

ಈ ಎಲ್ಲಾ ಘಟನೆಗಳ ನಡುವೆ ಯರಮಂಚಿನಾಯಕ ಮತ್ತು ಗುಡ್ಜುಬೋರ ಸೇರಿ ಮಿಂಚೇರಿಗೆ ನಡೆದು ಗಾದರಿಪಾಲನಾಯಕನನ್ನು ಸ್ಥಾಪನೆಮಾಡಿದರು. ಮುಂದುವರೆದು ಜಗಲೂರಿಗೆ ಬಂದು ಪಾಪನಾಯಕ ಮಹಾತ್ಮನನ್ನು ಸ್ಥಾಪಿಸಿ, ದೇಗುಲಗಳನ್ನು ನಿರ್ಮಾಣ ಮಾಡಲು ಸೂಚಿಸಿದರು. ತರುವಾಯ ಆನೆಗುಂದಿಗೆ ತೆರಳಿ ತುಂಗಭದ್ರ ನದಿಯಲ್ಲಿ ಸ್ನಾನ ಮಾಡಿ ತಿರುಮಲದೇವರನ್ನು ಪೂಜಿಸಿದರು. ಅಲ್ಲಿ ಯರಗೊಡ್ಲು ಮೀಸಲಿಗೆ ಒಲಿದು ದೇವರು ಇವನ ಹಿಂದೆ ಬರುತ್ತಿತ್ತು. ಅಲ್ಲಿಂದ ಹುಳಿಯಾಳಿಗೆ (ಕೂಡ್ಲಿಗಿ ತಾ) ಮುಂದೆ ಕಂಪಳದೇವರಹಟ್ಟಿ ನಂತರ ಬಂಜಗೇರಿಗೆ ಬರಲು ಪ್ರಯತ್ನಿಸಿದರು. ಆನೆಗುಂದಿ ರಾಜರು ದೇವರಿಲ್ಲದ ಸುದ್ದಿ ತಿಳಿದು ಪೂಜಾರಿಯಿಂದ ಕೇಳಿ ಹಿಂದೆ ಹಿಂದೆ ದಂಡೆತ್ತಿ ಬಂಜಗೆರೆಗೆ ಬರುತ್ತಾರೆ. ಯರಮಂಚಿನಾಯಕ ಆ ದಂಡನ್ನು ನೋಡಿ ಕೆರೆಕೋಡಿಯಲ್ಲಿ ದೊಡ್ಡ ಮನೆಯವರು ಊಟಮಾಡುವ ಪಂಕ್ತಿಯಲ್ಲಿ ಸೇರಿಕೊಂಡ. ಆನೆಗುಂದಿ ರಾಜರು ಹಿಂದುರುಗಿ ಹೋಗಲು ಯರಮಂಚಿನಾಯ್ಕನು ಮುಂದಲಪೂಜೆ ದಗಮು ನಿನ್ನಿಂದ ಆಗಬೇಕೆಂದು ಪಟ್ಟುಹಿಡಿದನು. ದೊಡ್ಡ ತಿರುಮಲ ದೇವರನ್ನು ಸ್ಥಾಪಿಸುವ ಸಂದರ್ಭದ್ಲಿ ವರವಿನ ಮುತ್ತಿ ನಮ್ಮ ತಾತ ಯರಮಂಚಿನಾಯಕನು ಮಂಡಲಿಯನನು ಬಿಟ್ಟು ಹೋದನೆಂದು ನೇಮ ತೋರಿಸುತ್ತಾನೆ ಮಲ್ಲಿನಾಯ್ಕನು ಬೊಮ್ಮದೇವರನ್ನು ಬಂಜಗೆರೆಗೆ ತಂದು ಯರಮಂಚಿನಾಯಕನಿಗೆ ನೇಮವನ್ನು ತೋರಿಸಲು ಆ ನಾಯಕನು ದೊಡ್ಡ ತಿರುಮಲದೇವ, ಕೊತ್ತಲ ಬೊಮ್ಮದೇವರನ್ನು ಪೂಜನೀಯವಾಗಿ ಸ್ಥಾಪಿಸುತ್ತಾನೆ. ಹಾಗೆಯೇ ಯರಗೊಡ್ಲನು, ವರವಿನವನು, ನಲ್ಲಕ್ಕಿನವನು, ನಲ್ಲಬಾಳಿಸೇನು, ನಡಗಿಲನವನು, ಚಿನ್ನಮುತ್ತಿನವನು, ಜೂಗನವನು ಈ ಏಳು ಜನರು ಮೇಲಿನ ದೇವರುಗಳಿಗೆ ವಾರಸುದಾರರೆಂದು ಯರಮಂಚಿನಾಯಕನು ನೇಮಿಸುತ್ತಾನೆ. ಯರಮಂಚಿನಾಯಕ, ಯರಗೊಡ್ಲಯ್ಯ, ವರವಿನವರು ಕೂಡಿ ಬೋಡಿದಾಸರಿಯನ್ನು ದೊಡ್ಡತಿರುಮಲ ದೇವರಿಗೆ ಪೂಜಾರಿಯಾಗಿ ನೇಮಿಸುವರು.

ನಂತರ ಯರಮಂಚಿನಾಯಕ, ಯರಗೊಡ್ಲವನು, ವರವಿನವರು ಓಬಣ್ಣನಹಳ್ಳಿಗೆ, ಬಂದು ತಾತಾಚಾರ್ಯರು ತೀರಿಕೊಂಡಿದ್ದರಿಂದ ಅವರನ್ನು ಖಂಡೂಗ ವಿಭೂತಿ, ಖಂಡೂಗ ಲೋಬಾನದಿಂದ ಸ್ಥಾಪಿಸುತ್ತಾರೆ. ಮೂಲಪುರುಷ ಶುಕ್ಲಮಲ್ಲಿನಾಯಕನ ಪಾದ್ಯಕ್ಕೆ ಅಂಬೂವಾಸಿಗಳನ್ನು ಕೊಯ್ದು ಈತನು ಜಗತ್ತಿಗೆ ಗುರುನಾಥನೆಂದು ನೇಮಿಸಿದರು. ಇದಕ್ಕೆ ಪೂಜಾರಿ ಸಿಕ್ಕಳ್ಳಿಗಿದ್ದವನೆಂದು ನೇಮಿಸಿ, ಯರಮಂಚಿನಾಯಕನು ಐಯೋಧಿಸಿದ್ಧಿ ಹಳ್ಳಿಯೊಳಗೆ ಬೊಮ್ಮದೇವರನ್ನು ಮತ್ತು ದೊಡ್ಡಕ್ಕರಾಯಮ್ಮನನ್ನು ನಿರ್ಮಾಣಮಾಡಿದರು. ಐಯೋಧಿ ಗೌರಸಮುದ್ರವೆಂದು ಅದಕ್ಕೆ ಹೆಸರಿಟ್ಟರು. ಇಲ್ಲಿನ ದೇವರುಗಳಿಗೆ ೧೦೧ ಕ್ಷೌರ, ೧೦೧ ಜಜ್ಜಲು ಕಲೆತು ಕೋಟಿಲಿಂಗ ಯರಮಂಚಿನಾಯಕನೆಂದು ಶಾಸನ ಬರೆಸಿದನು. ಯರಮಂಚಿ ನಾಯಕ ಓಬಣ್ಣನಹಳ್ಳಿಯಲ್ಲಿ ತನ್ನ ಹೆಸರಲ್ಲಿ, ಯರಗೊಡ್ಲಯ್ಯ, ಗಾದರಿಪಾಲನಾಯಕ ಇವರನ್ನು ನಿರ್ಮಾಣ ಮಾಡುವುದರೊಂದಿಗೆ ಇದಕ್ಕೆ ಯಜಮಾನರನ್ನು ನೇಮಕ ಮಾಡುವನು. ಹಾಗೆಯೇ ಗೋತ್ರದ ಪುತ್ರರಾದ ಯರಗೊಡ್ಲುನವರು, ವರವಿನವರುಗಳಿಗೆ ಏಳು ಜನ ಅಜ್ಜನವರಿಗೆ ಅಧಿಕಾರಿಗಳೆಂದು ಆಯ್ಕೆಮಾಡಿದ. ಇವೆಲ್ಲ ಜನಾಂಗೀಯ ಕಾರ್ಯಕ್ರಮಗಳನ್ನು ಮಾಡಿ ಮುಪ್ಪಾದ ಯರಮಂಚಿನಾಯಕ ಓಬಣ್ಣನ ಹಳ್ಳಿಯ ನೆಲಮಾಳಿಗೆಯೊಳಗೆ ಜೀವೈಕ್ಯನಾದನು. ಅಂದಿನಿಂದ ಈತನನ್ನು ಮೇಸ ಮಂಡಳಿಯ ದೊರೆ, ದೈವಿಕ ಪುರುಷ, ಪವಾಡಪುರುಷನೆಂದು ಕರೆಯುತ್ತಾರೆ. ತನ್ನ ಜೀವನನ್ನು ಜಾತಿಗಾಗಿ ಮುಡಪಾಗಿಟ್ಟ ವ್ಯಕ್ತಿ ಈತ. ಅನೇಕ ಸ್ಥಳಗಳಲ್ಲಿ ಯರಮಂಚಿನಾಯಕನ ಗುಡಿಗಳು, ಅನುಯಾಯಿಗಳು ಕಂಡುಬರುತ್ತಾರೆ.[3]

[1] ಯರಮಂಚಿ ಎಂಬುದು ವಿಜಯನಗರದ ಅವಧಿಯಲ್ಲಿದ್ದ ಒಂದು ರಾಜಮನೆತನದ ಹೆಸರು.) ನೋಡಿ : Epigraphical Glossary Vol-VI, SII, Part-II, p-19

[2] ಆರ್ವಿಯಸ್ಸ್‌ಸುಂದರಂ : ಕಾಟಮರಾಜನ ಕಥೆ, ೨೦೦೦. ಪ್ರಕಟಿತ ಕೃತಿ ತೆಲುಗು ಮೂಲದ್ದು. ಈ ಅರಸನೇ ಕಾಟಮರಾಜ ಇರಬೇಕು.

[3] ೬.೨.೧೯೪೭ ರಂದು ಓಬಣ್ಣನಹಳ್ಳಿಯ ಗ್ರಾಮಸ್ಥರು ಜಾತ್ರೆ ಮಾಡುವಾಗ ಯರಮಂಚಿನಾಯಕನ ಚರಿತ್ರೆ ಕುರಿತಂತೆ ಸಣ್ಣಪುಸ್ತಕವನ್ನು ತಂದಿರುತ್ತಾರೆ.

# ೬. ಚಿತ್ರದುರ್ಗ ಜಿಲ್ಲೆಯ ಬುಡಕಟ್ಟು ವೀರರು (2)

## ೬.೨. ಗಾದರಿಪಾಲನಾಯಕ

**ಹಿನ್ನೆಲೆ**

ಚಿತ್ರದುರ್ಗ ಜಿಲ್ಲೆಯ ಮ್ಯಾಸಬೇಡರ ಬುಡಕಟ್ಟಿನಲ್ಲಿ ಅನೇಕ ಮಂದಿ ಬುಡಕಟ್ಟು ವೀರರು ಕಂಡುಬರುತ್ತಾರೆ. ಅವರುಗಳ ಪೈಕಿ ಅತೀ ಹೆಚ್ಚು ಖ್ಯಾತಿಪಡೆದವನು ಗಾದರಿ ಪಾಲನಾಯಕ. ಮ್ಯಾಸಬೇಡರು ತಮ್ಮ ಆರಾಧ್ಯ ದೇವರೆಂದು ಈತನನ್ನು ಪೂಜಿಸುವುದುಂಟು. ಇವನ ಕಾಲಮಾನದ ಬಗ್ಗೆ ಖಚಿತವಾಗಿ ಹೇಳಲಾಗುವುದಿಲ್ಲ. ಮೌಖಿಕ ದಾಖಲೆಗಳ ಪ್ರಕಾರ ೧೦ನೇ ಶತಮಾನಕ್ಕೂ ಪೂರ್ವದಲ್ಲಿದ್ದನೆಂದು ತಿಳಿಯಲಾಗಿದೆ. ಆದರೆ ೧೬ ಮತ್ತ ೧೭ನೇ ಶತಮಾನದವೆಂದು ಹೇಳಲಾಗುವ ಕೆಲವು ಶಾಸನಗಳಲ್ಲಿ ಈ ಬಗೆಗೆ ಸ್ವಲ್ಪ ವಿವರಗಳು ದೊರೆಯುತ್ತವೆ.

[1] ಇಲ್ಲಿ ಜನನ, ಕಟ್ಟೆಮನೆ, ಪಶುಗಳ ರಕ್ಷಣೆ, ವಿವಾಹ, ಹುಲಿಮರಿಗಳ ಸಾವು, ಹುಲಿಗಳ ಕನಸು, ಗಂಗೆಯಿಂದ ಸನ್ಮಾರ್ಗಪ್ರಾಪ್ತಿ, ಅವಾಸನ, ಗಂಜಿಗಟ್ಟಿಗೆ ಪ್ರಯಾಣ, ಮರಣ, ಯರಮಂಚಿನಾಯಕನ ಅನ್ವೇಷಣೆ ಮೊದಲಾದ ಘಟನೆಗಳು ಗಾದರಿಪಾಲನಾಯಕನ ಬಗೆಗೆ ಪ್ರಮುಖ ಸಂಗತಿಗಳಾಗಿವೆ.

**ಕುಟುಂಬದ ಚರಿತ್ರೆ**

ಗಾದರಿಪಾಲನಾಯಕನ ಜನನದ ಕಾಲ ಹಾಗೂ ಸ್ಥಳದ ಬಗ್ಗೆ ನಿಖರವಾಗಿ ತಿಳಿದುಬಂದಿಲ್ಲ. ತಂದೆ ಸೂರಪ್ಪ, ತಾಯಿ ಮಲ್ಲಮ್ಮ, ತಮ್ಮ ಚೆನ್ನಪಾಲನಾಯಕ ಮತ್ತು ಇವನ ಮಡದಿಯರು ಕೆಂಚವ್ವ ಕಾಮವ್ವರೆಂಬ ವಿವರಗಳು ಕಥನಗೀತೆ ಮೌಖಿಕ ಸಾಹಿತ್ಯದಲ್ಲಿ ದೊರೆಯುತ್ತದೆ. ಗಾದರಿಪಾಲನಾಯಕನ ಬಗ್ಗೆ ಹೇರಳವಾದ ಜನಪದ ಪರಂಪರೆ ಲಭ್ಯವಿದ್ದರೂ ಖಚಿತವಾದ ಚಾರಿತ್ರಿಕಾಂಶಗಳು ತಿಳಿದುಬರುವುದಿಲ್ಲ. ಕಥೆ, ಲಾವಣಿ, ಸೋಬಾನೆ, ಕೋಲಾಟ ಇತರ ಜನಪದ ಸಾಹಿತ್ಯ ಪ್ರಕಾರಗಳಲ್ಲಿ ಇವನನ್ನು ವರ್ಣಮಯ ವ್ಯಕ್ತಿಯನ್ನಾಗಿ ಚಿತ್ರಿಸಲಾಗಿದೆ. ಚಾರಿತ್ರಿಕ ಸಂಗತಿಗಳ ಮೂಲಕ ಸ್ಪಷ್ಟವಾದ ಘಟನೆಗಳನ್ನು ತಿಳಿಯುವ ಅಗತ್ಯವಿದೆ. ಸಾಮಾನ್ಯವಾಗಿ ಬೇಡರು ತಮ್ಮ ಜಾತಿಯ ಸಾಹಸಿ, ವೀರ, ಋಷಿ, ಭಕ್ತಿ, ತ್ಯಾಗಿ, ಧರ್ಮಾತ್ಮನೆಂದು ಕೆಲವರನ್ನು ಹೊಗಳುತ್ತಾರೆ. ವಾಲ್ಮೀಕಿ ಬೇಡರ ಕಣ್ಣಪ್ಪ, ಏಕಲವ್ಯ ಧರ್ಮವಾದ್ಯ, ಗುಹಾ ಮುಂತಾದವರು ಸದಾ ಇವರ ನೆನಪಿನಲ್ಲಿ ಉಳಿಯುವ ವ್ಯಕ್ತಿ ಚಿತ್ರಗಳಾಗಿದ್ದಾರೆ. ಮ್ಯಾಸಬೇಡರು ಮಾತ್ರ ಯರಮಂಚಿನಾಯಕ, ಗಾದರಿಪಾಲನಾಯಕ, ಜಗಳೂರು ಪಾಪನಾಯಕ, ಯರಗಾಟನಾಯಕ, ಕೊಡಗಲುಬೊಮ್ಮ, ದಡ್ಡಿಸೂರನಾಯಕ, ಗಾಜನಾಯಕ, ಪೆದ್ದಯ್ಯ, ತಿಪ್ಪೇಸ್ವಾಮಿ ಮೊದಲಾದವರನ್ನು ತಮ್ಮ ವಂಶಗಳ ವೀರರೆಂದೂ, ನಮ್ಮ ಒಟ್ಟಾರೆ ಸಂಸ್ಕೃತಿಯ ದೇವರೆಂದೂ ಆರಾಧಿಸುತ್ತರೆ. ಅಂಥವರಲ್ಲಿ ಗಾದರಿಪಾಲನಾಯಕನೂ ಒಬ್ಬ.



ಪಶುಪಾಲನ ದಂಪತಿಗಳು

**ಆರಂಭದ ಬದುಕಿನಲ್ಲಿ ಅಲೆದಾಟ**

ಗಾದರಿಪಾಲನಾಯಕ ಒಬ್ಬ ಪಶುಪಾಲಕ. ಇವನ ಪೂರ್ವಜರು ತಲೆಮಾರುಗಳಿಂದ ಸವೆಸಿದ ಬೇಟೆ ಮತ್ತು ಪಶುಪಾಲನೆಯಲ್ಲಿ ಇವನು ಸಹಾ ಮುಂದುವರೆದನು. ಚಾರಿತ್ರಿಕವಾಗಿ ಗಮನಿಸಿದರೆ ಚಿತ್ರದುರ್ಗ ಮತ್ತು ನಾಯ್ಕನಹಟ್ಟಿ ಪಾಳೆಯಗಾರರಲ್ಲಿ ಈ ಹೆಸರಿನ ವ್ಯಕ್ತಿಗಳಿದ್ದರೂ ಅವರ ಸಂತತಿ ಬೆಳೆದುಬಂದಿಲ್ಲವೆಂದು ತಿಳಿದುಬರುತ್ತದೆ. ದೊರೆತಿರುವ ಆಧಾರಗಳಿಂದ ಗಾದರಿಪಾಲನಾಯಕ ಎಂಬುವನು ನಾಯಕನಹಟ್ಟಿಯ ದೊರೆಯಾಗಿದ್ದ. ಅಸಮಾನ್ಯ ಬುಡಕಟ್ಟು ವೀರನಾಗಿದ್ದನೆಂಬುದು ಸ್ಪಷ್ಟ. ಇವರಿಬ್ಬರೂ ಬೇರೆ ಬೇರೆ ಇರಬೇಕು. ಮ್ಯಾಸಬೇಡರು ಯಾವೊಬ್ಬ ಅರಸನನ್ನು ತಮ್ಮ ಮನೆದೇವರಾಗಿ, ವೀರನೆಂದು ಪೂಜಿಸಿದ ಉದಾಹರಣೆಗಳಿಲ್ಲ. ಹೀಗಾಗಿ ರಾಜಪ್ರಭುತ್ವದಲ್ಲಿ ಇವನ ಸ್ಥಾನಮಾನವನ್ನು ಗುರುತಿಸುವ ದುಸ್ಸಾಹಸ ಅಸಮಂಜಸವೆನಿಸುವುದು.

ಇವನು ಉತ್ತರದ ಕಡೆಯಿಂದ ತನ್ನನ್ನು ನಂಬಿದ ಬೇಡಗಂಪಳ ಮತ್ತು ತುರುಮಂದೆಯೊಡನೆ ಚಿತ್ರದುರ್ಗ ಜಿಲ್ಲೆಯ ಬೆಟ್ಟಗುಡ್ಡ ಹಾಗೂ ನದಿಯ ಇಕ್ಕೆಲಗಳಲ್ಲಿ ವಾಸಿಸತೊಡಗಿದನು. ಹೀಗೆ ಸಿರಿಗೆರೆಯ ಸಮೀಪದ ಅರಣ್ಯದಲ್ಲಿ ತನ್ನ ಕಂಪಳದೊಂದಿಗೆ (ಪಶುಗಳು – ಪರಿವಾರ) ವಾಸಮಾಡತೊಡಗಿದ. ಇಲ್ಲಿಗೆ ಬಂದು ಸಹಸ್ರಾರು ಗೋವುಗಳನ್ನು ಕಾಯುವ ಮುನ್ನ ಚಳ್ಳಕೆರೆ ತಾಲೂಕಿನ ನನ್ನಿವಾಳದಲ್ಲಿ ರೊಪ್ಪ ಕಟ್ಟಿಕೊಂಡು ನೆಲೆಸಿದ್ದ. ಮೂರುನಾಲ್ಕು ವರ್ಷ ಮಳೆ ಬರಲಿಲ್ಲ, ಪ್ರಾಣಿಗಳಿಗೆ ಕುಡಿಯಲು ನೀರು ಸಿಗಲಿಲ್ಲ. ಎಲ್ಲೆಲ್ಲೂ ಬರಗಾಲ ಆವರಿಸಿತ್ತು. ಪ್ರಾಣಿ – ಪಕ್ಷಿಗಳು ವಲಸೆಹೊರಟವು. ಹೀಗಿರುವಾ ಗಾದರಿಪಾಲನಾಯಕನ ಪಶುಗಳು ವಿಪರೀತ ಬಳಲಿದ್ದವು. ಈತ ಆಹೋಬಲ ನರಸಿಂಹನ ಸಾಲಿಗ್ರಾಮವನ್ನು ಹಾಸಿದ ಕಂಬಳಿ ಗದ್ದಿಗೆಯ ಮೇಲಿಟ್ಟು, ನೂರೊಂದು ಮಣ್ಣಿನ ದೀಪಗಳನ್ನು ಹಚ್ಚಿಟ್ಟು, ದೇವರೆತ್ತುಗಳನ್ನು ಕರೆಸಿ ದೂಪವಿಟ್ಟು, ಪೂಜೆಮುಗಿಸಿ ಮಲಗಿದನು. ಆ ರಾತ್ರಿ ಅವನ ಕನಸಿನಲ್ಲಿ ಬಿಳಿಮಲೆ, ಕರಿಮಲೆ, ಒಳಮಲೆ, ಹೊರಮಲೆಗಳಿವೆ ನಿನ್ನ ಬೇಡ ಬೇಡಗಂಪಳ ಸಮೇತ ಅಲ್ಲಿಗೆ ಹೋಗು ಎಂದು ಸ್ವಾಮಿ ಹೇಳಿದನು. ಕನಸಿನಿಂದ ಎದ್ದು ನೋಡಲಾಗಿ ದನ – ಕರುಗಳು ಚೇತರಿಸಿಕೊಂಡು ನೆಮರು (ಮೆಲುಕು) ಹಾಕುತ್ತಿದ್ದವು (ತಿಂದ ಆಹಾರವನ್ನು ಜೀರ್ಣಿಸಿಕೊಳ್ಳುತ್ತಿದ್ದವು). ಆಗಿನಿಂದಲೇ ಅವನು ಚಿತ್ರದುರ್ಗ ಪ್ರದೇಶಬಿಟ್ಟು ಸಮೀಪದ ಮಿಂಚೇರಿ (ಅರೆಮಲೆನಾಡು ಪ್ರದೇಶ) ಅರಣ್ಯಕ್ಕೆ ಹೋಗಿ ನೆಲೆಸಿದನು.

**ಮಿಂಚೇರಿಯಲ್ಲಿ ತಳವೂರಿನ ಪಾಲನಾಯಕ**

ಮಿಂಚೇರಿ ದಟ್ಟವಾದ ಅರಣ್ಯ ಪ್ರದೇಶ. ಇಲ್ಲಿ ಸಮೃದ್ಧವಾದ ಮೇವು ನೀರು ದೊರೆಯುತ್ತಿತ್ತು. ಈ ಕಾರಣಕ್ಕಾಗಿ ಗಾದರಿಪಾಲನಾಯಕ ಇಲ್ಲಿ ರೊಪ್ಪ (ಗೂಡು) ಕಟ್ಟಿಕೊಂಡು ಪತ್ನಿಯರಾದ ಕಂಚವ್ವ – ಕಾಮವ್ವರೊಡನೆ ಜೀವಿಸತೊಡಗಿದ. ಅರಣ್ಯದಲ್ಲಿ ಹುಲಿ – ದಂಪತಿಗಳೆರಡು ವಾಸವಾಗಿದ್ದವು. ಅವು ನಾವುಗಳು ನೆಲಸುವ ಕಾಡಿನಲ್ಲಿ ನೀನು, ನಿನ್ನ ದನಕರುಗಳು ನೆಲೆಸುವುದು ಒಳ್ಳೆಯದಲ್ಲ ಎಂದವು. ಪಾಲನಾಯಕನು ನಾನು ಮಾಡಿದ ಅಪರಾಧವೇನೆಂದು ಕೇಳಿದ. ಹುಲಿ ದಂಪತಿಗಳು ನಮಗೆ ಹೋರಿಕರುಗಳನ್ನು ಪ್ರತಿನಿತ್ಯ ಅಹಾರಕ್ಕೆ

ಒದಗಿಸಬೇಕೆಂದವು. ಹೀಗೆ ಚರ್ಚೆ ನಡೆದು, ಹೆಣ್ಣು ಹುಲಿ ನಮಗೂ ಮಕ್ಕಳುಂಟು; ಈ ಪಶುಗಳಿಗೂ ಸಂತಾನವಿರುವುದರಿಂದ ಆಹಾರವಾಗಿ ತಿನ್ನುವುದು ಬೇಡ ಎಂದವು. ಇವರಿಬ್ಬರಲ್ಲೂ ಒಂದು ಒಪ್ಪಂದವಾದುದು ಅರಣ್ಯದಲ್ಲಿಯೇ. ಈ ಒಪ್ಪಂದದಂತೆ ಹುಲಿಮರಿಗಳನ್ನು ಕೊಲ್ಲುವುದಿಲ್ಲ. ಹುಲಿಗಳು ಹಸುಕರುಗಳನ್ನು ಬೇಟೆಯಾಡಬಾರದೆಂದು ನಿರ್ಧರಿಸದವು. ಇವನು ಹುಲಿಮರಿಗಳನ್ನು ತನ್ನ ರೊಪ್ಪದಲ್ಲಿ ಸಾಕತೊಡಗಿದ. ಕಾಡಿಗೂ ನಾಡಿಗೂ ಇರುವ ಸಂಘರ್ಷವಿಲ್ಲದ ಹೊಂದಾಣಿಕೆಯ ಕಾಲಘಟ್ಟವನ್ನು ಈ ಕಥೆ ಸಾಂಕೇತಿಸುತ್ತದೆ. ಬಹುಶಃ ಪಶುಪಾಲನಾ ಹಂತವೇ ಇಂಥಾ ಕತೆಗಳ ಸುಳಿಯಿಂದ ಸುತ್ತುವರೆದಿದ್ದು, ಕೃಷಿಗೆ ನಾಂದಿಹಾಡುವ ಮುನ್ಸೂಚನೆಯಂತೆ ಕಂಡುಬರುತ್ತವೆ ಇಲ್ಲಿನ ಕಥಾಲಕ್ಷಣಗಳು.

**ಹುಲಿಮರಿಗಳ ಸಾವು**

ಹೀಗೆ ಇರುವಾಗ ಹೆಣ್ಣುಹುಲಿ ಪ್ರತಿದಿನ ಹಾಲುಕುಡಿಸಿ, ಗಂಡು ಹುಲಿಯ ಜತೆಗೆ ಕಾಡಿಗೆ ಬೇಟೆಗೆ ಹೋಗುತ್ತಿತ್ತು. ನಾಯಕನು ಸಹಾ ನಿತ್ಯ ಹಾಲು ಕರೆದು ಹಸುಗಳನ್ನು ಮೇಯಿಸಲು ಕಾಡಿಗೆ ಒಡೆದುಕೊಂಡು ಹೋಗುತ್ತಿದ್ದನು. ಸಣ್ಣ ಕರುಗಳು ರೊಪ್ಪದಲ್ಲಿರುತ್ತಿದ್ದವು. ಪತ್ನಿಯರಾದ ಕಂಚವ್ವ – ಕಾಮವ್ವರು ಕರೆದ ಹಾಲನ್ನು ಹೆಪ್ಪುಹಾಕಿ, ಮೊಸರು ಮಾಡಿ ಹಾಲಿನ ಜೊತೆಗೆ ಬೆಣ್ಣೆ, ಮೊಸರು, ಮಜ್ಜಿಗೆಯನ್ನು ಮಾರಿಕೊಂಡು ಬರಲು ಮುತ್ತುಗದೂರು ಕೊಗಲೂರುಗಳಿಗೆ ಹೋಗುತ್ತಿದ್ದರು.

ಒಮ್ಮೆ ಗಾದರಿಪಾಲನಾಯಕನ ಭಾವಮೈದುನರಾದ ಚಿತ್ತಯ್ಯ – ಕಾಟಯ್ಯನವರು ತಮ್ಮ ಅಕ್ಕಂದಿರಾದ ಕಂಚವ್ವ – ಕಾಮವ್ವರಲ್ಲದೆ, ಭಾವನನ್ನು ನೋಡಲು ಕರಿಮಲೆಯಿಂದ ಬಿಳಿಮಲೆ ಮಾರ್ಗವಾಗಿ ಬರುತ್ತಾರೆ. ಭಾವ ದನಕರುಗಳನ್ನು ಬೆಳಿಗ್ಗೆ ಹೊಡೆದುಕೊಂಡು ಹೋದವನು ಇನ್ನೂ ಬಂದಿರಲಿಲ್ಲ. ಅಕ್ಕಂದಿರು ತಮ್ಮ ಕೆಲಸಕ್ಕೆ ತಾವು ಹೋಗಿದ್ದರು. ಯಾರು ಇಲ್ಲದ ಸಮಯದಲ್ಲಿ ಇವರು ದನದ ಗೂಡೊಳಗೆ ಬಂದರು (ರೊಪ್ಪ), ಗೂಡಿನಲ್ಲಿ ಕರುಗಳೊಂದಿಗೆ ಹುಲಿಮರಿಗಳು ಆಟವಾಡುತ್ತಿರುವುದನ್ನು ಕಂಡುಬೆರಗಾದರು. ಈ ರೀತಿ ಸ್ನೇಹದಿಂದಿರಲು ಅಸಾಧ್ಯ, ಎಂದಾದರೂ ಇವು ತಿನ್ನುತ್ತವೆಂದು ಹುಲಿಮರಿಗಳನ್ನು ಸಾಯಿಸಿ ಬಿಟ್ಟರು. ಅವು ವಿಲವಿಲ ಒದ್ದಾಡಿ ರಕ್ತಕಾರಿಕೊಂಡು ಸತ್ತವು. ಇನ್ನೊಂದು ಮೂಲಕ ಪ್ರಕಾರ ಬೇಡರ (ಒಂದು ಬೆಡಗು) ಕೇಡು ಅಜ್ಜಿನವಾಡು ಎಂಬುವನು ಚಿಪ್ಪುಕೊಡಲಿಯಿಂದ ಈ ಮರಿಗಳನ್ನು ಕೊಲ್ಲುತ್ತಾನೆ.[2]

ಎಂದಿನಂತೆ ಗಾದರಿಪಾಲನಾಯಕ ಸಂಜೆ ದನ – ಕರುಗಳನ್ನು ಗೂಡಿಗೆ ಮರಳಿ ಹೊಡೆದುಕೊಂಡು ಬಂದ. ಗೂಡಿಗೆ ಬಂದು ನೋಡಿದಾಗ ಹುಲಿಮರಿಗಳು ಸತ್ತುಬಿದ್ದವುಗಳನ್ನು ಕಂಡು ಅಪಾರ ಸಂಕಟಕ್ಕೀಡಾದ. ಹುಲಿಗಳಿಗೆ ಕೊಟ್ಟ ವಚನ ತಪ್ಪಿತೆಂದು ಅತೀವ ದುಃಖಪಟ್ಟನು. ಇವುಗಳನ್ನು ಕೊಂದವರು ಯಾರು? ಎಂಬೆಲ್ಲ ಪ್ರಶ್ನೆಗಳೊಂದಿಗೆ ಚಿಂತೆ ಮಾಡುವಾಗ, ಕಾಟಣ್ಣ – ಚಿತ್ತಣ್ಣರಿಬ್ಬರು ಬಂದುಭಾವನನ್ನು ಮಾತನಾಡಿಸಿದರು. ನಡೆದ ಘಟನೆಯನ್ನು ವಿವರಿಸಿದ ನಾಯಕನ ಚಿಂತೆಗೆ ಪರಿಹಾರ ಕಂಡುಹಿಡಿಯಲು ತಮ್ಮ ತಪ್ಪನ್ನು ಒಪ್ಪಿಕೊಂಡರು. ಹುಲಿಮರಿಗಳನ್ನು ಕೊಂದಿದ್ದು ಆಕಸ್ಮಿಕ ಘಟನೆ ಮತ್ತು ಅಪರಿಚಿತವಾದ ಸಂದರ್ಭ. ಉದ್ದೇಶಪೂರ್ವಕವಾಗಿ ಎಸಗಿದ ಘಟನೆಯಲ್ಲ. ಹುಲಿಗಳೊಂದಿಗೆ ದನಕರುಗಳು ವಾಸಿಸುವುದು ಅಪರೂಪ ಮತ್ತು ವಿಚಿತ್ರ. ಹುಲಿಮರಿಗಳು ದೊಡ್ಡವಾದಾಗ ಹಸುಗಳನ್ನು ತಿನ್ನದೆ ಬಿಡುತ್ತವೆಯೇ ಎಂದು ಕೊಂದಿರುತ್ತಾರೆ. ಆದ ಅನಾಹುತಕ್ಕೆ ಪ್ರಾಯಶ್ಚಿತ ಪಡುತ್ತಾ, ಕೊಟ್ಟ ಮಾತಿಗೆ ತಪ್ಪಿದನೆಂದು ಅಳಿಯರಿಗೆ ಹುಲಿಮರಿಗಳನ್ನು ಕಾಯುವೆನೆಂದು ಹುಲಿಗಳಿಗೆ ಭಾಷೆ ಕೊಟ್ಟಿದ್ದೆ, ನಿಮ್ಮಿಂದ ಮುರಿದುಬಿತ್ತು ಎಂದು ದುಃಖಿಸಿಕೊಂಡು ಅಳುತ್ತಾ ಭಾಷೆಗೆ ತಪ್ಪಿದನೆಂದು ನಡೆದನು.


ಆಗ ಅವರು ಭಾವ ಹೆದರಬೇಡ, ಹುಲಿಗಳನ್ನು ಕೊಲ್ಲಲು ನಮ್ಮಲ್ಲಿ ಈಗಲೂ ಬಂದೂಕವಿದೆ ಎಂದಾಗ ಗಾದರಿಪಾಲನಾಯಕ ನನ್ನ ಸತ್ಯದ ಮಾತು, ಒಪ್ಪಂದ ಬಿದ್ದು ಹೋಯಿತೆಂದು ಮರಕಪಡುತ್ತಾನೆ. ಈ ಪಾಪದ ನಿವಾರಣೆಗಾಗಿ ಇವನು ಕೆಂಗುರಿಮಾಂಸ, ಕೆಂಬಕ್ಕಿ ಅನ್ನ, ಎಡೆಮಾಡಿಸಿಟ್ಟು ಸೂರ್ಯ ದೇವನಿಗೆ ಕೈಮುಗಿದು ತಪ್ಪಾಯಿತೆಂದು ಬೇಡಿಕೊಂಡ. ಹೀಗೆ ನಾನಾ ವಿಧದ ಆಚರಣೆಗಳು ನಡೆದವು.

ಗಂಡುಹುಲಿ ತನ್ನ ಬೇಟೆ ಕೆಲಸ ಮುಗಿಸಿಕೊಂಡು ಹೆಣ್ಣು ಹುಲಿಯ ಕಣ್ಣಿಗೆ ಕಾಣಿಸದಿರುವುದರಿಂದ ಹುಡುಕುತ್ತಾ ಅರಣ್ಯದಲ್ಲಿ ಅಲೆಯುತ್ತಿತ್ತು. ಹುಲಿ ಕಚ್ಚಿಕೊಂಡು ಬರುವಾಗ ಹೆಣ್ಣು ಹುಲಿ ಕರು ಹಾಕಿದ್ದ ಆಕಳನ್ನು ಕಾಯಿತಿತ್ತು. ಹೆಣ್ಣು ಹುಲಿಯು ಸಾರಗ ತೆಗೆದುಕೊಂಡು ನೀನು ಗೂಡಿನ ಕಡೆ ಹೋಗಿ ಮರಿಗಳಿಗೆ ಊಟಮಾಡಿದ ತರುವಾಯ ಪಾಲಯ್ಯನಿಗೆ ಹಸುಕರು ಹಾಕಿದೆ ಮನೆಗೊಯ್ಯಲು ತಿಳಿಸು ಎಂದಿತು. ಗಂಡುಹುಲಿ ಬರಬರನೆ ಬಂದಿತು. ಬಂದು ನೋಡಲಾಗಿ ತನ್ನೆರಡು ಮರಿಗಳು ಸತ್ತುಬಿದ್ದಿದ್ದವು.

**ಹುಲಿಗಳೊಂದಿಗೆ ಕಾಳಗ**

ಕಾಟಣ್ಣ – ಚಿತ್ತಣ್ಣರಿಬ್ಬರೂ ಸೀಗೆಪಳೆಯಲ್ಲಿ ಅವಿತುಕೊಂಡು ಗಂಡುಹುಲಿಗೆ ಬಿಲ್ಲಿನಿಂದ ಹೊಡೆದರು. ಏಟು ಅದಕ್ಕೆ ತಾಗಲಿಲ್ಲ. ನರಮಾನವನಿಂದ ಅಪಾಯ ತಪ್ಪಿದ್ದಲ್ಲವೆಂದು ಹೆಣ್ಣು ಹುಲಿ ಹತ್ತಿರ ಹೋಯಿತು. ಹೆಣ್ಣುಲಿ ನೀನೊಬ್ಬನೆ ಬಂದೆಯಲ್ಲ ಪಾಲಯ್ಯ ಬರಲಿಲ್ಲವೆ? ಎಂದಿತು. ಮೊದಲೇ ನಾನು ಹೇಳಿದಂತೆ ನೀನು ಕೇಳಲಿಲ್ಲ. ಗಾದರಿಪಾಲಯ್ಯ ಬಿಲ್ಲು – ಬಾಣಗಿಂದ ನಮ್ಮ ಮರಿಗಳನ್ನು ಕೊಂದುಹಾಕಿದ್ದಾನೆಂದು ಹೇಳಿದಾಗ, ಅದು ನಂಬಲಿಲ್ಲ! ಹುಲಿದಂಪತಿಗಳು ಗೂಡಿಗೆ ಬಂದು ತೀವ್ರ ದುಃಖಕ್ಕೊಳಗಾದವು.

ಹುಲಿದಂಪತಿಗಳು ಪಾಲಯ್ಯನನ್ನು ಹುಡುಕುತ್ತಾ ಅರಣ್ಯವನ್ನೆಲ್ಲ ಭೇದಿಸಿದವು. ನಿರಪರಾಧಿಯಾದ ಪಾಲಯ್ಯನು ಏನೂ ತಪ್ಪು ಮಾಡಿರದಿದ್ದರೂ, ಹುಲಿಗಳು ಬಿಡಲಾರವೆಂದು ನಿಶ್ಚಯಿಸಿ ಜರಿಮಲೆ ಪ್ರದೇಶಕ್ಕೆ ಹೋಗಿ ತಪಸ್ಸು ಮಾಡಿ ಭಗವಂತನ ವರಪಡೆದು ಮರಿಗಳನ್ನು ಬದುಕಿಸುವೆ ಎಂದನು. ಹುಲಿಗಳು ಹಿಂಬಾಲಿಸಿ ಅವನನ್ನು ಪರಿಪರಿಯಾಗಿ ನಿಂದಿಸಿದವು. ನಾನು ಹುಲಿಮರಿಗಳನ್ನು ಸಾಯಿಸಿಲ್ಲ! ತಪ್ಪು ನನ್ನದಲ್ಲ ಏನೇ ಆದರೂ ನಾನು ಬದುಕಿಸುವೆನೆಂದು ಜರಿಮಲೆಗೆ ಪ್ರಯಾಣ ಬೆಳೆಸುತ್ತಾನೆ.[3] ಇವನ ಪ್ರಯಾಣಕ್ಕೆ ಇಂಬುಕೊಡದ ಹುಲಿಗಳು ದಾರಿಗೆ ಅಡ್ಡಕಟ್ಟಿದ್ದವು. ನರಮನುಷ್ಯನನ್ನು ನಂಬಿದ್ದು ಮಹಾಪರಾಧ. ತಪ್ಪಿಸಿಕೊಳ್ಳಲು ಸುಳ್ಳು ನುಡಿಯುವ ಪಾಲಯ್ಯನನ್ನು ಛೀಮಾರಿ ಹಾಕಿ ಥಳಿಸಿದವು. ಹುಲಿಗಳು ಅವನನ್ನು ಕೊಲ್ಲಲು ರೇಗಿದಾಗ, ಪಾಲನಾಯಕ ಹುಲಿಗಳೊಂದಿಗಿನ ಹೋರಾಟಕ್ಕೆ ಅನ್ಯ ಮನುಷ್ಯನಾಗಿ ಅಣಿಯಾದ. ಸತತವಾಗಿ ೩ – ೪ ದಿನಗಳ ಕಾದಾಟದಲ್ಲಿ ಗಾದರಿಪಾಲನಾಯಕ ೩ನೇ ದಿನ ಮುಸ್ಸಂಜೆಯಲ್ಲಿ ಮಿಂಚೇರಿಹಳ್ಳದ ದಡದಲ್ಲಿ ಹೋರಾಡುತ್ತಲೇ ನೆಲ್ಕೆ ಬಿದ್ದು ನಿತ್ರಾಣನಾದನು. ಆಗ ಚಿತ್ತಣ್ಣ ಕಾಟಣ್ಣನವರು ಬಂದು ದೇವರೆತ್ತಿಗೆ ಸಮನಾದ ಒಂದು ಗಬ್ಬವಾದ ಹಸುವಿನ ಹಾಲನ್ನು ತಂದು ಗಾದರಿಪಾಲನಾಯಕನ ಬಾಯಿಗೆ ಬಿಟ್ಟರು. ಒಂದು ಹನಿಯನ್ನು ಗುಟುಕರಿಸಿ ಪ್ರಾಣಬಿಟ್ಟ. ಇವನೊಂದಿಗೆ ಹೋರಾಡಿದ ಹುಲಿಗಳೆರಡು ಮೀಂಚೇರಿಹಳ್ಳದ ದಂಡೆಯಲ್ಲಿ ಸತ್ತುಬಿದ್ದವು.



ಗಾದರಿಪಾಲನಾಯಕನ ಕ್ಷೇತ್ರ, ಗಂಜಿಗಟ್ಟೆ

**ಪತ್ನಿಯರ ಸಹಗಮನ**

ಕಂಚವ್ವ – ಕಾಮವ್ವರಿಬ್ಬರೂ ಕೋಗಲೂರು, ಮುತ್ತುಗದೂರುಗಳಿಗೆ ಹಾಲುಮಾರಲು ಹೋಗಿ ಸಾಯಂಕಾಲದವರೆಗೆ ಪೂರೈಸಿಕೊಂಡು ಕಾಡಿನೊಳಗಿದ್ದ ಗೂಡಿನ ಹತ್ತಿರ ಬರುತ್ತಾರೆ. ಮಿಂಚೇರಿಹಳ್ಳದಲ್ಲಿ ಬಾಯಾರಿಸಿಕೊಳ್ಳಲು ನೀರಿಗಾಗಿ ಬಂದು ಚಿಲುಮೆ ತೋಡಿಗಾಗಿ ರಕ್ತ ಊಟೆಯಲ್ಲಿ (ಬುಗ್ಗೆ) ಬರುತ್ತಿತ್ತು. ಇದು ಅಪಶಕುನವೆಂದು ಬಗೆದು ಅಕ್ಕತಂಗಿಯರು ಸರಸರನೆ ಬಂದು ರೊಪ್ಪವನ್ನು ನೋಡಿದರೆ ಹುಲಿಮರಿಗಳು ಸತ್ತುಬಿದ್ದಿದ್ದವು. ಏನೋ ಅನಾಹುತ ನಡೆದಿದೆ ಎಂದು ಪರಿಪರಿ ಚಿಂತಿಸತೊಡಗಿದರು. ದನಕರುಗಳು ಕಿವಿಗಳನ್ನು ಇಳಿಬಿಟ್ಟುಕೊಂಡಿದ್ದ ಚಿನ್ಹೆಗಳು ದುರಂತವನ್ನು ಪ್ರತಿನಿಧಿಸಿದ್ದವು. ಆಗ ತಾನೆ ಬಂದ ಚಿತ್ತಯ್ಯಕಾಟಣ್ಣನವರು ಗಾದರಿಪಾಲನಾಯಕ ತೀರಿಕೊಂಡ ಸಂಗತಿಯನ್ನು ತಿಳಿಸಿದರು.

ಅಕ್ಕ – ತಂಗಿಯರಿಗೆ ಆಕಾಶವೇ ಕಳಚಿ ಬಿದ್ದಂತಾಯಿತು. ಗಂಡನೆಂಬ ದೇವರೇ ಸತ್ತಮೇಲೆ ನಾವು ಈ ಭೂಮಿಯ ಮೇಲಿದ್ದು ಫಲವೇನು, ಯಾವ ಸಾರ್ಥಕ ಬದುಕು ಸಾಗಿಸಬೇಕೆಂದು ನಾನಾ ಬಗೆಯಾಗಿ ಚಿಂತಿಸತೊಡಗಿದರು. ಕೊನೆಗೆ ಗಂಡನ ಸಮಾಧಿಗೆ ಪೂಜೆ ಮಾಡಿ ಸಾಯಲು (ಸಹಗಮನ) ಸಿದ್ಧರಾಗುತ್ತಾರೆ. ಗಂಜಿಗಟ್ಟಿ ಗ್ರಾಮದ ಪುರೋಹಿತನಿಂದ ಕುಂಕುಮ – ಬಳೆಗಳನ್ನು ಅಳಿಸಿ ಒಡಿಸಿ ತಮ್ಮ ಪತಿವ್ರತಾ ಬದುಕು ಭಂಗವಾಗಬಾರೆಂದು ಊರಮುಂದಿರುವ ಹೊಂಡಕ್ಕೆ ಹಾರಿ ಸಾಯುತ್ತಾರೆ. ಹೀಗೆ ಕಥೆ ಇಲ್ಲಿಗೆ ಮುಕ್ತಾಯವಾಗುತ್ತದೆ. ಇವನ ವಂಶಪರಂಪರೆಯ ಬಗ್ಗೆ ಎಲ್ಲೂ ವಿವರಗಳು ದೊರೆಯಲಾರವು. ಗಂಜಿಗಟ್ಟೆಯಲ್ಲಿ ಇವರಿಬ್ಬರು ಸಹಗಮನ ಕೈಗೊಂಡ ಬಗ್ಗೆ ಮಾಸ್ತಿಕಲ್ಲನ್ನು ಹಾಕಿದ್ದಾರೆ. ಇದರಲ್ಲಿ ಗಾದರಿಪಾಲನಾಯಕ – ಸಣ್ಣ (ಚಿನ್ನ) ಪಾಲನಾಯಕ ಹುಲಿಗಳೊಡನೆ ಹೋರಾಡಿದರೆ, ಪತ್ನಿಯರಿಬ್ಬರು ಸಹಗಮನ ಕೈಗೊಳ್ಳುವರು, ಮೇಲೆ ಪಶುಕರುಗಳು ನಿಂತಿವೆ. ಈ ಮಾಸ್ತಿಕಲ್ಲನ್ನೇ ಗಾದರಿಪಾಲನಾಯಕ ದೇವರೆಂದು ಗುಡಿಕಟ್ಟಿ ಪೂಜಿಸುತ್ತಾರೆ. ಇದಕ್ಕೆ ಅನೇಕ ಅರಸರು ಕಾಣಿಕೆ ಸಲ್ಲಿಸಿ, ದೇವಾಲಯವನ್ನು ಕಟ್ಟಿಸಿದ್ದಾರೆ. ಈ ಗ್ರಾಮದಲ್ಲಿ ಕಂಪ್ಲಿನರಸಿಂಹ, ಗಾದರಿಪಾಲನಾಯಕನ ದೇವಾಲಯಗಳಿವೆ. ಇವೆರಡು ದೇವಾಲಯಗಳಲ್ಲಿಯೂ ಪಶುಪಾಲನೆಗೆ ಸಂಬಂಧಿಸಿದ ಶಿಲ್ಪಗಳಿವೆ. ಒಬ್ಬ ಪಶುಪಾಲಕ ಮಂಡಲ, ಜಪಮಾಲೆ, ಯಜ್ಞೋಪವೀತ, ಕೋಲನ್ನು ಹೊಂದಿದರೆ; ಮತ್ತೊಂದರಲ್ಲಿ ಸುತ್ತಲೂ ಪಶುಗಳು ತಾನೊಪ್ಪನೇ ಕೋಲು ಮತ್ತು ತಂಬಿಗೆಯನ್ನು ಕೈಯಲ್ಲಿಡಿದಿರುವುದು ಕಂಡುಬರುತ್ತದೆ. ಇವುಗಳನ್ನು ಸಮೀಕ್ಷಿಸಿದರೆ ಗಾದರಿಪಾಲನಾಯಕನ ಕಥೆ ಪಶುಪಾಲನೆಯ ಉತ್ತುಂಗಸ್ಥಿತಿಯನ್ನು ಸಾಬೀತುಪಡಿಸುತ್ತದೆ. ಅಲ್ಲದೆ, ವಲಸೆಗಾರರು ಕೃಷಿಕರಾಗಿ ಪರಿವರ್ತನೆ ಹೊಂದಿದ ಕಾಲಘಟ್ಟವೊಂದನ್ನು ಅನಾವರಣಗೊಳಿಸುವುದು. ಈ ಮಹಾತ್ಮನ ಸ್ಮರಣೆಗಾಗಿ ತಾಳೆದ (ತಾಳ್ಯ) ಕರಿಯಪ್ಪನಾಯಕನೆಂಬ ಪಾಳೆಯಗಾರ ಮತ್ತು ಚಿತ್ರದುರ್ಗದ ಅರಸ ಕಸ್ತೂರಿ ರಂಗಪ್ಪನಾಯಕ ಈ ಗಾದರಿಪಾಲನಾಯಕ ದೇವಾಲಯಕ್ಕೆ ಅಪಾರದೇಣಿಗೆ, ದತ್ತಿದಾನ ಮೂಲಕ ಗ್ರಾಮಗಳನ್ನು ಉಂಬಳಿಯಾಗಿ ಬಿಟ್ಟುಕೊಟ್ಟಿದ್ದರು

**ಆಚರಣೆ ಸಂಪ್ರದಾಯಗಳು**

ನಾಯಕ ಜನಾಂಗದವರು 'ಗಾದರಿ'ಯನ್ನು ಪ್ರಧಾನ ದೇವರೆಂದು ಚಿತ್ರದುರ್ಗ – ಬಳ್ಳಾರಿ ಮತ್ತು ದಾವಣಗೆರೆ ಜಿಲ್ಲೆಗಳಲ್ಲಿ ಪೂಜಿಸುವರು. ಚಿತ್ರದುರ್ಗ ಜಿಲ್ಲೆಯಲ್ಲಿ ಮಾತ್ರ ಬೇಡರಷ್ಟೇ ಅಲ್ಲದೆ, ಇತರ ಸಮುದಾಯದವರು ಈತನನ್ನು ಪೂಜಿಸುವ ಅನುಯಾಯಿಗಳಾಗಿರುತ್ತಾರೆ. ದಾವಣಗೆರೆ ಜಿಲ್ಲೆಯಲ್ಲಿ ದಲಿತ ಸಮುದಾಯಗಳು ಗಾದರಿಪಾಲನಾಯಕನನ್ನು ಭಕ್ತಿಪ್ರಧಾನ ದೇವರೆಂದು ಪೂಜಿಸುವರು. ಮಧ್ಯಕರ್ನಾಟಕದ ಬೇಡರ ಪ್ರತಿಯೊಂದು ಹಟ್ಟಿ, ಗ್ರಾಮಗಳಲ್ಲಿಯೂ ಈತನ ದೇವಾಲಯಗಳಿವೆ. ಇವನ ಪ್ರತೀಕವಾಗಿ ದೀಪಾವಳಿ, ಗುಗ್ಗರಿಹಬ್ಬ, ಕಾಳನಹಬ್ಬ ಇತರ ಹಬ್ಬ – ಜಾತ್ರೆಗಳನ್ನು ಗ್ರಾಮಸ್ಥರು ಆಚರಿಸುತ್ತಾರೆ. ಇಂದಿಗೂ ಗಂಗಾಪೂಜೆ, ದಾಸಯ್ಯಪಂಜು ನುಂಗುವುದು, ಮಣೆವು, ಕಾಸು – ಮೀಸಲು ಕಲೆಯುವುದು, ಅಲಗು ಹೊರಡುವುದು, ಇತರ ಆಚರಣೆಗಳು ರೂಢಿಯಲ್ಲಿವೆ. ಗಂಜಿಗಟ್ಟೆ ಪ್ರಧಾನ ಸ್ಥಳವಾದರೆ, ಉಪಶಾಖೆಗಳು ಹಲವಾರು. ನಾಯಕನಹಟ್ಟಿ ಹೋಬಳಿಯ ಚನ್ನಬಸಯ್ಯನಹಟ್ಟಿ, ರಾಮಸಾಗರ, ಮೊಳಕಾಲ್ಮುರು ತಾಲೂಕಿನ ಬಿ.ಜಿ. ಕೆರೆ, ಮೊಗಲಹಳ್ಳಿ,

ಮ್ಯಾಸರಹಟ್ಟಿ, ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲೂಕಿನ ಕಮಲಾಪುರ, ಕೂಡ್ಲಿಗಿ ತಾಲೂಕಿನ ಪೂಜಾರಹಳ್ಳಿ, ಕಾತ್ರಿಕೆಹಟ್ಟಿ, ಹುಲಿಕೆರೆ, ಕುಮತಿ, ಕರ್ನಾರಹಟ್ಟಿ ಮೊದಲಾದ ಸ್ಥಳಗಳಲ್ಲಿ ಗಾದರಿಪಾಲನಾಯಕನ ದೇವಾಲಯಗಳಿವೆ.

ನೀತಿ, ಸತ್ಯ, ಪ್ರಮಾಣಿಕತೆ, ಅಹಿಂಸೆಯ ಸಂಕೇತಗಳು ಈ ಕಥೆಯ ಆಶಯ. ಗಾದರಿಪಾಲನಾಯಕನಿಗೆ ಮತ್ತು ಹುಲಿದಂಪತಿಗಳಿಗೆ ಏರ್ಪಟ್ಟ ಒಪ್ಪಂದದ ವಿಪರ್ಯಾಸ ಇದರ ವಸ್ತು. ಗಾದರಿಪಾಲನಾಯಕ ಅವನ ತಮ್ಮ ಚಿನ್ನಪಾಲನಾಯಕ ಇಬ್ಬರೂ ಸೇರಿ ತುರುಮಂದೆ ಮೇಲೆ ದಾಳಿ ಮಾಡಿದ ಹುಲಿಗಳೊಂದಿಗೆ ಹೋರಾಡಿ ಕೊಂದು ತಾವೂ ಮಡಿದದ್ದು, ಮಡದಿಯರು ಮಹಾತಿಯರಾಗಿದ್ದು ಇವು ಮ್ಯಾಸಬೇಡ ಸಮುದಾಯದ ವೈವಿಧ್ಯಮಯ ಸಾಹಸಕ್ಕೆ ಮೊಟ್ಟಮೊದಲ ಉದಾಹರಣೆ. ಇಂಥದ್ದೇ ಒಂದು, ಇದಕ್ಕೆ ಕಾಡುಗೊಲ್ಲರ ಕಳಿಂಗರಾಯ ಕತೆ ಹೋಲುತ್ತದೆ.

ಪಶುಪಾಲಕನಾಗಿದ್ದ ಗಾದರಿಪಾಲನಾಯಕ ಸಾಂಸ್ಕರತಿಕ ನಾಯಕನೆಂಬುದು ಸ್ಪಷ್ಟ. ಈತ ತನ್ನ ಸಂಘಟನೆಯೊಂದಿಗೆ ತನ್ನ ಜನಾಂಗವನ್ನು ರಕ್ಷಿಸುವ ಜವಾಬ್ದಾರಿಯನ್ನು ಹೊಂದಿರಬೇಕು. ತುರುಮಂದೆಗೆ ನುಗ್ಗಿದ ಹುಲಿಗಳನ್ನು ಕೊಲ್ಲುವಾಗ ಧೈರ್ಯಗುಂದದೆ ಹೋರಾಡಿ ಮಡಿದ ವೀರನಾದ್ದರಿಂದ ಜನಮನಗಳಲ್ಲಿ ಅಮರನಾಗಿದ್ದಾನೆ. ಹೊಯ್ಸಳರ ಸಳ, ಲಾಂಬಾಣಿಗರ ರಾಮೋಜಿ, ಮೈಸೂರಿನ ಟಿಪ್ಪುಸುಲ್ತಾನ ಮುಂತಾದವರ ಇಂಥ ಹೋರಾಟಗಳಿಗೆ ಗಾದರಿಪಾಲನಾಯಕನ ಸಾಹಸವನ್ನು ಹೋಲಿಸಬಹುದು. ಇವನದು ಅವರೆಲ್ಲರಿಗಿಂತಲೂ ಭಿನ್ನವಾದ ಮಹಾಸಾಹಸದ ಘಟನೆ. ಸಂಬಂಧಿಸಿದ ಶಾಸನ ಹಾಗೂ ಶಿಲ್ಪಗಳು ಇದರ ಬಗ್ಗೆ ಬೆಳಕು ಚೆಲ್ಲುತ್ತವೆ. ಸೆಟ್ಟೂರು ಸೆಟ್ಟಪ್ಪರಾಜನಂಥ ಪಾಳೆಯಗಾರನ ಮಕ್ಕಳನ್ನು ಮದುವೆಯಾದರೂ ರಾಜಕೀಯ ಆಳ್ವಿಕೆಯ ಇವನಿಗೆ ಸೋಂಕಲಿಲ್ಲ. ರಾಜಪ್ರಭುತ್ವದ ಸಾಧನೆಗಿಂತಲೂ ಇವನ ಸಾಹಸ – ಸಾಧನೆಗಳು ಅವಸ್ಮರಣೀಯವಾದವು. ಆದುದರಿಂದಲೇ ಜನಮನದಲ್ಲಿ ಜೀವಂತಗೊಂಡ ಗಾದರಿಪಾಲನಾಯಕನನ್ನು ತಲೆಮಾರುಗಳಿಂದಲೂ ಮಂದಲವಾರು, ಗುಂಡೇತಲಾರು ಎಂಬ ಮ್ಯಾಸಬೇಡರ ಬೆಡಗಿನವರು ಆರಾಧಿಸಿಕೊಂಡು ಬಂದಿದ್ದಾರೆ. ಹುಟ್ಟಿದ ಮಕ್ಕಳಿಗೆ ಗಾದರಮ್ಮ, ಗಾದಿರಪ್ಪ, ಗಾದಿ ಎಂದೆಲ್ಲ ಹೆಸರಿಡುವುದುಂಟು. ಇಂದು ಶೈವಿಕರಣಗೊಳಿಸಿದ ನಾಯಕನಿಗೆ 'ಗಾದ್ರಿಲಿಂಗೇಶ್ವರ' ನೆಂದು ಕೆಲವು ಕಡೆ ಕರೆಯುವರು. ಹೀಗೆ ಮಧ್ಯಕರ್ನಾಟಕದ ಮ್ಯಾಸಬೇಡರ ಸಾಂಸ್ಕೃತಿಕ ಲೋಕದಲ್ಲಿ ಧೃವತಾರೆಯಂತೆ ಮಿಂಚು ಮರೆಯಾದವರ ಪೈಕಿ ಗಾದರಪಾಲನಾಯಕನ ವ್ಯಕ್ತಿತ್ವ ಅಪರಿಮಿತವಾದುದು.[4]



ಗಾದರಿಪಾಲನಾಯಕ ದೇವರ ಪೂಜಾರಿಯ ಪಟ್ಟಾಭಿಷೇಕ

[1] ನೋಡಿ :ಗಾದರಿಪಾಲನಾಯಕ ೧೯೯೯, ಪುಟ:೫೭

[2] ಚಳ್ಳಕೆರೆ ಭಾಗದ ಜನಪದರು ಚಿನ್ನಪಾಲನಾಯಕನು ಅಣ್ಣನನ್ನು ನೋಡಲು ಮಿಂಚೇರಿ ಅರಣ್ಯದ ಕಡೆ ಬಂದನು. ಹುಲಿಮರಿಗಳು ಹಸುವಿನ ಕರುಗಳೊಂದಿಗೆ ಗೂಡಿನಲ್ಲಿ ಆಟವಾಡುತ್ತಿದ್ದವು. ಇವನು ಭಯಗೊಂಡು ಅಪಾಯಬರಬಹುದೆಂದು ಬಂದೂಕಿನಿಂದ ಕೊಂದನೆಂದು ಹೇಳುತ್ತಾರೆ. ಭಾರತಕ್ಕೆ ವಿದೇಶಿಯರು ಬಂದ ನಂತರದ ಕಥಾಬೆಳವಣಿಗೆಯಲ್ಲಿ ಬಂದೂಕಿನ ಪ್ರಯೋಗ ಸೇರಿ ಇಂದಿನ ಜನಪದರು ಆ ರೀತಿ ಹೇಳಿರಬಹುದು.

[3] ಜರಿಮಲೆ ಕೂಡ್ಲಿಗಿ ತಾಲೂಕಿನಲ್ಲಿರುವ ಒಂದು ಐತಿಹಾಸಿಕ ಸ್ಥಳ


[4] ನೋಡಿ: ಗಾದರಿಪಾಲನಾಯಕ, ೧೯೯೯, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

# ೬. ಚಿತ್ರದುರ್ಗ ಜಿಲ್ಲೆಯ ಬುಡಕಟ್ಟು ವೀರರು (3)

**೬.೩. ಜಗಳೂರು ಪಾಪನಾಯಕ**

ಜಗಳೂರಜ್ಜರಿಗೆ ಜಗಳೂರು ಪಾಪಜ್ಜ, ಪಾಪೇದೇವರು, ಪರದೇಶಿಪಾಪಯ್ಯ, ಪಾಪಿನಾಯಕ, ಸೂರ್ಯದೇವ ಪಾಪನಾಯಕ, ಕೊರೇಲುಪಾಪಯ್ಯ, ಜೋಗಯ್ಯ ಮುಂತಾದ ಹೆಸರುಗಳಿಂದ ಕರೆಯುವ ವ್ಯಕ್ತಿ ಮ್ಯಾಸಬೇಡರ ಒಬ್ಬ ಬುಡಕಟ್ಟು ವೀರ. ಇಂದು ಈತನೊಬ್ಬ ಆರಾಧ್ಯ ದೇವತೆಯಾಗಿರುವುದು ಗಮನಾರ್ಹ. ಪಾಪನಾಯಕ ಒಬ್ಬ ಪಶುಪಾಲಕನಾಗಿ ತನ್ನ ಸಾಂಸ್ಕೃತಿಕ ಬದುಕಿನೊಂದಿಗೆ ಆಧ್ಯಾತ್ಮಿಕ ರಂಗವನ್ನು ಪ್ರವೇಶಿಸಿದ ಮಹಾವೀರ. ಇಲ್ಲಿ ಜಗಳೂರು ಪಾಪನಾಯಕನ ಜೀವನದ ಕೆಲವು ಮಹತ್ವದ ಘಟನೆಗಳಲ್ಲಿ ಜನನ, ವಿದ್ಯಾಭ್ಯಾಸ, ವೃತ್ತಿ, ಸಾಧನೆ, ಅವಸಾನ ಇತರ ಸಂಗತಿಗಳನ್ನು ವಿಶ್ಲೇಷಿಸಲಾಗುತ್ತದೆ.

ಈವರೆಗೆ ಜಗಳೂರು ಪಾಪಜ್ಜನನ್ನು ಮ್ಯಾಸಬೇಡರು ಪವಾಡ ಪುರುಷನೆಂದು ಹೆಚ್ಚಾಗಿ ನಂಬಿದ್ದರು. ಆದರೆ ಅವನ ಬದುಕಿನ ಪಲ್ಲಟಗಳನ್ನು ಅವಲೋಕಿಸಿದರೆ ಆ ಮಟ್ಟಕ್ಕಿಂತ ಭಿನ್ನವಾದ ನೆಲೆಗಳು ಕಂಡುಬರುತ್ತವೆ. ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮುರು, ಚಳ್ಳಕೆರೆ, ಹಿರಿಯೂರು, ಹೊಳಲ್ಕೆರೆ; ದಾವಣಗೆರೆ ಜಿಲ್ಲೆಯ ದಾವಣಗೆರೆ, ಜಗಳೂರು ತಾಲೂಕುಗಳಲ್ಲದೆ, ಬಳ್ಳಾರಿ ಜಿಲ್ಲೆಯ ಹೊಸಪೇಟೆ, ಕೂಡ್ಲಿಗಿ, ದಶಮಾಪುರ, ಸಂಡೂರು ತಾಲೂಕುಗಳಲ್ಲಿ ಈತನ ಅನುಯಾಯಿಗಳಿದ್ದಾರೆ. ಹೊಸಪೇಟೆ ತಾಲೂಕಿನಲ್ಲಿ ಪಾಪಿನಾಯಕನಹಳ್ಳಿ ಎಂಬ ಗ್ರಾಮವಿದ್ದು ವೀರಗಲ್ಲು, ಕೋಟೆ, ದೇವಾಲಯಗಳಿರುವುದನ್ನು ಗಮನಿಸಿದರೆ ಈತನಿಗೆ ಈ ಗ್ರಾಮಕ್ಕೆ ಸಂಬಂಧವಿದ್ದಂತಿದೆ.



ಜಗಳೂರು ಪಾಪನಾಯಕನ (ಸಮಾಧಿ) ದೇವಾಲಯ, ಜಗಳೂರು

ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರು, ಚಳ್ಳಕೆರೆ, ಜಗಳೂರು ಮತ್ತು ಕೂಡ್ಲಿಗಿ ತಾಲೂಕುಗಳ ನಡುವಿನ ಪ್ರದೇಶವನ್ನು 'ನಡುಗಡ್ಡೆ' ಎನ್ನುತ್ತಾರೆ. ಇದಕ್ಕೆ ರಾಯದುರ್ಗ ತಾಲೂಕಿನ ಅಲ್ಪಭಾಗ, ಹಿರಿಯೂರು, ಚಿತ್ರದುರ್ಗ, ಹೊಳಲ್ಕೆರೆಯ ಕೆಲವು ಭಾಗಗಳು ಸೇರಿವೆ. ವೇದಾವತಿ ನದಿಯು ಹರಿಯುವ ಭಾಗವಾದ ರಾಯದುರ್ಗದಿಂದ ಜನಿಗೆಹಳ್ಳದ ಆಗ್ನೇಯ ದಿಕ್ಕಿಗಿರುವ 'ಗರಣಿ' ಕಾಲುವೆಯ ದಂಡೆಯ ಮೇಲಿರುವುದೇ 'ನಡುಗಡ್ಡೆ' ಅಥವಾ 'ಜಂಬೂದ್ವೀಪಲುಗುಡ್ಡೆ' ಎಂದು ಕರೆಯುತ್ತಾರೆ. ಇಲ್ಲಿ ವಾಸಿಸುವವರಿಗೆ ನಡುಗಡ್ಡೆ ನಾಯಕರೆಂದು, ದೊರೆಗಳೆಂದು ಕರೆಯುವರು. ಇವರಲ್ಲಿ ಯರಮಂಚಿನಾಯಕನೂ ಪವಾಡ ಪುರುಷ. ಮದುವೆ, ಹಬ್ಬ, ಹರಿದಿನಗಳಲ್ಲಿ ಮೊದಲ ವೀಳ್ಯವನ್ನು

ಇವರಿಗೆ ಕೊಡುತ್ತಾರೆ. ಈ ನಡುಗಡ್ಡೆ ನಾಯಕರು ಜಗಳೂರು ಪಾಪನಾಯಕನನ್ನು ಆರಾಧಿಸುವುದುಂಟು. ಇವರಲ್ಲಿ ಎರಡು ಪಂಗಡಗಳಿವೆ. ೧. ಮಂದಲಗೋತ್ರ – ಮಂದಭೂಪಾಲ (ಮಂದವಾಡು), ೨. ಮಲ್ಲಿನಾಯಕ ಗೋತ್ರ – ಶುಕ್ಲಮಲ್ಲಿನಾಯಕ (ಮಲ್ಲಿನಾಯಕವಾಡು).

**ಜನಪದ ವೃತ್ತಾಂತ: ಪಾಪಿನಾಯಕನ ಮತ್ತು ಪುರ್ವಿಕರ ಪರಿಸರ**

ಮಂದಲಗೋತ್ರದ ಮೂಲ ಪುರುಷ ಮಂದಭೂಪಾಲ. ವಿಂಧ್ಯಾಪರ್ವತ, ನರ್ಮದಾನದಿ ಮತ್ತು ತಪತೀ ನದಿಗಳ ತೀರ ಮತ್ತು ಗಿರಿತಪ್ಪಲಿನ ದನಗಳ ಮಂದೆಯಲ್ಲಿ ಇವನು ಜನಿಸಿದ. ಬುಟ್ಟುಗಲ ವಂಶದವರು ತಮ್ಮ ದನಗಳ ಮಂದೆಯಲ್ಲಿ ಚೀರುತ್ತಾ ಆಕ್ರಂದನ ಮಾಡುತ್ತಿದ್ದ ಮಗುವನ್ನು ಸಾಕಿಸಲಹಿದರು. ಇವನು 'ಪ್ರಮೀಳಾ'ನನ್ನು ಮದುವೆಯಾಗಿ ನಾಲ್ಕು ಜನ ಮಕ್ಕಳನ್ನು ಪಡೆಯುತ್ತಾನೆ. ಮಂದಭೂಪಾಲನ ಸಂತತಿಗೆ 'ಮಂದಲಗೋತ್ರ'ವೆಂದು ಹೆಸರಾಯಿತು. ಇವನ ಹಿರಿಯಮಗ ಅಂಭೋಜರಾಜನು. ಶ್ರೀಕೃಷ್ಣನಿಂದ ಶಾಪಗ್ರಸ್ತನಾಗಿ ಸತಿ – ಸುತರೊಂದಿಗೆ ಬೆಟ್ಟ – ಗುಡ್ಡ. ಕಾಡಲ್ಲಿ ಅಲೆದಾಡಿದರು. ತಾರಕರಾಮನಾಮ ಜಪಿಸಿ ಕೊನೆಗೆ ವಾಲ್ಮೀಕಿಯಾದ ಎಂಬ ಜನಪದ ಕಥೆ ಪ್ರಚಲಿತದಲ್ಲಿದೆ.

ಎರಡನೇ ಗೋತ್ರವು ಮಲ್ಲಿನಾಯಕ ಎಂಬುದು. ಇದನ್ನು ಶುಕ್ಲಮಲ್ಲಿನಾಯಕ ಸ್ಥಾಪಿಸಿದ. ಪಂಪಾದ್ರಿ ಬಸವನ ಚಿಟ್ಟೆ ಗೊರಸಿನಲ್ಲಿ ಹುಟ್ಟಿದವನು ಶುಕ್ಲಮಲ್ಲಿನಾಯಕ ಎಂಬ ಪ್ರತೀತಿಯಿದೆ. ಇವನನ್ನು ಅಂಭೋಜರಾಜನ ತಮ್ಮನ ಹೆಣ್ಣುಮಕ್ಕಳು ಸಾಕಿ – ಸಲುಹಿ – ದೊಡ್ಡವನನ್ನಾಗಿ ಮಾಡಿದವರು. ಅಂಭೋಜರಾಜನ ಮಗಳು 'ದಾನಸಾಲಮ್ಮ ದೇವಿ'ಯನ್ನು ಶುಕ್ಲಮಲ್ಲಿನಾಯಕ ವಿವಾಹವಾಗಿದ್ದ. ಕಲಿಯುಗದ ಶುಕ್ಲಮಲ್ಲಿನಾಯಕನ ಗೋತ್ರದಲ್ಲಿ ಯರಮಂಚಿನಾಯಕ ಜನಿಸಿದ. ಮೂರು ನೂರು ಸಾವಿರ ಬೇಡರನ್ನು ಒಂದುಗೂಡಿಸಿ ಬೇಡರ ದೊರೆಯನ್ನಾಗಿ ಮಾಡಿದರು. ಈ ಯರಮಂಚಿನಾಯಕನ ಚಿಕ್ಕಪ್ಪನ ಮಗನೇ ಕೋರಮಲ್ಲಿನಾಯಕ.

ಕೋರ್ಲಮಲ್ಲಿನಾಯಕ ನಡುಗಡ್ಡೆ ಪ್ರದೇಶದ ಕಕ್ಕಲಬೆಂಚ, ಕಾರಚೆರವು ಕಾವಲುಗಳ (ಹುಲ್ಲುಗಾವಲು) ರೊಪ್ಪಗಳನ್ನು ಕಟ್ಟಿಕೊಂಡು ಮುತ್ತಿಗಾರರ (ದೇವರ) ಎತ್ತುಗಳನ್ನು ಸಲುಹುತ್ತ ಜೀವನ ಮಾಡುತ್ತಿದ್ದರು. ಇವನಿಗೆ 'ಬಾಳೆಪಟ್ಟಮ್ಮ' ಎಂಬ ಹೆಂಡತಿಯೂ ಮತ್ತು ಪಚ್ಚೆಪದಿಪಾಲಮ್ಮ ಎಂಬ ತಂಗಿಯೂ ಇದ್ದರು. ಪಚ್ಚಪದಿ ಪಾಲಮ್ಮ ಬೇಡರಲ್ಲಿ ಅಪೂರ್ವ ಸುಂದರಿಯಾಗಿದ್ದಳು. ಇವಳ ಕಮಲದಂಥ ಮುಖ, ಅರಳಿದ ಕಣ್ಣುಗಳು ಉಬ್ಬಿದ ಎದೆ ಹೀಗೆ ಆಕರ್ಷಕವಾದ ಸೌಂದರ್ಯ ಇವಳಲ್ಲಿತ್ತು. ಅಣ್ಣ ಕೋರ್ಲಮಲ್ಲಿನಾಯಕ ಹಗಲಿರುಳು ಇವಳ ವಿವಾಹದ ಬಗ್ಗೆ ಚಿಂತಿಸುತ್ತಿದ್ದ. ಒಮ್ಮೆ ಇವಳು ನಾರು ಸೀರೆ ಮರದನಾರಿನ ಪಟ್ಟೆಗಳನ್ನು ಎದೆಗಳಿಗೆ ಕಟ್ಟಿಕೊಂಡಿದ್ದಳು. ಕಾಡಿನಲ್ಲಿ ದೊರೆತ ಮಣಿಗಳ ಸರಗಳನ್ನು ಹಾಕಿಕೊಂಡು ಹಣೆಗೆ ಪಟ್ಟಿಕಟ್ಟಿಕೊಂಡು ರಂಗುರಂಗಿನ ಗರಿಗಳನ್ನು ಮುಡಿದು ಕೊಂಡು ಮಣ್ಣಿನ ಕೊಡಹೊತ್ತು, ಯೌವ್ವನದ ಮೈಯಾರದ ನಡಿಗೆಯಲ್ಲಿ 'ಕಾರಚೆರುವು' ಹಳ್ಳಕ್ಕೆ ನೀರು ತರಲು ಹೋದಳು. ಆ ನೀರಿನಲ್ಲಿ ಕಾಲುಗಳನ್ನು ಚಾಚಿಕೊಂಡು ಆಟವಾಡುತ್ತಾ ಕೊಡಕ್ಕೆ ನೀರು ತುಂಬುತ್ತಿದ್ದಳು. ದಂಡುದಳದೊಂದಿಗೆ ಬೇಟೆಯಾಡುತ್ತಾ ಬಾಯಾರಿಕೆಯಿಂದ ಅಲ್ಲಿಗೆ ಬಂದಿದ್ದ ಕ್ಯಾಸಾಪುರದ ಕ್ಯಾಸನೇನು ಎಂಬ ಬೇಡರ ದೊರೆ ಇವಳನ್ನು ನೋಡಿದ. ಬಿಸಿಲಲ್ಲಿ ಬೇಟೆಗಾಗಿ ಕಾಡೆಲ್ಲ ಅಲೆದು ಬೇಸತ್ತು ದಣಿದಿದ್ದವನು ಪಾಲಮ್ಮನ ವಿನೋದದಿಂದ ಅದೆಲ್ಲವನ್ನು ಅವನು ಮೈಮರೆತ. ಈ ಕಾಡ ಬೆಡಗಿಯನ್ನು ಒಲಿಸಿಕೊಳ್ಳಲು ಏನೆಲ್ಲಾ ತಂತ್ರವನ್ನು ಮಾಡಿದ. ಕೊನೆಗೆ ತನ್ನ ದಂಡು – ದಳಕ್ಕೆ ಅವಳನ್ನು ಅಪಹರಿಸುವಂತೆ ಆದೇಶಿಸಿದ. ಅದರಂತೆ ಅವಳ ಕಿರುಚಾಟ, ರಂಪವನ್ನು ಲೆಕ್ಕಿಸದೆ ಬಾಚಿ ತಬ್ಬಿಕೊಂಡು ಪಲಾಯನ ಮಾಡಿದರು. ತನ್ನೂರಾದ ಕ್ಯಾಸಾಪುರದಲ್ಲಿ ತುರ್ತಾಗಿ ಪಾಲಮ್ಮನನ್ನು ಮದುವೆ ಮಾಡಿಕೊಂಡ. ಆ ಗ್ರಾಮದ ಜನರಿಗೆ ಎಲ್ಲಿಲ್ಲದ ಆನಂದ ಮತ್ತು ಆತಂಕಗಳೆರಡು ಕಾದಿದ್ದವು.

ಕೋರ್ಲಮಲ್ಲಿನಾಯಕ, ಬಾಳೆಪಟ್ಟಮ್ಮ ಸೇರಿ ಪಾಲಮ್ಮನು ಮನೆಗೆ ಬಾರದೆ ಇರುವುದನ್ನು ಕಂಡು ನದಿಯ ಕಡೆ ಹುಡುಕಲು ಹೋದರು. ಎಲ್ಲಿಯೂ ಕಾಣಲಿಲ್ಲ ಎಂದಾಗ ಇನ್ನೇನು ಹಿಂತಿರುಗಬೇಕು ಆಗ ದಡದಲ್ಲಿ ಒಡೆದು ಬಿದ್ದಿದ್ದ ಕೊಡದ ಚೂರುಗಳು ಕಂಡವು. ದಂಪತಿಗಳಿಬ್ಬರೂ ಪರಿಪರಿಯಾಗಿ ಚಿಂತಿಸುತ್ತಾ ಮುನ್ನಡೆದರು. ಯಾರಾದರೂ ಅಪಹರಿಸಿದರೋ ಅಥವಾ ದುಷ್ಟಪ್ರಾಣಿಯಿಂದ ಹತವಾದಳೋ ಎಂದು

ಹುಡುಕಲು ಮುಂದಾದರು. ಪಾಲಮ್ಮನ ಬಗ್ಗೆ ಯಾರನ್ನು ವಿಚಾರಿಸಿದಾಗಲೂ ಆ ಹುಡುಗಿಯನ್ನು ಅಪಹರಿಸಿ ಮದುವೆಯಾದುದನ್ನು ತಿಳಿಸಿದರು. ಕೂಡಲೇ ದಂಪತಿಗಳಿಬ್ಬರು ಕ್ಯಾಸಾಪುರದ ಕ್ಯಾಸನೋನನ್ನು ಭೇಟಿಮಾಡಿ ನಡೆದ ಘಟನೆ ಬಗ್ಗೆ ಸಮಾಲೋಚಿಸಿ ತನ್ನ ತಂಗಿ ಯೋಗಕ್ಷೇಮ ಮೊದಲಿಗಿಂತಲೂ ಉತ್ತಮವಾಗಿರಬೇಕೆಂದು ತಿಳಿಸಿ, ಅವಳಿಗೆ ಆಶೀರ್ವಾದ ಹೇಳಿಬಂದರು.

ಕೋರ್ಲಮಲ್ಲಿನಾಯಕ ತನ್ನ ತಂಗಿಯ ಮದುವೆಯನ್ನು ಸಂಪ್ರದಾಯದಂತೆ ಮಾಡಲಾಗಲಿಲ್ಲ ಎಂದು ಜಿಗುಪ್ಸೆಪಟ್ಟುಕೊಂಡ. ಅದು ಯಾರಿಗೂ ತಿಳಿಯದಂತೆ ರಾತ್ರೋರಾತ್ರಿ ವಿವಾಹವಾದ ಸಂಗತಿ ಎಲ್ಲರನ್ನು ದಿಗ್ಭ್ರಮೆಗೊಳಿಸಿತ್ತು. ಹೀಗೆ ಇರುವಾಗ ಬಾಳೆದಪಟ್ಟಮ್ಮ ಗರ್ಭವತಿಯಾಗಿದ್ದು, ಗಂಡನಿಗೆ ಚೇತನವನ್ನು ತುಂಬುತ್ತಿದ್ದಳು. ಅವನು ಸಹಾ ಹೆಂಡತಿ ಹೆರಿಗೆಯ ನೆರವಿಗಾಗಿ ತಂಗಿ ಪಾಲಮ್ಮನನ್ನು ಕರೆತರಲು ಕೋರ್ಲಮಲ್ಲಿನಾಯಕ ಕ್ಯಾಸಾಪುರಕ್ಕೆ ಹೋದನು.

ಪಾಲಮ್ಮನನ್ನು ಕರೆತರಲು ಕ್ಯಾಸನೋನು ಜಾಗರೂಕತೆಯಿಂದ ಸಾಕತೊಡಗಿದ್ದನು. ಇವಳಿಗೆ ಯಾವುದರಲ್ಲಿಯೂ ಕೊರತೆ ಮಾಡಿರಲಿಲ್ಲ. ಇವಳಿಗಿದ್ದ ಏಕೈಕ ಕೊರತೆಯೆಂದರೆ ತನ್ನ ಪ್ರೀತಿಯ ಅಣ್ಣ – ಅತ್ತಿಗೆಯಿಂದ ಅಕ್ಕಿಕಾಳು ಹಾಕಿಸಿಕೊಳ್ಳದೇ ಇರುವುದು. ಇದನ್ನು ಬಿಟ್ಟರೆ ಮತ್ತೇನು ಕಾಡಿಲ್ಲ. ಒಮ್ಮೆ ಕೋರ್ಲಮಲ್ಲಿನಾಯಕ ತಂಗಿಯನ್ನು ಕರೆಯಲಿಕ್ಕೆ ಬಂದಾಗ, ಅತ್ತಿಗೆ ಗರ್ಭಿಣಿಯಾದ ಸಂಗತಿ ತಿಳಿದು ಸಂತೋಷಗೊಂಡಳು. ಅತ್ತಿಗೆಯ ಹೊಟ್ಟೆಯಲ್ಲಿ ಹುಟ್ಟುವ ಮಗುವಿನ ಬಗ್ಗೆ ನಾನಾ ರೀತಿಯ ಕನಸು ಕಂಡಳು. ಕೋರ್ಲಮಲ್ಲಿನಾಯಕನು ಕ್ಯಾಸನೋನನ್ನು ಕಂಡು ತನ್ನ ತಂಗಿಯನ್ನು ಹೆಂಡತಿಯ ಹೆರಿಗೆಗೆ ನೆರವಾಗಲು ಕಳುಹಿಸುವಂತೆ ಕೇಳಿಕೊಂಡನು. ನಾಯಕನಿಗೆ ಕ್ಯಾಸನೋನು ಮಾವಯ್ಯ ಇಲ್ಲಿಯವರೆಗೆ ನಿನ್ನ ತಂಗಿ ಅಂದರೆ ಈಗ ನನ್ನ ಹೆಂಡತಿ ಈ ಕಾಡುಮೇಡಿನಲ್ಲಿ ಕಷ್ಟಪ್ಟು ಗಡ್ಡೆಗೆಣಸು, ಹಣ್ಣು – ಹಂಪಲುಗಳನ್ನು ತಿಂದುನಾರು ಸೀರೆಯನ್ನುಟ್ಟು ಬಾಳಿದ್ದಾಳೆ. ಪುನಃ ಅದೇ ಕಾಡಿನ ಅದೇ ಬದುಕು ಅವಳಿಗೆ ಬೇಡ ಎಂದನು. ಅವಳು ಈಗ ಸುಖ, ನೆಮ್ಮದಿಯಿಂದ ಇದ್ದಾಳೆ. ನಿಮ್ಮಲ್ಲಿಗೆ ಬಂದರೆ ಏನಾದರೂ ತೊಂದರೆ ಆಗಬಹುದು ಎಂದು ತಿರಸ್ಕರಿಸಿದ. ಬಹುಶಃ ಕ್ಯಾಸನೋನು ನಾಗರೀಕತೆಯ ಪ್ರಭಾವಕ್ಕೆ ಒಳಪಟ್ಟಂತೆ ಕಂಡುಬರುತ್ತದೆ. ಇವರಿಬ್ಬರಾಡುವ ಮಾತುಗಳನ್ನು ಬಾಗಿಲಲ್ಲಿ ನಿಂತ ಪಾಲಮ್ಮನು ಸಹಾ ಆಲಿಸುತ್ತಿದ್ದಳು. ಅಣ್ಣ ತವರಿಗೆ ಕರೆಯಲು ಬಂದಿದ್ದಾನೆಂದು ಪೂರ್ವವೃತ್ತಾಂತವನ್ನು ಸ್ಮರಿಸಿಕೊಂಡಳು. ಕಾಡಿನ ಜೀವನಕ್ಕೂ ಈಗಿನ ಜೀವನಕ್ಕೂ ತುಲನೆ ಮಾಡಿದ್ದಳು. ದಟ್ಟವಾದ ಅರಣ್ಯ, ಸರೋವರ, ಮರ, ಗಿಡ, ಹಕ್ಕಿಗಳು, ನೀರಲ್ಲಿನ ನೀರುಕೋಳಿ, ಬಾತುಕೋಳಿ, ಮೀನುಗಳು, ಬಯಲಿನಲ್ಲಿನ ಮೊಗಳು, ಚಿಗರೆಗಳು ಇತರ ಎಲ್ಲಾ ಪ್ರಾಣಿಗಳು ನೆನಪಿನಲ್ಲಿ ಸುಳಿದವು. ತನ್ನ ಗಂಡ ತವರಿನ ಬಗ್ಗೆ ಹೀಯ್ಯಾಳಿಸಿದ್ದುದನ್ನು ಕೇಳಿ ದುಃಖಪಟ್ಟಳು.

ಕ್ಯಾಸನೋನನ್ನು ನಾನಾ ವಿಧವಾಗಿ ಬೇಡಿಕೊಂಡರೂ ಕೋರ್ಲಮಲ್ಲಿನಾಯಕನಿಗೆ ಫಲ ಸಿಗಲಿಲ್ಲ. ಅವನು ಒಪ್ಪಲೇ ಇಲ್ಲ. ಅತೀ ದುಃಖಿತನಾಗಿ ಹಿಂತುರುಗಿದ ನಾಯಕ ಕಾಡಿನಲ್ಲಿ ಅಳುತ್ತಾ ಹೋಗುತ್ತಿದ್ದನು. ದಾರಿಯ ಮಧ್ಯದಲ್ಲಿ ಕ್ಯಸಾಪುರದ ಗಳಗಂಟಗಾದ ಶೆಟ್ಟಿ ಎಂಬುವರು ಮಲ್ಲಿನಾಯಕನ ಗೋಳನ್ನು ತಾಳಲಾರದೆ ವಿಚಾರಿಸದನು. ಇದ್ದ ವಿಷಯ, ನಡೆದ ಪ್ರಸಂಗವನ್ನು ನಾಯಕ ತಿಳಿಸಿದನು. ಹೆರಿಗೆ ಮಾಡಲು ಹೆಣ್ಣೇ ನೆರವಿಗೆಬೇಕು. ಹೆಂಡತಿ ಒಬ್ಬಳೇ ಕಾಡಲ್ಲಿರುವುದರಿಂದ ತನಗೆ ಯಾರ ನೆರವೂ ಇಲ್ಲ. ಎಂದೆಲ್ಲಾ ಚಿಂತಿಸಿ ವಿವರಿಸಿದ. ಈ ವಿಷಯ ಕೇಳಿದ ಗಂಟಾ ಗಾದಶೆಟ್ಟಿಗೆ ದುಃಖ ಉಕ್ಕಿಬಂತು. ಕ್ಯಾಸನೋನನ್ನು ನಿಂದಿಸಿದನಲ್ಲದೆ, ಒಬ್ಬನ ಕಷ್ಟವನ್ನು ಅರಿಯದ ವ್ಯಕ್ತಿ, ಸುಖ – ಸಂಪತ್ತಿನಿಂದ ಧೀಮಾಕು ವರ್ತನೆಯನ್ನು ಖಂಡಿಸಿದ. ನಾಯಕನನ್ನು ಹಿಂದಕ್ಕೆ ಕರೆದುಕೊಂಡುಬಂದನು. ಕಾಡಿನಲ್ಲಿದ್ದ ಹುಡುಗಿಯನ್ನು ಅಪಹರಿಸಿ ತಂದು ಮದುವೆ ಮಾಡಿಕೊಂಡನಲ್ಲದೆ, ಇಂಥಾ ಹೀನ ಮನಸ್ಸಿನ ಲಕ್ಷಣಗಳನ್ನು ಪ್ರದರ್ಶಿಸುವುದು ಸರಿಯಲ್ಲ ಎಂದನು.

ಕ್ಯಾಸನೋನು ತನ್ನ ಹೆಂಡತಿಯನ್ನು ಬಹಳವಾಗಿ ಪ್ರೀತಿಸುತ್ತಿದ್ದನು. ಅವಳನ್ನು ಕಳುಹಿಸಿಕೊಡದೆ ಇರಲಿಕ್ಕೆ ಕಾರಣಗಳೆಂದರೆ: ಮುಳ್ಳುಮೊನೆಯಷ್ಟು ಕೊರತೆ ಮಾಡಬಾರದು. ಕಾಡಿನ ಗೆಡ್ಡೆಗೆಣಸು ತಿಂದು ಅವಳ ಸೌಂದರ್ಯ ವಿಕಾರವಾಗಬಹುದು. ಅತ್ತಿಗೆಗೆ ಹೆರಿಗೆಯಾದ ಮನೆಯ ಕೆಲಸವನ್ನು ಇವಳೇ ನಿರ್ವಹಿಸಬೇಕಾಗುತ್ತದೆ. ನೀರು ತರಬೇಕು, ಮರಗಿಡಗಳಲ್ಲಿ ಕಟ್ಟಿಗೆ ಆರಿಸಿಕೊಂಡು ಬರಬೇಕು.

ಕಟ್ಟಿಗೆ ಆರಿಸುವಾಗ ತನ್ನ ಮಡದಿಗೆ ಮುಳ್ಳು ಚುಚ್ಚಬಹುದು. ನೀರು ತರುವಾಗ ಎಲ್ಲಾದರೂ ಎಡವಿಬಿದ್ದು ಏನಾದರೂ ತೊಂದರೆಯಾದರೆ, ನನ್ನ ಹೆಂಡತಿಯ ರೂಪ ಹಾಳಾಗುತ್ತದೆ ಎಂದು ಕಳುಹಿಸಲು ಹಿಂದೆಮುಂದೆ ನೋಡಿದ.

ಕೋರ್ಲಮಲ್ಲಿನಾಯಕ ಮತ್ತು ಗಳಗಂಟಗಾದ್ದ ಶೆಟ್ಟಿ ಸೇರಿ ಬಂದಾಗ ಕ್ಯಾಸನೋನನಿಗೆ ಆತಂಕವಾಯಿತು. ಶೆಟ್ಟಿಯು ಈ ಗ್ರಾಮದ ಒಬ್ಬ ಧನಿಕ ಶ್ರೇಷ್ಠನೂ, ನ್ಯಾಯತೀರ್ಮಾನಗಳಲ್ಲಿ ನಿಷ್ಪಕ್ಷಪಾತವಾಗಿ ವರ್ತಿಸುತ್ತಿದ್ದನು. ಶೆಟ್ಟಿಯನ್ನು ಕ್ಯಾಸೋನೋನು ಸ್ವಾಗತಿಸಿದನು. ಶೆಟ್ಟಿ ನಾಯಕರಿಬ್ಬರು ಮನೆಯನ್ನು ಪ್ರವೇಶಿಸಿದಂತೆಯೇ ಕ್ಯಾಸನೋನು ವಿಷಯಕ್ಕೆ ಬಂದನು. ಗಾದಶೆಟ್ಟಿಯವರೇ ನನ್ನ ಹೆಂಡತಿಯನ್ನು ಕರೆಯಲು ಬಂದಿದ್ದ ಮಾವನಿಗೆ ಕಳುಹಿಸಲು ಆಗುವುದಿಲ್ಲವೆಂದು ಹಿಂದಿರುಗುವಂತೆ ಕಳುಹಿಸಿದ್ದೆ. ನನ್ನ ಹೆಂಡತಿಯನ್ನು ಬಿಟ್ಟು ಇರಲಾರೆ, ಕಾಡಿನಲ್ಲಿ ಬೆಳೆದ ಅವಳು ಇಲ್ಲಿ ಸುಖವಾಗಿದ್ದಾಳೆ. ಅವಳಿಗೆ ಯಾವ ತೊಂದರೆ ಆಗಿಲ್ಲ. ಹೀಗಾಗಿ ಮುಂದೆಯು ಕಾಡಿನಿಂದ ಇತರ ದುಷ್ಟಪ್ರಾಣಿಗಳಿಂದ ಯಾವ ತೊಂದರೆಯು ಸಂಭವಿಸದಂತೆ ಇರಲಿ ಎಂದು ಕಳುಹಿಸಿಲ್ಲ ಎಂದನು.

ವಿಷಯ ತಿಳಿದ ಶೆಟ್ಟಿಗೆ ಹೆಂಡತಿಯ ಮೇಲಿನ ಪ್ರೀತ ಬಗ್ಗೆ ಆನಂದವಾಯಿತು. ಕೋರ್ಲಮಲ್ಲಿನಾಯಕನೂ ಸಹ ತಂಗಿಯ ಸ್ಥಿತಿ – ಗತಿ ಅರಿತು ಸಂತೋಷಪಟ್ಟನು. ಕ್ಯಾಸನೋನೆ ಹೆಣ್ಣಿನ ಜೀವನದಲ್ಲಿ ಹೆರಿಗೆ ಬರುವುದು ಕಂಕಟದ ರೀತಿಯಲ್ಲಿ ಇಂಥಾ ಸಂಕಷ್ಟದಲ್ಲಿ ಸಹಾಯ ಮಾಡಲಿಲ್ಲ ಎಂದಾಗ ಯಾವಾಗ ಮಾಡುವುದು ಎಂದು ಕೇಳಿದನು. ನವಮಾಸಗಳು ಹೊತ್ತ ಮಗು ಜನಿಸುವುದನ್ನು ನಾವು ಉಪಚರಿಸದೇ ಹೋದರೆ ಹೇಗೆ? ಕಾಡಿನಲ್ಲಿ ಬೇರ್‍ಯಾರು ಸಿಗುವುದಿಲ್ಲ. ನಿನ್ನ ಹೆಂಡತಿಯೂ ಮೂಲತಃ ಕಾಡಿನವಳು, ಕಾಡಿನಲ್ಲಿ ಆಗುವ ತೊಂದರೆಗಳನ್ನು ಅರಿತು ತವರುಮನೆಯೆಂದರೆ ಅವಳಿಗೂ ಆಸೆಯಿರುತ್ತೆ, ಮದುವೆಯಾದಾಗಿನಿಂದ ತವರುಮನೆಗೆ ಹೆಂಡತಿಯನ್ನು ಕಳುಹಿಸಿಲ್ಲ. ಅವಳ ಅತ್ತಿಗೆಯ ಹೆರಿಗೆಗಾದರೂ ಕಳುಹಿಸು ಎಂದನು.

ಶೆಟ್ಟಿಯವರು ಕೇಳಿದ್ದಕ್ಕೆ ಕ್ಯಾಸನೋನು ಇಷ್ಟವಿಲ್ಲದಿದ್ದರೂ ಗ್ರಾಮದ ಹಿರಿಯರು ಎನ್ನುವುದಕ್ಕೆ ಬೆಲೆಕೊಟ್ಟು ಕೆಲವು ಷರತ್ತುಗಳೊಂದಿಗೆ ಕಳುಹಿಸಲು ಒಪ್ಪಿದನು. ಈ ಜೀವನ ಬೇರೆ, ಕಾಡಿನ ಜೀವನ ಬೇರೆ ಏನಾದರೂ ತೊಂದರೆ ಸಂಭವಿಸಿದರೆ ಅದಕ್ಕೆ ಹೊಣೆಗಾರರು ಯಾರು? ಎಂದು ನಿಷ್ಠುರವಾಗಿ ನುಡಿದನು. ಆಗಲಿ ನಿನ್ನ ಹೆಂಡತಿಗೆ ತೊಂದರೆ ಸಂಭವಿಸಿದರೆ ಅದಕ್ಕೆ ಗಳಗಂಟಗಾದ ಶೆಟ್ಟಿಯು ನಾನೇ ಹೊಣೆಗಾರನೆಂದು ಒಪ್ಪಿಕೊಂಡನು. ಕ್ಯಾಸನೋನು ಶೆಟ್ಟಿಯವರೇ ನನ್ನ ಹೆಂಡತಿಗೆ ಆಕಸ್ಮಿಕವಾಗಿ ತೊಂದರೆಯಾದರೆ, ನೀವು ನನ್ನ ಮನೆಯಲ್ಲಿ ನಿಮ್ಮ ಜೀವ ಇರುವತನಕ ಜೀತದಾಳಾಗಿ ದುಡಿಯಬೇಕು. ಈ ನಿಬಂಧನೆಗೆ ನೀವು ಒಪ್ಪಿದರೆ ಆಯ್ತು ಮತ್ತೆ, ಹೆರಿಗೆ ಆದ ಕೂಡಲೆ ಮರಳಿ ಕರೆದುಕೊಂಡು ಬರಬೇಕೆಂದು ತಿಳಿಸಿದನು.

ಹೀಗೆ ಕಡ್ಡಾಯವಾಗಿ ನಿರ್ಬಂದ ವಿಧಿಸಿದರೆ ಶೆಟ್ಟಿಯು ಒಪ್ಪುವುದಿಲ್ಲವೆಂದು ಅರಿತು ಹೆಂಡತಿಯು ಹೋಗುವುದಿಲ್ಲವೆಂಬ ಚಾಣಾಕ್ಷತನವನ್ನು ತೋರಿಸಿದನು. ಗಳಗಂಟಗಾದ ಶೆಟ್ಟಿಗೆ ಇವನೆಂಥ ಮೂರ್ಖ, ಅವಿವೇಕಿ, ತನ್ನ ಹೆಂಡತಿಯನ್ನು ತವರಿಗೆ ಕಳುಹಿಸಲು ನೀತಿ, ನಿರ್ಬಂಧ, ಷರತ್ತುಗಳೊಡನೆ ಪಂಥವಾಡುತ್ತಾನಲ್ಲವೆಂದು, ಹೆಂಡತಿಯನ್ನು ಬಿಟ್ಟಿರಲಾರದೆ ಈ ರೀತಿಯ ನಿಯಮವನ್ನು ಪಾಲಿಸುವುದು ಕಂಡು ಆಶ್ಚರ್ಯಪಟ್ಟ. ಇವನು ಹೇಳಿದ ಎಲ್ಲಾ ನಿಬಂಧನೆಗೆ ಒಪ್ಪಿಕೊಂಡು, ಕಾಡು ಮನುಷ್ಯನ ಕಷ್ಟವನ್ನು ಪರಿಹರಿಸೋಣ ಎಂದು ಮನದಲ್ಲಿ ತೀರ್ಮಾನಿಸಿಕೊಂಡು ಅಯ್ಯ, ಕ್ಯಾಸನೋನೇ ನಿನ್ನ ನಿರ್ಬಂಧನೆಗೆ ತಾನು ಒಪ್ಪಿರುತ್ತೇನೆ. ತವರು ಮನೆಗೋಗಿ ಮರಳಿ ಬರುವುದರೊಳಗೆ ನಿನ್ನ ಹೆಂಡತಿಯ ಸೌಂದರ್ಯದ ತೊಂದರೆಗೆ ನಾನು ನಿನ್ನ ಮನೆಯಲ್ಲಿ ಜೀತದಾಳಾಗಿ ದುಡಿಯುತ್ತೇನೆ. ಆ ಸೂರ್ಯ – ಚಂದ್ರಾದಿಗಳಾಣೆ ಸತ್ಯ ಎನ್ನುತ್ತಾನೆ. ನಿನ್ನ ಹೆಂಡತಿಯನ್ನು ಕಳುಹಿಸಿಕೊಡು ಎಂದು ಹೇಳಿದನು.

ಮೇಲಿನ ಸರ್ವನಿಬಂಧನೆಗಳನ್ನು ಕೇಳಿ ಮಲ್ಲಿನಾಯಕನಿಗೆ ಅಲ್ಲೋಲ, ಕಲ್ಲೋಲವಾಗಿ ಭಯಂಕರವಾದ ಪಶ್ಚಾತ್ತಾಪಕ್ಕೀಡಾದನು. ಶೆಟ್ಟಿಯು ಸೂರ್ಯ ಚಂದ್ರರ ಮೇಲೆ ಆಣೆ ಇಟ್ಟು ಮಾತನಾಡಿದಿರಲ್ಲ. ನಮ್ಮ ಕಷ್ಟಕ್ಕೆ ನೀವು ಹೊಣೆಗಾರರಾಗುವುದು ಬೇಡಸ್ವಾಮಿ ಎಂದನು. ನಮ್ಮ ನಮ್ಮ ಕಷ್ಟವನ್ನು ಪರಿಹರಿಸಿಕೊಳ್ಳುತ್ತೇವೆ. ನಮ್ಮಿಂದ ನಿಮಗೆ ತೊಂದರೆ ಬೇಡ. ನೀವು ಜಿತದಾಳು ಆಗುವುದು ಬೇಡ ಎಂದನು.

ಕೋರ್ಲಮಲ್ಲಿನಾಯಕನನ್ನು ಹೆರಿಗೆ ಆದನಂತರ ಕರೆದುಕೊಂಡು ಬನ್ನಿ ಎಂದು ಪಾಲಮ್ಮನನ್ನು ಹೊರಡಿಸಿ ಮಲ್ಲಿನಾಯಕನ ಜೊತೆಯಲ್ಲಿ ಕಳುಹಿಸಿದನು.

**ಪಾಪನಾಯಕನ ಜನನ**

ತಂಗಿಯನ್ನು ಕರೆದುಕೊಂಡು ತನ್ನ ಕುಟೀರಕ್ಕೆ ನಾಯಕ ಬಂದನು. ಅವರು ಬಂದ ಎರಡು ಮೂರು ದಿನಗಳಲ್ಲಿ ಬಾಳೆಪಟ್ಟಮ್ಮನಿಗೆ ಹೆರಿಗೆನೋವು ಕಾಣಿಸಿಕೊಂಡಿತು. ಪಾಲಮ್ಮ ಬಾಳೆಪಟ್ಟಮ್ಮನ ಮುಂದೆ ಕುಳಿತು, ಹೆರಿಗೆ ಮಾಡಿಸುವ ಜವಾಬ್ದಾರಿ ಹೊತ್ತಳು. ಹೆರಿಗೆಗೆ ಎಲ್ಲಾ ಸಿದ್ಧತೆಗಳು ನಡೆದವು. ಹೆರಿಗೆಯ ಸಂದರ್ಭದಲ್ಲಿ ವಿಚಿತ್ರಕಾರಿ ಘಟನೆ ಸಂಭವಿಸಿತು. ಪಾಲಮ್ಮನು ಅತ್ತಿಗೆಯ ಹೆರಿಗೆಗೆ ನೆರವಾಗಲು ಮುಂದೆ ಕುಳಿತಿದ್ದಾಗ, ತಾಯಿಯ ಗರ್ಭದಿಂದ ಹೊರಬರುತ್ತಿರುವಾಗಲೇ ಪುಟ್ಟ ಮಗು ಕಾಲಿನಿಂದ ಜಾಡಿಸಿ ಪಾಲಮ್ಮನನ್ನು (ಅತ್ತೆ) ಹೊದೆಯಲು ಅವಳ ಮುಂದಿನ ಒಂದು ಹಲ್ಲು ಮುರಿದು ನೆಲಕ್ಕೆ ಬಿತ್ತು. ಹುಟ್ಟಿದ್ದು ಗಂಡುಮಗುವೇ ಆದರೂ ನಡೆದ ಘಟನೆ ಸಂಕಷ್ಟಕ್ಕೀಡು ಮಾಡಿತು.

[1]
ಈ ಘಟನೆಯಿಂದ ಬಾಳೆಪಟ್ಟಮ್ಮ ಗಾಬರಿಗೊಂಡಳು. ಹುಟ್ಟಿದ ಮಗು ಹಲ್ಲುಮುರಿದಂತೆ ಒಡೆ (ಹೊದೆ) ಯುವುದು ಸಾಧ್ಯವೇ? ಎಂದು ಚಿಂತಾಕ್ರಾಂತಳಾದಳು. ಅವನ ಶಕ್ತಿ, ಧೈರ್ಯ, ಪರಾಕ್ರಮವನ್ನು ಆಗಲೇ ನಿರ್ಧರಿಸಿಕೊಂಡಳು. ಆದರೂ ಮೂಢನಂಬಿಕೆಯಿಂದ ಅವಳು ಹುಟ್ಟಿದ ಮಗು ಕಾಲಿನಿಂದ ಒಡೆಯುವುದು ಎಂದರೇನು? ಹಲ್ಲು ಮುರಿದು ಬೀಳುವುದು ಎಂದರೇನು? ಮಾನವ ರೂಪಿಯ ಮಗುವಿಗೆ ಆಶಕ್ತಿ ಬರಲು ಹೇಗೆ ಸಾಧ್ಯ. ಮಾನವ ಮಗುವಲ್ಲ. ಯಾವುದೋ ಪಿಶಾಚಿಯೊ ಇರುವ ನಾನಾ ರೂಪವಾಗಿ ಗರ್ಭದಲ್ಲಿ ಜನಿಸಿದೆ. ದೊಡ್ಡದಾದ ಮೇಲೆ ಈ ಮಗು ಏನು ಮಾಡುತ್ತದೆಯೊ ತಿಳಿದವರಾರು. ಇದು ಭೂತವೋ ಇರಬೇಕು. ನಮಗೆ ಬೇಡ ಎಂದು ನಡೆದ ಪ್ರಸಮಗವನ್ನು ಮಲ್ಲಿನಾಯಕನಿಗೆ ತಿಳಿಸಿದಳು. ಅಲ್ಲದೆ ಆಕೆ ಗೋಳಾಡುತ್ತಾ ಯಾವುದೇ ತೊಂದರೆಯನ್ನು ಮಾಡುವುದಿಲ್ಲ ಎಂದು ಕರೆತಂದಿರಿ, ಈಗ ನೋಡಿದರೆ ಹೀಗೆ ಆಯಿತು. ಕ್ಯಾಸನೋನು ಸುಮ್ಮನೆ ಬಿಡುತ್ತಾನೆಯೇ? ಸೆಟ್ಟಿಯ ಗತಿಯೇನು? ನಮ್ಮ ಗತಿ ಏನು? ಪಾಲಮ್ಮನ ಗತಿಯೇನು? ಎಲ್ಲರಿಗೂ ಒಂದಿಲ್ಲೊಂದು ರೀತಿಯಲ್ಲಿ ತೊಂದರೆಯಾಗಿದೆ ಎಂದಳು.

ಕೋರ್ಲಮಲ್ಲಿನಾಯಕನಿಗೆ ಬಾಳೆಪಟ್ಟಮ್ಮ ಹೇಳಿದ್ದು ನಿಜ ಅನ್ನಿಸಿತು. ತನ್ನ ಮಗಮನೆಗೆ ಪಾಲಮ್ಮನಿಗೆ ನಿರಪರಾದಿ ಶೆಟ್ಟಿಗೆ ತೊಂದರೆ ಕೊಟ್ಟಿದ್ದಾನೆ. ಆದ್ದರಿಂದ ಹೇಗಾದರೂ ಮಾಡಿ ಈ ಮಗುವನ್ನು ಕಾಡುಜನರಾಗಿದ್ದರಿಂದ ತೊಲಗಿಸಬೇಕೆಂದು ಯೋಚಿಸಿದ. ಈ ಮಗುವನ್ನು ಭೂತವೆಂದು ನಂಬುವುದು ಸಹಜವಾದದು. ಏಕೆಂದರೆ ಅಸಾಧಾರಣ ಶಕ್ತಿಹೊಂದಿದ ಮಗುವಿನ ಸಾಮರ್ಥ್ಯವನ್ನು ಏನೆಂದು ಬಣ್ಣಿಸಲು ಆಗಲಿಲ್ಲ.

ಹುಟ್ಟಿದ ಮಗು ಯಾವುದೇ ಆಗಿರಲಿ. ನಾವು ಭೂತ, ಪಿಶಾಚಿ ಎನ್ನುವುದು ಬೇಡ. ಶಿಶುಹತ್ಯೆ ಮಾಡಿ ಪಾಪ ಕಟ್ಟಿಕೊಳ್ಳುವುದು ಯೋಗ್ಯವಲ್ಲ. ಎಲ್ಲಾದರೂ ಒಂದು ಗಿಡದ ಕೆಳಗೆ ಮಲಗಿಸಿ, ನಾವು ಬೇರೆಡೆಗೆ ಪಲಾಯನ ಮಾಡೋಣ ಎಂದು ಯೋಚಿಸಿದರು. ಬಾಳೆದಪಟ್ಟಮ್ಮ, ಪಾಲಮ್ಮ ಮತ್ತು ಕೋರ್ಲಮಲ್ಲಿನಾಯಕ ಸೇರಿ, ಮಗುವನ್ನು ಎತ್ತಿಕೊಂಡು ನದಿದಂಡೆ ಬಳಿ ಹೋಗಿ, ಗಿಡ ಪೊದೆಗಳ ನೆರಳಲ್ಲಿ ಇಟ್ಟು ಕಂಬಳಿಕೋರೆಯನ್ನು ಸುತ್ತಿ ಮಲಗಿಸಿದರು.

**ಅನಾಥ ಮಗುವಿನ ನಾಮಕರಣ : ಶಿವಪಾರ್ವತಿಯರಿಂದ ಆಶೀರ್ವಾದ**

ಕೋರ್ಲಮಲ್ಲಿನಾಯಕ ತಾನು ಹೊದ್ದುಕೊಂಡಿದ್ದ ಕಂಬಳಿ ಕೋರಿಯಲ್ಲಿ ಮಗುವನ್ನು ಸುತ್ತಿ ಒಂದು ಗಿಡದ ನೆರಳಲ್ಲಿ ಎಲೆಯ ಮೇಲೆ ಮಲಗಿಸಿ ಹೊರಟು ಹೋದನಂತರ ನಿಸರ್ಗದ ಮಡಿಲಲ್ಲಿ ಮಗುವಿನ ಆಕ್ರಂದನವನ್ನು ಪ್ರಕೃತಿ ಅನುಭವಿಸಿತು.

ಇದೇ ಸಮಯಕ್ಕೆ ಸರಿಯಾಗಿ ಜಗತ್ತಿನ ರಕ್ಷಕರೂ, ಕೈಲಾಸವಾಣಿಗಳೂ ಆದ ಪಾರ್ವತಿಪರಮೇಶ್ವರರು ಸೃಷ್ಟಿಯ ಸ್ಥಿತಿ – ಗತಿಗಳನ್ನು ಸಮೀಕ್ಷಿಸಲು ನಂದಿವಾಹನರಾಗಿ ಆಕಾಶದಲ್ಲಿ ಬರುತ್ತಿದ್ದರು. ಬರುವ ದಾರಿಯಲ್ಲಿ ಮಗುವಿನ ಅಳಲಿನ ಆಕ್ರಂದನವು ಪಾರ್ವತಿಯ ಕಿವಿಗೆ ಬಿತ್ತು. ಕರುಣಾಮಯಿಯಾದ ಪಾರ್ವತಿಯು ಮಗುವಿನ ಅಳಲನ್ನು ಕೇಳಿ ಶಿವದೇವನಿಗೆ, ಈ ದಟ್ಟವಾದ ಕಾಡಿನಲ್ಲಿ ಮಗುವಿನ ರೋದನ ಕೇಳಿಬರುತ್ತಿದೆ. ಇಲ್ಲಿ ಮಾನವನ ಸಂಚಾರವೇ ಇಲ್ಲದೆ, ಪ್ರಕೃತಿ ಬಿಕೋ ಎನ್ನುತ್ತಿತ್ತು. ಆದರೂ ಹೋದರು.

ಪಾರ್ವತಿಯ ಬೇಡಿಕೆಗೆ ಮನ್ನಿಸಿದ ಶಿವನು ಇಲ್ಲಿ ಕಾಡಿನ ವಾಸಿಗಳು ಜೀವನ ನಡೆಸುತ್ತಿದ್ದರು. ಅಲ್ಲಿ ಅವರ ಮಗು ಅಳುತ್ತಿರಬೇಕು. ಅವರ ತಂದೆತಾಯಿಗಳು ನೋಡಿಕೊಳ್ಳುತ್ತಾರೆ. ನಮಗೆ ಏತಕ್ಕೆ ಆ ಚಿಂತೆ ಎಂದರು. ದೇವಾ, ಆ ಮಗುವಿನ ಅಳಲು ಕೇಳಿದಾಗ ಕರಳು ಹಿಂಡಿದಂತೆ ಭಾಸವಾಗುತ್ತದೆ ಎಂದಳು. ಇಬ್ಬರು ಕೂಡಿ ಮಗುವನ್ನು ನೋಡಲು ಇಳಿದರು.

ದಟ್ಟವಾದ ಕಾಡಿನಲ್ಲಿ ಮಾನವರ ಸುಳಿವೇ ಇಲ್ಲ. ಎಂದಾಗ ಮನೆಮಠಗಳೆಲ್ಲಿ? ಪಶು – ಪ್ರಾಣಿಗಳೂ ಕಾಣುತ್ತಿರಲಿಲ್ಲ. ನಿರ್ಜನ ಪ್ರದೇಶದ ಗಿಡದ ನೆರಳಲ್ಲಿ ಎಲೆಯ ಮೇಲೆ ಇಟ್ಟಿರುವ ಮಗುವನ್ನು ಇಟ್ಟ ಹೆತ್ತವರೆಂಥ ಕಿರಾತಕರು. ದೇವ ಇಂಥಾ ಮಗುವನ್ನು ಬಿಟ್ಟು ಹೋದ ತಂದೆತಾಯಿಗಳೆಂಥ ಕರುಣಾಹೀನರು. ನಿರ್ದಯಿಗಳು. ಮಳೆ, ಬಿಸಿಲು, ಚಳಿಗೆ ಮಗುವಿನ ಸ್ಥಿತಿ ಏನಾಗಬೇಕೆಂದು ಪಾರ್ವತಿ ಚಿಂತಿಸಿದಳು. ಪರಮಾತ್ಮ ಚಳಿ – ಮಳೆ – ಬಿಸಿಲು, ಕಾಡು ಪ್ರಾಣಿಗಳಿಂದ ತೊಂದರೆ ಆಗದ ರೀತಿಯಲ್ಲಿ ರಕ್ಷಿಸಿ ಕಾಪಾಡು ದೇವ ಎಂದು ಸೆರಗೊಡ್ಡಿ ಬೇಡಿದಳು.

ಪಾರ್ವತಿಯ ಬೇಡಿಕೆಗೆ ಹುಸಿನಕ್ಕ ಶಿವನು ದೇವಿ ಎಲ್ಲವು ವಿಧಿಮಯ. ಪರದೇಶಿಯಾಗಿ ಪಾಪಿಯಾಗಿದ್ದರೂ ಸಹಾ ಆ ಮಗು ಪರಮಾತ್ಮನ ಸತ್ಯವನ್ನು ಪಡೆದು, ಸಚ್ಚರಿತ್ರನಾಗಿ, ಸಕಲರಿಂದ ಆರಾಧಿಸುವ ಪೂಜಾರ್ಹ ವ್ಯಕ್ತಿಯಾಗುತ್ತಾನೆ. ಇದು ಸಾಮಾನ್ಯ ಮಗುವಲ್ಲ. ಲೋಕಕಲ್ಯಾಣವಾಗಿ, ಭಕ್ತಿಬಾಂದವನೆಂಬ ಬಿರುದಿನಿಂದ ಪ್ರಸಿದ್ಧ ಪವಾಡ ಪುರುಷನಾಗುತ್ತಾನೆಂದು ಹೇಳಿದನು. ಅವನು ನೆಲಸಿದ ತಾವೂ ಮುಂದೆ ಪ್ರಸಿದ್ಧ ಪುಣ್ಯಕ್ಷೇತ್ರವಾಗುತ್ತದೆ. ಅವನ ತಂದೆತಾಯಿಗಳು ಬೇರೆ ಯಾರೂ ಅಲ್ಲ. ಕಾಡಿನ ನಿವಾಸಿಗಳಾದ 'ಬೇಡ' ದಂಪತಿಗಳೇ ಆಗಿರುತ್ತಾರೆ ಎಂದು ವಿವರಿಸಿದ. ಹುಟ್ಟಿದ ಮಗುವನ್ನು ದೈವಲೀಲೆ ಎನ್ನದೆ ಭೂತ – ಪ್ರೇತವೆಂದು ತಿಳಿದು ಕಾಡಿಗೆ ಬಿಟ್ಟುಹೋಗಿದ್ದಾರೆ. ಶಿವ – ಪಾರ್ವತಿಯರ ದರ್ಶನವಾಗಿರುವುದರಿಂದ ಮಗು ಸ್ವತಂತ್ರ್ಯವಾಗಿ ಜೀವನ ನಡೆಸುವ ತನಕ ಅಡೆ – ತಡೆ, ಹಸಿವು – ಬಾಯಾರಿಕೆ, ಕ್ರಿಮಿ – ಕೀಟ, ಪಶುಪಕ್ಷಿ, ಮೃಗಗಳಾದಿಯಾಗಿ ಯಾರಿಂದಲೂ ಯಾವ ರೀತಿಯ ಅಪಾಯ ಬಾರದ ರೀತಿಯಲ್ಲಿ ಆಶೀರ್ವದಿಸೋಣ ಎಂದು ಪಾರ್ವತಿ ಪರಮೇಶ್ವರರು ಮಗುವಿನ ಮೈದಡವಿದರು. ಶಿವನು ಮಗುವಿನ ಬಾಯಲ್ಲಿ ತನ್ನ ತಲೆಯ ಮೇಲಿನ ಗಂಗಾಮಾತೆಯ ತೀರ್ಥವನ್ನು ಹಾಕಿದ. ಮಗು ಬೆಳೆದು ತನ್ನ ಕೈಯಿಂದ ತಾನು ಆಹಾರವನ್ನು ತಿನ್ನುವ ತನಕ ಹಸಿವು ಬಾಯಾರಿಕೆಗಳಾಗದಿರಲೆಂದು ಅವರು ಆಶೀರ್ವದಿಸಿದರು.

ಪಾರ್ವತಿಯು ಆನಂದಭಾಷ್ಪಿತಳಾಗಿ, ಈಗ ಮಗುವಿಗೆ ತಂದೆತಾಯಿಗಳಾದರೂ ಇಲ್ಲದೆ, ಪರದೇಶಿಯಾಗಿ, ಈ ಕಾಡಿನಲ್ಲಿ ಸೂರ್ಯಕಿರಣಗಳಡಿಯಲ್ಲಿ ಪಾಪಿಯಂತೆ ಬೆಳೆಯುವವನಿಗೆ ನಾಮಕರಣ ಮಾಡುವುದಿಲ್ಲವೆಂದು, ನಾವಾದರೂ ಮಾಡಿದರೆ ಆಗುತ್ತದೆಂದು ಶಿವನಲ್ಲಿ ವಿನಂತಿಸಿಕೊಂಡಳು. ಪಾರ್ವತಿಯ ಬಯಕೆಯಂತೆ ಲೋಕನಾಯಕನಾದ ಶಿವನು ಅವಳು ಸೂಚಿದ ಹೆಸರನ್ನಿಡಲು ಒಪ್ಪಿದನು.

ದೇವಿ ಈ ಮಗು ಪರದೇಶಿಯಂತೆ, ಪಾಪದ ಮಗುವಿನಂತೆ, ಸೂರ್ಯನ ಕಿರಣಗಳಡಿಯಲ್ಲಿ ಬೆಳೆಯುತ್ತಿರುವುದರಿಂದ, ಇವನಿಗೆ 'ಸೂರ್ಯಪಾಪನಾಯಕ' ಎಂದು ಕರೆಯೋಣ ಎಂದನು. ಶಿವನ ಈ ಮಾತಿಗೆ ಪಾರ್ವತಿ ಒಪ್ಪಿದಳು. ಸ್ವಾಮಿ ನಿನ್ನ ಇಚ್ಛೆಯ ನನ್ನ ಇಚ್ಛೆ. ಶಿವ – ಪಾರ್ವತಿಯರು ಮಗುವನ್ನು ಸ್ಪರ್ಶಿಸಿ, ಶರೀರವನ್ನು ತೀಡಿ, ಆಶೀರ್ವದಿಸುತ್ತಾ ಮಗು ಸುರಕ್ಷಿತವಾಗಿ ಬೆಳೆದು ಪ್ರಬುದ್ಧನಾದಾಗ ನಾವು ಇಟ್ಟಿರುವ ನಾಮವು ಸ್ಮರಣೆಗೆ ಬಂದು 'ಸೂರ್ಯಪಾಪನಾಯಕ' ಎಂಬ ಹೆಸರಿನಿಂದ ಜಗಜನಿತನಾಗಿ ಲೋಕಪೂಜಿತನಾಗಿ ಅವತರಿಸುವನು ಎಂದು ಶುಭಕೋರಿ ಮರೆಯಾದರು.

**ಪವಾಡಗಳೊಂದಿಗೆ ಸೂರ್ಯಪಾಪನಾಯಕನ ಬೆಳವಣಿಗೆ**

ಕಾಡಿನಲ್ಲಿ ಏಕಾಂಗಿಯಾಗಿ ವಾಸಿಸುತ್ತಿದ್ದ ಮಗು ದಿನಕಳೆದಂತೆ ಸುರಕ್ಷಿತವಾಗಿ ಬೆಳೆಯುತ್ತಿದ್ದನು. ದೊಡ್ಡವನಾದ ಪಾಪನಾಯಕ ಕಾಡಿನಲ್ಲಿ ಸಂಚರಿಸುತ್ತಾ ಹುಲಿ ಚಿರತೆಯಂಥ ಕಾಡುಪ್ರಾಣಿಗಳೊಂದಿಗೆ ಆಟವಾಡುತ್ತಾ, ವಿಷಸರ್ಪಗಳನ್ನು ಹಿಡಿದು ಅವುಗಳೊಂದಿಗೆ ಚಲ್ಲಾಟವಾಡುತ್ತಾ ನದಿ, ಸರೋವರಗಳಲ್ಲಿ ಮುಳುಗಿ ಈಜಾಡುತ್ತಾ ಮರಗಿಡಗಳನ್ನು ಹತ್ತಿ ಇಳಿದು ಕುಣಿದು ಕುಪ್ಪಳಿಸಿ ಹಣ್ಣು ಕೊಯ್ದಿಡುತ್ತಾನೆ. ಆಟಪಾಠಗಳನ್ನು ಮೈಗೂಡಿಸಿಕೊಂಡ. ಪಾಪನಾಯಕನ ಉಡುಪು ಹೇಗಿತ್ತೆಂದರೆ: ಬೆತ್ತಲೆ ಶರೀರ, ತಂದೆತಾಯಿಗಳು ಮಗುವನ್ನು ತೊರೆಯುವಾಗ ಕೆಳಗೆ ಹಾಸಿದ್ದ ಕಂಬಳಿ ಕೋರೆಯನ್ನು ಎರಡು ತುಂಡುಗಳಾಗಿ ಮಾಡಿ ಒಂದನ್ನು ಲಂಗೋಟಿಯಾಗಿ, ಮತ್ತೊಂದನ್ನು ಹೆಗಲಿನ ಮೇಲೆ ಹಾಕಿಕೊಳ್ಳುತ್ತಿದ್ದನು. ಹೀಗೆ ಬೆಳೆದು ೬ – ೭ ವರ್ಷದ ಬಾಲಕನಾದ. ಇವನು ಕಾಡಿನಲ್ಲಿ ಸಂಚರಿಸುತ್ತಿರುವಾಗ ದನ ಮೇಯಿಸಲು ಬರುತ್ತಿದ್ದವರೊಂದಿಗೆ ಬೆರೆಯುತ್ತಾ ಆಟವಾಡುತ್ತಾ, ಹಣ್ಣು ಹಂಪಲುಗಳೇ ಅಲ್ಲದೆ ದನಕಾಯುವ ಹುಡುಗರು ಕೇಳಿದುದನ್ನು ಪವಾಡಮಾಡಿ ತರಿಸಿ ಕೊಡುತ್ತಿದ್ದ. ಇಷ್ಟು ಚಿಕ್ಕ ಹುಡುಗ ಪವಾಡ ಮಾಡುತ್ತಾನೆಂಬ ಸುದ್ದಿ ಅಲ್ಲಿನ ಜನರಲ್ಲಿ ಹಬ್ಬಿತು.

ಮೇಲಿನ ಸಂಗತಿ ಪ್ರಸಾರವಾದಂತೆ, ತಾನಿಲ್ಲಿ ವಾಸಿಸುವುದು ಸರಿಯಲ್ಲವೆಂದು ಅರಿತು ಕಾಡಿನ ಹುಡುಗರಿಂದ ದೂರ ಹೋಗಿ ಗೊಂಡಾರಣ್ಯವನ್ನು ಸೇರಿದ. ಬರೆ ಕಾಡಿನಲ್ಲಿಯೇ ಜೀವನ ಸವೆಸಿದ ಪಾಪನಾಯಕನಿಗೆ ಸ್ವಲ್ಪ ದಿನಗಳ ನಂತರ ನಾಡಿನ ಜನರೊಂದಿಗೆ ಬೆಳೆಯುವ ಹಂಬಲ ಉಂಟಾಯಿತು ಅದರಂತೆ ಚಿತ್ರದುರ್ಗ ಪ್ರದೇಶದಿಂದ ಚಳ್ಳಕೆರೆ ಪ್ರದೇಶಕ್ಕೆ ಹೊರಟು ಮಧ್ಯೆ ಅಲ್ಲಲ್ಲಿ ಸಂಚರಿಸುತ್ತಾ 'ಗೋರ್ಲಹಟ್ಟಿ' ಗ್ರಾಮದ ಬಳಿ ಬಂದಿಳಿದ. ಈ ಗೋರ್ಲಕಟ್ಟೆ ಚಳ್ಳಕೆರೆಯಿಂದ ಪಶ್ಚಿಮಕ್ಕೆ ಸು.೫ ಕಿ.ಮೀ. ಇದೆ. ಪಾಪನಾಯಕ ಬಂದಾಗಿನಿಂದಲೂ ಆ ಊರಿಗೆ ಮಹತ್ವ ಬಂದಿತು. ಅಂದು ಚಳ್ಳಕೆರೆ ಸ್ಥಳದ ಹೆಸರು ಇದ್ದಂತಿರಲಿಲ್ಲ. ಆದರೂ ಪಾಪನಾಯಕ ಚಳ್ಳಕೆರೆಯ ಜನರೊಂದಿಗೆ ಬೆರೆಯತೊಡಗಿದರೆಂಬ ಸಂಗತಿ ತಿಳಿದುಬರುತ್ತದೆ.

ಚಿಕ್ಕವನಾದರೂ ಋಣವಾಗಿ ಜೀವಿಸಲು ಒಪ್ಪದೆ, ಗ್ರಾಮದವರ ಸಹಕಾರದಿಂದ ದನಗಳನ್ನು ಕಾಯಲು ಸಿದ್ಧನಾದ. ಒಂದು ಕರುವಿಗೆ ಒಂದು ದುಗ್ಗಾಣಿಯಂತೆ ಕೂಲಿ ಇತ್ತು. ದಿನನಿತ್ಯ ಕರುಗಳನ್ನು ಹೊಡೆದುಕೊಂಡು 'ಗೊರ್ಲಕಟ್ಟೆ' ಅಕ್ಕಪಕ್ಕ ಮೇಯಿಸಿಕೊಂಡು ಅಲ್ಲಿ ಹರಿಯುತ್ತಿದ್ದ ಹಳ್ಳದ ದಂಡೆಯಲ್ಲಿ ಮಟ್ಟಿಯ ಮೇಲೆ ರೊಪ್ಪವನ್ನು ಹಾಕಿಕೊಂಡು ಕರುಗಳನ್ನು ಬಿಟ್ಟು, ಕಲ್ಲುಗುಂಡುಗಳ ಮೇಲೆ ಕುಳಿತು, ಆಟವಾಡುತ್ತಾ ಪಕ್ಕದಲ್ಲಿ ಹರಿಯುತ್ತಿದ್ದ ಹಳ್ಳದಲ್ಲಿ ಈಜಾಡುತ್ತಾ ಕಾಲ ಕಳೆಯುತ್ತಿದ್ದ. ಪಾಪನಾಯಕನು ಹಳ್ಳದ ಪಕ್ಕ ಕಟ್ಟಿದ ರೊಪ್ಪ ಮಧ್ಯದಲ್ಲಿ ದೊಡ್ಡದಾದ ಹುತ್ತವೊಂದು ಬೆಳೆದಿತ್ತು. ಆ ಹುತ್ತದ ಮೇಲೆ ಒಂದು ಮಂಗಾರೆ ಗಿಡ ಬೆಳೆದಿತ್ತು. ಕರುಗಳೊಡನೆ ಪಾಪನಾಯಕ ಮುಂಗಾರು ಗಿಡದ ನೆರಳಲ್ಲಿ ಹುತ್ತದ ಸುತ್ತ ಆಟವಾಡುತ್ತಿದ್ದನು.

ಕರುಗಳ ರೊಪ್ಪದಲ್ಲಿ ಉದ್ಭವಿಸಿದ ಹುತ್ತದೊಳಗೆ ಏಳೆಡೆ ಸರ್ಪವೊಂದು ವಾಸವಾಗಿತ್ತು. ಹುತ್ತದ ಮೇಲಿದ್ದ ಮಂಗಾರೆ ಗಿಡದ ಬೇರುಗಳು ಹುತ್ತದಲ್ಲಿಳಿದು ಹುತ್ತದೊಳಗೆ ವಾಸವಾಗಿದ್ದ ಆ ಸರ್ಪದ ಕಿವಿಯಲ್ಲಿ ಹಾದು ಭೂಮಿಯ ಒಳಗೆ ಇಳಿದಿದ್ದವು. ಬೇರುಗಳ ಬಲಿತಂತೆಲ್ಲ ಸರ್ಪಕ್ಕೆ ಬಾಧೆಯುಂಟಾಗುತ್ತಿತ್ತು. ದಿನಕಳೆದಂತೆ ಸರ್ಪಕ್ಕೆ ಬಾಧೆ ಉಲ್ಬಣಗೊಂಡಿತು. ಆದ ನೋವನ್ನು ತಾಳಿಕೊಂಡು ಕಾಲ ಕಳೆಯುತ್ತಿತ್ತು. ಬೇರಿನ ಬಾಧೆಯಿಂದ ಸರ್ಪ ಹೊರಗೆ ಬರಲಾಗಲಿಲ್ಲ. ಒಳಗೆ ಇರುವಂತಿಲ್ಲ. ಹೀಗೆ ಉಭಯ ಸಂಕಟಕ್ಕೀಡಾಗಿತ್ತು.

**ಸರ್ಪರಾಜನನ್ನು ಬಂಧನದಿಂದ ಬಿಡುಗಡೆಗೊಳಿಸಿದ ಪಾಪನಾಯಕ**

ಪಾಪನಾಯಕ ತನ್ನ ಕರುಗಳನ್ನು ಒಡೆದುಕೊಂಡು ಬರುವಾಗ, ಕರುಗಳು ಅತ್ತ ಇತ್ತ ಓಡಲಾರಂಭಿಸಿದವು. ಅವುಗಳನ್ನು ಒಂದೆಡೆ ಕೂಡಲು ಕೋಲಿನ ಅಗತ್ಯವಿತ್ತು. ಹೀಗಾಗಿ ದನಗಳನ್ನು ಒಡೆದುಕೊಂಡು ಬರುವಾಗ ಕೋಲಿಗಾಗಿ ಎಲ್ಲಾ ಗಿಡ – ಮರಗಳ ಬಳಿ ಪರದಾಡಿದರೂ

ನೀಳವಾದುದು ಸಿಗಲಿಲ್ಲ. ಹುಡುಕುತ್ತಾ ರೊಪ್ಪಕ್ಕೆ ಬಂದನು. ಯಾವ ಗಿಡದಲ್ಲಿಯೂ ಕೋಲು ಸಿಗಲಿಲ್ಲದ ಕಾರಣ ರೊಪ್ಪದಲ್ಲಿದ್ದ ಹುತ್ತದ ಮೇಲಿನ ಮಂಗಾರೆಗಿಡ ಎಷ್ಟೇ ಸುಂದರವಾಗಿದ್ದರೂ ಕೋಲಿಗೆ ಸರಿಯಾಗಿದೆ ಎಂದು ಬುಡ ಸಮೇತ ಕಿತ್ತು ಹಾಕಿದ. ಹೀಗೆ ಕೀಳುವಾಗ ಹುತ್ತದ ಮೇಲೆ ಎರಡು ಕಾಲುಗಳನ್ನಿಟ್ಟುಕೊಂಡು, ಗಿಡದ ಮಧ್ಯದ ಭಾಗಕ್ಕೆ ಕೈಹಾಕಿ, ಕೀಳುವಾಗ ಗಿಡವು ಬೇರುಗಳ ಸಹಿತ ಬಂದಿತು. ಕಿತ್ತ ಗಿಡವನ್ನು ಬಡ್ಡೆಗೆ ಕಲ್ಲಿಂದ ಕಡಿದು, ನೀಳವಾದ ಕೋಲನ್ನು ಮಾಡಿಕೊಂಡನು.

ಕಿತ್ತಗಿಡದ ಬುಡದಲ್ಲಿ ಹುತ್ತ ಬೆಳೆದಿದ್ದು, ಗಿಡ – ಬೇರುಗಳು ಹಾವಿನ ಕಿವಿಯ ಮೂಲಕ ಭೂಮಿಗೆ ಹೋಗಿದ್ದವು. ಗಿಡ ಬೇರು ಸಹಿತ ಹೊರಬಂದಿದ್ದರಿಂದ ಹಾವಿನ ಸಂಕಟ ನಿವಾರಣೆಯಾಯಿತು. ಬಂಧನದಿಂದ ಮುಕ್ತಿಗೊಂಡು, ಪುನರ್ಜನ್ಮ ಪಡೆದಂತಾಯಿತು. ಸಂತೋಷಗೊಂಡ ಹಾವು ಏಳೆಡೆ ಬಿಚ್ಚಿ ಹಾರಾಡುತ್ತಿತ್ತು. ಆಗ ಕೋರಿ ಲಂಗೋಟಿ ಧರಿಸಿ, ಹೆಗಲಮೇಲೆ ಕೋರಿ ತುಂಡನ್ನು ಹಾಕಿಕೊಂಡು ಕೈಯಲ್ಲಿ ಕೋಲು ಹಿಡಿದು ಬರುತ್ತಿದ್ದ ಪಾಪನಾಯಕನನ್ನು ಕಂಡು ನನಗೆ ಬಂಧನದಿಂದ ಮುಕ್ತಗೊಳಿಸಿ ಮತ್ತೊಮ್ಮೆ ಜೀವಕೊಟ್ಟೆ ಎಂದು ಸರ್ಪ ಮಾತನಾಡಿತು.

ಏಳು ಹೆಡೆ ಬಿಚ್ಚಿ ಆಡುತ್ತಿದ್ದ ಸರ್ಪವನ್ನು ಕಂಡ ಪಾಪನಾಯಕ ಆಶ್ಚರ್ಯಚಕಿತನಾದನು. ಸರ್ಪವೇನಾದರೂ ಕಡಿಯಲು ಬಂದರೆ ಇದೇ ದೊಣ್ಣೆಯಿಂದ ಹೊಡೆದು ಸಾಯಿಸುತ್ತೇನೆಂದು ಯೋಚಿಸಿದ್ದನು. ಸರ್ಪರಾಜ ಮನುಷ್ಯನಂತೆ ಮಾತನಾಡುತ್ತಾ ಬಾ ಮಗು ನಾನು ನಿನ್ನನ್ನು ಏನು ಮಾಡುವುದಿಲ್ಲ, ಬಹು ದಿನಗಳಿಂದ ಬಂಧನದಲ್ಲಿದ್ದು ಹುತ್ತದಿಂದ ಹೊರಬರಲಾರದೇ ಇರುವ ಸ್ಥಿತಿಯಲ್ಲಿ ನೀನು ನನ್ನ ಪ್ರಾಣವನ್ನು ಉಳಿಸಿದ್ದೀಯ. ನೀನು ಈ ಗಿಡವನ್ನು ಕೀಳದೇ ಇದ್ದಲ್ಲಿ ನನ್ನ ಕಿವಿಯಿಂದ ಹಾದುಹೋಗಿದ್ದ ಬೇರುಗಲು ದಿನದಿನಕ್ಕೆ ಬಲಿತು ಬಂಧನದಿಂದ ಹೊರಬರಲು ಆಗದೇ ನರಳುತ್ತಿದ್ದೆ. ಇಂಥಾ ಸಂಕಷ್ಟದಿಂದ ನನ್ನನ್ನು ಪಾರುಮಾಡಿ ಪ್ರಾಣದಾನ ಮಾಡಿದ್ದೀಯ. ನಿನ್ನ ಉಪಕಾರವನ್ನು ಎಂದಿಗೂ ಮರೆಯಲಾರೆ. ನೀನು ಯಾರು? ಜನ್ಮ ವೃತ್ತಾಂತವೇನು? ನಿನ್ನ ಚರಿತ್ರೆ ಏನು? ತಿಳಿಸುತ್ತೇನೆ ಕೇಳು ಎಂದು ನಡೆದ ವೃತ್ತಾಂತವನ್ನು ವಿವರವಾಗಿ ತಿಳಿತು (ಜಗಳೂರು ಪಾಪನಾಯಕನ ಆರಂಭಿಕ ಜೀವನವನ್ನು).

ಅಲ್ಲದೆ, ನೀನೊಬ್ಬ ಮಹಾಪುರುಷನಾಗುತ್ತೀಯಾ. ತಿರುಪತಿ ಕ್ಷೇತ್ರಕ್ಕೆ ಹೋದಲ್ಲಿ ನೀನು ನಾರಾಯಣನ ದರ್ಶನ ಪಡೆಯುವಂತೆ, ಕ್ರಮೇಣ ದೇವಮಾನವನಾಗಿ, ಸರ್ವರಿಂದಲೂ ಆರಾಧನೆಗೊಳಪಡುತ್ತಿಯೆಂದಿತು. ನಾನು ನೆಲಸಿರುವ ಹುತ್ತದಲ್ಲಿರುವ ಮಾಣಿಕ್ಯದ ಹರಳನ್ನು ನಿನಗೆ ಧಾರೆಯೆರೆಯುತ್ತೇನೆ ತೆಗೆದುಕೋ ಎಂದು ತನ್ನಲ್ಲಿದ್ದ ಮಾಣಿಕ್ಯದ ಹರಳನ್ನು ನೀಡಿತು. ಮಗನೇ ಯುಗ – ಯುಗಾಂತರಗಳವರೆಗೆ ಇದು ಪುಣ್ಯಕ್ಷೇತ್ರವಾಗಿ, ನಿನ್ನ ಪೂಜೆ ಸಾಂಗೋಪಾಂಗವಾಗಿ ನಡೆದು ಪಾಪಜ್ಜನ ಪುಣ್ಯಕ್ಷೇತ್ರ ಎಂದೇ ಖ್ಯಾತವಾಗುತ್ತದೆ. ನಿನ್ನಿಂದ ಈ ಲೋಕಕ್ಕೆ ಕಲ್ಯಾಣವಾಗಲೆಂದು ಹೇಳಿ ಮರೆಯಲಾಯಿತು. ಮುಗ್ಧ ಬಾಲಕ ಪಾಪಯ್ಯನು ಕೈಮುಗಿದು ಮಾಣಿಕ್ಯವನ್ನು ಪುಡಗೋಸಿಯಲ್ಲಿಟ್ಟುಕೊಂಡು ಊರಿನ ಕಡೆ ಧಾವಿಸಿದ. ಪಾಪಯ್ಯ ಪ್ರತಿನಿತ್ಯ ಈ ಹುತ್ತಕ್ಕೆ ಪ್ರದಕ್ಷಿಣೆ ಮಾಡಿ ಬರುತ್ತಿದ್ದ.

**ತಿರುಪತಿಯಾತ್ರೆಗೆ ಪಾಪಯ್ಯನ ಸಿದ್ಧತೆ**

ಕರುಗಳನ್ನು ರೊಪ್ಪದಲ್ಲಿ ಕೂಡಿಹಾಕಿ ಪಕ್ಕದ (ಹಳ್ಳ) ಹೊಳೆ ದಂಡೆಯಲ್ಲಿ ಆಟವಾಡುತ್ತಿದ್ದ ಪಾಪಯ್ಯನ್ನು ಪಡುವಲದೇಶದಿಂದ 'ಗೊಂದಲಪಲ್ಲಿಗೊಲ್ಲರು' ತಿರುಪತಿಗೆ ಹೋಗಲು ಹಸುಗಳ ಹಾಲಿನ ಮೀಸಲು ಕೊಡಗಳನ್ನು ಹೊತ್ತು ಈ ಹಳ್ಳದ ಬಳಿಗೆ ಬಂದರು. ಅವರಿಗೆ ಬಾಯಾರಿಕೆಯಾಗಿದ್ದರಿಂದ ನೀರು ಕುಡಿಯಲು ಬಂದರು. ಹಳ್ಳದ ದಂಡೆಯ ಮೇಲೆ ಕೊಡಗಳನ್ನಿಟ್ಟು ನೀರು ಕುಡಿಯಲು ಹಳ್ಳಕ್ಕೆ ಇಳಿಯುವ ಮೊದಲು ಕಾಗೆಗಳ ಕಾಟದಿಂದ ಕೊಡಗಳನ್ನು ಯಾರಾದರೂ ನೋಡಿಕೊಳ್ಳಬೇಕಾಗಿತ್ತು. ಅಲ್ಲೇ ಕೋಲು ಹಿಡಿದು ಸುತ್ತಾಡುತ್ತಿದ್ದ ಪಾಪನಾಯಕನನ್ನು ಕರೆದು: ಬಾಲಕನೇ ನಮಗೆ ಬಾಯಾರಿಕೆಯಾಗಿದೆ. ಹಳ್ಳದಲ್ಲಿಳಿದು ನೀರು ಕುಡಿಯುವವರೆಗೆ ತಿರುಪತಿ ತಿಮ್ಮಪ್ಪನಿಗೆ ಸಲ್ಲಿಸುವ ಮೀಸಲು ಹಾಲಿನ ಕೊಡಗಳನ್ನು ನೋಡಿಕೋ ಎಂದು ತಿಳಿಸಿದರು. ಹುಡುಗ ಕಾರ್ಯನಿರತನಾದ. ಗೊಲ್ಲರು ಬಹು ಆಯಾಸಪಟ್ಟಿದ್ದರಿಂದ ಈ ಜಾಟ, ವಿನೋದದಲ್ಲಿ ತಲ್ಲೀನರಾಗಿ ಬಹುಸಮಯವನ್ನು ವ್ಯರ್ಥಮಾಡಿದರು. ಕಾಯುತ್ತಾ ಕುಳಿತ ಪಾಪಯ್ಯ

ಮೀಸಲು ಕೊಡಗಳ ಬಾಯಿಗಳಿಗೆ ಸುತ್ತಿದ್ದ ಬಟ್ಟೆಗಳನ್ನು ಬಿಚ್ಚಿ ಒಂದೊಂದು ಕೊಡದ ಹಾಲನ್ನು ಕುಡಿದು ಖಾಲಿ ಮಡಿದನು. ಈಜುತ್ತಿದ್ದ ಗೊಲ್ಲರು ದಡಕ್ಕೆ ಹತ್ತಿ ಬಂದರು. ಪಾಪಯ್ಯ ಪ್ರಾಣಿ, ಪಕ್ಷಿಗಳನ್ನು ಕೂಗುತ್ತಾ ತಿರುಗಾಡುತ್ತಿದ್ದ. ಗೊಲ್ಲರು ತಮ್ಮ ತಮ್ಮ ಕೊಡಗಳನ್ನು ಹೊತ್ತುಕೊಂಡು ತಿರುಪತಿಗೆ ಪ್ರಯಾಣಿಸಿದರು.

ಇವರು ತಿರುಪತಿಗೆ ಹೋದಾಗ ವಿಚಾರ ತಿಳಿದ ಪಾಪಯ್ಯನಿಗೆ, ಹಿಂದೆ ಸರ್ಪರಾಜ ಹೇಳಿದ ಮಾತು ಜ್ಞಾಪಕಕ್ಕೆ ಬಂದಿತಲ್ಲದೆ, ಊರಿಗೆ ಮರಳಿ ಕರುಗಳ ಒಡೆಯರಿಂದ ಕರುವಿಗೊಂದು ದುಗ್ಗಾಣಿಯಂತೆ ಕೂಲಿ ಹಣ ಸಂಗ್ರಹಿಸಿದನು. ತಂದ ದುಗ್ಗಾಣಿ (ಸು. ೫೦ ಪೈಸೆಗೆ ಸಮ) ಗಳೆಲ್ಲವನ್ನು ತೂರಿದನು. ಅವುಗಳೆಲ್ಲ ಬಂಡೆಯಿಂದ ಸಿಡಿದು ಮೂರುಮಾತ್ರ ಬಂಡೆ ಮೇಲೆ ಬಿದ್ದವು. ಮೂರು ದುಗ್ಗಾಣಿಗಳನ್ನು ಲಂಗೋಟಿಯಲ್ಲಿ ಕಟ್ಟಿಕೊಂಡು ಒಂದು ಮಂಗಾರೆ ಕಾಯನ್ನು ಕಿತ್ತು, ಅದರ ಒಳಗಿನ ತಿರುಳನ್ನು ತೆಗೆದು ಒಂದು ಬುಡ್ಡಿಯಂತೆ (ದೀಪ) ಮಾಡಿ ಸೊಂಟಕ್ಕೆ ಕಟ್ಟಿಕೊಂಡ. ಊರಿನೊಳಕ್ಕೆ ಹೋಗಿ ಒಂದು ದುಗ್ಗಾಣಿ ಕೊಟ್ಟು ಮಂಗಾರಕಾಯಿ ಬುಡ್ಡಿಯಲ್ಲಿ ಎಣ್ಣೆ ತುಂಬಿಸಿಕೊಂಡನು. ಇನ್ನೊಂದು ದುಗ್ಗಾಣಿಗೆ ಅಕ್ಕಿಯನ್ನು ಕೊಂಡು ಅವೆಲ್ಲವನ್ನು ಸೊಂಟಕ್ಕೆ ಬಟ್ಟೆಯಲ್ಲಿ ಕಟ್ಟಿಕೊಂಡ. ಉಳಿದೊಂದು ದುಗ್ಗಾಣಿ ಹಿಡಿದು ತಿರುಪತಿಗೆ ನಡೆದನು.

ಕೇವಲ ಕೆಲವೇ ದಿನಗಳಲ್ಲಿ ಪಾಪಯ್ಯ ತಿರುಪತಿ ತಲುಪಿದ. ಸಹಸ್ರಾರು ಭಕ್ತರು ತಿಮ್ಮಪ್ಪನಿಗೆ ಪೂಜೆ, ಕಪ್ಪ – ಕಾಣಿಕೆಗಳನ್ನು ಸಲ್ಲಿಸುತ್ತಾ ನಮನ ಮಾಡುತ್ತಿದ್ದರು. ಕೆಲವರು ಮಂಡೆಬೋಳಿಸಿಕೊಂಡು (ಕೂದಲು ತೆಗೆಸುವುದು) ಹೊಂಡದ ನೀರಿನಲ್ಲಿ ಮುಳುಗುತ್ತಿದ್ದರು. ಕೆಲವರು ದೇವರ ದರ್ಶನಕ್ಕೆ ಸರಣಿ – ಸರಣಿಯಾಗಿ ನಿಂತಿದ್ದರು. ಪಾಪಯ್ಯ ಕ್ಷೌರಿಕನ ಬಳಿ ಹೋಗಿ ಮಂಡೆಯನ್ನು ಬೋಳಿಸಿಕೊಳ್ಳಲು ಬಂಡೆಯ ಮೇಲೆ ಕುಳಿತ. ಪವಾಡದಂತೆ ಕುಳಿತ ಬಂಡೆ ಮೇಲಕ್ಕೆ ಬೆಳೆಯುತ್ತಾ ಹೋಯಿತು. ಬೆಳೆಯುವ ಬಂಡೆ ಕ್ಷೌರಿಕನಿಗೆ ಕಾಣಲಿಲ್ಲ. ಅವನು ತಲೆ ಬೋಳಿಸುವುದರಲ್ಲೇ ಮಗ್ನನಾಗಿದ್ದನು. ಇನ್ನೇನು ಕೂದಲು ತೆಗೆಯುವ ಹೊತ್ತಿಗೆ ತೆಂಗಿನ ಮರದ ಎತ್ತರದ ಬಂಡೆಯ ಮೇಲೆ ಕುಳಿತ್ತಿದ್ದನ್ನು ಕಂಡು ಆಶ್ಚರ್ಯಚಕಿತನಾದ. ಈವರೆಗೆ ಸಹಸ್ರಾರು ಭಕ್ತರ ಮಂಡೆಗಳನ್ನು ಬೋಳಿಸಿರುವಂತೆ ಈ ರೀತಿಯಾಗಿರಲಿಲ್ಲ. ನಾನು ಕೆಳಗಿಳಿಯುವುದು ಹೇಗೆ ಎಂದು ಆತಂಕಗೊಂಡು, ಈ ವ್ಯಕ್ತಿ ಬೇರೆಯಾರು ಆಗಿರದ ಶ್ರೀಮಾನ್ ನಾರಾಯಣನೇ ಆಗಿರಬೇಕೆಂದು ಮಗುವಿನ ರೂಪದಲ್ಲಿ ಬಂದವನಿಗೆ ಸಾಷ್ಟಾಂಗ ನಮಸ್ಕಾರಗಳನ್ನು ಮಾಡಿ ವೈಕುಂಠಪತಿ ನಾರಾಯಣನೇ, ಬಾಲಕ ರೂಪನೇ, ಮಾನವರಲ್ಲಿ ಸಾಮಾನ್ಯನಲ್ಲದ ನಿನ್ನ ದರ್ಶನದಿಂದ ನಾನು ಧನ್ಯನಾಗಿದ್ದೇನೆ. ನನಗೆ ನಿನ್ನಿಂದ ಇನ್ನೇನೂ ಆಗಬೇಕಾಗಿಲ್ಲ. ಇಲ್ಲಿಂದ ಕೆಳಗೆ ಮಾತ್ರ ಇಳಿಸು ಎಂದು ಪ್ರಾರ್ಥಿಸಿಕೊಂಡನು.

ಪಾಪಯ್ಯ ನಸುನಗುತ್ತಾ ದುಗ್ಗಾಣಿ ಉಳಿಯಿತೆಂದು, ಬಲಗಾಲ ಹೆಬ್ಬೆಟ್ಟಿನಿಂದ ಬಂಡೆಯನ್ನು ಒತ್ತಿ ತುಳಿಯಲು ಪರ್ವತ ಗಾತ್ರದ ಬಂಡೆ ಮೊದಲ ಸ್ಥಿತಿಗೆ ಬಂತು. ಮತ್ತೆ ಎಲ್ಲರಂತೆ ಪಾಪಯ್ಯ ನೀರಿನ ಹೊಂಡಕ್ಕೆ ಹೋದ. ಅಲ್ಲಿ ಬಂದೊಬಸ್ತಿನ ಕಾವಲಿತ್ತು. ಇವನನ್ನು ಹುಚ್ಚನೆಂದು ಬಗೆದು ಜನರು ಹೊಂಡಕ್ಕೆ ಬಿಡಲಿಲ್ಲ. ಪಾಪಯ್ಯ ಸೊಂಟಕ್ಕೆ ಕಟ್ಟಿಕೊಂಡಿದ್ದ ಎಣ್ಣೆದೀಪ ಮತ್ತು ಅಕ್ಕಿಯನ್ನು ಬಿಚ್ಚಿಟ್ಟುಹಾಕಿ, ಹೊಂಡಕ್ಕೆ ಹಾರಿದ. ನೆರೆದ ಭಕ್ತಾಧಿಗಳು ಇವನನ್ನು ಹುಚ್ಚನೆಂದು 'ಸಾಯುತ್ತಿದ್ದಾನೆ ಕಾಪಾಡಿರಿ' ಎಂದು ಕೂಗಿಕೊಂಡರು. ಹೊಂಡಕ್ಕೆ ಬಿದ್ದವನನ್ನು ಯಾರೋ ಎಳೆದು ದಡಕ್ಕೆ ತಂದುಬಿಟ್ಟರು. ಸ್ನಾನವಾಯಿತು. ದರ್ಶನ ಉಳಿದಿದೆ ಎಂದು ಪಾಪಯ್ಯ ಮುಂದಕ್ಕೆ ನಡೆದ.

ತಂದ ಅಕ್ಕಿಯನ್ನು ಡಬ್ಬಿಗೆ ಹಾಕಿ ಎಣ್ಣೆಯನ್ನು ದೇವಸ್ಥಾನದ ದೀಪಕ್ಕೆ ಹಾಕಿ ಸಾವಿರಾರು ಭಕ್ತರ ಮಧ್ಯೆ ದೇವರ ದರ್ಶನ ಆಗುವುದು ಕಷ್ಟವೆಂದು ಕಾಯುತ್ತಾ ಕುಳಿತನು. ಜನರ ಸಾಲಿಗೆ ಸೇರಲು ಹೋದಾಗ ಇವನನ್ನು ಹುಚ್ಚನೆಂದು ಹಿಂದೆ ತಳ್ಳಿದರು. ಚಿಂತೆಗೀಡಾದ ಪಾಪಯ್ಯ ಅವರಿಂದ ದೂರ ಸರಿದು ವಿಶ್ರಾಂತಿ ಪಡೆದ. ಹಿಂದೆ ಸರ್ಪರಾಜ ತಿರುಪತಿಯಲ್ಲಿ ನಾರಾಯಣನ ದರ್ಶನ ಆಗುತ್ತದೆಂದು ಹೇಳಿದ್ದು ನೆನಪಿಗೆ ಬಂದು ಕೊನೆಗೆ ಕೋಪೋದ್ರಿಕ್ತನಾಗಿ ಪಕ್ಕದಲ್ಲಿದ್ದ ಗುಂಡನ್ನು ಎತ್ತಿ ತಲೆಯ ಮೇಲೆ ಹಾಕಿಕೊಳ್ಳಲು ಸಿದ್ಧನಾಗುತ್ತಾ, ಹೆಗಲಲ್ಲಿದ್ದ ಕೋರೆಯನ್ನು ಬಿಸಾಡಿ, ಎಲ್ಲೋ ನಾರಾಯಣನೇ ಸರ್ಪರಾಜನು ಸೂಚಿಸಿದಂತೆ ನಿನ್ನಲ್ಲಿಗೆ ಬಂದಿರುವೆ, ನಿನ್ನ ದರ್ಶನ ಭಾಗ್ಯ ದೊರೆಯಲಿಲ್ಲ ಎಂದರೆ ನಿನ್ನ ಎದುರಿನಲ್ಲಿಯೇ ನನ್ನ ತಲೆಯ ಮೇಲೆ ಈ ಗುಂಡನ್ನು ಹಾಕಿಕೊಂಡು ಪ್ರಾಣ ಬಿಡುತ್ತೇನೆಂದು ಸಿಂಹ ಗರ್ಜನೆ ಮಾಡಿದನು.

ನೆರೆದ ಭಕ್ತರೆಲ್ಲ ಇವನ ಚಟುವಟಿಕೆ ನೋಡಿದರು. ಕೆಲವರು ಹುಚ್ಚ, ದಡ್ಡ ಎಂದುಕೊಂಡರು. ಮತ್ತೆ ಕೆಲವರು ದೇವಮಾನವನು ಇರಬೇಕೆಂದು ನಂಬಿದರು. ಒಬ್ಬ ಸಾಮಾನ್ಯ ಬಾಲಕ ದೊಡ್ಡ ಕಲ್ಲನ್ನು ಎತ್ತಲು ಸಾಧ್ಯವೇ? ಎಂದು ಕೆಲವರು ಆಶ್ಚರ್ಯ ಪಡುತ್ತಿದ್ದರು. ಅಷ್ಟರಲ್ಲಿ ದೇವಾಲಯದ ಗಂಟೆಗಳು ಢಣಢಣ ಎಂದು ಸ್ವಯಂಕೃತ ಮೊಳಗಿದವು. ಭಕ್ತಸ್ತೋಮಕ್ಕೆ ಕಾಣದ ದೇವರು, ಶಬ್ದಹುಚ್ಚು ಬಾಲಕನಿಗೆ ಕಾಣಿಸಿದನೆಂದು ಕೆಲವರು ವ್ಯಥೆ, ಮರುಕ ಪಡತೊಡಗಿದರು. ಶ್ರೀಮನ್ನಾರಾಯಣನು ಗರ್ಭಗುಡಿಯಿಂದ ಹೊರಟು ಶಂಖ ಚಕ್ರಧಾರಿಯಾಗಿ ಬಂದು ಪಾಪಿನಾಯಕನ ಎದುರಿನಲ್ಲಿ ನಿಂತನು. ದೈವದರ್ಶನದಿಂದ ಪುಳಕಿತಗೊಂಡ ಪಾಪಯ್ಯ ಕಲ್ಲನ್ನು ದೂರ ಎಸೆದು, ಶ್ರೀಮನ್ನಾರಾಯಣನ ಪಾದಗಳನ್ನು ಬಿಗಿದಪ್ಪಿ, ಪರಮಾತ್ಮ ನೀನು ಸರ್ವವ್ಯಾಪಿ ಎಂದ. ಹಿಂದೆ ಸರ್ಪರಾಜನು, ತಿರುಪತಿಯಲ್ಲಿ ನಿನಗೆ ನಾರಾಯಣದ ದರ್ಶನವಾಗುತ್ತದೆಂದು ತಿಳಿಸಿದ್ದ. ಅದರಂತೆ ನಿನ್ನಲ್ಲಿಗೆ ಬಂದೆ. ಇವರು ನನ್ನನ್ನು ಹುಚ್ಚನೆಂದು, ನಿನ್ನ ದರ್ಶನಕ್ಕೆ ಬಿಡದೆ ಅಡ್ಡಿಪಡಿಸಿದ್ದರಿಂದ ಕೋಪ ತಾಳಲಾರದೆ ಕಲ್ಲುಗುಂಡನ್ನು ಹೊರಬೇಕಾಯಿತೆಂದು ಹೇಳಿದ. ತನ್ನನ್ನು ಕ್ಷಮಿಸಿ, ಕಾಪಾಡುವಂತೆ ಬೇಡಿಕೊಂಡ.

ಪಾಪನಾಯಕನೇ ನಿನ್ನ ಭಕ್ತಿಗೆ ಮೆಚ್ಚಿಬಂದಿರುವೆ. ನೀನು ಪಾರ್ವತಿ ಪರಮೇಶ್ವರರ ಅನುಗ್ರಹದಿಂದ ಬೆಳೆದು, ಆದಿಶೇಷನ ಆಶೀರ್ವಾದ ಪಡೆದು ಬಂದಿರುತ್ತೀಯೇ, ನಿನ್ನ ಬೇಡಿಕೆ ಏನೆಂಬುದು ತಿಳಿಸು, ನೆರವೇರಿಸುತ್ತೇನೆಂದು ನಾರಾಯಣನು ಪಾಪನಾಯಕನನ್ನು ಕೇಳಲು ದೇವರೇ ನನಗೇನು ಬೇಡ. ನಿಮ್ಮ ದರ್ಶನದಿಂದ ಧನ್ಯನಾದೆ. ಸಾಯುವವರೆಗೂ ತಪಸ್ಸು ಮಾಡಿದರೂ ದರ್ಶನ ಸಿಗುವುದು ಕಷ್ಟ. ಈ ಬಾಲಕನಿಗೆ ದರ್ಶನ ತೋರಿದ್ದೀರಿ. ನಾನು ಏನನ್ನು ಬಯಸುವುದಿಲ್ಲ. ಆದರೂ ಒಂದು ಕೇಳುವೆ: ನಿನ್ನ ಬರಗಾಲಿನಲ್ಲಿ ಘಲ್‌ಘಲ್ ಎನ್ನುವ ಮುತ್ತಿನ ಕಾಲುಪೆಂಡೆ ಕೊಡು. ನಾನು ಕಾಡಿನ ವಾಣಿಯಾಗಿ ಒಂಟಿಗನಾಗಿ ಒಡಾಡುವುದರಿಂದ ಆತ್ಮರಕ್ಷಣೆಗಾಗಿ, ಒಂದು ಕತ್ತಿಯನ್ನು ಕೊಡು. ಇವಿಷ್ಟೆ ನನ್ನ ಕೋರಿಕೆ ಎಂದನು. ಪಾಪನಾಯಕನ ಕೋರಿಕೆಯಂತೆ ನಾರಾಯಣನು ತೃಪ್ತನಾಗಿ ತನ್ನ ಬಲಗಾಲಲ್ಲಿದ್ದ ಮುತ್ತಿನ ಕಾಲುಪೆಂಡೆ, ಒಂದು ಕತ್ತಿ (ಮುಕ್ಕಡ ಅಲಗು) ಕೊಟ್ಟ. ನಂತರ ಏ ಮಗುವೇ ದೊಡ್ಡವನಾದ ಮೇಲೆ ನೀನು ಬಹುದೊಡ್ಡ ಪವಾಡ ಪುರುಷನಾಗುವೆ, ವಾರ್ಧಕ್ಯದ ಅವಧಿಯಲ್ಲಿ ತೊಂದರೆಗಳಾಗಿ ಐಕ್ಯನಾಗುವೆ. ಆ ಸ್ಥಳವು ಪೂಜಾಕ್ಷೇತ್ರವಾಗಿ, ಸರ್ವರಿಂದ ಪೂಜನೀಯ ವ್ಯಕ್ತಿಯಾಗುವೆಂದು ಹಾರೈಸಿದನು.

ತಿರುಪತಿಯಿಂದ ಮರಳಿ ಸ್ವಗ್ರಾಮಕ್ಕೆ ಪಾಪನಾಯಕ ಬರುವ ದಾರಿಯಲ್ಲಿ ಚಳ್ಳಕೆರೆ ಸಮೀಪದ ಪುನಃ ದನಕರುಗಳನ್ನು ಕಾಯುವ ಕೆಲಸಕ್ಕೆ ಹೋಗಲಿಲ್ಲ. ತನ್ನ ಶರೀರ ಬೆಳೆದು ಅಗತ್ಯವಾದ ಆಕರ್ಷಣೆಗಳಿಗೆ ಮಾರು ಹೋಗಿ, ತಂದೆತಾಯಿಗಳನ್ನು ನೋಡಲು ಕಾತರಿಸಿದ.

**ತಂದೆ – ತಾಯಿಯರ ದರ್ಶನ**

ತಂದೆ – ತಾಯಿಗಳನ್ನು ಕೂಡಲು ಅರಣ್ಯ, ಬೆಟ್ಟ – ಗುಡ್ಡವನ್ನು ಸುತ್ತುವಾಗ ಕಾಡಿನ ಬೇಡರನು ಭೇಟಿಮಾಡುತ್ತಾ ಮುಂದುವರೆದ. ಕೊನೆಗೆ ಕ್ಯಾಸಪುರ ಸುತ್ತ – ಮುತ್ತ ಬಂದು ವಿಚಾರಿಸಿದಾಗ ಸುಳಿವು ಸಿಕ್ಕಿತು. ತಂದೆ – ತಾಯಿಗಳಿಗೆ (ಕೋರ್ಲಮಲ್ಲಿನಾಯಕ – ಬಾಣದ ಪಟ್ಟಮ್ಮ) ಮಗು ಜೀವಂತವಾಗಿಲ್ಲವೆಂಬ ನಂಬಿಕೆಯಿತ್ತು. ಹುಟ್ಟಿದ ಮಗುವನ್ನು ಕಾಡಿನಲ್ಲಿ ಬಿಟ್ಟು ಬಂದಿದ್ದರಿಂದ ಸತ್ತು ಹೋಗಿರಬಹುದೆಂದು ತಿಳಿದಿದ್ದರು. ಅಂಥ ಮಗುವನ್ನು ಕೊಟ್ಟನಲ್ಲ ಎಂದು ದೇವರನ್ನೇ ನಿಂದಿಸಿದರು. ಆಗಿನಿಂದ ಅವರಿಗೆ ಮಕ್ಕಳ ಭಾಗ್ಯವೇ ನಿಂತು ಹೋಗಿತ್ತು. ಜನಿಸಿದಾಗಿನಿಂದಲೂ ತಂದೆತಾಯಿಗಳ ಮುಖ ಕಾಣದ ನಾಯಕನಿಗೆ ಮುಜುಗರವಾಯಿತು. ಕೊನೆಗೆ ತನ್ನ ಇಚ್ಛಾಶಕ್ತಿಯಿಂದ ತನ್ನ ಸಂಬಂಧಿಕರನ್ನು ಗುರುತು ಹಿಡಿದ.

ಆ ಪರಿಸರ ಹೇಗಿತ್ತೆಂದರೆ: ಸಣ್ಣ ಹುಲ್ಲಿನ ಗುಡಿಸಲು, ದನಗಳ ರೊಪ್ಪ, ಇಕ್ಕೆಲಗಳಲ್ಲಿ ಮರಗಳ ಅಡಿಯಲ್ಲಿ ಸಣ್ಣಗೂಟಗಳ ಸಾಲುಗಳು. ಚಿಕ್ಕಕರುಗಳನ್ನು ಆ ಗೂಟಗಳಿಗೆ ಕಟ್ಟಲಾಗಿತ್ತು. ನಾಯಿಗಳ ಗುಂಪು, ಹಗ್ಗಗಳ ಗೊಂಚಲು, ಮೊಣಕಾಲುತನಕ ನಾರುಮಡಿಗಳನ್ನಿಟ್ಟು ಬರೀ ಮೈಯಿಂದ ಇಬ್ಬರು ಮಹಿಳೆಯರಿದ್ದರು. ಪಾಪನಾಯಕನಂತೆ ಚಲ್ಯಾಣ ಉಟ್ಟ ಕರಿ ಕಂಬಳಿಕೋರಿ ಧರಿಸಿದ ವೃದ್ಧ ಪುರುಷನನ್ನು ಕಂಡು ಈತನೇ ಎಂದುಕೊಂಡ.

ಪಚ್ಚಪದಿಪಾಲಮ್ಮ ಲಂಗೋಟಿ ಧರಿಸಿದ ಪಾಪನಾಯಕನನ್ನು ಕಂಡು, ತದೇಕ ದೃಷ್ಟಿಯಿಂದ ನೋಡುತ್ತಿದ್ದಳು. ಈ ಬಾಲಕ ತನ್ನ ಅಣ್ಣ ಕೋರ್ಲಮಲ್ಲಿನಾಯಕನ ಹೋಲಿಕೆಯಂತೆ ಕಾಣುತ್ತಿದ್ದ. ಅಣ್ಣನ ಮಗ ಅಡವಿಯಲ್ಲಿ ಬಿಟ್ಟು ಬಂದಾಗ ಸತ್ತಿರಬಹುದು. ಆದರೆ ಈ ಮಗು ಅಣ್ಣನಂತಿದೆ ಎಂದು ಪರಿಬರಿಯಾಗಿ ಯೋಚಿಸಿ ಹತ್ತಿರಕ್ಕೆ ಕರೆದಳು. ಆಗ ಪಾಪನಾಯಕ ಇವಳೇ ನನ್ನ ಅತ್ತೆಯೆಂದು ತಿಳಿದ. ಆದರೆ ಪಾಲಮ್ಮ ಅನುಮಾನಿಸಿದಾಗ ಇವನು 'ನಿನ್ನ ಸೋದರಳಿಯನಾದ ಸೂರ್ಯಪಾಪ ನಾಯಕ' ನೆಂದನು. ಅಣ್ಣನ ಮಗನೆಂದು ತಿಳಿದು ಅವಳು ಸಂತೋಷಪಟ್ಟಳು. ಪೂರ್ವದ ಕಥೆಯನ್ನು ಪಾಪನಾಯಕ ಅತ್ತೆಗೆ ತಿಳಿಸಿದ. ಆಗ ಅವಳು ಅಣ್ಣ – ಅತ್ತಿಗೆಯನ್ನು ಕರೆತಂದಳು. ತಂದೆ – ತಾಯಿಗಳಿಗೆ ಆಶ್ಚರ್ಯವಾಯಿತು. ಅವರಿಗೆ ಪಾಪನಾಯಕ ನಮಸ್ಕರಿಸಿದ. ಮಗುವನ್ನು ಭೂತವೆಂದು ತಿಳಿದು ಅಡವಿಯಲ್ಲಿ ಬಿಟ್ಟು ಬಂದೆವು. ನಾವು ತಪ್ಪು ಮಾಡಿದವು, ಕ್ಷಮಿಸು ಎಂದರು.

ನೀನು ದೇವಮಾನವನೆಂಬುದು ತಿಳಿಯಲಿಲ್ಲ. ಆದಿಶೇಷ, ನಾರಾಯಣನ ದರ್ಶನ ಮಾಡಿ ಬಂದ ಕೀರ್ತಿಶಾಲಿ ನೀನು. ನಮ್ಮೆಲ್ಲರನ್ನು ಕ್ಷಮಿಸು ಎಂದನು. ತಂದೆತಾಯಿಗಳನ್ನು ಸಂತೈಸುತ್ತಾ, ಮುಂದೆ ಚಿಂತಿಸುವ ಅಗತ್ಯವಿಲ್ಲ ಎಂದನು. ನಿಮ್ಮಿಂದ ನನಗೆ ಶಿವಪಾರ್ವತಿಯರ, ಆದಿಶೇಷನ ದರ್ಶನ ದೊರೆಯಿತು. ಮಾಣಿಕ್ಯ ದೊರೆಯಿತು ಎಂದು ನಡೆದ ಪೂರ್ವಕಥೆಯನ್ನೆಲ್ಲ ವಿವರಿಸಿದನು. ಅತ್ತೆಯನ್ನು ತನ್ನ ಗಂಡನ ಮನೆಗೆ ಬಿಟ್ಟುಬರಲು ಸಿದ್ಧತೆ ನಡೆಸಿದರು. ಪಾಪನಾಯಕನು ಮಾತನಾಡುತ್ತಿದ್ದಂತೆ ಅವಳು ಕಾಡಿಗೆ ಹೋಗಿ – ಹಣ್ಣು – ಹಂಪಲುಗಳನ್ನು ತಂದುಕೊಟ್ಟಳು.

---

[1] ಚಿನ್ನಹಗರಿ ನದಿ ಪರಿಸರದ ಬೇಡರು ತಿಳಿಸುವಂತೆ 'ಕಾರ್ಲುಕುಂಟ' ಎಂಬ ಸ್ಥಳದಲ್ಲಿ (ನನ್ನಿವಾಳದ ಸಮೀಪ) ಜಗಲೂರಜ್ಜ ಕಾಲುಮುಂದಾಗಿ ಹುಟ್ಟಿತ್ತಿದ್ದನಂತೆ.

# ೬. ಚಿತ್ರದುರ್ಗ ಜಿಲ್ಲೆಯ ಬುಡಕಟ್ಟು ವೀರರು (4)

**ಗಂಡನ ಮನೆಗೆ ತೆರಳಿದ ಪಾಲಮ್ಮ**

ಪಾಪನಾಯಕನಿಗೆ ಪಾಲಮ್ಮನ ವಿಚಾರವೆಲ್ಲವನ್ನು ತಂದೆ – ತಾಯಿಗಳು ತಿಳಿಸಿದರು. ಪಾಪನಾಯಕ ತನ್ನ ಅತ್ತೆ ಪಚ್ಚೆಪದಿ ಪಾಲಮ್ಮನನ್ನು ಕ್ಯಾಸಾಪುರಕ್ಕೆ ಕರೆದುಕೊಂಡು ಹೋದನು. ಕ್ಯಾಸಾಪುರದ ಕ್ಯಾಸನೋನು ದಂಡು – ದಳ, ಅಪಾರವಾದ ರಾಜವೈಭವದಲ್ಲಿದ್ದನು. ಪಾಪನಾಯಕ ತನ್ನ ಅತ್ತೆಯೊಂದಿಗೆ ಕ್ಯಾಸನೋನ ರಾಜಧಾನಿಗೆ ಹೋಗಿ ಅರಮನೆ ಎದುರು ನಿಂತರು. ಹೆಂಡತಿಯನ್ನು ಕಳೆದುಕೊಂಡ ಇವನು, ಷರತ್ತಿಗೆ ತಪ್ಪುಬಾರದೆಂದು ಕರೆಯಲು ಹೋಗಲಿಲ್ಲವೆಂದು ಚಿಂತಾಕ್ರಾಂತನಾಗಿದ್ದ. ಗಳಗಂಟ ಗಾದಶೆಟ್ಟಿ ಇವನ ಮನೆಯಲ್ಲಿ ಕೂಲಿ ಆಳಿನಂತೆ ದುಡಿಯುತ್ತಿದ್ದ. ಆ ಕಾಡು ಮನುಷ್ಯನ ಮಾತಿಗೆ ಶೆಟ್ಟಿ ಪ್ರೋತ್ಸಾಹಿಸಿದ್ದರಿಂದ ಶೆಟ್ಟಿಗೆ ಈ ಶಿಕ್ಷೆಯಾಯಿತು. ಈ ದೊರೆ (ರಾಜ) ಹೆಂಡತಿಯನ್ನು ಅಗಲಿಸುಮಾರು ಇಪ್ಪತ್ತು ವರ್ಷವಾಗಿತ್ತು.

ಇಪ್ಪತ್ತು ವರ್ಷಗಳ ಹಿಂದೆ ಅಣ್ಣನೊಂದಿಗೆ ಹೋದವಳು, ಇಂದು ಯಾವನೋ ಒಬ್ಬ ಬಾಲಕನೊಂದಿಗೆ ಬಂದಿದ್ದಾಳೆ. ಆಕಾಡು ಮಾನವನಿಗೆಷ್ಟು ಧೈರ್ಯ ಎಂದುಕೊಂಡ ಕ್ಯಾಸನೋನು ಪಾಲಮ್ಮ ತಪ್ಪಿತಸ್ಥಳಾಗಿ ಪತಿಯನ್ನು ನೋಡುವ ಧೈರ್ಯ ಮಾಡದಿದ್ದನ್ನು ಕ್ಯಾಸನೋನು ಕಂಡ. ಅವಳ ಸೌಂದರ್ಯ ಬಾಡಿತ್ತು, ಮುಖ ಸುಕ್ಕುಗಟ್ಟಿತ್ತು. ಇಪ್ಪತ್ತು ವರ್ಷಗಳ ಕಾಡು ಜೀವನದಿಂದ ದೈಹಿಕ ಸೌಂದರ್ಯವು ಆಕರ್ಷಣೆಯನ್ನು ಕಳೆದುಕೊಂಡಿತ್ತು. ಅಡವಿಯ ಹಳ್ಳದಲ್ಲಿ ಕಾಲಾಡಿಸಿಕೊಂಡಿದ್ದಾಗ ಅವಳ ಸೌಂದರ್ಯದ ಛಾಪು ಬೆರಗು

ಗೊಳಿಸುವಂತಿತ್ತು. ಇದೆಲ್ಲವನ್ನು ಕಂಡ ಕ್ಯಾಸನೋನು ಇಪ್ಪತ್ತು ವರ್ಷಗಳಿಂದ ಬೇಕಿಲ್ಲದ ಗಂಡ ಈಗೇಕೆ? ಕಾಡುಪ್ರಾಣಿಯಂತಿರುವವಳನ್ನು ಹೇಗೆ ಸೇರಿಸಿಕೊಳ್ಳಲಿ ಎಂದು ತಿರಸ್ಕರಿಸಿ ಹೊರಡಿರೆಂದು ಇಬ್ಬರಿಗೂ ತಾಕಿತು ಮಾಡಿದ.

ದೈವಶಕ್ತಿ ಹೊಂದಿದ ಪಾಪನಾಯಕನಿಗೆ ಅವನಿಂದ ಯಾವ ಆಘಾತವಾಗಲಿಲ್ಲ. ಸಮಾಧಾನದಿಂದ ತನ್ನ ಮಾವನನ್ನು ಕುರಿತು, ಹಿಂದೆ ನಮ್ಮ ತಂದೆ ಅತ್ತೆಯನ್ನು ಕರೆತಂದಾಗ ಮುರಿದ ಹಲ್ಲನ್ನು ನೆಪ ಒಡ್ಡಿ ಹೊರದಬ್ಬಿದ್ದನ್ನು ವಿವರಿಸಿದ. ಗಾದಶೆಟ್ಟಿಯನ್ನು ಮನೆಯಾಳೆಂದು ಜೀತಕ್ಕಿಟ್ಟುಕೊಂಡಿರುವುದನ್ನು ನೆನಪಿಸಿದ. ಅದೇ ಚಿಂತೆಯಲ್ಲಿ ತಂದೆತಾಯಿ ಅತ್ತೆಯವರು ಕೊರಗಿ, ಬಳಲಿದ್ದಾರೆ. ಅವರ ಕಷ್ಟವನ್ನು ನೋಡಲಾರದೆ ನಾನೇ ಕರೆತಂದಿರುವೆ. ಗಾದಶೆಟ್ಟಿಯನ್ನು ಜೀತ ಬಂಧನದಿಂದ ಬಿಡುಗಡೆ ಮಾಡೆಂದು ವಿನಂತಿಸಿದ.

ಸರ್ವಾಧಿಕಾರಿ, ನಿರಂಕುಶಪ್ರಭುವಾಗಿದ್ದ ಕ್ಯಾಸನು ಪಾಪನಾಯಕನ ಹಿತವಚನಕ್ಕೆ ಸೊಪ್ಪು ಹಾಕಲಿಲ್ಲ. ಕೊಪೋದ್ರೇಕದಿಂದ ವಿವಿಧ ಮಾತುಗಳಿಂದ ನಿಂದಿಸಿ, ಯೋಗ್ಯತೆ, ಪ್ರತಿಷ್ಠೆಗಳ ಬಗೆಗೆ ಮಾತನಾಡಿದ. ದನಗಾಹಿ ಬಾಲಕನ ಬೋಧನೆಗೆ ಸಿಡಿಮಿಡಿಗೊಂಡು ಇಬ್ಬರನ್ನು ಊರಾಚೆ ತಳ್ಳಿ ಎಂದನು. ಅದಕ್ಕೆ ಪಾಪನಾಯಕ ಜಗ್ಗದೆ, ಮಾನವರೇ ಆ ಕೆಲಸಕ್ಕೆ ಕೈಹಾಕಬೇಡವೆಂದು ಧೈರ್ಯವಾಗಿ ಉತ್ತರ ನೀಡಿದ. ನಮ್ಮನ್ನು ಕಾಡುಜನರೆಂದು ಹಿಯಾಳಿಸಬೇಡ. ಕಾಡು ಹೆಣ್ಣಾದ ನನ್ನ ಅತ್ತೆಯನ್ನು ಅಪಹರಿಸಿದ್ದು ಏಕೆ? ಎಂದೆಲ್ಲಾ ಪ್ರಶ್ನಿಸಿದ. ದೀನವಾಗಿ ಅತ್ತೆಯನ್ನು ಕರೆದುಕೊ ಎಂದು ಬೇಡಿದರೂ ಅವನು ಕೇಳಲಿಲ್ಲ. ಕೊನೆಗೆ ತನ್ನ ಆಳುಗಳನ್ನು ಕರೆದು ಅನಾಗರಿಕ ಬಾಲಕ ಹಾಗೂ ಕಾಡುಹೆಣ್ಣನ್ನು ಊರಾಚೆ ತಳ್ಳಿರೆಂದು ಅಜ್ಞಾಪಿಸಿದ.

ಆಗಲೂ ಪಾಪನಾಯಕ ನಿರಪರಾಧಿ ಗಳಗಂಟಗಾದಶೆಟ್ಟಿಯನ್ನು ಮುಕ್ತಮಾಡಿ, ಮಹಾಪತಿವ್ರತೆಯಾದ ನನ್ನ ಅತ್ತೆಯನ್ನು ಕರೆದುಕೊ ಎಂದು ಬೇಡಿಕೊಂಡ. ಮದೋನ್ಮತ್ತನಾದ ಕ್ಯಾಸನೋನು ಪಾಪನಾಯಕನ ಮಾತನ್ನು ಕೇಳಿ ರೊಚ್ಚಿಗೆದ್ದನು. ನನ್ನ ರಾಜ್ಯದಲ್ಲಿ ಈವರೆಗೆ ಒಂದು ಹಸುಗೂಸು ಸಹಾ ತುಟಿ ಬಿಚ್ಚಿರಲಿಲ್ಲ. ನನ್ನ ಪರಿವಾರ ದವರೆದುರಿಗೆ ಯಕಶ್ಚಿತ ಬಾಲಕ ತನ್ನ ಮಾನ – ಮರ್ಯಾದೆಯನ್ನು ತೆಗೆದನೆಂದು ವಿಧವಿಧವಾಗಿ ಆಲೋಚಿಸುತ್ತಿದ್ದ. ಪತ್ನಿಯನ್ನು ಕರೆದು, ಗಾದಶೆಟ್ಟಿಯನ್ನು ಬಿಟ್ಟರೆ ಜನ ನನ್ನ ಸಾಮರ್ಥ್ಯದ ಬಗ್ಗೆ ಲಘುವಾಗಿ ಮಾತನಾಡಿಕೊಳ್ಳುತ್ತಾರೆ. ಅಲ್ಲದೆ, ತಾನು ಸಾವಿರಾರು ಜನರನ್ನು ಧ್ವಂಸಮಾಡಿ, ತನ್ನ ಜಯದ ಸಂಕೇತವಾಗಿ ಕಾಳಿಂಗರಾಯನ ಮಡುವಿನ ಬಳಿ ಏಳು ರಣಗಂಬಗಳನ್ನು ನಡೆಸಿದವನು. ನನ್ನಂಥವೀರ ಪರಾಕ್ರಮಿಯ ಮುಂದೆ ಮಾತನಾಡುವ ಈ ಬಾಲಕನಿಗೆ ನನ್ನ ಶೌರ್ಯ, ಸಾಮರ್ಥ್ಯ ತಿಳಿದಿಲ್ಲ ಎಂದುಕೊಂಡು ಕಾಳಿಂಗರಾಯನ ಮಡುವಿನ ಹತ್ತಿರ ನೆಟ್ಟಿರುವ ವಿಜಯದ ವೀರರಣ ಗಂಬಗಳನ್ನು ನೋಡಿ ನನ್ನನ್ನು ಅರ್ಥಮಾಡಿಕೊ ನೀವು ಹೊರಟು ಹೋಗದಿದ್ದರೆ ನಿಮ್ಮ ಅವಸಾನವು ಇಲ್ಲೇ ಆಗುತ್ತದೆಂದು ಎಚ್ಚರಿಸಿದನು.

ಪಾಪನಾಯಕನು ಕ್ಯಾಸನೋನ ಒಣಪ್ರತಿಷ್ಠೆಗಳಿಗೆ ಕಿವಿಗೊಡನೆ, ನಿನ್ನ ಬೆದರಿಕೆಗೆ ನಾ ಹೆದರುವುದಿಲ್ಲ. ನಾನು ವೀರಬೇಡರ ವಂಶದವನು. ದೈವದ ಆಶೀರ್ವಾದದ ನೆರಳಲ್ಲಿ ಬೆಳೆದಿರುವೆ. ನನ್ನ ಬಲಕ್ಕೆ ನಿನ್ನಂಥ ಸಹಸ್ರಾರು ಜನ ಬಂದರೂ ಧೂಳಿಪಟ ಮಾಡಬಲ್ಲೆ. ನೀನು ಊರು ಹಂದಿಯಾದರೆ, ನಾನು ಕಾಡುಸಿಂಹ ಎಂದನು. ಹೀಗೆಯೇ ಸಂಭಾಷಣೆ ನಡೆದು ಕ್ಯಾಸನೋನು ತನ್ನ ದಂಡುದಳಕ್ಕೆ ಆಜ್ಞೆಮಾಡಿ ಇವನನ್ನು ಕಡಿದು ತುಂಡು ತುಂಡುಮಾಡಿ ಕಾಡಿನಲ್ಲಿ ಬಿಸಾಡಿಬನ್ನಿ, ಈ ಹೆಂಗಸನ್ನು ಊರಾಚೆ ತಳ್ಳಿ ಎಂದು ಆಜ್ಞೆ ಮಾಡಿದ. ಅವರು ಸಿದ್ಧರಾದರು. ಪಾಪನಾಯಕನಿಗೆ ಪಿತ್ತ ನೆತ್ತಿಗೇರಿತು. ಮನದಲ್ಲಿ ಶಿವ – ಪಾರ್ವತಿ, ಆದಿಶೇಷನನ್ನು ನೆನೆದು, ತಿರುಪತಿಯಲ್ಲಿ ನಾರಾಯಣನಿಂದ ಪಡೆದ ಮುಕ್ಕಡ ಅಲುಗಿನಿಂದ ಅವನ ಮೈಮೇಲೇರಿ ಬಂದ ದಂಡು – ದಳವೆಲ್ಲವನ್ನು ಧ್ವಂಸಮಾಡಿ, ಅವನ ವಿಜಯದ ಕಂಬಗಳಾದ ಏಳು ರಣಗಂಬಗಳನ್ನು ತನ್ನ ಸ್ವಾಧೀನಕ್ಕೆ ತೆಗೆದುಕೊಂಡನು. ಆ ನಾಯಕನೆದುರಿಗೆ ಕ್ಯಾಸನೋನ ದಂಡುದಳ ಸೋತಿತು. ಕಾದಾಟದಲ್ಲಿ ಗೆಲ್ಲಲು ಆಗಲೇ ಇಲ್ಲ. ನಂತರ ನಾಯಕ ಕ್ಯಾಸನಿಗೆ ನಿನ್ನ ದಂಡುದಳ ಇನ್ನೆಷ್ಟಿದೆ ಕಳುಹಿಸು ಎಂದನು. ನಿನ್ನನ್ನು ಮುಗಿಸಿದರೆ ನನ್ನ ಅತ್ತೆ ರಂಡೆಯಾಗುವಳು. ಸೋಲನ್ನು ಒಪ್ಪಿ ನಿರಪರಾಧಿ ಶೆಟ್ಟಿಯನ್ನು ಬಿಟ್ಟು ಅತ್ತೆಯನ್ನು ಕರೆದುಕೊ ಎಂದನು.

ಈ ಬಾಲಕನ ಶೌರ್ಯ, ಪರಾಕ್ರಮ ಕಂಡು ಜನರು ಸೋಜಿಗ ಪಟ್ಟುಬೆರಗಾದರು. ಕ್ಯಾಸನಿಗೆದುರು ಯಾರು ನಿಂತು ಮಾತನಾಡುತ್ತಿರಲಿಲ್ಲ. ಏಕೈಕ ಒಬ್ಬ ಬಾಲಕ ದಂಡುದಳವನ್ನು ಸೋಲಿಸಿದ. ಇವನು ಸಾಮಾನ್ಯನಲ್ಲ. ಇಂದ್ರ ಜಾಲಿಕನೋ, ಶೂರನೋ, ಧೀರನೋ ದೇವಮಾನವನೊ ತಿಳಿಯದು. ಎಂತೆಂಥ ಮಹಾವೀರರು ಹತರಾಗಿದ್ದರು. ಈ ಬಾಲಕನ ಗೆಲುವು ನನ್ನ ಸಾವಿಗೆ ಕುತ್ತು ತಂದಂತಿದೆ ಎಂದು ನೊಂದುಕೊಂಡು ಆದರೂ ಹೆಂಡತಿಯನ್ನು ಕಳೆದುಕೊಳ್ಳುವುದಿಲ್ಲವೆಂದೂ ಶೆಟ್ಟಿಯನ್ನು ಬಿಡಲಾಗುವುದಿಲ್ಲನೆಂದೂ ಹೇಳಿದನು.

ಗ್ರಾಮದ ಪ್ರಮುಖರು ಹದಗೆಟ್ಟಿ ಪರಿಸ್ಥಿತಿಯನ್ನು ತಿಳಿಗೊಳಿಸಲು ಪ್ರಯತ್ನಿಸಿದರು. ಸಂಭವಿಸುವ ಅನಾಹುತಗಳನ್ನು ತಪ್ಪಿಸಲು ಯತ್ನಿಸಿದರು. ಕ್ಯಾಸನೋನು ಬಡಾಯಿ ಬಿದ್ದರೆ ಈ ಬಾಲಕ ಉಳಿಸುವುದಿಲ್ಲವೆಂದು ಹಿರಿಯರು ಎಲ್ಲರ ಸಮ್ಮುಖದಲ್ಲಿ ಪಂಚಾಯ್ತಿ ನಡೆಸಿದರು. ಎಲ್ಲರೂ ಪಂಚಾಯ್ತಿಯಲ್ಲಿ ಶೆಟ್ಟಿಯನ್ನು ಬಿಡುಗಡೆ ಮಾಡಿ, ಹೆಂಡತಿಯನ್ನು ಕರೆದುಕೊಳ್ಳುವಂತೆ ಸೂಚಿಸಿದರು. ಅದಕ್ಕೆ ಕ್ಯಾಸನೋನು ಗ್ರಾಮದ ಹಿರಿಯರ ತೀರ್ಮಾನವನ್ನು ವಿರೋಧಿಸಿ ಹೆಂಡತಿಯು ಬೇಡ, ಶೆಟ್ಟಿಯನ್ನು ಬಿಡುವುದಿಲ್ಲ ಎಂದನು.

ಅತ್ತೆ ಮತ್ತು ಶೆಟ್ಟಿಗಳಿಬ್ಬರು ನಿರಪರಾಧಿಗಳಾಗಿದ್ದರೂ ಇಪ್ಪತ್ತು ವರ್ಷಗಳಿಂದ ಪಡಬಾರದ ಕಷ್ಟಪಡುತ್ತಿದ್ದಾರೆ. ಹೆಂಡತಿಯನ್ನು ತಿರಸ್ಕರಿಸಿದ್ದಾರೆ. ಅವಳ ಭವಿಷ್ಯ ಹೇಗಿರುವುದೋ ಯಾರಿಗೆ ಗೊತ್ತು. ಏನೇ ಆದರೂ ತವರುಮನೆಯಿದೆ. ನಾವು ಬಿಡಲು ಆಗುವುದಿಲ್ಲ. ಅತ್ತೆಯನ್ನು ನಾನೇ ಮನೆಗೆ ಕರೆದುಕೊಂಡು ಹೋಗುತ್ತೇನೆ. ಹೆಂಡತಿ ಬೇಡ ಎಂದಾಗ ಅವಳಿಗೆ ಆಸ್ತಿಯನ್ನು ಕೊಡಬೇಕೆಂದನು. ಅತ್ತೆಗೆ ಬಂದ ಆಸ್ತಿಯನ್ನು ಪಡೆದು ಅವಳನ್ನು ತವರಿಗೆ ಬಿಟ್ಟುಬಂದು, ನಾನು ಮಾವನ ಮನೆಯಲ್ಲಿ ಜೀತದಾಳಾಗಿ ದುಡಿದು ಗಾದಿಶೆಟ್ಟಿಯನ್ನು ಬಿಡುಗಡೆ ಮಾಡಿಸಿದರೆ, ನನ್ನ ತಂದೆಗೆ ಮಾಡಿದ ಉಪಕಾರಕ್ಕೆ ನಾನು ಕೃತಜ್ಞತೆ ಸಲ್ಲಿಸಿದ್ಧಂತಾಗುತ್ತದೆ ಎಂದನು. ಆ ಊರಿನ ಹಿರಿಯರಿಗೆ ಪಾಪನಾಯಕನ ಮಾತು ಹಿಡಿಸಿತು. ಅವಳಿಗೆ ದಕ್ಕಬೇಕಾದ ಹಕ್ಕುಗಳಿಗೆ ಒಪ್ಪಿಗೆಯಿತ್ತರು. ಇದನ್ನು ಕಂಡು ಕ್ಯಾಸನೋನು ರೊಚ್ಚಿಗೆದ್ದ. ಅವಳು ಕಾಡಿನ ಹೆಣ್ಣು ಅವಳದೆಂದು ಹೇಳುವ ಆಸ್ತಿ ಯಾವುದು ಇಲ್ಲ ಎಂದು ಕ್ಯಾಸನೋನು ವಾದಿಸಿದ. ಅದಕ್ಕೆ ಪಪನಾಯಕ ನಮ್ಮ ತಂದೆತಾಯಿಗಳು ಕಾಡಿನಲ್ಲಿ ಪ್ರಾಣಿಗಳನ್ನು ಮೇಯಿಸಿಕೊಂಡು ಬದುಕುವವರು. ಅವರಿಗೆ ಹೊಲಮನೆಗಳೆಲ್ಲಿ ಬರಬೇಕು. ಏನೇ ಆಗಲಿ ಹೊಲ – ಮನೆ ಬಿಟ್ಟರೆ ಬಿಡುವೆ ಅತ್ತೆಯ ಚರಸ್ವತ್ತುಗಳಿದ್ದರೆ ಕೊಡಲಿ ಎಂದು ಬೇಡಿದ. ಕೊಡುವುದಿಲ್ಲ ಎಂದರೆ ಬೇಡ ಎಂದಾಗ ಹಿರಿಯರು ಕ್ಯಾಸನೋನಿಗೆ ಹುಡುಗನ ನಿರ್ಧಾರ ತಿಳಿಸಿ ನ್ಯಾಯೋಚಿತವಾಗಿದೆ ಒಪ್ಪಿಕೊ, ಹಟಮಾಡಬೇಡ ಎಂದರು.

ಅಸಾಂಪ್ರದಾಯವಾಗಿ ನಾನು ನಡೆದುಕೊಂಡಿದ್ದರಿಂದ ಈ ಪರಿಸ್ಥಿತಿ ಎದುರಿಸ ಬೇಕಾಯಿತೆಂದು ಕ್ಯಾಸನೋನು ಹೇಳಿದ. ಹಿರಿಯರೆ ನಮ್ಮ ಮಾವನದು ಚರ – ಸ್ಥಿರ ವಸ್ತು, ಆಸ್ತಿ ಇಲ್ಲವೆಂದು ಸುಳ್ಳು ಹೇಳುತ್ತಾನೆ. ನಮ್ಮದು ಇಂತಹ ಸಂಪತ್ತು ಇಲ್ಲ, ನಾವು ಪಶುಪಾಲಕರು ದನಗಳೇ ನಮ್ಮ ಸಂಪತ್ತು ಎಂದ. ಆದರೂ ನಮ್ಮ ತಂದೆ ಒಂದು ಹಸುವನ್ನು ಬಳುವಳಿಯಾಗಿ ಕೊಟ್ಟಿದ್ದರು. ಆಗಿನಿಂದ ಸಂತತಿ ಅಭಿವೃದ್ಧಿಯಾಯಿತು. ಅತ್ತೆಯ ಗೋವುಗಳಿಂದ ಬೆಳೆದ ಸಂಪತ್ತು ಬಿಟ್ಟುಕೊಟ್ಟರೆ ನಾನು ಅತ್ತೆ ಮರಳಿ ಹೋಗುತ್ತೇನೆ ಎಂದನು. ಅವಳದಾದ ಹಸು ಸತ್ತು ಹೋಯಿತು ಎಂದ ಮೇಲೆ ಅದರಿಂದ ಹುಟ್ಟಿದ ಕರುಗಳೆಲ್ಲಿ ಬರಬೇಕೆಂದನು. ಗ್ರಾಮಸ್ಥರಿಗೆ ಚಿಂತೆ ಹೆಚ್ಚಿತು. ನಿಮ್ಮ ತಂದೆ ಕೊಟ್ಟ ಬಡಕಲ ಹಸು ಅಂದೇ ತೀರಿಕೊಂಡಿತೆಂದ ಕ್ಯಾಸನೋನು. ಅದಕ್ಕೆ ಹಿರಿಯರಿಗೆ ಪಾಪನಾಯಕನು ಕಾಡಿನಲ್ಲಿ ಮೇಯುವ ಅತ್ತೆಯ ಹಸುಗಳನ್ನು ಕರೆಯುತ್ತೇನೆ ಅವು ನಮ್ಮ ಅತ್ತೆಗೆ ಸೇರಿದ್ದರೆ ನಾನು ಕರೆದ ಕೂಡಲೆ ಬರುತ್ತವೆ. ಇಲ್ಲವಾದರೆ ಬರುವುದಿಲ್ಲ. ನಾನು ಕರೆದ ಹಸುಗಳೆಲ್ಲವು ಅತ್ತೆಗೆ ಸೇರಿದ್ದವು. ಹಸುಗಳು ಬಂದರೆ ಗಾದಿಶೆಟ್ಟಿ ಮಾವನ ಮನೆಯಲ್ಲಿ ಇರುವಂತಿಲ್ಲ. ಅತ್ತೆಯನ್ನು, ಹಸುಗಳನ್ನು ಊರಿಗೆ ಕರೆದೊಯ್ಯುತ್ತೇನೆ ಎಂದನು. ಇದರಿಂದ ಪಂಚಾಯ್ತಿದಾರರಿಗೆ ಮುಜುಗರವಾಯಿತು.

ಪಾಪಿನಾಯಕನ ಮಾತಿಗೆ ಕ್ಯಾಸನೋನು ಒಪ್ಪಿಕೊಂಡರೂ ಕಷ್ಟ, ಬಿಟ್ಟರು ಕಷ್ಟ, ಉಂಟಾಯಿತು. ಅವಳಿಗೆ ಕೊಟ್ಟ ಒಂದು ಹಸುವಿನಿಂದ ಸಹಸ್ರಾರು ಗೋಸಂಪತ್ತು ವೃದ್ಧಿಯಾಗಿತ್ತು. ನಾನು ಇದಕ್ಕೆ ಒಪ್ಪಿಕೊಂಡರೆ ಸುಲಭವಾಗಿ ಏನಾದರೂ ಮಾಡಬಹುದೆಂದು ಹೆದರಿಕೊಂಡ. ಬಂದಿದ್ದ ಹಿರಿಯರೆಲ್ಲ, ಕ್ಯಾಸನೋನನ್ನು ಕುರಿತು ಏನಯ್ಯಾ ಕ್ಯಾಸಭೂಪನೇ ಆ ಬಾಲಕನು, ಸವಾಲು ಹಾಕಿ, ಸತ್ವಪರೀಕ್ಷೆಗೆ ಸಿದ್ಧನಾಗಿದ್ದಾನೆ. ನಿನ್ನ ಅಭಿಪ್ರಾಯವೇನು? ಹೆಂಡತಿಯನ್ನು ಕರೆದುಕೊಂಡು, ಗಾದಶೆಟ್ಟಿಯನ್ನು ಬಿಡುತ್ತಿಯೋ ಹೇಗೆ ಎಂದು ಪಂಚಾಯ್ತಿ ಕೇಳಿತು. ಆ ಬಾಲಕ

ನಿನ್ನನ್ನು ಸತ್ವಪರೀಕ್ಷೆ ಮಾಡುತ್ತಾನೆ. ನಿನ್ನಲ್ಲಿ ಸತ್ಯಸತ್ಯಾತೆಯನ್ನು ಅರಿಯಲು ಪರೀಕ್ಷೆಯಾಗಿದೆ. ಹೆಂಡತಿಯನ್ನು ಕರೆದುಕೊ, ಶೆಟ್ಟಿಯನ್ನು ಬಿಡು ಎಂದರು. ಮೊದಲ ಷರತ್ತಿನಂತೆ ಕ್ಯಾಸನೋನು ಪಂಚಾಯ್ತಿಯವರಿಗೆ ಈ ಬಾಲಕ ಹಸುಗಳನ್ನು ಕರೆದರೆ ನನ್ನ ಮಡದಿಯನ್ನು ಕರೆದುಕೊಳ್ಳುವ ಎಂದನು. ಸೋತರೆ ಸಾಯುವ ತನಕ ನಮ್ಮ ಮನೆಯಲ್ಲಿ ಈ ಬಾಲಕ ಜೀತದಾಳಾಗಿ ದುಡಿಯಬೇಕು. ಪಾಪನಾಯಕನು ಪಂಚಾಯ್ತಿಯ, ಹಿರಿಯರು ಹೇಳಿದಂತೆ ಕೇಳುವೆ ಎಂದು ಇದಕ್ಕೆ ಅಸತ್ಯನಾರಾಯಣ, ಶಿವಪಾರ್ವತಿ ಮತ್ತು ಆದಿಶೇಷನೇ ಸಾಕ್ಷಿ ಎಂದ. ಅದೇ ರೀತಿ ಕ್ಯಾಸನು ಒಪ್ಪಿ ಹೆತ್ತ ತಂದೆ – ತಾಯಿ, ಭೂದೇವಿ ಹಿರಿಯರಾದ ನಮ್ಮ ಪಾದಸಾಕ್ಷಿಯಾಗಿ ಒಪ್ಪಿ ನಡೆಯಲೆಂದನು.

ಇಬ್ಬರ ಅಭಿಪ್ರಾಯ ಪಡೆದ ನಂತರ, ನೀನಿನ್ನ ಬಾಲಕ ಕೊಟ್ಟ ಮಾತನ್ನು ಉಳಿಸಿಕೊಳ್ಳಬೇಕೆಂದು, ಮುಂದೆ ನಡೆಯುವ ಕಾರ್ಯಕ್ಕೆ ಸಿದ್ಧತೆ ನಡೆಸಿದರು. ಪಾಪನಾಯಕ ಎಲ್ಲಾ ದೇವರುಗಳ ಮೇಲೆ ಆಣೆಮಾಡಿ ಹಿಡಿದ ಸಾಧನೆ ಪೂರೈಸುತ್ತೇನೆ, ಬಾಲಕನೆಂದು ಮೂದಲಿಸಬೇಡಿರೆಂದನು. ನೆರೆದ ಹಿರಿಯರಿಗೆ ದೀರ್ಘ ದಂಡ ನಮಸ್ಕಾರಗಳನ್ನು ಮಾಡಿ, ಅತ್ತೆಗೆ ಮುಗಿದು ಹೊತಟನು. ಇತ್ತ ಪಾಲಮ್ಮ ದೇವರೇ ಬಾಲಕನು ಹಟಮಾಡಿ ಪಂಥಕ್ಕೆ ಬಿದ್ದಿದ್ದಾನೆ. ಸೋತರೆ ಸಾಯುವತನಕ ಜೀತನಾಗಬೇಕು. ಪರಮಾತ್ಮನೇ ಅಳಿಯನಾಡಿದ ಮಾತು ಹುಸಿಯಾಗದಂತೆ ಮಾಡು. ಇಲ್ಲಿಯವರೆಗೆ ನಾನು ಸತ್ಯ, ಧರ್ಮ, ಪತಿವ್ರತಾಶಕ್ತಿಯಿಂದ ಇದ್ದುದೇ ನಿಜವಾದರೆ ನನ್ನ ಅಣ್ಣ ಕೊಟ್ಟ ಬಳುವಳಿಯ ಹಸುವಿನಿಂದ ಬೆಳೆದ ಹಸುಗಳ ಹಿಂಡೆಲ್ಲಾ ಅಳಿಯನ ಹತ್ತಿರ ಬಲರೆಂದು ದೇವರನ್ನು ಪ್ರಾರ್ಥಿಸಿದಳು.

ಪಾಪನಾಯಕನು ಅಡವಿಯ ಕಲ್ಲುಗುಂಡಿನ ಹತ್ತಿರ ಬಂದು ಮೊದಲು ದೇವರುಗಳನ್ನು ನೆನೆದು ಸತ್ಯತೆಯನ್ನು ಗಟ್ಟಿಮಾಡಿಕೊಂಡ. ನಂತರ ಕಲ್ಲುಗಂಡನ್ನು ಹತ್ತಿದ. ಕಾತುರರಾದ ಜನಗಳ ಸಹಸ್ರಾರು ದಂಡುಸೇರಿತು. ಎಲ್ಲರೂ ನೋಡುತ್ತಿದ್ದಂತೆ ಇವರು ಕಲ್ಲುಗುಂಡು ಹತ್ತಿ ಎಲ್ಲಾ ಕಡೆ ನೋಡಿದರೆ ಹಸುಗಳು ಕಾಣಲಿಲ್ಲ. ಮತ್ತೆ ನೋಡಲು ನಿಲುಕುವಷ್ಟು ದೂರದಲ್ಲಿ ಕಂಡವು. ನಾಯಕನು ನಾರಾಯಣ, ಗೋಪಾಲ ಎಂದು ನೆನೆದು ತಪಸ್ಸು ಮಾಡಿದರೂ ದರ್ಶನವಾಗುವುದು ಕಷ್ಟ. ಕೆಲವೇ ಸಂದರ್ಭದಲ್ಲಿ ನನಗೆ ದರ್ಶನ ನೀಡಿ ಮುಕ್ಕಡ ಅಲುಗನ್ನು ಕೊಟ್ಟೆ. ಅದರಿಂದ ನನ್ನ ಮಾವನ ದಂಡನ್ನು ಸೋಲಿಸಿದೆ. ಪಶು (ಪತಿ) ನಾಯಕನೇ ದರ್ಶನವಿತ್ತು ಹಸುಗಳನ್ನು ದರ್ಶನಮಾಡಿಸಿ ಅತ್ತೆಯ ಹಸುಗಳು ಕರೆದರೆ ಬರುವಂತೆ ಅನುಗ್ರಹಿಸೆಂದು ಮನದಲ್ಲಿ ಬೇಡಿಕೊಂಡ. ನಂತರ ದೇವರು ಪ್ರತ್ಯಕ್ಷನಾಗಿ ಚಿಂತಿಸಬೇಡ, ಅತ್ತೆಯ ಹೆಸರಿಡಿದು ಕರೆ ಎಲ್ಲವೂ ಬರುತ್ತವೆ ಎಂದು ಹೇಳಿ ಮರೆಯಾದ.

ಅವನಿಗೆ ದನಕರುಗಳು ಸ್ಪಷ್ಟವಾಗಿ ಕಂಡವು. ನಾನು ಕರೆದರೆ ನೀವೆಲ್ಲ ಬರಬೇಕೆಂದು ಎಲ್ಲ ದೇವರನ್ನು ಬೇಡಿದ. ಎಲ್ಲರಿಗೂ ಕೇಳುವಂತೆ ಅಮ್ಮ ಪಾಲಮ್ಮನ ಗೋಮಾತೆಯರೇ, ಎಲ್ಲಿದ್ದರೂ ನೀವು ಬೇಗ ಓಡಿಬಂದು ಸೇರಬೇಕು ಎಂದು ಕೂಗಿದನು. ಈ ಕೂಗು ಕೇಳಿದ ಪಾಲಮ್ಮನ ಹಸು ಕರುಗಳು ಸೆಟೆದು ನಿಂತವು. ಎರಡನೇ ಕೂಗಿಗೆ ಎಲ್ಲ ಹಸು – ಕರುಗಳು ಒಂದೊಂದಾಗಿ ಬಂದ ಒಂದೆಡೆ ಸೇರಿದವು. ಮುದಿ ಹಸುವೊಂದು ಪಾಪಿನಾಯಕನ ಕೂಗನ್ನು ಗಂಭೀರವಾಗಿ ಆಲಿಸುತ್ತಿತ್ತು. ದನಗಳು ಓಡೋಡಿ ಬಂದು ಸೇರುವುದನ್ನು ದನಗಾಹಿಗಳು ಕಂಡು ಚಿಂತಾಕ್ರಾಂತರಾದರು. ಕ್ಯಾಸನೋನ ಹಸುಗಳು ಮಾತ್ರ ಅಲ್ಲೇ ಮೆರೆಯುತ್ತಿದ್ದವು. ಪಾಲಮ್ಮನ ಹಸುಗಳ ಹಿಂದೆ ನಾಯಿಗಳಿದ್ದವು. ದನಗಾಹಿಗಳು ಗಂಗೆ, ಗೌರಿ, ಭದ್ರೆ ಎಂದು ಕರೆದರೂ ಬೆದರಿಸಿದರೂ ಹೋಗಲಿಲ್ಲ. ಶಬ್ದವನ್ನು ಆಲಿಸುತ್ತಿದ್ದವು. ಒಂದು ಮತ್ತು ಎರಡನೇ ಬಾರಿ ಕೂಗಿದಾಗ ಹಸುಗಳು ಹತ್ತಿರ ಬರಲಿಲ್ಲ. ಮೂರನೇ ಬಾರಿ ಕೂಗಿದಾಗ ಬರಲಿಲ್ಲವೆಂದರೆ ಶಿರಚ್ಛೇದನ ಮಾಡಿಕೊಳ್ಳುವೆ ಎಂದನು. ಕ್ಯಾಸನೋನು ತನ್ನ ಜನರೊಂದಿಗೆ ಈ ಹುಚ್ಚು ಹುಡುಗನಿಗೆ ಹಸುಗಳು ಬರೋಲ್ಲವೆಂದು ಹೇಳಿ ನಗುತ್ತಿದ್ದನು. ಇನೇ ಕೂಗಿಗೆ ಬಾಲಗಳನ್ನೆತ್ತಿದ ಹಸು – ಕರುಗಳು ಜಿಗಿದು ಓಡಿಬಂದವು. ಮುಚ್ಚಿದ ಕಣ್ಣನ್ನು ತೆಗೆಯದೇ ಏಕಾಗ್ರಚಿತ್ತನಾಗಿದ್ದ ನಾಯಕ. ಹಸುಗಳ ಹಿಂದೆ ಕರುಗಳ ಹಿಂಡು ಬರುತ್ತಿತ್ತು. ಪಾಪನಾಯಕನು ನಿಂತ ಗುಂಡಿನ ಸುತ್ತ ಸೇರಿದವು. ಮುದಿಹಸುನಾಯಕನ ಹತ್ತಿರ ನಿಂತು ಅಂಬಾ ಎನ್ನುತ್ತಿತ್ತು. ನಂತರ ಎಲ್ಲ ಹಸುಗಳಿಗೆ ಸಾಷ್ಟಾಂಗ ನಮನಗಳನ್ನು ಮಾಡಿದ. ನನ್ನ ಪ್ರಾಣ ಕಾಪಾಡಿದ್ದೀರಿ ನಿಮಗೆನಾನು ಋಣಿ ಎಂದ. ದೇವರನ್ನು ಪ್ರಾರ್ಥಿಸಿ ಕರಿಯ ಕಂಬಳಿ ಕೋರಿಯನ್ನು ಹೆಗಲ ಮೇಲೆರಿಸಿಕೊಂಡು ಅಲಗನ್ನು ಸೊಂಟಕ್ಕೆ ಸಿಗಿಸಿಕೊಂಡು ಕೋಲು ಹಿಡಿದು ನಡೆದನು.

ಮುಂದೆ ಪಾಪನಾಯಕ ನಡೆದರೆ ಹಿಂದೆ ಹಸುಗಳು ಹಿಂಬಾಲಿಸುತ್ತಿದ್ದವು. ಇದನ್ನು ಕಂಡ ಜನಸ್ತೋಮ ಈ ಬಾಲಕ ದೇವಮಾನವನೆಂದು ಕೊಂಡಾಡಿತು.

ಪಾಪನಾಯಕ ತನ್ನ ಜಯದ ಇಂಗಿತವನ್ನು ಪಂಚಾಯ್ತಿಗೆ ತಿಳಿಸಿದ. ಅದೇ ರೀತಿ ಕ್ಯಾಸನೋನಿಗೆ ಅವರು ಕೇಳಿದಾಗ ಅವನು ಹೆಂಡತಿಯನ್ನು ಕರೆದುಕೊಂಡು, ಗಾದಿಶೆಟ್ಟಿಯನ್ನು ಬಿಡುಗಡೆ ಮಾಡುವೆ. ನನ್ನ ಅಹಂಕಾರದಿಂದ ಮಾಡಿದ ಅಪರಾಧಗಳನ್ನು ಕ್ಷಮಿಸುವಂತೆ ಅಳಿಯನಲ್ಲಿ ಬೇಡುವೆ ಎಂದ ನಂತರ ಪಾಪನಾಯಕ ಗಳಗಂಟ ಗಾದಿಶೆಟ್ಟಿಯು ಸುಮಾರು ಇಪ್ಪತ್ತು ವರ್ಷಗಳು ವೃತ ದುಡಿದಿದ್ದಾನೆ. ಅವನಿಗೆ ಪರಿಹಾರ ರೂಪದಲ್ಲಿ ಅತ್ತೆಯ ಹಸುಗಳಲ್ಲಿ ಐವತ್ತನ್ನು ಕೊಡಲು ಮಾವ ಮತ್ತು ಅತ್ತೆಯ ಅನುಮತಿಯನ್ನು ಕೇಳಿದ. ಕ್ಯಾಸಾನೋನು ಉತ್ತಮ ಐವತ್ತು ಹಸುಗಳನ್ನು ಪಂಚಾಯ್ತಿ ಎದುರು ಕೊಟ್ಟ. ನಂತರ ಪಾಪನಾಯಕನಿಗೆ ಭೋಜನಮಾಡಿಸಿದ. ಹಿರಿಯರ, ಮಾವನ ಅಪ್ಪಣೆ ಪಡೆದು ತನ್ನ ಪೂರ್ವಸ್ಥಳಕ್ಕೆ ಹೋಗಲು ಅಲ್ಲಿಂದ ಬೀಳ್ಕೊಂಡನು. ಇವನು ಕ್ಯಾಸಪುರದಿಂದ ಬಂದವನೇ ತಂದೆತಾಯಿ ನಡೆದ ಪ್ರಸಂಗವನ್ನು ವಿವರಿಸಿದಾಗ ಅವರು ಆನಂದಿತರಾದರು. ನಂತರ ಮಗನನ್ನು ದೇವಮಾನವನೆಂದು, ಚಿರಂಜಿವಿಯಾಗಿರು ಎಂದು ಆಶೀರ್ವದಿಸಿದರು.

**ಜಗಪತಿರಾಯ**

ಇಂದಿನ ಜಗಳೂರು ಪಟ್ಟಣದಲ್ಲಿ ಹಿಂದೆ ಜಗಪತಿ ಎಂಬ ಅರಸ ರಾಜ್ಯಭಾರ ಮಾಡುತ್ತಿದ್ದ. ಅವನು ತನ್ನ ಪಟ್ಟಣದ ಸುತ್ತಲೂ ಕೋಟೆಗಳನ್ನು ಕಟ್ಟಿಸಿ, ನಾಲ್ಕು ದಿಕ್ಕಿಗೆ ನಾಲ್ಕು ಹೆಬ್ಬಾಗಿಲು ಕಂದಕ, ಕೊತ್ತಲು ನಾಲ್ಕು ಬತೇರಿಗಳನ್ನು ಕಟ್ಟಿ ಅಪಾರ ಸೈನಿಕರೊಂದಿಗೆ ಆಳ್ವಿಕೆ ನಡೆಸುತ್ತಿದ್ದ. ಇವನ ಅಧೀನದಲ್ಲಿ ರಾಜ್ಯಭಾರ ಮಾಡುತ್ತಿದ್ದವರಲ್ಲಿ ಕ್ಯಾಸನೋನು ಒಬ್ಬ. ಅಳಿಯನಿಗೆ ಸೋತ ಇವನು ಹಿಂದೆ ಕೊಡುತ್ತಿದ್ದಂತೆ ಕಪ್ಪಕಾಣಿಕೆಗಳನ್ನು ಜಗಪತಿರಾಯನಿಗೆ ಕೊಡಲಿಲ್ಲ. ಪಶು ಸಂಪತ್ತಿನ ಆಸೆಗಾಗಿ ಹೆಂಡತಿಯನ್ನು ಕರೆದುಕೊಂಡ. ಪಾಪನಾಯಕನೊಂದಿಗೆ ರಾಜಿಸಂಬಂಧ ಬೆಳೆಸಿದರೂ ಸೋಲಿನ ಕಹಿ ಮಾತ್ರ ಬೆಂಕಿಯಂತಿತ್ತು. ಜನರೆದುರು, ರಾಜನೆದುರು ತಲೆ ಎತ್ತಲು ನಾಚಿಕೆಯಾಯಿತು. ತಾನು ಸಾಯಬಾರದು, ಬೇರೆಯವರಿಗೂ ಗೊತ್ತಾಗಬಾರದ ಹಾಗೆ ಚಂಡಾಲ ಪಾಪನಾಯಕನನ್ನು ಮತ್ತೊಬ್ಬರಿಂದ ಕೊಲ್ಲಿಸುವ ಪ್ರಯತ್ನ ನಡೆಸಿದ. ಅವನೇ ಆ ಜಗಪತಿರಾಯನ ಮೂಲಕ ಪಾಪನಾಯಕನನ್ನು ಸಾಯಿಸಬೇಕೆಂದು ಸಂಚು ನಡೆಸಿದ.

ಜಗಪತಿರಾಯನು ಸಹಾ ಅಸಮಬಲಶಾಲಿಯಾಗಿದ್ದ. ಧೈರ್ಯ, ಶಕ್ತಿವಂತನಾಗಿದ್ದು, ಇವನಿಗೆ ಸೋತು ಅನೇಕ ಅರಸರು ಅಧೀನದಲ್ಲಿದ್ದರು. ಹೀಗಾಗಿ ಈ ಪಾಪನಾಯಕ ಯಾವ ಲೆಕ್ಕ ಎಂದ ಕ್ಯಾಸನೋನು. ಕುದುರೆ ಹತ್ತಿದ ಕ್ಯಾಸನೋನು ಜಗಪತಿರಾಯನು ದರ್ಭಾರು ನಡೆಸುತ್ತಿದ್ದ ಆಸ್ಥಾನಕ್ಕೆ ಬಂದಾಗ ಉಳಿದ ರಾಜರು ನಮಸ್ಕರಿಸಿ ಒಂದೆಡೆ ಕುಳಿತುಕೊಂಡರು. ಇವನು ಕಾಣಿಕೆ ಸಲ್ಲಿಸಿ, ನಮಸ್ಕರಿಸಿ ಕೈಕಟ್ಟಿಕೊಂಡು ನಿಂತಾಗ ರಾಜನ ಸೂಚನೆಯಂತೆ ಕುಳಿತ. ದರ್ಭಾರು ಮುಗಿದ ಕೂಡಲೇ ಎಲ್ಲಾ ಸಾಮಂತರಾಜರು ತಮ್ಮ ಊರುಗಳಿಗೆ ತೆರಳಿದರು. ಕ್ಯಾಸನು ಬಿಗಿಯಾಗಿ ಕುಂತಿದ್ದ. ಜಗಪತಿರಾಯ ಕೇಳಲಾಗಿ ಅವನು ಕಾಲಿಗೆ ಬಿದ್ದು ಕಣ್ಣೀರು ಸುರಿಸಿದ್ದ. ಆಗ ರಾಜನು ಕ್ಯಾಸನೋನೆ ನನ್ನ ಸಾಮಂತರೆಲ್ಲೆಲ್ಲಾ ವೀರಪರಾಕ್ರಮಿಯಾದ ನೀನು ಈ ರೀತಿ ದುಃಖಿಸಲು ಕಾರಣವೇನು? ಎಂದಾಗ ಪಾಪನಾಯಕನಿಗೂ ತನಗೂ ನಡೆದ ಪ್ರಸಂಗವನ್ನು ವಿವರಿಸಿದ. ‘ನನ್ನ ಗೌರವ, ಶೌರ್ಯ, ಧೈರ್ಯ ಮಣ್ಣುಪಾಲಾಯಿತು. ಬಾಲಕನಿಂದ ಅವಮಾನಿತನಾದ ನಾನು’ ಆತ್ಮಹತ್ಯೆಯೇ ಉತ್ತಮ ಮಾರ್ಗವೆಂದಿದ್ದಾನೆ. ತಾವು ಆ ಬಾಲಕನಿಗೆ ತಕ್ಕ ಶಾಸ್ತಿ ಮಾಡಿ ನನ್ನ ಮಾನ – ಮರ್ಯಾದೆಗಳನ್ನು ಕಾಪಾಡಬೇಕೆಂದು ಬೇಡಿದ.

ಜಗಪತಿರಾಯನಿಗೆ ಕ್ಯಾಸನೋನ ದುಃಖ ಅರ್ಥವಾಯಿತು. ಗಂಡುಗಲಿಗಳ ಗಂಡನಾದ ಇವನಿಗೆ ಈ ರೀತಿ ಆಗಬಾರದಿತ್ತು ಎಂದನು. ಆ ಚಿಂತೆಯನ್ನು ಬಿಟ್ಟು ನಿರ್ಭಯವಾಗಿರು, ಮುಂದಿನ ಕೆಲಸ ನಾನು ಮಾಡುವೆ ಎಂದು ಕಳುಹಿಸಿದನು. ಪಾಪನಾಯಕನಿಗೆ ಹಿಂದೆ ಮುಂದಿಲ್ಲ, ದಂಡು – ದಳವಿಲ್ಲ ಎಂದು ತಿಳಿಯಿತು. ಆ ಬಾಲಕ ಜಾದುಗಾರನೆ? ಪವಾಡ ಪುರುಷನೇ ಯಾರಿರಬಹುದೆಂದು ಅವನ ಇರುವಿಕೆಯನ್ನು ಪತ್ತೆ

ಮಾಡಲು ರಾಜ ಆಳುಗಳನ್ನು ಕಳುಹಿಸಿದನು. ಅದರಂತೆ ಆಳುಗಳು ಕ್ಯಾಸಾಪುರಕ್ಕೆ ಹೋಗಿ ಕ್ಯಾಸನಿಂದ ಪಾಪನಾಯಕ ಯಾರು? ಯಾರ ಮಗ? ಹಿನ್ನೆಲೆ, ಸ್ಥಿತಿ – ಗತಿ ಎಲ್ಲಾ ವಿಚಾರಗಳನ್ನು ಕೇಳಿ ಬಂದು ರಾಜನಿಗೆ ತಿಳಿಸಿದರು.

ರಾಜ ಇಬ್ಬರು ಆಳುಗಳನ್ನು ಕರೆದು, ಪಾಪನಾಯಕನನ್ನು ಕರೆಸುವ ಪ್ರಯತ್ನ ಮಾಡಿದನು. ಸೋಲಿಸುವ, ಸಾಯಿಸುವ ತಂತ್ರದಲ್ಲಿ ನಿರತನಾಗಿ ಅರಮನೆಯ ಆಲೋಚನಾಗೃಹಕ್ಕೆ ತೆರಳಿ ಆಪ್ತರನ್ನು ಕರೆಸಿಕೊಂಡು ಯೋಜನಾತಂತ್ರವನ್ನು ರೂಪಿಸಿದ. ಇತ್ತ ಕೋರ‍್ಲಮಲ್ಲಿನಾಯಕ ಮತ್ತು ಬಾಳಪಟ್ಟಮ್ಮ ತನ್ನ ಮಗನ ಸಾಹಸವನ್ನು ಕಂಡು ಬೆರಗಾಗಿ ಆನಂದಪಟ್ಟರು. ತಂದೆ – ತಾಯಿಗಳಿಬ್ಬರೂ ಕೂಡಿ ಪಾಪನಾಯಕನಿಗೆ ಕ್ಯಾಸನೋನು ಸಾಮಾನ್ಯನಲ್ಲ, ನೀನು ಈ ರೀತಿ ಮಾಡಿರುವುದರಿಂದ ತುಂಬಾ ಅಪಮಾನವಾಗಿ ಸೇಡು ತೀರಿಸಿಕೊಳ್ಳಲು ಹವಣಿಸುತ್ತಾನೆ. ಪರರಿಂದಲಾದರೂ ಮಾಡಿಸುತ್ತಾನೆಂದು ಎಚ್ಚರಿಸಿದರು. ಪಾಪನಾಯಕನಿಗೆ ಸಾವು – ನೋವುಗಳ ಆತಂಕವಿರಲಿಲ್ಲ. ದೈವ ಸಂಭೂತನಾದ ಇವನು ಹುಟ್ಟಿದವನು ಸಾಯಲೇಬೇಕೆಂಬ ನಿಯಮಕ್ಕೆ ಸೇರಿದವನು. ತನ್ನ ಅದೃಷ್ಟದಲ್ಲಿದ್ದಂತೆ ಆಗುತ್ತದೆ. ಎಲ್ಲದಕ್ಕೂ ದೇವರಿದ್ದಾನೆ, ಚಿಂತೆ ಏಕೆ? ಎಂದು ತಂದೆತಾಯಿಗಳಿಗೆ ನಮಸ್ಕರಿಸಿ ಕಾಡಿಗೆ ನಡೆದ.

ಪಾಪನಾಯಕ ಕಾಡಿಗೆ ಹೋದನಂತರ ಕೋರ‍್ಲಮಲ್ಲಿನಾಯಕ ಬಾಳಪಟ್ಟಮ್ಮ ಇಬ್ಬರೂ ತಮ್ಮ ಕುಟೀರದ ಮುಂದಿನ ಮರದಡಿಯಲ್ಲಿ ಕುಳಿತಿದ್ದರು. ರಾಜನು ಕಳುಹಿಸಿದ ಇಬ್ಬರು ಆಳುಗಳು ಬಂದು ಅವರ ಮುಂದೆ ನಿಂತರು. ಕೋರ‍್ಲಮಲ್ಲಿನಾಯಕ ಯಾರಪ್ಪ ನೀವು ಎಂದಾಗ ಆಳುಗಳು ಸೂರ್ಯಪಾಪನಾಯಕನ ತಂದೆ – ತಾಯಿಗಳ ನೀವೆ ತಾನೆ. ಹೌದು ಎಂದು ವಿಚಾರಿಸಿದರು. ಏಕೆ ನಮ್ಮಿಂದ ಏನಾಗಬೇಕು? ಎಂದು ಕೇಳುವಾಗಲೇ ಪಟ್ಟಣದವರಂತೆ ಕಾಣುವ ಇವರ ಪರಿನೋಡಿ ದಂಪತಿಗಳಿಬ್ಬರೂ ಗಾಬರಿಗೊಂಡರು. ನಮ್ಮನ್ನು ನೋಡಿ ಹೆದರಬೇಡಿ, ನಾವು ಪಟ್ಟಣಿಗರು, ನೀವು ಕಾಡು ಜನರು ಆದರೆ ಇಬ್ಬರೂ ಮನುಷ್ಯರು ತಾನೆ ಎಂದರವರು. ಆದರೂ ಇವರಿಗೆ ಕ್ಯಾಸನೋನ ಮೇಲೆ ಅನುಮಾನವಿತ್ತು, ಆದ್ದರಿಂದ ಅತಿಯಾದ ಹೆದರಿಕೆಯಾಯಿತು. ನಂತರ ಅವರು ನಾವು ಜಗಳೂರು ಜಗಪತಿರಾಜನ ಆಳುಗಳು ನಿಮ್ಮ ಕುಮಾರನನ್ನು ರಾಜನಿಗೆ ನೋಡಬೇಕೆಂಬ ಆಸೆಯಿದೆ, ನೀವು ಹೆದರುವ ಅಗತ್ಯವಿಲ್ಲ. ಪಾಪನಾಯಕ ಎಲ್ಲಿ ಎಂದಾಗ ಮಲ್ಲಿನಾಯಕ ಕಾಡಿಗೆ ಹೋಗಿದ್ದಾನೆಂದು ಹೇಳುತ್ತಾನೆ.

ಇಬ್ಬರು ಆಳುಗಳು 'ನಾಳೆ ಪಾಪನಾಯಕನನ್ನು, ಜಗಳೂರು ಜಗಪತಿರಾಜನ ಹತ್ತಿರ ಕಳುಹಿಸಿರಿ, ಆಜ್ಞೆಯಾಗಿದೆ' ಎಂದು ಹೇಳಿಬಂದರು. ಕೋರ‍್ಲಮಲ್ಲಿನಾಯಕ ಬಾಳದ ಪಟ್ಟಮ್ಮ ಜಗಪತಿರಾಯ ಏಕೆ ಕರೆಸಿರಬೇಕು ಕ್ಯಾಸನೋನು ಏನಾದರೂ ತಂತ್ರ ಹೂಡಿರಬಹುದೆಂದು ಚಿಂತಿಸಿದರು. ಸಂಜೆ ಮನೆಗೆ ಬಂದ ಪಾಪನಾಯಕನಿಗೆ ತಂದೆತಾಯಿಗಳಿಬ್ಬರೂ 'ಜಗಪತಿರಾಜನು ಜಗಳೂರಿಗೆ ಬರಲು ಹೇಳಿ ಕಳುಹಿಸಿದ್ದಾನೆ' ಎಂಬ ಆಳುಗಳ ವಿಚಾರವನ್ನು ತಿಳಿಸಿದರು. ಪಾಪನಾಯಕನಿಗೂ ಸಹಾ ಯೋಚನೆಯಾಯಿತು. ನನ್ನ ಮಾವ ಕ್ಯಾಸನು ಈ ರೀತಿ ದೂರು ಸಲ್ಲಿಸಿರಬೇಕು ಎಂದು ಆಲೋಚಿಸಿದ. ಬೆಳಿಗ್ಗೆ ಜಗಪತಿರಾಯನ ಹತ್ತಿರ ಹೋಗುವುದಾಗಿ ತಂದೆತಾಯಿಗಳಿಗೆ ಹೇಳಿದ.

ತಂದೆ – ತಾಯಿಗಳಿಬ್ಬರೂ ಏನಾದರೂ ಸಂಭವಿಸಬಹುದೆಂದು ಹೋಗುವುದನ್ನು ತಡೆದರು. ಹೋಗುವುದು ಕಷ್ಟ ಇರುವುದು ಕಷ್ಟವೆಂದು ಸಂಕಟಪಟ್ಟರು. ಪಾಪನಾಯಕ ಮೂರನೇ ದಿನ ಜಗಳೂರಿಗೆ ಹೊರಟು, ಎಲ್ಲದಕ್ಕೂ ಸಿದ್ಧನಾಗಿದ್ದನು. ಸ್ನೇಹಕ್ಕೆ ಸ್ನೇಹ ವಿರೋಧಕ್ಕೆ ಮುಕ್ಕಡ ಅಲುಗಿನಿಂದ ಧ್ವಂಸ ಮಾಡುವೆ ಎಂದನು.

ಜಗಳೂರಿನ ಜಗಪತಿರಾಯನು ಆ ಕಾಡು ಬಾಲಕನನ್ನು ಸರ್ವ ಪ್ರಯತ್ನದಿಂದ ಕೊಲ್ಲಬೇಕೆಂದು ತಿಳಿಸಿದ. ಕ್ಯಾಸನಿಗೆ ಕೊಟ್ಟ ಮಾತು ಉಳಿಸಬೇಕೆಂದನು. ತನ್ನ ಆಳುಗಳಿಂದ ಪಟ್ಟಣದ ಮೂರುಕೋಟೆ ಬಾಗಿಲುಗಳನ್ನು ಮುಚ್ಚಿಸಿದ, ಕೋಟೆಯ ಹೊರಭಾಗದ ಕಂದಕದಲ್ಲಿ ಸುತ್ತಲೂ ಕತ್ತಿಗಳನ್ನು ಇಡಿಸಿದ. ದಂಡಿಗೆ ಎಲ್ಲ ಪೂರ್ವಸಿದ್ಧತೆ ಹೇಳಿ, ಪೂರ್ವದಿಕ್ಕಿನ ಕೋಟೆಯ ಬಾಗಿಲಿನಲ್ಲಿ ತಳವಾರನೊಬ್ಬನನ್ನು ನಿಲ್ಲಿಸಿ ಸೂರ್ಯ ಪಾಪನಾಯಕನು ಬಂದ ಕೂಡಲೇ ಅವನನ್ನು ಒಳಗೆ ಬಿಟ್ಟು ಕೋಟೆಯ ಬಾಗಿಲು ಮುಚ್ಚಿರೆಂದು ಹೇಳಿದನು. ಸ್ವಲ್ಪ ಸಮಯದ ನಂತರ ದ್ವಾರಪಾಲಕನೊಬ್ಬ ಬಂದು ಪಾಪನಾಯಕ ಬರುವ ಸಂಗತಿ ತಿಳಿಸಿದ. ರಾಜನು ತನ್ನ ದಂಡಿಗೆ ಭಟ್ಟರಿಗೆ ಪಾಪನಾಯಕ ಕೋಟೆಗೆ

ಬಂದ ಮೇಲೆ ಅವನ ಕೈಕಾಲುಗಳನ್ನು ತುಂಡುತುಂಡು ಮಾಡಿರೆಂದು ಹೇಳಿದಾಗ ಅವರು ಕೋಟೆ ದ್ವಾರದ ಪಕ್ಕದಲ್ಲಿ ಕಾಯುತ್ತಿದ್ದರು. ಪಾಪನಾಯಕ ಮುತ್ತಿನ ಕಾಲುಪೆಂಡೆಯನ್ನು ಕಾಲಲ್ಲಿ ಧರಿಸಿ ಮುಕ್ಕಡಲ ಅಲಗನ್ನು ಸೊಂಟದಲ್ಲಿ ಧರಿಸಿಕೊಂಡು ಜಗಪತಿರಾಯನ ಕೋಟೆಗೆ ಪ್ರವೇಶಿಸಿದ. ತಳವಾರು ಇವನನ್ನು ಒಳಗೆ ಬಿಟ್ಟ ಕೋಟೆಬಾಗಿಲು ಭದ್ರಪಡಿಸಿ ಅವನೊಂದಿಗೆ ನಡೆದ. ಭಟ್ಟರು ಬಂದು ಪಾಪನಾಯಕನ ಮೇಲೆ ಎರಗಿದರು. ದೇವರನ್ನು ನೆನೆದು ತನ್ನ ಅಲಗಿನಿಂದ ಎಲ್ಲರನ್ನು ಧ್ವಂಸಮಾಡಿದ ಪಾಪನಾಯಕ, ದಂಡುದಳದ ನಾಶ ಕಂಡು ಹೆದರಿದ ರಾಜನ ಭಟ್ಟರು ನಾಲ್ಕು ಕಡೆಯಿಂದ ಮುತ್ತಿಗೆ ಹಾಕಿದರು. ಇವನೊಬ್ಬನೆ, ದಂಡಿನವರು ಮಾತ್ರ ಸಹಸ್ರಾರು ನೆರೆದಿದ್ದರು. ಪಾಪನಾಯಕನ ಹೊಡೆತಕ್ಕ ತತ್ತರಿಸಿ ಅನೇಕ ಜನ ಕಾಲ್ಕಿತ್ತರು.

ಜಗಪತಿರಾಯನು ಸುತ್ತುಗಟ್ಟಿರೆಂದು ಆಜ್ಞೆಮಾಡಿದ. ದಂಡಿನವರಿಗೆ ಆ ಧೈರ್ಯ ಬರಲಿಲ್ಲ. ಪಪನಾಯಕನು ಇವರ ಕೈಯಿಂದ ತೊಂದರೆ ಪಡುವುದು ಬೇಡವೆಂದು ಕಾಡಿಗೆ ಹೋಗಲು ನಿರ್ಧರಿಸಿದ. ಕೋಟೆಯ ಮೇಲಿಂದ ಕೆಳಗೆ ಹಾರಿ ಕಂದಕದಲ್ಲಿ ಬಿದ್ದ. ರಾಜನು ಮೊದಲೇ ಏರ್ಪಡಿಸಿದ್ದ ಕಂದಕದಲ್ಲಿ ನೆಟ್ಟ ಕತ್ತಿಗಳ ಮೇಲೆ ಬಿದ್ದಾಗ ಮೊಳಕಾಲು, ಚಿಪ್ಪುಗಳು ಒಡೆದು ಹೋದವು. ಪಯಣಿಸಲು ಆಗಲಿಲ್ಲ. ಅಲ್ಲೇ ಬಿದ್ದು ದೇವರನ್ನು ಪ್ರಾರ್ಥಿಸಿದ. ನಾರಾಯಣ, ಪರಶಿವ, ಆದಿಶೇಷನನ್ನು ಸ್ಮರಿಸಿ ಭೂತಾಯಿ ಗರ್ಭದಲ್ಲಿ ಅಡಗಿಕೊಳ್ಳಲು ಅವಕಾಶ ಕೇಳಿದನು. ಆಗ ಕಾಲಲ್ಲಿದ್ದ ಮುತ್ತಿನಕಾಲು ಪೆಂಡೆಯನ್ನು ಬಿಚ್ಚಿ, ಮುಕ್ಕಡ ಅಲುಗನ್ನು ಒಂದೆಡೆ ಇಟ್ಟ. ಎರಡು ಕೈ ಜೋಡಿಸಿ ತಪಸ್ಸು ಮಾಡಲು ನಿರತನಾದ, ಆಗ ಭೂದೇವಿ ಬಿರುಕು ಬಿಡಲು ನಾಯಕನು ಆ ಬಿರುಕಿನಲ್ಲಿ ಇಳಿದು ಭೂತಾಯಿಯ ಗರ್ಭದಲ್ಲಿ ಐಕ್ಯನಾದನೆಂಬ ಪ್ರತೀತಿಗಳಿವೆ.

**ಪಾಪನಾಯಕನ ಕೊನೆಯ ದಿನಗಳು**

ಹೋದ ಮಗ ರಾತ್ರಿಯಾದರೂ ಬರಲಿಲ್ಲವೆಂದು ಕೋರ್ಲಮಲ್ಲಿನಾಯಕನಿಗೆ ಆತಂಕವಾಯಿತು. ಕ್ಯಾಸನೋನು ನನ್ನ ಮಗನಿಗೆ ತೊಂದರೆ ಕೊಟ್ಟಿರಬಹುದೆಂದು ಅಣ್ಣನಾದ ದೊರೆ ಯರಮಂಚಿನಾಯಕನ ಬಳಿ ಹೋದ. ಅಂದು ಬೇಡರು ಜಗಳೂರು ಪಟ್ಟಣದಿಂದ ಆಂಧ್ರದ ರಾಯದುರ್ಗ, ವೇದಾವತಿ ನದಿ ತೀರದವರೆಗೂ ವಿಸ್ತಾರಗೊಂಡಿದ್ದರು. ತಲೆಮಾರುಗಳಿಂದಲೂ ಯರಮಂಚಿ (ಎರಿಮಿಂಚು – ಕೆಂಪು ಬೆಳಕು) ನಾಯಕನ ವಂಶಸ್ಥರು ದೊರೆತನವನ್ನು ಪರಿಪಾಲಿಸುತ್ತಾ ಬಂದಿದ್ದರು. ಸದ್ಗುಣ ಸಂಪನ್ನ, ವಾಕ್‌ಶುದ್ಧಿಯುಳ್ಳ ನಾಯಕನಿಗೆ ಎಲ್ಲಾ ಬೇಡರನ್ನು ಒಂದೆಡೆ ಕೂಡಿಸಬೇಕೆನ್ನುವ ಹಂಬಲವಿತ್ತು. ಜಾತಿ ಬಹಿಷ್ಕೃತರಾದವರನ್ನು ಗೋಮೂತ್ರ ಸಿಂಪಡಿಸಿ ಕುಲಕ್ಕೆ ಸೇರಿಸಿಕೊಳ್ಳುತ್ತಿದ್ದ. ಹೀಗಾಗಿ ನಡುಗಡ್ಡೆಯ ಮೇಸೋಬೇಡರೆಲ್ಲಾ ಯರಮಂಚಿನಾಯಕನನ್ನು ದೊರೆಯನ್ನಾಗಿ ಮಾಡಿಕೊಂಡು ಅವನ ಆಜ್ಞೆಯಂತೆ ಇದ್ದರು. ಗುಡಿಕಟ್ಟುಗಳು, ಕಟ್ಟೆಮನೆಗಳು, ಪೆಟ್ಟಿಗೆ ದೇವರುಗಳು, ಕುಲ – ಗೋತ್ರಗಳು, ಆಚಾರ – ವಿಚಾರಗಳನ್ನು ಹೊಸದಾಗಿ ಚಾಲ್ತಿಗೆ ತಂದು ಶಾಂತಿ, ಶಿಸ್ತು, ಪರಿಪಾಲಿಸುತ್ತಿದ್ದರು.

ಕೋರ್ಲಮಲ್ಲಿನಾಯಕ ಮಗ ಬಾರದಿರುವ ಸಂಗತಿ ಹಿಂದೆ ನಡೆದ ಪ್ರಸಂಗವನ್ನು ದೊರೆಗೆ ತಿಳಿಸಿದನು. ಆಗ ದೊರೆಯೊಂದಿಗೆ ಕೋರ್ಲಮಲ್ಲಿನಾಯಕ, ಬಾಳೇಪಟ್ಟಮ್ಮ ಇತರೆ ಅನೇಕ ಮಂದಿ ಜಗಳೂರಿಗೆ ಬಂದರು. ಎಲ್ಲಾ ಕಡೆ ಶೋಧನೆ ನಡೆಸಿದರು. ಪಾಪನಾಯಕ ಪತ್ತೆಯಾಗಲಿಲ್ಲ. ಕೊನೆಗೆ ಪಶ್ಚಿಮ ದಿಕ್ಕಿನ ಕಡೆ ನಡೆದಾಗ ಮುತ್ತಿನ ಕಾಲುಪೆಂಡೆ, ಮುಕ್ಕಡ ಅಲುಗುಕೋರಿ ಕಾಣಿಸತೊಡಗಿದವು. ಹಾಗೇ ನೋಡಿದಾಗ ಯರಮಂಚಿನಾಯಕನ ಕಣ್ಣಿಗೆ ಭೂಮಿ ಬಿರುಕು ಬಿಟ್ಟಿದನ್ನು ಕಂಡು, ಪಾಪನಾಯಕ ಭೂಮಿಯಲ್ಲಿ ಐಕ್ಯನಾಗಿದ್ದಾನೆಂದು ಅಲ್ಲಿ, ಸಮಾಧಿ ನಿರ್ಮಿಸಿ, ಮುಕ್ಕಡ ಅಲಗನ್ನು ನೆಟ್ಟ. ಅಲ್ಲಿಯೇ ಒಂದು ಗುಡಿಯನ್ನು ಕಟ್ಟಿಸಿ ಅದರ ಬಾಗಿಲನ್ನು ಯಾರು ತೆಗೆಯದಂತೆ ಹೇಳಿದ. ಹೊರಗಿನಿಂದಲೇ ಪೂಜಾ ಕಾರ್ಯಗಳನ್ನು ಪೂರೈಸಿಕೊಳ್ಳಬೇಕಾಗಿತ್ತು. ಯಾರಾದರೂ ನಾಯಕನು ಸಮಾಧಿ ಸ್ಥಳಕ್ಕೆ ಹೋಗಬೇಕಾದರೆ ಎರಡು ಕಣ್ಣುಗಳನ್ನು ಮುಚ್ಚಿಕೊಳ್ಳಬೇಕಾಗಿತ್ತು.

[1]

ಮುತ್ತಿನ ಕಾಲುಪೆಂಡೆಯನ್ನು ನಾರಾಯಣನ ಅವತಾರಿ ಕಂಪಳರಂಗಸ್ವಾಮಿಗೆ ಅರ್ಪಿಸಿದ. ಆಗಿನಿಂದ ಈ ನಡುಗಡ್ಡೆ ಮ್ಯಾಸಬೇಡರು ಒಂದು ವರ್ಷ, ಮೂರು ವರ್ಷಕ್ಕೊಮ್ಮೆ ಪಾಪನಾಯಕನ ಸಮಾಧಿ ಸ್ಥಳಕ್ಕೆ ಹೋಗಿ ಪೂಜೆ ಸಲ್ಲಿಸುತ್ತಾರೆ. ಯಾರು ಸಮಾಧಿ ಸ್ಥಳದ ಬಾಗಿಲು ತೆಗೆಯುವುದಿಲ್ಲ, ತೆಗೆದರೆ ಕಣ್ಣುಗಳು ಹೋಗುತ್ತವೆಂಬ ನಂಬಿಕೆಯಿತ್ತು. ಜೆ.ಆರ್. ಹಾಲಸ್ವಾಮಿ ಇಲ್ಲಿನ ಶಾಸಕರಾಗಿದ್ದ ಅವಧಿಯಲ್ಲಿ ಉತ್ತರ ಪ್ರದೇಶದ ಕಪಟ ಸನ್ಯಾಸಿಯೊಬ್ಬರು ಇದರ ಬಾಗಿಲನ್ನು ತೆಗೆದರು. ಅಲ್ಲಿ ಯರಮಂಚಿನಾಯಕ ನೆಟ್ಟಿದ್ದ ಮುಕ್ಕಡ ಅಲಗು ಕಾಣಲಿಲ್ಲ. ಜಗಳೂರಲ್ಲಿ ಪಾಪದೇವರೆಂದು, ಜಗಳೂರು ಪರಿಸರದಲ್ಲಿ ಜಗಳೂರಜ್ಜನೆಂದು ಕರೆಯುತ್ತಾರೆ. ಚಳ್ಳಕೆರೆಗೆ ಸಮೀಪದಲ್ಲಿ ಪುಣ್ಯಕ್ಷೇತ್ರವಿದ್ದು, ಪ್ರತಿನಿತ್ಯ ಪೂಜಾಕಾರ್ಯಗಳು ನಡೆಯುತ್ತವೆ. ಅದು ಹಿಂದೆ ಬಾಲಕನಾಗಿದ್ದಾಗ ಏಳೆಡೆ ಸರ್ಪ ದರ್ಶನಕೊಟ್ಟ ಸ್ಥಳ. ಹುತ್ತ ಇಂದಿಗೂ ಇದೆ. ಈ ಸಮಾಧಿಗೆ ಬಂದು ಹೋಗುವ ಭಕ್ತರು ದೇವಾಲಯ ನಿರ್ಮಿಸಿದ್ದಾರೆ. ಸಮೀಪದಲ್ಲಿ ಹರಿಯುವ ಹಳ್ಳಕ್ಕೆ ಒಂದು ಕೆರೆಯನ್ನು ಕಟ್ಟಲಾಗಿದೆ. ಪ್ರತಿ ಸೋಮವಾರ ಪರವು ಮಾಡುವುದನ್ನು ನೋಡಬಹುದು. ಪಾಪನಾಯಕನಿಗೆ ಕುರಿ, (ಕೋಳಿ) ಗಳನ್ನು ಬಲಿಕೊಡುವುದು ಹೆಚ್ಚು. ಹುತ್ತದ ಸಮಾಧಿ ಅಕ್ಕಪಕ್ಕ ಸಣ್ಣ – ಪುಟ್ಟ ಕಲ್ಲುಗುಡ್ಡಗಳಿವೆ. ಮರಗಿಡಗಳನ್ನು ಬೆಳೆಸುವ ಕಾರ್ಯಗಳು ಇತ್ತೀಚೆಗೆ ನೆಡೆಯುತ್ತಿವೆ. ಬೇಡರಲ್ಲಿ ಹುಟ್ಟಿ ಪವಾಡ ಪುರುಷನಾದರೂ ಬೇಡ ಜನಾಂಗಕ್ಕೆ ಪಾಪಯ್ಯ ಸೀಮಿತವಾಗಲಿಲ್ಲ. ಎಲ್ಲ ಮತ, ಧರ್ಮ, ಪಂಥದವರು ಪೂಜಿಸುತ್ತಾರೆ. ಜಗಳೂರಜ್ಜನಿಗೆ ಪ್ರತಿಯೊಂದು ಜನಾಂಗದಲ್ಲಿ ಭಕ್ತರಿದ್ದಾರೆ. ಚಳ್ಳಕೆರೆಯಲ್ಲಿ ಪವಾಡ ನಡೆಯುತ್ತದೆ. ಭಕ್ತರ ಅನುಕೂಲಕ್ಕಾಗಿ ಕಲ್ಯಾಣಮಂಟಪ, ಇತರೆ ಮಂಟಪಗಳನ್ನು ಕಟ್ಟಿಸಿದ್ದಾರೆ. ಜಗಳೂರಜ್ಜನ ಕಥೆಯನ್ನು ಮೊಳಕಾಲ್ಮೂರು, ಚಳ್ಳಕೆರೆ ಮತ್ತು ಜಗಳೂರು ತಾಲೂಕುಗಳಲ್ಲಿ ಹೇಳುತ್ತಾರೆ. ಜಗಳೂರು ತಾಲೂಕಿನ ಕಾನನಕಟ್ಟೆ ಗ್ರಾಮದ ಮಹದೇವಪ್ಪ ಎಂಬ ವೃದ್ಧನು ಕಥೆ ಹೇಳುತ್ತಿದ್ದ, ಕೆಲವೇ ವರ್ಷಗಳ ಹಿಂದೆ ಆತ ತೀರಿಕೊಂಡನು. ಈಗ ಈ ನಾಯಕನ ಬಗ್ಗೆ ನಿಖರವಾಗಿ ಕಥೆ ಹೇಳುವವರೇ ವಿರಳ. ಕಾನಕಟ್ಟೆಯ ನಿವೃತ್ತ ಶಿಕ್ಷಕ ತಿಪ್ಪನಾಯಕ (ಎಸ್.ಬಿ) ಅವರು ಜಗಳೂರಜ್ಜನ ಬಗ್ಗೆ ಮಾಹಿತಿ ಹೊಂದಿದ್ದು, ಸುಲಭವಾಗಿ ವಿಶ್ಲೇಷಿಸುತ್ತಾರೆ.

ದಾವಣಗೆರೆ ಜಿಲ್ಲೆಯ ಜಗಳೂರು ಪಟ್ಟಣದಲ್ಲಿರುವ ಪಾಪನಾಯಕ ದೇವಾಲಯ, ಕೋಟೆ, ಪಾದಕಟ್ಟೆ, ಸಮಾಧಿ, ವೀರಗಲ್ಲು ಮೊದಲಾದ ಪ್ರಾಚ್ಯಾವಶೇಷಗಳ ಸಮುಚ್ಚಯವನ್ನು ಈ ಪ್ರದೇಶದಲ್ಲಿ ನೋಡಬಹುದು. ಈ ಊರಿನ ಜನರು ಜಾತಿಭೇದವಿಲ್ಲದೆ ಪ್ರತಿಯೊಬ್ಬರೂ ಈತನನ್ನು ಪೂಜಿಸುವರು. ಓಬಯ್ಯ ಎಂಬ ಪೂಜಾರಿ ಈ ದೇವಾಲಯದ ಪ್ರತಿಯೊಂದು ಜವಾಬ್ದಾರಿಯನ್ನು ಕೈಗೊಂಡಿದ್ದಾರೆ.



ಜಗಳೂರಜ್ಜನ ಗದ್ದುಗೆ, ಜಗಳೂರು

[1] ಇಂದಿಗೂ ಕೋಟೆ, ಕಂದಕ, ಪಾದಕಟ್ಟೆ, ಗದ್ದಿಗೆ, ತಪಸ್ಸಿನ ಸ್ಥಳಗಳು, ಇತರ ಅವಶೇಷಗಳನ್ನು ಜಗಳೂರಿನ ಪಶ್ಚಿಮ ಭಾಗದ (ವಾಯುವ್ಯ) ಕೆರೆಯ ಬದಿಯಲ್ಲಿ ಕಾಣಬಹುದು. ಬೇಟೆ ಕಡಿದರೆ ಮೊದಲು ಮೊಣಕಾಲು ಕಡಿದು ಬೇಟೆಯನ್ನು ೩ ಹೆಜ್ಜೆ ನಡೆಸಿ ಆನಂತರ ತಲೆ ಕಡಿಯುತ್ತಾರೆ.

ಎರಡು ವರ್ಷಗಳ ಕಾಲ ಪಿ.ಯು.ಸಿ. ವಿದ್ಯಾಭ್ಯಾಸ ಮಾಡುವಾಗ ನಾನು ಜಗಳೂರಜ್ಜನ ಗುಡಿಗೆ ಹೋದರೂ ದೇವರ ಮೂರ್ತಿಯನ್ನು ನೋಡಲಿಲ್ಲ. ದಿನಂಪ್ರತಿ ಎರಡೂ ಬಾರಿ ಗುಡಿ ಹತ್ತಿರ ಕುಳಿತುಕೊಳ್ಳುತ್ತಿದ್ದೆ. ಇಲ್ಲಿನ ಲಿಂಗಾಯತರು ಇದರ ಪರಮಭಕ್ತರು. ಹೊರಕೆರೆಯ ಸಾಕಮ್ಮಜ್ಜಿ, ನಿಂಗಮ್ಮಜ್ಜಿ ಮೊದಲಾದವರು ನನಗೆ ಆಗಲೇ ಈತನ ಕಥೆಯನ್ನು ಹೇಳಿದ್ದನ್ನು ಇಲ್ಲಿ ಸ್ಮರಿಸಿಕೊಂಡಿರುವೆ. ಅವರಿಗೆ ಕೃತಜ್ಞತೆಗಳು.

# ೬. ಚಿತ್ರದುರ್ಗ ಜಿಲ್ಲೆಯ ಬುಡಕಟ್ಟು ವೀರರು (5)


## ೬.೪. ಯರಗಾಟನಾಯಕ

**ಹಿನ್ನೆಲೆ**

ಯರಗಾಟನಾಯಕ ಎಂಬ ವೀರ ಮ್ಯಾಸಬೇಡರ ಬುಡಕಟ್ಟಿನಲ್ಲಿ ಕಂಡುಬರುವನು. ಇವನಿಗೆ ಯರಗುಂಟಯ್ಯ, ಯರಗಟ್ಟವಾಡು ಎಂದೆಲ್ಲಾ ಕರೆಯುವರು. 'ಯರಗುಂಟ' ಎನ್ನುವ ಪಾಳೆಯಪಟ್ಟು ಇದ್ದು, ಆಂಧ್ರದ ಅನಂತಪುರ ಜಿಲ್ಲೆಯಲ್ಲಿ ಈ ಹೆಸರಿನ ಗ್ರಾಮವಿದೆ. ಆದರೆ ಇವನಿಗೆ ಮತ್ತು ಆ ಪಾಳೆಯ ಪಟ್ಟಿಗೆ ಸಂಬಂಧವಿತ್ತೋ ಇಲ್ಲವೊ ತಿಳಿಯದು. ಚಿತ್ರದುರ್ಗ ಮತ್ತು ಬಳ್ಳಾರಿ ಜಿಲ್ಲೆಗಳ ಈ ಸಮುದಾಯದವರು ಇವನ ಬಗೆಗೆ ಅನೇಕ ವಿಧವಾದ ಕಥೆಗಳನ್ನು ಹೇಳುತ್ತಾರೆ. ಇವನ ಸಮಕಾಲೀನರಾಗಿ ಯರಗಾಟನಾಯಕ, ಯರಗೋಡ್ಲಯ್ಯ, ಯರ್ರಪ್ಪ ಎನ್ನುವ ಹೆಸರಿನ ವೀರರು ಸಹ ಕಂಡುಬರುತ್ತಾರೆ.

ಜನನ

ಯರಗಾಟನಾಯಕನ ಜನನದ ಕಾಲಮಾನ ತಿಳಿದುಬಂದಿಲ್ಲವಾದರೂ, ಮಧ್ಯಕಾಲವೆಂದು ಊಹಿಸಬಹುದಾಗಿದೆ. ಇದಕ್ಕೆ ಮ್ಯಾಸಬೇಡರ ಸಂಸ್ಕೃತಿಯ ದಾಖಲೆಗಳು ಪುಷ್ಟಿ ನೀಡುತ್ತವೆ. ತೆಲುಗು ಜನಪದ ಸಾಹಿತ್ಯ ಇವನ ಬಗೆಗೆ ಹೆಚ್ಚಿನ ಬೆಳಕು ಚೆಲ್ಲುತ್ತದೆ. ಮ್ಯಾಸಬೇಡರ ಸಂಸ್ಕೃತಿಯ ನಿರ್ಮಾಪಕರಾದ ಶುಕ್ಲಮಲ್ಲಿನಾಯಕನ ಹೆಂಡತಿ ದಾನಸಾಲಮ್ಮನ ಸಂತತಿಗೆ ಸೇರಿದವರಾದ ತಂಗಡಲ ತಮ್ಮವ್ವನ ಮಗನೇ ಯರಗಾಟನಾಯಕ ಎನ್ನಲಾಗುತ್ತದೆ.



ಪಶುಗಳ ಮಂದೆ

**ವೃತ್ತಿ: ಪಶುಪಾಲನೆ**

ತಮ್ಮ ಪೂರ್ವಜರ ವೃತ್ತಿಯಾದ ಪಶುಪಾಲನೆಯನ್ನು ಯರಗಾಟನಾಯಕ ಕೈಗೊಂಡಿದ್ದ. ಇವನು ಬೆಳೆದು ವಯಸ್ಸಿಗೆ ಬಂದಾಗ ತಾಯಿಯಾದ ತಂಗಡಲ ತಮ್ಮವ್ವಳು ಸುಂದರವಾದ ಕನ್ಯೆಯನ್ನು ಮದುವೆಮಾಡಲು ನಿರ್ಧರಿಸಿದಳು. ಅದರಂತೆ ಪುವ್ವಲು ರಾಯವ್ವ ಎಂಬುವಳನ್ನು ಇವನಿಗೂ ಮದುವೆ ಮಾಡಿದಳು.

ಯರಗಾಟನಾಯಕನು ಕಾಲಸರಿದಂತೆ ತನ್ನ ಗೆಳೆಯನಾದ ವಡಪಲ ತಮ್ಮಯ್ಯನೊಂದಿಗೆ ಮುತ್ತಿಗಾರ ದನಕರುಗಳನ್ನು

[1] ಮೇಯಿಸುವ ಸಲುವಾಗಿ ತಪಲೇಟಿಕೆರೆಯ ಹತ್ತಿರ ಹೊಡೆದುಕೊಂಡು ಹೋಗಿ ಇಬ್ಬರೂ ಕೂಡಿ ರೊಪ್ಪಗಳನ್ನು ಕಟ್ಟಿಕೊಂಡು ನೆಲಸಿದ್ದರು. ಅವರಿಬ್ಬರು ದನಕರುಗಳನ್ನು ಮೇಯಿಸುತ್ತಾ ಅಲ್ಲಿ ಇಲ್ಲಿ ಸುತ್ತಾಡಿಕೊಂಡು ಕೆಲವು ದಿನಗಳ ತರುವಾಯ ತಮಟಕಲ್ಲು ಕಡೆಗೆ ದನಕರುಗಳನ್ನು ಮೇಯಿಸಲಿಕ್ಕೆ ಹೋದರು.[2]

**ಓಬವ್ವ**

ಆಗ ತಮಟಕಲ್ಲು ಗ್ರಾಮದಲ್ಲಿ ಓಬವ್ವ ಎಂಬ ಯುವತಿ ಅಪ್ರತಿಮ ಸುಂದರಿ ಎಂದು ಖ್ಯಾತಳಾಗಿದ್ದಳು. ಅವಳ ಸೌಂದರ್ಯಕ್ಕೆ ಮರುಳಾದ ಸುತ್ತಲಿನ ಗ್ರಾಮಗಳ ರಸಿಕರ ಮನಸ್ಸು ಕನಸುಗಳನ್ನು ಕಟ್ಟುತ್ತಿದ್ದವು. ಹಾಗೆಂದು ಅವಳನ್ನು ಮದುವೆಯಾಗುವುದಾಗಿ ಪ್ರಯತ್ನಿಸಿದ ಎಲ್ಲಾ ಪುರುಷರಿಗೂ ಅವಳೊಂದು ಕಠಿಣವಾದ ಷರತ್ತಿನ ಸವಾಲನ್ನು ಹಾಕುತ್ತಿದ್ದಳು. ಅದೆಂದರೆ ಬಾಗೇನಾಳು ಕಾಮನಾಯಕನು ೧೪ ವರ್ಷ ಕಾಲ ಸಾಕಿ ಸಲುಹಿದ ಗೊಡ್ಡು ಆಕಳಿನ (ಬಂಜೆ ಹಸು) ಹೊಟ್ಟೆಯೊಳಗಿರುವ ಮಾಂಸಖಂಡಗಳನ್ನು ಸುಟ್ಟು ಕರೆಗಳಾಗಿ (ತುಂಡು) ಮಾಡಿಕೊಂಡು ಬಂದರೆ ಆನಂತರ ತನ್ನ ಒಪ್ಪಿಗೆಯನ್ನು ತಿಳಿಸುವುದಾಗಿ ಹೇಳುತ್ತಿದ್ದೂ. ಈ ಷರತ್ತನ್ನು ಕೇಳಿದ ಯಾವ ಪುರುಷನೂ ಗೋಹತ್ಯೆಯ ಪಾಪಕ್ಕೆ ಹೆದರಿ ಇವಳ ಮೋಹದಿಂದ ದೂರವಾಗುತ್ತಿದ್ದರು. ಹೀಗಿರುವಾಗ ಬಾಗೇನಾಳು ಕಾಮನಾಯಕನೂ ತಮಟಕಲ್ಲಿನ ಓಬವ್ವನ ಸೌಂದರ್ಯಕ್ಕೆ ಮನಸೋತು ವಿವಾಹವಾಗಲು ಕೇಳಿದನು. ಮರುಳಾದ ನಾಯಕನಿಗೆ ಓಬವ್ವ ತನ್ನ ಷರತ್ತನ್ನು ಮುಂದಿಟ್ಟಳು. ಹೆಣ್ಣಿನ ವ್ಯಾಮೋಹಕ್ಕೆ ಒಳಗಾದ ಪುರುಷ ಏನಾದರೊಂದು ಸಾಹಸಮಾಡಿ ಆಕೆಯ ಬೇಡಿಕೆಯನ್ನು ಈಡೇರಿಸುತ್ತಾನೆ. ಆದರೆ ನಾಯಕ ತಾನು ಸಾಕಿದ ಬಂಜೆ (ಗೊಡ್ಡು) ಆಕಳನ್ನು ಬಲಿ ಕೊಡಲಾರನೆಂದು ಕಡಾಖಂಡಿತವಾಗಿ ನಿಶ್ಚಯಿಸಿದನು. ಈ ಮೂರು ಕಾಸಿನ ಹೆಣ್ಣಿನ ಕಾಮತೃಪ್ತಿಗೆ ಸಾಕಿದ ಆಕಳನ್ನು ಕೊಲ್ಲಲಾರನೆಂದು ಹೇಳೀದನು. ಇವಳು ತನ್ನೆಲ್ಲ ಪ್ರೇಮಿಗಳಿಂದಲೂ ಇದನ್ನೇ ಬಯಸುತ್ತಿದ್ದರಿಂದ ಮುಂದೆ ಯಾರಾದರೂ ತನ್ನ ಹಸುವನ್ನು ಮೋಸದಿಂದ ಒಡೆದುಕೊಂಡು ಹೋಗಬಹುದೆಂದು ಅದನ್ನು ಭದ್ರತೆಯಲ್ಲಿಟ್ಟನು. ಅದೇ ರೀತಿ ಗುಜಗುತ್ತಲ ಖ್ಯಾತನಿಗೆ ಸಹಾ ಇವಳು ಕಾಮನಾಯಕನ ಗೊಡ್ಡು ಹಸುವಿನ ಮಾಂಸವನ್ನು ಕೇಳಿದಾಗ ಅವನು ಅಸಹಾಯಕನಾಗಿ ಹಿಂತಿರುಗಿದನು.

ಒಂದು ದಿನ ಸೂರ್ಯ ಉದಯಿಸುತ್ತಿದ್ದ ಸಮಯ ಓಬವ್ವ ಸ್ನಾನ ಮಾಡಿ ಮನೆಯ ಮೇಲುಪ್ಪರಿಗೆಯಲ್ಲಿ ತನ್ನ ತಲೆಗೂದಲನ್ನು ಬಿಸಿಲಿಗೆ ಆರಿಸಿಕೊಳ್ಳುತ್ತಿದ್ದಳು. ಅದೇ ಸಂದರ್ಭದಲ್ಲಿ ಯರಗಾಟನಾಯಕನು ತನ್ನ ಸ್ನೇಹಿತನಾದ ವಡಪಲ ತಮ್ಮಯ್ಯನೊಂದಿಗೆ ತಮ್ಮ ದನಕರುಗಳನ್ನು ಮೇಯಿಸಲೆಂದು ಬೆಟ್ಟ – ಗುಡ್ಡ, ಅಡವಿಗಳೆಲ್ಲ ಅಲೆದು ಕೊನೆಗೆ ತಮಟಕಲ್ಲಿನ ಪರಿಸರದಲ್ಲಿ ನಡೆದ. ಊರಿನ ಮಧ್ಯೆ ಹೋಗುವಾಗಲೇ ದಾರಿಯಲ್ಲಿ ನಿಂತು ಈ ಅಪೂರ್ವ ಸುಂದರಿಯನ್ನು ವೀಕ್ಷಿಸಿದನು.

ಓಬವ್ವ ತನ್ನ ನೀಳವಾದ ಕೂದಲನ್ನು ಎಳೆಎಳೆಯಾಗಿ ವಿಂಗಡಿಸಿ ಆರಿಸಿಕೊಳ್ಳುವ ಸಂದರ್ಭದಲ್ಲಿ ಯರಗಾಟನಾಯಕನು ಎಷ್ಟೇ ತನ್ನ ಆಸೆಯನ್ನು ಒಂದು ಮಿತಿಗೆ ತರಲು ಪ್ರಯತ್ನಿಸಿದರೂ ವಿಫಲನಾದುದರ ಪರಿಣಾಮವಾಗಿ ಈ ಸುಂದರಿಯನ್ನು ಮತ್ತೆ ಮೋಹಗೊಂಡನು. ಉದ್ದವಾದ ತಲೆಗೂದಲು, ತೆಳುವಾದ – ಬಳಕುವ ದೇಹ ಕೆಂಪನೆಯ ಮೈಬಣ್ಣ ಇತ್ಯಾದಿ ಲಕ್ಷಣಗಳು ಅವಳ ಸೌಂದರ್ಯವನ್ನು ಇಮ್ಮಡಿಗೊಳಿಸಿದ್ದವು. ಚೆಲುವೆ ಮತ್ತು ಉತ್ತಮಶೀಲ ಸ್ವಭಾವದ ಓಬವ್ವಳನ್ನು ಕಂಡ ಯರಗಾಟನಾಯಕ ಸ್ಥಳದಲ್ಲಿ ವಿಚಲಿತನಾದ.

ಮುಂದಕ್ಕೆ ಕಾಲೆತ್ತಿಕ್ಕಲು ಅಶಕ್ತನಾದ. ಕೊನೆಗೆ ಜಾಗ ಬದಲಾಯಿಸಿ ಗೆಳೆಯನಾದ ವಡಪಲು ತಮ್ಮಯ್ಯನಿಗೆ ತನ್ನ ಇಚ್ಛೆಯನ್ನು ವ್ಯಕ್ತಪಡಿಸಿ ಅವಳೊಡನೆ ಮಾತನಾಡಿ ಬರಲು ಕಳುಹಿಸಿದನು. ಓಬವ್ವ ಅವನಿಗೂ ಸಹಾ ತನ್ನ ನೋಡಬಯಸಿದವರಿಗೆ ಹೇಳಿದ ಉತ್ತರವನ್ನೇ ತಿಳಿಸಿದಳು. ವಡಪಲು ತಮ್ಮಯ್ಯ ಮರಳಿ ಬಂದು ಯರಗಾಟನಾಯಕನಿಗೆ ಬಾಗೇನಾಳು[3] ಕಾಮನಾಯಕನ ಬಳಿಯಿರುವ ಗೊಡ್ಡು ಆಕಳ ಕರೆಗಳು (ತುಂಡು) ನನಗೆ ಬೇಕು, ಅಲ್ಲದೆ ಅದರ ಹೊಟ್ಟೆಯಲ್ಲಿರುವ ಮಾಂಸ ಖಂಡವನ್ನು ಸುಟ್ಟು ಕರೆಗಳನ್ನು (ಸುಟ್ಟತುಂಡು) ಮಾಡಿಕೊಂಡು ಬಂದರೆ ಅವನೊಂದಿಗೆ ಪ್ರೀತಿಯನ್ನು ಬೆಳೆಸುತ್ತೇನೆಂದು ಹೇಳಿ ಕಳುಹಿಸಿದಳೆಂದು ವಿವರಿಸಿದನು.[4]

ವಿಷಯ ತಿಳಿದ ಯರಗಾಟನಾಯಕನು ವಡಪಲು ತಮ್ಮಯ್ಯನೊಂದಿಗೆ ಹೊರಟು, ಮಡಿವಾಳರ ಮನೆಯ ಬಳಿ ಇದ್ದಂಥ ಮೈಲಿಗೆ ಬಟ್ಟೆಗಳನ್ನು ಗಂಟುಕಟ್ಟಿಕೊಂಡು, ಬಾಸುರ ಬಂಜೆ (ಗೊಡ್ಡು) ಹಸು ಇರುವ ನೆಲಮಾಳಿಗೆ ಹತ್ತಿರಬಂದನು. ನೆಲಮಾಳಿಗೆಯ ಏಳು ಬಾಗಿಲುಗಳಿಗೆ ಬೀಗ ಹಾಕಲಾಗಿತ್ತು. ಯರಗಾಟನಾಯಕನು ದೇವರ ಸ್ಮರಣೆಯಿಂದ ಬೀಗದ ಮೇಲೆ ಬಲಪ್ರಯೋಗ ಮಾಡಿದ ಕೂಡಲೇ ಒಂದರಿಂದ ಒಂದರಂತೆ ಎಲ್ಲಾ ಬೀಗಗಳು ಸಡಲಿ ಬಾಗಿಲುಗಳ ತೆರೆದವು.

ನಾಯಕನು ನೆಲಮಾಳಿಗೆಯಲ್ಲಿದ್ದ ಹಸಿವಿನ ಕೊರಳಿನ ಗಂಟೆಗೆ[5] ಬಟ್ಟೆಗಳನ್ನು ತುರುಕಿ ಗಂಟೆಯ ಶಬ್ದವಾಗದಂತೆ ಮಾಡಿ ಹಸುವನ್ನು ಹೊರಗೆ ನಡೆಸಿಕೊಂಡು ಬರುತ್ತಿದ್ದ. ಆಗ ಅದರ ಕಾಲಿನ ಗೊರಚು ಹೊಸ್ತಿಲಿಗೆ ತಾಕಿ ಅಗೋಚರವಾದ ಶಬ್ದದಂತೆ ಭಾಸವಾಯಿತು. ಈ ಶಬ್ದ ನಿಡಗಲ್ಲು ನಿಚ್ಚಮಲ್ಲಿಗರೆ[6] ಹತ್ತಿರವಿದ್ದ ಕಾಮನಾಯಕನಿಗೆ ಕೇಳಿಸಿತು. ಕಾಮನಾಯಕನು ನಿಡಗಲ್ಲಿನ ನಿಚ್ಚಮಲ್ಲಿಗರಿಗೆ ತಿಳಿದು ಅಲ್ಲಿಂದ ಗಾಳಿಯ ವೇಗದಲ್ಲಿ ಓಡಿ ಬಂದನು. ಅವನು ಬರುವುದರೊಳಗೆ ಯರಗಾಟನಾಯಕ ವಡಪಲ ತಮ್ಮಯ್ಯ ಇಬ್ಬರೂ ಸೇರಿ ಹಸುವನ್ನು ಊರಿನ ಪಕ್ಕದ ಬಂಡೆಯ ಮೇಲೆ ಕೊಯ್ದು ಹಸುವಿನಲ್ಲಿದ್ದ (ಗುಂಡಿಗೆ) ಸತುವಾದ ಮಾಂಸದ ಖಂಡಗಳನ್ನು ತೆಗೆದು ಅಚ್ಚುಕಟ್ಟಾಗಿ ಸುಟ್ಟು ಕರೆಗಳನ್ನು ಮಾಡಿಕೊಂಡು ತಮಟಕಲ್ಲುವಿನ ನಾಯಕ ಸುಂದರಿ (ನಾಗತಿ) ಓಬವ್ವನಿಗೆ ಷರತ್ತಿನಂತೆ ಕೊಟ್ಟರು.

## ವಿವಾಹ

ಈ ಯರಗಾಟನಾಯಕನ ಸಾಹಸ, ಪ್ರತಿಭೆ, ಧಿರೋಚಿತ ಹಾಗೂ ವಿರೋಚಿತವಾದ ಗುಣ ದೇಹ ಧಾರ್ಢ್ಯಗಳನ್ನು ಮನಸಾರೆ ಮೆಚ್ಚಿದ ಓಬವ್ವ ಅವನೊಂದಿಗೆ ಮದುವೆ ಮೂಲಕ ಪ್ರಣಯ ಬೆಳೆಸಿದಳು. ಅವನ ಹಸುಗಳು ತಪಲೇಟಿಕೆರೆ ಸಮೀಪ ರೊಪ್ಪದಲ್ಲಿದ್ದವು. ಜೊತೆಗೆ ಅವನ ತಾಯಿ ಮತ್ತು ಹೆಂಡತಿ ಅಲ್ಲಿಯೇ ಸ್ವಲ್ಪ ದೂರದ ಪ್ರದೇಶದಲ್ಲಿ ವಾಸವಾಗಿದ್ದರು. ತಾಯಿ, ಹೆಂಡತಿಗೆ ಪ್ರತಿನಿತ್ಯ ಹಸುಗಳ ಕಾವಲಿಗೆ ಹೋಗುತ್ತೇನೆ ಎಂದು ಸುಳ್ಳು ಹೇಳಿ ಓಬವ್ವನ ಮನೆಗೆ ಹೋಗುತ್ತಿದ್ದನು. ಇಡೀ ರಾತ್ರಿಗಳನ್ನೆಲ್ಲಾ ಓಬವ್ವನ ಮನೆಯಲ್ಲಿ ಕಳೆದು ತಾಯಿ, ಹೆಂಡತಿ ಬೆಳಿಗ್ಗೆ ಏಳುವುದರೊಳಗೆ ಬಂದು ಮನೆಗೆಲಸದಲ್ಲಿ ತೊಡಗಿ, ಹಸುಗಳ ರೊಪ್ಪಕ್ಕೆಂದು ಪುನಃ ಹೋಗುತ್ತಿದ್ದನು. ಇದೇ ರೀತಿ ಸಾಕಷ್ಟು ದಿನ ಸಾಗಿಸಿದನು. ಇಲ್ಲಿ ಸಂಪ್ರದಾಯವನ್ನು ಮುರಿದ ಕಾರಣಕ್ಕೆ ಯರಗಾಟನಾಯಕ ಸಮಾಜಕ್ಕೆ ತಲೆಬಾಗಿಸಿ ಬದುಕುವ ಸ್ಥಿತಿ ಬದಲಾಗುತ್ತದೆ.

## ಅವಸಾನ

ಯರಗಾಟನಾಯಕನ ಗುಪ್ತವಾಗಿರುವ ವೈಭವ, ಅಭ್ಯುದಯವನ್ನು ಕಂಡುಸಹಿಸದ ಓಬವ್ವನ ಪ್ರೇಮದ ಭೋಗ ಕೇಳೀ ಭಗ್ನಪ್ರೇಮಿಯಾದ ಗುಜಗುತ್ತಲ ಖ್ಯಾತಯ್ಯ ಹೊಟ್ಟೆಕಿಚ್ಚಿನಿಂದ ಸಂಕಟಪಡುತ್ತಾ ಆಗಾಗ ಹಲ್ಲು ಕಡಿಯುತ್ತಿದ್ದನು. ಒಂದು ದಿನ ಯರಗಾಟನಾಯಕ ಮತ್ತು ವಡಪಲ ತಮ್ಮಯ್ಯ ತಾವು ಭೂಚಕ್ರದ ಗೊಡಗು, ಛತ್ರಿ ಹಿಡಿದುಕೊಂಡು ಬರುತ್ತಿರುವಾಗ ಗುಜಗುತ್ತಲ ಖ್ಯಾತಯ್ಯ ತನ್ನ ಬಾನದಿಂದ ಯರಗಾಟ ನಾಯಕನ ಹೊಟ್ಟೆಗೆ ಹೊಡೆದನು. ಹೊಟ್ಟೆಯಿಂದ ಹೊರಹೋದ ಬಾಣ ಗಿರಗಿರನೆ ಬಂಡೆಯ ಮೇಲೆ ತಿರುಗುತ್ತಿತ್ತು. ಬಾಣದ ಶಬ್ಧ ಕೇಳಿಸಿಕೊಂಡ ವಡಪಲ ತಮ್ಮಯ್ಯ ನಾಯಕರೇ ಏನಿದು ಗಿರಗಿರನೆ ಶಬ್ದ ಎಂದಾಗ ಯರಗಾಟನಾಯಕನು ಏನೋ ಕಲ್ಲುಗಳ

ಶಬ್ದವಿರಬಹುದು ಮುಂದಕ್ಕೆ ಸಾಗೋಣ ನಡೆ ಎಂದನು. ಗುಜಗುತ್ತಲ ಖ್ಯಾತಯ್ಯ ಯರಗಾಟನಾಯಕನನ್ನು ಬಾಣದಿಂದ ಹೊಡೆದ ನಂತರ ತಾನು ಹುಣಸೆ ಮರದ ಪೊಟರಿನಿಂದ ಹೊರಗೆ ದಾವಿಸಿದೆ ನಾನು ಬಿಟ್ಟ ಬಾಣ ತಪ್ಪಿಲ್ಲ. ಯರಗಾಟನಾಯಕನು ಉಳಿಯುವುದಿಲ್ಲವೆಂದು ನಿಶ್ಚಯಿಸಿಕೊಂಡ ನಂತರ ತಾನು ಅತೃಪ್ತನಾಗಿ ಬದುಕಿ ಸಾರ್ಥಕವೇನೆಂದು ಮರಣವನ್ನಪ್ಪಿದ.

**ದುರಂತ ಸಾವು**

ಬಾಣದ ಏಟಿನಿಂದ ಯರಗಾಟನಾಯಕನಿಗೆ ನೋವು ಸಂಕಟಗಳು ಉಲ್ಬಣವಾದವು. ಹೊಟ್ಟೆಯನ್ನು ಎರಡು ಕೈಗಳಿಂದ ಹಿಡಿದುಕೊಂಡು ತಮಟಕಲ್ಲಿನಿಂದ ನಾನಾ ದಾರಿಗಳನ್ನು ಬದಲಿಸಿ, ನೇರವಾಗಿ ಬೆಳಗಟ್ಟದವರೆಗೆ ಪ್ರಯಾಣಿಸಿದನು. ಬೆಳಗಟ್ಟ ಸಮೀಪದವರೆಗೆ ಬಂದಿದ್ದೆ ದೊಡ್ಡ ಸಾಧನೆಯಾಗಿ, ಹಿಂದಕ್ಕೂ – ಮುಂದಕ್ಕೂ ಹೋಗಲರದೇ ಬದುಕುವ ಆಸೆಯಿಂದ ವಿಧಿಗೆ ಸೋತು ಮರಣ ಹೊಂದುವ ಹಂತದಲ್ಲಿದ್ದನು.

ಇತ್ತ ಕಡೆ ಆತ್ಮೀಯನಾದ ವಡಪಲ ತಮ್ಮಯ್ಯ ಕೈಯಲ್ಲಿದ್ದ ಭೂಚಕ್ರದ ಗೊಡಗನ್ನು ಅಲ್ಲಿಯೇ ಬಿಸಾಡಿ ತಪಲೇಟು ಕೆರೆಯ ಬಳಿ[7] ಮೂಗು ಮಾಲಿಯಲ್ಲಿದ್ದ ಯರಗಾಟನಾಯಕನ ತಾಯಿ ಮತ್ತು ಹೆಂಡತಿಗೆ ನಿಮ್ಮ ಮಗ ಬೆಳಗಟ್ಟದ ಸಮೀಪ ಮರಣಶೆಯ್ಯೆಯಲ್ಲಿರುವನು ತಾವು ಧಾವಿಸಬೇಕೆಂದು ಬೇಡಿಕೊಂಡನು. ತಕ್ಷಣ ತಾಯಿ ತಂಗಳಲು ತಮ್ಮವ್ವ, ಪತ್ನಿ ಪುವ್ವಲರಾಯವ್ವ ಕೂಡಿ ದುಃಖಿಸುತ್ತಾ, ತೀವ್ರವಾಗಿ ಕಣ್ಣೀರು ಸುರಿಸಿಕೊಂಡು, ಬೆಳಗಟ್ಟದ ಕಡೆ ನಡೆದು ಯರಗಾಟನಾಯಕನು ನಿತ್ರಾಣನಾಗಿ ಬಿದ್ದಿರುವ ಸ್ಥಳಕ್ಕೆ ಬಂದರು. ಆ ಸ್ಥಳ ಚಿತ್ರದುರ್ಗದಿಂದ ನಾಯಕನಹಟ್ಟಿಗೆ ಬರುವಾಗ ಗೋನೂರು ಮೂಲಕ ಬಂದರೆ ಸಾಸಲಹಟ್ಟಿ ಸಿಗುತ್ತದೆ. ಇಲ್ಲಿಯೇ ಯರಗಾಟನಾಯಕ ಮರಣಹೊಂದಿದ್ದನೆಂಬುದಕ್ಕೆ ಅಲ್ಲಿರುವ ಅವನ ದೇವಾಲಯವೇ ಸಾಕ್ಷಿ.

**ಹಡೆದ ತಾಯಿಗೆ ಸತ್ವಪರೀಕ್ಷೆ**

ಯರಗಾಟನಾಯಕನ ಅವಸಾನವು ಅಂತಿಮ ಘಳಿಗೆಯಲ್ಲಿ ತೂಗಾಡುತ್ತಿತ್ತು. ಬಾಯಿಬಿದ್ದು, ಸುಮ್ಮನೆ ಪಿಳಿಪಿಳಿ ಕಣ್ಣುಗಳನ್ನು ಮಾತ್ರ ಬಿಡುತ್ತಿದ್ದನು. ಕೂಡಲೆ ಯರಗಾಟನಾಯಕ ಏಳು ಹಚ್ಚಡಗಳನ್ನು (ವಸ್ತ್ರ) ಸುತ್ತಲೂ ಪರದೆ ಕಟ್ಟಿಸಿ, ತಾಯಿ ತಮ್ಮವ್ವನಿಗೆ ಪೂರ್ವದಿಕ್ಕಿನಲ್ಲಿ ನಿಲ್ಲಲು ಹೇಳೀ ಮಹಾತಾಯಿ ‘ನೀನು ನಿನ್ನ ಮಗ ಸತ್ಯವಂತರಾಗಿದ್ದರೆ ಮತ್ತು ನಿನ್ನಲ್ಲಿ ಅಸತ್ಯ ಅಡಗಿದ್ದರೆ ನಿನ್ನ ಮಗನ ಬಾಯಲ್ಲಿ ನಿನ್ನ ಎದೆಯ ಹಾಲನ್ನು ಬೀಳುವಂತೆ ಕರೆಯಬೇಕು. ನೀನು ಕರೆದ ಎದೆಹಾಲು ಏಳು ಹಚ್ಚಡಗಳ ಮಡಿಕೆಯಲ್ಲಿ ದಾಟಿ ನಿನ್ನ ಮಗನ ಬಾಯಲ್ಲಿ ಬೀಳಬೇಕೆಂದು ತಿಳಿಸಿದರು. ತಬ್ಬಿಬ್ಬಾದ ತಮ್ಮವ್ವ ಏನು ತೋಚದೆ ತನ್ನ ಇಷ್ಟ ದೈವವನ್ನು ಪ್ರಾಥಿಸುತ್ತಾ ‘ಸ್ವಾಮಿ ನಾನು ಸತ್ಯವತಿಯಾಗಿದ್ದು, ನನ್ನ ಮಗನು ಸತ್ಯವಂತನಾಗಿದ್ದರೆ, ನನ್ನ ಎದೆಯಿಂದ ಕರೆಯುವ ಹಾಲು ಮಗನ ಬಾಯಲ್ಲಿ ಬಿದ್ದು ಅವನ ಸ್ವರ್ಗ ಸೇರಲಿ’ ಎಂದು ದೇವರನ್ನು ಪ್ರಾರ್ಥಿಸಿ ಗುರುಹಿರಿಯರಿಗೆ ನಮಸ್ಕರಿಸಿ ಹಾಲು ಕರೆದಳು. ಎದೆಹಾಲು ಕರೆದುದು ಏಳು ಹಚ್ಚಡಗಳ ಮಡಿಕೆಯನ್ನು ತೂರಿಕೊಂಡು ಹೋಗಿ ಅಮೃತದಂತೆ ಯರಗಾಟನಾಯಕನ ಬಾಯೊಳಕ್ಕೆ ಬಿತ್ತು. ಆಗ ಅವನ ಆತ್ಮ ದೇಹವನ್ನು ಬಿಟ್ಟು ದೈವವನ್ನು ಸೇರಿಕೊಂಡಿತು. ಇದರಿಂದ ಯರಗಾಟನಾಯಕ ದೈವತ್ವಕ್ಕೇರಿದ. ಮಹಾಪುರುಷನಾದನೆಂದು ನಂಬಲಾಗಿದೆ.

**ಶವ ಹೊತ್ತು ಪ್ರಯಾಣ ಬೆಳೆಸಿದ್ದು**

ನಂತರ ದೊರೆಗಳೂ, ದಳವಾಯಿಗಳು ಮ್ಯಾಸಮಂಡಲದ ಎಲ್ಲರೂ ಕೂಡಿ ಏಳು ಜನ ಪ್ರಮುಖರಾದ ಮಳೇಲಾರು ಬೆಡಗಿನವರನ್ನು ಕರೆದರು. ನಾಲ್ಕು ಜನರು ಬಂದು ಯರಗಾಟನಾಯಕನ ಶವವನ್ನು ಒತ್ತುಕೊಂಡರು. ಅವರಲ್ಲಿಬ್ಬರು ಗುದ್ದಲಿ, ಚಲಿಕೆ, ತೆಗೆದುಕೊಂಡರು. ಒಬ್ಬನು ಬೆಂಕಿ ಪಂಜನ್ನು ಕೈಯಲ್ಲಿಟ್ಟುಕೊಂಡು ಮುಂದೆ ಸಾಗಿದನು. ಮೊದಲನೆಯ ಸಾಲಿನಲ್ಲಿ ಮ್ಯಾಸಮಂಡಲ, ಅದರ ಹಿಂದೆ ವಡಪಲು

ತಮ್ಮಯ್ಯ ಹೀಗೆ ಮುಂದುವರೆದಾಗ ಯರಗಾಟನಾಯಕನ ಬಳಿಯಲ್ಲಿದ್ದ ಬಿರುದಾವಳಿಗಳಾದ ಭೂಚಕ್ರದ ಗೊಡಗು ಲಿಂಗಗಳು ಬೆಳಗಟ್ಟದ ಹತ್ತಿರ ಬಿಟ್ಟು ಬಂದಿದ್ದ ನೆನಪಾಯಿತು. ಮತ್ತೆ ಹೆಣವನ್ನು ಇಳಿಸಿಕೊಂಡು ಕೆಲವರು ಹಿಂದಕ್ಕೆ ಹೋಗಿ ಮರೆತು ಬಿಟ್ಟು ಬಂದಿದ್ದ ಭೂಚಕ್ರದ ಗೊಡಗು, ಲಿಂಗಗಳನ್ನು ತೆಗೆದುಕೊಂಡುಬಂದರು. ಸಾಕಷ್ಟು ಸಮಯ ಆಗಲೇ ಆಗಿತ್ತು. ಯರಗಾಟನಾಯಕನ ಶವವನ್ನು ಹೊತ್ತು ಸ್ವಲ್ಪ ದೂರ ಬಂದ ಮೇಲೆ ಅವನು ಮುದ್ರೆ ಹಾಕಿಕೊಳ್ಳುತ್ತಿದ್ದ ಮತ್ತು ಹಾಕುವ ಕೀಲುಗಳು ಬಿದ್ದು ಹೋಗಿದ್ದವು. ಮೊದಲಿನಂತೆ ಪುನಃ ಇವುಗಳನ್ನು ಹುಡುಕಿಕೊಂಡು ಬರುವ ವೇಳೆಗೆ ಸಾಕಷ್ಟು ಹೊತ್ತು ಕಳೆದು ದಿನಗಳೇ ಉರುಳಿದವು. ದಾರಿಯ ಮಧ್ಯದಲ್ಲಿ ಸಮಯದೊಂದಿಗೆ ಸಮರವಾಡುತ್ತಾ ಹೆಣವು ಕೊಳೆತು ವಾಸನೆ ಬರುತ್ತಾ ಇರಲಾಗಿ ಹೆಣದ ಶರೀರವೆಲ್ಲ ಹೊಲಸಾಗಿತ್ತು. ಅಲ್ಲಿಂದ ಹೆಣವನ್ನು ಹೊತ್ತುಕೊಂಡು ಬೇರೆ ಸ್ಥಳಕ್ಕೆ ಬಂದರು. ಮುಸ್ಥಲಗುಮ್ಮಿ ಬಳಿ ಚಿನ್ನಹಗರಿನದಿ ದಂಡೆಯ ಮೇಲೆ ಶವವನ್ನು ಇಳಿಸಿದರು. 'ಆ ಸ್ಥಳವನ್ನು ಇಂದಿಗೂ ದಿಂಪಗುಡ್ಡೆ' (ಇಳಿಸಿದ ಗುಡ್ಡೆ) ಎಂದು ಕರೆಯುತ್ತಾರೆ.[8]

**ವಲಸೆ ನಿರ್ಮಾಣ**

ನಂತರ ಶವವನ್ನು ವಲಸೆ ಮೀಸಲಾರು ದೊಡ್ಡಿ ಎಂಬ ಸ್ಥಳಕ್ಕೆ ತಂದರು. ಆ ಸಮಯಕ್ಕೆ ಹೆಣ ಅಲ್ಲಿಗೆ ಹೊಲಸಾಗಿ ಹೋಗಿತ್ತು. ಆ ಹೆಣವನ್ನು ಚಳ್ಳಕೆರೆ ತಾಲೂಕು ನೇರ್ಲಗುಂಟೆ ಹತ್ತಿರವಿರುವ ಹೊಲಸೆ>ವಲಸೆ> ವಲಸೆ (ತೆಲುಗು) ಗೆ ತಂದು ಸಮಾಧಿ ಮಾಡಿದರೆಂದು ಹೇಳುತ್ತಾರೆ.[9] ಆದರೆ ಇತ್ತೀಚೆಗೆ ಕೆಲವು ಶೋಧನೆಗಳ ಹಿನ್ನೆಲೆಯಲ್ಲಿ ಬಳ್ಳಾರಿ ಜಿಲ್ಲೆಯ, ಕೂಡ್ಲಿಗಿ ತಾಲೂಕಿನ ಹುರುಳಿಹಾಳು ಸಮೀಪವಿರುವ 'ವಲಸೆ' ಎಂಬ ಗ್ರಾಮವೇ ಯರಗಾಟನಾಯಕನು ಸಮಾಧಿಯಾಗಿರುವ ಸ್ಥಳವೆಂದು ತಿಳಿದುಬಂದಿದೆ. ಇದಕ್ಕೆ ಆಧಾರ ಅಲ್ಲಿರುವ ಪ್ರಾಚೀನವಾದ ಏಳುಸುತ್ತಿನ ಕಿರದಾದ ಭಗ್ನಗೊಂಡ ಕೋಟೆ, ಮಹಾದ್ವಾರ ಹಾಗೂ ಯರಗಾಟನಾಯಕನು ಸಮಾಧಿಯಾದ ಬೃಹತ್ ದೇವಾಲಯವನ್ನು ತೋರಿಸುತ್ತಾರೆ. ಆದ್ದರಿಂದ ಯರಗಾಟನಾಯಕನ ಮೂಲಸ್ಥಳ ಇದೇ ಇರಬಹುದು.[10]

ಯರಗಾಟನಾಯಕನು ಸಮಾಧಿ ಹೊಂದಿದ ಮೇಲೆ ಒಂಟಿಕೋಡು ಬೆಳ್ಳಿ ಹಸುವಿನ ಕೆಚ್ಚಲಿನ ಹಾಲನ್ನು ಸಮಾಧಿಗೆ ಅಮೃತವೆಂದು ಅರ್ಪಿಸಿ ಧೂಪ ದೀಪಾದಿಗಳಿಂದ ನಾನಾ ವಿಧದ ಪೂಜೆ ಮಾಡಿದರಲ್ಲದೆ, ತುಪ್ಪ ದೀಪಗಳನ್ನು ಬೆಳಗಿಸಿ ಎಲ್ಲರೂ ಸಮಾಧಿಗೆ ಸಾಷ್ಟಾಂಗ ದಿವ್ಯ ನಮಸ್ಕಾರಗಳನ್ನು ಸಲ್ಲಿಸಿ ಮ್ಯಾಸಮಂಡಲದ ಸದಸ್ಯರು ಮತ್ತು ತಂಗಡಲ ತಮ್ಮವ್ವ, ಪುವ್ವಲ ರಾಯವ್ವರೂಗಳು ಸೇರಿ ಪ್ರಯಾಣ ಬೆಳೆಸಿದರು.

**ನಂಬಿಕೆ, ಆಚರಣೆ**

ಆದಿಕಾಲದಿಂದಲೂ ಬೇಟೆಯನ್ನು ಜೀವನದ ಉಸಿರು ಎಂದು ನಂಬಿದ್ದ ಬೇಡರು, ಪಶುಪಾಲನೆಯಲ್ಲಿಯೂ, ಅಪಾರವಾದ ಸಾಧನೆ ತೋರಿರುವುದು ಗಮನೀಯ ಸಂಗತಿ. ಪಶುಪಾಲನೆ ಎಂದ ಮೇಲೆ ಮೇವು ನೀರಿಗಾಗಿ ಒಂದು ಕಡೆಯಿಂದ ಮತ್ತೊಂದು ಕಡೆಗೆ ಹೋಗುವ ಪ್ರಸಂಗ ಒದಗಿ ಬರುತ್ತದೆ. ಪಶುಪಾಲನಾ ಹಂತದಲ್ಲಿ ಒಂದು ಹೆಣ್ಣಿನಿಂದ ಮರಣಹೊಂದಿದ ದುರಂತ ಯರಗಾಟನಾಯಕನ ಮಟ್ಟಿಗೆ ತೀರಾ ಅನಿವಾರ್ಯವಲ್ಲ. ಈ ರೀತಿ ಮ್ಯಾಸಬೇಡರ ಅನೇಕ ಸಾಂಸ್ಕೃತಿಕ ವೀರರು ಹೆಣ್ಣಿಗಾಗಿ ತಮ್ಮ ತನುಮನ ಧನಗಳನ್ನು ಅರ್ಪಿಸಿರುವುದು ಗಮನಾರ್ಹ.

**ಗುಡಿ – ದೇವಾಲಯ**

ಯರಗಾಟನಾಯಕ ಬಾಳಿಬದುಕಿದ ಸ್ಥಳ ಇಂದು ಆಧ್ಯಾತ್ಮಿಕ ನೆಲೆಯಾಗಿದೆ. ಅವನು ಓಡಾಡಿದ ಜಾಗಗಳಲ್ಲಿ ದೇವಾಲಯ – ಗುಡಿಗಳನ್ನು ನಿರ್ಮಿಸಿದ್ದಾರೆ. ಚಿತ್ರದುರ್ಗಕ್ಕೆ ಸಮೀಪವಿರುವ ಸಾಸಲಹಟ್ಟಿಯಲ್ಲಿ ಬಹು ಸುಂದರವಾದ ಯರಗಾಟನಾಯಕನ ದೇವಾಲಯವಿದೆ. ಎಲ್ಲಾ

ಸಮುದಾಯದ ಭಕ್ತರು ಇವನಿಗೆ ನಡೆದುಕೊಳ್ಳುತ್ತಾರೆ. ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲೂಕಿನಲ್ಲಿರುವ ವಲಸೆಯ ಯರಗಾಟನಾಯಕನ ದೇವಸ್ಥಾನವು ಎಲ್ಲಾ ದೇವಾಲಯಗಳಿಗಿಂತ ಪುರಾತನವಾದುದು. ಅದೇ ರೀತಿ ಇತರ ಮ್ಯಾಸಬೇಡರ ಹಟ್ಟಿಗಳಲ್ಲಿ ಇವನ ಭಕ್ತರು ನಿರ್ಮಿಸಿಕೊಂಡಿದ್ದಾರೆ.[11]

**ಅನುಯಾಯಿಗಳು**

ಈ ಯರಗಾಟನಾಯಕನು ತಮ್ಮ ಮನೆದೇವರೆಂದು ಅವನ ಅನುಯಾಯಿಗಳು ಕಟ್ಟಿಕೊಂಡ ಪಂಥವಿದೆ. ಅವರನ್ನು ಯರಗಟ್ಟವಾರು ಎನ್ನುತ್ತಾರೆ. ಚಿತ್ರದುರ್ಗದ ಮದಕರಿ ವಿದ್ಯಾಸಂಸ್ಥೆಯ ಸ್ಥಾಪಕರು, ನಾಯಕ ಜನಾಂಗದ ಮುಖಂಡರಾದ ಡಿ. ಬೋರಪ್ಪನವರು ಮತ್ತು ಬಳ್ಳಾರಿ ಜಿಲ್ಲೆ ಹೊಸಪೇಟೆ ತಾಲೂಕಿನ ಕಮಲಾಪುರ ಪಟ್ಟಣದ ಮೀಸಲಾರು ಕುಟುಂಬದ ಜೋಗಯ್ಯ ಅಣ್ಣ – ತಮ್ಮಂದಿರುಗಳು ಇವನ ಅನುಯಾಯಿಗಳು. ತಮ್ಮ ಮನೆದೇವರೆಂದು ಇಂದಿಗೂ ಪೂಜಿಸುತ್ತಾರೆ.[12]

**ಇಂದಿನ ಸಂಪ್ರದಾಯ**

ಯರಗಟವಾರು, ಮೀಸಲಾರು ಎಂಬ ಬೆಡಗಿನವರು ಇಂದು ಪ್ರಧಾನವಾಗಿ ಇವನನ್ನು ಆರಾಧಿಸುತ್ತಾರೆ. ಪ್ರತಿವರ್ಷ ದೀಪಾವಳಿ, ಗುಗ್ಗರಿಹಬ್ಬ ಇತರ ಸಣ್ಣಪುಟ್ಟ ಹಬ್ಬಗಳನ್ನು ಅಮವಾಸೆ, ಹುಣ್ಣಿಮೆಗಳಂದು ಈತನ ಹಬ್ಬಗಳು ಜರುಗುತ್ತವೆ.

---

[1] ಮುತ್ತಿಗಾರರ ದನಕರುಗಳು ಶ್ರೀಶೈಲ ಮಲ್ಲಿಕಾರ್ಜುನನಿಂದ ಬಂದಂಥ ದೇವರೆತ್ತುಗಳು.

[2] ತಮಟಕಲ್ಲು ಚಿತ್ರದುರ್ಗ ಸಮೀಪವಿರುವ ಚಾರಿತ್ರಿಕ ಮಹತ್ವ ಪಡೆದ ಗ್ರಾಮ ಕ್ರಿ.ಶ. ೫೦೦ರ ಶಾಸನ ಇಲ್ಲಿದೆ.

[3] ಬಾಗೇನಾಳು ಕಾಮನಾಯಕ ಸಣ್ಣ ಪಾಳೆಯಗಾರ

[4] ಸತುವಾದ ಮಾಂಸದ ತುಂಡುಗಳನ್ನು ಸುಟ್ಟು ಕಡ್ಡಿಗೆ ಏರಿಸುವುದನ್ನು ಕರೆ ಎನ್ನುತ್ತಾರೆ.

[5] ತೆಲುಗಿನಲ್ಲಿ ಪುಟ್ಟಡು ಗುಂಡ ಅಗಸರ ಬಟ್ಟೆ ಮೂಟೆಯಷ್ಟು ಗಾತ್ರ ಎಂದಾಗುತ್ತದೆ.

[6] ನಿಡಗಲ್ಲು ಪಾಳೆಯಗಾರರು, ಪಾವಗಡ ತಾಲೂಕು, ತುಮಕೂರು ಜಿಲ್ಲೆ.

[7] ತಾಳಿಕೆರೆ ಎಂಬ ಗ್ರಾಮ ಆಂಧ್ರದ ರಾಯದುರ್ಗ ತಾಲೂಕಿನಲ್ಲಿದೆ. ತಪಲೇಟು ಕೆರೆ ಎಂಬುದು ಚಿತ್ರದುರ್ಗ ಜಿಲ್ಲೆಯಲ್ಲಿರುವ ಒಂದು ಬೆಚರಾಕ್ ಗ್ರಾಮವಿರಬೇಕು.

[8] ವಿದ್ಯಾಭೂಷಣ ರಾಜಶೇಖರಪ್ಪ, ವಕೀಲರು, ೪೮ ನಾಯಕರು, ಮುಸ್ಥಲಗುಮ್ಮಿ ಇವರು ಇದರ ಬಗ್ಗೆ ತಿಳಿಸುತ್ತಾ: ಮುಷ್ಠಲಗುಮ್ಮಿಯಲ್ಲಿ ಪ್ರಾಚೀನವಾದ ಕೋಟೆಯಿದ್ದು, ಯರಗಾಟನಾಯಕನ ದಿಂಪಗುಡ್ಡೆ ಇದೆ. ಜನಪದ ಕಥೆಗಳು ಈ ಬಗ್ಗೆ ಬೆಳಕು ಚೆಲ್ಲುತ್ತವೆ.

[9] ಡಿ. ಬೋರಪ್ಪ, ಕಾಮನ ಬಾವಿ ಬಡಾವಣೆ, ಚಿತ್ರದುರ್ಗ, ೭೦ ನಾಯಕರು ಈ ಬಗ್ಗೆ ಕಥೆಯನ್ನು ಹೇಳುತ್ತಾರೆ.

[10] ಆಂಧ್ರಪ್ರದೇಶದ ಕಡಪಾಜಿಲ್ಲೆ ಕಮಲಾಪುರ ತಾಲೂಕಿನ ಯರಗುಂಟಲ ಎಂಬ ಗ್ರಾಮ ಬೃಹತ್‌ಶಿಲಾ ಸಂಸ್ಕೃತಿ ನೆಲೆ. ಯರಗಾಟನ ಮೂಲವನ್ನು ಈ ಸ್ಥಳದ ಹಿನ್ನೆಲೆಯಲ್ಲಿ ಪರಿಶೀಲಿಸಬಹುದು.

[11] ಯರಗಟ್ಟಿನಾಯಕನು ಕೋರೇಲು ಮಲ್ಲನಾಯ್ಕನಿಗೆ ದೊಡ್ಡಪ್ಪನಾಗಬೇಕು (ಎರ್ರಿವಾಡು) ಎಂದು ಮ್ಯಾಸಬೇಡರ ಹಿರಿಯರು ಮೊಳಕಾಲ್ಮುರು ಪ್ರದೇಶದಲ್ಲಿ ತಿಳಿಸುತ್ತಾರೆ.

[12] ಎಸ್.ಬಿ.ತಿಪ್ಪನಾಯಕ, ನಾಯಕ ಜನಾಂಗದ ಇತಿಹಾಸ ಎಂಬ ಹಸ್ತಪ್ರತಿಯಲ್ಲಿ ಅಭಿಪ್ರಾಯ ವ್ಯಕ್ತಪಡಿಸಿರುತ್ತಾರೆ.

# ೬. ಚಿತ್ರದುರ್ಗ ಜಿಲ್ಲೆಯ ಬುಡಕಟ್ಟು ವೀರರು (6)

**೬.೫ಕೊಡಗಲುಬೊಮ್ಮಯ್ಯ (ಕೊಳಗಲ)**

**ಹಿನ್ನೆಲೆ**

ಮ್ಯಾಸಬೇಡರ ಸಂಸ್ಕೃತಿ ನಿರ್ಮಾಪಕ ಮತ್ತು ಬುಡಕಟ್ಟು ವೀರರ ಪೈಕಿ ಕೊಡಗಲುಬೊಮ್ಮನೆಂಬ ಮಹಾಶಯನು ಪ್ರಮುಖನಾಗಿರುವವನು. ಆರಂಭದಲ್ಲಿ ವೀರನಾಗಿ, ಸಾಂಸ್ಕೃತಿಕ ಮತ್ತು ಧಾರ್ಮಿಕ ಕ್ಷೇತ್ರದಲ್ಲಿ ಆರಾಧನೆಗೊಳ್ಳುವ ದೇವರಾಗಿರುವುದು ವಿಶೇಷ. ಇಂದಿನ ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮುರು ತಾಲೂಕಿನ ಮುತ್ತಿಗಾರಹಳ್ಳಿ ಅರಣ್ಯದ ಊಟವಂಕ ಮತ್ತು ವಡಕ್ಕಟ್ಟ (ರಾವಲುಕುಂಟೆ) ಇವನ ವಾಸಸ್ಥಳಗಳಾಗಿವೆ. ಈ ಸುತ್ತಮುತ್ತಲಿನ ಪ್ರದೇಶವೆಲ್ಲ ಇವನ ಆಳ್ವಿಕೆಗೊಳಪಟ್ಟಿತ್ತು.

ಕೊಡಗಲುಬೊಮ್ಮನಾಯಕನ ಜನನದ ಕಾಲಮಾನ ಖಚಿತವಾಗಿ ಸಿಗುವುದಿಲ್ಲ. ಕ್ರಿ.ಶ. ೬ ಮತ್ತು ೭ ನೇ ಶತಮಾನವೆಂದು ಗುರುತಿಸಿದರೂ ವಿಜಯನಗರ ಅಥವಾ ಅನಂತರದ ಕಾಲಮಾನಕ್ಕೆ ಇವನು ಸೇರುತ್ತಾನೆ. ಶಾಲಿವಾಹನ ಶಕೆ ೧೩೦೩ನೇ ಕೀಲಕನಾಮ ಸಂವತ್ಸರ ಮಾಘ ಶುದ್ಧ ಎಂದೆಲ್ಲಾ ದಾಖಲಿಸಲಾಗಿದೆ. ಇಲ್ಲಿ ‘ಕೊಡಗು’ ಎಂಬುದು ಮನೆತನದ ಹೆಸರು. ಬ್ರಹ್ಮನ ಭಕ್ತ, ಅನುಯಾಯಿಗಳಿಗೆ ಜನಪದರು ಬೊಮ್ಮೆ ಎಂಬ ನಾಮಾಂಕಿತದಿಂದ ಕರೆಯುವರು. ಈ ಬೊಮ್ಮನು ನಾಯಕ ಬುಟ್ಟುಗಲೋರ ಬೆಡಗಿಗೆ ಸೇರಿದ ಗುಪ್ತಬೊಮ್ಮತಿರಾಜು ಸಂತತಿಯವನು. ಗೌರಸಮುದ್ರದ ಮಾರಮ್ಮನಿಗೆ ಸಹೋದರನಾಗಬೇಕು ಈ ಬೊಮ್ಮ.

**ಸಾಧನೆ**

ಇವನು ನರಕಾಸುರನ ಕೋಟೆಯಲ್ಲಿರುವ ಹನ್ನೆರಡು ಪೆಟ್ಟಿಗೆ ದೇವರುಗಳು, ಒಂಬತ್ತು ಜನ ಅಜ್ಜನೋರನ್ನು ಬಿಡುಗಡೆ ಮಾಡತುತ್ತೇನೆಂದು ವೀಳ್ಯ ಪಡೆದ ಸಾಹಸವೀರಶೂರನೆಂದು ಖ್ಯಾತನಾಗಿರುವನು. ಈ ಬಗೆಯ ಪಂಥವನ್ನು ಕಟ್ಟಿಕೊಂಡು ಜಯಶಾಲಿಯಾದ ಬೇಡರು ತುಂಬಾ ವಿರಳ. ಬೊಮ್ಮನು ಮಾತ್ರ ವಿಶಿಷ್ಟವಾಗಿ ಕಂಡುಬರುವುದು ಅವನ ಸ್ಥಾನ – ಮಾನದ ಮೂಲಕ ಎಂಬುದು ನಿಜ.

**ದೇವಮ್ಮ**

ಈ ಕೊಡಗಲು ಬೊಮ್ಮಯ್ಯ ಒಳ್ಳೆಯ ಮೇಧಾವಿಯೂ, ಶೂರನೂ, ಅಪ್ರತಿಮ ಬಿಲ್ಲುಗಾರನೂ ಆಗಿದ್ದ. ಇವನಿಗೆ ಏಕೈಕ ಸಹೋದರಿ ದೇವಮ್ಮ ಎಂಬ ಸುಂದರಿ ಇದ್ದಳು. ತನ್ನ ತಂಗಿ ಎಂದರೆ ಇವನಿಗೆ ಅಪಾರ ಪ್ರೀತಿ; ಪಂಚಪ್ರಾಣ. ತನ್ನ ಪ್ರಾಣದ ಹಂಗುತೊರೆದು ಎಲ್ಲೇಮೀರಿ ತನ್ನ ತಂಗಿಯನ್ನು ಪೋಷಿಸುತ್ತಿದ್ದನು. ದೇವಮ್ಮ ಅಪೂರ್ವ ಸುಂದರಿಯು, ನಿಯಮಪಾಲಕಳು ಮತ್ತು ದೈವತ್ವವನ್ನು ಹೊಂದಿದ್ದಳು. ಅಂದರೆ

ದೈವಸಂಭೂತಳೆಂದು ವಾಕ್‌ಶುದ್ಧಿ ಇರುವಳು. ಒಳ್ಳೆಯ ಪವಾಡ ಭೂಷಿತಳಾಗಿ ತನ್ನ ಅಣ್ಣನಿಗೆ ಅನೇಕ ವಿಧದ ಸಂಕಷ್ಟಗಳಲ್ಲಿ ಪಾಲುದಾರಳಾಗಿ ಸಹಕರಿಸುತ್ತಿದ್ದಳು.

**ವೀಳ್ಯೆ ಹಿಡಿಯುವುದು**

ಮೂರುನೂರು ಸಾವಿರಮ್ಯಾಸ ಮಂಡಳಿ ಜನರಿದ್ದರೂ ಲಕ್ಷಿಸದೆ, ನರಕಾಸುರನು ಇವರ ೧೨ ಪೆಟ್ಟಿಗೆ ದೇವರು ಮತ್ತು ಒಂಬತ್ತು ಅಜ್ಜನೋರನ್ನು ಒಳಗೊಂಡು ಅಪಹರಿಸಿಕೊಂಡು ಹೋಗಿ ನರಕದಕೋಟೆ ನಿರ್ಮಿಸಿರುತ್ತಾನೆ. ಈ ನರಕಸುರ ಯಾರು ಎಲ್ಲಿಯವನೆಂಬ ಸ್ಪಷ್ಟ ಚಿತ್ರಣವಿಲ್ಲ. ಆನೆಗುಂದಿ ದೊರೆಗಳನ್ನು ನರಪತಿಗಳೆಂದು, ಅವರ ರಾಜ್ಯವನ್ನು ನರಪತಿ ಸಂಸ್ಥಾನವೆಂದು ಕರೆಯುತ್ತಿದ್ದರು. ಈ ಹಿನ್ನೆಲೆಯಲ್ಲಿ, ಆನೆಗುಂದಿಯ ಅರಸನೊಬ್ಬ ಈ ಕೃತ್ಯವೆಸಗಿರಬಹುದಾಗಿದೆ.

ಸಹೋದರಿಯ ಪ್ರೋತ್ಸಾಹದಿಂದ ಕೊಡಗುಬೊಮ್ಮಯ್ಯ ನರಕಾಸುರನ ನರಕದ ಕೋಟೆಯನ್ನು ಭೇದಿಸುವ ಸಾಮರ್ಥ್ಯದಿಂದ ಮುನ್ನೂರು ಸಾವಿರ ಮ್ಯಾಸ ಮಂಡಳಿಯಲ್ಲಿ ಒಬ್ಬನಾಗಿ ವೀಳ್ಯ ಹಿಡಿಯುವನು. ಈ ವೀಳ್ಯ ಹಿಡಿದ ಮರುದಿನ ನರಕದಕೋಟೆ ಭೇದಿಸಬೇಕಾಗಿತ್ತು. ತನ್ನ ಪ್ರೀತಿಯ ತಂಗಿ ದೇವಮ್ಮನೊಂದಿಗೆ ನರಕದಕೋಟೆಯನ್ನು ಭೇದಿಸುವ ಬಗ್ಗೆ ಚಿಂತನೆ ಮಾಡಿ ಒಂಬತ್ತು ಅಜ್ಜನೋರನ್ನು ನರಕಾಸುರನ ಸೆರೆಯಿಂದ ಮುಕ್ತಗೊಳಿಸಬೇಕೆಂದು ಸಿದ್ಧನಾದ.

ಯರಮಂಚಿನಾಯಕ, ದಳವಾಯಿ ಗಗ್ಗರಿದಾಸ ಇಬ್ಬರೂ ಪವಾಡಪುರುಷರಾಗಿದ್ದರೂ ಸಹಾ ನರಕದಕೋಟೆ ಭೇದಿಸುವಲ್ಲಿ ಹೆದರಿದ್ದರು. ಇವರು ದೇವರಿಗೆ ಮತ್ತು ಅಜ್ಜಂದಿರಿಗಾಗಿ ಚಿಂತಿಸುತ್ತಿದ್ದರು. ಸಾವಿರದ ಮ್ಯಾಸಮಂಡಳಿಯವರು ನರಕದಕೋಟೆ ಒಡೆಯಲು ನಾಳೆ ಸನ್ನದ್ಧನಾಗಬೇಕು ಯರಮಂಚಿನಾಯಕ, ಗಗ್ಗರಿದಾಸರು ಸೇರಿ ಬೊಮ್ಮನಿಗೆ ತಿಳಿಸಿದರು. ಜೊತೆಗೆ ಸಹೋದರಿಯಾದ ದೇವಮ್ಮ ಅಣ್ಣನಿಗೆ ಇದು ಒಳ್ಳೆಯ ಕಾರ್ಯ, ಇದನ್ನು ನಾವು ಸಾಧಿಸಿದರೆ ಇಡೀ ನಮ್ಮ ಮ್ಯಾಸಮಂಡಲದಲ್ಲಿ ಸೂರ್ಯಚಂದ್ರರಿರುವವರೆಗೆ ನಿನ್ನ ಹೆಸರು ಅಜಾರಾಮರವಾಗಿ ಮೆರೆಯುತ್ತದೆ. ಅಲ್ಲದೆ, ಬುಟ್ಟುಗಲೋರ ಬೆಡಗಿಗೂ ಸಹ ಕೀರ್ತಿಬರುತ್ತದೆ. ಇದೊಂದು ಅವಿಸ್ಮರಣೀಯವಾದ ಸಾಧನೆ, ತಪ್ಪದೆ ಜಯಗಳಿಸಬೇಕೆಂದು ಸಮಾಲೋಚಿಸಿದಳು.

**ಕೊಡಗಲುಬೊಮ್ಮನ ಬೇಟೆ**

ಕೊಡಗಲುಬೊಮ್ಮನು ತನ್ನ ತಂಗಿಗೆ ನಾನು ಕಾಡಿಗೆ (ಬೇಟೆ ಪ್ರಾಣಿಗಾಗಿ) ಹೋಗಿಬರುತ್ತೇನೆ. ಅಲ್ಲಿಯವರೆಗೆ ನೀನು ಇಲ್ಲಿಯೇ ಇರು ಎಂದು ಹೇಳಿ, ಬಿಲ್ಲುಬಾಣ ಹಿಡಿದು ಕಾಡಿಗೆ ನಡೆದನು. ಇತ್ತ ಅಣ್ಣ ಹೋದ ನಂತರ ತಂಗಿಯಾದ ದೇವಮ್ಮ ಮನೆಯಲ್ಲಿ ನಿಷ್ಪ್ರಯೋಜನವಾಗಿ ಕಾಲಕಳೆಯುವುದಕ್ಕಿಂತ ಸಾಯಂಕಾಲದ ಊಟಕ್ಕೆ ಆಲೆ ಸೊಪ್ಪಾದರೂ ತರೋಣವೆಂದು ಮನೆಯಿಂದ ಕಾಡಿಗೆ ತೆರಳಿದರು.

ಹೀಗೆ ಬೇಡರ ಸ್ತ್ರೀ ಪುರುಷರಿಬ್ಬರೂ ಆದಿಕಾಲದಿಂದಲೂ ಕೂಡಿ ಆಹಾರಕ್ಕಾಗಿ ಬೇಟೆಯಾಡುವುದು ಬೆಳೆದು ಬಂದಿದೆ. ಕಾಡಿನಲ್ಲಿ ವಾಸಮಾಡಿದಾಗ ಅಲ್ಲಿ ದೊರೆಯುವ ಮರದ ಚಿಗುರೆಲೆಗಳನ್ನು, ತಮ್ಮ ವಸ್ತ್ರಗಳನ್ನಾಗಿ ಮಾಡಿಕೊಂಡು, ಸೊಂಟದಿಂದ ಮೊಣಕಾಲಿನವರೆಗೆ ಮಾತ್ರ ಸುತ್ತಿಕೊಳ್ಳುತ್ತಿದ್ದರು. ಪುರುಷರು ಬೇಟೆಯಾಡಿ ತಂದ ಪ್ರಾಣಿಗಳ ಚರ್ಮವನ್ನು ತಮ್ಮ ದೇಹಕ್ಕೆ ಉಡುಪಾಗಿ ಧರಿಸುತ್ತಿದ್ದರು. ಸೊಂಟಕ್ಕೆ ಚಲ್ಯಾಣ, ತಲೆಗೆ ಚರ್ಮದ ಪಟ್ಟಿಗಳನ್ನು ಸುತ್ತಿಕೊಳ್ಳುತ್ತಿದ್ದರು. ಪ್ರಾಣಿಗಳ ಚರ್ಮ, ಮರದ ತೊಗಟೆಯಿಂದ ಸ್ತ್ರೀ – ಪುರುಷರು ತಮ್ಮ ಮಾನ ಮುಚ್ಚಿಕೊಳ್ಳುತ್ತಿದ್ದರೆಂದು ಬೇಡರ ಹಳೆಯ ತಲೆಮಾರಿನವರ ಅಭಿಪ್ರಾಯ. ಕಾಡಿನಲ್ಲಿ ಸಿಗುವ ಗುಲಗಂಜಿಗಳಿಂದ ಮಾಲೆ ತಯಾರಿಸಿಕೊಂಡು ಕೊರಳಿಗೆ ಹಾಕಿಕೊಳ್ಳುತ್ತಿದ್ದರು. ಪಕ್ಷಿಗಳ ಚಂದದ ಗರಿಗಳನ್ನು ತಲೆಯಲ್ಲಿ ಮುಡಿದುಕೊಳ್ಳುತ್ತಿದ್ದರು. ಕಾಲಿಗೆ ಪಾದರಕ್ಷೆಗಳನ್ನು ಸಹಾ ತೊಡುತ್ತಿರಲಿಲ್ಲ. ಸ್ತ್ರೀಯರು ಬೇಟೆಯಲ್ಲಿ ನೈಪುಣ್ಯತೆ ಹೊಂದಿದ್ದರು. ಈ ರೀತಿ ಯುಗಾಂತರಗಳಿಂದಲೂ ಬೇಡರ

ಪದ್ಧತಿಗಳು ವಿಕಾಸ ಹೊಂದುತ್ತಾ ಬಂದಿವೆ. ಇಂಥದೇ ರೂಢಿಗತ ಉಡುಗೆ – ತೊಡುಗೆಗಳನ್ನು ದೇವಮ್ಮ ಧರಿಸುತ್ತಿದ್ದಳು. ಆದರೂ ಕೊಡಗುಬೊಮ್ಮನು ಏಕೈಕ ತಂಗಿಯಾದ ದೇವಮ್ಮನಿಗೆ ಪ್ರೀತಿಯದ್ಯೋತಕವಾಗಿ ಕರಿಯಕಾಗಿನ ಸೀರೆ, ಬಿಳಿಯ ಕುಪ್ಪಸವನ್ನು ತಂದುಕೊಟ್ಟಿದ್ದನು. ಆಗಾಗ ಇವಳು ಅದನ್ನೇ ಉಡುತ್ತಿದ್ದಳು.

**ಬೇಟೆಗೆ ಬಲಿಯಾದ ದೇವಮ್ಮ**

ಕೊಡಗಲುಬೊಮ್ಮನು ಬೇಟೆಗೆ ಹೋದ ನಂತರ ದೇವಮ್ಮನು ತನ್ನ ಪ್ರೀತಿಯ ಅಣ್ಣನ ಉಡುಗೊರೆಗಳಾದ ಕರಿಯ ಕಾಗಿನ ಸೀರೆಯನ್ನುಟ್ಟು ಬಿಳಿಯ ಕುಪ್ಪುಸ ತೊಟ್ಟು. ಅಂದಗಾತಿಯಾಗಿ ಅಡವಿಗೆ ಸೊಪ್ಪು ತರಲು ಹೊರಟಳು. ಯೌವನಕ್ಕೆ ಕಾಲಿಟ್ಟ ದೇವಮ್ಮ ಸುಂದರವಾಗಿ ಕಾಣುತ್ತಿದ್ದಳು. ಇವಳು ಕರಿಯ ಕಾಗಿನಸೀರೆ, ಬಿಳಿಯ ಕುಪ್ಪಸತೊಟ್ಟು ಸುರಸುಂದರಿಯಂತೆ ಮನೆಯಿಂದ ನೀರಿಗೆ ಹೊರಟರೆ ಅಣ್ಣ ಕೊಡಗುಬೊಮ್ಮನು ದೂರದಿಂದ ತನ್ನ ತಂಗಿಯ ಸೌಂದರ್ಯವನ್ನುಕಂಡು ಹಿಗ್ಗಿ ಆನಂದಪಡುತ್ತಿದ್ದನು. ದೇವಮ್ಮ ಅಷ್ಟೇ ಗುಣವಂತೆ, ಶೀಲವಂತೆ, ವಾಕ್‌ಶುದ್ಧಿಯುಳ್ಳವಳಾಗಿದ್ದಳು. ಜ್ಯೋತಿಯಂತೆ ಮನೆಗೆ ದಾರಿ ದೀಪವಾಗಿದ್ದ ದೇವಮ್ಮ ಅಪ್ಪಟ ಬುಡಕಟ್ಟಿನ ಮಹಿಳೆ ಲಕ್ಷಣಗಳನ್ನು ಹೊಂದಿದ್ದಳು. ಮೊದಲೇ ತಿಳಿಸಿದಂತೆ ಸೊಪ್ಪಿಗಾಗಿ ಅಡವಿಗೆ ಬಂದ ದೇವಮ್ಮ ಸೀಗೆಪಳೆಯಲ್ಲಿ ಸೊಪ್ಪು ಬಿಡಿಸುತ್ತಿದ್ದಳು. ಬೇಟೆಗೆಂದು ಕಾಡಿಗೆ ಹೋದ ಕೊಡಗಲುಬೊಮ್ಮನು ಈ ಕಡೆ ಬಂದು ಸೀಗೆ ಪೊದೆಯಲ್ಲಿ ಸಪ್ಪಳವಾದುದನ್ನು ಗಮನಿಸಿದ. ಕಪ್ಪುಬಣ್ಣ ಎದ್ದು ಕಂಡಿತು. ಬೇಟೆಯ ವ್ಯಸನಕ್ಕೀಡಾದ ಬೊಮ್ಮನು ಪೊದೆಯಲ್ಲಿರುವುದು ಕಾಡುಪ್ರಾಣಿಯೆಂದು ತಿಳಿದು ಬಿಲ್ಲಿಗೆ ಬಾಣ ಏರಿಸಿ ಗುರಿಯಿಟ್ಟು ಶಬ್ದಬರುವ ಕಡೆ ಬಿಟ್ಟ. ಬಿಟ್ಟ ಬಾಣ ಹುಸಿಯಾಗಲಿಲ್ಲ. ನೇರವಾಗಿ ಪೊದೆಯಲ್ಲಿದ್ದ ತನ್ನ ತಂಗಿ ದೇವಮ್ಮನ ಎದೆಗೆ ಬಾಣ ತಾಗಿದಾಕ್ಷಣ ಅಣ್ಣಾ! ಎಂದು ಕಿರುಚಿಕೊಂಡಳು. ಅಣ್ಣಾ! ಎಂಬ ಶಬ್ದ ಕೇಳುತ್ತಲೆ ಕೊಡಗಲುಬೊಮ್ಮನು ಹೌಹಾರಿ ರಭಸದಿಂದ ಓಡಿಬಂದನು. ಪೊದೆಯಲ್ಲಿ ವಿಲಿವಿಲಿ ಒದ್ದಾಡುತ್ತಾ ಅಣ್ಣಾ! ಅಣ್ಣಾ!! ಎಂದು ಕನವರಿಸುತ್ತಿದ್ದ ತಂಗಿಯನ್ನು ಕಂಡು ಅವಳು ಸೆರಗಿನಿಂದ ಮುಖಮುಚ್ಚಿಕೊಂಡಿದ್ದರಿಂದ ಗುರುತು ಸಿಗಲಿಲ್ಲ. ಕೊಡಗಲುಬೊಮ್ಮನು ಅವಳ ಎದೆಯಲ್ಲಿ ನಾಟಿದ್ದ ಬಾಣವನ್ನು ಕಿತ್ತು, ಬಾಚಿ ತಬ್ಬಿಕೊಂಡು ಪೊದೆಯಿಂದ ಹೊರತಂದನು. ಬಾಣನಾಟಿದ ಜಾಗದಲ್ಲಿ ರಕ್ತ ಸುರಿಯುತ್ತಿತ್ತು. ನೋವಿನ ಭಾದೆಯಿಂದ ದೇವಮ್ಮ ತತ್ತರಿಸಿ ಹೋಗಿದ್ದಳು. ಅಪರಿಚಿತ ಹೆಣ್ಣನ್ನು ಕೊಂದು ಸ್ತ್ರೀಹತ್ಯೆಯಿಂದ ಪಾಪಕ್ಕೆ ಗುರಿಯಾದನೆಂದು ತಿಳಿದು ತೀವ್ರವಾಗಿ ಪಶ್ಚಾತ್ತಾಪ ಪಟ್ಟನು. ಮುಖದ ಮೇಲಿನ ಸೆರಗು ತೆಗದು ನೋಡಿದಾಗ 'ಬೇಟೆಯ ಪ್ರಾಣಿ' ಮತ್ಯಾರೂ ಅಲ್ಲ, ತನ್ನ ತಂಗಿ ದೇವಮ್ಮನೇ ಆಗಿದ್ದಳು.

ದೇವತೆಗೆ ಸಮಾನಳಾದ ತನ್ನ ತಂಗಿ ದೇವಮ್ಮನ ಸಾವಿಗೆ ಕಾರಣನಾದೆನೆಂದು ಮರುಗುತ್ತಾ ಮೂರ್ಛೆ ಹೋದ. ಎಚ್ಚರವಾದ ತಕ್ಷಣ ತಂಗಿಯನ್ನು ತನ್ನ ತೊಡೆಯ ಮೇಲೆ ಮಲಗಿಸಿಕೊಂಡು ತಾಯಿ ದೇವಮ್ಮ ನಾನು ಎಂಥಾ ಪಾಪದ ಕೆಲಸ ಮಾಡಿಬಿಟ್ಟೆ. ಬೇಟೆಯ ವ್ಯಸನದಲ್ಲಿ ನಾನು ಯಾವುದೋ ಕಾಡುಪ್ರಾಣಿಯೆಂದು ತಿಳಿದು ನಿನ್ನನ್ನು ಕೊಂದುಬಿಟ್ಟೆನಲ್ಲಾ ಎಂದು ದಾರುಣವಾಗಿ ಕಿರುಚಾಡ-ತೊಡಗಿದನು. ನಾನೊಬ್ಬನೆ ಈ ಲೋಕದಲ್ಲಿದ್ದು, ಪ್ರಯೋಜನವೇನು, ನಾನು ನಿನ್ನೊಡನೆ ಬರುವೆನೆಂದು ಆತ್ಮಹತ್ಯೆ ಮಾಡಿಕೊಳ್ಳಲು ಹಾತೊರೆಯುತ್ತಾನೆ. ಆದರೆ ದೇವಮ್ಮ ದಿವ್ಯಸ್ಮರಣೆಯಿಂದ ಕೊನೆಯುಸಿರೆಳೆಯುವ ಮುನ್ನ ತನ್ನ ಹಣೆಬರಹ ಬಗ್ಗೆ ತಿಳಿಸುತ್ತಾ 'ವೀಳ್ಯಾವಾಗ್ದಾನ ಮರೆಯಬೇಡ', ಕೊಟ್ಟ ಮಾತು ಕಳೆದುಕೊಳ್ಳಬೇಡ, ದೇವರುಗಳನ್ನು, ಅಜ್ಜನವರನ್ನು ಕಾಪಾಡಿ ರಕ್ಷಿಸು ಎಂದು ಹೇಳಿ ಅಣ್ಣನ ತೊಡೆಯ ಮೇಲೆ ಪ್ರಾಣಬಿಟ್ಟಿದ್ದನ್ನು ನೆನಪಿಸಿಕೊಂಡು ಧೈರ್ಯ ತಂದುಕೊಂಡ.

**ಸಮಾಧಿ ಮತ್ತು ದಿವ್ಯಸಂದೇಶ**

ಅತೀವ ದುಃಖದ ಮನಸ್ಸಿನಿಂದ ಕೊಡಗಲುಬೊಮ್ಮನು ತಂಗಿಯ ಶವವನ್ನು ಊಟಕುಂಟೆ ಸಮೀಪದಲ್ಲಿ ಸಮಾಧಿ ಮಾಡಿದನು. ಈ ಊಟಕುಂಟೆ ಎಂಬ ಸ್ಥಳ ಚಿತ್ರದುರ್ಗ ಜಿಲ್ಲೆ, ಮೊಳಕಾಲ್ಮುರು ತಾಲೂಕಿನ ಮುತ್ತಿಗಾರಹಳ್ಳಿ ಅರಣ್ಯದ ನಡುಭಾಗದಲ್ಲಿದೆ. ಇದಕ್ಕೆ ಕಮರದ ಕಾವಲು ಎಂದು ಕರೆಯುತ್ತಾರೆ. ಬೊಮ್ಮನು ತನ್ನ ತಂಗಿ ಹೇಳಿದ ಮಾತುಗಳನ್ನು ಆಗಾಗ ನೆನಪಿಸಿಕೊಳ್ಳುತ್ತಿದ್ದ. ಸದಾ ಅದೇ ಚಿಂತೆಯಲ್ಲಿ ತೊಡಗಿದಾಗ ತೂಕಡಿಕೆ ಬಂದಂತಾಗಿ ಕಣ್ಣು ಮುಚ್ಚಿದನು. ಬೆಳಗಿನ ಜಾವದ ಸಮಯ ಅಣ್ಣನ ಕನಸಿನಲ್ಲಿ ಕಾಣಿಸಿಕೊಂಡು 'ಅಣ್ಣ ಅಂದು

ನೀನು ಮ್ಯಾಸಮಂಡಲಕ್ಕೆ ಮಾತುಕೊಟ್ಟು ವೀಳ್ಯೆ ಹಿಡಿದಿದ್ದೀಯಾ, ನಾಳೆ ನರಕಾಸುರನ ನರಕದ ಕೋಟೆಯನ್ನು ಒಡೆದು ದೇವರ ಪೆಟ್ಟಿಗೆಗಳನ್ನು, ಒಂಬತ್ತು ಅಜ್ಜನೋರನ್ನು ಹೊರಗೆ ತರಬೇಕೆಂದು ಹೇಳಿದಳು. ನಾನು ಶಾರೀರಿಕವಾಗಿ ಇಲ್ಲದಿರಬಹುದು. ಆದರೆ ಆತ್ಮಧಾರಿಯಾಗಿ ನಿನ್ನ ಸಕಲ ಕಾರ್ಯಗಳಲ್ಲಿ ನೆರವಾಗುವೆ. ಒಟ್ಟಾರೆ ನರಕಾಸುರನ ಕೋಟೆಯನ್ನು ನಾಳೆ ಒಡೆಯಬೇಕು. ಬಂಧಿತರನ್ನು ಮುಕ್ತಗೊಳಿಸಬೇಕೆಂದಳು.'

ಮುಂದುವರೆದು ಅಣ್ಣಾ ನಿರುತ್ಸಾಹಿಯಾಗದೆ, ಕಾರ್ಯಮಗ್ನನಾಗಿರು. ನಾಳೆ ಮಧ್ಯಾಹ್ನದ ವೇಳೆಯಲ್ಲಿ ನೀನು ನರಕದ ಕೋಟೆಯ ಬಳಿ ನನಗೆ ಕಾದಿರು. ಮಟ ಮಟ ಮಧ್ಯಾಹ್ನದಲ್ಲಿ ನಾನು ಕೆಂದೂಳಿನ ಸ್ವರೂಪದಲ್ಲಿ ಕಾಣಿಸಿಕೊಂಡು ಭಯಂಕರ ಬಿರುಗಾಳಿಯಾಗಿ ವರಾಹ ರೂಪದಲ್ಲಿ ಬಂದು ನರಕದ ಕೋಟೆಯನ್ನು ಹೊಡೆದು ಕೊಟ್ಟ ಮಾತನ್ನು ಉಳಿಸಿಕೊಳ್ಳುವೆನೆಂದು ಹೇಳಿದಾಗ ಕೊಡಗಲುಬೊಮ್ಮನು ಕನಸಿನಲ್ಲಿ ಕಂಡ ದೃಶ್ಯವನ್ನು ಜ್ಞಾಪಿಸಿಕೊಳ್ಳುತ್ತಾ ನಿತ್ಯ ಕರ್ಮಗಳನ್ನು ಮುಗಿಸಿ ತಂಗಿ ಹೇಳಿದ ಸ್ಥಳಕ್ಕೆ ಹೋದನು.

**ನರಕದ ಕೋಟೆ ಧ್ವಂಸ**

ಮಟಮಟ ಮಧ್ಯಾಹ್ನವಾಗುತ್ತ ಬರಲಾಗಿ ಧೂಳೆದ್ದು, ಕ್ರಮೇಣವಾಗಿ ಸುಂಟರಗಾಳಿಯಾಗಿ ಕೆಂದೂಳು ಮಿಶ್ರಗೊಂಡು ಬೋರ್ಗರೆಯುತ್ತಾ ಬಂದಾಗ, ಆ ಗಾಳಿಯ ರಭಸಕ್ಕೆ ಯಾವುದರ ತಡೆ ಇರಲಿಲ್ಲ. ನರಕದ ಕೋಟೆಯ ಶಿಖರದಲ್ಲಿದ್ದ ನರಕಾಸುರನು ಆ ಸುಂಟರಗಾಳಿ ರಭಸಕ್ಕೆ ತತ್ತರಿಸಿ ಹೆದರಿ ಅಲ್ಲಿಂದ ಪಲಾಯನಗೈದನು.

ಭಯಂಕರವಾದ ಕೆಂಧೂಳಿ ಮಿಶ್ರಿತ ಬಿರುಗಾಳಿಯಲ್ಲಿ ಕಪ್ಪನೆಯ ಬಣ್ಣದ ಹಂದಿ ಕಾಣಿಸಿಕೊಂಡು ನರಕಸುರನ ಕೋಟೆಗೆ ಲಗ್ಗೆಯಿಟ್ಟು ಅದನ್ನು ನಿರ್ನಾಮಮಾಡಿತು. ಸಮಯ ಕಾಯುತ್ತಿದ್ದ ಕೊಡಗುಬೊಮ್ಮನು ಒಳಗಡೆ ಹೋಗಿ ಹನ್ನೆರಡು ಪೆಟ್ಟಿಗೆ ದೇವರೊಂದಿಗೆ ಒಂಬತ್ತು ಅಜ್ಜನೋರನ್ನು ಕರೆದುಕೊಂಡು ಬಂದು ಯರಮಂಚಿನಾಯಕನಿಗೆ ತನ್ನ ಷರತ್ತಿನಂತೆ ಒಪ್ಪಿಸಿದನು. ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯ ರಾಯದುರ್ಗ ತಾಲೂಕಿನಲ್ಲಿರುವ 'ಗಲಗಲ್ಲು' ದೇವಮ್ಮನ ಆವಾಸಗ್ರಾಮ. ಅಲ್ಲಿ ದೇವಮ್ಮನ ಭವ್ಯ ದೇವಾಲಯವಿದೆ. ನರಕಸುರನದು ಆನೆಗುಂದಿ (ಅಥವಾ ಮೊಳಕಾಲ್ಮುರುವಿನ ನುಂಕಮಲೆ ಪ್ರದೇಶ) ಇರಬೇಕು.

ಹನ್ನೆರಡು ಪೆಟ್ಟಿಗೆ ದೇವರುಗಳನ್ನು, ಒಂಬತ್ತು ಜನ ಅಜ್ಜನೋರನ್ನು ದೊರೆಗೆ ಒಪ್ಪಿಸಿದ ತರುವಾಯ ಕೊಡಗಲುಬೊಮ್ಮನು ದೊರೆಯನ್ನು ಕುರಿತು ದೊರೆಗಳೇ ನೀವು ಡಂಗುರ ಹೊಡಿಸಿದಂತೆ, ನಾನು ಕೆಲಸವನ್ನು ಮುಗಿಸಿರುತ್ತೇನೆ. ನೀವು ನನಗೆ ಸಲ್ಲಬೇಕಾಗಿರುವ ಮಾಮೂಲುಗಳನ್ನು ಕೊಡಿಸಿಕೊಡಬೇಕೆಂದು ಕೇಳಿದನು. ಇತ್ತ ಯರಮಂಚಿನಾಯಕ ೧೨ ಪೆಟ್ಟಿಗೆ ದೇವರನ್ನು, ೯ ಅಜ್ಜಿನೋರಿಗೆ ಸಾಂತ್ವನ ಹೇಳಿ ನದಿ ತೀರದ (ಚಿನ್ನಹಗರಿ ಅಥವಾ ವೇದಾವತಿ) ಬಳಿ ಅವುಗಳಿಗೆ ಗಂಗಾಸ್ನಾನ ಮಾಡಿಸಿ ಎಲ್ಲಾ ಪೂಜೆ, ಪುನಸ್ಕಾರಗಳನ್ನು ಮಾಡಿ ಮುಗಿಸಿದರು.



ಕೊಡಗುಬೊಮ್ಮನ ಕೋಟೆ, ಮುಷ್ಟಲಗುಮ್ಮಿ

**ಬೊಮ್ಮನ ದುರಾಡಳಿತ (ಬರ್ಬರ)**

ಸವಾಲಿನಲ್ಲಿ ಜಯಸಿದ ಕೊಡಗಲುಬೊಮ್ಮನಿಗೆ ಹಿಂದೆ ಡಂಗೂರ ಬಡಿಸಿದಂತೆ ಇಂದಿನಿಂದ ಮೊಗ್ಗಲ ತೆರಿಗೆ, ಬೆಣ್ಣೆಮುದ್ದೆಗಳು, ಮೊದಲು ಹುಟ್ಟಿದ ಗಂಡುಕರುಗಳು, ಟಗರುಗಳು, ಹೋತುಗಳು ಮುಂತಾದವುಗಳನ್ನು ಪ್ರತಿಯೊಬ್ಬರೂ ಕೊಡಬೇಕೆಂದು ಮತ್ತೆ ತಾಕಿತು ಮಾಡಿದ. ಅಲ್ಲದೆ, ಋತುಮತಿಯರಾದ ಊರಿನ ಹೆಣ್ಣುಗಳನ್ನು, ಹೊಸದಾಗಿ ಮದುವೆಯಾಗಿ ಊರಿಗೆ ಬಂದ ಮಧುವಣಗಿತ್ತಿಯರು ಮೊದಲ ರಾತ್ರಿಗಳನ್ನು ಕೊಡಗಲುಬೊಮ್ಮನೊಡನೆ ಕಳೆಯಬೇಕಾಗಿತ್ತು. (ಇದನ್ನು ನಿಷೇಕಪ್ರಸ್ಥವೆಂತಾಗಲಿ, ನಿಯೋಗಪದ್ಧತಿಯಂತಾಗಲಿ ಕರೆಯಲಾಗದು). ಹೆಣ್ಣು ಒತ್ತಾಯಪೂರ್ವಕವಾಗಿ ಅನುಭೋಗಿಸುವ ಬರ್ಬರ ಕೃತ್ಯದಂತಿದೆ. ಈ ವ್ಯವಸ್ಥೆ ಮುಂದುವರೆದ ಜನಾಂಗದಲ್ಲಿದ್ದು, ಬೇಡರ ದೊರೆ ಇಂಥ ವ್ಯವಸ್ಥೆಗೊಳಪಟ್ಟಿದ್ದು ದುರಂತವೆನ್ನಬಹುದು.

[1]

**ಆಳ್ವಿಕೆಯ ವಿರುದ್ಧ ಅಪಸ್ವರ**

ಡಂಗೂರದ ನಿಯಮದಂತೆ ಬೊಮ್ಮನಿಗೆ ಎಲ್ಲಾ ರೀತಿಯ ಸವಲತ್ತುಗಳು ಕೆಲವು ದಿನಗಳು ಮಾತ್ರ ದೊರೆತವು. ಕ್ರಮೇಣವಾಗಿ ಉತ್ಕೃಷ್ಟತೆ ಎಲ್ಲಾ ಕಾಲದಲ್ಲೂ ಇರಲಿಕ್ಕಿಲ್ಲ. ಬರುಬರುತ್ತಾ ಜನ ಬೇಸತ್ತರಲ್ಲದೆ, ಮನೆಗಳಲ್ಲಿ ಬೆಣ್ಣೆ – ತುಪ್ಪ ತಿನ್ನುವಂತಿಲ್ಲ. ಹೋರಿ, ಟಗರು, ಹೋತುಗಳನ್ನು ಮಾರಾಟ ಮಾಡುವಂತಿಲ್ಲ. ಪ್ರತಿಯೊಂದಕ್ಕೂ ದೊರೆಯ ಅಪ್ಪಣೆ ಬೇಕಾಗಿತ್ತು. ಜನರು ಇವನಿಂದ ತತ್ತರಿಸಿ, ಬವಣೆ – ಶೋಷಣೆಯಿಂದ ವಿಮುಕ್ತರಾಗಲು ಹಾತೊರೆದರು.

**ಬೇಸತ್ತ ಪ್ರಜೆಗಳ ಪಯಣ**

ಮ್ಯಾಸಬೇಡರ ಸಮುದಾಯದ ನಾಯಕ ಮತ್ತು ದೊರೆ ಯರಮಂಚಿನಾಯಕರಲ್ಲಿ ತಮ್ಮದುಃಖವನ್ನು ವಿವರಿಸಿದರು. ಕೊಡಗಲು ಬೊಮ್ಮನಿಗೆ ಇನ್ನು ಮುಂದೆ ಮಾಮೂಲಿ ತೆರಿಗೆಯನ್ನು ಕೊಡುವುದಿಲ್ಲ. ಹಲವು ವರ್ಷಗಳಿಂದ ಕೊಟ್ಟು ಅವನತಿ ಹಾದಿಯಲ್ಲಿದ್ದೇವೆ. ದಯಮಾಡಿ ಏನು ತಿಳಿದುಕೊಳ್ಳಬೇಡಿರಿ ಎಂದು ನಿರ್ಧಾಕ್ಷಿಣ್ಯವಾಗಿ ಹೇಳಿದರು. ಇದನ್ನರಿತ ಯಮಂಚಿನಾಯಕ, ಗಗ್ಗರಿದಾಸ ಮ್ಯಾಸಮಂಡಲದ ಪ್ರಜೆಗಳ ಕಷ್ಟ ನೋಡಿ ಮರುಕುಗೊಂಡರು. ಹೌದು ನಾವು ತಪ್ಪು ಮಾಡಿದ್ದೇವೆ. ಬೊಮ್ಮನಿಗೆ ತೆರಿಗೆ ಕೊಡುವಾಗ ನಿರ್ದಿಷ್ಟ ವರ್ಷಗಳನ್ನು ತಿಳಿಸಬೇಕಿತ್ತು. ಸುಮಾರು ವರ್ಷಗಳಿಂದ ಕೊಡುತ್ತಾ ಬಂದಿರುವ ನಾವುಗಳು ಏಳಿಗೆ ಹೊಂದಲೂ ಆಗಲಿಲ್ಲ. ಆದ್ದರಿಂದ ಅವನ ಸಂಗಬಿಟ್ಟು ಪಯಣಿಸಬೇಕೆಂದು ನಿಶ್ಚಯಿಸಿದರು. ಅದರಂತೆ ಒಂದು ರಾತ್ರಿ ಮ್ಯಾಸಮಂಡಳಿಯ ಕಾಪುಕಂಪಳದೊಂದಿಗೆ ಯರಮಂಚಿನಾಯಕ, ಗಗ್ಗರಿದಾಸ ಸೇರಿ ಸಿದ್ದಿಹಳ್ಳಿ ವಾಸಸ್ಥಳ ಬಿಟ್ಟು ರೇತಲಕುಂಟೆ (ರಾವಲುಕುಂಟೆ) ಗಡಿಪ್ರದೇಶಕ್ಕೆ ಹೋದರು.

ಮ್ಯಾಸಮಂಡಳಿಯ ಜನಸಮುದಾಯ ಆಕಳು ಇತರ ಪರಿಕರಗಳೊಂದಿಗೆ ಕಾಪುಕಂಪಳವು ರೇವಲುಕುಂಟೆ ಹತ್ತಿರ ಬೊಮ್ಮದೇವರಿಗೆ ಅಂಬುವಾಸಿಗಳನ್ನು ಕೊಯ್ದು ಎದುರು ನೋಮುಗಳನ್ನು ಪೂರೈಸಿಕೊಂಡು ಪೂಜೆಮಾಡಿ, ಧಾನಕಾರ್ಯ ಮುಗಿಸಿ ತಾವು ಹೊರಡುವ ಪ್ರಯಾಣಕ್ಕೆ ದೇವರ ಆಶೀರ್ವಾದವನ್ನು ಬೇಡಿ ಪಯಣಿಸಿದರು. ಜೊತೆಗೆ ಕೊಡಗುಬೊಮ್ಮನ ಹಾವಳಿ ತಪ್ಪಬೇಕೆಂದು ದೇವರನ್ನು ಪ್ರಾರ್ಥಿಸಿ ಮುಂದೆ ಕೈಲಾಸಕೊಂಡ (ಮೊಳಕಾಲ್ಮುರು ಸಮೀಪ) ಎಂಬಲ್ಲಿಗೆ ತಳವೂರಲು ಹೋದರು. ಅವರು ಕೈಲಾಸಕೊಂಡದಲ್ಲಿ ಗುಂಪು ಗುಂಪುಗಳಾಗಿ ರೊಪ್ಪಗಳನ್ನು ಹಾಕಿ ತಮ್ಮ ವಾಸಕ್ಕೆ ಹುಲ್ಲು ಜೋಪಡಿಗಳನ್ನು ನಿರ್ಮಿಸಿಕೊಂಡು ವಾಸಮಾಡುತ್ತಾ ಗುಂಪು ಗುಂಪಾಗಿ ಕಟ್ಟಿಕೊಂಡಿದ್ದ ಪಾಳೆಯಗಳಿಗೆ ರೇಪುಪಲ್ಲಿ (ನಾಳೆಯಹಳ್ಳಿ), ಮಾಪುಪಲ್ಲಿ (ರಾತ್ರಿಹಳ್ಳೀ), ಉನ್ನಮುದ್ದಲುಪೆಲ್ಲಿ, (ಬೆಣ್ಣೆಮುದ್ದೆಗಳಹಳ್ಳಿ) ಎಂಬ ಹೆಸರುಗಳನ್ನಿಟ್ಟುಕೊಂಡು ಮೊಳಕಾಲ್ಮುರು ಪಟ್ಟಣದ ಆಗ್ನೇಯ ದಿಕ್ಕಿಗೆ ಜೀವನ ಮಾಡುತ್ತಿದ್ದರು.

ಇಲ್ಲಿರುವ ಕೈಲಾಸಕೊಂಡ ಮ್ಯಾಸಬೇಡರಿಗೆ ಪವಿತ್ರಸ್ಥಳ. ಇದು ಮೊಳಕಾಲ್ಮುರುವಿನ ಪೂರ್ವಕ್ಕೆ ಮತ್ತು ಗಾಳಿಮಾರಮ್ಮನ ಗುಡಿಯ ದಕ್ಷಿಣಕ್ಕೆ ಇದೆ. ಇದರಂತೆ ನುಂಕುಮಲೆ ಪರ್ವತವು ಪ್ರಸಿದ್ಧವಾಗಿದೆ. ಈ ಬೇಡನಾಯಕನ ಹಬ್ಬ – ಜಾತ್ರೆಗಳು ಜರುಗುವಾಗ ಎಲ್ಲಾ ಪೂಜಾಕಾರ್ಯಗಳು, ಆಚರಣೆಗಳಾದ ಸಿಡಿ, ಓಕುಳಿ ಇತ್ಯಾದಿಗಳನ್ನು ಮಾಡುವವರು ಇವನಿಗೆ ಸಂಬಂಧಿಸಿದ ಬೇಡರು.

**ರಾಜ್ಯ ವಿಸ್ತಾರ**

ಕೊಡಗುಬೊಮ್ಮನ ಆಡಳಿತ ಪ್ರದೇಶತಾಲೂಕಿನ ಮುಸ್ಟಲಗುಮ್ಮಿಯವರೆಗೆ ಪಶ್ಚಿಮದ ಗಡಿಯಾಗಿತ್ತು. ಪೂರ್ವಕ್ಕೆ ರಾಯದುರ್ಗ ಪ್ರದೇಶ ಒಳಗೊಂಡಿತ್ತು. ಉತ್ತರಕ್ಕೆ ರಾಂಪುರ, ಗುಡೆಕೋಟೆಯಾದರೆ, ದಕ್ಷಿಣಕ್ಕೆ ತಳುಕು, ನನ್ನಿವಾಳ ನಾಯ್ಕನಹಟ್ಟಿಯವರಿಗೆ ವಿಸ್ತಾರವಾಗಿತ್ತು. ಚಿನ್ನಹಗರಿನದಿ ಪ್ರದೇಶವು ಅವನಿಗೆ ಕೇಂದ್ರಸ್ಥಾನವಾಗಿತ್ತು. ಮೊಳಕಾಲ್ಮುರು ತಾಲೂಕು ಮುತ್ತಿಗಾರಹಳ್ಳಿ ಅರಣ್ಯದ ನಡುಭಾಗದಲ್ಲಿ ಇವನ ವಾಸಸ್ಥಳವಿತ್ತು. ಅದಕ್ಕೆ ಊಟಕುಂಟೆ, ವಡಕ್ಕಟ್ಟೆ ಎನ್ನುತ್ತಾರೆ. ಅಲ್ಲಿ ಕೊಡಗಲುಬೊಮ್ಮನಕೋಟೆ, ಅರಮನೆ, ಗುಹೆಗಳು, ಆಹಾರತಯಾರಿಕಾ ಘಟಕ, ಕಳ್ಳದನಗಳನ್ನು ತರುಬುವ ಬಂಡೆಮುಂತಾದ ಕುರುಹುಗಳು ಕಂಡುಬರುತ್ತವೆ.

ಕೊಡುಗಲುಬೊಮ್ಮನ ಬರ್ಬರ ಆಳ್ವಿಕೆಗೆ ತತ್ತರಿಸಿ ಅಜ್ಞಾತವಾಸದಲ್ಲಿದ್ದ ಯಮಂಚಿನಾಯಕ, ಗಗ್ಗರಿದಾಸರು ಸೇರಿ ಯಾರಗುಂಟಿ (ಉರವಕೊಂಡ – ತಾ ಅನಂತಪುರ ಜಿಲ್ಲೆ) ಎಂಬಲ್ಲಿ ತಂಗಿದರು. ಅಲ್ಲಿಗೂ ಎಡಬಿಡದೆ ಇವನು ಸತತವಾಗಿ ದಾಳಿ ಮಾಡಿದನು.

**ತೆರಿಗೆ ಕೊಡುವುದು**

ಏನೆಲ್ಲಾ ವಿಫಲ ಪ್ರಯತ್ನಗಳು ನಡೆಸಿದರೂ ಬೊಮ್ಮನ ದುರಾಡಳಿತದ ಕಾಟದಿಂದ ಯರಮಂಚಿನಾಯಕ, ಗಗ್ಗರಿದಾಸರು ಮುಕ್ತರಾಗಲಿಲ್ಲ. ಕೊಡಗುಬೊಮ್ಮನಿಗೆ ಹಿಂದಿನಿಂದ ಕೊಡಬೇಕಾಗಿದ್ದ ಕಾಣಿಕೆಯನ್ನು ಸಲ್ಲಿಸಬೇಕಾಯಿತು. ಅಲ್ಲಿಂದ ಇವನಿಗೆ ಮುಚ್ಚಲಗುಮ್ಮಿ (ಥ) ಹತ್ತಿರಕ್ಕೆ ಕಳ್ಳತನದಿಂದ (ಮುಚ್ಚುತನದಿಂದ (ಯಾರಿಗೂ ಗೊತ್ತಾಗದಂತೆ ಕಾಣಿಕೆಗಳನ್ನು ಒಪ್ಪಿಸಿದರು. ಅಂದಿನಿಂದ ಅದಕ್ಕೆ 'ಮುಚ್ಚಲಗುಮ್ಮಿ' ಎಂದು ಕರೆದರು (ಚಳ್ಳಕೆರೆ ತಾ). ಈ ಗ್ರಾಮದಲ್ಲಿ ಬೊಮ್ಮ ನಿರ್ಮಿಸಿದ ಪ್ರಾಚ್ಯಾವಶೇಷಗಳು ಕಂಡುಬರುತ್ತವೆ.

ಹೀಗೆ ಯರಮಂಚಿನಾಯಕ ಉಳಿದವರಿಗೆ ಗೊತ್ತಿಲ್ಲದಂತೆ ಗುಪ್ತವಾಗಿ ಬೆಣ್ಣೆ ಮುದ್ದೆ, ಟಗರು, ಹೋತು, ಹೋರಿಕರುಗಳು, ಮೊಗ್ಗಲು ತೆರಿಗೆ ಮುಂತಾದವುಗಳನ್ನು ಕೊಡಗುಬೊಮ್ಮನಿಗೆ ಅರ್ಪಿಸಿದನು. ಈ ಕಾಣಿಕೆಯನ್ನು ಪಡೆದ ಕೊಡಗುಬೊಮ್ಮನು ತೃಪ್ತನಾದನು. ತರುವಾಯ ಯರಮಂಚಿನಾಯಕ ಜಾಗ ಬದಲಿಸಿ ಊಡಡ್ಲಗಡ್ಡ (ಮೂಡುರ್ಲು ಗುಡ್ಡ= ಮೂರು ಊರಿನ ಗಡ್ಡೆ) ಎಂಬಲ್ಲಿಗೆ ತಮ್ಮಕಾಪು – ಕಂಪಳದೊಂದಿಗೆ ಬಂದನು. ಉಳಿದ ಮ್ಯಾಸಮಂಡಳಿಯ ಪ್ರಮುಖರು ಕೊಡಗುಬೊಮ್ಮನಿಗೆ ಕೊಡುತ್ತಿದ್ದ ಮಾಮೂಲುಗಳನ್ನು ವಿರೋಧೀಸಿ, ಎಲ್ಲರೂ ಕೂಡಿ ಒಂದೆಡೆ ಸಭೆ ಸೇರಿ ಚಿಂತನೆ ನಡೆಸಲು ಸಿದ್ಧರಾದರು.[2]

**ವಿಮೋಚನೆಗಾಗಿ ಚಿಂತನಸಭೆ**

ಕೊಡಗುಬೊಮ್ಮನ ಹಾವಳಿ, ಬರ್ಬರ ಆಳ್ವಿಕೆ ವಿರೋಧಿಸಿ ಚಿಂತಗುಟ್ಲ ಬೋರುವುನ ಬಳಿ (ಚಳ್ಳಕೆರೆ ತಾ) ಎಲ್ಲಾ ನಾಯಕ ಜನಾಂಗದವರು ಸೇರಿ ಚಿಂತನೆ ಮಾಡಿದರು. ಇವನ ಕಾಟದಿಂದ ಪಾರಾಗಲು ೬ ಮುತ್ತಿಗಾರರನ್ನು ಗುರು – ಪೂಜಾರಿಗಳನ್ನು, ನಾಯಕ, ದಾಸ, ಮನ್ನೆಗಾರರನ್ನು ಕರೆಸಿದರು. ದೊರೆ ದಳವಾಯಿಗಳು, ಕಾಲಭೈರವೇಶ್ವರ ಗುಂಡುಗಳು ಹತ್ತಿರ ಸಭೆ ಸೇರಿದರು. ಇವರೆಲ್ಲ ಕೂತು ಮಾತನಡಿದ ಸ್ಥಳಕ್ಕೆ ಚಿಂತಗುಟ್ಲ (ಚಿಂತೆಯಕಟ್ಟೆ) ಎಂದು ಕರೆದರು. 'ಚಿಂತ' ಎಂದರೆ ಚಿಂತೆ. ಗುಟ್ಲು ಎಂದರೆ ಗುಟ್ಟೆ, ಗುಟ್ಟು, ರಹಸ್ಯ ಎಂಬರ್ಥಗಳಿವೆ. ಇವರುಗಳು ಭೈರವೇಶ್ವರನನ್ನು ತೆಲುಗಿನಲ್ಲಿ ಬೋರುವುಡು ಎಂದು ಕರೆಯುತ್ತಾರೆ. ಎಲ್ಲರೂ ಸೇರಿಭೈರವೇಶ್ವರನ ಸನ್ನಿಧಿಯಲ್ಲಿ ಗುಟ್ಟಾಗಿ ಚಿಂತನೆ ಮಾಡಿದ್ದರಿಂದ ಚಿಂತಗುಟ್ಲು ಎಂದು ಖ್ಯಾತಿ ಪಡೆಯಿತು. ಕೊನೆಗೆ ಭೈರವನನ್ನು ಬೇಡಿಕೊಂಡು

ಕೊಡಗುಬೊಮ್ಮನ ವಿನಾಶಕ್ಕೆ ಅವನ ಹತ್ತಿರ ಮೊರೆ ಹೋದರು. ಆ ದೇವರನ್ನು ಇಂದು ಚಿಂತಗುಟ್ಟ ಭೈರವನೆಂದು ಕರೆಯುವ ರೂಢಿಯಿದೆ. ಕೊಡಗುಬೊಮ್ಮನ ಸಾವಿಗೆ ಸತತ ಪ್ರಯತ್ನಿಸಿ, ಎಲ್ಲಾ ಸಮಸ್ಯೆಗಳನ್ನು ಚರ್ಚಿಸಿದರು. ನಾಯಕ ಜನಾಂಗದ ಪ್ರಮುಖರೊಂದಿಗೆ ಎಲ್ಲರೂ ಸೇರಿ ಯರಮಂಚಿನಾಯಕನ ನೇತೃತ್ವದಲ್ಲಿ ಭೈರವೇಶ್ವರನನ್ನು ಪ್ರದಕ್ಷಣೆ ಹಾಕಿದರು. ಅಡ್ಡಬಿದ್ದು ವಿವಿಧ ರೀತಿಯ ಪ್ರಮಾಣ ವಚನಗಳನ್ನು ಹಾಕಿಕೊಂಡರಲ್ಲದೆ, ಭೈರವೇಶ್ವರನಿಂದ ಕೊನೆಗೆ ಅನುಮತಿ ಪಡೆದರು. ನೇರ್ಲಗುಂಟೆ ಸಮೀಪದ ಕುದಾಪುರ ಬೋರೆದೇವರಹಟ್ಟಿಯಲ್ಲಿ ಈ ದೇವಾಲಯವಿದೆ. ಇಲ್ಲಿ ರಸಸಿದ್ಧರ ಸಮಾಧಿ, ಉದ್ಭವಲಿಂಗ ಮುಂತಾದ ಶಿಲ್ಪಗಳಿವೆ. ಮ್ಯಾಸಬೇಡರ ಗೊಡಗುದಾಸರಿಗಳು ಇದಕ್ಕೆ ಪೂಜಾರಿಗಳಾಗಿದ್ದಾರೆ.

**ಕೊಡಗುಬೊಮ್ಮನ ಅವಸಾನಕ್ಕಾಗಿ ಆಚರಣೆಗಳು**

ಊಟಕುಂಟೆಯಲ್ಲಿ ಮೂರುಸಾವಿರ ಮ್ಯಾಸಮಂಡಳಿ ಯರಮಂಚಿನಾಯಕ, ಗಗ್ಗರಿದಾಸರ ನೇತೃತ್ವದಿಂದ ಚಿಂತಗುಟ್ಲ ಭೈರವನ ಬಳಿ ಸೇರಿದರು. ವಡೇರ ಅಥವಾ ವಡೇಲಾರು ಎತ್ತುಗಳಲ್ಲಿ ಒಂದು ಗೊಡ್ಡು ಹಸುವಿನ ಚರ್ಮವನ್ನು ತೆಗೆದು ೧೦೧ ಢಗಂ (ನಗಾರಿ) ಕಟ್ಟಿ. ಒಂಟಿಕೋಡು ಬೆಳ್ಳಿ ಹಸುವಿನ ಕೆಚ್ಚಲಿನ ಹಾಲು ಕರೆದು, ಹೆಪ್ಪು ಹಾಕಿ, ಮಜ್ಜಿಗೆ, ಬೆಣ್ಣೆ, ತುಪ್ಪಮಾಡಿ ೧೦೧ ತುಪ್ಪದ ದೀಪಗಳನ್ನು ಹಚ್ಚಿ ಅಂಬುವಾಸಿಗಳನ್ನು (ನಿಂಬೆಹಣ್ಣು, ಕರೆಬಣ್ಣದ ಕುರಿ ಅಥವಾ ಮೇಕೆಮರಿ ಕೊಯ್ದು, ಎದುರು ನೋಮುಗಳನ್ನು ವ್ರತ) ಮಾಡಿದರು. ಭೈರವನಿಗೆ ಎಲ್ಲರೂ ಬೆತ್ತಲಸೇವೆ ಮಾಡಿ, ಹರಕೆ ಕಟ್ಟಿಸಿದರು. ಆಗ ಒಣಗಿದ ಮರ ಚಿಗುರಬೇಕು. ಚಿಗುರಿದ ಮರ ಒಣಗಬೇಕು ಎಂದು ಪಂಥಕಟ್ಟಿಕೊಂಡು ಸತ್ತಬೊಮ್ಮನ ಸುಡುವ ಹೊಗೆ ಕಾಣಬೇಕೆಂದು ಹಟಹಿಡಿದರು. ಹೀಗೆ ಯರಮಂಚಿನಾಯಕ ಮತ್ತು ಉಳಿದವರು ಭೈರವನನ್ನು ಪರಿಪರಿಯಾಗಿ ಬೇಡಿಕೊಂಡನು. ಅವರು ಕೊಡಗುಬೊಮ್ಮನಿಂದ ತತ್ತರಿಸಿದ್ದು, ವಿಮೋಚನೆಗಾಗಿ ಕಾಯುತ್ತಿದ್ದರು. ಸಾವಿರಾರು ದನ, ಕುರಿ, ಮೇಕೆಗಳ ಸಂತತಿಯನ್ನು ಕಳೆದುಕೊಂಡ ಅವರು ಬೊಮ್ಮನ ಅವಸಾನಕ್ಕಾಗಿ ಕನವರಿಸಿ ಕುಳಿತರು. ಕೊಡಗುಬೊಮ್ಮ ಕೊನೆಗೆ ಸಾವನ್ನಪ್ಪಿದನು. ಅದು ವೀರಮರಣವಲ್ಲ. ಗುಪ್ತಸಾವು, ಕ್ರೋಧಗೊಂಡ ವಿರೋಧಿಗಳ ಕೆಂಗಣ್ಣಿಗೆ ಗುರಿಯಾಗಿ ಸತ್ತನೆಂದು ಹೇಳಲಾಗಿದೆ. ಜನಪದ ಹಾಡುಗಳಲ್ಲಿ ಅತಿರೇಕದಿಂದ ಮೋಸಮಾಡಿ ಸಾಯಿಸಿದರು ಎಂದಿದೆ. ಸತ್ತ ವ್ಯಕ್ತಿಯನ್ನು ರಾವಲುಕುಂಟೆಯಿಂದ ಬುಕ್ಕಂಬೂದಿ ಕೆರೆಯ ಅಂಗಳದಲ್ಲಿ ಹೂತು ಸಮಾಧಿಮಾಡಿದ್ದಾರೆ. ಇಂದಿಗೂ ಅಲ್ಲಿ ಕಲ್ಲುಗುಡ್ಡಗಳಿವೆ. ಬುಟ್ಟಗಲೋರು ಬೆಡಗಿನವರು ಇಂದಿಗೂ ಇಲ್ಲಿ ತಪ್ಪದೆ ಹಿರಿಯರ ಹಬ್ಬವನ್ನು ಮಾಡುತ್ತಾರೆ. ಕೊಡಗುಬೊಮ್ಮನ ವಂಶಸ್ಥರು ಬೊಮ್ಮಗೊಂಡನಕೆರೆಯ ಬಳಿಯಿರುವ ರಾವಲುಕುಂಟೆಯಲ್ಲಿದ್ದಾರೆ.

**ಸ್ಮಾರಕಗಳು**

ಕೊಡಗುಬೊಮ್ಮನು ಸತ್ತ ನಂತರ ಅವನನ್ನು ದೈವತ್ವಕ್ಕೇರಿಸಿದ ಮ್ಯಾಸಬೇಡರ ಬುಟ್ಟಗಲೋರು ಬೆಡಗಿನವರು ದೇವರೆಂದು ಪರಿಗಣಿಸಿ ಇಂದಿಗೂ ಆರಾಧಿಸುತ್ತಾರೆ. ಅವನ ಸ್ಮರಣಾರ್ಥ ಗುಡಿ, ದೇವಾಲಯಗಳನ್ನು ನಿರ್ಮಿಸಿಕೊಂಡಿದ್ದಾರೆ. ಕೂಡ್ಲಿಗಿ, ಚಳ್ಳಕೆರೆ, ಮೊಳಕಾಲ್ಮುರು, ಚಿತ್ರದುರ್ಗ ಮತ್ತು ಜಗಳೂರು ತಾಲೂಕುಗಳಲ್ಲಿ ಇವನ ದೇವಾಲಯಗಳಿವೆ. ಕಾಂಶಿ ಹುಲ್ಲಿನಿಂದ ನಿರ್ಮಿಸಿದ ಹಳೆಯ ಕಾಲದ ದೇವಾಲಯ, ಇತ್ತೀಚಿನ ಬೆಣಚುಕಲ್ಲಿನ ದೇವಾಲಯಗಳು ಸೇರಿದಂತೆ ಆಧುನಿಕತೆಗೆ ಮಾರುಹೋಗಿ ಸಿಮೆಂಟ್ ಕಟ್ಟಡಗಳು ಹೆಚ್ಚಾಗಿವೆ. ಕೂಡ್ಲಿಗಿ ತಾಲೂಕಿನ ಕುರಿಹಟ್ಟಿಯ ಬೊಮ್ಮದೇವರು, ಗೌರಸಮುದ್ರದ ಬೊಮ್ಮದೇವರು ಪ್ರಮುಖ ದೇವಾಲಯಗಳಾಗಿವೆ. ನೂರಾರು ಊರುಗಳಲ್ಲಿ ಬೇಡರ ಕೇರಿಯೊಳಗೆ ಈತನ ದೇವಾಲಯಗಳಿರುವುದುಂಟು.

ಕೊಡಗುಬೊಮ್ಮನು ವಾಸಿಸಿದ ಸ್ಥಳವಾದ ಊಟಕುಂಟೆಯಲ್ಲಿ ಅವನು ಕಟ್ಟಿಸಿದ ಬೃಹತ್‌ಕೋಟೆ, ಅರಮನೆ, ಕೆರೆ, ಬಾವಿ, ಮನೆಗಳು ಪ್ರಮುಖವಾದವು. ಬೃಹತ್ ಗಾತ್ರದ ಬೆಟ್ಟದ ಮೇಲೆ ಕೋಟೆಕಟ್ಟೆ, ಅದರೊಳಗಿನ ಗವಿಗಳನ್ನು ಅರಮನೆ, ವಾಸದ ಮನೆಗಳನ್ನು ಮಾಡಿಕೊಂಡಿದ್ದನೆಂದು ಕಾಣುತ್ತದೆ. ಕೋಟೆಯ ೪ ದಿಕ್ಕುಗಳಿಗೆ ರಕ್ಷಕರ ಅಥವಾ ಕಾವಲುಗಾರರ ನಿವೇಶನಗಳಿವೆ. ಕಳ್ಳತನದ ಆಕಳುಗಳನ್ನು ತರುಬುವ ಬಂಡೆಯಿದೆ. ಹೀಗೆ ವಿವಿಧ ರೀತಿಯ ಸ್ಮಾರಕಗಳು ಕಂಡುಬರುತ್ತವೆ.

**ಹಬ್ಬ – ಜಾತ್ರೆ**

ಪ್ರತಿವರ್ಷ ದೀಪಾವಳಿ ಮತ್ತು ಗುಗ್ಗರಿ ಹಬ್ಬದಲ್ಲಿ ಇವನ ಬಗೆಗೆ ಹಬ್ಬ – ಜಾತ್ರೆಗಳು ಜರುಗುತ್ತವೆ. ಬುಡಕಟ್ಟಿನ ಸಂಪ್ರದಾಯದಂತೆ ಗಂಗೆಸ್ನಾನ, ಗುಗ್ಗರಿ ಹಾಕಿ, ಮಣೆವು, ದೇವರೆತ್ತುಗಳ ಸಮ್ಮುಖದಲ್ಲಿ ಕಾರ್ಯಕ್ರಮಗಳನ್ನು ನೆರವೇರಿಸುತ್ತಾರೆ. ಕುರಿಹಟ್ಟಿ ಬೊಮ್ಮದೇವರ ಜಾತ್ರೆ, ಭರತ ಹುಣ್ಣಿಮೆಯಾದ ನಂತರ ಆಗುತ್ತದೆ (ಉದಾ: ೬.೨.೧೯೯೯ ರಂದು ವೀಕ್ಷಿಸಲಾಗಿದೆ). ಅದೇ ರೀತಿ ಗೌರಸಮುದ್ರದ ಬೊಮ್ಮದೇವರು ಜಾತ್ರೆ, ಕಂಪಳದೇವರ ಜಾತ್ರೆ ಆದನಂತರ ಈ ಜಾತ್ರೆಯಾಗುವುದು.

**ಸಂಪ್ರದಾಯ**

ಕೊಡಗುಬೊಮ್ಮನಿಗೆ ಸಂಬಂಧಿಸಿದ ಜಾತ್ರೆ, ಹಬ್ಬ ತಲೆಮಾರುಗಳಿಂದ ಆಚರಣೆ, ಸಂಪ್ರದಾಯಗಳನ್ನು ಉಳಿಸಿಕೊಂಡು ಬಂದಿದ್ದಾರೆ. ಮಕ್ಕಳಿಗೆ ಬೊಮ್ಮಣ್ಣ, ಬೊಮ್ಮಕ್ಕನೆಂದು ನಾಮಕರಣ ಮಾಡುತ್ತಾರೆ. ಕಷ್ಟ ಬಂದಾಗ ಕಾಸುಕಟ್ಟಿಕೊಂಡು ಮೀಸಲು ಹರಕೆ ಹೊರುತ್ತಾರೆ. ಮಕ್ಕಳಿಲ್ಲದವರು ಸಂತಾನಭಾಗ್ಯಕ್ಕಾಗಿ ಹರಕೆಹೊತ್ತು ಹುಟ್ಟಿದ ಮಗುವಿಗೆ ಅವನ ಹೆಸರಿಡುವಂತೆ ಕೋರಿಕೊಳ್ಳುವ ಸಂಪ್ರದಾಯವಿದೆ. ಶೈವಿಕರಣಗೊಂಡ ಬೊಮ್ಮನು ಹೆಸರನ್ನು ಇಂದು ಬೊಮ್ಮಲಿಂಗೇಶ್ವರನೆಂದು ಜನಪ್ರಿಯಗೊಳಿಸಿದ್ದಾರೆ.

---

[1] **ಡಾ. ಬಾಬಾ ಸಾಹೇಬ್‌ಅಂಬೇಡ್ಕರ್ ಬರಹಗಳು ಮತ್ತು ಭಾಷಣಗಳು, ೧೯೯೮, ಸಂ.೯, ಪು: ೨೩೧ ರಲ್ಲಿ ಈ ವ್ಯವಸ್ಥೆಯನ್ನು ಹೋಲುವ ಅಂಶಗಳ ಬಗ್ಗೆ ತಿಳಿಸುತ್ತಾರೆ.** "ಬ್ರಾಹ್ಮಣರು ಆಳುವ ವರ್ಗವಲ್ಲದೆ, ಆಡಳಿತದಲ್ಲಿ ಅವರಿಗಿರುವ ಹಿಡಿತ ಮಿಗಿಲಾದುದು. ಜನಸಾಮಾನ್ಯರ ದೃಷ್ಟಿಯಲ್ಲಿ 'ಬ್ರಾಹ್ಮಣ ಪೂಜನೀಯ ವ್ಯಕ್ತಿ'. ಪ್ರಾಚೀನ ಕಾಲದಲ್ಲಿ ಈ ಜಾತಿಯ ವ್ಯಕ್ತಿ ಎಂಥಾ ಘೋರಾ ಅಪರಾಧ ಮಾಡಿದರೂ ಕೂಡ ಆತನಿಗೆ ಮರಣದಂಡನೆ ಶಿಕ್ಷೆ ಇರಲಿಲ್ಲ. ಆತ ಪೂಜನೀಯ ವ್ಯಕ್ತಿಯಾಗಿದ್ದರಿಂದ ಆತನಿಗೆ ಅನೇಕ ವಿಶೇಷ ಸೌಲಭ್ಯ ಮತ್ತು ಅಧಿಕಾರಗಳು ಲಭ್ಯವಿದ್ದವು. ಇಂತಹ ಯಾವುದೇ ವಿಷಯ ರಿಯಾಯಿತಿಗಳು ಆಗ ಜನಸಾಮಾನ್ಯರಿಗೆ ಇರಲಿಲ್ಲ. ಮೊದಲ ಫಲ ಆತನಿಗೆ ಮೀಸಲಾಗಿರುತ್ತಿತ್ತು. ಸಂಬಂಧದದ ವಿವಾಹ ಪದ್ಧತಿ ಪ್ರಚಲಿತವಿದ್ದ ಮಲಬಾರಿನ ತಳಜಾತಿಯ ನಾಯರುಗಳು ತಮ್ಮ ಮಹಿಳೆಯರು ಬ್ರಾಹ್ಮಣ ಉಪಪತ್ನಿಯರಾದರೆ ತಾವು ಧನ್ಯರೆಂದು ಭಾವಿಸುತ್ತಿದ್ದರು. ರಾಜರುಗಳೂ ಕೂಡ ತಮ್ಮ ಪತ್ನಿಯರ ಕೌಮಾರ್ಯ ಭಂಗ ಮಾಡಲು ಪ್ರಥಮ ಸಂಭೋಗಕ್ಕಾಗಿ ಬ್ರಾಹ್ಮಣರನ್ನು ಆಮಂತ್ರಿಸುತ್ತಿದ್ದರು. ಹೀಗೆ ನಾನಾ ಬಗೆಯ ಶೋಷಣೆ ಮುಖಗಳಿದ್ದವು. ತಳವರ್ಗದ ಜನರು ಬ್ರಾಹ್ಮಣರ ಪಾದತೊಳೆದು ನೀರು ಕುಡಿಯುತ್ತಿದ್ದರು."
**೧೬ನೇಯ ಶತಮಾನದ ಮಧ್ಯದಲ್ಲಿ ಮಲಬಾರಕ್ಕೆ ಭೇಟಿಕೊಟ್ಟ ಪ್ರವಾಸಿ ಲುಡ್ವಿಕೊ–ಡಿ ವರ್ತೆಮಾನನು ಹೀಗೆ ಬರೆಯುತ್ತಾರೆ:** ಬ್ರಾಹ್ಮಣರ ಬಗ್ಗೆ ತಿಳಿಯುವುದು ತುಂಬಾ ಉಲ್ಲಾಸದ ಸಂಗತಿ. ನಮ್ಮಲ್ಲಿರುವ ಪಾದ್ರಿಗಳ ತರಹವೇ ಇವರೂ ಇಲ್ಲಿನ ಧರ್ಮಗುರುಗಳು. ರಾಜನು ತನ್ನ ಮದುವೆಯಾದ ಮೇಲೆ ರಾಣಿಯನ್ನು ಮೊದಲು ಒಬ್ಬ ಬ್ರಾಹ್ಮಣನ ಜೊತೆಯಲ್ಲಿ ಮಲಗಿಸಿ ಆಕೆಯ ಮೀಸಲನ್ನು ಮುರಿಯುವ ವ್ಯವಸ್ಥೆ ಮಾಡುತ್ತಾನೆ. ಇದಕ್ಕಾಗಿ ಯೋಗ್ಯ ಮತ್ತು ಪ್ರಸಿದ್ಧ ಬ್ರಾಹ್ಮಣನನ್ನು ಆರಿಸಿಕೊಳ್ಳಲಾಗುತ್ತದೆ. ಈ ಕಾರ್ಯಕ್ರವನ್ನು ಬ್ರಾಹ್ಮಣನು ಖುಷಿಯಿಂದ ಮಾಡುತ್ತಾನೆ ಎಂದು ತಿಳಿಯಬಾರದು. ಈ ಕಾರ್ಯಮಾಡುವುದಕ್ಕಾಗಿ ರಾಜನು ಬ್ರಾಹ್ಮಣನಿಗೆ ೪೦೦ರಿಂದ ೫೦೦ರಷ್ಟು ವರಹ (ಹಣ) ಕೊಡಬೇಕಾಗುತ್ತದೆ. ಕಲ್ಲಿಕೋಟೆಯ ರಾಜನನ್ನು ಹೊರತುಪಡಿಸಿ ಉಳಿದವರಾರೂ ಇಂತಹ ಪದ್ಧತಿಯನ್ನು ಅನುಸರಿಸುವುದಿಲ್ಲ (ವಾಯೇಜಸ್ ಆಪ್ ವರ್ತಮಾ ಹುಕ್ಲುಯಾತ್ ಸೊಸಾಯಿಟಿ, ಸಂ.೧, ಪು: ೧೪೧).

**ಇದೇ ಕೃತಿ ಪುಟ: ೧೩೨ರಲ್ಲಿ ಹೀಗೆ: ಗ್ಯಾಮಿಲ್ಟನ್‌ನ 'ಅ ಕೌಂಟ್ ಆಫ್ ದಿ ಈಸ್ಟ್ ಇಂಡೀಸ್'** ಕೃತಿಯಲ್ಲಿನ ಉಲ್ಲೇಖವನ್ನು ಲೇಖಕರು ತಿಳಿಸುತ್ತಾರೆ. 'ಸೆಮೋರಿಯನ್ನರು ಮದುವೆಯಾದ ಮೇಲೆ ತಮ್ಮ ಹೆಂಡತಿಯನ್ನು ಕೂಡುವ ಹಾಗಿಲ್ಲ. ಮೊದಲು ಆಚಾರ್ಯರಾದ ನಂಬೂದರಿಗಳು ಅವಳನ್ನು ಮೂರು ದಿವಸಗಳವರೆಗೂ ತನ್ನೊಡನೆಯೇ ಇಟ್ಟುಕೊಳ್ಳಬಹುದು.'

**ಫ್ರಾನ್ಸೀಸ್ ಬುಚನನ್‌ಈ ಪದ್ಧತಿಯನ್ನು ಹೀಗೆ ಹೇಳಿರುತ್ತಾರೆ:** ‘ತಮುರಿ ಜಾತಿಯ ಮಹಿಳೆಯರಿಗೆ ಸಾಮಾನ್ಯವಾಗಿ ನಂಬೂದರಿಗಳಿಂದಲೇ ಗರ್ಭದಾನವಾಗುತ್ತದೆ. ಅವಶ್ಯವೆನಿಸಿದರೆ ನಾಯರ್‌ಗಳಲ್ಲಿನ ಉನ್ನತ ದರ್ಜೆಯವರನ್ನು ಆಮಂತ್ರಿಸಬಹುದು. ಮಳೆಯಾಳಿಗಳಲ್ಲಿ ಮದುವೆಯಾದ ತರುಣಿಯನ್ನು ಮೇಲ್ವರ್ಗದವ ಸಂಭೋಗ ಮಾಡುವುದು ಇದೆ. ಒಟ್ಟಾರೆ ಈ ಹಿಂದಿನ ಚರಿತ್ರೆಯ ಪುಟಗಳನ್ನು ಅವಲೋಕಿಸಿದರೆ ‘ತಳಜಾತಿಯ ಸ್ತ್ರೀಯ ಉನ್ನತ ವರ್ಗದವರಿಗೆ ಪ್ರಥಮ ಅರ್ಪಣೆ’ ಎಂಬ ತತ್ವದ ಆಧಾರದ ಮೇಲೆ ರೂಢಿಯಲ್ಲಿತ್ತು. ಪ್ರಾಚೀನ ಕಾಲದಲ್ಲಿ ಇಂಥ ನೀಚತನ ಇದ್ದಂತಿಲ್ಲ. ರಾಮನು ಅಸ್ಪೃಶ್ಯನ ದೋಣಿಯಲ್ಲಿ ಗಂಗಾನದಿಯನ್ನು ದಾಟುತ್ತಾನೆ. ಎಂದಾಗ ಮಧ್ಯಾಕಾಲದಲ್ಲಿ ಈ ಪದ್ಧತಿ ಪ್ರಬಲವಾಗಿ ಬೆಳೆದಿತ್ತು ಎನ್ನಲಾಗಿದೆ.

[2] ಮೊಳಕಾಲ್ಮೂರು ಮತ್ತು ರಾಯದುರ್ಘದ ಪಾಳೆಯಗಾರರಲ್ಲಿ ಬೊಮ್ಮ ನಾಯಕನೆಂಬ ಅರಸನಿದ್ದ.

# ೬. ಚಿತ್ರದುರ್ಗ ಜಿಲ್ಲೆಯ ಬುಡಕಟ್ಟು ವೀರರು (7)

## ೬.೬. ಗಲಗಲ್ಲುಗಾಜನಾಯಕ

**ಹಿನ್ನೆಲೆ**

ಗಾಜ (ದಿ) ನಾಯಕ ಎಂಬುವನು ಮ್ಯಾಸಬೇಡರ ನಾಯಕ ವೀರರಲ್ಲಿ ಅಗ್ರಮಾನ್ಯನಾದವನು. ಇವನ ಸ್ಥಳ ಗಲಗಲ್ಲು. ಇದು ಇಂದು ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯ ರಾಯದುರ್ಗ ತಾಲೂಕಿನ ಗೊಲ್ಲಹಳ್ಳಿ ಸಮೀಪದಲ್ಲಿದೆ. ಮೊದಲು ಈ ತಾಲೂಕು ಬಳ್ಳಾರಿ ಜಿಲ್ಲೆಗೆ ಸೇರಿದ್ದು, ಮದ್ರಾಸ್ ಅಧಿಪತ್ಯದಲ್ಲಿತ್ತು. ಏಕೀಕರಣದ ನಂತರ ಆಂಧ್ರಕ್ಕೆ ಹೋದ ಸ್ಥಳಗಳಲ್ಲಿ ಇದು ಒಂದಾಗಿದೆ. ಈ ಸ್ಥಳದ ಅಕ್ಕಪಕ್ಕದಲ್ಲಿ ಕೈಲಾಸಕೊಂಡ, ಮೊಳಕಾಲ್ಮುರು, ತಾಟಚೆರವು (ತಾಳಿಕೆರೆ), ಗೊಲ್ಲಹಳ್ಳಿ, ರಂಗಸಮುದ್ರ, ಕೋನಸಾಗರ ಮುಂತಾದ ಸ್ಥಳಗಳು ಕಂಡುಬರುತ್ತವೆ. ಗಲಗಲ್ಲು ಗ್ರಾಮದಲ್ಲಿ ದೇವಮ್ಮನ ದೇವಾಲಯ, ಗಾಜನಾಯಕನ ಸಮಾಧಿ, ಮರಮ್ಮನ ದೇವಸ್ಥಾನ, ಆಂಜನೇಯ ಮತ್ತು ತಿರುಪತಿ ತಿಮ್ಮಪ್ಪನ ದೇವಾಲಯಗಳಿವೆ. ಪ್ರಧಾನವಾಗಿ ದೇವಮ್ಮ ಮತ್ತು ಗಾಜನಾಯಕನನ್ನು ಇಲ್ಲಿನ ಜನರು ಆರಾಧಿಸುತ್ತಾರೆ.

[1]
ಗಾಜ (ದಿ) ನಾಯಕನನ್ನು ಚಿತ್ರದುರ್ಗದ ಪಾಳೆಯಗಾರರ ಸಾಮಂತ ಅರಸನೆಂದು ಜನಪದರು ಹೇಳುತ್ತಾರೆ. ಅಲ್ಲದೆ, ರಾಯದುರ್ಗದ ಅರಸರಿಗೂ ಇವನು ಹತ್ತಿರದವನಾಗಿದ್ದ. ಮ್ಯಾಸಬೇಡರ ಮಂದಲಗೋತ್ರದ ೯ ಜನ ಅಜ್ಜನೋರಲ್ಲಿ (ಹಿರಿಯರು) ಗಜ್ಜಿಗನೋರು (ಗಜಗನವಾಡು) ಒಬ್ಬನಾಗಿರುತ್ತಾನೆ. ಇವನು ನಲ್ಲಚೆರುವು ಓಬಳ ದೇವರ ಗೋತ್ರದವರು. ಈ ದೇವರಿಗೆ ಇವರೇ ಮೊದಲಿಗರು. ಇಲ್ಲಿ ಮಳೇಲಾರು ಗೋತ್ರದವರು ಬೊಮ್ಮದೇವರನ್ನು ಪೂಜಿಸುತ್ತಾರೆ. ಪಕ್ಕದಲ್ಲಿ ವೇದಾವತಿ (ಪೆದ್ದರೇವು) ಹರಿಯುತ್ತಿದ್ದು, ಅನೇಕ ಧಾರ್ಮಿಕ ನೆಲೆಗಳನ್ನು ದಂಡೆಯ ಮೇಲೆ ಸೃಷ್ಟಿಸಿದೆ. ಸ್ಥಳೀಯರು ಆಂಧ್ರದ ನಲ್ಲಮಲ ಅಥವಾ ಕೃಷ್ಣಾನದಿ ಪೂರ್ವದಿಂದ ಬಂದವರು. ಅಲ್ಲಿ ನಲ್ಲಚೆರುವು ಗ್ರಾಮವಿದ್ದಿತು. ಅಲ್ಲಿಂದ ವಿಷ್ಣುದೇವರನ್ನು ತಂದುಪೂಜಿಸಿದರಂತೆ. ಆಗ ಮಂದ ಕಾಮಗೇತಿಗೆ ದೊರೆತ ವಿಷ್ಣು ಸಾಲಿಗ್ರಾಮವನ್ನು ಓಬಳ ದೇವರು ಎಂದು ಕರೆದರು. ಈ ಒಂಬತ್ತು ಜನ ಹಿರಿಯರೆಂದರೆ : ಗಜಗನವಾಡು (ಅವನು), ಬಿದ್ದನವಾಡು, ಬುಡ್ಡುಬೋರುನವಾಡು, ಕಗ್ಗಲ್ಲವಾಡು, ಮಲ್ಲೂರುವಾಡು, ಮಾಸಿವಾಡು, ನಲಬ್ಬವಾಡು, ಯರಬೊಮ್ಮನವಾಡು ಮತ್ತು ಪರಮೇಸಿನವಾಡು.



ಗಾಜನಾಯಕನ ಸಮಾಧಿ, ಗಲಗಲ್ಲು, ರಾಯದುರ್ಗ ತಾ, ಅನಂತಪುರ ಜಿ. ಆಂಧ್ರಪ್ರದೇಶ

ಈ ಹಿಂದೆ ಈ ಪ್ರದೇಶವನ್ನು ವಟ್ಟಳ್ಳನಾಯಕ ಎಂಬ ನಿಡಗಂಟಿ (ನಿಡಗಲ್ಲಿನ ಆಧಿನದಲ್ಲಿ ಸಾಮಂತ) ನೋಡಿಕೊಳ್ಳುತ್ತಿದ್ದನು. ಯರಮಂಚಿನಾಯಕ, ಗಗ್ಗರಿದಾಸರೊಡನೆ ಅನೇಕ ಒಪ್ಪಂದಗಳಾಗುತ್ತವೆ. ಆಗ ವಟ್ಟಳ್ಳನಾಯಕನಿಗೆ ಸೇರಿದ ಗ್ರಾಮಗಳೆಂದರೆ : ವರ್ಧನಕುಂಟೆ, ದಡ್ಡಿಹಳ್ಳಿ, ರಂಗಸಮುದ್ರ ಮುಂತಾದವು. ಈ ಎಲ್ಲಾ ಗ್ರಾಮಗಳಿಂದ ಇವನಿಗೆ ಹೆಚ್ಚಾಗಿ ಕುಂಬಳಕಾಯಿ ಕೊಡುತ್ತಿದ್ದರಂತೆ! ಎಂದಾಗ ಇವನೊಬ್ಬ ಆಡಳಿತಗಾರ ಇರಬೇಕು.

**ಆರಂಭಘಟ್ಟ**

ಗಲಗಂಟಿ (ಲ್ಲು) ಗಾಜನಾಯಕ ಎಂಬುವನು ಬೇಡರಿಗೆ ದೇವರ ಸಮಾನವಾಗಿ ಕಂಡುಬಂದಿದ್ದು ಬೋಸೆದೇವರ ಸಂಬಂಧಿ ಎನ್ನುತ್ತಾರೆ. ಗಾಜನಾಯಕ ರಾಜ್ಯಭಾರ ಮಾಡುತ್ತಿರುವ ಸಂದರ್ಭದಲ್ಲಿ ಪಶುಪಾಲನೆಯಿಂದ ಹೆಚ್ಚು ಆದಾಯವಿತ್ತು. ಹೆಚ್ಚಾಗಿ ಅದನ್ನೇ ಅವಲಂಬಿಸಿದ್ದುದರಿಂದ ಅವನ ಪ್ರದೇಶವು ಸಮೃದ್ಧವಾಗಿರಬೇಕು. ಹೀಗೆ ಇರುವಾಗ ಒಮ್ಮೆ ಪಶುಪಾಲಕರ ದೊರೆಯಾದ ದಡ್ಡಿಸೂರನಾಯಕನು ಈ ಕಡೆ ಪ್ರಯಾಣಿಸುತ್ತಾನೆ. ಮಲ್ಲಿಕಾಟಿ ಎದ್ದಾಡು ದಡ್ಡೆಯ (ಮರ್ಲಹಳ್ಳಿ, ಮೊಳಕಾಲ್ಮೂರು ತಾ) ಹತ್ತಿರ ಬಂದು ತಂಗುವನು. ಹಿಂದೊಮ್ಮೆ ದೇವರಹಳ್ಳಿ ಹತ್ತಿರ ಗಾಜನಾಯಕನ ಹೆಂಡತಿ ದಡ್ಡಿಸೂರನಾಯಕನನ್ನು ನೋಡಿ ಮೋಹಗೊಂಡಿದ್ದಳು. ತಮ್ಮ ಊರಿನ ಪಕ್ಕ ಕುರಿರೊಪ್ಪ ಕಟ್ಟಿಕೊಂಡಿದ್ದರಿಂದ ಭೇಟಿಮಾಡಿದಳು. ಒಮ್ಮೆ ರೊಪ್ಪಕ್ಕೆ ಬರಲು ಸಿದ್ಧಳಾದಳು.



ಗಾಜನಾಯಕನ ಪತ್ನಿ ಸಹಗಮನ, ಗಲಗಲ್ಲು

ಇವಳು ಸರ್ವಲಂಕೃತಳಾಗಿ ಕಂಬಳಿ ಹೊದ್ದು, ಮಧ್ಯರಾತ್ರಿ ಸಮಯದಲ್ಲಿ ರೊಪ್ಪಕ್ಕೆ ಬರುತ್ತಾಳೆ. ದಡ್ಡಿಸೂರನಾಯಕ ಕುರಿರೊಪ್ಪಕ್ಕೆ ಯಾವುದೋ ಕಾಡುಪ್ರಾಣಿ ದಾಳಿ ಮಾಡುತ್ತದೆಂದು ಭಾವಿಸಿ ಬಾಣದಿಂದ ಹೊಡೆದು ಅವಳನ್ನು ಸಾಯಿಸಿದನು. ಸಾಯುವ ಮುನ್ನ ಅವಳು ನನ್ನನ್ನು ಮೋಹಿಸಲು ಬಂದ ವಿಷಯ ತಿಳಿದಂತೆ ಅದೇ ಬಾಣದಿಂದ ತಿವಿದುಕೊಡು ದಡ್ಡಿಸೂರನಾಯಕ ಮರಣ ಹೊಂದಿದನೆಂದು (ಇನ್ನೊಂದು ಮೂಲದ ಪ್ರಕಾರ ಈ ನಾಯಕ ಓಬವ್ವನ ಮಗುವನ್ನು ಸಾಕುತ್ತಾನೆಂದು) ಹೇಳಲಾಗುತ್ತದೆ. ಆಗ ಅವಳು ಘಟ್ಟಪರ್ತಿ[2] ಚಿಕ್ಕಸೀರೆ ಕಟ್ಟದೆ ಹೊದೆಮುರಮಲ (ಮಿರಮಿರ) ಕ್ಯಾದಿಗ ಮುಡಿಯದೆ ಹೋದೆ' ಎನ್ನುತ್ತಾಳೆ. ಪ್ರೇಮ ವಂಚಿತವಾದ ವಿರಹವೇದನೆಯಿಂದ ಅವಳು ಮರಣವನ್ನಪ್ಪುವಳು. ಆಕೆ ಮಡಿದ ಸ್ಥಳಕ್ಕೆ ಲಂಜಿಗುಡ್ಡ ಕಣಿವೆ ಎಂದು ಕರೆಯುತ್ತಾರೆ.[3]

**ಗಾಜನಾಯಕನ ಅವಸಾನ**

ಇವನಿಗೆ ತೆಲುಗಿನಲ್ಲಿ ಗಾಜನಾಯಕುಡು ಎನ್ನುತ್ತಾರೆ. ಪ್ರತಿವ್ಯಕ್ತಿನಾಮವನ್ನು ವಿಚಾರ ಮಾಡುವಾಗ ಕೊನೆಯಲ್ಲಿ 'ಡು' ಅಥವಾ 'ಲು' ಎಂಬ ಏಕವಚನ ಪ್ರತ್ಯಯ ಅಥವಾ ಬಹುವಚನ ಪ್ರತ್ಯಯವನ್ನು ಸೇರಿಸುವುದು ವಾಡಿಕೆ. ಗಾಜನಾಯಕನ ಆಳ್ವಿಕೆಯ ಪ್ರದೇಶ ಗುಡ್ಡ – ಬೆಟ್ಟ ಅರಣ್ಯದಿಂದ ಕೂಡಿತ್ತು. ಸುಮಾರು ೧೮ನೇ ಶತಮಾನಕ್ಕೆ ಇವನು ಸೇರಿದವನೆಂದು ಊಹಿಸಬಹುದು. ಸ್ಥಳೀಯರು ಟಿಪ್ಪುಸುಲ್ತಾನ್‌ನ ವಿರುದ್ಧ ಹೋರಾಡಿ ಮಡಿದ ಸಾಮಂತ ದೊರೆ ಅಥವಾ ಸೈನಿಕ ಅಧಿಕಾರಿಯಾಗಿದ್ದನೆಂದು ಹೇಳುತ್ತಾರೆ. ಇಂದಿಗೂ ಈ ಗ್ರಾಮದ ಪಕ್ಕ ಅಡಗುಪ್ಪ, ಊರುಕೊಂಡ (ಊರಿಗುಡ್ಡಮು) ಹತ್ತಿರ ಮುದ್ದುಗುಂಡು ತಯಾರಿಸುವ ಘಟಕ, ಯುದ್ಧದ ಆಯುಧಗಳು ಇತರ ಸಲಕರಣೆಗಳನ್ನು ಕಂದಕದಲ್ಲಿಟ್ಟಿರುವುದನ್ನು ನೋಡಬಹುದು. ಇವನು ವಿರೋಧಿ ಸೈನಿಕರೊಡನೆ ಹೋರಾಡಿ ಮಡಿದವನಾಗಿದ್ದು, ರಾಯದುರ್ಗ, ಮೊಳಕಾಲ್ಮೂರು ಮತ್ತು ಚಿತ್ರದುರ್ಗ ಪಾಳೆಯಗಾರರಿಗೆ ಒಬ್ಬ ಸಾಮಂತ ರಾಜನಾಗಿದ್ದನೆಂದು ತಿಳಿಸುತ್ತಾರೆ.

**ಸಮಾಧಿ**

ಮಡಿದ ಗಾಜನಾಯನನ್ನು ಗಲಗಲ್ಲು ಗ್ರಾಮದ ಊರುಬಾಗಿಲಹತ್ತಿರ ಸಮಾಧಿ ಮಾಡಲಾಗಿದೆ. ಗ್ರಾಮದ ಪೂರ್ವಭಾಗಕ್ಕೆ ಊರಿನ ಹೆಬ್ಬಾಗಿಲಿದ್ದು, ಊರಿನ 'ಬುಡ್ಡೆಕಲ್ಲು' ಇತ್ಯಾದಿ ಅವಶೇಷಗಳು ದಕ್ಷಿಣ ದಿಕ್ಕಿಗಿವೆ. ಇದರ ಹಿಂದೆ ಗ್ರಾಮದೇವತೆಗಳ ಗುಡಿಗಳಿವೆ. ಇವೆಲ್ಲವುಗಳ ಪೈಕಿ ಐತಿಹಾಸಿಕವಾಗಿ ಕಾಣುವುದು ಗಾಜನಾಯಕನ ಸಮಾಧಿ ಮತ್ತು ವೀರಗಲ್ಲು ಮಾತ್ರ.

ಸ್ಥಳೀಯ ಕಣಶಿಲೆಯಿಂದ ಕಟ್ಟೆಯನ್ನು ಕಟ್ಟಿ, ದೊಡ್ಡಗಾತ್ರದ ಬಂಡೆಗಳಿಂದ ಗುಡಿಯನ್ನು ನಿರ್ಮಿಸಿದ್ದಾರೆ. ೩ ಅಡಿ ಎತ್ತರದ ಕಲ್ಲಿನ ಚಪ್ಪಡಿಯ ಮೇಲೆ ೩ ಭಾಗದ ಬಂಡೆಗಳಲ್ಲಿ ೩ ವಿಧವಾದ ಕಥಾಚಿತ್ರವನ್ನು ಕೆತ್ತಲಾಗಿದೆ.

೧. ಒಂದನೇ ವೀರಗಲ್ಲಿನ ದೃಶ್ಯದಲ್ಲಿ ಯೋಧ ಬಲಗೈಯಲ್ಲಿ ಭರ್ಜಿ ಹಿಡಿದು ಎಡಗೈಯಿಂದ ಅಲಂಕೃತವಾದ ಕುದುರೆ ಜೇನು ಹಿಡಿದು ನಿಂತಿದ್ದಾನೆ.

೨. ಗುಡಿಯ ದ್ವಾರದ (ಭವಾವಳಿಯಂತೆ) ಕೆಳಗೆ ವೀರಕತ್ತಿ, ಗುರಾಣಿ ಹಿಡಿದು ಆತನ ಪತ್ನಿಸಮೇತ ಕೈಯಲ್ಲಿ ಕಿರಿದಾದ ಆಯುಧವಿದೆ.

೩. ಓರ್ವ ಮಹಿಳೆ (ಯೋಧನ ಪತ್ನಿ) ಕೈಯಲ್ಲಿ ಪಾಣಿಬಟ್ಲನ್ನು ಹಿಡಿದಿದ್ದಾಳೆ. ಅವಳ ಎದುರಿಗೆ ನಂದಿವಿಗ್ರಹ ಕೆತ್ತಲಾಗಿದೆ.

ಮತ್ತೊಂದು ವೀರಗಲ್ಲಿನಲ್ಲಿ ಯೋಧನಿಂತಿದ್ದು, ಕೈಯಲ್ಲಿ ಗಿಂಡಿಯಿದೆ. ಕಠಾರಿ, ಕತ್ತಿ, ಬಾಕು ಎಡಗೈಯಲ್ಲಿವೆ. ಪಕ್ಕದಲ್ಲಿ ಪತ್ನಿ ಕೈಮುಗಿದು ನಿಂತಿದ್ದಾಳೆ. ಕೆಳಗಡೆ ಕುದುರೆಯಿದೆ. ಕುದುರೆಕಾಳಗ ಅಥವಾ ಕುದುರೆ ರಕ್ಷಣೆಗಲ್ಲದೆ, ಸ್ತ್ರೀಯ ಮಾನಪಮಾನ ಕಾಪಾಡಲು ವೀರ ಹೋರಾಡಿ

ಮಡಿದಂತಿದೆ. ಇದು ಗಾಜನಾಯಕನ ಸಮಾಧಿಕಟ್ಟೆಯ ಬಳಿ ಇರುವುದರಿಂದ ಅವನಿಗೆ ಮೇಲಿನ ಪಾಠ ಅನ್ವಯಿಸುತ್ತದೆ. ನಾಯಕ ಜನಾಂಗದ ಹಚ್ಚೆವಳ್ಳೆಯ ಬೆಡಗಿನವರು ಇವನನ್ನು ಪೂಜಿಸುತ್ತಾರೆ.

ಗಾಜನಾಯಕನ ಸಮಾಧಿ ಸಮೀಪದಲ್ಲಿ ಆಂಜನೇಯಸ್ವಾಮಿ ದೇವಾಲಯವಿದೆ. ಇಲ್ಲಿನ ಒಂದನೇ ಶಾಸನದ ಪಾಠ ಹೀಗಿದೆ.

**ಶ್ರೀರಾಮುಲು**
**ಶ್ರೀಮುಖನಾಮಸ**
**ಮ್ವಾತ್ಸರ ಪುಷ್ಯ ಶು ||**
**೧೦ ಲು ನಾಟ (ಚ? ಪಿ) ತಿ**
**ಅಮರಾವತಿ ಅನುಮಂತಪ್ಪ ಅತಡು**
**ಳಿನ ಮಂಚುಂಚಿ**
**ತಿಂಮಂಪ ಯಿಡು ಮುಗ್ಗುರು**
**ಸಂಪಾದಿಂಚಿನ**
**ಪಾದರ್ತಂಖ ಮಶದ ಶಿಗುಡಿ**
**ಕಟಿಂಚಿ ವುನ್ನಾಮು (ಲಿಪಿ: ಕನ್ನಡ, ಭಾಷೆ – ತೆಲುಗು)**

ತಿಮ್ಮಪ್ಪ ದೇವಸ್ಥಾನದ ಬಳಿಯಿರುವ ಈ ಶಾಸನದಲ್ಲಿ ‘ಅಮರಾವತಿ’ ಹನುಮಂತಪ್ಪ ಇದನ್ನು ನಿರ್ಮಾಣ ಮಾಡಿದನೆಂದು ತಿಳಿದುಬರುತ್ತದೆ. ಇದೇ ದೇವಾಲಯದ ಹತ್ತಿರ ಇತ್ತೀಚಿನ ಶಾಸನವೊಂದು ಇದೆ. ಕೋತಿ ಸತ್ತ ಕಾರಣ ಭಕ್ತರು ೧೧.೩.೧೯೬೩ ಎಂದು ಕೋತಿ ಚಿತ್ರವನ್ನು ಬರೆಸಿ ಶಾಸನ ಹಾಕಿಸಿದ್ದಾರೆ. ಈ ಎಲ್ಲಾ ಲಕ್ಷಣಗಳನ್ನು ನೋಡುತ್ತಿದ್ದರೆ ಈ ಭಾಗದಲ್ಲಿ ಪ್ರಾಣಿ ಹಿಂಸೆ ನಡೆದುದರ ಬಗ್ಗೆ ಅನುಮಾನವುಂಟು. ಇಲ್ಲಿನ ನಾಯಕರು ಈ ಎಲ್ಲಾ ದೇವತೆಗಳನ್ನು ಪೂಜಿಸುತ್ತಾರೆ.

ಒಟ್ಟಾರೆ ಗಾಜನಾಯಕನು ಇಂದು ಒಬ್ಬ ದೇವರಾಗಿ ಬೇಡಜನಾಂಗದಲ್ಲಿ ಪೂಜಾರ್ಹನಾಗಿರುವನು. ವರ್ಷಕ್ಕೆ ಅನೇಕ ಹಬ್ಬ, ಜಾತ್ರೆಗಳು ಜರುಗುತ್ತವೆ. ಕೂಡ್ಲಿಗಿ ತಾಲೂಕಿನ ಚಿರತಗುಂಡ ಗ್ರಾಮದ ಗಾಜನಾಯಕನರೋರು ಇದರ ಭಕ್ತರು ಮತ್ತು ಪೂಜಾರಿಗಳು.

---

[1] ದೇವಮ್ಮನ ಪೂಜಾರಿ ಈರಣ್ಣ, ಹೊನ್ನೂರಪ್ಪ, ತಲಾಡಿ ಪೆನ್ನಜ್ಜ ಮೊದಲಾದ ನಾಯಕ ಜನಾಂಗದ ಮುಖಂಡರನ್ನು ಗಲಗಲ್ಲನಲ್ಲಿ ಭೇಟಿಮಾಡಿದಾಗ ಕೆಲಸಂಗತಿಗಳು ತಿಳಿದುಬಂದವು. ಮೂಲ ಆಧಾರಗಳು, ದಾಖಲೆ ಗೌರಸಮುದ್ರದ ಕಿಲಾರಿ ಹತ್ತಿರ ಮುತ್ತುಗೊಲ್ಲಹಳ್ಳಿ ಗುಡ್ಲುತಿಪ್ಪಯ್ಯ, ಕುಮಾರ ಮತ್ತು ಕೃಷ್ಣಪ್ಪನವರ ಬಳಿಯಿವೆ.

[2] ಘಟ್ಟಪರ್ತಿ ಚಳ್ಳಕೆರೆ ತಾಲೂಕಿನ ಒಂದು ಗ್ರಾಮ, ಬಹುಶಃ ಗಾಜನಾಯಕನ ಹೆಂಡತಿಯ ತವರೂರು ಇರಬೇಕು. ಅವರಿಬ್ಬರು ಮರಣಹೊಂದಿದ ಸ್ಥಳವೇ ಇಂದಿನ ಹಿರೇಹಳ್ಳಿ ಪರಿಸರದಲ್ಲಿ. ಅಲ್ಲಿ ದಡ್ಡಿಸೂರನಾಯಕನ ದೇವಾಲಯ, ನೆಲಮಾಳಿಗೆ, ಕೋಟೆ ಇತರ ಅವಶೇಷಗಳಿವೆ.

[3] ತುಮಡ್ಲು ಪಾಲಯ್ಯ, ೭೫, ನಾಯಕ, ಪದ್ನಿದೇವರಹಟ್ಟಿ (ಮ್ಯಾಸಹಟ್ಟಿ) ಮೊಳಕಾಲ್ಮೂರು ತಾ|| ಇವರ ಅಭಿಪ್ರಾಯದಂತೆ ಕೋನಸಾಗರದ ಕೆಳಗಡೆ ಅಡವಿಯಲ್ಲಿದೆ ಈ ಲಂಜಿಗುಡ್ಡ ಕಣಿವೆ, ಲಂಜಿ ಎಂದರೆ ತೆಲುಗಿನಲ್ಲಿ ಸೂಳೆ ನಡೆದ ತಪ್ಪಿದವಳು ಎಂದರ್ಥ.

# ೬. ಚಿತ್ರದುರ್ಗ ಜಿಲ್ಲೆಯ ಬುಡಕಟ್ಟು ವೀರರು (8)

<u>೬. ಒದಡ್ಡಿಸೂರನಾಯಕ</u>

**ಹಿನ್ನೆಲೆ**

ಮ್ಯಾಸಬೇಡರ ಮಲ್ಲಿನಾಯಕನ ಗೋತ್ರದ ಕೊರ್ಲಮಲ್ಲಿ (ಕೊಂಡ) ರಾಜನಿಗೆ ರಪ್ಪಲಸೂರಿ ಎಂಬ ಪುತ್ರನಿದ್ದ. ಪಶುಪಾಲಕನಾಗಿದ್ದ ರಪ್ಪಲಸೂರಿಗೆ ಕ್ರಮೇಣ ದಡ್ಡಿಸೂರನಾಯಕ, ದಡ್ಡಿ ಕಾಮನಾಯಕ ಮತ್ತು ದಡ್ಡಿಯರಬಲ್ಲನಾಯಕ ಎಂಬ ಮೂರು ಜನ ಪುತ್ರರು ಜನಿಸುತ್ತಾರೆ.

ಹಿರಿಯವನಾದ ದಡ್ಡಿಸೂರನಾಯಕ ಹಿರಿಯರಂತೆ ಪಶುಪಾಲನೆಯನ್ನು ಜೀವನ ಸಾಗಿಸುತ್ತಿದ್ದ. ಹೀಗೆ ಇರುವಾಗ ಗಲಗಂಟಿ ಗಾಜ (ದಿ) ನಾಯಕನ ಪತ್ನಿಯನ್ನು ಪ್ರೀತಿಸುತ್ತಾನೆ. ಅವಳ ಹೆಸರು ಓಬವ್ವ. ಪ್ರತಿರಾತ್ರಿ ಗಂಡನನ್ನು ಮಲಗಿಸಿ ದಡ್ಡಿ ಸೂರನಾಯಕನ ಹತ್ತಿರ ಹೋಗಿ ಬರುತ್ತಿದ್ದಳು. ಹೀಗೆ ಅನೇಕ ದಿನಗಳವರೆಗೆ ನಡೆಯಿತು. ಕೊನೆಗೆ ಗರ್ಭಿಣಿಯಾದರೂ ತನ್ನ ಪ್ರಿಯತಮನ ಆಲಿಂಗನವನ್ನು ಕೈಬಿಡಲಿಲ್ಲ. ಅಮವಾಸೆಯ ಕತ್ತಲಲ್ಲಿ ಮಳೆ ಸುರಿಯುತ್ತಿತ್ತು. ಅಂಥ ವೇಳೆಯಲ್ಲಿ ಕಪ್ಪು ಸೀರೆ ಧರಿಸಿ, ಕಂಬಳಿಹೊದ್ದು ದಡ್ಡಿ ಸೂರನಾಯಕನ ರೊಪ್ಪಕ್ಕೆ ಬರುತ್ತಾಳೆ.

ಮಲಗಿರುವ ದಡ್ಡಿಸೂರನಾಯಕ ಯಾವುದೋ ಕಾಡುಪ್ರಾಣಿ ಕರಡಿ ಗೋವುಗಳ ರೊಪ್ಪಕ್ಕೆ ಧಾಳಿ ಮಾಡುತ್ತದೆಂದು ತನ್ನ ಬಾಣದಿಂದ ಹೊಡೆಯುತ್ತಾನೆ. ತುಂಬು ಗರ್ಭಿಣಿಯಾದ ಓಬವ್ವ ಕಿರುಚುತ್ತಾ ನೆಲಕ್ಕೆ ಬಿದ್ದಳು. ಬಿದ್ದ ಪರಿಣಾಮ ಗರ್ಭದಿಂದ ಮಗು ಹೊರಬರುತ್ತದೆ. ನಾಯಕ ಬಂದು ನೋಡಲಾಗಿ ಓಬವ್ವ ಮರಣಶಯ್ಯೆಯಲ್ಲಿದ್ದಳು. ಅವಳು ಮಡಿದ ನಂತರ ಅತೀವ ದುಃಖಿತನಾದ ನಾಯಕ ಆಕೆಯನ್ನು ತನ್ನೊಂದಿಗಿನ ಕರುಗಳೊಂದಿಗೆ ಸಾಕತೊಡಗಿದ. ಇನ್ನೊಂದು ಕಥೆಯಂತೆ ಅವಳ ಸಾವಿನೊಂದಿಗೆ ನಾಯಕನು ದುರಂತಕ್ಕೆ ಸಿಕ್ಕಿ ಸಾಯುತ್ತಾನೆ.

ಇತ್ತ ಗಲಗಂಟಿ ಗಾಜ (ದಿ) ನಾಯಕನು ನಿದ್ದೆಯಿಂದ ಎಚ್ಚೆತ್ತು ನೋಡಲಾಗಿ, ತನ್ನ ಹೆಂಡತಿ ಮನೆಯಲ್ಲಿ ಇರಲಿಲ್ಲವೆನ್ನುವುದು ತಿಳಿದು ವ್ಯಥೆ ಪಡುತ್ತಿದ್ದ. ತನ್ನ ಪರಿವಾರದವರು ಬಂದು ದಡ್ಡಿಸೂರನಾಯಕನ ರೊಪ್ಪದ ಬಳಿ ಮರಣ ಹೊಂದಿದ್ದಾಳೆಂದು ತಿಳಿಸುತ್ತಾರೆ. ತನ್ನ ಎಲ್ಲಾ ಗುಂಪಿನೊಂದಿಗೆ ಇವನು ಮೇಕೆಬಂಡೆ ಬಳಿ ಬಂದು ಮ್ಯಾಸಮಂಡಲದ ಮೇಲೆ ಕಾಳಗ ಮಾಡುತ್ತಾನೆ. ದಡ್ಡಿಸೂರನಾಯಕನಿಗೂ ಮತ್ತು ಗಲಗಂಟಿ ಗಾಜ (ದಿ) ನಾಯಕನಿಗೂ ಘೋರ ಯುದ್ಧವೇ ಜರುಗುತ್ತದೆ. ಆಗ ಬಿಲ್ಲನೋಡು ಎಂಬುವನು ಗಾಜನಾಯಕನ ಕುದುರೆಯ ಕಣ್ಣುಗುಡ್ಡೆಗಳು ಕೆಳಗೆ ಬೀಳುವಂತೆ ಬಿಲ್ಲಿನಿಂದ ಹೊಡೆದು, ಗಾಜ (ದಿ) ಕುದುರೆಯ ಕಣ್ಣುಗುಡ್ಡೆಗಳು ಕೆಳಗೆ ಬೀಳುವಂತೆ ಬಿಲ್ಲಿನಿಂದ ಹೊಡೆದು, ಗಾಜ (ದಿ) ನಾಯಕನ ದಂಡನ್ನು ಹೆದರಿಸಿದನು. ‘ಬಿಲ್ಲ’ ಎಂಬುವನು ಈ ಯುದ್ಧದಲ್ಲಿಯ ಗಲಗಂಟೆ ಗಾಜ (ದಿ) ನಾಯಕನನ್ನು ಬಿಲ್ವಿದ್ಯೆಯಿಂದ ಸೋಲಿಸಿದ್ದಕ್ಕೆ ಹಿರಿಯರಾದ ಯರಮಂಚಿನಾಯಕ ಆನಂದಪಟ್ಟನು. ಆ ಬಿಲ್ಲಿನವನ ಬಿಲ್ವಿದ್ಯೆಯ ಸಾಹಸಕ್ಕೆ ಮೆಚ್ಚಿ ವಿಷ್ಣು ಸಾಲಿಗ್ರಾಮವನ್ನು ಬಹುಮಾನವಾಗಿ ಕೊಡುತ್ತಾರೆ. ಗಾಜ (ದಿ) ನಾಯಕ ಮಡದಿಯನ್ನು ಕಳೆದುಕೊಂಡು ಹತಾಶನಾದಲ್ಲದೆ, ಅವನಿಂದ ಸೋತು ಶರಣಾಗತನಾದದು ದುರಂತದ ಚಿತ್ರಣ ಮನಮಿಡಿಯುವಂತಿದೆ. ಇವನು ಹೆಂಡತಿಯ ಶವವನ್ನು ಅಲ್ಲಿಯೇ ಸಂಸ್ಕಾರ ಮಾಡಿದ. ಆ ಸಮಾಧಿ ಸ್ಥಳಕ್ಕೆ ‘ಲಂಜಿಗುಂಟೆ ಕಣಿವೆ’ ಎಂದು ಹೆಸರಿಟ್ಟ (ಸೂಳೆಯ ಕಣಿವೆ).

**ಹಿರೇಹಳ್ಳಿ ಸ್ಥಾಪನೆ**

ದಡ್ಡಿ ಎಂದರೆ ಹಟ್ಟಿ. ಹಟ್ಟಿಯೊಂದಕ್ಕೆ ನಾಯಕನಾಗಿದ್ದ ದಡ್ಡಿಸೂರನಾಯಕನು ಈ ಪ್ರದೇಶವನ್ನೆಲ್ಲಾ ಆಳುತ್ತಿದ್ದ. ಈ ಗ್ರಾಮ ಸ್ಥಾಪಿಸುವ ಮೊದಲು ದಿದ್ದಿಲಾರುಹಳ್ಳಿ (ರುದ್ರಮ್ಮನಹಳ್ಳಿ) ಹತ್ತಿರ ಯರಮಂಚಿನಾಯಕ, ಗಗ್ಗರಿದಾಸರು ತಮ್ಮ ಕಂಪಳ ಸಮೇತ ಬಂದು, ಗೊಪ್ಪಗೇತಪಲ್ಲಿಗೆ ಇಳಿದುಕೊಂಡರು. ದೊಡ್ಡ ಗಾತ್ರದ ಮಲ್ಲಿಗೆ ಹೂತಂದು, ಉಗ್ಗಿಹೊಯ್ದು ಪೆದ್ದಪಲ್ಲಿ (ಹಿರೇಹಳ್ಳಿ) ಎಂದು ನಾಮಕರಣ ಮಾಡಿದರು. ಆ ಹಿರೇಹಳ್ಳಿ ಚಳ್ಳಕೆರೆ – ಬಳ್ಳಾರಿ ರಸ್ತೆಯ ಮಧ್ಯದಲ್ಲಿ (ತಳಕು) ಬರುತ್ತದೆ.

[1]
ಈ ಹಿರೇಹಳ್ಳಿಯಲ್ಲಿ ಸೂರಿನಂದನ ಅಲಗನ್ನು (ಕತ್ತಿ) ಪ್ರತಿಷ್ಠಾಪಿಸಿ ದಡ್ಡಿ ಸೂರನಾಕ ದೇವರೆಂದು ಕರೆದುಕೊಂಡರು. ಇದಕ್ಕೆ ದೊಡ್ಡಸೂರಯ್ಯ ಎಂಬುವರನ್ನು ನೇಮಿಸಿ ಪೂಜೆಗಳನ್ನು ಸಲ್ಲಿಸುತ್ತಿದ್ದರು.


ದಡ್ಡಿ ಸೂರನಯಕನ ಐಕ್ಯಸ್ಥಳ ದೇವರಗುಡಿ, ಹಿರೇಹಳ್ಳಿ

ದಡ್ಡಿ ಸೂರಯ್ಯನ ಪೂಜಾರಿಗಳಿಗೆ ತಲೆಬೋಳಿಸಿ ಮಂಡೆಯನ್ನು ಸೂರ್ಯನಿಗೆ ಅರ್ಪಿಸಿ, ದೇವರಿಗೆ ಭಾದ್ಯರಾಗಿ: ಪೂಜಾರಿ ದೊಡ್ಡ ಸೂರನಾಯಕ, ಮೊಲಕೇತಿ ಎದ್ದುಲವಾಡು, ಗುಡ್ಡಮೆದ್ದುಲವಾಡು, ನಲ್ಲದಮ್ಮ ನಾಯಕ ನೋಡು, ನಲ್ಲ ಬಾಪನವೋಡು ಈ ೫ ಮಂದಿಯನ್ನು ನೇಮಿಸಿದರು. ಇದಕ್ಕೆ ದಳಪತಿಯಾಗಿ ಪೆದ್ದಪಲ್ಲಿ ಮಾಸಿಲುವಾಡು ಎಂಬುವರನ್ನು ನೇಮಿಸಿದರು. ಶಿಲಾಶಾಸನಗಳು ಕೆತ್ತಿಸಿರುವುದು ಕಂಡುಬಂದಿಲ್ಲ. ಹಸ್ತಪ್ರತಿಗಳು ದೊರೆಯುವುದನ್ನು ಸಂಗ್ರಹಿಸಲಾಗಿದೆ. ಭಕ್ತರು ಮತ್ತು ಪೂಜಾರಿಗಳ ಜಗಳದಿಂದ ಈ ದೇವರ ಹಬ್ಬ – ಜಾತ್ರೆಗಳನ್ನು ಸುಮಾರು ವರ್ಷಗಳಿಂದ ನಿಲ್ಲಿಸಲಾಗಿದೆ.

---

[1] ಈ ಹಿರೇಹಳ್ಳಿ ಸಮೀಪ ರುದ್ರಮ್ಮನಹಳ್ಳಿ ಎಂಬ ಗ್ರಾಮವಿದೆ. ಇಲ್ಲಿರುವರು ಬೇಡರು ಮಾತ್ರ. ದಿದ್ದಲಾರು ಬೆಡಗಿನವರು ನಲುಜೆರುವಯ್ಯ ಎಂಬ ವೀರನ ಹೆಸರಿನ ದೇವರನ್ನು ಆರಾಧಿಸುವರು. ದೇವಾಲಯವಿದ್ದು ಇವನ ಅನುಯಾಯಿಗಳು ಚಿತ್ರದುರ್ಗ ಬಳ್ಳಾರಿ ಜಿಲ್ಲೆಗಳಲ್ಲಿಯೂ ಇದ್ದಾರೆ (೧೧.೧೧.೨೦೦೧ರಂದು ಕ್ಷೇತ್ರಕಾರ್ಯದಲ್ಲಿ ಗಿರೀಶ್, ಓಬಯ್ಯ ಮೊದಲಾದವರು ಸಹಕರಿಸಿದ್ದಾರೆ – ಕೃತಜ್ಞತೆಗಳು

# ೬. ಚಿತ್ರದುರ್ಗ ಜಿಲ್ಲೆಯ ಬುಡಕಟ್ಟು ವೀರರು (9)

<u>೬.೮ನಾಯಕನಹಟ್ಟಿತಿಪ್ಪೇಸ್ವಾಮಿ</u>

**ಹಿನ್ನೆಲೆ :**

ನಾಯಕನಹಟ್ಟಿ ತಿಪ್ಪೇಸ್ವಾಮಿ ಎಂಬ ಪ್ರಸಿದ್ಧ ಪವಾಡಪುರುಷ, ಸಂತ, ದೇವತಾ ಪುರುಷ, ನಾಯಕನಹಟ್ಟಿ ಎಂಬ ಸ್ಥಳದಲ್ಲಿ ಜೀವೈಕ್ಯ ಸಮಾಧಿಯಾಗಿರುವನು. ಮ್ಯಾಸಬೇಡರು ಈತನನ್ನು ತಮ್ಮ ಮೂಲಪುರುಷನೆಂದು, ಮನೆದೇವರೆಂದು ಆರಾಧಿಸುವರು. ಈ ತಿಪ್ಪೇಸ್ವಾಮಿ ಪೂರ್ವಾಶ್ರಮದಲ್ಲಿ ಪಶುಪಾಲಕನಾಗಿದ್ದ. ತನ್ನ ವೀರತ್ವ ಮೆರೆದು ಸಾಹಸವೆಗುವುದರ ಮೂಲಕ ಜನಮನ್ನಣೆಗೆ ಪಾತ್ರನಾಗಿದ್ದ. ಹೀಗೆ ವೀರನೆನಿಸಿಕೊಳ್ಳುವ ಹಂತದಲ್ಲಿ ಅಮೋಘ ಸಾಧನೆ, ದುರಂತಗಳಿಂದ ಪರಿವರ್ತನೆಗೊಂಡು ವೈರಾಗ್ಯ ತಾಳಿದಂತಿದೆ. ಇವನು ಆಂಧ್ರಮೂಲದವನಾಗಿದ್ದು, ಹೆಸರು ತಿಪ್ಪಯ್ಯನೆಂಬುದು ತೆಲುಗು ಭಾಷೆಯಿಂದ ಬಂದಿದೆ. ಕನ್ನಡದಲ್ಲಿ ಈ ಪದದ ಬಳಕೆ ಮಧ್ಯಕಾಲೀನ ಸಂದರ್ಭದಲ್ಲಿ ಆಗಿರಬೇಕು. ಇವನು ಬಂದಿದ್ದ ಮಾರ್ಗದಲ್ಲಿ ಈತನ ಹೆಸರಿನ ಮೇಲೆ ಗ್ರಾಮಗಳು ಉದಯವಾದವು. ರಾಯದುರ್ಗ ಮತ್ತು ಮೊಳಕಾಲ್ಮೂರುಗಳ ನಡುವಿನ ತಿಪ್ಪೇರಯ್ಯನಹಟ್ಟಿ, ಚಿನ್ನಹಗರಿ ನದಿ ದಂಡೆಯ ಮೇಲಿರುವ ತಿಪ್ಪೇಹಳ್ಳಿ ಹೀಗೆ ಕೆಲವನ್ನು ಉದಾಹರಿಸಬಹುದು.

ತಿಪ್ಪೇಸ್ವಾಮಿ ನೆಲೆನಿಂತ ಪ್ರದೇಶ ಬೆಟ್ಟಗುಡ್ಡ, ಕಾಡಿನಿಂದ ಆವೃತವಾಗಿತ್ತ. ಈ ಪರಿಸರದಲ್ಲಿ ಬುಡಕಟ್ಟು ಜನರು ಪಶುಪಾಲನೆಗೆ ತೊಡಗಿದ್ದು, ಹಟ್ಟಿಗಳನ್ನು ಕಟ್ಟಿಕೊಂಡು ನೆಲೆಗೊಂಡಿದ್ದು ಗಮನಾರ್ಹ. ಹೀಗೆ ಆರ್ಥಿಕ, ಸಾಮಾಜಿಕ, ಅಭಿವೃದ್ಧಿಯಾಗುತ್ತಾ ಹೋದಂತೆ ರಾಜಕೀಯವಾಗಿ ಆಳುವ ಪ್ರಕ್ರಿಯೆ ಉಗಮಗೊಂಡಿತು. ಈತನ ಸಮಕಾಲೀನ ಸಂದರ್ಭದಲ್ಲಿ ಕುದಾಪುರ ಬೋರೆದೇವರು, ಹಿರೇಹಳ್ಳಿ ದಡ್ಡಿಸೂರನಾಯಕ, ನನ್ನಿವಾಳ ಪ್ರದೇಶದಲ್ಲಿ ಪಾಪನಾಯಕ, ಬೊಮ್ಮಗೊಂಡನಕೆರೆ, ಮುತ್ತಿಗಾರಹಳ್ಳಿ ಪ್ರದೇಶದಲ್ಲಿ ಕೊಳಗಲುಬೊಮ್ಮ (ಕೊಡಗು) ಮೊದಲಾದ ಪ್ರದೇಶಗಳಲ್ಲಿ ಸ್ಥಳೀಯ ನಾಯಕ ವೀರರು ಪ್ರಭುತ್ವ ಹೊಂದಿದ್ದರು. ಇಂಥ ಸಂದರ್ಭದಲ್ಲಿ ತಿಪ್ಪೇಸ್ವಾಮಿ ಲೋಕಕಲ್ಯಾಣಕ್ಕಾಗಿ ಉದಯಿಸಿಬಂದನೆಂದು ಹೇಳಲಾಗುವುದು.

**ತಿಪ್ಪಯ್ಯ ಯಾರು?**

ದಲಿತರ ಉದ್ಧಾರಕ್ಕೆ ಶ್ರಮಿಸಿದ ಮಹಾಚೈತನ್ಯಶಾಲಿ ಈ ತಿಪ್ಪೇಸ್ವಾಮಿ. ದೀನ – ದಲಿತರ ಬದುಕಿಗೆ ಆಶಾಕಿರಣವಾಗಿ ತನ್ನ ಬದುಕನ್ನು ಮುಡುಪಾಗಿಟ್ಟುಕೊಂಡವನು. ಇವನ ಜೀವನ ಚರಿತ್ರೆ ಅಸ್ಪಷ್ಟವಾಗಿ ತಿಳಿದುಬರುವುದಲ್ಲದೆ, ಜನಪದರು ತಿಳಿಸುವಂಥ ಮಾಹಿತಿಯಿಂದ ಇವನನ್ನು ಮೇರುವ್ಯಕ್ತಿಯನ್ನಾಗಿ ಚಿತ್ರಿಸಬಹುದಾಗಿದೆ. ತೆಲುಗಿನಲ್ಲಿ ಆಕಳು ಕಾಯುವವನಿಗೆ ಆವುಲಯ್ಯ, ಎತ್ತುಕಾಯುವವನಿಗೆ ಎಡ್ಲಯ್ಯ, ಕುರಿ – ಮೇಕೆ ಕಾಯುವವರಿಗೆ ಗೊರ್ಲಯ್ಯ – ಮ್ಯಾಕಲಯ್ಯ ಎನ್ನುವಂತೆ ಪಶುಗಳ ಮುಂದೆಯಲ್ಲಿ ಸಗಣಿಯಿಂದ ತಿಪ್ಪೆ ನಿರ್ಮಿಸಿ, ಅಡವಿ ಮತ್ತು ತುರುಮಂದೆಯಲ್ಲಿ ಸಗಣಿ ಕೂಡಿಹಾಕಿ ತಿಪ್ಪೆ ಮಾಡುವ ಕಾಯಕವನ್ನು ಏಕೆ ಮಾಡಿರಬಾರದು? ಈ ತಿಪ್ಪೇಸ್ವಾಮಿ. ಕನ್ನಡದಲ್ಲಿ ಇತ್ತೀಚಿನ ೨ – ೩ ಶತಮಾನಗಳಲ್ಲಿ ಈ ಹೆಸರಿನ ಬಳಕೆಯಿದೆ. ಬುಡಕಟ್ಟು ಸಮುದಾಯದವರಿಗೆ ವಲಸೆ ಪ್ರಕ್ರಿಯೆಯಲ್ಲಿ ಜಾತಿ – ಧರ್ಮಗಳಿಗಿಂತ ಬದುಕಿಗಾಗಿ ಸದಾ ಹೋರಾಡುವುದು ಮುಖ್ಯವಾಗಿತ್ತು. ಈ ಹಿನ್ನೆಲೆಯಲ್ಲಿ ದಾನಸಾಲಮ್ಮನ ವಂಶದ ಕುಡಿಯೊಂದಿಗೆ ತನ್ನ ವಂಶದ ಬಳ್ಳಿಯಲ್ಲಿ ಸೇರಿಸಿಕೊಳ್ಳುವ ತಿಪ್ಪೇಸ್ವಾಮಿ ಅಸಾಧಾರಣ ವ್ಯಕ್ತಿ ಎಂದು ಕರೆಸಿಕೊಳ್ಳುವುದು ಇವರಿಂದಲೇ. ಮ್ಯಾಸಬೇಡರ ಮೌಖಿಕ ಚರಿತ್ರೆಯಲ್ಲಿ ಈತನೊಬ್ಬ ವೀರನೂ, ಸಂತನೂ ಆಗಿದ್ದು ಕಂಡುಬರುತ್ತದೆ.

ಜಗತ್ತಿನ ಕಲ್ಯಾಣಕ್ಕಾಗಿ ಪಂಚಗಣಾಧೀಶ್ವರರಾಗಿ ಅವತರಿಸಿದ ಕೋಲುಶಾಂತಯ್ಯ ಹರಪನಹಳ್ಳಿಯ ಅರಸಿಕೆರೆಯಲ್ಲಿ ಜೀವಕ್ಯನಾಗಿದ್ದನು. ಮದ್ದಾನಸ್ವಾಮಿ ಮತ್ತು ಕೆಂಪಯ್ಯ ರಾಯದುಗ್ದಲ್ಲಿ ನೆಲೆಸಿ ಜ್ಞಾನೋಪದೇಶ ಕಾಯಕದಿಂದ ಬದುಕಿದ್ದರು. ಶ್ರೀ ಚನ್ನಬಸವೇಶ್ವರರು ಗುಬ್ಬಿಯಲ್ಲಿ ನೆಲೆಸಿ ಜೀವೈಕ್ಯರಾದರು. ಕೊಟ್ಟೂರು ಬಸವೇಶ್ವರ ಮತ್ತು ನಾಯಕನಹಟ್ಟಿ ತಿಪ್ಪೇಸ್ವಾಮಿಯವರು ನೆಲೆಸಿದ ಸ್ಥಳಗಳಲ್ಲಿಯೇ ಜೀವೈಕ್ಯರಾದರು. ಮಹಾತ್ಮರ ಮೂಲವನ್ನು ಹುಡುಕಬಾರದೆಂಬ ಮಾತಿನಂತೆ ಇವರನ್ನು ಪ್ರಶ್ನಿಸದೇ ಜನಪದವನ್ನು ಹೇಳಬಹುದಾಗಿದೆ.

**ಪ್ರದಕ್ಷಿಣೆ**

ತನ್ನ ಅನುಭವದ ಸೊಬಗನ್ನು ಜಗತ್ತಿಗೆ ತಿಳಿಸಲು ಪ್ರದಕ್ಷಿಣೆ ಕೈಗೊಂಡ. ಭೂಮಿ ಬಹುವಿಸ್ತಾರವಾದುದೆಂದು ತಿಳಿದು ತನಗೆ ಸೀಮಿತ ಗಡಿರೇಖೆಯಲ್ಲಿ ಸಂಚರಿಸಿದ. ಪ್ರತಿಯೊಬ್ಬ ಪಂಚಗಣಾಧೀಶ್ವರನಿಗಿರುವಂತೆ ತಿಪ್ಪೇರುದ್ರಸ್ವಾಮಿಗೂ ಗುರಿ – ಉದ್ದೇಶಗಳು ನೆಲೆಯೂರಿದ್ದವು. ಈ ತಿಪ್ಪೇರುದ್ರಯ್ಯ ಕೂಡ್ಲಿಗಿ ತಾಲ್ಲೂಕಿನ ಕುಪ್ಪಿನಕೆರೆ (ಚಿಪ್ಪಿಗೆರೆ) ಗ್ರಾಮದಲ್ಲಿ ವಾಸಿಸುತ್ತಾನೆ. ಇಲ್ಲಿನ ಆಂಜನೇಯ ದೇವಾಲಯದಲ್ಲಿ ನೆಲೆಸಿರುವಾಗ ಆ ಮಾರುತಿಲಿಂಗಕ್ಕೆ ಲಿಂಗಾಧಾರಣೆ ಮಾಡಿ ರಾಯದುರ್ಗಕ್ಕೆ ಬರುತ್ತಾನೆ. ಇದು ಆರಂಭಿಕ ಬದುಕನ್ನು ತಿಳಿಸುತ್ತದೆಯೇ ಹೊರತು ಇವನ ಮೂಲ ತಂದೆತಾಯಿಗಳ ಬಗ್ಗೆ ಬೆಳಕು ಚೆಲ್ಲುವುದಿಲ್ಲ. ರಾಯದುರ್ಗದಲ್ಲಿ ನೆಲೆಸಿರುವಾಗ ಕೆಂಪಯ್ಯಗೆ ಉಪದೇಶ ಮಾಡಲಾಯಿತು. ಹೀಗೆ ಇರುವಾಗ ಹಟ್ಟಿಯ ವ್ಯಾಪಾರಿ ಫಣಿಯಪ್ಪನು ರಾಯದುರ್ಗಕ್ಕೆ ಹೋದಾಗ ಈ ವ್ಯಕ್ತಿಯ ಪರಿಚಯವಾಗುತ್ತದೆ. ಫಣಿಯಪ್ಪನ ಗಾಢವಾದ ಗೆಳೆತನದೊಂದಿಗೆ ದಾರಿಸವೆಸುತ್ತಾ ಅರ್ಚಕಪುರಿ (ಪೂಜಾರಹಳ್ಳಿ) ಗ್ರಾಮದ ಚನ್ನಪಟ್ಟಣಕ್ಕೆ ಬಂದು ನೆಲಸಿದರು.

[1] ಸ್ಥಳೀಯ ಪಾಳೆಯಗಾರರ ನಿಯೋಜಿತ ಅಧಿಕಾರಿಯ ಕಿರುಕುಳದಿಂದ ಮತ್ತು ಜೀವನಾವಶ್ಯಕ ಸೌಲಭ್ಯಗಳು, ಯೋಗ್ಯವಲ್ಲದ ವಾತಾವರಣದಿಂದ, ಕುಟಿಲ ಭೋದೋಪಾಯದ ಜನರಿಂದ ಬೇಸತ್ತು ನಾಯಕನಹಟ್ಟಿಗೆ ದಕ್ಷಿಣಾಭಿಮುಖವಾಗಿ ಪ್ರಯಾಣಿಸಿದ. ಈತನ ಬರುವಿಕೆಗೆ ಫಣಿಯಪ್ಪನ ದಂಪತಿಗಳು ಸ್ವಾಗತಿಸಲು ತುದಿಗಾಲಲ್ಲಿ ನಿಂತಿದ್ಧರು. ಅವರ ಮನೆಗೆ ಬಂದು ಫನಿಯಪ್ಪ ಮತ್ತು ಆತನ ಪತ್ನಿ ಮಾಳಮ್ಮನಿಗೆ ಲೋಕಜ್ಞಾನದ ಬಗ್ಗೆ ವಿವರಿಸಿದನು. ಸನ್ಮಾರ್ಗ ಪ್ರಾಪ್ತಿಗೆ ಅಗತ್ಯವಾದ ಎಲ್ಲಾ ಸಂಗತಿಗಳನ್ನು ತಿಳಿಯುವುದು ಅಗತ್ಯವೆಂದು ಮನವರಿಕೆಮಾಡಿಕೊಟ್ಟನು. ಅರಿಷಡ್ವರ್ಗಗಳ ನಿಗ್ರಹ, ಅತಿಥಿಸತ್ಕಾರ ಮಾಡುವುದು, ಸತ್ಯ – ಧರ್ಮ ಪ್ರಾಮಾಣಿಕತೆಯಿಂದ ಜೀವಿಸುವನ್ನು ಬೋಧಿಸಿದ.

**ಪವಾಡ ಪುರುಷ**

ದಿನದಿಂದ ದಿನಕ್ಕೆ ತನ್ನ ಪವಾಡದ ಕ್ಷಿತಿಜವನ್ನು ಹೆಚ್ಚಿಸಿಕೊಂಡ ತಿಪ್ಪೇಸ್ವಾಮಿ ಸುತ್ತೆಲ್ಲಾ ಗಡ್ಡೆಗೆ (ಪ್ರದೇಶ) ಲೋಕಖ್ಯಾತಿ ಪಡೆದ. ತನ್ನ ದೈವಿಶಕ್ತಿಯಿಂದ ಅನೇಕ ಪವಾಡಗಳನ್ನು ಮಾಡಿತೋರಿಸಿ ಶ್ಲಾಘನೆ ಪಡೆದ. ನಿಡಗಲ್ಲು ದೊರೆಗೆ ಆಳುವ (ಆಡಳಿತ) ಬಗ್ಗೆ ಮಾರ್ಗದರ್ಶನ ಮತ್ತು ಸಂತಾನ ಆಶೀರ್ವಾದ ಕೊಟ್ಟರು. ಆ ನಾಗತಿಯು ಸ್ವಾಮಿಯ ಕೃಪೆಗೆ ಪಾತ್ರಳಾದಳು. ದೊರೆ ಕಾಟೇಮಲ್ಲನಾಕನು ತಿಪ್ಪೇಸ್ವಾಮಿಗಳ ಪವಾಡ ಕಂಡುಬೆರಗಾಗಿ ಅವರ ಇತಿಹಾಸವನ್ನು ಕೇಳಿ ತಿಳಿದುಕೊಂಡ.[2] ಮಲ್ಲಪ್ಪನಾಯಕನು ಹಟ್ಟಿಯ ಪಾಳೆಯಪಟ್ಟನ್ನು ಕಟ್ಟಲು ಇವರ ಆಶೀರ್ವಚನ ಪಡೆದನು. ಕೋನಸಾಗರದ ಸಮೀಪ ಬಿಳಿನೀರ ಚಿಲುಮೆಯಲ್ಲಿ ಗಂಗೆ ಉಕ್ಕಿಬಂತು (ಕೊಂಡ್ಲಹಳ್ಳಿ). ಬುತ್ತಿಯಲ್ಲಿ ಅಕ್ಷಯ ಪವಾಡ ತೋರಿಸಿದ್ದು, ಒಡ್ಡಳ್ಳಿಮಾರಮ್ಮನನ್ನು ನಿರ್ಗಮಿಸುವಂತೆ ಮಾಡಿದ್ದು, ಹಟ್ಟಿಮಲ್ಲಪ್ಪನಾಯಕನೊಡನೆ ಲೋಕಕಲ್ಯಾಣ ಕೆಲಸಗಳಲ್ಲಿ ಭಾಗಿಯಾಗಿದ್ದು, ಹಿರೇಕೆರೆ ನಿರ್ಮಾಣ, ಚಿಕ್ಕಕೆರೆ, ೫ ಗ್ರಾಮಗಳ ಸ್ಥಾಪನೆ (ಮಹದೇವಪುರ, ಗೌರಿಪುರ) ಫಣಿಯಪ್ಪನ ಸಂಸಾರ ಆನಂದಸಾಗರದಲ್ಲಿ ತೇಲಿಸಿದ್ದು, ಸತ್ತೆಮ್ಮ ಹಾಲು ಕರೆದದ್ದು, ಹರಿಜನರ ಗುಡಿಸಲಲ್ಲಿ ಶ್ರೀಗಳ ಶಿವಪೂಜೆ, ಮಹಿಮೆ – ಮಾಯೆಗಳ ಚಿತ್ರಣವನ್ನು ಜನಸಾಮಾನ್ಯರಿಗೆ ತೋರಿಸಿದ್ದು ಗಮನಾರ್ಹ.

ಅಪ್ಪಟ ಗ್ರಾಮೀಣ ಸೊಗಡಿನ ತಿಪ್ಪೇರುದ್ರಯ್ಯ ತನ್ನ ಪರಿಸರದ ಎಲ್ಲಾ ವ್ಯವಹಾಗಳನ್ನು ಬಲ್ಲವನಾಗಿದ್ದ. ಹೀಗೆ ಒಮ್ಮೆ ಫಣಿಯಪ್ಪನೊಂದಿಗೆ ಕಪಿಲೆ ಹೊಡೆಯುವುದು, ನೀರು ಕಟ್ಟುವುದು ಮಾಡುತ್ತಿದ್ದನು. ಕಪಿಲೆಬಾನಿಗೆ (ಚರ್ಮ) ಹರಿದಾಗ ಫಣಿಯಪ್ಪ ಹೊತ್ತು ಬೇಗಾರಹಟ್ಟಿಗೆ (ಹರಿಜನರ) ಹೋಗಿ ಹೊಲಿಸಿಕೊಂಡು ಬರುವಾಗ ಆ ಮನೆಯಲ್ಲಿ ತಿಪ್ಪಯ್ಯ ಊಟ ಮಾಡುವ ಸಂಗತಿಯನ್ನು ತನ್ನ ಮಡದಿಗೆ ತಿಳಿಸಿದ. ಕ್ಷೀರ ಪರೀಕ್ಷೆಯಲ್ಲಿ ಸತ್ತ ಎಮ್ಮೆಯನ್ನು ಬದುಕಿಸಿದಾಗ ಫಣಿಯಪ್ಪ ದಂಪತಿಗಳಿಗೆ ಆಶ್ಚರ್ಯವಾಯಿತು. ಲೋಕೋಪಯೋಗಿ ಕೆಲಸ ಕಾರ್ಯಗಳಲ್ಲಿ ಹಟ್ಟಿಮಲ್ಲಪ್ಪನಾಯಕನಿಗೆ ನೆರವು ನೀಡಿ, ಗ್ರಂಥ ರಚನೆ ಮಾಡಿದದು, ಶ್ಲಾಘನೀಯ. ಕೆರೆಗಳ ನಿರ್ಮಾಣದಲ್ಲಿ ಅಪಾರ ಆಸಕ್ತಿಹೊಂದಿದ್ದ ತಿಪ್ಪಯ್ಯ, ಮರಳುಕುಪ್ಪೆಗಳಲ್ಲಿ ಕೂಲಿಯವರಿಗೆ ಕೂಲಿಯನ್ನು ಕೊಟ್ಟಿದ್ದು, 'ಮಾಡಿದವರಿಗೆ ನೀಡು ಭಿಕ್ಷೆ' ಎನ್ನುವ ಸೂತ್ರದಿಂದ ಎಲ್ಲರನ್ನು ಅಳೆದು ನೋಡುತ್ತಿದ್ದರು. ಅಲ್ಲದೆ, ಹನ ಮತ್ತು ಮಳಲಿನ ಬೆಲೆ ಮೈಗಳ್ಳತನಕ್ಕೆ ಪಾಠ ಕಲಿಸಿತು. ಈತ ನಿಜವಾದ ಗ್ರಾಮೋದ್ಧಾರಕನೆಂಬುದಕ್ಕೆ ಸಾಕ್ಷಿಃ ಗೌರಿಪುರ, ಮಹಾದೇವಪುರ, ಕಾಶೀಪುರ, ಖುದಾಪುರ; ಗಿಡ್ಡಾಪುರ, ಗಂಗ್ಲಾಪುರ, ಬಸಾಪುರಗಳನ್ನು ಸ್ಥಾಪಿಸಿದ್ದು, ಅನೇಕ ಕೆರೆ, ಕಟ್ಟೆ, ಬಾವಿಗಳನ್ನು ತೋಡಿಸಿದ್ದು ಕೃಷಿಕರಿಗೆ, ದೀನದಲಿತರಿಗೆ ಸೋಪಾನವಾಯಿತು.

**ತತ್ವಜ್ಞಾನಿ, ಸಮಾಜಸುಧಾರಕ ತಿಪ್ಪಯ್ಯ**

ಸಮಕಾಲೀನ ಸಮಸ್ಯೆಗೆ ಪರಿಹಾರ ಕಂಡುಹಿಡಿಯುವಲ್ಲಿ ತಿಪ್ಪೇಸ್ವಾಮಿ ನಿಪುಣನಾಗಿದ್ದನು. ನಿಡಗಲ್ಲು ಸಂಸ್ಥಾನದ ದಳವಾಯಿಗಳು ಕೆರೆ – ಕಾಲುವೆ ನಿರ್ಮಾಣದಲ್ಲಿ ಕೂಲಿ ಆಳುಗಳೊಂದಿಗಿರುವಾಗ ತಿಪ್ಪೇಸ್ವಾಮಿ ರಂಗಸಮುದ್ರದಲ್ಲಿ ತನ್ನ ಪವಾಡವನ್ನು ಮೆರಿಸಿ ಅರಸನಿಗೆ ಉದಾತ್ತ ಗುಣಗಳನ್ನು ಬೆಳೆಸಿಕೊಳ್ಳಲು, ಆದರ್ಶವಾಗಿ ಬಾಳಲು ತಿಳಿಸಿದರು. ಪ್ರಾಣಿ ಹಿಂಸೆಯನ್ನು ವಿರೋಧಿಸುತ್ತಿದ್ದ ತಿಪ್ಪಯ್ಯ, ಮೂಢನಂಬಿಕೆ, ಕಂದಾಚಾರಗಳನ್ನು ಲೆಕ್ಕಿಸುತ್ತಿರಲಿಲ್ಲ. ನಿಡಗಲ್ಲು ರಾಜಧಾನಿಗೆ ಹೋಗಿ ಅಲ್ಲಿನ ಅರಸನ ಹೆಂಡತಿ ನಾಗತಿಗೆ ಸಂತಾನ ಭಾಗ್ಯವನ್ನು ದಯೆಪಾಲಿಸಿದ್ದು, ನಾಗತಿಯು ನಿಮ್ಮಿಂದ ಪಾವನಳಾದೆ ಎಂದು ಕಾಲಿಗೆ ಮುಗಿಯುವಳು. ಸ್ವಾಮಿಗಳು ೭ ಜನರಾಗುತ್ತಾರೆಂದು ಹೇಳಿದಂತೆ ನಾಗತಿಗೆ ಶ್ರೀಮಲ್ಲಿಕಾರ್ಜುನಸ್ವಾಮಿಯ ನಾಮಸಂಕೇತವಾಗಿ ಮಲ್ಲಪ್ಪನಾಯಕ, ಹೀಗೆ ಅಣ್ಣತಮ್ಮಂದಿರು ರತ್ನಗಿರಿ, ಭೂದಾಳು, ಚಂದ್ರಗಿರಿ, ಹೊಸಕೋಟೆ, ನಿಡಗಲ್ಲು, ಕುಂದುರ್ಪಿ, ನಾಯಕನಹಟ್ಟಿ ಸಂಸ್ಥಾನಗಳಲ್ಲಿ ರಾಜ್ಯಾಳ್ವಿಕೆ ಮಾಡುತ್ತಾರೆ.

ಹಟ್ಟಿಯ ಆಳ್ವಿಕೆಗೆ ಮಲ್ಲಪ್ಪನಾಯಕ ಅಣಿಯಾಗಲು ತಿಪ್ಪಯ್ಯನ ಪ್ರೋತ್ಸಾಹ ಮುಖ್ಯವೆನಿಸಿತ್ತು. ನಿಡಗಲ್ಲು ಸಂಸ್ಥಾನದಲ್ಲಿ ಬರಗಾಲ ಆವರಿಸಿದಾಗ ಜನರ ವಲಸೆ ಹೊರಟರು. ದೊರೆ – ಪರಿವಾರದವರು ಮನೆದೇವರಾದ ಶ್ರೀಶೈಲ ಮಲ್ಲಿಕಾರ್ಜುನನನ್ನು ಪೂಜಿಸಿದರು. ಶ್ರೀಗುಡ್ಡದ ಮಲ್ಲಯ್ಯನನ್ನು ಪೂಜಿಸಿದಾಗ ಸ್ವಪ್ನದಲ್ಲಿ ದೇವರು ಇಷ್ಟಸಿದ್ಧಿ ಪ್ರಾಪ್ತಿಸಿದ. ಇಂದಿಗೂ ಈ ಗುಹೇಶ್ವರಬೆಟ್ಟಕ್ಕೆ (ರಾಯದುರ್ಗ) ಹೋದರೆ ಒಳ್ಳೆಯದಾಗುತ್ತದೆಂಬ ನಂಬಿಕೆಯಿದೆ. ಮಲ್ಲಪ್ಪನಾಯಕ ವಿಜಯನಗರದವರೊಂದಿಗೆ ವ್ಯವಹರಿಸಲು ತಿಪ್ಪಯ್ಯನ ಪ್ರೋತ್ಸಾಹ, ಧೈರ್ಯ ಅವಿಸ್ಮರಣೀಯವೆನಿಸಿದೆ. ರಾಮಜಟ್ಟಿ – ಭೀಮಜಟ್ಟಿಗಳು ವಿಜಯನಗರದವರ ಮೆಚ್ಚಿಗೆಗೆ ಪಾತ್ರರಾಗಿದ್ದರಿಂದ, ಅವರು ಕೊಟ್ಟ ಬಹುಮಾನದಿಂದ ಭೀಮಸಾಗರ – ರಾಮಸಾಗರ ಕೆರೆಗಳನ್ನು ಕಟ್ಟಿಸಿದರು. ನಾಯಕನಹಟ್ಟಿಯನ್ನು ಸ್ಥಾಪಿಸಿದ ಮಲ್ಲಪ್ಪನಾಯಕ ಗೋನೂರು, ನ್ನನಿವಾಳದಂತೆ ಇದನ್ನು ಮ್ಯಾಸಬೇಡರ ಪ್ರಮುಖ ಕಟ್ಟೇಮನೆ ಮಾಡುತ್ತಾನೆ. ಈ ಸಂಸ್ಥಾನದಲ್ಲಿ ಕೂಲಿ, ಕಾರ್ಮಿಕರಿಗೆ ಬೆಲೆ ಕೊಡುತ್ತಿರಲಿಲ್ಲ. ತಿಪ್ಪೇಸ್ವಾಮಿ 'ಸಮರಿಗೆ ಸಮಬಾಳು – ಸಮರಿಗೆ ಸಮಪಾಲು' ನೀಡಿ ಎಲ್ಲರಿಂದಲೂ ಸೈ ಎನಿಸಿಕೊಂಡಿದ್ದರು.

ಫಣಿಯಪ್ಪನಿಗೆ ನೀತಿ ಬೋಧಿಸಿದ್ದು ಮಹಾಪರಿವರ್ತನೆಗೆ ಸಂಕೇತವಾಯಿತು. ಪತಿ – ಪತ್ನಿ, ಮಕ್ಕಳ, ತಂದೆತಾಯಿಗಳ, ಅಣ್ಣ – ತಮ್ಮಂದಿರ ಬಾಂಧವ್ಯದ ಬಗ್ಗೆ ತಿಳಿಸಿದರು. ಪ್ರಾಣಿಗಳ ಹಿಂಸೆಯನ್ನು ತಡೆದು ಪ್ರಾಣಿಗಳ ಬಗ್ಗೆ ದಯೆ ಇಡಬೇಕೆಂದು ಸತ್ತೆಮ್ಮೆ ಹಾಲು ಕರೆಯುತ್ತಾರೆ. ಈ ಭಾಗದಲ್ಲಿ ಬೇಡರು ಬೇಟೆಯಿಂದ ಸಹಸ್ರಾರು ಪ್ರಾಣಿಗಳನ್ನು ಕೊಲ್ಲುತ್ತಿದ್ದರು. ಈ ಹಿನ್ನೆಲೆಯಲ್ಲಿ ಈ ಕಾರ್ಯ ಅರ್ಥಪೂರ್ಣವಾದುದು. ಸರ್ವರೂ ಸಮಾನರು ಜಾತಿಭೇದವಿಲ್ಲವೆಂದು ಹರಿಜರ ಮನೆಯಲ್ಲಿ ಊಟ ಮಾಡುವುದು ಇತರರನ್ನು ನಿಬ್ಬೆರಗಾಗುವಂತೆ ಮಾಡಿತು.

ತಮ್ಮ ಸಾಮಾಜಿಕ ಕಳಕಳಿಯ ವ್ಯಕ್ತಿತ್ವದಿಂದ ತಿಪ್ಪಯ್ಯ ಜನಮನಗಳನ್ನು ಗೆದ್ದಿದ್ದಾರೆ. ರೈತರು, ಕಾರ್ಮಿಕರು, ವ್ಯಾಪಾರಿಗಳು, ದೀನ – ದಲಿತರು, ಅಧಿಕಾರಿಗಳು ಮತ್ತು ದೊರೆಗಳನ್ನು ಹೆಸರಿಸಬಹುದು. ತಪ್ಪು ಮಾಡುವವರಿಗೆ ಶಿಕ್ಷೆ ಕೊಡುವ ಪೂರ್ವದಲ್ಲಿ ಶಿಕ್ಷಣ ಕೊಡುವ ಹಂಬಲ ತಿಪ್ಪೇಸ್ವಾಮಿಯದು. ಇದಕ್ಕೆ ಪರ್ಯಾಯವಾಗಿ ಕಾಶಿರಾಮೇಶ್ವರಗಳಿಗೆ ಯಾತ್ರೆ ಹೋಗಲು ದೊರೆಗಳಿಗೆ ಆದೇಶಿಸುತ್ತಿದ್ದುದು ಈ ಹಿನ್ನೆಲೆಯಲ್ಲಿ. ಮೊಘಲರ ಮತ್ತು ಸ್ಥಳೀಯ ಅಕ್ಕಪಕ್ಕದ ಅರಸರು ನಾಯಕನಹಟ್ಟಿಯನ್ನು ಕಬಳಿಸಲು ಹುನ್ನಾರ ಮಾಡಿ ಯಶಸ್ವಿಯಾಗುವ ಹಂತದಲ್ಲಿ ಹಟ್ಟಿಮಲ್ಲಪ್ಪನಾಯಕನಿಗೆ ಅವರ ವಿರುದ್ಧ ಜಯಶಾಲಿಯಾಗುವ ದೀಕ್ಷೆ ನೀಡಿದರು.

ಹೀಗೆ ತನ್ನ ಸಹಸ್ರಾರು ಕನಸುಗಳ ಗೂಡಿನಲ್ಲಿ ಬೆಂದ ತಿಪ್ಪಯ್ಯ ಜನಕಲ್ಯಾಣಕ್ಕಾಗಿ ಅಪಾರ ಶ್ರಮಿಸಿ, ವಿಶ್ರಮಿಸಿಕೊಳ್ಳಲು ಏಕಾಂತಕ್ಕಾಗಿ ಚಡಪಡಿಸಿದರು. ಮುಕ್ತಿಯನ್ನು ಕಾಣಲು (ತಪಸ್ಸು ಮಾಡುವ) ಶಿವಧ್ಯಾನ ಮಗ್ನರಾಗಿ ಮನಮೈಯ್ಯನಹಟ್ಟಿ ಹತ್ತಿರ ಗವಿಯಲ್ಲಿ (ನೆಲಮಾಳಿಗೆ) ಕುಳಿತರು. ಇಂದು ಆ ಸ್ಥಳಕ್ಕೆ ಏಕಾಂತೇಶ್ವರ ಮಠವೆಂದು ಕರೆಯುತ್ತಾರೆ. ಧ್ಯಾನದಲ್ಲಿ ತೊಡಗಿದ ತಿಪ್ಪಯ್ಯನಿಗೆ ಸದಾ ತನ್ನ ಜನಸಾಮಾನ್ಯರ ಚಿಂತೆ ಮನಸ್ಸಿಂದ ಅಳೆಯಲಿಲ್ಲ. ಅನೇಕ ಬಗೆಯಲ್ಲಿ ಜನರಿಗೆ ಸ್ಪಂಧಿಸಿದರು. ತಾನು ಸಂತನಾಗುವ ಮೊದಲು ಸಮಾಜಕ್ಕೆ ಇಟ್ಟುಕೊಂಡಿದ್ದ ನಂಬಿಕೆಗಳೇ ಬೇರೆ ಮತ್ತು ಸಮಾಜ ಸುಧಾರಣೆಯಲ್ಲಿ, ತತ್ವಜ್ಞಾನವನ್ನು ಬೋಧಿಸಿದ್ದಲ್ಲಿ ಪರಿವರ್ತನೆಕಾಣದೆ ಕೊನೆಯಲ್ಲಿ, ತಪಸ್ಸು ಮಾಡುವುದು ಮಾಗಿದ ಜೀವನಕ್ಕೆ ಮರುಕಹೋಗಲಿಲ್ಲ ಎಂದು ಊಹಿಸಬಹುದು. ಒಟ್ಟಾರೆ ಜನಪ್ರತಿನಿಧಿಯಂತೆ ತಿಪ್ಪೇಸ್ವಾಮಿ ದಲಿತೋದ್ಧಾರಕ್ಕೆ ಶ್ರಮಿಸಿದ ಮಹಾನಾಯಕನೆಂದರೆ ಅತಿಶಯೋಕ್ತಿಯಲ್ಲ.

**ರೂಪ – ವಿರೂಪ, ಉಡುಗೆ – ತೊಡುಗೆ ಇತ್ಯಾದಿ**

ಶಾರೀರಿಕವಾಗಿ ತಿಪ್ಪಯ್ಯ ಅಷ್ಟೇನು ಎತ್ತರವಿದ್ದಂತಿಲ್ಲ. ಸುಂದರವಾದ ಮೈಕಟ್ಟು ದಷ್ಟಪುಷ್ಟವಾಗಿದ್ದಿತು. ಸೊಂಟದವರೆಗೆ ಪಂಚೆ (ಕಚ್ಚೆ) ಯನ್ನು, ಬರಿಮೈ ಮೇಲೊಂದ ವಸ್ತ್ರಕೊರಳಲ್ಲಿ ರುದ್ರಾಕ್ಷಿಮಾಲೆ, ಕಾಲಲ್ಲಿ ಕಟ್ಟಿಗೆ ಪಾದರಕ್ಷೆಗಳು, ತಪೋನಿರತನಂತೆ ಹಣೆಯಲ್ಲಿ ೩ ಗೆರೆ ವಿಭೂತಿ ಧ್ಯಾನಸ್ಥ ಮನಸ್ಸನ್ನು ಸಂಕೇತಿಸುತ್ತದೆ. ತಲೆಗೂದನ್ನು ಮುಡಿಕಟ್ಟಿಕೊಂಡು, ಗಡ್ಡವನ್ನು ಬಿಡಿಸಿರುತ್ತಾನೆ. ನೋಡುಗರಿಗೆ ಈತ ಸಂತ, ಪವಾಡಪುರುಷ, ತ್ಯಾಗಿಯಾಗಿ ಕಂಡುಬರುತ್ತಾನೆ.[3]

ಆರಂಭದ ಉಡುಗೆತೊಡಿಗೆಗೂ ಆನಂತರದ್ದಕ್ಕೂ ಸುಧಾರಣೆಯಿತ್ತು. ಶ್ರೇಷ್ಠಮಟ್ಟದ ಉಡುಪು ಈತನಿಗೆ ಇರಲಿಲ್ಲ – ಉಡಲಿಲ್ಲ. ಸಾಮಾನ್ಯ ಮ್ಯಾಸಬೇಡನಂತೆ ಬಾಗಿದಕೋಲು, ಹೆಗಲಲ್ಲಿ ತೆಂಗಿನ ಪರಟೆಗಳು, ಹರಕುಕಂಬಳಿ, ಸೊಂಟದಿಂದ ಮೊಳಕಾಲಿನವರೆಗೆ ದೋತಿ ಧರಿಸುತ್ತಿದ್ದ. ಪಶುಪಾಲಕರೊಂದಿಗೆ, ಬಾಲಕರೊಂದಿಗೆ ಇದ್ದು ಹುಚ್ಚನಂತೆ ಆರಂಭದಲ್ಲಿ ವರ್ತಿಸುತ್ತಿದ್ದನಂತೆ. ದಲಿತರೊಂದಿಗೆ ಬೆರೆತು ಅವರ ಉದ್ಧಾರಕ್ಕೆ ಶ್ರಮಿಸಿ ಅವರಂತೆ ಅನೇಕ ಕಷ್ಟನಷ್ಟಗಳಿಗೆ ಪಳಗಿದ ಸಂಗತಿಗಳು ಕಂಡುಬರುತ್ತವೆ.


**ಜೀವೈಕ್ಯ ಸಮಾಧಿ**

ತಿಪ್ಪೇರುದ್ರಪ್ಪಸ್ವಾಮಿ ಹಿರೇಕೆರೆ ಕಟ್ಟಿಸಿದ ತರುವಾಯ ಮಲ್ಲಪ್ಪನಾಯಕನು ಈತನಿಗೆ ೭೭ ಬಿರುದುಗಳನ್ನು ಅರ್ಪಿಸಿ ತೀರಿಕೊಂಡನು. ಫಣಿಯಪ್ಪನಿಗೆ ತಿಪ್ಪಯ್ಯ ಶಿವಲಿಂಗ ಪೂಜಿಸಲು ಹೇಳಿ ಅದಕ್ಕೆ ಮಹಾಂತೇಶ್ವರನೆಂದು ಹೆಸರಿಡುತ್ತಾನೆ. ಮೊದಲಿಗೆ ನಾಯಕನ ಹಟ್ಟಿಯಲ್ಲಿ ನೆಲೆಯೂರಲು ಬಂದ ತಿಪ್ಪಯ್ಯನಿಗೆ ವಾಸಸ್ಥಾನ ಎಲ್ಲೂ ಸಿಕ್ಕಿರಲಿಲ್ಲ. ಕೊನೆಗೆ ಮಾರಿಗುಡಿಯಲ್ಲಿ ಬಂದು ತನ್ನ ಬೆತ್ತ – ಜೋಳಿಗೆ ಇಡಲು ಕೇಳಿ ಸ್ವಲ್ಪ ಜಾಗ ಕೊಟ್ಟರೆ ಇಡೀ ಗುಡಿಯನ್ನು ಆಕ್ರಮಿಸಿಕೊಳ್ಳುತ್ತಾನೆ. ತನ್ನ ಪವಾಡದಿಂದ, ಅದನ್ನು ಕೊಟ್ಟ ಪ್ರತೀಕವಾಗಿ 'ಸಿಡಿ' ಆಡಬೇಕೆಂದು ಒಡ್ನಳ್ಳಿ ಮಾರಮ್ಮ ಎಂಬ ದೇವತೆ ತಿಳಿಸುವಳು. ಅಂದಿನಿಂದ ಅದು ಅವನ ನೆಲೆಯಾಯಿತು. ಆ ದೇವತೆಯನ್ನು ಒಡ್ನಳ್ಳಿಮಾರಮ್ಮನೆಂದು ಕರೆದು ಸು.೧೫ ವರ್ಷಕ್ಕೊಮ್ಮೆ, ೫೦ ವರ್ಷಕ್ಕೊಮ್ಮೆ ಜಾತ್ರೆ ಮಾಡುತ್ತಾರೆ. ಹೀಗೆ ಮಾಡುವಾಗ ಈ ದೇವತೆಯನ್ನು ತಿಪ್ಪೇಸ್ವಾಮಿ ಒಳಮಠದ ಮುಂದೆ ಪ್ರತ್ಯೇಕ ಕಟ್ಟೆಯನ್ನು ನಿರ್ಮಿಸಿ ಅದರ ಮೇಲಿಟ್ಟು ದೊಡ್ಡ ಪ್ರಮಾಣದ ಜಾತ್ರೆ ಮಾಡುತ್ತಾರೆ. ಬಹುಶಃ ಇವಳು

ಹೀನಕುಲದ ದಲಿತರ ದೇವತೆಯಾಗಿರಬೇಕು. ಇಲ್ಲವೆ ಇವರಿಬ್ಬರೂ ಒಂದೇ ಕೋಮಿಗೆ ಸೇರಿದವರೂ ಇರಬೇಕು. ಸಂಬಂಧಿಸಿದ ಆಚರಣೆ – ಸಂಪ್ರದಾಯಗಳನ್ನು ಮಾಡಿಕೊಂಡು ಬಂದಿದ್ದಾರೆ. ಇಹಲೋಕದ ಯಾತ್ರೆ ಸಮೀಪಿಸಿದಂತೆ ಭಕ್ತರೊಂದಿಗೆ ತನ್ನೆಲ್ಲ ಭಾವನೆಗಳನ್ನು ಹಂಚಿಕೊಳ್ಳುತ್ತಾನೆ ತಿಪ್ಪಯ್ಯ. ನಾನು ಜೀವೈಕ್ಯ ಸಮಾಧಿಯಾಗುವುದು ಚಿಕ್ಕಕೆರೆ ಹಿಂದಿರುವ ಸುಂದರವಾದ ಸ್ಥಳದಲ್ಲಿ ಎಂದು ನೆಲಮಾಳಿಗೆ ನಿರ್ಮಿಸಲು ಸೂಚಿಸುತ್ತಾರೆ. ಅದರಂತೆ ಭಕ್ತರು ನಿರ್ಮಿಸಿದರು. ದೊರೆ ಈ ಸಂಗತಿ ತಿಳಿದು ಅತೀವ ದುಃಖಿತನಾದನು. ಫಣಿಯಪ್ಪನ ದೈನಂದಿನ ಪೂಜೆಯಲ್ಲಿ ಏರುಪೇರು ಮಾಡಿದ್ದಕ್ಕಾಗಿ ಸ್ವಾಮಿಯಿಂದ ಶಾಪಕ್ಕೆ ಗುರಿಯಾಗುತ್ತಾನೆ.

**ಸದ್ಭಕ್ತನಿಗೆ ಸಮಾಧಿ ವಾರಸುದಾರಿಕೆ**

ಫಣಿಯಪ್ಪನು ತಿಪ್ಪಯ್ಯನ ನಿರೀಕ್ಷೆಗೆ ಸ್ಪಂದಿಸಲಿಲ್ಲವಾದ್ದರಿಂದ ಅವನ ಮನೆಯಲ್ಲೆ ಕೂಲಿ ಆಳಾಗಿದ್ದ ನಾಯಕರ ಲಿಂಗಣ್ಣ ಎಂಬುವನ ಶ್ರದ್ಧೆ, ಭಕ್ತಿಗೆ ಮೆಚ್ಚಿದ ತಿಪ್ಪಯ್ಯ ಸಮಾಧಿ ಪೂಜೆ ಮಾಡಲು ಹೇಳುತ್ತಾನೆ. ಅದನ್ನು ಕೇಳಿದ ಬಾಲಕ ಪುಳಿಕಿತಗೊಂಡ ಎಲ್ಲರಿಗೂ ವಿಷಯ ತಿಳಿಸುವನು. ಧಣಿಯ ಕಿವಿಗೂ ಈ ವಿಷಯ ಬೀಳುತ್ತದೆ. ಅಂದಿನಿಂದ ಇಂದಿನವರೆಗೂ ಪೂಜೆ ಹಕ್ಕನ್ನು ಮ್ಯಾಸಬೇಡರ ವಂಶಸ್ಥರು ಹೊರಮಠದಲ್ಲಿ ಮುಂದುವರೆಸಿಕೊಂಡು ಬಂದಿದ್ದಾರೆ. ಫಣಿಯಪ್ಪನ ವಂಶಸ್ಥರು ಒಳಮಠದ ಗದ್ದುಗೆಗೆ ಪೂಜಾರಿಗಳಾಗಿರುತ್ತಾರೆ. ಮಹಾಂತೇಶ ಮತ್ತು ಅಣ್ಣತಮ್ಮಂದಿರು ಇಂದು ಪೂಜಾಕಾರ್ಯಗಳನ್ನು ಮಾಡುತ್ತಿದ್ದಾರೆ.



ತಿಪ್ಪೇಸ್ವಾಮಿ ಹೊರಮಠ, ನಾಯಕನಹಟ್ಟಿ

**ತಿಪ್ಪೇಸ್ವಾಮಿ ದೇವಾಲಯ (ಒಳಮಠ)**

ನಾಯಕನಹಟ್ಟಿಯಲ್ಲಿ ತಿಪ್ಪೇಸ್ವಾಮಿಗೆ ಸಂಬಂಧಿಸಿದಂತೆ ಪ್ರಧಾನವಾಗಿ ಎರಡು ದೇವಾಲಯಗಳಿವೆ. ಒಂದು ಹೊರಮಠ, ಮತ್ತೊಂದು ಒಳಮಠ. ಇವುಗಳ ನಡುವಿನ ಅಂತರ ಸುಮಾರು ಒಂದು ಮೈಲು. ನಾಯಕನಹಟ್ಟಿಯ ದಕ್ಷಿಣ ತುದಿಗೆ ಒಳಮಠವಿದ್ದರೆ, ಉತ್ತರ ತುದಿಗೆ ಹೊರಮಠವಿದೆ.

ಈ ಒಳಮಠವಿರುವಲ್ಲಿ ಹಿಂದೆ ಒಡ್ನಳ್ಳಿಮಾರಮ್ಮ ಎಂಬ ದೇವತೆಯಿದ್ದಳು. ತಿಪ್ಪೇಸ್ವಾಮಿ ಮೊದಲು ಬಂದಾಗ ತಂಗಿದ್ದು ಇಲ್ಲಿಯೆ. ಬೆತ್ತ – ಜೋಳಿಗೆ ಮೂಲಕ ಸ್ಥಳವನ್ನು ಆಕ್ರಮಿಸಿಕೊಂಡವನು ಕದಲಲಿಲ್ಲ. ಹಾಗಾಗಿ ದೇವತೆ ಪಲಾಯನಗೈದಳು. ಈ ದೇವಾಲಯಕ್ಕೆ ಬಸೆಟ್ಟಪ್ಪನೆಂಬ ಭಕ್ತ ಜೀರ್ಣೋದ್ಧಾರ ಮಾಡಿಸಿದ್ದಾನೆ. ಗೋಪುರ ಸುಮಾರು ೮೦ ಅಡಿ ಎತ್ತರ, ಪ್ರಕಾರದ ಗೋಡೆ ೭೦ ಅಡಿ ಎತ್ತರವಿದೆ. ಇವುಗಳ ಮೇಲೆ ರಮಾಯಣ, ಮಹಾಭಾರತ ಕಥೆಗಳ ಶಿಲ್ಪ ಚಿತ್ರಕಲೆಯನ್ನು ಕೆತ್ತಲಾಗಿದೆ. ಕಿರತಾರ್ಜುನೀಯ, ಸೀತಾಪಹರಣ, ಪೌರಾಣಿಕ ನಾಟಕ ಕಥೆಗಳ ದೃಶ್ಯಾವಳಿಯನ್ನು ಕೆತ್ತಿರುವುದು ಮನಮಿಡಿಯುತ್ತದೆ. ಶಿವಲಿಂಗದ ಜೊತೆಗೆ ಪಂಚಲೋಹದಿಂದ ಮಾಡಿದ ತಿಪ್ಪೇಸ್ವಾಮಿ ವಿಗ್ರಹ ಅದ್ಭುತವಾದುದು. ಜನಕಲ್ಯಾಣದ ಸೇವಕನಾದ ತಿಪ್ಪಯ್ಯನ ವಿವಿಧ ಸೇವಾಕಾರ್ಯಗಳನ್ನು ಬಿಂಬಿಸುವ ಚಿತ್ರಗಳನ್ನು ಇತ್ತೀಚೆಗೆ

ಬಿಡಿಸಿಹಾಕಿದ್ದಾರೆ. ಇಲ್ಲಿರುವ ತೇರು ಬಹುದೊಡ್ಡ ಗಾತ್ರದ್ದು. ಮೂಡಲಪಾಯ ಯಕ್ಷಗಾನದ ಸೊಗಡನ್ನು ತೇರಿನಲ್ಲಿ ಸರಳವಾಗಿ ಕೆತ್ತಿರುವುದು ಸ್ಪಷ್ಟ. ಕಾಲಾಂತರದಲ್ಲಿ ಭಕ್ತರು ಸಣ್ಣ – ಪುಟ್ಟ ಮಂಟಪಗಳನ್ನು, ದೇವಾಲಯದ ಬಿಡಿ ಭಾಗಗಳನ್ನು ಭಕ್ತಿಯಿಂದ ನಿರ್ಮಿಸಿವರು. ಗರ್ಭಗುಡಿಯಲ್ಲಿ ಶಿವಲಿಂಗವಿದ್ದು, ತಿಪ್ಪೇಸ್ವಾಮಿಯ ಭಾವಚಿತ್ರವನ್ನು ಇತ್ತೀಚೆಗೆ ಇಟ್ಟಿರುವರು. ಗಾರೆಯಿಂದ ಶಿಲ್ಪಗಳನ್ನು ನಿರ್ಮಿಸಿದ್ದು, ಪುರಾಣದ ದೃಶ್ಯಗಳ ಮನಮೋಹಕವಾಗಿ ಕಂಡುಬರುತ್ತವೆ. ಇಲ್ಲಿ ಸಸ್ಯಹಾರಿಯನ್ನು ನೈವೇದ್ಯ ಮಾಡುವರು. ವಿಶಾಲವಾದ ಬಯಲು ದೇವಾಲಯದ ಮುಂದೆ ಇದ್ದು, ಸಹಸ್ರಾರು ಭಕ್ತರು ಸೇರಲು ಅನುಕೂಲವಾಗಿದೆ. ಎಲ್ಲಾ ಜಾತಿ – ಧರ್ಮದವರೆಗೂ ಮುಕ್ತ ಪ್ರವೇಶ ಇಲ್ಲಿದೆ.

**ಹೊರಮಠ**

ರಕ್ತಾಕ್ಷಿನಾಮ ಸಂವತ್ಸವರದ ಫಾಲ್ಗುಣ ಬಹುಳ ತದಿಗೆ ಚಿತ್ತಾನಕ್ಷತ್ರದ ಶುಭಯೋಗದಲ್ಲಿ ಆಯಸ್ಸಿನ ಮುಪ್ಪು ಕವಿದಾಗ ಭಕ್ತರೊಂದಿಗೆ ಸಮಾಧಿಗೆ ಬಂದು ಜೀವೈಕ್ಯನಾದ ತಿಪ್ಪಯ್ಯನ ಸಮಾಧಿ ಸ್ಥಳವೇ ಹೊರಮಠ. ಈ ಶುಭ ದಿನದಂದು ಜಾತ್ರೆ ನಡೆದು, ರಥ ಎಳೆಯುವ, ಪರೀಷೆ ಮರಿಪರೀಷೆ ಮಾಡುವ ಕಾರ್ಯಗಳು ಹಲವು.

ಈ ದೇವಾಲಯವು ಹಿಂದೂಮುಸ್ಲಿಂ ಶೈಲಿಯನ್ನು ಹೊಂದಿದೆ. ಲಿಂಗಪ್ಪ ಎಂಬ ಹೈದರಾಲಿಯ ನಿಯೋಜಿತ ಅಧಿಕಾರಿ ಇಲ್ಲಿನ ಉಸ್ತುವಾರಿ ನೋಡಿಕೊಳ್ಳುವಾಗ ತನಗೆ ಪುತ್ರಸಂತಾನ ಪ್ರಾಪ್ತಿಸಿದ್ಧಕ್ಕಾಗಿ ಹೈದರನ ಆದೇಶದಂತೆ ಗುಮ್ಮಟ, ಕಮನಾಕಾರದ ಲಕ್ಷಣಗಳಿರುವ ದೇವಾಲಯವನ್ನು ನಿರ್ಮಿಸಿದರು. ಹೈದರಾಲಿ ಈ ನೆನಪಿಗಾಗಿ ತನ್ನ ಮಗನಿಗೆ ಟಿಪ್ಪುಸುಲ್ತಾನ್ ಎಂದು ಕರೆದನಂತೆ. ಇಲ್ಲಿ ಪ್ರತಿ ಸೋಮವಾರ ವಿಶೇಷ ಪೂಜೆ ನಡೆಯುತ್ತದೆ. ಪ್ರತಿವರ್ಷ ಚಿತ್ತಾ ನಕ್ಷತ್ರದಲ್ಲಿ ರಥೋತ್ಸವ ಜರುಗಿದಾಗ ಇಲ್ಲಿನ ಸಂಭ್ರಮ, ಭಕ್ತರ ಅಡಿಗೆ, ಹರಿಕೆಗಳನ್ನು ತೀರಿಸುವ ಕ್ರಮ ವೈಭವಯುತವಾದುದು. ಮ್ಯಾಸನಾಯಕರು ಹೊರಮಠದ ಪೂಜಾರಿಗಳು. ಎಲ್ಲಾ ಜಾತಿ – ಧರ್ಮೀಯರು ಮುಕ್ತವಾಗಿ ಪ್ರವೇಶಿಸುತ್ತಿದ್ದು, ಮಾಂಸಹಾರವನ್ನು ಈ ದೇವಾಲಯದ ಹೊರಗೆ ಮಾಡುತ್ತಾರೆ. ಸಣ್ಣ – ಪುಟ್ಟ ಕೊಠಡಿ, ದಾಸೋಹದ ಮನೆ, ಕಲ್ಯಾಣಮಂಟಪ, ಹೊಂಡ ಮೊದಲಾದವು ಇಲ್ಲಿ ಕಂಡುಬರುತ್ತವೆ.

**ತೆಪ್ಪೋತ್ಸವ**

ಹಿರೇಕೆರೆಯಲ್ಲಿ ಈ ಒಂದು ಆಚರಣೆಯನ್ನು ಇಂದಿನವರೆಗೂ ಮಾಡಿಕೊಂಡು ಬಂದಿದ್ದಾರೆ. ಮಳೆ ಬರಲಿಲ್ಲವೆಂದಾಗ ಶ್ರಾವಣಮಾಸದಲ್ಲಿ ತೆಪ್ಪೋತ್ಸವ ಆಚರಿಸಲು ನಿರ್ಧರಿಸುವರು. ಕೋರಿಕೆಯಂತೆ ಮಳೆಯಾದ ಕೆಲಕಾಲದಲ್ಲಿ (ಸಮೃದ್ಧ ಮಳೆ ಬಂದು) ಕೆರೆ ಕೋಡಿ ಬಿದ್ದರೆ ತೆಪ್ಪೋತ್ಸವ ಮಾಡುವರು. ಬಹುತೇಕ ಕಾರ್ತಿಕಮಾಸದಲ್ಲಿ ಈ ಕಾರ್ಯವನ್ನು ಕೈಗೊಳ್ಳುವರು. ೩೩ ಹಳ್ಳಿಯವರು ಸೇರಿ ಇತರ ಲಕ್ಷಾಂತರ ಭಕ್ತಾಧಿಗಳ ಮಧ್ಯೆ ಈ ತೆಪ್ಪವನ್ನು ನೋಡುವುದೇ ಒಂದು ವಿಶೇಷ ಅನುಭವ.

**ಜಾತ್ರೆ ಮತ್ತು ರಥೋತ್ಸವ**

ಪ್ರತಿವರ್ಷ ಚಿತ್ತಾನಕ್ಷತ್ರದಲ್ಲಿ ರಥ ಎಳೆಯುತ್ತಾರೆ. ಹಿಂದೊಮ್ಮೆ ೧೯೭೦ಲರಲ್ಲಿ ರಥ ಮುರಿದು ಹೋಗಿತ್ತು. ನಂತರ ಹೊಸತೇರನ್ನು ನಿರ್ಮಿಸಿದ್ದು ಸುಗಮವಾಗಿ ಕೆಲಸಕಾರ್ಯಗಳು ನಡೆಯುತ್ತವೆ. ತೇರನ್ನು ಎಳೆಯುವ ಮುನ್ನ ಅಂಜನೇಯನ ಪೂಜೆ ಮಾಡುವರು. ಪರುಷೆ ಸುಮಾರು ೭ ದಿನ ನಡೆದು, ಮರುಪರಿಷೆಯಲ್ಲಿ ಕೊನೆಗೊಳ್ಳುತ್ತದೆ. ಗೋನೂರಿನ ತಿಪ್ಪೇಸ್ವಾಮಿ ಜಾತ್ರೆಯು ಇದೇ ದಿನ ನಡೆಯುವುದು.

ರಾಷ್ಟ್ರೀಯ ಭಾವೈಕ್ಯತೆಯ ಸಂಕೇತವಾಗಿ ಎಲ್ಲಾ ಸಮುದಾಯದವರು ತಮ್ಮ ತಮ್ಮ ಪಾಲಿನ ಕೆಲಸಕಾರ್ಯಗಳನ್ನು ಮಾಡುವುದು ಇಲ್ಲಿನ ವಿಶೇಷ. ಫಾಲ್ಗುಣಮಾಸ ಚಿತ್ತಾ ನಕ್ಷತ್ರದಲ್ಲಿ ರಥೋತ್ಸವ ಜರುಗುವ ೫ ದಿನ ಮೊದಲು ರಥಕ್ಕೆ ಕಳಸವಿಡುತ್ತಾರೆ. ಪಲ್ಲಕ್ಕಿಯಲ್ಲಿ ಉತ್ಸವಮೂರ್ತಿಯನ್ನು ಇಟ್ಟು ಡೊಳ್ಳು, ನಗಾರಿ, ಕರಡಿವಾದ್ಯ, ಓಲಗ ಮುಂತಾದ ವಾದ್ಯಗಳ ಹಾಗೂ ಛತ್ರಿಚಾಮರ ಸಮೇತ

ಹಾಜರಿರುವರು. ಇದಕ್ಕೆ ನಾಯಕನಹಟ್ಟಿಯ ಗೊಂಚಗೇರರ ಮನೆಯ ಅನ್ನ, ಜೋಗೇರಹಟ್ಟಿ ಗೊಲ್ಲರ ಮನೆಯ ಮೊಸರು ತಂದಾಗ ರಥದ ಗಾಲಿಗೆ ಎಡೆಹಾಕಿ ಎಳೆಯುತ್ತಾರೆ. ಪೂಜೆಯ ನಂತರ ಬೇಡರು, ತಳವಾರರು, ಹರಿಜನರು, ಮಡಿವಾಳರು, ಬಡಿಗೇರರು ಎಡೆಯ ಅನ್ನವನ್ನು, ತೇರಿಗೆ ಎಸೆಯುವ ಹಣ್ಣುಹಂಪಲುಗಳನ್ನು ತೆಗೆದುಕೊಳ್ಳುವರು. ರಥದ ಮುಂದೆ ಕುಪ್ಪಿನಕೆರೆ ಆಂಜನೇಯರನಿಗೆ ಎಡೆಹಾಕುವುದುಂಟು. ಸುಮಾರು ೬೦ ಅಡಿ ಎತ್ತರದ ತೇರು, ಒಂಬತ್ತು ಅಂತಸ್ತುಗಳನ್ನು ಹೊಂದಿದೆ. ತುದಿಯಲ್ಲಿ ಕಳಸವು ಶಿಖರಪ್ರಾಯವಾಗಿದೆ. ತೇರಿಗೆ ಸಾಮಾನ್ಯವಾಗಿ ೪ ಚಕ್ರಗಳಿದ್ದರೆ, ಇದಕ್ಕೆ ೫ ಗಾಲಿಗಳಿರುವುದು ವಿಶೇಷ. ತೇರು ಎಳೆಯುವ ಸಂದರ್ಭದಲ್ಲಿ ದೊಡ್ಡದಾದ ಪಂಜನ್ನು ಬಳಸುತ್ತಾರೆ. ಎಲ್ಲ ವಿಧವಾದ ವಾದ್ಯಗಳು ಪ್ರದರ್ಶನಗಳು, ಮನೋರಂಜನ ತಂಡಗಳು ಭಾಗವಹಿಸುತ್ತವೆ. ರಥದ ಮರುದಿನದ ಸಂಜೆ ಓಕುಳಿ ಆಡುತ್ತಾರೆ. ಅದೇ ರಾತ್ರಿ ೯ – ೧೦ ಗಂಟೆ ಸುಮಾರಿಗೆ ಒಣಕೊಬ್ಬರಿಯನ್ನು ಸುಡುವರು. ಬೇಡರು ಕುರಿ, ಟಗರು, ಮೇಕೆ, ಹೋತು (ಕೋಳಿ?) ಇತರ ಪ್ರಾಣಿಗಳನ್ನು ಕಡಿದು ಮಾಂಸಹಾರಿ ಅಡುಗೆ ಮಾಡುತ್ತಾರೆ. ದೇವರಿಗೆ ಹೊರಗಡೆ ಎಡೆಹಾಕುವ ಪದ್ಧತಿಯಿದೆ.

ಜಾತ್ರೆಯ ನಂತರದ ಸೋಮವಾರದಂದು 'ಮರುಪರಿಸೆ' (ಮರಪರಿಷೆ) ಆಗುತ್ತದೆ. ದೊಡ್ಡ ಪರಿಸೆಗೆ ಬಾರದಿರುವವರು ಆಕಸ್ಮಿಕವಾಗಿ ತಪ್ಪಿಸಿಕೊಂಡವರು ಇದಕ್ಕೆ ತಪ್ಪದೆ ಬರುತ್ತಾರೆ. ಪ್ರತಿ ಸೋಮವಾರ ಎರಡು ದೇವಾಲಯಗಳಲ್ಲಿ ಪೂಜೆ ನಡೆಯುವುದಕ್ಕೆ ವಾರೋತ್ಸವ ಎನ್ನುವರು. ನವದಂಪತಿಗಳು ತೇರು ನೋಡಲು ಬಂದರೆ, ರೈತರು ತೇರಿನ ದಿನ ಕೃಷಿಯನ್ನು ಪ್ರಾರಂಭಿಸಲು ಭೂಮಿ ಪೂಜೆ ಮಾಡುವುದು ಆ ಭಾಗದ ಬೇಡರ ಇತರ ಸಮುದಾಯಗಳಲ್ಲಿ ಪ್ರಚಲಿತದಲ್ಲಿದೆ. ಈ ನಡುಗಡ್ಡೆಯಲ್ಲಿ ತಿಪ್ಪೇಸ್ವಾಮಿ ಜಾತ್ರೆಯೆಂದರೆ ಸುಗ್ಗಿ ಶಿವರಾತ್ರಿ ಎನ್ನುವರು. ಹುಣ್ಣಿಮೆಯ ಬೆಳದಿಂಗಳಲ್ಲಿ ಎತ್ತಿನಗಾಡಿಗಳನ್ನು ಒಡೆದುಕೊಂಡು ಹೋದರೆ ಆ ಮೋಜಿನ ಪಯಣ ವರ್ಣಿಸಲು ಕಣ್ಮನ ಸೆಳೆಯುತ್ತದೆ. ಆ ಧೂಳಿನಲ್ಲಿ ನಾಮುಂದು, ತಾಮುಂದು ಎತ್ತಿನ ಗಾಡಿಗಳನ್ನು ಓಡಿಸುತ್ತಾರೆ. ಗಾಡಿಯಲ್ಲಿ ಬಂಧುಗಳನ್ನು ಹತ್ತಿಸಿಕೊಂಡು ಹೋಗುವಾಗ ವಿವಿಧ ಬಗೆಯ ಜನಪದ ಗೀತೆಗಳನ್ನು ಹಾಡುವರು. ಮೈಮರೆತು ಕೋಲಾಟ, ಭಜನೆ ಮೊದಲಾದ ಪದಗಳಲ್ಲಿ ಭಾವಪರಶವರಾಗುವರು. 'ಬರುತಿರೆನ್ರಮ್ಮ ತಂಗಿ ಜಾತ್ರೆಗೆ, ಹಟ್ಟಿತಿಪ್ಪಯ್ಯನ ತೇರಿಗೆ' ಎಂಬ ಹಾಡಿನ ಧಾಟಿ ಪ್ರಚಲಿತ. ಚಿತ್ರದುರ್ಗ ಜಿಲ್ಲೆಯ ಅತೀ ದೊಡ್ಡಜಾತ್ರೆಗಳ ಪೈಕಿ ಇದು ಅಗ್ರಗಣ್ಯವಾದುದು.

---

[1] ಮಧ್ಯಕಾಲೀನ ನಗರ ನೋಡಿ: ಇತಿಹಾಸ ದರ್ಶನ, ಸಂ. ೯೭ ಪುಟ : ೨೨ ಮತ್ತು ಈ ನಮ್ಮ ಕನ್ನಡನಾಡ ೫.೧೦.೧೯೯೮

[2] ಕಾಟೆಮಲ್ಲನಾಯಕನಿಗೆ ತಿಪ್ಪೇಸ್ವಾಮಿಯವರು ಹೀಗೆ ಹೇಳುತ್ತಾರೆ. ಹಿಂದೊಮ್ಮೆ ನಿಮ್ಮ ಸಂಸ್ಥಾನಕ್ಕೆ ಬಂದಿದ್ದೆವು. ನಿಮ್ಮ ಪೂರ್ವಜರಾದ ಮಂದಭೂಪಾಲನು ತನ್ನ ಮಗಳನ್ನು ಅಮಾನವೀಯತೆಯಿಂದ ಆಕೆಯ ಮಗನನ್ನು ಮರಣದಂಡನೆಗೆ ಗುರಿಮಾಡಿದ. ಕಾರಣ ನಿನ್ನ ಮಗಳು ದಾನಸಾಲಮ್ಮ ಸಾಧ್ವಿ ಶಿರೋಮಣಿ, ಸೂರ್ಯೋಪಾಸಕಳಾಗಿ ಸೂರ್ಯನ ಕಿರಣಗಳನ್ನು ಅಲಿಂಗಿಸಿಕೊಂಡು ಗರ್ಭಿಣಿಯಾಗಿ ಮಗುವೊಂದಕ್ಕೆ ಜನ್ಮಕೊಡುತ್ತಾಳೆ. ಮದುವೆಯಾಗುವ ಮೊದಲು ಜನ್ಮ ನೀಡಿದೆ ಎಂದು ಮಗುವನ್ನು ತಿಪ್ಪೆಯಲ್ಲಿ ಎಸೆಯುತ್ತಾರೆ. ೫ ತಿಂಗಳವರೆಗೆ ಎಮ್ಮೆಯ ಹಾಲು ಕುಡಿದ ಮಗು ಬೆಳೆಯತೊಡಗಿತು. ಈತನೇ ಎನುಮುಲು ವಂಶದ ಮೂಲ ಪುರುಷ. ರುದ್ರ, ತಿಪ್ಪೇರುದ್ರನೆಂದು ಹೇಳುತ್ತಾರೆ.

[3] ಹುಟ್ಟಿದ ಮಕ್ಕಳೆಲ್ಲ ಸಾಯುತ್ತಿರುವ ಸಂದರ್ಭದಲ್ಲಿ ಸತ್ತ ಹಸುಳೆಗಳನ್ನು ತಿಪ್ಪೆಯಲ್ಲಿ ಹೂಳುವುದು ಗ್ರಾಮೀಣ ಸಂಪ್ರದಾಯ. ತಿಪ್ಪೆಯ ಗೊಬ್ಬರ ಬೆಳೆಗೆ ಆಧಾರವಾಗುವ ಹಾಗೆ (ಫಲವತ್ತಾಗು) ಸತ್ತ ಕೂಸು ಸಹಾ ಮತ್ತೆ ತಾಯಿಗೆ ಫಲವಾಗಿ ಮೂಡಲಿ ಎಂಬುದು ಆಶಯ. ಹೀಗೆ ಹುಟ್ಟಿದ್ದ ಮಗುವನ್ನು ತಿಪ್ಪೆಯ ಮೇಲೆ ಮಲಗಿ ಮೂಗಿಗೆ ಮೂರೇ ಹಾಕುತ್ತಾರೆ. ಮುರ ಎಂದರೆ ಪಂಚಲೋಹದಿಂದ ತಯಾರಿಸಿದ, ಮೂಗು ಬಳೆ, ಇದನ್ನು ಹತ್ತಾರು ಜನರಿಂದ ತಿರುಪೆ ಎತ್ತಿ ತಂದು ಹಾಕುತ್ತಾರೆ.

# ೬. ಚಿತ್ರದುರ್ಗ ಜಿಲ್ಲೆಯ ಬುಡಕಟ್ಟು ವೀರರು (10)

**೬.೯ ಪೆದ್ದಯ್ಯ (ಯರಮಂಚಯ್ಯ)**

**ಹಿನ್ನೆಲೆ**

ಯರಮಂಚಯ್ಯನ ವಂಶಸ್ಥನಾದ ಪೆದ್ದಯ್ಯ ಮ್ಯಾಸಬೇಡರ ಒಬ್ಬ ವೀರ. ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮುರು ತಾಲೂಕಿನ ನೇತ್ರನಹಳ್ಳಿ ಪರಿಸರದಲ್ಲಿ ಈತನೊಬ್ಬ ದನಗಾಹಿಯಾಗಿದ್ದ. ಮಂದಲವಾರು ಗೋತ್ರಕ್ಕೆ ಸೇರಿದ ಕರಿನಾರು ಬೆಡಗಿನವರು.

[1] ಈತನನ್ನು ಸ್ಥಳೀಯರು ಪೆದ್ದಯ್ಯ (ತಾತಯ್ಯನ ಗುಡಿ) ಎಂದು ಕರೆಯುತ್ತಾರೆ. ಇವನ (ಖಾಸ) ನೇರ ಸಂತತಿ ಇಲ್ಲವಾದರೂ ಸಹೋದರ ಸಂತತಿ ಬೆಳೆದುಬಂದಿದೆ. ಈವರೆಗೆ ಯರಮಂಚಯ್ಯನೆಂದು ತಪ್ಪಾಗಿ ಈತನನ್ನು ಕರೆಯಲಾಗುತ್ತಿತ್ತು. ಶಾಸನದಲ್ಲಿ ಪೆದ್ದಯ್ಯನೆಂದು ಉಲ್ಲೇಖಿಸಲಾಗಿದೆ.[2]

**ವೀರನ ಸಾಧನೆ**

ಇಪ್ಪತ್ತನೆ ಶತಮಾನದ ಆರಂಭದಲ್ಲಿ ಪೆದ್ದಯ್ಯ ಬದುಕಿ ಬಾಳಿದ ಕಾಲಾವಧಿ. ಕುರಿಮಂದೆಗೆ ಬಂದು ಧಾಳಿ ಮಾಡಿದ ಚಿರತೆಯನ್ನು (ಹುಲಿ?) ಹಟ್ಟಿಯ ವೀರ ಪೆದ್ದಯ್ಯನು ಕೋನಸಾಗರ ಗುಡ್ಡದ ಹತ್ತಿರ ಕಲ್ಲಿನಿಂದ ಕಾದಾಡಿ ಕೊಂದು ತಾನು ಸಹ ಹತನಾದನು. ಈ ಸ್ಮರಣಾರ್ಥ ವೀರಗಲ್ಲನ್ನು ನೆಡಲಾಗಿದೆ. ಪಿತೃ ಆರಾಧನೆಗೆ ಭವ್ಯ ಇತಿಹಾಸವಿರುವ ಭಾರತದಲ್ಲಿ ಬೇಡರು ಇಂದಿಗೂ ಈ ಪದ್ಧತಿಯನ್ನು ಉಳಿಸಿಕೊಂಡು ಬಂದಿರುವುದನ್ನು ಗಮನಿಸಬಹುದು. ಈ ವೀರನ ವೀರಗಲ್ಲಿನ ಬಗ್ಗೆ ಡಾ. ಆರ್. ಶೇಷಶಾಸ್ತ್ರಿ ಅವರು 'ಕೋನಸಾಗರದ ಎರಮಂಚಯ್ಯನ ವೀರಗಲ್ಲಿನ ಶಿಲ್ಪ ತೀರಾ ಸಾಧಾರಣವೇ ಆಗಿದ್ದರೂ, ಬೇಟೆಯನ್ನು ತುಂಬಾ ಸಹಜವಾಗಿ ಶಿಲ್ಪಿ ಬಿಡಿಸಿದ್ದಾನೆ. ಯರಮಂಚಯ್ಯನ ಮೇಲೆ ಎರಗಿದ ಚಿರತೆ, ಅದನ್ನು ಧೈರ್ಯದಿಂದ ಎದುರಿಸುತ್ತಿರುವ ಯರಮಂಚಯ್ಯ ಅವನಿಗೆ ಸಹಾಯ ಮಾಡಲು ಚಿರತೆಯ ಮೇಲೆ ಆಕ್ರಮಣ ಮಾಡಲು ನೆಗೆಯುತ್ತಿರುವ ನಾಯಿಗಳ ಚಿತ್ರ ಪರಿಣಾಮಕಾರಿಯಾದ ರೀತಿಯಲ್ಲಿ ಮೂಡಿಬಂದಿದೆ ಎಂದಿದ್ದಾರೆ.[3]

**ವೀರಗಲ್ಲಿನ ವಿವರ**

ಮೊಳಕಾಲ್ಮುರು ತಾಲೂಕಿನ ಕೋನಸಾಗರ ಕೆರೆಯ ಅಂಗಳದಲ್ಲಿರುವ ನೇರ್ಲಹಳ್ಳಿ ಗ್ರಾಮಕ್ಕೆ ಸೇರಿದ ಕಪ್ಪಡಬಂಡಹಟ್ಟಿ ಪಕ್ಕದಲ್ಲಿ ಈ ವೀರಗಲ್ಲಿದೆ. ವೀರಗಲ್ಲನ್ನು ಸಣ್ಣದಾದ ಕಲ್ಲುಬಂಡೆಗಳ ಗುಡಿಯಲ್ಲಿ ನಿಲ್ಲಿಸಿದ್ದಾರೆ. ೪ ೧/೨ ಅಡಿ ಎತ್ತರ, ೩ ೧/೨ ಅಡಿ ಅಗಲ, ೫ ಅಡಿ ಗುಡಿಯ ಎತ್ತರವಿದ್ದು ಇದರೊಳಗೆ ೩ ಬಂಡೆಗಳಿವೆ. ವೀರಗಲ್ಲು ಪೂರ್ವಾಭಿ ಮುಖವಾಗಿದೆ. ವೀರಗಲ್ಲಿನ ಪೂರ್ವಕ್ಕೆ ಕೋನ ಸಾಗರದ ಬೆಟ್ಟದ ಸಾಲಿನ ತಿಮ್ಮಪ್ಪನ ಗುಡ್ಡವಿದೆ. ಪಶ್ಚಿಮಕ್ಕೆ ಒದ್ಡೋಬಯ್ಯನಹಟ್ಟಿ ಮತ್ತು ಸುತ್ತಲೂ ಬೆಳವಿನಮರದಟ್ಟಿ, ಸುಂಕನಾರಹಟ್ಟಿ, ಕೂಡ್ಲಿಗರಹಟ್ಟಿ, ಕೊಂಡ್ಲಹಟ್ಟಿ, ಬಂಡೆಕೆಳಗಳ ಹಟ್ಟಿ, ಕಪ್ಪಡ ಬಂಡಹಟ್ಟಿ, ಸಣ್ಣ ಪಾಪಯ್ಯನ ಹಟ್ಟಿ, ಮೆಕರ್ಲ ಓಬಯ್ಯನಹಟ್ಟಿ ಮತ್ತು ಜಂಗಳಿ ಸೂರಯ್ಯನಹಟ್ಟಿ, ನೇರ್ಲಹಳ್ಳಿ ಗ್ರಾಮಪಂಚಾಯ್ತಿ ವ್ಯಾಪ್ತಿಯಲ್ಲಿ ಬರುತ್ತವೆ. ಇಲ್ಲಿನ ಬಹುತೇಕ ಸಮುದಾಯಗಳು ಪಶುಪಾಲನೆಯನ್ನು ಪ್ರಧಾನ ವೃತ್ತಿಯಾಗಿ ಅಳವಡಿಸಿಕೊಂಡಿರುತ್ತವೆ. ಕೋನಸಾಗರದಿಂದ ಓಡ್ಡೋಬಯ್ಯನಹಟ್ಟಿಗೆ ಹೋಗುವ ದಾರಿ (ಎಡ) ಪಕ್ಕದಲ್ಲಿ ವೀರಗಲ್ಲಿದ್ದು, ಕರಿನಾರು ಅವುಲಯ್ಯನ ಹೊಲದ ಬದುವಿನಲ್ಲಿ ಗುಡಿ ಕಟ್ಟಲಾಗಿದೆ. ಹಿಂದೆ ಇದರ ಸುತ್ತಲೂ ಕಾಡು ಬೆಳೆದಿದ್ದು, ಇಂದು ಕೃಷಿ ಚಟುವಟಿಕೆಗಳಿಂದ ಕಾಡು ಬಯಲಾಗಿದೆ.



ಕರಿನಾರು ವೀರಪೆದ್ದಯ್ಯನು ಚಿರತೆಯೊಡನೆ ಹೋರಾಡುವ ದೃಶ್ಯ, ಕಪ್ಪಡಬಂಡಹಟ್ಟಿ

ಆಧುನಿಕ ಕಾಲಘಟ್ಟದಲ್ಲಿ ಬೇಡ ಸಮುದಾಯದವರು ವೀರಗಲ್ಲು ನೆಟ್ಟಿರುವುದು ಅಪೂರ್ವ ಸಂಗತಿ. ಇಲ್ಲಿನ ವಿವರವು ಅಷ್ಟೇ ಕುತೂಹಲಭರಿತವಾಗಿದೆ. ಹಟ್ಟಿಗೆ ನುಗ್ಗಿ ಕುರಿಗಳನ್ನು ಕೊಂದು ಹೊತ್ತು ಹೋಗುತ್ತಿದ್ದ ಚಿರತೆಯೊಂದಿಗೆ ಹೋರಾಡಿ ಪ್ರಾಣವನ್ನು ನೀಗಿಕೊಂಡ ಯರ‍್ರಪಾಪಯ್ಯನ ಹೆಸರಿನಲ್ಲಿ ಹಳ್ಳಿಯವರೆಲ್ಲ ಸೇರಿ 'ಪರು' ಮಾಡಿ ಕಲ್ಲನ್ನಿರಿಸಿದರು. ಚಿರತೆಯೊಂದಿಗೆ ಹೋರಾಡಿ ಎಂಟು ಹತ್ತು ದಿವಸಗಳವರೆಗೆ ಬದುಕಿದ್ದ ಯರ‍್ರಪಾಪಯ್ಯ ರಾವುಮಟ್ಟಿ ಪಿಂಗಳ ಸಂವತ್ಸರದ ಚೈತ್ರಮಾಸದ ಎರಡನೇ ಶುಕ್ರವಾರದಲ್ಲಿ ತೀರಿಕೊಂಡ ಸಂಗತಿ ತಿಳಿದುಬರುತ್ತದೆ.[4] ಇಲ್ಲಿ ಯರ‍್ರಪಾಪಯ್ಯ, ಎರಮಂಚಯ್ಯ ಎಂಬ ಹೆಸರುಗಳಿಂದ ಕರೆದರೂ, ಅವರುಗಳು ಪೆದ್ದಯ್ಯನ ತಾತನಗುಡಿ ಎನ್ನುವುದರಿಂದ ಹೋರಾಡಿ ಮಡಿದ ವೀರನ ಹೆಸರು ಪೆದ್ದಯ್ಯನೆಂಬುದು ಸ್ಪಷ್ಟ.

ಓರ್ವ ವ್ಯಕ್ತಿ ಚಿರತೆ ಬಾಯಿಗೆ, ಕೊರಳಿಗೆ ಕೈಹಾಕಿ ಎಡಗಾಲನ್ನು ಚಿರತೆಯ ಬಲಗಾಲಿನ ಬೆರಳುಗಳ ಮೇಲೆ ಇಟ್ಟಿದ್ದಾರೆ. ಎರಡು ನಾಯಿಗಳು ಚಿರತೆಯನ್ನು ಅಲ್ಲಲ್ಲಿ ಕಚ್ಚಿ ಬೊಗಳುವ ದೃಶ್ಯವಿದೆ. ಸ್ಥಳೀಯ ಕಣಶಿಲೆಯಿಂದ ವೀರಗಲ್ಲನ್ನು ನೆಟ್ಟು ಶಾಸನವನ್ನು ಬರೆಸಲಾಗಿದೆ. ಇದರ ಕಾಲಮಾನವನ್ನು ಸುಮಾರು ೭೦ ವರ್ಷಗಳೆಂದು ಹೇಳಲಾಗಿದೆ.[5] ವೀರಗಲ್ಲು ಕೆತ್ತಿದವರಿಗೆ ಒಂದು ಹಸುವನ್ನು ಕೊಟ್ಟಿದ್ದರಂತೆ. ಈ ಹಿನ್ನೆಲೆಯಲ್ಲಿ ಆಲೋಚಿಸುವುದಾದರೆ ಬೇಡರ ಬುಡಕಟ್ಟಿನಲ್ಲಿ ಇಂಥ ಎಷ್ಟೋ ಪ್ರಸಂಗಗಳು ನಡೆದಿರಬೇಕು. ವೀರಗಲ್ಲು ಕೆತ್ತುವವರು ಮತ್ತು ದಾಖಲೆ ಮಾಡುವವರು ವಿರಳವಾಗಿದ್ದರಿಂದ, ಮೇಲ್ವರ್ಗದವರೇ ಬರೆಯಬೇಕಾಗಿದ್ದರಿಂದ ಈ ಜನಾಂಗದ ಅಪೂರ್ವ ಸಂಗತಿಗಳನ್ನು ಮರೆಮಾಚಿರಬಹುದು. 'ಎರಮಂಚಯ್ಯನ ತಂಗಿ (ಪೆದ್ದಯ್ಯ) ಹಿರೇಹಳ್ಳಿ ಪಾಪಮ್ಮ ಎಂಬುವರು ಈಗ್ಗೆ ೧೫ ವರ್ಷಗಳ ಹಿಂದೆ ಮೃತಳಾದಳಂತೆ. ಯರಮಂಚಯ್ಯನ ಮೊಮ್ಮಕ್ಕಳಾದ ಸಣ್ಣಬೋರಯ್ಯ ಮತ್ತು ಕಾಟಯ್ಯ ಎಂಬುವರು ಈಗಲೂ ಇದ್ದಾರೆ.[6] ಈ ಪೆದ್ದಯ್ಯ ಅಜ್ಜನ ಮೊಮ್ಮಗನೇ ಇಂದಿನ ಪೂಜಾರಿ. ಆತನ ಹೆಸರು ಓಬಯ್ಯ, ಪತ್ನಿ ಮಾರಕ್ಕ. ಈ ವೀರಗಲ್ಲನ್ನು ನಾಯಕ ಜನಾಂಗದವರು ಪೂಜಿಸುತ್ತಾರೆ.[7] ಹಬ್ಬ – ಹರಿದಿನಗಳಲ್ಲಿ ಹೊಸಬಟ್ಟೆ ಉಟ್ಟು ಹಣ್ಣು, ಕಾಯಿ ಬಡಿಸಿಕೊಂಡು ಹೋಗುವರು.[8] ಈ ವೀರನ ಸ್ಮರಣಾರ್ಥ ಇಂದಿಗೂ ರೂಢಿ – ಸಂಪ್ರದಾಯಗಳನ್ನು ಉಳಿಸಿಕೊಂಡು ಬಂದಿದ್ದಾನೆ. ಎರಡು ತಲೆಮಾರುಗಳಿಂದಲೂ ಸ್ಥಳೀಯ ಚರಿತ್ರೆಯನ್ನು ಹೊಂದಿರುವ ಈ ಕರಿನಾರಿನ ವಂಶವು ಅಷ್ಟೇ ಪ್ರಮುಖವಾದುದು.

[1] ‘ಕರಿನಾರು’ ಎನ್ನುವ ಜನರು ಕರ್ನಾಟಕದ ಮೂಲನಿವಾಸಿಗಳು. ಬೇಡ ಬುಡಕಟ್ಟಿನ ಒಂದು ಬೆಡಗಿನ ಕರಿನಾರು ಎಂದು ಆ ನಾಯಕನಿಗೆ ಕರಿನಾಡು ಎಂದು ಕರೆಯುತ್ತಾರೆ. ಇವರು ಬೇಟೆ ಮತ್ತು ಪಶುಪಾಲಕ ವೃತ್ತಿಗಳಲ್ಲಿದ್ದರು. ಇತ್ತೀಚೆಗೆ ಕೃಷಿಯನ್ನವ ಲಂಬಿಸಿದ್ದಾರೆ. ಇವರು ನೀಳವಾದ ದೇಹ, ಉದ್ದವಾದ ಮೂಗು, ಬಲವಾದ ಮೈಕಟ್ಟನ್ನು ಹೊಂದಿದ್ದು, ಎಂಥಾ ಅಸಾಧ್ಯವಾದ ಕೆಲಸವನ್ನು ಕ್ಷಣಾರ್ಧದಲ್ಲಿ ಪೂರೈಸುವ ಸಾಮರ್ಥ್ಯವುಳ್ಳವರಾಗಿದ್ದಾರೆ. ಪುರಾಣ, ಕಾವ್ಯಗಳಲ್ಲಿ ಈ ಪದದ ಉಲ್ಲೇಖವಿದ್ದು, ಕರ್ನಾಟಕದ ನಾಮನಿಷ್ಪತ್ತಿಯ ಹಿನ್ನೆಲೆಯಲ್ಲಿ ಕರಿನಾರು>ಕರುನಾಡು ಜನಸಮುದಾಯದ ಪ್ರಭಾವ ಇದ್ದಂತಿದೆ. ಪ್ರಾಚೀನ ಕಾಲದಿಂದಲೂ ಜೀವಂತವಿರುವ ಗ್ರಾಮಗಳಾದ ಕರೆನಹಳ್ಳಿ, ಕರ್ನಾರಹಟ್ಟಿ, ಮ್ಯಾಸರಹಟ್ಟಿ, ವಲಸೆ, ಮೇಗಳ ಕರ್ನಾರಹಟ್ಟಿ, ಮ್ಯಾಸರಹಟ್ಟಿ, ವಲಸೆ, ಕರ್ನಾರಹಟ್ಟಿ (೩) ಎಂಬಂಥವು ಹಲವಾರು ಕಂಡುಬರುತ್ತವೆ. ಕರಿನಾರು ಶ್ರೀಶೈಲ ಮಲ್ಲಿಕಾರ್ಜುನನ ಆರಾಧಕರು. ಇದರ ಪ್ರತೀಕ ದೇವರೆತ್ತು (ಮಲ್ಲಯ್ಯನ ಎತ್ತುಗಳು) ಗಳನ್ನು ಪಾಲನೆ ಮಾಡುತ್ತಾರೆ. ಈ ವಂಶದ ಮಹಿಳೆಯರು ಅಷ್ಟೇ ವೀರವನಿತೆಯರು. ಚಿಕ್ಕುಂತಿ (ದೇವರಹಟ್ಟಿ) ಯ ಕಂಪಳರಂಗಸ್ವಾಮಿ ಇವರಿಗೆ ಆರಾಧ್ಯ ದೇವರು. ಈ ಸ್ಥಳವನ್ನು ಎರಡನೆ ತಿರುಪತಿ ಎನ್ನುವುದುಂಟು. ಇಂಥ ಪ್ರಸಿದ್ಧ ಪರಂಪರೆಯುಳ್ಳ ಕರಿನಾರಿನ ವೀರ ಪೆದ್ದಯ್ಯ.

[2] ೧. ಕರನಿ ಗುಡ್ಡಂ ಬೋರಣ || ||ಮಗ ಯರಪಾಪಯ||

೨. ನುಂ ಮಗ|| ||ಪೆದ್ದ (ನ್ನ?) ಯ್ಯ||

೩. ಪಯಿಂಗಳ ನಂಮಸರದ ಚೆಯಿತ್ರ ಸುದ್ಧ||

೪. ಸುಕ್ರವಾರ || ಪೆದ್ದೆ (ನ್ನೆ?) ಯ್ಯ ಮೃತ್ಯು|| ಎಂದಿದೆ. ಆದ್ದರಿಂದ ಯರಮಂಚಯ್ಯ ಎಂಬ ವ್ಯಕ್ತಿಯಿಲ್ಲದೆ, ಪೆದ್ದಯ್ಯನು ಚಿರತೆಯನ್ನು ಕೊಂದ ಧೀರನು ಆಗಿರುವನು.

[3] ಡಾ.ಆರ್. ಶೇಷಶಾಸ್ತ್ರಿ: ಕರ್ನಾಟಕದ ವೀರಗಲ್ಲುಗಳು, ಕ.ಸಾ.ಪ. ಬೆಂಗಳೂರು, ೧೯೮೨, ಪು.೨೮೭, ಅಲ್ಲದೆ, ಪು.೪೯, ೧೩೭ ನ್ನು ಗಮನಿಸಬಹುದು.

[4] ಎ. ಕೃಷ್ಣಮೂರ್ತಿ: ಈರ ಸಿರಿಯಣ್ಣ, ಕನ್ನಡ ಸಾಹಿತ್ಯ ಪರಿಷ್ಪತ್ರಿಕೆ, ಸಂಪುಟ: ೬೧, ಸಂಚಿಕೆ: ೨, ಡಿಸೆಂಬರ್ ೧೯೭೬, ಕ.ಸಾ.ಪ ಬೆಂಗಳೂರು, ಪು.೬೧

[5] ಪೂರ್ವೋಕ್ತ : ೩, ಪು.೦೮

[6] ಜೆ.ಆರ್. ರಾಮಮೂರ್ತಿ, (ಸಂ) : ’ಮೊಳಗುವ ಕಲ್ಲು’ ೭ನೇ ಚಿತ್ರದುರ್ಗ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ, ಮೊಳಕಾಲ್ಮುರು ೩ ಮತ್ತು ೪ ಜನವರಿ ೧೯೯೮, (ಸ್ಮರಣ ಸಂಚಿಕೆ) ಕೋ.ಶ. ವಿಶ್ವನಾಥ ಅವರು ಕಪ್ಪಡ ಬಂಡಹಟ್ಟಿಯ ಒಂದು ವೈಶಿಷ್ಟ ವೀರಗಲ್ಲು ಲೇಖನದಲ್ಲಿ ಚರ್ಚಿಸಿದ್ದಾರೆ.

[7] ವಿರೂಪಾಕ್ಷಿ : ಮಧ್ಯಕಾಲೀನ ಕನ್ನಡ ಕಾವ್ಯಗಳಲ್ಲಿ ನಿರೂಪಿತವಾಗಿರುವ ಬೇಟೆ ಮತ್ತು ಬೇಡರ ಸಂದರ್ಭಗಳು : ಒಂದು ಚಾರಿತ್ರಿಕ ಅಧ್ಯಯನ (ಅಪ್ರಕಟಿತ ಪಿಎಚ್.ಡಿ. ಪ್ರಬಂಧ) ಕನ್ನಡ ವಿ.ವಿ. ಹಂಪಿ, ೨೦೦೦

[8] ವಿರೂಪಾಕ್ಷಿ ಪೂಜಾರಹಳ್ಳಿ: ಕರಿನಾರು>ಕರಿನಾಡು: ಒಂದು ಟಿಪ್ಪಣಿ, ವಾಲ್ಮೀಕಿ ಬಂಧು, ಜನವರಿ ೨೦೦೧, ಧಾರವಾಡ ಪು.೧೮

# ೬. ಚಿತ್ರದುರ್ಗ ಜಿಲ್ಲೆಯ ಬುಡಕಟ್ಟು ವೀರರು (11)

## ೬.೧೦. ಬಳ್ಳಾರಿಗೋಣೆಯ್ಯ

ಬಳ್ಳಾರಿ ಗೋಣೆಯ್ಯ ಎಂಬುವನು ೧೬ನೇ ಶತಮಾನಕ್ಕೆ ಸೇರಿದ ಒಬ್ಬ ಬುಡಕಟ್ಟು ವೀರ. ಇವನು ಮುಸ್ಲಿಮರ ವಿರುದ್ಧ ಹೋರಾಡಿದನೆಂದು ಜನಪದ ಕಾವ್ಯದಿಂದ ತಿಳಿದುಬರುತ್ತದೆ. ಕಾವ್ಯದಲ್ಲಿ ಮುಗಲದೇಶ ಎಂದು ಬರುವುದು. ಹೀಗೆಂದರೆ ಉತ್ತರ ಭಾರತವಿರಬೇಕು. ಮೊಗಲರ ಆಳ್ವಿಕೆ ಇದ್ದುದು ಅಭಾಗದಲ್ಲಿ ಆದ್ದರಿಂದ ಮೇಲಿನಂತೆ ಹೇಳಬಹುದು. ಮುಸಲ್ಮಾನರ ಸೈನ್ಯ ತನ್ನ ರಾಜ್ಯದ ಮೇಲೆ ಧಾಳಿ ಮಾಡುವಾಗ ರಾಜ ನಿದ್ರಾವಸ್ಥೆಯಲ್ಲಿರುತ್ತಾನೆ. ಸಂದರ್ಭವರಿತ ತಾಯಿ ಮಂಚಕ್ಕೆ ಧಾವಿಸಿ ವಿದೇಶಿ ದಂಡು (ಮುಗಲ) ಮುತ್ತಿಗೆ ಹಾಕಿದೆ, ಅವರನ್ನ ಹಿಮ್ಮೆಟ್ಟಿ ರಾಜ್ಯವನ್ನು ರಕ್ಷಿಸಿ ಎಂದು ಎಚ್ಚರಿಸುತ್ತಾಳೆ.

ಇವನ ಸ್ಥಳ, ಮನೆತನ, ಕಾಲಮಾನ ಸ್ಪಷ್ಟವಾಗಿ ತಿಳಿದುಬಂದಿಲ್ಲ. ಚಿತ್ರದುರ್ಗ ಮತ್ತು ಬಳ್ಳಾರಿ ಜಿಲ್ಲೆಯ ಗಡಿಭಾಗದ ಮ್ಯಾಸಬೇಡರು ಇವನು ತಮ್ಮವೀರನೆಂದು ಕಾವ್ಯ ಕಟ್ಟಿ ಹಾಡುತ್ತಾರೆ. ಈ ಭಾಗದಲ್ಲಿ ಜನಪದಕಾವ್ಯ ಸಿಗುವುದರಿಂದ ಇವನು ಈ ಭಾಗಕ್ಕೆ ಸೇರಿದವನೆಂದು ಊಹಿಸಬಹುದು. ಬೇಡರಲ್ಲಿ ಗೋಣೆಯ ಎಂಬ ವ್ಯಕ್ತಿ ನಾಮಗಳಿವೆ ಹೊರತು ದೇವರಿಲ್ಲ. ಮತ್ತು ಇವನನ್ನು ವೀರನೆಂದು ಒಪ್ಪಿಕೊಂಡಿದ್ದಾರೆ. ಆಳ್ವಿಕೆ ನಡೆಸಿದ ಯಾವೊಬ್ಬ ವ್ಯಕ್ತಿಯನ್ನು ಮ್ಯಾಸಬೇಡರು ಆರಾಧಿಸುವುದಿಲ್ಲ ಮತ್ತು ದೇವರೆಂದು ಒಪ್ಪಿಕೊಳ್ಳುವುದಿಲ್ಲ. ಗೋಣೆಯ್ಯ ಪಶುಪಾಲಕನಾಗಿ, ಜನಾಂಗವನ್ನು ಸಂಘಟಿಸಿ, ರಾಜ್ಯ ಕಟ್ಟುವುದರ ಮೂಲಕ ವಿಶೇಷ ಸ್ಥಾನ ಪಡೆದವನಿರಬೇಕು. ಇವನ ಬಗೆಗೆ ಲಭ್ಯವಿರುವ ಜನಪದ ಕಾವ್ಯ ಇಂತಿದೆ:

**ಮಟ ಮಟ ಮಧ್ಯಾಹ್ನದ ಗೋಣೆ**
**ಮಲಗಿರುವ ಮಂಚಾದು ಮ್ಯಾಲೆ**
**ತಿದ್ದಾನೆ ಎಳಮೀಸೇನ**
**ಬಳ್ಳಾರಿ ಗೋಣೆ ತಿರುವತ ಎಳಮೀಸೆನು ||**
**ಅರಮನೆಲಿಂದ ತಾಯಿ ಬಂದು**
**ತೊಳಬಡಿದೆಂದು ಎಬ್ಬಿಸ್ಯಾಳೋ**
**ದಡ್ಡುಗ್ಗುನಾದರೆದ್ದು ಕುಂತ್ಯಾನೊ**
**ಬಲ್ಲಾರಗೋಣೆ ದುಡುಗ್ಗುನಾದರೆದ್ದು ಕುಂತವುನೋ ||**
**ಅಂದಿಗಿಂದಿಗೆ ಬರುವಳಲ್ಲ**
**ಇಂದಿಗ್ಯಾಕೆ ಬಂದೆ ತಾಯಿ**
**ಬಂದ ಕಾರಣವೇನು ಬೇಗನೇಳಮ್ಮ**
**ಹಡದಮ್ಮ ತಾಯಿ, ಆಕಾಶವೇಣಿ, ಭೂಲೋಕತಾಯಿ**
**ಮತ್ತೇ ಕಾರಣವೇನು ಹೇಳಮ್ಮೊ ||**
**ಮುಗಲ ದೇಸದ ದಂಡುಮಗನೇ**
**ಕಾರಕಂಬ ರಾಡು ತಾವೆ**
**ಊರಗೋಲಂದಾಡು ತಾವಲ್ಲೊ**
**ಬಲ್ಲಾರಿ ಗೋಣಿ||**

ಊರುಗೋಲಂದು ತಾವಲ್ಲೊ||

ಅಂಗ ಹಂಬುವ ಸುದ್ಧಿ ಕೇಳಿ

ಪಳ್ಳನೆ ಕ್ಯಾಕ್ಯನೆ ಒಡಿದು

ಬಾಕು ಬಿಲ್ಲಲ ಕೈಯಲಿಡುದಾನೋ

ಬಲ್ಲಾರಿ ಗೋಣಿ ಬಾಕು ಬಿಲ್ಲಲು ಕೈಯಲಿಡುದಾನೋ||

ಮುಂದಕ್ಕೆ ಮುಂದಿಟ್ಟಕಾಲು

ಹಿಂದುಕಾದರೆ ಯಿಟ್ಟಾರೆ

ನಾಯಿಗೋಣಿಗೆ (ಹಗಲು) ಕೂಳರ ಹಾಕ್ಯರೋ

ಬಲ್ಲಾರಿ ಗೋಣಿ ನಾಯಿಗೋಣಿ ಕುಳಾನಾಕ್ಯನೋ||

ಮೂರುಕಾಸಿನ ಹೆಂಗಸು ನೀನು

ಎಂಥ ಮಾತನ್ನಾಡತಿಯೆ

ಪಳ್ಳನೆ ಕ್ಯಾಕೆಯ್ಯ ಒಡಿದಾನೊ

ಬಲ್ಲಾರಿ ಗೋಣೆ ಬಾಕುಬಿಲ್ಲಿಲ ಕೈಯಲ್ಲಿಡುದಾನೆ||

ಹತ್ತು ಲಕ್ಸ ನಮ್ಮದಯ್ಯ

ಒಂದು ಲಕ್ಸ ನಮ್ಮದಯ್ಯ

ದಂಡುಗಾದರೆ ಸ್ಯಾಲೆ ಹೊಡಿಯಯ್ಯ

ಬಲ್ಲಾರ ಗೋಣಿ ದಂಡಿಗಾದರೆ ಸ್ಯಾಲೆಹೊಡಿಯಯ್ಯೊ||

ಅಂಗ ಅಂಬವ ಸುದ್ದಿ ಕೇಳಿ

ಪಳ್ಳನೆ ಕ್ಯಾಕೆಯ ಒಡಿದು

ಬಾಕುಬಿಲ್ಲಲು ಕೈಯಲಿಡುದಾನೋ

ಬಲ್ಲಾರಿ ಗೋಣಿ ಬಾಕ ಬಿಲ್ಲಲಿ ಕೈಯಲಿಡುತಾನೆ||

ಸೂಳೆರಗೇರಿಗೆ ಹೋದನಯ್ಯ

ಹತ್ತು ಮಂದಿ ಸೂಳೆರಯ್ಯ

ಒಬ್ಬರೂ ಗಂಡನ ಹೇಳಲಿಲ್ಲಯ್ಯ

ಶಿವಲಿಂಗದೊಡೆಯ ಒಬ್ಬರ ಗಂಡನ ಹೇಳಲಿಲ್ಲಯ್ಯೊ

ಇಂದಕ್ಕೆ ಇಂಗಣ್ಣೆ ಬಡಿದು

ಮುಂದಕ್ಕೆ ಮುಂಗಣ್ಣೆ ಒಡಿದು

ಸೀತಲ ಪಲಕೆ ಬಿದ್ದನಲ್ಲಯ್ಯ (ಸಿರುಪಲಕೆ)

ಬಲ್ಲಾರಿ ಗೋಣಿ ಸೀಳು ಪದಲಕೆ ಬಿದ್ದನಲ್ಲಯ್ಯೋ ||

[1]

---

[1] ವಕ್ತೃ: ಗುಗ್ಗಪಾಪಯ್ಯ : ೪೫. ಕೃಷಿ (ಅವಿದ್ಯಾವಂತ) ಕನ್ನಬೋರಯ್ಯನಹಟ್ಟಿ, ಪೂಜಾರಹಳ್ಳಿ ಅಂಚೆ, ಕೂಡ್ಲಿಗಿ ತಾ, ಬಳ್ಳಾರಿ ಜಿಲ್ಲೆ.

# ೬. ಚಿತ್ರದುರ್ಗ ಜಿಲ್ಲೆಯ ಬುಡಕಟ್ಟು ವೀರರು (12)

## ೬.೧೧ ಮರೆಯಾದ ಇತರ ವೀರರು

ಮೌಖಿಕ ಸಾಹಿತ್ಯದಲ್ಲಿಯೂ ಅಸ್ಪಷ್ಟ ಕುರುಹುಗಳಿರುವ ಕೆಲ ವೀರರು ಕಂಡು ಬರುತ್ತಾರೆ. ಇವರ ಬಗ್ಗೆ ಲಿಖಿತ ವಿವರಗಳಿಲ್ಲ. ಮತ್ತು ಮೌಖಿಕ ಪರಂಪರೆಯು ಸ್ಪಷ್ಟ ಪಡಿಸುವುದಿಲ್ಲ. ಅಪೂರ್ಣ ಮಾಹಿತಿಗಳಿಂದ ಅಲಕ್ಷೆಗೊಳಗಾದವರ ಪ್ರಸಂಗಗಳನ್ನು ಇಲ್ಲಿ ಸಮೀಕ್ಷಿಸುವುದು ಉಚಿತ. ಕಾಲಗರ್ಭದಲ್ಲಿ ಇವರು ಮರೆಯಾಗುವುದನ್ನು ಸ್ಮರಿಸುವಂತ ಕೆಲಸವು ನಡೆಯಬೇಕಾಗಿದೆ.

ಇಲ್ಲಿ ಗ್ರಾಮ, ಹಳ್ಳಿ, ಹಟ್ಟಿಯ ಮೂಲಕ ವೀರನಾಗುವುದು, ವೀರನಾಗಿ ಆ ಹಳ್ಳಿಯನ್ನು ಅಭಿವೃದ್ಧಿ ಪಡಿಸುವುದು ಒಂದಕ್ಕೊಂದು ಸಹ ಸಂಬಂಧವಿದೆ. ಚಳ್ಳಕೆರೆ ಪಟ್ಟಣಕ್ಕೆ ಸೇರಿರುವ ಕಾಟಪ್ಪನಹಟ್ಟಿ ಒಂದು ಧಾರ್ಮಿಕ ನೆಲೆ. ಇಲ್ಲಿ ಕಾಟಪ್ಪನಾಯಕನ ದೇವಾಲಯವಿದೆ. ಈ ಕಾಟಪ್ಪ ಕಿರುಪಾಳೆಯಗಾರನೆಂತಲೂ, ಬುಡಕಟ್ಟು ವೀರನೆಂತಲೂ ತಿಳಿಸುತ್ತಾರೆ. ಆದರೆ ಪಾಳೆಯಗಾರರ ಅವಧಿಯಲ್ಲಿ 'ಕಾಟನಾಯಕ' ಎಂಬುವನು ಜಗಳೂರುಹತ್ತಿರ ಕಣಕುಪ್ಪೆ ಆಡಳಿತವನ್ನು ನೋಡಿಕೊಳ್ಳುತ್ತಿದ್ದ. ಚಿತ್ರದುರ್ಗದ ಅರಸ ಕಾಟಪ್ಪನಾಯಕನಿದ್ದನೆಂದು ತಿಳಿದುಬರುತ್ತದೆ. ಇಲ್ಲಿ ನಾಯಕ ಅರಸರ ವಂಶಸ್ಥರು ನೆಲೆಸಿದ್ದಾರೆ. ಈ ದೇವರ ಯಜಮಾನ ನಾರಾಯಣಪ್ಪ ಈ ಬಗ್ಗೆ ಮಾಹಿತಿ ಕೊಡುತ್ತಾರೆ. ಹೆಣ್ಣಿನ ಹೆಸರಿನಲ್ಲಿ ಆರಾಧನೆಯಿದೆ. ಕಾಟಮದೇವರ ಕೋಟೆ ಎಂಬುದು ವೇದಾವತಿ ನದಿ ಹತ್ತಿರವಿದೆ. ಇಲ್ಲಿ ಮ್ಯಾಸನಾಯಕ ಕುಲದೇವತೆ ಕಾಟಮ್ಮ ನೆಲೆಸಿರುವಳು.


ಚಲಿಮಿನಾಯಕ ಎಂಬುವನು ಹರತಿ ವಂಶದ ಅರಸ. ಇವನು ಹಿರಿಯೂರು – ಚಳ್ಳಕೆರೆ ತಾಲ್ಲೂಕುಗಳ ಮಧ್ಯದ ಭೂಭಾಗವನ್ನು ಆಳಿದ ಕಾರಣಕ್ಕಾಗಿ ಇವನ ಹೆಸರಲ್ಲಿ ಗುಡಿಯನ್ನು ಕಟ್ಟಿಸಲಾಗಿದೆ. ಹೀಗೆ ಚಿತ್ರನಾಯಕ ಎಂಬ ವ್ಯಕ್ತಿ ಚಳ್ಳಕೆರೆ ತಾಲೂಕು ತಳಕು ಹೋಬಳಿಗೆ ಸೇರಿದ ಒಂದು ಗ್ರಾಮ ಚಿತ್ರಯ್ಯನಹಟ್ಟಿಯಲ್ಲಿ ನೆಲೆಸಿದ್ದ. ಇದು ವೇದಾವತಿ ನದಿ ದಂಡೆಯ ಮೇಲಿದೆ. ಚಿತ್ರನಾಯಕನ ಅನುಯಾಯಿಗಳಿದ್ದು, ಇವನು ಚಿತ್ರದುರ್ಗದ ಅರಸನೆಂದು, ಬುಡಕಟ್ಟು ದೈವವೆಂದು ಆರಾಧಿಸಲಾಗುವುದು. ಚೆನ್ನಮ್ಮನಾಗತಿಹಳ್ಳಿ, ಕಲ್ಲವ್ವನಾಗತಿಹಳ್ಳಿಗಳು ಇಲ್ಲಿನ ನಾಯಕ ವೀರವನಿತೆಯರ ಸಾಹಸವನ್ನು ಸಂಕೇತಿಸುತ್ತವೆ.

ಚಳ್ಳಕೆರೆ ತಾಲೂಕಿನಲ್ಲಿ ಕಾಲುವೆಹಳ್ಳಿ ಎಂಬ ಗ್ರಾಮವಿದೆ. ಇಲ್ಲಿ ಯಾವುದೋ ಕಾಲಘಟ್ಟದಲ್ಲಿ ನಡೆದ ಘಟನೆಯನ್ನು ಮೆಲುಕು ಹಾಕುವರು. 'ಜಾಜೂರಿನ ಸಮೀಪದ ನಾಯಕರ ಮತಕ್ಕೆ ಸೇರಿದ ಗಂಗಾಸಾಸಿಯ ಮುಲುಕುಮೋಟು ಮುಚ್ಚುಲೋರು ಒಂದು ಕಡೆ, ಮತ್ತೊಂದು ಕೊಂಡಲದವರಿಗೂ ಹೆಣ್ಣಿನ ಸಲುವಾಗಿ ಜಗಳವಾಗಿ ಗಡಿ ವ್ಯವಹಾರಗಳು ನಡೆದು, ಸಜ್ಜೆ ಮುತ್ತೆ ಎನ್ನುವ ಹಿರಿಯರು ದುರ್ಗದಲ್ಲಿ ದಪೆದಾರಿಕೆ ಕೆಲಸದಲ್ಲಿದ್ದು, ದುರ್ಗಕ್ಕೆ ಹೋದಾಗ, ಅವನ ಆರು ಜನ ತಮ್ಮಂದಿರು ಕಾಲುವೆಹಳ್ಳಿ ಕಂಚುಗಾರ ಕುಟಪ್ಪನ ಭೂಮಿಯಲ್ಲೆ ನಿಂತರು. ಗೋಸಿ ಕೆರೆಯ ತುರಕನೊಬ್ಬ ಕಾಲುವೆಹಳ್ಳಿ ಕಾಟಪ್ಪನ ಮಗಳನ್ನು ಕೊಟ್ಟು ಲಗ್ನ ಮಾಡೆಂದು ದಂಡುಕಟ್ಟಿ ಬಂದು ನಿಂತಾಗ, ತುರಕವನಿಗೆ ಹೆಣ್ಣು ಹೇಗೆ ಕೊಡಲಿ? ಅವನ ತಲೆ ಕಡಿದು ಬನ್ನಿ, ನಿಮಗೆ ಗುಡಿಹಳ್ಳಿ, ಕ್ಯಾತನಹಳ್ಳಿ, ಉಳ್ಳಾರ್ಥಿ, ಕಾಲುವೆಹಳ್ಳಿ ಮುಂತಾದ ಏಳು ಹಳ್ಳಿಗಳನ್ನು ಇನಾಮು ಕೊಡುತ್ತೇನೆಂದು, ಕಾಟಪ್ಪ ಈ ಅಣ್ಣ ತಮ್ಮಂದಿರಿಗೆ ಸಹಾಯ ಕೇಳಿದ. ಅವರು ತುರುಕನ ತಲೆ ಕಡಿದು ಬಂದರು. ಕಾಟಪ್ಪ ಮಾತಿನಂತೆ ಇನಾಂ ಕೊಟ್ಟ. ಅಲ್ಲಿಂದ ಇಲ್ಲಿ ನಾಯಕರು ನೆಲೆಯಾಗಿ ನಿಂತರೆಂದು ದಪೇದಾರ ಬಸಪ್ಪನ ವಂಶಾವಳಿಯಿಂದ ತಿಳಿದುಬರುತ್ತದೆ.

[1]

ಚಳ್ಳಕೆರೆ ತಾಲೂಕಿನಲ್ಲಿ ಕೋಟೆಕೆರೆ ಎಂಬ ಗ್ರಾಮವಿದೆ. ಇಲ್ಲಿ ಕೋಟೆಗೆರೆ ವಂಶದ ನಾಯಕರು ಆಳಿದ ಕುರುಹುಗಳಿವೆ. ಅಬ್ಬೆಯನಾಯಕ, ಆದೆಯ್ಯ ನಾಯಕ, ಕೋಟೆಯ್ಯ ನಾಯಕ ಎಂಬ ಅಣ್ಣತಮ್ಮಂದಿರು ಪ್ರಸಿದ್ಧ ಅರಸರೆನಿಸಿಕೊಂಡಿದ್ದರು. ಇವರ ಮೂಲಪುರುಷ ಅಜ್ಜೆಯನಾಯಕ. ಕೋಟೆಯನಾಯ್ಕನ ಮಗ ಮಲ್ಲೆಯನಾಯ್ಕನು ೧೪ನೇ ಶತಮಾನದಲ್ಲಿ ಆಳುತ್ತಿದ್ದನೆಂದು ಶಾಸನ (ಚಳ್ಳಕೆರೆ) ದಲ್ಲಿ ಉಲ್ಲೇಖಿಸಲಾಗಿದೆ.

ಇದೇ ತಾಲೂಕಿನ ಕುದಾಪುರ ಎಂಬ ಧಾರ್ಮಿಕ ನೆಲೆ ಚಳ್ಳಕೆರೆ ನಾಯಕನಹಟ್ಟಿ ರಸ್ತೆ ಮಧ್ಯದಲ್ಲಿ ಬರುತ್ತದೆ. ನಾಯಕನಹಟ್ಟಿ ಪಾಳೆಯಗಾರ ಬೋಡಿಮಲ್ಲಪ್ಪನಾಯಕ ಈ ಗ್ರಾಮವನ್ನು ಸ್ಥಾಪಿಸಿದನು.[2] 'ಖುದಾಪುರ'ವೆಂದು ಮುಸ್ಲಿಂರು ಅಲ್ಲಾನನ್ನು ಸ್ಮರಿಸಿ ಹೀಗೆ ಕರೆಯುತ್ತಾರೆಂದು ಹೇಳಲಾಗುತ್ತದೆ. ಮ್ಯಾಸನಾಯಕರ ಆರಾಧನಾ ಕೇಂದ್ರ. ಎಲ್ಲರೂ ಕೂಡಿ ಹಬ್ಬ – ಆಚರಣೆ, ಜಾತ್ರೆಗಳನ್ನು ಮಾಡುವ ನೆಲೆ. ಹಿಂದೊಮ್ಮೆ ಈ ಬೋರೆದೇವರ ಸನ್ನಿಧಿಯಲ್ಲಿ ವ್ಯಾಸೆ ಕೊಯ್ಯುವ ಪದ್ಧತಿ ಚಾಲ್ತಿಯಲ್ಲಿತ್ತು. ಯರಮಂಚಿನಾಯಕನದು ಕೆಂಪು ಬಣ್ಣದ ಹೋತ, ಕಾಕಳಮಾರನದು (ಕು) ಕರಿ ಹೋತು. ಇವರಿಬ್ಬರೂ ಅಣ್ಣ – ತಮ್ಮಂದಿರು. ಒಮ್ಮೆ ಬಲಿಕೊಡುವಾಗ ಅಣ್ಣ ಬರುವುದು ತಡವಾಯಿತೆಂದು ಕಾಕಳನಾಯಕ ಬಲಿಕಾರ್ಯ ಮುಗಿಸಿಬಿಟ್ಟ. ಅವಮಾನಗೊಂಡ ಯರಮಂಚನಾಯಕ ೭ ಸಾರಿ ಬಲಿಕೊಟ್ಟರೂ ಕೆಂಪು ಕುರಿ ಬದುಕಿಬರುತ್ತಿತ್ತು. ಕಾಯಿ ಒಡೆದರೆ ಕಾಯಿ ಕೂಡಿಕೊಳ್ಳುತ್ತಿತ್ತು. ಇದರಿಂದ ಖುದಾಪುರದ ಬೋರೆದೇವರ ಮೊದಲ ಮೀಸಲು ಪೂಜೆ ಯರಮಂಚನ ವಂಶಸ್ಥರಿಗೆ ಸಲ್ಲಬೇಕೆಂದು ತೀರ್ಮಾನವಾಯಿತು.



ನೇರ್ಲಗುಂಟೆ ಬಂಗಾರುದೇವರು

ಗುಡಿಹಳ್ಳಿ ಎಂಬುದು ಮ್ಯಾಸಬೇಡರ ಸಾಂಸ್ಕೃತಿಕ ಕೇಂದ್ರ. ಓಬಳ ದೇವರು ಮತ್ತು ರಂಗನಾಥ ಗುಡಿಗಳು ಇಲ್ಲಿವೆ. ೭ ಜನ ಅಣ್ಣತಮ್ಮಂದಿರು ಇಲ್ಲಿದ್ದ ಪ್ರತೀತಿಗಳಿವೆ. ಅವರೆಂದರೆ ಬೂತಿಮುತ್ತೆ, ಸೀತಮುತ್ತೆ, ಎರಗುಂಟಮುತ್ತೆ, ಧಗಮುತ್ತೆ, ಕುರಿಮುತ್ತೆ ಮತ್ತು ಏಳಂದೆ ಮುತ್ತೆ, ಇವರೆಲ್ಲರೂ ಮಹಾಸಾಧ್ವಿ, ಸವ್ಯಸಾಚಿ ವೀರರು ಆಗಿದ್ದರು.

ಬಂಜಗೆರೆ ಓಬಳದೇವರು ತುಂಬಾ ಪ್ರಸಿದ್ಧಿ. ಇದರಂತೆ ಗೋಸಿಕೆರೆಯೂ ಇದೆ. ಇದು ತಿಮ್ಮಣ್ಣನಾಯಕನ ಕೋಟೆ ಎಂಬ ಗ್ರಾಮದ ಹತ್ತಿರ ಬರುತ್ತದೆ. ಪಕ್ಕದಲ್ಲಿ ವೇದಾವತಿ ನದಿ ಹರಿಯುತ್ತಿದ್ದು, ಅನೇಕ ಪ್ರಾಚ್ಯಾವಶೇಷಗಳ ಆವಾಸ ಕೇಂದ್ರವು ಆಗಿದೆ ಈ ಗೋಸಿಕೆರೆ. ತಿಮ್ಮಣ್ಣನಾಯಕನೆಂಬುವರು ಕ್ರಿ.ಶ.೧೫೦೭ – ೧೫೨೯ ರಲ್ಲಿ ವಿಜಯನಗರದವರ ಅಧೀನದಲ್ಲಿ ಆಳುತ್ತಿದ್ದ. ಅವನ ಪ್ರದೇಶವೇ ಚಿತ್ರದುರ್ಗ ಜಿಲ್ಲೆಯ ಪೂರ್ವಭಾಗವಾಗಿತ್ತು. ಉಳ್ಳಾರ್ಥಿ, ಘಟಪರ್ತಿ, ನನ್ನಿವಾಳ ಮೊದಲಾದವು ಸಾಂಸ್ಕೃತಿಕ ಕೇಂದ್ರಗಳಾಗಿವೆ. ಚಳ್ಳಕೆರೆಗೆ ಪ್ರಾಚೀನ

ಕಾಲದಲ್ಲಿ ಓರಗಲ್ಲು ಪಟ್ಟಣವೆಂದು ಹೆಸರಿತ್ತು. ಇದು ಮಲ್ಲಿಕಾಫರನ ದಂಡೆಯಾತ್ರೆಗೆ ತುತ್ತಾಗಿ ನಾಶಗೊಂಡು ಚಳ್ಳಕೆರೆ ಎಂದಾಯಿತಂತೆ. ಎಲ್ಲಿ ಮ್ಯಾಸನಾಯಕರ ವೀರರು ಬದುಕಿ ಬಾಳಿದ್ದುಂಟು. ದೊಡ್ಡೇರಿಯು ಒಂದು ಚಾರಿತ್ರಿಕ ಸ್ಥಳ. ಇಲ್ಲಿ ಪಾಳೆಯಗಾರರು ಆಳ್ವಿಕೆ ನಡೆಸುತ್ತಿದ್ದಾಗ ತಿಪ್ಪಳ್ಳನಾಯ್ಕ ಎಂಬುವನು ವಿಜಯನಗರದ ಕೃಷ್ಣದೇವರಾಯನ ಆಧೀನದಲ್ಲಿ ಆಳುತ್ತಿದ್ದ. ದೊಡ್ಡ ಉಳ್ಳಾರ್ಥಿಯಲ್ಲಿ ನೊಳಂಬರ ಕಾಲದ ಅವಶೇಷಗಳಿವೆ.



ಕಾಮಗೇತನಹಳ್ಳಿ ಸೂರಪ್ಪನಾಯಕ

ಪರಶುರಾಂಪುರದಲ್ಲಿ – ಅಬ್ಬೆನಾಯಕ, ಸೂರನಹಳ್ಳಿ – ಸೂರಪ್ಪ, ಹೊಟ್ಟೆಪ್ಪನಹಳ್ಳಿ – ಹೊಟ್ಟೆಪ್ಪನಾಯ್ಕ (ನಹಳ್ಳಿ), ಕಾಟನಾಯಕನಹಳ್ಳಿ – ಕಾಟನಾಯಕ, ಬೊಮ್ಮಗೊಂಡನಕೆರೆ – ಬೊಮ್ಮನಾಯಕ (ಬೊಮ್ಮದೇವರಹಳ್ಳಿ = ಬೊಮ್ಮಲಿಂಗನಹಳ್ಳಿ, ಕಣಕುಪ್ಪೆ – ಕೊಮರಪ್ಪನಾಯಕ (ಜಗಳೂರು), ನೇತ್ರಯ್ಯನಹಳ್ಳಿ – ನೇತ್ರಯ್ಯ, ಜುಂಜುರುಗುಂಟೆ – ಗಾದರಿಪಾಲಯ್ಯ, ಜಂಪಣ್ಣನಾಯ್ಕನ ಕೋಟೆ – ಜಂಪಳ್ಳಿನಾಯಕ, ಮೊದಲಾದ ಸ್ಥಳಗಳಲ್ಲಿ ಸ್ಥಳೀಯ ನಾಯಕರು ಕಂಡುಬರುತ್ತಾರೆ. ಜಗಳೂರು ತಾಲೂಕಿನ ದೊಡ್ಡ ಬೊಮ್ಮನಹಳ್ಳಿಯಲ್ಲಿ ನಾಯಕ ಜನಾಂಗವಿದೆ. ಅಣಬೂರಿನ ವೀರನೊಬ್ಬ ಕಣಕುಪ್ಪೆಕೋಟೆ ಕಟ್ಟುವಾಗ ಹಿರೇಬೊಮ್ಮಯ್ಯ ಎನ್ನುವ ಗುರಿಕಾರ ತನ್ನ ೫೦ ಮಂದಿ ಸೈನಿಕರೊಂದಿಗೆ ಈ ಗ್ರಾಮವನ್ನು ಸ್ಥಾಪಿಸಿದ.

ಪಾಪದೇವರಹಳ್ಳಿ – ಪಾಪೇದೇವರು, ಬಿಳಿಚೋಡು – ಎರ್ರಕೃಷ್ಣಪ್ಪನಾಯಕ, ಪಾಲವ್ವನಹಳ್ಳಿ – ಪಾಲನಾಯಕ, ಐಮಂಗಲ – ಬೊಮ್ಮನಾಯಕ, ಹೀಗೆ ಆಯಾ ಸ್ಥಳಗಳ ಬಗ್ಗೆ ಸ್ಥಳೀಯ ನಾಯಕರು ಖ್ಯಾತಿಪಡೆದಿರುವುದು ಗಮನಾರ್ಹ.

ಮಧ್ಯಕರ್ನಾಟಕವನ್ನು ಅಥವಾ ಆನೆಗುಂದಿಯಿಂದ ಮೈಸೂರಿನವರೆಗೆ 'ಬೇಡರನಾಡು' ಎಂದು ಕರೆಯುತ್ತಿದ್ದರು. ಇಂದು ತೀರಾ ಸಂಕುಚಿತಗೊಂಡು ತುಂಗಭದ್ರಾ – ವೇದಾವತಿ ನದಿಗಳ ಮಧ್ಯದ ಪ್ರದೇಶಕ್ಕೆ ಬೇಡರನಾಡೆಂದು ಕರೆಯುವರು. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮತ್ತು ಪ್ರತಿಯೊಂದು ಜಾತಿಯವರು ವಾಸಿಸುವುದರಿಂದ ಮೇಲಿನಂತೆ ಕರೆಯುವುದು ಉಚಿತವಲ್ಲವೆನೋ ಆದರೆ ಈ ಪ್ರದೇಶದಲ್ಲಿ ಬೇಡರಹಟ್ಟಿಗಳು ವೀರನ ಹೆಸರಿನಲ್ಲಿ ಸ್ಥಾಪನೆಗೊಂಡಿರುವುದಕ್ಕೆ ನೂರಾರು ಸ್ಥಳಗಳು ದೊರೆಯುತ್ತವೆ.[3] ಉದಾ: ಬೈಯ್ಯನಾಯಕನಹಟ್ಟಿ, ಓಬವ್ವನಹಟ್ಟಿ, ಕನ್ನಬೋರಯ್ಯನಹಟ್ಟಿ ಮತ್ತು ಚನ್ನಬಸಯ್ಯನಹಟ್ಟಿ.

---

[1] ಟಿ.ಗಿರಿಜ, ಚಿತ್ರದುರ್ಗ ಜಿಲ್ಲಾ ದರ್ಶಿನಿ, ಪು.೧೪೫

[2] ಗಗ್ಗರಿದಾಸ, ರಪ್ಪಲಸೂರಿ, ಯರಗೊಡ್ಲಯ್ಯ, ಕಾಮಗೇತನಹಳ್ಳಿ ಸೂರಪ್ಪನಾಯಕ ಇತರರು ಮ್ಯಾಸಬೇಡರ ವೀರರು.

[3] ನೋಡಿ : ಚಿನ್ನಹಗರಿ ನದಿ ಪರಿಸರದ ಪ್ರಾಚ್ಯಾವಶೇಷಗಳು : ಒಂದು ಶೋಧನೆ, ಇತಿಹಾಸ ದರ್ಶನ, ಸಂ. ೧೨, ಪು.೧೩ – ೧೪

# ೬. ಚಿತ್ರದುರ್ಗ ಜಿಲ್ಲೆಯ ಬುಡಕಟ್ಟು ವೀರರು (13)

## ೬.೧೨. ಆಧುನಿಕ ನಾಯಕ ಮುಖಂಡರು

### ೬.೧೨.ಎ ಭೀಮಪ್ಪ ನಾಯಕ

ಜನಾಂಗದ ಸೇವೆಯಲ್ಲಿ ತೊಡಗಿಸಿಕೊಂಡು ನಾಯಕರ ಏಳಿಗೆ ಬಗ್ಗೆ ಚಿಂತಿಸಿದವರ ಪೈಕಿ ಎ. ಭೀಮಪ್ಪ ನಾಯಕ ಅವರ ಹೆಸರು ಸುಪರಿಚಿತ. ಈ ಭಾಗದ (ಚಿತ್ರದುರ್ಗ) ಬಹುದೊಡ್ಡ ರಾಜಕಾರಣಿ, ಜನಾಂಗದ ಮುಖಂಡರಾದ ಭೀಮಪ್ಪ ನಾಯಕರು ಸಚಿವರಾಗಿ ಅನೇಕ ಬಗೆಯ ಕೆಲಸ – ಕಾರ್ಯಗಳನ್ನು ಮಾಡಿತೋರಿಸಿರುವುದು ಸ್ಮರಣೀಯ.

ಈಗಿನ ದಾವಣಗೆರೆ ಜಿಲ್ಲೆ ಜಗಳೂರು ತಾಲೂಕಿನ ಬಿಳಿಚೋಡು ಎಂಬುವುದು ಇವರ ಗ್ರಾಮ. ಇಲ್ಲಿನ ಹನುಮಪ್ಪ=ಹನುಮಕ್ಕ ದಂಪತಿಗಳಿಗೆ ೧೯೦೦ರ ಸುಮಾರಿನಲ್ಲಿ ದ್ವಿತೀಯ ಪುತ್ರನಾಗಿ ಈ ನಾಯಕ ಜನಿಸಿದ. ಇಲ್ಲಿ ಬಿಳಿಚೋಡು ಭರಮಪ್ಪ ನಾಯಕನೆಂಬ ಅರಸ ರಾಜ್ಯಾಳ್ವಿಕೆ ನಡೆಸಿದ ವಂಶಪರಂಪರೆ ಬೆಳೆದು ಬಂದಿದೆ. ಅವರಿಗೂ ಇವರ ಕುಟುಂಬಕ್ಕೂ ನಂಟಿದ್ದಂತಿದೆ. ಆರಂಭದ ಶಿಕ್ಷಣ ಅಕ್ಕಪಕ್ಕದ ಸ್ಥಳಗಳಲ್ಲಾಯಿತು. ನಂತರ ಚಿತ್ರದುರ್ಗ ಮೊದಲಾದ ಸ್ಥಳಗಳಿಗೆ ಹೊಗಿ ಬಿ.ಎ. ಮುಗಿಸಿದರು. ಹೀಗೆ ಬೆಳೆಯುವ ಹಂತದಲ್ಲೇ ಅಕ್ಕರೆಯ ಅಮ್ಮನನ್ನು ಕಳೆದುಕೊಂಡರು. ಆಗಲೇ ಮಾನಸಿಕವಾಗಿ ಕುಗ್ಗಿದ ಭೀಮಪ್ಪ ಚೇತರಿಸಿಕೊಂಡಿದ್ದು ತನ್ನ ಬಂಧುಗಳ ಸಹಕಾರದಿಂದ. ಅನೇಕ ಸವಾಲಯಗಳ ನಡುವೆ ನೌಕರಿಗೆ ಹೋಗಿ ನಂತರದಲ್ಲಿ ವಕೀಲವೃತ್ತಿ ಆರಂಭಿಸಿದರು. ಇವರ ಸಂಘಟನೆ ಪ್ರವೃತ್ತಿ, ಕ್ರಿಯಾಶೀಲನೆ ಕಂಡ ಸಮಾಜ ಇವರಿಗೆ ಚತುರ ರಾಜಕಾರಣಿ, ಪ್ರಾಮಾಣಿಕ ಆಡಳಿತಗಾರನೆಂದು ಕರೆಯಿತು. ರಾಜಕೀಯ ಕ್ಷೇತ್ರದಲ್ಲಿ ನುರಿತ ವ್ಯಕ್ತಿಯಾಗಿದ್ದ ಇವರಿಗೆ 'Tiger of Politics' ಎಂದು ಕರೆದರು ಈತನ ಅನುಯಾಯಿಗಳು. ವ್ಯವಸಾಯ ಕುಟುಂಬದ ಹಿನ್ನೆಲೆ ಹೊಂದಿದ ಇವರಿಗೆ ಅಂಚೆ ವೃತ್ತಿಯಿಂದ ಅಂಚೆ ಮನೆತನದವರೆಂದು ಕರೆದರು.

ಮಹತ್ವದ ಕೌಟುಂಬಿಕ ಪರಂಪರೆ ಹೊಂದಿದ ಪರಿಸರದಲ್ಲಿ ಭೀಮಪ್ಪನಾಯಕರಿಗೆ ಸ್ವಾತಂತ್ರ್ಯ ಸಂಗ್ರಾಮದ ಕಾಳ್ಗಿಚ್ಚು ಕೈಬೀಸಿ ಕರೆಯಿತು. ಸ್ವಾತಂತ್ರ್ಯ ಚಳುವಳಿಯಲ್ಲಿ ಪಾಲ್ಗೊಂಡು ಅನೇಕ ಹೋರಾಟಗಳನ್ನು ನಡೆಸಿದರು. ೧೯೩೯ರ ಅರಣ್ಯ ಸತ್ಯಾಗ್ರಹದಲ್ಲಿ ಭಾಗಿಯಾಗಿದ್ದಕ್ಕೆ ಒಂದು ವರ್ಷ ಕಾಲ ಜೈಲು ಶಿಕ್ಷೆ ಅನುಭವಿಸಿದರು. ಅಸಹಕಾರ ಚಳುವಳಿ, ಕ್ವಿಟ್ ಇಂಡಿಯಾ ಚಳುವಳಿ (೧೯೪೨) ಗಳಲ್ಲಿ ಭಾಗವಹಿಸಿದರು, ಅಲ್ಲದೆ ಮಹಾತ್ಮಗಾಂಧಿ, ಎಸ್. ನಿಜಲಿಂಗಪ್ಪ ಇತರ ನಾಯಕರ ಆದರ್ಶಗಳನ್ನು, ಸಲಹೆ ಸೂಚನೆಗಳನ್ನು ಪಡೆದು ಅವರ ಮಾರ್ಗದರ್ಶನದಿಂದ ಸಾಗುತ್ತಿದ್ದರು. ಹೀಗೆ ಬ್ರಿಟಿಷರ ವಿರುದ್ಧ ಭೂಗತ ಚಟುವಟಿಕೆಗಳಲ್ಲಿ ಉಗ್ರ ಹೋರಾಟಗಳನ್ನೇ ಮಾಡಿದರು. ಇವರು ಸಂಘಟನಾ ಚತುರ ಎನಿಸಿಕೊಂಡು ರಾಜಕೀಯ ಗುದ್ದುಗೆ ಏರಿದರು. ಚಿತ್ರದುರ್ಗದ ಪುರಸಭೆಯ ಅಧ್ಯಕ್ಷರಾಗಿ, ನಗರಸಭೆಯ ಅಧ್ಯಕ್ಷರಾಗಿ ನಗರದ ಸರ್ವಾಂಗಿಣ ಅಭಿವೃದ್ಧಿಗೆ ಶ್ರಮಿಸಿದರು. ಸ್ವಾತಂತ್ರ್ಯ ಹೋರಾಟಗಾರರಾಗಿ, ಏಕೀಕರಣದ ರೂವಾರಿಯಾಗಿ ಬೆಳೆದು ಬಂದ ನಾಯಕರ ಚರಿತ್ರೆ ಅದ್ಭುತವಾದುದು.

ಭೀಮಪ್ಪನಾಯಕರು ಚಿತ್ರದುರ್ಗ ನಗರವನ್ನು ಸುಂದರಗೊಳಿಸಿದ್ದು ಪವಾಡವೇ ಸರಿ. ವಕ್ರ ವಕ್ರವಾಗಿ, ಒಂದು ಶಿಸ್ತು, ಯೋಜನೆಗೆ ಒಳಪಡದ ನಗರಕ್ಕೆ ಬೀದಿ, ರಸ್ತೆ, ನೀರಿನ ಸೌಕರ್ಯ ಹೀಗೆ ಮೂಲಭೂತ ಸಮಸ್ಯೆಗಳತ್ತ ಗಮನಹರಿಸಿದರು. ಚಿತ್ರದುರ್ಗದ ವಿವಿಧ ಕೇರಿ, ಬಡಾವಣೆ, ಸರ್ಕಲ್‌ಗಳಿಗೆ ರಸ್ತೆ, ವಿದ್ಯುತ್‌ನಲ್ಲಿ ಮೊದಲಾದವುಗಳನ್ನು ಮಾಡಿಸಿದರು. ರಾಷ್ಟ್ರೀಯ ಹೆದ್ದಾರಿ ರಸ್ತೆ ಅಗಲೀಕರಣ ಮಾಡಿದ್ದು ಇವರ ಅವಧಿಯಲ್ಲೇ. ಅನೇಕ ಕೆರೆ, ಹೊಂಡಗಳ ಹೂಳನ್ನು ತೆಗೆಸಿದರು (ತಿಮ್ಮಣ್ಣ ನಾಯಕನಕೆರೆ, ಅಕ್ಕ – ತಂಗಿ ಹೊಂಡ ಇತ್ಯಾದಿ). ವಾಣಿ ವಿಲಾಸ ಸಾಗರದಿಂದ ಚಿತ್ರದುರ್ಗಕ್ಕೆ ಕೊಳವೆಗಳ ಮೂಲಕ ಕುಡಿಯುವ ನೀರನ್ನು ತರಿಸಿದರು. ತಾನು ಶೈಕ್ಷಣಿಕ ಹಂತದಲ್ಲಿ ಅನುಭವಿಸಿದ್ದ

ಯಾತನೆಯನ್ನು ಸ್ಮರಿಸಿಕೊಂಡು ಚಿತ್ರದುರ್ಗದಲ್ಲಿ ವಿವಿಧ ಸಮುದಾಯಗಳಿಗೆ ಹಾಸ್ಟೆಲ್‌ಗಳನ್ನು ಕಟ್ಟಿಸಿಕೊಟ್ಟರು. ಇವರ ಕಾಲದಲ್ಲಿ ಶಾಲಾಕಾಲೇಜು ಕಟ್ಟಡಗಳ ನಿರ್ಮಾಣವಾದುದಕ್ಕೆ ಈಗಿರುವ ಸರ್ಕಾರಿ ಕಲಾ ಕಾಲೇಜು ಮೊದಲಾದವುಗಳನ್ನು ನೋಡಬಹುದಾಗಿದೆ. ಜಿಲ್ಲಾ ಆಸ್ಪತ್ರೆ, ಯೂನಿಯನ್ ಚಿತ್ರಮಂದಿರ, ಜಿಲ್ಲಾಧಿಕಾರಿಗಳ ವಸತಿ ಗೃಹಗಳಲ್ಲದೆ, ಕ್ರಿಶ್ಚಿಯನ್ ಧರ್ಮಿಯರಿಗೆ ರುದ್ರಭೂಮಿ ನಿರ್ಮಿಸಿಕೊಟ್ಟರು.

ಹೀಗೆ ಪ್ರಗತಿಪರ ಚಟುವಟಿಕೆ ಮತ್ತು ಕಾರ್ಯಗಳ ನಡುವೆ ೧೯೫೨ ರಲ್ಲಿ ಮೊಳಕಾಲ್ಮುರು ವಿಧಾನ ಸಭಾಕ್ಷೇತ್ರದಿಂದ ಶಾಸಕರಾಗಿ ಆಯ್ಕೆಯಾದರು. ನಂತರ ೧೯೫೭ ರಲ್ಲಿ ಜಗಳೂರು ಮತ್ತು ಚಳ್ಳಕೆರೆ ಜಂಟಿಕ್ಷೇತ್ರದಿಂದ ಜಯಗಳಿಸಿದ್ದಕ್ಕೆ ೧೦೧ ಜೊತೆ ಎತ್ತಿನ ಬಂಡಿಗಳ ಪ್ರದರ್ಶನವನ್ನು ಮೆರವಣಿಗೆ ಮೂಲಕ ಮಾಡಿತೋರಿಸಿ ಇವರಿಗೆ ಸ್ವಾಗತ ಕೋರಿದರು ಇಲ್ಲಿನ ನಾಯಕರು.

ಇವರಿಗೆ ಪರಮ ಮಿತ್ರರಾದ ಎಸ್. ನಿಜಲಿಂಗಪ್ಪನವರನ್ನು ಮೊಳಕಾಲ್ಮುರು ಕ್ಷೇತ್ರದಿಂದ ವಿಧಾನಸಭೆಗೆ ಆರಿಸಿದ ಕೀರ್ತಿ ಭೀಮಪ್ಪನಾಯಕರಿಗೆ ಸಲ್ಲುತ್ತದೆ. ನಿಜಲಿಂಗಪ್ಪನವರ ಸಚಿವ ಸಂಪುಟದಲ್ಲಿ ಇವರು ಸಹಕಾರಿ ಖಾತೆಯನ್ನು ವಹಿಸಿಕೊಂಡಿದ್ದರು. ಕಾಂಗ್ರೆಸ್ ಪಕ್ಷಕ್ಕೆ ಅಪಾರ ಸೇವೆ ಸಲ್ಲಿಸಿದ ಭೀಮಪ್ಪ ನಾಯಕರು ವಿವಿಧ ರಂಗಗಳಲ್ಲಿ ಖ್ಯಾತಿ ಪಡೆದರು.

ಕರ್ನಾಟಕ ಗೃಹ ಮಂಡಳಿ ಅಧ್ಯಕ್ಷರಾಗಿ, ಮೈಸೂರು ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯರಾಗಿ, ಎಂ.ಎಲ್.ಸಿ. ಆಗಿ ಅನುಪಮ ಸೇವೆ ಸಲ್ಲಿಸಿದ್ದಾರೆ. ರಾಜ್ಯದ ನಾಯಕರಿಗೆ ಧೀಮಂತ ನಾಯಕರಾಗಿ, ಚಿತ್ರದುರ್ಗ ನಗರಕ್ಕೆ ಆಧುನಿಕ ಶಿಲ್ಪಿಯಾಗಿ, ಕಾಂಗ್ರೆಸ್ಸಿನ ನಿಷ್ಠಾವಂತ ರಾಜಕಾರಣಿಯಾಗಿ ಧ್ರುವತಾರೆಯಂತೆ ಮಿಂಚಿದವರು ಈ ಭೀಮಪ್ಪ ನಾಯಕರು. ಪಕ್ಷದ, ಕ್ಷೇತ್ರದ ಮತ್ತು ತನ್ನ ಜನಾಂಗದ ಅಪಾರ ಕನಸು ಉದ್ದೇಶಗಳನ್ನಿಟ್ಟುಕೊಂಡಿದ್ದ ಭೀಮಪ್ಪ ನಾಯಕರು ೧೯೬೬ ರಲ್ಲಿ ಹೃದಯಘಾತದಿಂದ ಮೃತರಾದರು. ಅವರನ್ನು ತನ್ನ ತಾಯಿನಾಡಾದ ಚಿತ್ರದುರ್ಗದಲ್ಲಿ ಶವಸಂಸ್ಕಾರ ಮಾಡಲಾಯಿತು. ಇವರ ಸ್ಮರಣಾರ್ಥ ಅನೇಕ ಶಾಲಾಕಾಲೇಜುಗಳಿಗೆ ಇವರ ಹೆಸರನ್ನಿಡಲಾಗಿದೆ.

**೨. ಹೊ.ಚಿ.ಬೋರಯ್ಯ**

ನಾಯಕ ಜನಾಂಗದ ಬಹುದೊಡ್ಡ ರಾಜಕಾರಣಿ, ಜನಾನುರಾಗಿ ಹೊಸಮಾಳಿಗೆ ಚೆನ್ನೋಬಯ್ಯ ಬೋರಯ್ಯನವರು ಇಂದಿಲ್ಲದಿರಬಹುದು. ಆದರೆ ಅವರು ನೆನಪು ಮಾತ್ರ ಶಾಶ್ವತ. ಶಾಸಕರಾಗಿ, ಮಂತ್ರಿಯಾಗಿ ವಿವಿಧ ಸಂಘಟನೆ, ಸಮ್ಮೇಳನಗಳ ಮೂಲಕ ರಾಷ್ಟ್ರಮಟ್ಟದ ರಾಜಕೀಯ ವರ್ಚಸ್ಸನ್ನು ಬೆಳೆಸಿಕೊಂಡಿದ್ದರು. ಅವರು, ಮಾಡಿದ ಸೇವೆ ಇಂದಿಗೂ ಅವಿಸ್ಮರಣೀಯ.

ಹೊ.ಚಿ. ಬೋರಯ್ಯನವರು ೧೯೧೫ ರಲ್ಲಿ ಏಕಣ್ಣ ಅಥವಾ ಬೋರಯ್ಯ ಸೂರಮ್ಮ ದಂಪತಿಗಳಿಗೆ ಜನಿಸಿದ. ಇವರದು ನಾಯಕರ ನಲಗೇತಿ ಬೆಡಗು ಮತ್ತು ನಲಗೇತಲಹಟ್ಟಿ ಚೆನ್ನಕೇಶವ ಮನೆದೇವರು. ಕೃಷಿ, ಪಶುಪಾಲನೆ ಹಿನ್ನೆಲೆಯಿರುವ ಇವರ ಕುಟುಂಬಕ್ಕೆ ಹಿಂದಿನಿಂದಲೂ ದೊಡ್ಡ ಹೆಸರಿದೆ. ಇವರ ಬಂಧುಗಳು ಅಮೃತ ಮಹಲು ಹಸುಗಳನ್ನು ಸಾಕಿದ್ದರು. ಅತೀ ಕಿರಿಯ ವಯಸ್ಸಿನಲ್ಲೇ ತಂದೆತಾಯಿಗಳನ್ನು ಕಳೆದುಕೊಂಡ ಬೋರಯ್ಯ ಚಿಕ್ಕಪ್ಪನಾದ ದಿ. ಹೊಸಮಾಳಿಗೆ ಬಿ. ಚೆನ್ನೋಬಯ್ಯನವರ ಪೋಷಣೆಯಲ್ಲಿ ಬೆಳೆದರು. ಇವರು ಪ್ರೌಢ ಶಿಕ್ಷಣದವರೆಗೂ ಚಿತ್ರದುರ್ಗದಲ್ಲಿ, ಇಂಟರ್ ಮೀಡಿಯೇಟ್ (೧೯೩೬), ಬಿ.ಎ. ಪದವಿಗಳನ್ನು (೧೯೩೮) ಮೈಸೂರು ಮಹಾರಾಜ ಕಾಲೇಜಿನಿಂದ ಪಡೆದರು. ೧೯೪೩ ರಲ್ಲಿ ಎಲ್.ಎಲ್.ಬಿ. ಪದವಿಯನ್ನು ಬೆಳಗಾವಿ ಕೊಲ್ಲಾಪುರದಲ್ಲಿ ಮುಗಿಸಿದರು. ನಂತರ ವಕೀಲಿ ವೃತ್ತಿ ಆರಂಬಿಸಿ ಪ್ರಸಿದ್ಧ ಕ್ರಿಮಿನಲ್ ವಕೀಲರೆಂದು ಹೆಸರಾದರು. ೧೯೪೬ ರಲ್ಲಿ ಚಿತ್ರದುರ್ಗ ಪುರಸಭೆಗೆ ಇವರು ಸದಸ್ಯರಾಗಿದ್ದಾರೆ, ಭೀಮಪ್ಪ ನಾಯಕರು ಅದರ ಅಧ್ಯಕ್ಷರಾಗಿದ್ದರು. ಹೊ.ಚಿ. ಬೋರಯ್ಯ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಕಾರ್ಯದರ್ಶಿ, ಅಧ್ಯಕ್ಷರಾಗಿ ಜಿಲ್ಲಾನಾಯಕ ಸಂಘದ ಕಾರ್ಯದರ್ಶಿ ಹಾಗೂ ಅಧ್ಯಕ್ಷರಾಗಿದ್ದರು. ಜಿಲ್ಲಾ ವಯಸ್ಕರ ಶಿಕ್ಷಣ ಸಮಿತಿಯ ಗೌರವ ಕಾರ್ಯದರ್ಶಿ, ಮೈಸೂರು

ವಿಶ್ವವಿದ್ಯಾಲಯದ ಸೆನೆಟ್ ಹಾಗೂ ಸಿಂಡಿಕೇಟ್ ಸದಸ್ಯರಾಗಿ, ಹಲವಾರು ಸಹಕಾರಿ ಸಂಘಗಳು, ವಿದ್ಯಾ ಸಂಘಗಳ, ಕಾರ್ಮಿಕ ಸಂಘಗಳ, ಹರಿಜನ – ಗಿರಿಜನ ಹಿಂದುಳಿದವರ ಸಂಘಸಂಸ್ಥೆಗಳ ಸಂಸ್ಥಾಪಕರಾಗಿ ಶ್ರಮಿಸಿದ್ದು, ಜನ ಮನ್ನಣೆಗೆ ಪಾತ್ರವಾಯಿತು.

ಆ ಮೂಲಕ ೧೯೫೩ ಹಾಗೂ ೧೯೬೫ ರಲ್ಲಿ ಎರಡು ಸಲ ವಿಧಾನಸಭೆಯಿಂದ ವಿಧಾನಪರಿಷತ್ತಿಗೆ ಆಯ್ಕೆಯಾದರು. ರಾಜಕೀಯದಲ್ಲಿ ಇವರಿಗೆ ಸಾಹುಕಾರ ಚೆನ್ನಯ್ಯ, ನಾಗಯ್ಯಶೆಟ್ಟಿಗಳು ಮಾರ್ಗದರ್ಶಕರಾಗಿದ್ದರು. ೧೯೬೨ ಮತ್ತು ೧೯೬೭ ರಲ್ಲಿ ಕಾಂಗ್ರೆಸ್‌ನಿಂದ ಎರಡು ಸಲ ವಿಧಾನಸಭೆಗೆ ಚಿತ್ರದುರ್ಗ ಕ್ಷೇತ್ರದಿಂದ ಆಯ್ಕೆಯಾದರು. ನಿಜಲಿಂಗಪ್ಪ ವೀರೇಂದ್ರಪಾಟೀಲರ ಮಂತ್ರಿಮಂಡಲದಲ್ಲಿ ಸಚಿವರಾಗಿ ಮುಖ್ಯ ಖಾತೆಗಳನ್ನು ಹೊಂದಿದ್ದರು. ೧೯೬೯ ರಲ್ಲಿ ಕಾಂಗ್ರೆಸ್ ವಿಭಜನೆ ಆದಾಗ ನಿಜಲಿಂಗಪ್ಪ ನೇತೃತ್ವದ ಸಂಸ್ಥಾ ಕಾಂಗ್ರೆಸ್‌ನಲ್ಲಿದ್ದರು. ಅಂದೇನಾದರೂ ದೇವರಾಜ ಅರಸು ಮಾತು ಕೇಳಿದ್ದರೇ ಹೊ.ಚಿ.ಬಿ. ಉಪಮುಖ್ಯಮಂತ್ರಿಯಾಗಿರುತ್ತಿದ್ದರು. ೧೯೮೧ ರಲ್ಲಿ ಅಖಿಲ ಭಾರತ ನಾಯಕ ಜನಾಂಗದ ಮಹಾಸಮ್ಮೇಳನ ಬೆಂಗಳೂರಿನಲ್ಲಿ ನಡೆದದ್ದು ಇವರ ನೇತೃತ್ವದಲ್ಲಿ. ಆಗಿನಿಂದಲೇ ಇವರ ರಾಜಕೀಯ ಹಿನ್ನೆಡೆಯು ಆರಂಭವಾಯಿತು. ಇವರ ಆಸಕ್ತಿ ಕ್ಷೇತ್ರವಾದ ಮೊಳಕಾಲ್ಮೂರುವಿನಿಂದ ಎರಡು ಸಲ ಸೋತರು. ಹಾಗೆಯೇ ಲೋಕಸಭೆಗೂ ಎರಡು ಸಲ ನಿಂತು ಸೋತರು.

ಗಾಂಧೀಜಿಯ ಅನುಯಾಯಿಯಾಗಿ ಅಹಿಂಸೆ, ಸತ್ಯ, ನಿಷ್ಠುರತೆ, ಪರಧರ್ಮ, ಸಹಿಷ್ಣುತೆ ಇವರ ಆದರ್ಶ ಲಕ್ಷಣಗಳಾಗಿದ್ದವು. ನಾಯಕ ಜನಾಂಗಕ್ಕೊಂದು ನೆಲೆಯನ್ನು ಕಲ್ಪಿಸುವಲ್ಲಿ ಇವರ ಪಾತ್ರ ದೊಡ್ಡದು. ಇವರ ದಾಂಪತ್ಯ ಜೀವನವು ಸುಖಮಯವಾಗಿತ್ತು. ೧೯೪೫ ರಲ್ಲಿ ಸೂರಮ್ಮನವರೊಡನೆ ಮದುವೆಯಾಗಿ ೩ ಜನ ಮಕ್ಕಳನ್ನು ಪಡೆದರು. ಕಮಲಮ್ಮನವರು ವೈದ್ಯರಾಗಿ ನಾಯಕ ಜನಾಂಗದ ಡಾ.ಕೆ.ಆರ್. ಪಾಟೀಲರ ಪತ್ನಿಯಾಗಿರುವರು. ಹಿರಿಯ ಮಗ ಚಿನ್ನೋಬಯ್ಯ ವಿಜಯ ಬ್ಯಾಂಕಿನಲ್ಲಿ ಅಧಿಕಾರಿ, ಎರಡನೇ ಮಗ ಏಕಣ್ಣ ಚಿತ್ರದುರ್ಗದಲ್ಲಿ ಪ್ರಸಿದ್ಧ ವಕೀಲರಾಗಿರುವರು.

ಜನಾಂಗದ ಕಾರ್ಯಗಳು, ಚಟುವಟಿಕೆಗಳು ಎಲ್ಲಿಯೇ ನಡೆಯಲಿ ಹೊ.ಚಿ. ಬೋರಯ್ಯನವರು ಹಾಜರಿ ಇರುತ್ತಿದ್ದರು. ಹೀಗೆ ಒಮ್ಮೆ ನಾಯಕ ಜನಾಂಗದ ಸಭೆಯಲ್ಲಿ ಭಾಷಣ ಮಾಡುತ್ತಿರುವಾಗ ೧೯೮೦ ಜೂನ್ ೨೯ ರಂದು ಹೃದಯಘಾತದಿಂದ ನಿಧನರಾದರು. ಅವರಿಲ್ಲದೆ ಇರಬಹುದು ಆದರೆ ಅವರು ಬಿಟ್ಟುಹೋದ ಮೌಲ್ಯಗಳು ಇಂದಿಗೂ ಪ್ರಸ್ತುತ. ನಿಜವಾಗಿ ನಾಯಕ ಜನಾಂಗದ ಆಧುನಿಕ ವೀರ ನಾಯಕರಲ್ಲಿ ಇವರು ಅಗ್ರಗಣ್ಯರೆಂದರೆ ತಪ್ಪಲ್ಲ.

**ಪಟೇಲ್ ಪಾಪನಾಯಕ**

ಚಳ್ಳಕೆರೆ ತಾಲೂಕಿನ ಮಹದೇವಪುರದಲ್ಲಿ ಜನಿಸಿದ ಪಟೇಲ್ ಪಾಪನಾಯಕ, ಇಡೀ ಜಿಲ್ಲೆಯ ನಾಯಕರಿಗೆ ಸ್ಪಂಧಿಸುವಂತೆ ಬೆಳೆದುಬಂದವರು. ರಾಜಕೀಯದಲ್ಲಿ ಅಪ್ರತಿಮ ಸಾಧನೆ ತೋರಲು ಹೋರಾಟ ನಡೆಸಿದರು. ಕ್ರಮೇಣ ಮಹಾಮುತ್ಸದ್ಧಿ, ಚತುರ ರಾಜಕಾರಣಿ ಆಗಿದ್ದರು. ಮೊಳಕಾಲ್ಮೂರು ಕ್ಷೇತ್ರದಲ್ಲಿ ಎರಡು ಬಾರಿ ಗೆದ್ದು ಹಲವು ಸಲ ಪರಾಜಿತರಾದರು. ಪಟೇಲ್ ಪಾಪನಾಯಕರ ಅವಧಿಯಲ್ಲಿ ಅನೇಕ ಅಭಿವೃದ್ಧಿ ಕೆಲಸಗಳು ಆದವು. ಇವರು ಅನೇಕ ದೇವಾಲಯಗಳಿಗೆ ಭೇಟಿ ನೀಡಿ ದೇವರ ವ್ಯಾಜ್ಯಗಳನ್ನು ನಿವಾರಿಸುತ್ತಿದ್ದರು. ನಾಯ್ಕನಹಟ್ಟಿಯನ್ನು ಕೇಂದ್ರಸ್ಥಾನವಾಗಿ ಮಾಡಿಕೊಂಡಿದ್ದ ಪಾಪನಾಯಕರಿಗೆ ಊರಿಗೊಬ್ಬರಂತೆ ನೆಂಟರು ಅಣ್ಣ – ತಮ್ಮಂದಿರು ಇರುತ್ತಿದ್ದರು. ಹೀಗಾಗಿ ಇವರು ಕೃಷಿ ಕ್ಷೇತ್ರಕ್ಕೆ ಹೆಚ್ಚಿನ ಸಹಕಾರ ನೀಡುತ್ತಿದ್ದರು. ಲೋಕೋಪಯೋಗಿ ಕೆಲಸಕಾರ್ಯಗಳು, ನೌಕರಿ, ಗುತ್ತಿಗೆ ಕೆಲಸ, ದೇವಾಲಯಗಳ ಜೀರ್ಣೋದ್ಧಾರ ಮೊದಲಾದವುಗಳ ಕಡೆ ಗಮನ ಹರಿಸುತ್ತಿದ್ದರು. ಪಾಪನಾಯಕರು ಮ್ಯಾಸನಾಯಕರ ಆಶಾಕಿರಣವಾಗಿ ನಂದಿ ಹೋಗಿರಬಹುದು, ಆದರೆ ಅವರ ಸಾಧನೆ ಜೀವಂತವಾಗಿದೆ.



೧೯೮೨ – ೮೩ ದೊಡ್ಡುಳ್ಳರ್ಥಿ ಚಳ್ಳಕೆರೆ, ಪಾಟೇಲ್, ಪಾಪನಾಯಕ ಎಂ.ಎಲ್.ಎ. ಜೆ. ರಾಮೇಗೌಡ, ಸಚಿವ, ದನಗಳ ಗಣತಿ

**೪. ಎನ್. ಗಟ್ಟಪ್ಪ ನಾಯಕ**

ಮೂಲತಃ ಅರಣ್ಯ ವಲಯ ಅಧಿಕಾರಿಗಳಾದ (ರೇಂಜ್ ಆಫಿಸರ್) ಎನ್.ಜಿ.ನಾಯಕ ಅವರು ರಾಜಕೀಯಕ್ಕೆ ಬಂದಿದ್ದೆ ಒಂದು ರೀತಿಯಲ್ಲಿ ಪವಾಡ. ಮೊಳಕಾಲ್ಮೂರು ಕ್ಷೇತ್ರದ ಜನತೆಗೆ ಉಸಿರಾಗಿದ್ದಂತವರು. ಅನೇಕ ಸಂದರ್ಭಗಳಲ್ಲಿ ಜನರ ಕನಸುಗಳಿಗೆ, ಆಶೋತ್ತರಗಳಿಗೆ ಸ್ಪಂಧಿಸಿದ ನಾಯಕ. ತನ್ನ ಅಪಾರ ಸೇವೆಯನ್ನು ಗ್ರಾಮೀಣ ಬಡತನದಲ್ಲಿರುವ ಜನತೆಗೆ ಮೀಸಲಿಟ್ಟಿದ್ದರು. ಎರಡು ಬಾರಿ ಶಾಸಕರಾಗಿ ಲೆಕ್ಕವಿಲ್ಲದಷ್ಟು ಕೆಲಸಗಳನ್ನು ಮಾಡಿತೋರಿಸಿದ್ದಾರೆ. ಅವರು ಉಗ್ರಾಣ ನಿಗಮದ ಅಧ್ಯಕ್ಷರಾಗಿದ್ದಾಗ ಅನೇಕರಿಗೆ ಉದ್ಯೋಗ ಒದಗಿಸಿಕೊಟ್ಟರು. ಆಶ್ರಯ ಮನೆಗಳನ್ನು, ರಸ್ತೆ, ಆಸ್ಪತ್ರೆ, ಶಾಲಾ ಕಾಲೇಜುಗಳ ನಿರ್ಮಾಣದಲ್ಲಿ ಶಾಸಕರಾಗಿ ಸಮರ್ಥ ಸೇವೆ ಸಲ್ಲಿಸಿದ ಎನ್.ಜಿ. ನಾಯಕರು ಮೊಳಕಾಲ್ಮೂರು ಕ್ಷೇತ್ರದ ಜನತೆಗೆ ಆಧುನಿಕ ನಾಯಕರಾಗಿ ಮತ್ತು ಮೊಳಕಾಲ್ಮೂರು ಪಟ್ಟಣವನ್ನು ಕಟ್ಟಿ ಬೆಳೆಸಿದ ರುವಾರಿಗಳಾಗಿದ್ದಾರೆ.

**೫. ಪೂರ್ಣ ಮುತ್ತಪ್ಪ**

ಚಳ್ಳಕೆರೆ ತಾಲೂಕಿನ ನಲಗೇತಯ್ಯನಹಟ್ಟಿಯಲ್ಲಿ ಜನಿಸಿದ ಪೂರ್ಣಮುತ್ತಪ್ಪ ಎಂ.ಎಲ್.ಎ. ಆಗುತ್ತಾರೆಂದು ಯಾರೂ ಭಾವಿಸಿರಲಿಲ್ಲ. ಅಷ್ಟೇನೂ ಉನ್ನತ ವಿದ್ಯಾಭಾಸ ಮಾಡದಿದ್ದರೂ, ಲೋಕಜ್ಞಾನ ಹೊಂದಿದ್ದ ಮುತ್ತಪ್ಪನವರು ಗ್ರಾಮೀಣ ಜನರಿಗೆ ಜೀವನವನ್ನು ಕೊಡು ವ್ಯಕ್ತಿಯಾಗಿದ್ದರು. ಇಂಥವರನ್ನು ಎರಡು ಬಾರಿ ಎಂ.ಎಲ್.ಎ. ಮಾಡಿದ ಮೊಳಕಾಲ್ಮೂರು ಕ್ಷೇತ್ರದ ಜನತೆಯಲ್ಲಿ ಇವರ ಬಗ್ಗೆ ಅಪಾರ ಅನುಕಂಪ, ಗೌರವವಿದೆ. ನಲಗೇತಿ ಗೋತ್ರದ ಇವರು ಚನ್ನಕೇಶವನನ್ನು ಮನೆದೇವರಾಗಿ ಹೊಂದಿರುತ್ತಾರೆ. ಜನತಾದಳ ಸರ್ಕಾರದಲ್ಲಿ ಸಕ್ರೀಯ ಕೆಲಸಕಾರ್ಯಗಳನ್ನು ಮಾಡಿಸಿದ್ದು ಗಮನಾರ್ಹ. ರಸ್ತೆಗಳ ನಿರ್ಮಾಣ, ಕೆರೆಗಳ ದುರಸ್ತಿ, ದೇವಾಲಯಗಳ ಜೀರ್ಣೋದ್ಧಾರ, ಆಶ್ರಯ ಮನೆಗಳ ನಿರ್ಮಾಣ ಇತ್ಯಾದಿ ಕೆಲಸಗಳನ್ನು ಶ್ರದ್ಧೆಯಿಂದ ಮಾಡಿದ್ದಾರೆ. ಇವರನ್ನು ನೆನಪಿಸಿಕೊಳ್ಳುವ ಸಂದರ್ಭವೆಂದರೆ ೫ ವರ್ಷಗಳ ಹಿಂದೆ ನಾಯಕನಹಟ್ಟಿಯಿಂದ ಕಂಪಳದೇವರಹಟ್ಟಿಗೆ ಥಾರ್‌ರೋಡ್ ಮಾಡಿಸಿದ್ದು. ಹಟ್ಟಿ ಜಾತ್ರೆಗಳಲ್ಲಿ ಪಾಲ್ಗೊಂಡು ಜನರಿಗೆ ಶುಭಹಾರೈಸುತ್ತಿದ್ದ ಮುತ್ತಪ್ಪನವರು ಎಲ್ಲಾ ಜಾತಿಯವರಿಗೂ ಬೇಕಾದ ವ್ಯಕ್ತಿಯಾಗಿದ್ದರು. ಒಮ್ಮೆ ಅನಾರೋಗ್ಯದ ನಿಮಿತ್ತ ಎಂ.ಎಸ್. ರಾಮಯ್ಯ ಆಸ್ಪತ್ರೆಗೆ ಬೆಂಗಳೂರಿನಲ್ಲಿ ಸೇರಿದಾಗ ಇವರನ್ನು ನಾನು ಸಂದರ್ಶಿಸಿದ್ದುಂಟು. ಆಗ ಇವರು ಅನೇಕ ಸಂಗತಿಗಳನ್ನು ವಿವರಿಸಿದರು.



ಪೂರ್ಣಮುತ್ತಪ್ಪ ಎಂ.ಎಲ್.ಎ., ಮೊಳಕಾಲ್ಮೂರು ವಿಧಾನಸಭಾ ಕ್ಷೇತ್ರ, ದಿ.೨೪.೫.೯೬ ಎಂ.ಎಸ್.ರಾಮಯ್ಯ ಆಸ್ಪತ್ರೆ, ಬೆಂಗಳೂರು

**೬. ಸಮಾಜ ಸೇವಕ ದಿ.ಟಿ. ಮಾರಪ್ಪ**

ನಾನು ೧೯೮೪ ರಲ್ಲಿ ಮೊಟ್ಟಮೊದಲು ಈ ಮಾರಪ್ಪನವರನ್ನು ನೋಡಿದ್ದು ಮಲ್ಲೂರಹಳ್ಳಿಯ ಶ್ರೀ ಶ್ರೀ ಶ್ರೀ ತಿರುಚಿಮಹಾಸ್ವಾಮಿ ಗ್ರಾಮಾಂತರ ಪ್ರೌಢಶಾಲೆ ಆವರಣದಲ್ಲಿ. ತನ್ನ ಕೋಟಿನ ಜೇಬಿನಿಂದ ಶೇಂಗಾ ಬೀಜವನ್ನು ಒಂದೊಂದೇ ತೆಗೆದು ತಿನ್ನುತ್ತಾ ಮಾತನಾಡುತ್ತಿದ್ದರು. ಬಡಮಕ್ಕಳ ಬಗ್ಗೆ ಕರುಣೆ ತೋರಿಸಿ ನೀವೆಲ್ಲಾ, ಬೆಳೆದು ದೊಡ್ಡವರಾಗಿರಿ. ಮೊದಲು ಓದಬೇಕು, ಎಲ್ಲಾ ಮಕ್ಕಳನ್ನು ಶಾಲೆಗೆ ಕರೆತನ್ನಿ ಎಂದು ಹೇಳಿ ತಲೆ ನೀವಿದರು. ನೀವೆಲ್ಲ ಪ್ರೌಢಶಾಲೆಯನ್ನು ಕಟ್ಟಬೇಕು. 'ನಿಮ್ಮ ವಿದ್ಯಾಮಂದಿರ ನಿಮ್ಮ ಕೈಯಲ್ಲಿದೆ' ಎಂದು ಹೇಳಿದ ಆದಿನಗಳನ್ನು ಮರೆಯಲಾಗದು.

ದಿ.ಟಿ. ಮಾರಪ್ಪನವರು ಚಿತ್ರದುರ್ಗ ವಿದ್ಯಾ ಸಂಸ್ಥೆಯನ್ನು ಕಟ್ಟಿ ಬೆಳೆಸಿದವರು. ಇವರು ಸು. ೧೮ ಪ್ರೌಢ ಶಾಲೆಗಳನ್ನು ಗ್ರಾಮೀಣ ಪ್ರದೇಶಗಳಲ್ಲಿ ಸ್ಥಾಪಿಸಿ ಬಡ (ನಾಯಕ) ವಿದ್ಯಾರ್ಥಿಗಳ ವಿದ್ಯಾರ್ಜನೆಗೆ ನೆರವಾದರು. ನಿರಾಡಂಬರದ, ಸವ್ಯಸಾಚಿ ಮಾರಪ್ಪನವರ ಬದುಕು ಅನುಕರಣೀಯಷ್ಟೇ ಮಾದರಿಯಾದರು. ಪತ್ರಿಕಾ ಕ್ಷೇತ್ರದಲ್ಲಿ ಅಪಾರ ಅನುಭವ, ಸೇವೆ ಹೊಂದಿದ ಇವರು ನಿಷ್ಠೆ ಮತ್ತು ಪ್ರಾಮಾಣಿಕತೆಗೆ ಹೆಸರಾದವರು. ಅತೀ ಜನಪ್ರಿಯತೆ ಮತ್ತು ಪ್ರಚಾರ ಬಯಸದ ಮಾರಪ್ಪನವರ ವ್ಯಕ್ತಿಪರಿಚಯವನ್ನು ಅವರ ಪತ್ನಿ ಪಾಲಮ್ಮನವರು ಹೇಳಲು ಇಚ್ಛಿಸಲಿಲ್ಲ. ಕಾರಣ ನಮ್ಮ ಯಜಮಾನರು ಪ್ರಚಾರ ಬಯಸಿರಲಿಲ್ಲವಾದ್ದರಿಂದ ಅವರ ಬಗ್ಗೆ ಏನೂ ಬರೆಯಬೇಡಿರೆಂಬ ಕಾರಣದಿಂದ ಅವರ ಕಾಲದ ಒಳನೋಟ, ಘಟನಾವಳಿಗಳನ್ನು ಇನ್ನಷ್ಟು ವಿಶ್ಲೇಷಿಸಲಾಗಲಿಲ್ಲ.

**೭. ಹರತಿ ವೀರನಾಯಕ**

ಕೇವಲ ಸಮಾಜಸೇವೆಯಷ್ಟೇ ಅಲ್ಲದೆ, ಶೈಕ್ಷಣಿಕ, ಸಾಹಿತ್ಯ ಮತ್ತು ಸಂಶೋಧನಾ ಕ್ಷೇತ್ರಗಳಲ್ಲಿ ಹೆಸರು ಮಾಡಿದವರು ಶ್ರೀಯುತ ದಿ. ಎಚ್.ವಿ. ವೀರನಾಯಕರು. ಇವರು ಹಿರಿಯೂರು ತಾಲೂಕಿನ ಹರ್ತಿಕೋಟೆಯಲ್ಲಿ ೧೯೧೮ ಮೇನಲ್ಲಿ ಜನಿಸಿದರು. ಇವರ ತಂದೆ ಶಿಕ್ಷಕರಾಗಿದ್ದ ವೀರಲಕ್ಷ್ಮಪ್ಪನಾಯಕ ಮತ್ತು ತಾಯಿ ಪುಟ್ಟವೀರಮ್ಮನವರು. ವೀರನಾಯಕರು ಮೆಟ್ರಿಕ್ಯುಲೇಷನ್‌ವರೆಗೆ ಶಿಕ್ಷಣ ಪಡೆದು ಅನೇಕ ಭಾಷೆ, ಕೃತಿಗಳನ್ನು ಓದುವ ಬರೆಯುವ ಹವ್ಯಾಸ ಬೆಳಸಿಕೊಂಡು ಶಿಕ್ಷಕರಾಗಿ ಸೇವೆ ಸಲ್ಲಿಸಿದ್ದರು.

ನಮ್ಮ ಚರಿತ್ರೆ ಕ್ಷೇತ್ರಕ್ಕೆ ಅನುಪಮ ಕಾಣಿಕೆ ನೀಡಬೇಕೆಂಬ ಉದ್ದೇಶದಿಂದ ಚಾರಿತ್ರಿಕ ನೆಲೆ, ಪಾಳೆಯಗಾರರ ಬಗ್ಗೆ, ಕಥೆ, ಕಾದಂಬರಿ, ನಾಟಕ, ಲೇಖನಗಳನ್ನು ಬರೆದು ಪ್ರಕಟಿಸಿದ್ದಾರೆ. 'ಹರತಿ' ಕಾವ್ಯನಾಮದಿಂದಲೇ ಪ್ರಸಿದ್ಧಿ ಪಡೆದ ವೀರನಾಯಕರು 'ಇತಿಹಾಸಜ್ಞ ಶ್ರೀ' ಎಂಬ ಬಿರುದನ್ನು ಪಡೆದಿದ್ದರು. ದುರ್ಗದ ಧವಳಕೀರ್ತಿ, ಬಲೆಯಲ್ಲಿ ದುರ್ಗದಹುಲಿ, ಕಣ್ಮರೆಯಾದ ಕನ್ನಡದ ಕಲಿನಾಡು ಎಂಬ ಕಾದಂಬರಿಗಳು, ದುರ್ಗದ ಸಿಂಹಿಣಿ ಓಬವ್ವ, ವೀರ ಮತ್ತಿ ತಿಮ್ಮಣ್ಣನಾಯಕ (ಐತಿಹಾಸಿಕ), ದ್ರೋಣ ಶಪಥಮ್ – (ಪೌರಾಣಿಕ), ಭಿಕಾರಿ (ಸಾಮಾಜಿಕ) ಇತರ ನಾಟಕಗಳನ್ನು ಬರೆದಿರುತ್ತಾರೆ. ನಾಯಕ ಜನಾಂಗದ ವಾಲ್ಮೀಕಿ ಜಯಂತಿಗಳಲ್ಲಿ 'ವಾಲ್ಮೀಕಿ' ಎಂಬ ಸ್ಮರಣ ಸಂಚಿಕೆಯನ್ನು ಸಂಪಾದಿಸಿದ್ದಾರೆ. ಸಂಶೋಧನಾ ಶೈಲಿಯಲ್ಲಿ ಕ್ಷಾತ್ರಾಂಶ ಪ್ರಭೋದ ರಾಷ್ಟ್ರ ಸೇವೆಯಲ್ಲಿ ನಾಯಕ ಜನಾಂಗ, ಗುಮ್ನಳ್ಳಿ ಕದನ, ಸೀರ್ಯಾ ಲಾವಣಿ ಪದಗಳು ಎಂಬ ಕೃತಿಗಳನ್ನು ಪ್ರಕಟಿಸಿದ್ದಾರೆ. ಇಂಥಾ ಮಹಾ ಪಂಡಿತನನ್ನು ಪಡೆದ ನಾಯಕ ಸಮಾಜ ಭಾಗ್ಯಶಾಲಿಯೆಂದು ಹೇಳಬಹುದು. ವೀರನಾಯಕರ 'ಬದುಕು – ಬರಹ' ಕುರಿತ ನೆನಪಿನ ಸಂಪುಟ 'ಹರತಿಸಿರಿ' ಪ್ರಕಟವಾಗಿದೆ. ಇದರ ಸಂಪಾದಕರು ಪ್ರೊ. ಲಕ್ಷ್ಮಣ್ ತೆಲಗಾವಿ ಅವರು. ೧೯೯೮ ರಿಂದ ಹರತಿ ವೀರನಾಯಕರ ಹೆಸರಿನಲ್ಲಿ 'ಹರತಿ ವೀರನಾಯಕ ಪ್ರಶಸ್ತಿ'ಯನ್ನು ಸ್ಥಾಪಿಸಿದ್ದಾರೆ. ಈಗಾಗಲೇ ಎರಡು ಕೃತಿಗಳಿಗೆ (ತರೀಕೆರೆ) ಪಾಳೆಯಗಾರರು, ಗಾದರಿಪಾಲನಾಯಕ ಪ್ರಶಸ್ತಿ ನೀಡಲಾಗಿದೆ. ಒಟ್ಟಾರೆ ಹೇಳುವುದಾದರೆ ವೀರನಾಯಕರು ಸಮಾಜಸೇವೆಯನ್ನು ಮಾಡುವುದರ ಜೊತೆಗೆ ಜನಾಂಗದ ಚರಿತ್ರೆಯನ್ನು ದಾಖಲಿಸುವಲ್ಲಿ ಮಹಾಸಾಹಸಿಗರಾಗಿದ್ದಾರೆ. ನಿಜವಾದ ನಾಯಕರ ನಾಯಕನಾಗಿ ಪ್ರಸ್ತುತವಾಗಿದ್ದಾರೆ ಇವರು.

### ೮. ಮಲೆಸಿದ್ದಪ್ಪ

'ಗಟ್ಟಿ ಹೊಸಹಳ್ಳಿಯ ಗಟ್ಟಿಗ'ನೆಂದು ಖ್ಯಾತರಾದ ಗಟ್ಟಿಹೊಸಹಳ್ಳಿಯ ಮಲೆಸಿದ್ದಪ್ಪನವರ ಹೆಸರು ನಾಯಕ ಜನಾಂಗದಲ್ಲಿ ಮನೆಮಾತಾಗಿದೆ. ಇವರು ಸ್ವಾತಂತ್ರ್ಯ ಹೋರಾಟಗಾರರು. ಸಮಾಜವಾದಿ ಧುರೀಣರು ಆಗಿದ್ದರ ಬಗ್ಗೆ ರೋಮಾಂತನ ಸಂಗತಿಗಳು ಪ್ರಚಲಿತವಾಗಿವೆ.

ಚಿತ್ರದುರ್ಗ ಜಿಲ್ಲೆ ಹೊಳಲ್ಕೆರೆ ತಾಲೂಕಿನ ಘಟ್ಟಿ ಹೊಸಹಳ್ಳಿಯ ಚಿಕ್ಕಣ್ಣ ಮತ್ತು ರಂಗಮ್ಮ ದಂಪತಿಗಳಿಗೆ (೭ ಜನ ಮಕ್ಕಳಲ್ಲಿ ದಿ. ೫.೭.೧೯೧೭ರಂದು) ೭ನೇಯವರಾಗಿ ಜನಿಸಿದವರೇ ಮಲೆಸಿದ್ದಪ್ಪನವರು. ಇವರು ಪೂರ್ವದಲ್ಲಿ ಅನ್ನೆಹಾಳ್‌ನವರು. ಪಟೇಲ್ ಮನೆತನವೆಂದು ಹೆಸರಾಗಿದ್ದು, ಘಟ್ಟಿಲೋಹದಿಂದ ಕತ್ತಿ, ಕಠಾರಿ ತಯಾರಿಸುತ್ತಿದ್ದರಂತೆ. ಇವರದು ಸುಶಿಕ್ಷಿತ ಕುಟುಂಬ. ೧೯೪೬ ಜೂನ್ ೫ರಂದು ತನ್ನ ಮಾವ ಆಡನೂರು ಶಿವಪ್ಪನವರ ಮಗಳು ಶಾರದಮ್ಮನವರನ್ನು ಮದುವೆಯಾದರು. ಇವರಿಗೆ ಒಂದು ಡಜನ್ ಮಕ್ಕಳು ೬ ಗಂಡು ೬ ಹೆಣ್ಣು.

ಬಾಲ್ಯ, ಶಿಕ್ಷಣ, ವೃತ್ತಿಗಳು ಭಿನ್ನದಾರಿಯಲ್ಲಿ ಸಾಗಿದ್ದವು. ಘಟ್ಟಿ ಹೊಸಹಳ್ಳಿ, ಗೊಡಬನಹಾಳ್, ದೇವಪುರಗಳಲ್ಲಿ ಪ್ರೌಢಶಿಕ್ಷಣದವರೆಗೆ ಅಭ್ಯಾಸ ಮಾಡಿದರು. ನಂತರ ಚಿತ್ರದುರ್ಗ, ೧೯೩೭ ರಲ್ಲಿ ಬೆಂಗಳೂರಿಗೆ ಇಂಟರ್‌ಮಿಡಿಯಟ್ ಸೇರಿದರು. ೧೯೩೯ ರಲ್ಲಿ ಮುಗಿಸಿದರು. ತಂದೆ ತೀರಿದ ನಂತರ ಶಿಕ್ಷಕರಾದ ಬಿ. ಮರಿಸಿದ್ದಪ್ಪನವರ ಪೋಷಣೆಯ ಫಲ ಇವರಿಗೆ ದೊರೆಯಿತು. ಬಿ.ಎಸ್.ಸಿ. ಪದವಿವರೆಗೂ ಶಿಕ್ಷಣ ಪಡೆದರು.

ಭಾರತ ಸ್ವಾತಂತ್ರ್ಯ ಹೋರಾಟದಲ್ಲಿ ಇವರು ಧುಮುಕಿದರು. ೧೯೩೯ ರಲ್ಲಿ ಅನೇಕ ಹೋರಾಟಗಳಲ್ಲಿ ಗುರುತಿಸಿಕೊಂಡು ಸ್ವಾತಂತ್ರ್ಯ ಹೋರಾಟಗಾರನೆಂದು ಕರೆಸಿಕೊಂಡರು. ಜೊತೆಗೆ ರಾಜಕೀಯಕ್ಕೂ ಪ್ರವೇಶವಾಗಿ ಕಾಂಗ್ರೆಸ್ ಪಕ್ಷ ಸೇರಿದರು. ೧೯೪೨ ರಲ್ಲಿ ಕ್ವಿಟ್ ಇಂಡಿಯಾ ಚಳುವಳಿಗಳಲ್ಲಿ ಭಾಗವಹಿಸಿದ್ದರು. ಅನೇಕ ಚಳುವಳಿಗಳಲ್ಲಿ ಭಾಗವಹಿಸಿ ಬ್ರಿಟಿಷರ ವಿರುದ್ಧ ಭೂಗತ ಕೆಲಸಗಳಲ್ಲಿ ತೊಡಗಿ ಕೂಗು ಎಬ್ಬಿಸಿದ್ದಕ್ಕೆ ಜೈಲಿಗೆ ಹೋಗಬೇಕಾಯಿತು. ೧೯೪೫ ರಲ್ಲಿ ಘಟ್ಟಿಹೊಸಹಳ್ಳಿಗೆ ಒಂದು ಗ್ರಾಮಪಂಚಾಯ್ತಿ ಅಧ್ಯಕ್ಷರಾಗಿ ಕಾಲು ಶತಮಾನವಿದ್ದರು. ೧೯೫೦ ರಲ್ಲಿ ಸಮಾಜವಾದಿ ಚಳುವಳಿಯಲ್ಲಿ ಗುರುತಿಸಿಕೊಂಡರು. ೩ ಬಾರಿ ವಿಧಾನ ಸಭೆಗೆ ನಿಂತು ೧೯೫೨ ರಲ್ಲಿ ಸೋತ ಕಹಿ ನೆನಪು ಇದೆ. ಎಸ್. ನಿಜಲಿಂಗಪ್ಪ, ಜೆ.ಎಚ್. ಪಾಟೇಲ್, ಶಾಂತವೇರಿ ಗೋಪಾಲಗೌಡ ಇವರ ಸಹಪಾಠಿಗಳು. ೧೯೬೮ ರಲ್ಲಿ ತಾಲ್ಲೂಕು ಅಭಿವೃದ್ಧಿ ಮಂಡಳಿ ಅಧ್ಯಕ್ಷರಾಗಿದ್ದು, ಅನೇಕ ಕೆಲಸಕಾರ್ಯಗಳನ್ನು ಉತ್ತಮವಾಗಿ ಮಾಡಿದ್ದರು. ಹೊ.ಚಿ. ಬೋರಯ್ಯ,

ಎ.ಭೀಮಪ್ಪ ಗೆಳೆಯರ ಜೊತೆ ವಾಲ್ಮೀಕಿ ಜಯಂತಿ ಆದಾಗ ಇವರು ಪ್ರಮುಖ ಪಾತ್ರ ವಹಿಸಿದ್ದರು. ಜನಾಂಗಕ್ಕಾಗಿ ಅಪಾರವಾಗಿ ಶ್ರಮಿಸಿ ತಮ್ಮ ಅನುಪಮ ಕಾಣಿಕೆಯನ್ನು ಸಾರ್ವಜನಿಕ ಕ್ಷೇತ್ರಕ್ಕೆ ಬಿಟ್ಟು ಹೋಗಿದ್ದಾರೆ.



ರಾಜಕೀಯ ಧುರೀಣರಾದ ಎನ್.ಟಿ. ಬೊಮ್ಮಣ್ಣ ಮತ್ತು ತಿಪ್ಪೇಸ್ವಾಮಿ

ಚಿತ್ರದುರ್ಗ ಜಿಲ್ಲೆ ಮತ್ತು ಅದರ ಗಡಿ ಭಾಗಗಳಲ್ಲಿ ಅನೇಕ ಮಂದಿ ನಾಯಕ ಮುಖಂಡರು, ರಾಜಕಾರಣಿಗಳಿದ್ದಾರೆ. ಚಳ್ಳಕೆರೆಯ ಮಾಜಿ ಸಚಿವ ತಿಪ್ಪೇಸ್ವಾಮಿ, ಕೂಡ್ಲಿಗಿ ಮಾಜಿ ಶಾಸಕ ಎನ್.ಟಿ. ಬೋಮ್ಮಣ್ಣ ಅಲ್ಲೀಪುರದ ದಿ.ಜಿ. ಹನುಮಂತಪ್ಪ, ಜಗಳೂರಿನ ಮಾಜಿ ಶಾಸಕ ಎಂ. ಬಸಪ್ಪ, ಚಿತ್ರದುರ್ಗದ ಮದಕರಿ ವಿದ್ಯಾ ಸಂಸ್ಥೆಯ ಡಿ. ಬೋರಪ್ಪ ಮೊದಲಾದವರು ಇಲ್ಲಿ ಪ್ರಮುಖ ಮುಖಂಡರಾಗಿ, ರಾಜಕಾರಣಿಗಳಾಗಿ ಕಂಡುಬರುತ್ತಾರೆ.

—-

**(ಸಂಖ್ಯಾಗೊಂದಲ / ಚುಕ್ಕಿ ಚಿಹ್ನೆಯ ಗೊಂದಲ ಇರುವುದರಿಂದ ಈ ಅಧ್ಯಾಯದ ಕೆಲವು ಅಡಿಟಿಪ್ಪಣಿಗಳನ್ನು ನಮೂದಿಸಿಲ್ಲ)**

# ೭. ಬುಡಕಟ್ಟು ವೀರರ ಧಾರ್ಮಿಕ ಪಂಥ ಮತ್ತು ಸಾಂಸ್ಕೃತಿಕ ಪರಂಪರೆ (1)

೧

ಅಖಿಲಾಂಡಕೋಟಿ ಬ್ರಹ್ಮಾಂಡನಾಯಕ ಎಂಬ ಬಿರುದು ವಿಷ್ಣುವಿನಿಂದ ನಾಯಕರಿಗೆ ವರವಾಗಿ ಬಂದಿರುತ್ತದೆ. ಕೃತಯುಗದಲ್ಲಿ ನಳಚಕ್ರವರ್ತಿಗೆ ಬೇಟೆ ಹಾಗೂ ಯುದ್ಧಕ್ಕೆ ಬೇಡರ ಪಡೆಯಿತ್ತು. ನಳನ ಪತ್ನಿ ದಮಯಂತಿ ಕಾಡಿನಲ್ಲಿ ಅನಾಥಳಾಗಿರುವಾಗ ರಕ್ಷಿಸಿದ್ದು ಬೇಡರು. ತ್ರೇತಾಯುಗದಲ್ಲಿ ಬೇಡರು ಬೇಟೆ, ದರೋಡೆಕೋರ ವೃತ್ತಿಗಳಲ್ಲಿದ್ದು, ಪಶುಪಾಲನೆಯಲ್ಲಿ ತೊಡಗಿದ್ದರು. ಬೇಡರೆಂದರೆ ಯಾರಿಗೂ ಹೆದರದವರೆಂಬುದನ್ನು ಸೂಚಿಸುತ್ತಿತ್ತು ಈ ಕಾಲಘಟ್ಟ. ಬೇಡರಿಗೆ ಗಂಗಾ, ನರ್ಮದಾ, ತಪತಿ, ಕೃಷ್ಣಾ, ಚಿನ್ನಹಗರಿ, ತುಂಗಭದ್ರಾ ಮತ್ತು ಕಾವೇರಿ ನದಿಗಳು ಪವಿತ್ರವಾದವು. ಹಾಗೆಯೇ ಹಿಮಾಲಯ, ವಿಂಧ್ಯಾ, ಪೂರ್ವ ಮತ್ತು ಪಶ್ಚಿಮ ಘಟ್ಟಗಳು ಪೂಜನೀಯವೆಂದು ನಂಬಿದ್ದಾರೆ.

ಸೂರ್ಯ – ಚಂದ್ರರನ್ನು ನಿತ್ಯ ದೇವರೆಂದು, ಭೂಮಿಯನ್ನು ತಾಯಿಯೆಂದು ಪ್ರೀತಿಸುವ ಬೇಡರರದು ಬದುಕು ಮತ್ತು ಬವಣೆಗಳೆರಡು ಪ್ರಕೃತಿ ಮಡಿಲಲ್ಲಿಯೇ ಎಂಬುದು ನಿಜ. ಮಣ್ಣಿನ ಮಡಿಕೆ, ಮರದ ಎಲೆ, (ಬಾಳೆ, ಆಲದ ಎಲೆ) ಕಾಡು, ಹಣ್ಣು, ಕಾಯಿಗಳಿಂದ ಜೀವನ ನಡೆಸುತ್ತಿದ್ದ ಇವರಿಗೆ ಬೇಟೆಯು ಬಗ್ಗಿಕೊಂಡಿದ್ದು ಆಕಸ್ಮಿಕವೇನಲ್ಲ. ಕಾಡುಪ್ರಾಣಿ, ಮೀನು ಬೇಟೆಗಳಲ್ಲಿದ್ದ ಇವರಿಗೆ ರಾಜಪ್ರಭುತ್ವದಲ್ಲಿ ಸ್ಥಾನ ಸಿಕ್ಕಿದ್ದು ಯುಗಾಂತರಗಳಿಂದಲೇ ಎನ್ನಬಹುದು. ಗುಹಾ ಎಂಬುವನು ಶ್ರೀರಾಮನನ್ನು ತನ್ನ ದೋಣಿಯಲ್ಲಿ ಗಂಗಾ ನದಿಯನ್ನು ದಾಟಿಸುವುದು ಪುರಾಣಸತ್ಯ. ರಾಮಾಯಣ ಪ್ರಸಂಗ ಸಂಭವಿಸುವುದಕ್ಕೆ ಮೊದಲೇ ಕಥೆ ಬರೆದವನು ವಾಲ್ಮೀಕಿ. ಸವ್ಯಸಾಚಿ, ಮೂರು ಲೋಕದ ಗಂಡ, ಮಧ್ಯಮ ಪಾಂಡವನಾದ ಅರ್ಜುನನಿಗೆ ಬಿಲ್ವಿದ್ಯೆಯಲ್ಲಿ ಸಮನಾದವನು ಏಕಲವ್ಯ. ಶೋಷಣೆಗೆ ಒಳಪಟ್ಟ ಬೇಡರ ಮೊದಲ ಬಾಲಕ ಇವನು. ತನ್ನೆರಡು ಕಣ್ಣುಗಳನ್ನು ಶಿವನಿಗೆ ಅರ್ಪಿಸುವ ಬೇಡರ ಕಣ್ಣಪ್ಪನ ದಾನ ಪ್ರವೃತ್ತಿ ಪ್ರಶಂಸನೀಯವಾದದು. ಮೂಗನಾಯಕನೆಂಬ ವೀರ ದ್ವಾಪರ ಯುಗದಲ್ಲಿ ಶ್ರೀಕೃಷ್ಣ ಪರಮಾತ್ಮನ ಅವತಾರವನ್ನು ತಾಳುತ್ತಾನೆ. ಬೇಡರ ಮಹಿಳೆಯರು ತ್ಯಾಗ – ಬಲಿದಾನದ ಸಂಕೇತವಾಗಿ ಕಂಡುಬರುತ್ತಾರೆ. ನೇಪಾಳದಲ್ಲಿ ಬುಡಕಟ್ಟು ಜನರು ಶ್ರೀರಾಮನ ಹೆಂಡತಿ ಸೀತೆಯನ್ನು ಬೇಡಜನಾಂಗದವಳೆಂದು ಪೂಜಿಸುವರು. ಶ್ರೀರಾಮಚಂದ್ರನ ದರ್ಶನಕ್ಕಾಗಿ ತನ್ನ ಜೀವನವನ್ನೇ ಮುಡಿಪಿಟ್ಟುಕೊಂಡ ಮಹಾಪತಿವ್ರತ ಸ್ತ್ರೀ ಶಬರಿ. ಬೋರೆ ಹಣ್ಣುಗಳನ್ನು ಶ್ರೀರಾಮನಿಗೆ ಕೊಟ್ಟಾಗ ಆತ ಸಂತೃಪ್ತಿಗೊಂಡಿದ್ದು ಬೇಡರವಳಿಂದ. ಆಕೆಯ ನೆಲೆ ಈಗಿನ ಹಂಪಿ ಪರಿಸರ.

ಚರಿತ್ರೆಕಾಲೀನ ಬೇಡರು ವಲಸೆಯಲ್ಲಿ (ಅಲೆಮಾರಿ) ನಿರತರಾಗಿದ್ದರು. ಉತ್ತರದಲ್ಲಿ ಆರ್ಯರ ಆಕ್ರಮಣದ ನಂತರ ಇವರು ಚೆಲ್ಲಾಪಿಲ್ಲಿಯಾದಂತೆ ಕಂಡುಬರುತ್ತದೆ. ವಿಂಧ್ಯಾಪರ್ವತಗಳಿಂದ ವಲಸೆ ಆರಂಭಿಸಿ ದಕ್ಷಿಣದ ಕಡೆಗೆ ಬೇರದು ಧಾವಿಸುವರು. ಆಗ ಗುಪ್ತರು ಉತ್ತರದಲ್ಲಿ ಪ್ರಭುತ್ವಹೊಂದಿದ್ದರು. ಬೇಡರ 'ಬುಟ್ಟುಗಲೋರು' ಎಂಬ ಪಶುಪಾಲಕರ ಕುಟುಂಬ ವೃದ್ಧಿಯಾಗುತ್ತಾ ಬಂದಿತು. ಅದರಲ್ಲಿ ಗುಪ್ತಬೊಮ್ಮತ್ತಿರಾಜು, ಜಡಲ ಬೊಮ್ಮತ್ತಿರಾಜು, ಹೊಟ್ಟೆ ಬೊಮ್ಮತ್ತಿರಾಜು, ಎರಿಬೊಮ್ಮೆತ್ತಿರಾಜು, ಮರಿಬೊಮ್ಮತ್ತಿರಾಜು, ಬಂಗಾರು ಬೊಮ್ಮತ್ತಿರಾಜು ಮತ್ತು ಕೊಡಗುಬೊಮ್ಮತ್ತಿರಾಜು ಎಂಬ ಅಣ್ಣ – ತಮ್ಮಂದಿರು ತಮ್ಮ ವಂಶದ ಕಟ್ಟುಪಾಡುಗಳಲ್ಲಿಯೇ ಜೀವಿಸುತ್ತಿದ್ದರು.

ಹೀಗೆ ಇವರು ನೆಲಸಿರುವ ತಾಣಕ್ಕೊಮ್ಮೆ ವಿಷ್ಣು – ಲಕ್ಷ್ಮಿಯರ ಆಗಮನವಾಗಿ ಅವರಿಂದ ಬೇಡರು ಪಾವನಗೊಳ್ಳುತ್ತಾರೆ. ತರುವಾಯ ಈ ಪರಂಪರೆಯಲ್ಲಿ ಮಂದಭೂಪಾಲನು ಪ್ರಭುತ್ವ ಸ್ಥಾಪಿಸುತ್ತಾನೆ. ಬುಟ್ಟುಗಲೋರು ವಂಶ ಅಂದಿನಿಂದ ಮಂದಲಗೋತ್ರವಾಗಿ ಪರಿವರ್ತನೆಗೊಂಡಿತು. ಬೇಡರ ಸಮುದಾಯವನ್ನು ಅಭಿವೃದ್ಧಿಗೊಳಿಸುವಲ್ಲಿ ಶ್ರಮಿಸಿದ ಮತ್ತೊಬ್ಬ ನಾಯಕನೆಂದರೆ ಅಂಭೋಜರಾಜ. ಮಧ್ಯಭಾರತದ ಗೋದಾವರಿ ಪ್ರದೇಶದಲ್ಲಿ ಶುಕ್ಲಮಲ್ಲಿನಾಯಕನ ಪ್ರಭುತ್ವವು ಉದಯವಾಯಿತು. ಪೂರ್ವಜರಂತೆ ಇವನು ನಾಯಕ ಜನಾಂಗದ ಸಂಪ್ರದಾಯ, ಪರಂಪರೆಗೆ ಇಂಬುಕೊಟ್ಟು ಕಾರ್ಯಪ್ರವೃತ್ತನಾಗಿ ಜನಮನ್ನಣೆ ಗಳಿಸಿದನು. ದಾನಸಾಲಮ್ಮನು ಬೇರೆ ಜನಾಂಗಕ್ಕೆ ನೀಡಿದ ಕೊಡುಗೆಯನ್ನು ಮರೆಯುವಂತಿಲ್ಲ. ಆಕೆಯ ಪತಿ ಸೇವೆ, ಪ್ರಜಾ ಸೇವಾ ಮನೋಭಾವಗಳಿಂದ ಬೇಡಜನಾಂಗ ತನ್ನ ನೆಲೆಯನ್ನು ವಿವಿಧ ಕ್ಷೇತ್ರಗಳಲ್ಲಿ ಭದ್ರಗೊಳಿಸಿಕೊಳ್ಳಲು ಆಸ್ಪದವಾಯಿತು. ನಂತರದ ಅಂಭೋಜರಾಜನ ಸಹೋದರ ಸಂಬಂಧಿಗಳಾದ ಕಾಮಗೇತಿ ಭೂಪಾಲನು. ಜನಾಂಗದ ನಾಯಕತ್ವವನ್ನು ವಹಿಸಿಕೊಂಡ. ದಕ್ಷಿಣಭಾರತದಲ್ಲಿ ಕಾಮಗೇತಿಗಳ ಆಡಳಿತ ಸ್ಥಾಪನೆಯಾಗಿ, ಜನರಿಂದ ಪ್ರಶಂಸೆಗೊಳಗಾಗಿರುತ್ತಾರೆ ಈ ಅರಸರು. ಇಲ್ಲಿ ಪ್ರಭುತ್ವದೊಡನೆ ಅವಿನಾಭಾವ ಸಂಬಂಧವಿತ್ತು. ಆದರೂ ಮೂಲ ವೃತ್ತಿಗಳನ್ನು ಇವರು ಕೈಬಿಟ್ಟಿರಲಿಲ್ಲ. ಶುಕ್ಲಮಲ್ಲಿನಾಯಕ ಮತ್ತು ದಾನಸಾಲಮ್ಮನಿಗೆ ಚುಂಚುಲಕ್ಷ್ಮಿಯ ಜನನವಾಗುತ್ತದೆ. ಇವಳು ಎಲ್ಲಾ ಬುಡಕಟ್ಟು ಜನರಿಗೆ ಆರಾಧನಾ ದೇವತೆಯಾಗಿರುವಳು. ಇವಳ ಪತಿ ಶ್ರೀಮನ್ನಾರಾಯಣ. ಬೇಡರಿಗೆ ವೈಷ್ಣವರ ಪ್ರಭಾವ ಹಿಂದಿನ ಕಾಲದಿಂದಲೂ ಪ್ರಭಾವಿಸಿದ್ದರಿಂದಲೇ ಏನೋ ಇಂದು ವೈಷ್ಣವರೇ ಬಹುಸಂಖ್ಯಾತರಾಗಿರುವರು. ಪೆದ್ದಕ್ಕ ರಾಯಲದೇವಿ ದಾನಸಾಲಮ್ಮನ ಮಗಳು. ಇವಳ ಪ್ರಾವದಿಂದ 'ವಡೆಲಾರು' ಎಂಬ ಬೆಡಗಿನವರು ದೇವಾಲಯಗಳನ್ನು ಕಟ್ಟಿ, ಹಬ್ಬ ಆಚರಣೆಗಳನ್ನು ಮಾಡುತ್ತಾರೆ. ಇವಳಿಗೆ ೭ ಜನ ಮಕ್ಕಳಾಗುವುದು ಪವಾಡ ಸಾದೃಶ್ಯಸಂಗತಿ. ಹಿರಿಯನಾದ ಭಾನುಕೋಟಿರಾಜು, ಸೂರಪ್ಪರಾಜು, ಸೆಟ್ಲಪಟ್ಟಪ್ಪರಾಜು, ಕೋರ್ಲಿಮಲ್ಲಿರಾಜು, ಕಾಕುಮಂಚಿರಾಜು, ಪಾಪನ್ನರಾಜು ಮತ್ತು ತಿಪ್ಪಂಡರಾಜು ಇವರು ಪ್ರಭುತ್ವದೊಡನೆ ಹೊಂದಾಣಿಕೆ ಮಾಡಿಕೊಂಡು ಜನಾಂಗವನ್ನು

ಅಭಿವೃದ್ಧಿಗೊಳಿಸಿದ್ದರು. ಇವರಿಂದ ಬೇಡರ ಮತ್ತೊಂದು ಪಂಗಡವಾದ ಮಲ್ಲಿನಾಯಕನವರು ಎಂಬುದು ಉದಯವಾಗುತ್ತದೆ. ಅನೇಕ ಬಳುವಳಿ, ಬಿರುದುಗಳು ಇವರಿಗೆ ಲಭಿಸುತ್ತವೆ.

ವಾಲ್ಮೀಕಿ ಅನೇಕ ಋಷಿಗಳ ಅಪ್ಪಣೆಯಂತೆ ತಮಸ ನದಿದಂಡೆ ಮೇಲೆ ಆಶ್ರಮ ಕಟ್ಟಿಕೊಂಡು, ಗುರುಕುಲ ನಡೆಸುತ್ತಿದ್ದರು. ನಾರದ ಮಹರ್ಷಿಗಳಿಂದ ವಾಲ್ಮೀಕಿ ಅನೇಕ ವಿಚಾರ ಸಂಗತಿಗಳನ್ನು ಪಡೆದುಕೊಂಡನು. ಒಂದು ದಿನ ತನ್ನ ಶಿಷ್ಯ ಭಾರದ್ವಜನೊಡನೆ ವಾಲ್ಮೀಕಿ ವಿಹರಿಸುತ್ತಿರುವಾಗ ಬೇಡನೊಬ್ಬ ಕಾಮಲೀಲೆಯಲ್ಲಿ ತೊಡಗಿದ ಕ್ರೌಂಚ ಪಕ್ಷಿಗಳನ್ನು ಬಿಲ್ಲಿಂದ ಹೊಡೆದು ಸಾಯಿಸಿದನಂತೆ. ಅವುಗಳೆರಡರ ರಾಸಲೀಲೆ, ದಾಂಪತ್ಯ ಬದುಕಿನ ಪರಿಯನ್ನು ಅರಿತ ಋಷಿಗಳು ಬೇಡನಿಗೆ ಶಾಪಕೊಟ್ಟರಂತೆ. ಕಾಲಾಂತರದಲ್ಲಿ ವಾಲ್ಮೀಕಿ ತನ್ನ ಮಡದಿ ಮಕ್ಕಳೊಂದಿಗೆ ಕಾಡಿನಿಂದ ನಾಡಿಗೆ ಬಂದು ಜೀವಿಸುತ್ತಾನೆ. 'ರಾಮನಾಮ' ಜಪಿಸಿ ಮಹರ್ಷಿಯಾದ ವಾಲ್ಮೀಕಿ ತನ್ನ ಪೂರ್ವಾಶ್ರಮವನ್ನು ತೊರೆದುದರಿಂದ ಅವರು (ಮಡದಿ – ಮಕ್ಕಳು) ಊರಲ್ಲಿ ನೆಲೆಸಿದರು. ವಾಲ್ಮೀಕಿ ಎಲ್ಲರನ್ನು ತೊರೆದು ಏಕಾಂಗಿಯಾಗತೊಡಗಿದಂತೆ ಅನಾಥರಾದ ಬೇಡರು ಊರು ಸೇರಿದ ಆತನ ಪರಿವಾರದಿಂದ ಊರು ನಾಯಕರು ಉದಯಿಸಿದರೆಂದು ಹೇಳಲಾಗುತ್ತದೆ. ಇದೇ ಸಮಯಕ್ಕೆ ಕಾಡಿನಲ್ಲಿ ಮತ್ತೊಂದು ಪಂಗಡ ಅಂಭೋಜರಾಜನ ನೇತೃತ್ವದಲ್ಲಿ ನೆಲಸಿದ್ದು ಮ್ಯಾಸನಾಯಕರಾಗಿ ಕರೆಸಿಕೊಳ್ಳುತ್ತಾರೆ. ಬಹುಶಃ ವಾಲ್ಮೀಕಿಯ ಕ್ರೌಂಚಪಕ್ಷಿಗಳ ಘಟನೆಯಿಂದ ಮ್ಯಾಸಬೇಡರು ಪಕ್ಷಿ ಪೂಜನೀಯವೆಂದು ಕೋಳಿಯನ್ನು ತಿನ್ನದೆ ಇರಬಹುದು. ಹಿಂಸೆ, ಕ್ರೌರ್ಯದ ಗುರಿಯಾಗಿರಬೇಕು. ಕಾಡಿನ ಬೇಡರು ತಮ್ಮ ಮೂಲ ಪುರುಷರನ್ನು ದೇವತೆಗಳೆಂದು ಆರಾಧಿಸಿಕೊಂಡು ಬಂದರೆ, ಊರು ಬೇಡರು ಆಂಜನೇಯ, ಮಾರಮ್ಮದೇವತೆಗಳನ್ನು ಪೂಜಿಸಿಕೊಂಡು ಬಂದಿದ್ದಾರೆ.

ಕಲಿಯುಗದಲ್ಲಿ ಶುಕ್ಲಮಲ್ಲಿನಾಯಕನ ಸಂತತಿ ಪ್ರವರ್ಧಮಾನಕ್ಕೆ ಬರುತ್ತದೆ. ಎರಮಂಚಿನಾಯಕ ಬೇಡ ಕಂಪಳಕ್ಕೆ ದೊರೆಯಾಗಿ, ನಾಯಕನಾಗಿ ಅನೇಕ ಕಾರ್ಯಚಟುವಟಿಕೆಗಳಿಂದ ನೊಂದು ಪೆದ್ದಕ್ಕರಾಯಲದೇವಿ ಮತ್ತು ಗೌರಸಮುದ್ರದ ಮಾರಮ್ಮನ ಆಶ್ರಯದಲ್ಲಿ ಜೀವೈಕ್ಯ ಸಮಾಧಿಯಾಗುವನು. ಇವನಿಗೆ ಕಾಲಭೈರವ ಒಲಿಯುವುದು, ಹೇಮಾವತಿ ತಪ್ಪಲಿನಲ್ಲಿ ಗೋವುಗಳೊಂದಿಗೆ ವಾಸಿಸುತ್ತಾನೆ. ಇವನೊಬ್ಬ ಜಾತ್ಯಾತೀತವ್ಯಕ್ತಿ. ಸಾವಿರಾರು ವರ್ಷಗಳ ಹಿಂದೆ ಎಲ್ಲರೂ ಸಮಾನರು, ಜಾತಿ – ಭೇದವಿಲ್ಲವೆಂದು ಸಾರಿದ ಮಹಾಸಾಧಕ. ಎಲ್ಲಾ ಜಾತಿಗಳಿಗೆ ತನ್ನ ಕಂಪಳದಲ್ಲಿ ಸ್ಥಾನಮಾನ, ಗೌರವಗಳನ್ನು ಕೊಟ್ಟು ಮಹಾತ್ಮನೆಂದು ಖ್ಯಾತನಾಗಿದ್ದನು. ಒಮ್ಮೆ ನಲ್ಲ ಪೂಜಾರ್ಲುಪೆಲ್ಲಿ (ಹಳೆ ಪೂಜಾರಹಳ್ಳಿ) ಹತ್ತಿರದಲ್ಲಿದ್ದ ತಾತಾಚಾರಿ – ತಿರುಮಲಾಚಾರಿಯನ್ನು ಸಂದರ್ಶಿಸುತ್ತಾನೆ. ಇವನೊಂದಿಗೆ ಗಗ್ಗರಿದಾಸರಿ ಇರುತ್ತಾನೆ. ಇವನ ೭ ಜನ ತಮ್ಮಂದಿರಾದ ಪಾಮಡಲೋರನ್ನು ಸಮಾಲೋಚನೆಗೆ ಆಹ್ವಾನಿಸುವನು. ಕಂಪಳದ ಅಭಿವೃದ್ಧಿಪಥ ಉತ್ತಮವಾಗಿ ಸಾಗಿತು. ನಲ್ಲಚೆರುವು ಎಂಬಲ್ಲಿ ಓಬಳದೇವರನ್ನು ಪ್ರತಿಷ್ಠಾಪನೆ ಮಾಡುವನು. ಆಗ ೯ ಜನ ಅಜ್ಜಿನವರಿಂದ (ಹಿರಿಯ) ಪ್ರಶಂಸೆಗೊಳಗಾದ. ರುದ್ರಮ್ಮನಹಳ್ಳಿಯಲ್ಲಿರುವ ನಲ್ಲ ಚೆರುವು ಓಬಳ ದೇವರನ್ನು ಬಿದ್ದನೋರು – ಸಾಕೇಲರು ಪೂಜಿಸುತ್ತಾರೆ. ಯರಮಂಚಿನಾಯಕನ ಚಿಕ್ಕಪ್ಪಂದಿರುಗಳಿಗೆ ತಲಾ ಒಬ್ಬೊಬ್ಬ ಮಕ್ಕಳು ಜನಿಸುತ್ತಾರೆ. ಕೋರ್ಲಮಲ್ಲಿರಾಜನಿಗೆ ರಪ್ಪಲಸೂರಿ, ಕಾಕುಳ್ಳಮಾರನಿಗೆ ಕೋರ್ಲಮಲ್ಲಿನಾಯಕ, ಸೂರಪ್ಪನಾಯಕನಿಗೆ ಗಾದರಿಪಾಲ ನಾಯಕ, ಸೆಟ್ಟಪ್ಪ ರಾಜನಿಗೆ ಪರದೇಶಿ ಪಾಪನಾಯಕ ಜನಿಸಿ ಯರಮಂಚಿನಾಯಕನ ಕಾಪು ಕಂಪಳದಲ್ಲಿ ಬೆಳೆದು ದೊಡ್ಡವರಾಗುತ್ತಾರೆ. ಇವರಿಗೆ ಜನಾಂಗದ ಒಂದೊಂದು ಜವಾಬ್ದಾರಿಗಳನ್ನು ವಹಿಸುತ್ತಾರೆ. ನಾಯಕ, ಪೂಜಾರಿಗಳನ್ನು ೩ ಜನರೆಂದು ನೇಮಿಸುವರು. ಯರಮಂಚಿನಾಯಕ ಮಳೆಲಾರನ್ನು ಭೇಟಿಮಾಡುವನು. ಇವರ ೭ ಜನ ಅಣ್ಣ – ತಮ್ಮಂದಿರು ಇಂತಿದ್ದರು: ಇಮ್ಮಡಿರಾಜು, ಗುಮ್ಮಡಿರಾಜು, ಸೊಟ್ಟಪ್ಪರಾಜು, ಸೆಟ್ಟಪ್ಪರಾಜು, ಬೊಮ್ಮಪ್ಪರಾಜು ಮತ್ತು ಮಳೆಲರಾಜು. ಗೆದ್ವಾಲ್ ಸೀಮೆಯಲ್ಲಿ ಮುಸ್ಲಿಂ ರಾಜನೊಬ್ಬ ಆಳ್ವಿಕೆ ನಡೆಸುತ್ತಿದ್ದಾಗ (ನಿಜಾಮ?) ಬೇಡರ ವಿಮೋಚನೆಗಾಗಿ ಯರಮಂಚಿನಾಯಕ, ಗಗ್ಗರಿದಾಸರಿಬ್ಬರು ಹೋಗಿ ಬರುತ್ತಾರೆ. ಪೆನ್ನೋಬಳ, ಅಹೋಬಲ, ಬುಗ್ಗೋಬಳ ದೇವರುಗಳನ್ನು ನಿರ್ಮಾಣ ಮಾಡುವರು. ೮ – ೧೦ ಕಡೆ ಓಬಳದೇವರುಗಳನ್ನು ಸ್ಥಾಪಿಸುವರು. ಯರಮಂಚಿನಾಯಕ ತನ್ನ ಜನಾಂಗದ ಅಭಿವೃದ್ಧಿ ಆಗಬೇಕಾದರೆ ಎಲ್ಲರೂ ಐಕ್ಯತೆಯಿಂದ ಇರಬೇಕು ಎನ್ನುತ್ತಾರೆ. ಇದಕ್ಕೆ ಅಜ್ಜನವರೆಂಬ ಹಿರಿಯರು ಯಜಮಾನರಾಗಬೇಕು. ಅಲ್ಲದೆ, ಜಾತಿಯಲ್ಲಿ ಕಲಹ,

ಸಂಘರ್ಷಗಳಾಗದಂತೆ ವ್ಯಾಜ್ಯಗಳನ್ನು ತೀರ್ಮಾನಿಸಲು ಕಟ್ಟೆಮನೆಗಳನ್ನು ಸ್ಥಾಪಿಸಿ ೩ ಜನ ನಾಯಕರನ್ನು ಅವುಗಳಿಗೆ ಗೊತ್ತುಪಡಿಸುತ್ತಾನೆ. ದೊರೆ, ದಳವಾಯಿ, ನಾಯಕ, ಹಿರಿಯ, ಪೂಜಾರಿ, ಕಿಲಾರಿಗಳು ಈ ವ್ಯಾಪ್ತಿಗೊಳಪಡುವರು.

ಗಾದರಿಪಾಲನಾಯಕ ರಪ್ಪಲಸೂರಿಯೊಂದಿಗೆ ತನ್ನ ಪಶುಗಳನ್ನು ಒಡೆಸಿಕೊಂಡು ಗೋದಾವರಿ ಪ್ರದೇಶದಿಂದ ಕರ್ನಾಟಕಕ್ಕೆ ಸಂಚರಿಸಿಬಂದರು. ಬರಗಾಲಕ್ಕೆ ತುತ್ತಾಗಿ ಗಾದರಿಪಾಲನಾಯಕ ತನ್ನ ಪಶುಗಳನ್ನು ರಕ್ಷಿಸಿದ. ಸೆಟ್ಟೂರು ಕಾಡಿಗೆ ತನ್ನ ಪಶುಗಳನ್ನು ಹೊಡೆದುಕೊಂಡು ಹೋದ ಗಾದರಿ ಅಲ್ಲಿ ಸೊಟ್ಟಪ್ಪರಾಜನ ಕಪಿಮುಷ್ಠಿಗೆ ಸಿಲುಕಿ ಅವನ ರಾಜಕುಮಾರಿಯರನ್ನು ಮದುವೆಯಾದ. ಕೆಂಚವ್ವ ಕಾಮವ್ವನವರು ಪಶುಪಾಲಕ ಗಾದರಿಗೆ ಮೋಹಿಸಿ ಮದುವೆಯಾದರೂ ನಿರೀಕ್ಷಿಸಿದ ಸುಖ ಪಡೆಯುವಲ್ಲಿ ವಿಫಲರಾದರಲ್ಲದೆ, ವಿಧಿ ಆಟವೇ ಬೇರೆ ಆಗಿತ್ತು. ಹುಲಿ ದಂಪತಿಗಳೊಂದಿಗೆ ಒಪ್ಪಂದ, ಹುಲಿಮರಿಗಳ ಸಾವು, ವಚನಭ್ರಷ್ಟನಾದ ಗಾದರಿಯು ಉಳಿಗಾಲವಿಲ್ಲದೆ ಅವಸಾನ ಹೊಂದಿದ. ಗಂಗೆಯು ಸಹಾ ಇವನ ಸತ್ಯಕ್ಕೆ ಬೋರ್ಗರೆಯುವ ಹಳ್ಳವಿದ್ದರು ದಾರಿಬಿಡುತ್ತದೆ. ಸತ್ಯವಂತನಾದ ಪಾಲನಾಯಕನಿಗೆ ಚಿನ್ನಪಾಲನಾಯಕನೆಂಬ ತಮ್ಮನು, ಕಾಟಯ್ಯ – ಚಿತ್ತಯ್ಯರೆಂಬ ಭಾವಮೈದುನರು ಇದ್ದರು. ಹುಲಿಗಳೊಂದಿಗೆ ಹೋರಾಡುವಾಗ ಗಾದರಿ ಮಡಿಯುತ್ತಾನೆ. ಹೆಂಡತಿಯರು ಸಹಗಮನ ಕೈಗೊಳ್ಳುತ್ತಾರೆ. ಅಂದನೂರು, ಗಂಜಿಗಟ್ಟೆ, ಮುತ್ತುಗದೂರುಗಳಲ್ಲಿ ನಾಯಕ ಜನಾಂಗದವರು ಈ ಬಗ್ಗೆ ಹೆಚ್ಚಿನ ಮಾಹಿತಿ ಹೊಂದಿರುವರು. ಸೆಟ್ಟೂರು ಕಾವಲಿನ ಮುಂಡಬಂಡೆ, ಬೋರವನಗೊಂದಿ, ಮಿಂಚೇರಿ ಅರಣ್ಯದಲ್ಲಿ ಕಾಪುಕಂಪಳವಿದ್ದುದರಿಂದ ದೇವರುಗಳ ಮೂಲಸ್ಥಾನವೆಂದು ಗುರುತಿಸಲಾಗಿದೆ. ನಂತರ ಕಾಟೇಲಿಂಗ, ಸೂರಲಿಂಗ ಮತ್ತು ಚಿತ್ರಲಿಂಗ ದೇವರುಗಳನ್ನು ಪೂಜಿಸುವುದು ವಾಡಿಕೆಗೆ ಬಂದಿತು.

ವೀರರ ಸಾಧನೆಗಳು ಜನಾಂಗದ ಅಭಿವೃದ್ಧಿಗೆ ವರವಾಗಿ ಪರಿಣಮಿಸಿದರೆ, ಕೆಲವರಿಂದ ಮಾರಕವೆಂದು ತಿಳಿಯಲಾಗಿತ್ತು. ಪರಂಪರಾಗತವಾಗಿ ದೇವರುಗಳ ಆರಾಧನೆಯು ಸಾಗುತ್ತಿತ್ತು. ರುದ್ರಮ್ಮನಹಳ್ಳಿಯಲ್ಲಿ ನಲ್ಲಚೆರುವು ಓಬಳದೇವರನ್ನು ಸ್ಥಾಪಿಸಿ ಸಾಕೇಲರ ಪೂಜಿಸುವಂತೆ ಮಾಡಿದರು. ಮಲ್ಲೂರಹಳ್ಳಿ ರಾಜಲದೇವರನ್ನು ಯರಮಂಚಿನಾಯಕ ಸ್ಥಾಪಿಸುತ್ತಾನೆ. ಗಾದರಿಪಾಲನನ್ನು ಹುಡುಕುವಾಗ ಈ ಘಟನೆ ನಡೆಯುತ್ತದೆ. ಮಂದಲೋರ ಮನ್ನಲು ಮಹದೇವಯ್ಯನ ಹಿರಿಯಮರ 'ಮನ್ನುಲೋಡು' ಇದರ ಪೂಜಾರಿ ಮತ್ತು ಯಜಮಾನನಾದ. ಹೀಗೆ ತಮ್ಮ ವೀರರ, ನಾಯಕರ ಆರಾಧನೆಯೊಂದಿಗೆ ಅಲೌಕಿಕ ದೇವರುಗಳನ್ನು ಪೂಜಿಸುವ ಪದ್ಧತಿಗಳು ಇವರಲ್ಲಿದ್ದವು. ದೇವರ ಇರುವಿಕೆ ಬಗ್ಗೆ ನಂಬಿಕೆ ಇಟ್ಟುಕೊಂಡಿದ್ದ ಬೇಡರು ಚಾರಿತ್ರಿಕ ವ್ಯಕ್ತಿಗಳಿಗಿಂತ ಪುರಾಣ ಪುರುಷ. ಆಧ್ಯಾತ್ಮಿಕ ದೇವತೆಗಳನ್ನು ಪೂರ್ವಜರನ್ನು ಹೆಚ್ಚಾಗಿ ಅವಲಂಬಿಸಿದ್ದರು.

ಪಶುಪಾಲಕರಾದ ಬೇಡರು ಪ್ರಕೃತಿಯ ವೈಪರಿತ್ಯಗಳಿಗೆ ತಮ್ಮದೇ ಆದ ನಂಬಿಕೆಗಳನ್ನು ಸೃಷ್ಟಿಸಿಕೊಂಡಿರುತ್ತಾರೆ. ಕಾಟಮಲ್ಲನಾಯಕನ ನೇತೃತ್ವದಲ್ಲಿ ಶ್ರೀಶೈಲದ ಎತ್ತುಗಳು ಬಂದು ತುರುವನೂರು ಬಳಿ ತಂಗುತ್ತವೆ. (ತುರು = ಆಕಳು) ಇಲ್ಲಿ ಮಂದೆಕಟ್ಟೆ, ಕಡಬನಕಟ್ಟೆ, ತೋರಣಗಟ್ಟೆ, ಬಿದರಕೆರೆ ಇತರ ಸ್ಥಳಗಳ ಮೂಲಕ ಗುಹೇಶ್ವರನ ಬೆಟ್ಟಕ್ಕೆ ಬಂದರು. ಹೀಗೆ ಪಶುಪಾಲನಾ ಸಂಸ್ಕೃತಿಯಲ್ಲಿ ಬೇಡರು ತಮ್ಮ ಅನನ್ಯತೆಯನ್ನು ಉಳಿಸಿಕೊಳ್ಳಲು ಶ್ರಮಿಸಿದ್ದು ತಮ್ಮ ವೀರರಿಂದ ಒಮ್ಮೆ ಮುತ್ತಿಗಾರ ಹಸುವು ಗರ್ಭವಾಗಿ ಕರು ಹಾಕದೆ ಗರ್ಭಪಾತವಾಗುತ್ತಿತ್ತು (ಕಂದು = ಮಾಸ). ಆ ಮಾಂಸದ ಕಣಗಳಿಂದ ನಾಲ್ಕು ಜನ ಮಕ್ಕಳು ಹುಟ್ಟುತ್ತಾರಂತೆ. ಅವರಿಗೆ ಮಾಸಿಲುವಾರು ಎಂದು ಹೆಸರು. ಮಂಗಪೋಟಿಮಾಸಿಲುವಾಡಿ, ವರವು ಮಾಸಿನವಾಡು, ಕೊತ್ತಕೋಟಮಾಸಿಲವಾಡು ಮತ್ತು ಕುಂಟುಮಾಸಿಲವಾಡು ಎಂಬುವರು. ಜನ್ನಿಗೆ ದನಗಳಿಗೆ ಇವರು ಪೂಜಿಸುತ್ತಿದ್ದರು. ಆ ಹಳ್ಳಗೆ ಜನ್ನಿಗೆ ಹಳ್ಳವೆಂದು (ಚಿನ್ನಹಗರಿ) ಕರೆದರು.

ಗಾದರಿಗುಡ್ಡದಿಂದ ಪಾಲಯ್ಯನ ಮುತ್ತಿಗಾರ ಎತ್ತುಗಳನ್ನು ಯರಮಂಚಿನಾಯಕ ಹೊಡೆದುಕೊಂಡು ಬಂದನು. ಹೀಗೆ ಬರುವಾಗ ಬುಲ್ಲಡವಾಡು ಬಂಗಾರ ದೇವರನ್ನು ಪೂಜಿಸಲು ಹೇಳಿದ. ಯರಮಂಚಿನಾಯಕ ನಿಡಗಂಟಿ (ನಿಡಗಲ್ಲು) ಕಡೆ ತನ್ನ ಕಾಪು ಕಂಪಳದೊಂದಿಗೆ ನಡೆದ. ಅಲ್ಲಿ ವಟ್ಟಳ್ಳ ನಾಯಕನ ಆಳ್ವಿಕೆ ಇತ್ತು (ಮೊಳಕಾಲ್ಮೂರು ತಾ ಮತ್ತು ಪಾವಗಡ ತಾಲೂಕಿನ ಮಧ್ಯದ ಭಾಗ). ಇಲ್ಲಿ ತಮ್ಮ

ಸಂಪ್ರದಾಯಗಳ ವಿರುದ್ಧವೇ (ಭತ) ಮತ್ತೊಬ್ಬರು ಲೋಪ ಮಾಡುವುದುಂಟು. ವರ್ಧನಿಕುಂಟೆ, ದಡ್ಡಿಹಳ್ಳಿ, ರಂಗಸಮುದ್ರಗಳಲ್ಲಿ ಈ ಬಗ್ಗೆ ಪ್ರತಿರೋಧ ಕಂಡುಬಂತು.

ಬೇಡರ ಜನಸಂಖ್ಯೆ ಹೆಚ್ಚಾಗಿ ಒಂದು ಶಿಸ್ತಿನ ಚೌಕಟ್ಟಿನೊಳಗೆ ಪ್ರವೇಶಿಸಿತು. ಯರಮಂಚಿನಾಯಕನು ಜಾತಿ ಬಾಹಿರರಾದ ಬ್ರಾಹ್ಮಣರಿಗೆ ತನ್ನ ಜಾತಿಯಲ್ಲಿ ಸೇರಿಸಿಕೊಂಡು ಅವರಿಗೆ 'ನಲ್ಲಬಾಪುಲು' ಎಂದು ಕರೆದ. ಬ್ರಾಹ್ಮಣರ ಕನ್ಯೆಯರು ಅಡವಿ ಪಾಲಾಗುವುದನ್ನು ತಪ್ಪಿಸಿ ಬೇಡರೊಂದಿಗೆ ಮದುವೆ ಮಾಡಿದ. ಲಂಬಾಣಿ ತಾಂಡದ ನಾಯಕರಿಗೆ ಧರ್ಮ ದೀಕ್ಷೆ ನೀಡಿದ ನಾಯಕ ತನ್ನ ಜಾತಿಯಲ್ಲಿ ಸೇರಿಸಿಕೊಂಡನು. ದಾವಣಗೆರೆ ಜಿಲ್ಲೆ ಚನ್ನಗಿರಿ ತಾಲೂಕಿನಲ್ಲಿ ಈ ಬಗ್ಗೆ ಮಾಹಿತಿ ಸಿಗುತ್ತದೆ.

ನಿಡಗಲ್ಲಿನಿಂದ ಮರಳಿ ಬಂದ ಯರಮಂಚಿನಾಯಕ ಚಿಂತಗುಟ್ಲು ಬೋರವನನ್ನು ಕುದಾಪುರದ ಬಳಿ ಸ್ಥಾಪಿಸಿದ. ದಡ್ಲುಮಾರಮ್ಮನನ್ನು ದೇವರಹಳ್ಳಿಯ ಬಳಿ ಸ್ಥಾಪನೆ ಮಾಡಿದ. ಸಿರವಾಳ ಓಬಳದೇವರು, ಬುಲ್ಲಡಲೋರ ಬಂಗಾರಿ ದೇವರುಗಳು ಈ ಮುಂಚೆಯೇ ಆರಾಧನೆಗೊಳಗಾಗಿದ್ದವು. ತನ್ನ ಪ್ರದಕ್ಷಿಣೆಯಲ್ಲಿ ಯರಮಂಚಿನಾಯಕ ಚಳ್ಳಕೆರೆ ತಾಲೂಕಿನ ಬುಕ್ಕಾಂಬೂದಿಯಲ್ಲಿ ಶುಕ್ಲಮಲ್ಲಿನಾಯಕನ ಪ್ರಾಣಲಿಂಗ ಮತ್ತು ಅಹೋಬಲ ನರಸಿಂಹನನ್ನು ಪ್ರತಿಷ್ಠಾಪನೆ ಮಾಡುತ್ತಾನೆ. ಹಾಗೆಯೇ ಮುಂದಿನ ಗ್ರಾಮ ಐವೋದಿಗೆ ಬಂದ ನಾಯಕ ಗೌರಸಮುದ್ರದ ಮಾರಮ್ಮ ಮತ್ತು ಬೊಮ್ಮದೇವರನ್ನು ಸ್ಥಾಪಿಸಿದನು.

ಬೇಡಗಂಪಳ ಪ್ರಸಿದ್ಧಿ ಪಡೆಯುತ್ತಿದ್ದಂತೆ ವಿರೋಧಿಗಳ ಉಪಟಳ ಶುರುವಾಗುತ್ತದೆ. ೧೨ಪೆಟ್ಟಿಗೆ ದೇವರು, ೯ ಅಜ್ಜನವರನ್ನು ನರಕಾಸುರನು ನರಕದಕೋಟೆಯಲ್ಲಿಟ್ಟಿದ್ದನಂತೆ. ಇವುಗಳನ್ನು ಬಿಡಿಸಿಕೊಂಡು ಬರಲು ಕೊಡಗುಬೊಮ್ಮಯ್ಯ ವೀಳ್ಯೆ ಹಿಡಿಯುವುದುಂಟು. ಬುಟ್ಟುಗಲೋರ ವಂಶಕ್ಕೆ ಸೇರಿದ ಇವನು ಅಸಮಬಲ ಪರಾಕ್ರಮಿಯಾಗಿದ್ದ. ಕೊಡಗುಬೊಮ್ಮನಿಂದಲೇ ತಂಗಿ ದೇವಮ್ಮ ದುರಂತ ಸಾವನ್ನಪ್ಪುತ್ತಾಳೆ. ಬೇಡಗಂಪಳಕ್ಕೆ ಇವನು ದೊರೆಯಾಗಿ ಆಳ್ವಿಕೆ ನಡೆಸುವಲ್ಲಿ ಕೆಲವು ನೀತಿಗಳಿಂದ ವಿಫಲನಾದ. ಕೈಲಾಸಕೊಂಡದ ಮೇಲಿನ ಪರ್ವತದಲ್ಲಿ ಕಾಲಭೈರವ ಸಾಲಿಗ್ರಾಮವನ್ನು ಸ್ಥಾಪಿಸಿದರು. ಹೀಗೆ ಕಂಪಳದೇವರನ್ನು (ಬುಡ್ಡೆಪಾಪಲು) ಪ್ರತಿಷ್ಠಾಪಿಸಿದರು. ಇವರ ಮೇಲೆ ರಾಯದುರ್ಗದ ಯರಬೊಮ್ಮಳನಾಯಕನ ಹಾವಳಿ ಹೆಚ್ಚಾಗಿ ಆಗಾಗ ಅವನ ಧಾಳಿಗೆ ತುತ್ತಾಗಿದ್ದರು. ಇವನ ಧಾಳಿಯನ್ನು ಎದುರಿಸಲು ಸಿದ್ಧರ ಪೂಜೆಯನ್ನು ಮಾಡುತ್ತಾರೆ.

ದಡ್ಡಿಸೂರನಾಯಕನು ಗಲಗಂಟೆ ಗಾದಿ (ಜ) ನಾಯಕನ ಪತ್ನಿಯನ್ನು ಅಪಹರಿಸಿಕೊಂಡು ಹೋಗುವುದು, ಇವರಿಬ್ಬರಿಗೆ ಕಾಳಗ ನಡೆದು ಗಾಜನಾಯಕ ಸಾಯುವುದು ಗಮನಾರ್ಹ. ಕಾಪು ಕಂಪಳ ಮುತ್ತಿಗಾರ ಎತ್ತುಗಳು ಒಂದೆಡೆ ತಂಗಿದವು. ಆ ಸ್ಥಳ ಮುತ್ತಿಗಾರ ಹಳ್ಳಿಯಾಯಿತು. ದಡ್ಡಿಸೂರನಾಯಕನ ಕಾಪು ಕಂಪಳ ತಂಗಿದ್ದು ಸೂರನಹಳ್ಳಿ (ಮ್ಮ) ಹತ್ತಿಕ್ಕಲು ಮುಂದಾದರು. ಯರಮಂಚಿನಾಯಕ ಈ ಘಟನೆಯಿಂದ ಅಜ್ಞಾತವಾಸ ಕೈಗೊಂಡನು. ಅರೆ ಬುಡಬುಡಿಕೆಯವನ (ಕಿಂದರಿಜೋಗಿಗಳಂತೆ) ಹಾಲಹಕ್ಕಿಯ (ನಿಶಾಚರ) ಸ್ವರವನ್ನು (ಅವುಲ) ಆರಿಸಿಕೊಂಡು ಭವಿಷ್ಯ ಹೇಳುತ್ತಾನೆ. ಹೀಗೆ ಹೇಳುವಾಗ ಸುರೇಶನ ಕಾಮದು ಮರಣ ಹೊಂದುತ್ತಾನೆಂದು ತಿಳಿದುಬರುತ್ತದೆ. ಮೂಡುರ್ಲುಗುಡ್ಡ, ಊಡುಡ್ಲಗಡ್ಡೆ, ದಿದ್ದಿಲಾರುಪುರ (ರುದ್ರಮ್ಮನಹಳ್ಳಿ), ಹಿರೇಹಳ್ಳಿಗಳು ನಿರ್ಮಾಣಗೊಂಡವು. ಸುಂದರ ಪರಿಮಳ ಮಲ್ಲಿಗೆ ಹೂವು ತಂದು, ಉಗ್ಗಿಯನ್ನು ಹೊಯ್ದು ಪೆದ್ದಪಲ್ಲಿ (ಹಿರೇಹಳ್ಳಿ) ಯನ್ನು ಸ್ಥಾಪಿಸುವರು. ಸೂರಿನಂದನ ಅಲುಗಿನಲ್ಲಿ ದೊಡ್ಡಸೂರನಾಯಕ (ದ) ದೇವರಾಯಿತು.

ಯರಮಂಚಿನಾಯಕನ ನೇತೃತ್ವದಲ್ಲಿ ಗೂಳಮುಗೋತ್ರ ಉದ್ಭವವಾಯಿತು. ಇವರಿಗೆ ಗಂಟೆ ಪವಿತ್ರವಾದುದರಿಂದ ಗಂಟೆಬಾರಿಸಿಕೊಂಡು ಜೀವಿಸುವ ಗಂಟೆಗೂಳೆ ಮುಲಾರು ಎಂದಾದರು ಕ್ರಮ ಸಂತಾನವು ಬೇಡರಲ್ಲಾದುದನ್ನು ನೋಡಬಹುದು. ಪೆಯಿಲುನಾಯಕನ ಜೀವನ ಚರಿತ್ರೆಯಲ್ಲಿ ಈ ಅಂಶ ಅಡಕವಾಗಿದೆ. ದಡ್ಡಿಸೂರನಾಯಕನು ಗಲಗಂಟಿಗಾಜ ನಾಯಕನ ಹೆಂಡತಿ ಓಬವ್ವಳನ್ನು ಮೋಹಿಸಿದ್ದು, ಒಂದು ದಿನ ಅವಳು ತನಗಿಷ್ಟವಾದ ಸೀರೆಯಿಟ್ಟು ರಾತ್ರಿ ದಡ್ಡಿಸೂರನ ರೊಪ್ಪಕ್ಕೆಂದು ಬರುತ್ತಾಳೆ. ತುಂಬು ಗರ್ಭಿಣಿಯಾ ಇವಳನ್ನು ಕಾಡುಪ್ರಾಣಿಯೆಂದು

ನಾಯಕ ಬಾಣಬಿಟ್ಟು ಕೊಲ್ಲುತ್ತಾನೆ. ಗರ್ಭಪಾತವಾಗಿ ಮಗು ಹೊರಬಂದಾಗ ಚಿಂತಾಜನಕ ಸ್ಥಿತಿಯಲ್ಲಿರುತ್ತದೆ. ದಡ್ಡಿಸೂರ ತನ್ನ ಕರುಗಳೊಂದಿಗೆ (ಪೆಯಲು) ಅವನನ್ನು ಬೆಳೆಸಿದ್ದರಿಂದ ಪೆಯಲುನಾಯಕ ಎಂದು ಹೆಸರಾಯಿತೆಂದು ಚಿತ್ರದುರ್ಗ ಪರಿಸರದ ನಾಯಕರು ತಿಳಿಸುತ್ತಾರೆ.

ಕೊಡಗುಬೊಮ್ಮನ ಆಳ್ವಿಕೆ ತೀವ್ರ ದುಃಖವನ್ನುಂಟುಮಾಡಿತ್ತು. ದೊರೆಗಳು – ದಳವಾಯಿ ಇವನ ಬಗ್ಗೆ ಚಿಂತನೆ ನಡೆಸಿದರು. ಆ ಸ್ಥಳವೇ ಚಿಂತಗುಂಟ್ಲು. ಅಲ್ಲಿ ಭೈರವನ ಪಾಡ್ಯ ಮಾಡಲಾಗಿ ಬೊಮ್ಮನ ಅವಸಾನವನ್ನು ಎಲ್ಲರೂ ಬಯಿಸಿದರು. ಅದರಂತೆ ಬೊಮ್ಮ ಊಟಕುಂಟೆಯಲ್ಲಿ ಮರಣ ಹೊಂದುತ್ತಾನೆ. ಅವನನ್ನು ಬುಕ್ಕಾಂಬೂದಿ ಕೆರೆ ಅಂಗಳದಲ್ಲಿ ಸಮಾಧಿ ಮಾಡಿದರು. ನಂತರ ಮಂಗಪೋಟಿ ಮಾಸಿಲುವಾಡು ಅವನ ತಮ್ಮ ಕುಂಟಿಮಾಸಿಲು ವಾಡು ಎಂಬುವರು ಮಂಗಪೋಟಿ ಓಬಳದೇವರನ್ನು ನಿರ್ಮಿಸಿದರು. ಮಂಗಪೋಟಿ ಮಾಸಿಲುವಾಡು ಹಂಪೆಯ ಚಕ್ರತೀರ್ಥದಲ್ಲಿ ಮಂಗಪೋಟಿ ಓಬಳ ದೇವರನ್ನು ಹಾಕಿ, ಕೇವಲ ಬಿರುದಾವಳಿಗಳನ್ನಷ್ಟೇ ಮರಳಿ ತರುತ್ತಾನೆ. ಯರಮಂಚಿನಾಯಕ ೧೨ ಪೆಟ್ಟಿಗೆ ದೇವರುಗಳ ಪೈಕಿ ದೊಡ್ಡತಿರಮಲ ದೇವರನ್ನು ಆನೆಗುಂದಿಯಿಂದ ತರುತ್ತಾನೆ. ಈ ದೇವರನ್ನು ತಂದಾಗ ಆನೆಗುಂದಿ ಅರಸರಿಗೂ ಮತ್ತು ಬೇಡರಿಗೆ ಯುದ್ಧವಾಗುತ್ತದೆ. ದೇವರನ್ನ ತಂದು ಕೆರೆ ನೀರಲ್ಲಿ ಬಚ್ಚಿಡುತ್ತಾರೆ. ಬಂಜಿಗೆರೆ ಕೆರೆ ನೀರಿನಲ್ಲಿದ್ದ ದೊಡ್ಡ ತಿರುಮಲ ದೇವರನ್ನು ಕಾಲೆತ್ತಿನವನು ಕರೆತರುತ್ತಾನೆ. ತಂದು ಬೇಡರೆಡ್ಡಿಹಳ್ಳಿಯಲ್ಲಿ ಪ್ರತಿಷ್ಠಾಪಿಸಿದರು. ಈ ದೇವರ ಮೊದಲ ಪೂಜೆ ಕಾಲೋರಗೋತ್ರದವರಿಗೆ ಸಲ್ಲುತ್ತದೆ.

ದನಗಾಹಿ ಯರಗಾಟನಾಯಕ, ಬಾಗೇನಾಳು ಕಾಮನಾಯಕ, ಗುಜಗುತ್ತಲ ಖ್ಯಾತಯ್ಯ ತಮಟಕಲ್ಲು ಓಬವ್ವನಿಗೆ ಮರುಳಾಗಿ ಸಾವನ್ನಪ್ಪಿದ ದುರಂತ ನಾಯಕರಾಗಿದ್ದಾರೆ. ವಲಸೆ ನಿರ್ಮಾಣ, ಯರಗಾಟನ ದೇವಾಲಯ ಇಲ್ಲಿದೆ. ಸಿನ್ನಪಲ್ಲಿದಿದ್ದಲೋರು, ಪಾಮಡ ಲೋರು, ಅಲಿಕಿಶಿರಿ ನಾಯಕ, ರಪ್ಪಲಸೂರಿ ಮ್ಯಾಸಮಂಡಳಿಯಿಂದ ದೂರಾದುದು, ಮುತ್ತಿಗಾರ ಎತ್ತುಗಳ ಪ್ರದರ್ಶನ, ನದಿಯಲ್ಲಿ ತಂದ ನೀರು ಹಾಲಾಗಿದ್ದು ಇವೆಲ್ಲ ಘಟನೆಗಳು – ವ್ಯಕ್ತಿಗಳನ್ನು ಆರಾಧಿಸುವುದರ ಮೂಲಕ ಮ್ಯಾಸಮಂಡಳಿ ಅಭಿವೃದ್ಧಿ ಹೊಂದುತ್ತಾ ಬಂತು.

ಅಲಿಕಿಸಿರಿ ನಾಯಕನ ದೊರೆಸಾನಿಗೆ (ಪತ್ನಿ) ಅಚ್ಚವಲ್ಲಿನಾಯಕ ಎಂಬ ಮಗು ಜನಿಸುತ್ತದೆ. ರಪ್ಪಲಸೂರಿ ತಂದೆಯಿಲ್ಲದೆ, ಇತರರಿಗೆ (ಗಂಡಬಿಟ್ಟ ಹೆಣ್ಣು) ಹುಟ್ಟಿದವನೆಂದು ದ್ಯಾವುಡ್ಲಾಡು ಬೆಡಗಿನವರನ್ನು ಗಡಿಪಾರಾದವರೆಂದು ಕರೆಯುವರು. ಮಲ್ಲಿನಾಯಕನಗೋತ್ರಕ್ಕೆ ಅಮವಾಸೆ ದೇವರು ಬೊಮ್ಮದೇವರಾಗಿತ್ತು. ಇದಕ್ಕೆ ಮಲ್ಲಿನಾಯಕನ ಬೊಮ್ಮ ದೇವರೆಂದು ಹೆಸರು. ಕುಂಡುಲರವಾಡು ಗುಡಿಪಲ್ಲಿ ಓಬಳದೇವರು, ಮಂದಲೋರ ಅಮವಾಸೆ ದೇವರು ಮಂದಬೊಮ್ಮ ದೇವರಾಗಿತ್ತು. ಮಲಕೇಟಿ ಎದ್ದುಲವಾಡು, ಗುಡ್ಡಮು ಎದ್ದುಲುವಾಡಿ, ಕೋರ್ಲಮಲ್ಲಿ ನಾಯಕ, ಕ್ಯಾಸಾಪುರದ ಕ್ಯಾಸನು, ಬಾಳೆದ ಪಟ್ಟಮ್ಮ ಮೊದಲಾದವರು ಕಕ್ಕಲಬೆಂಚು, ಕಾರಚೆರುವು (ಗೋಶಿಕೆರೆ ಹಳ್ಳ) ಪ್ರದೇಶದಲ್ಲಿ ನೆಲೆಸಿದ್ದರು. ಕೋರ್ಲಮಲ್ಲಿನಾಯಕನಿಗೆ (ಧಾರ್ಮಿಕ ಪುರುಷ) ಜಗಳೂರು ಪಾಪನಾಯಕ, ಜನಿಸಿ ಪವಾಡ ಪುರುಷನಾಗುತ್ತಾನೆ. ಇವನಿಗೆ ಸೂರ್ದೇ ಪಾಪನಾಯಕ, ಪರದೇಶಿ ಪಾಪನಾಯಕ, ಕೋರೇಲು ಪಾಪನಾಯಕನೆಂದು ಹೆಸರು. ಈತನ ಪವಾಡಗಳು ಅನೇಕ, ಹೊಂಡದಲ್ಲಿ ಸ್ನಾನ, ದನಗಳು ಕಾಯುವುದು, ತಿರುಪತಿಯಾತ್ರೆ, ಜಗಪತಿಗೆ ಬುದ್ಧಿವಾದ ಹೇಳಿದ್ದು ಹೀಗೆ ಅನೇಕ ಕಾರ್ಯ ಚಟುವಟಿಕೆಗಳು ನಡೆಯುತ್ತವೆ. ಬಂಜಗೆರೆ ಓಬಳದೇವರು ಕಾಮಗೇತನಹಳ್ಳಿ ಕಟ್ಟೆಮನೆ (ಆಚಾರ), ಸೂರಪ್ಪದೇವರು ಕಾಮಗೇತಿಗಳಿಗೆ ಮನೆದೇವರಾಗಿದೆ.

ಗೌರಸಮುದ್ರದಲ್ಲಿ ಐವೋದಿಮಠ ನಿರ್ಮಾಣ, ಕುಕ್ಕನವಾಡು ಚಿತ್ರದೇವರು, ಬೋಸೆ ನಾಯಕರ ಬೋಸೆ ದೇವರು, ಪದಿಪೂಜಾರಿ ಬೋಡೆ ಪಡ್ಲವಾಡು, ಬೆಲ್ಲಲುವಾಡು, ಕೊತ್ತಕೋಟಮಾಸಿಲುವಾಡು, ವರುವು ಮಾಸಿಲವಾಡು, ಮಾಕನಡಕು ಓಬಳ ದೇವರು, ಪುವ್ವಲಾರು ಪೆನ್ನೋಬಳ ದೇವರು, ನನ್ನುಲ ಮುತ್ತಿಗಾರು, ಎದ್ದುಲುವಾಡು, ದಡ್ಡಿಮುತ್ತಿ ದೇವರು, ಕ್ಯಾತಪುಲುವಾಡು, ಮೊನ್ನುಲುವಾರು, ದ್ಯಾವರಗೊರ್ಲುವಾರು, ಕರಿನಾರು, ಎನುಮುಲುವಾರು ಬೆಡಗುಗಳು, ಬೂದುಗುಮ್ಮಿಯಲ್ಲಿ ಮುತ್ತಿಗಾರ ಎತ್ತುಗಳು ಮುಳುಗುತ್ತವೆಂಬ ಸಂಗತಿಗಳು ಮುಖ್ಯವಾದವು.

ಹಿರೇಹಳ್ಳಿ ದಡ್ಡಿಸೂರನಾಯಕನ ಪೂಜಾರಿಗಳು, ಪದ್ದನಾಡು, ಬೊಗ್ಗುಲುವಾರು, ಪೆದ್ದಳ್ಳನಾಯಕಡು, ದೊರೆ ಅಧಿಕಾರದ ಹಂಚಿಕೆ, ೩ ಜನ ನಾಯಕ, ಪೂಜಾರಿಗಳ ನೇಮಕವಾಗುತ್ತದೆ. ಐವೋದಿ, ನಿಡಗಲ್ಲು, ನಾಯಕನಹಟ್ಟಿ, ಗೋನೂರು, ನನ್ನಿವಾಳ ಗುಡಿಕಟ್ಟೆ ಮತ್ತು ಕಟ್ಟೆಮನೆಗಳಾದವು. ಹಟ್ಟಿಮಲ್ಲಪ್ಪನಾಯಕನಿಂದ ನಾಯಕನಹಟ್ಟಿ ಕಟ್ಟೆಮನೆ ಅಭಿವೃದ್ಧಿಗೊಂಡಿದ್ದುಂಟು. ಯರಮಂಚಿನಾಯಕ ಒಮ್ಮೆ ಹೊರದೇಶಗಳಿಗೆ ಸಂಚಾರ ಹೊರಡುತ್ತಾನೆ. ಹೀಗೆ ಮ್ಯಾಸಮಂಡಳಿಯಲ್ಲಿ ಒಬ್ಬನಾಯಕ, ವೀರನ ಸ್ಥಾನಮಾನಗಳು ಹೇಗಿರುತ್ತವೆಂಬುದನ್ನು ತಿಳಿಯಬಹುದಾಗಿದೆ. ಪ್ರತಿ ಬೆಡಗಿಗೊಂದು ದೇವರು, ರೂಢಿ – ಸಂಪ್ರದಾಯಗಳು ಇರುತ್ತವೆ. ಮ್ಯಾಸಬೇಡರ ಸಾಂಸ್ಕೃತಿಕ ಚರಿತ್ರೆಯನ್ನು ಮೌಖಿಕ ಮಾಹಿತಿಯಿಂದಲೇ ವಿಶ್ಲೇಷಿಸಿದರೆ ಸಾಲದು. ಪುರಾತತ್ವ ಅವಶೇಷ: ಶಾಸನ, ದೇವಾಲಯ, ಶಿಲ್ಪಗಳ ಮೂಲಕವು ತಿಳಿಸಿಕೊಡುವ ಅಗತ್ಯವುಂಟು. ಈ ಹಿನ್ನೆಲೆಯಲ್ಲಿ ಒಂದು ಕಾಲಘಟ್ಟದ ಅಥವಾ ತಲೆಮಾರಿನವರು ಕಟ್ಟಿಕೊಟ್ಟ ಚರಿತ್ರೆಯು ಕಾಲಾಂತರದಲ್ಲಿ ಸಾಂಸ್ಕೃತಿಕ ಅನನ್ಯತೆ ಮತ್ತು ಪಲ್ಲಟಗಳ ಮೂಲಕ ಸ್ಥಿತ್ಯಂತರಕ್ಕೊಳಗಾಗಬಹುದು. ಹೀಗಾಗಿ ಒಂದು ಹಂತಕ್ಕೆ ಇದನ್ನು ವಾಸ್ತವವೆಂದು ಜನಪದರಿಂದ ಕರೆಸಿಕೊಂಡು ಸಂಶೋಧನಾ ದೃಷ್ಟಿಯಿಂದ ನೋಡಿದಾಗ ಅನೇಕ ಸಂಗತಿಗಳು ಮರೆಯಾಗಿರುವುದುಂಟು. ಇಂದು ತಮ್ಮ ಸಂಸ್ಕೃತಿಯಲ್ಲಿ ತೀವ್ರ ಬದಲಾವಣೆಗೊಂಡಿರುವ ನಾಯಕರು ಪೂಜಿಸುವ ಕ್ರಮ, ಆಚರಿಸುವ ವಿಧಾನಗಳಿಂದ ಬುಡಕಟ್ಟು ವೀರರನ್ನು ಆರಾಧಿಸುವುದರೊಂದಿಗೆ ಇತರ ಶೈವ, ವೈಷ್ಣವ ದೇವತೆಗಳ ಅನುಯಾಯಿಗಳಾಗಿದ್ದಾರೆ. ಅಲ್ಲದೆ, ಸಂದರ್ಭಾನುಸಾರ ಜಾತಿಯ ಕಟ್ಟುಪಾಡುಗಳಲ್ಲಿ, ಸಡಲಿಕೆಯನ್ನು ಮಾಡಿಕೊಂಡಿದ್ದಾರೆ. ತಮ್ಮ ಏನೆಲ್ಲಾ ಭಕ್ತಿ ಭಾವನೆಗಳಿದ್ದರೂ ಅವುಗಳನ್ನು ತಮ್ಮ ಸಮುದಾಯದೊಂದಿಗೂ ಗುಂಪಾಗಿ ಮಾಡುವ ಕಾರ್ಯವಿಧಾನಗಳು ತಮ್ಮ ಅನನ್ಯತೆಯನ್ನು ಉಳಿಸಿಕೊಳ್ಳುವುದು ಒಂದೆಡೆಯಾದರೆ, ಅಸ್ತಿತ್ವದೊಂದಿಗೆ ಪ್ರಭುತ್ವ ಪಡೆದು ಆಳುವ ವರ್ಗವಾಗಬೇಕೆಂದು ಹವಣಿಸುವುದು ಮತ್ತೊಂದು ಬಗೆಯದಲ್ಲಿ ಶ್ಲಾಘನೀಯ.

# ೭. ಬುಡಕಟ್ಟು ವೀರರ ಧಾರ್ಮಿಕ ಪಂಥ ಮತ್ತು ಸಾಂಸ್ಕೃತಿಕ ಪರಂಪರೆ (2)

೧

ಕರ್ನಾಟಕದಲ್ಲಿ ಬೇಡ, ನಾಯಕ ಬುಡಕಟ್ಟಿನ ವೀರರ ಆರಾಧನೆ ಇರುವುದನ್ನು ಅವಲೋಕಿಸುವ ಅನಿವಾರ್ಯತೆ ಚಾರಿತ್ರಿಕವಾಗಿ ಮಹತ್ವದ್ದು. ವಿಶೇಷವಾಗಿ ಚಿತ್ರದುರ್ಗ ಜಿಲ್ಲೆಯ ಮತ್ತು ಅದರ ಗಡಿಪರಿಸರದಲ್ಲಿ ಮ್ಯಾಸಬೇಡರ ವೀರ ಆರಾಧನೆ, ಧಾರ್ಮಿಕ, ಸಂಪ್ರದಾಯ, ಸಾಂಸ್ಕೃತಿಕ ಆಚರಣೆಗಳು ಇಂದಿಗೂ ಪ್ರಚಲಿತದಲ್ಲಿವೆ. ಅವು ಯಾವುದೇ ಒಂದು ಪ್ರದೇಶ, ವ್ಯಕ್ತಿಗೆ ಸೀಮಿತವಾಗಿರದೆ, ಏಕತೆಯಲ್ಲಿ ಬಹು ವೈವಿಧ್ಯತೆಯನ್ನು ತಾಳುವಂತೆ ಇತರ ಸಮುದಾಯಗಳ ಮೇಲೆ ಈ ವೀರ ಪರಂಪರೆ ಪ್ರಭಾವಿಸಿದೆ.

ಮ್ಯಾಸಬೇಡರ ಮಹಾನಾಯಕನೂ, ಸಂಸ್ಕೃತಿ ನಿರ್ಮಾಪಕನಾದ ಯರಮಂಚಿನಾಯಕ ಜಾತ್ಯಾತೀತ ವ್ಯಕ್ತಿ. ತನ್ನ ಜಾತಿಗೆ ಇತರ ಅಲಕ್ಷಿತ ಅಸ್ಪೃಶ್ಯ ಮೊದಲಾದವರನ್ನು ಸೇರಿಸಿಕೊಂಡು ಬದುಕಿಗೊಂದು ಹಾದಿ ತೋರಿಸಿದ್ದು ಗಮನಾರ್ಹ. ಇವನನ್ನು ಮನೆದೇವರಾಗಿ ಹೊಂದಿರುವ ಬಿ. ಲಕ್ಷ್ಮಯ್ಯ ತಂದೆ ಬಂಜೋಬಯ್ಯ ಎಂಬುವರು ಬಿದರಕೆರೆ ಮನೆತನಕ್ಕೆ ಸೇರಿದ್ದು, ಗೌರಸಮುದ್ರದಲ್ಲಿ (ಚಳ್ಳಕೆರೆ – ತಾ) ನೆಲೆಸಿರುತ್ತಾರೆ. ಮ್ಯಾಸನಾಯಕರ ಎನುಮುಲೋರ ಎಂಬುದು ಇವರ ಬೆಡಗು. ಗ್ರಾಮದಲ್ಲಿ ನೆಲಸಿರುವ ಈತ ಯರಮಂಚಿನಾಯಕ, ಬೊಮ್ಮದೇವರನ್ನು ಆರಾಧಿಸಿದರೂ ಮೊದಲನೆಯದೇ ಮನೆದೇವರು. ಇವರಿಗೆ ಕಟ್ಟೆಮನೆ ಮತ್ತು ಗುಡಿಕಟ್ಟೆ ಬೇಡರೆಡ್ಡಿಹಳ್ಳಿ. ಯರಮಂಚಿನಾಯಕನ ದೇವಾಲಯ ಬೇಡರೆಡ್ಡಿ ಹಳ್ಳಿಯಲ್ಲಿದೆ (ಚಳ್ಳಕೆರೆ ತಾ). ಈ ದೇವರ ಭಕ್ತರು, ಪೂಜಾರಿಗಳು ನವೀನ ಮಾದರಿಯ ಮಾಳಿಗೆ ಮನೆಯಲ್ಲಿ ವಾಸಿಸುತ್ತಿದ್ದು, ಗುಡಿಸಲುಗಳನ್ನು ತೊರೆದಿರುತ್ತಾರೆ. ಪೂಜಾರಿ ನೇಮಕವನ್ನು ೭ ಜನ ಅಜ್ಜನಾರು ಸೇರಿ ಮಾಡುವರು. ಯರಮಂಚಿನಾಯಕನ ದೇವರಿಗೆ ದೇವರೆತ್ತುಗಳಿದ್ದು, ಕಿಲಾರಿ ಅವುಗಳನ್ನು ಪೋಷಣೆ ಮಾಡಿದರೆ, ದಾಸಯ್ಯ ಇತರ ಆಚರಣೆಗಳನ್ನು ಮಾಡುತ್ತಾನೆ. ಇದಕ್ಕೆ ಗೌರಸಮುದ್ರದ ಚಲುವಾದಿಗಳು ಉರುಮೆ ಬಡಿಯುವರು. ವಾಸೆಕೊಯ್ಯುವ ಪದ್ಧತಿ ಇವರಲ್ಲಿದ್ದು, ಸ್ತ್ರೀ ದೇವತೆಯಾದ ಗೌರಸಮುದ್ರದ ಮಾರಮ್ಮನನ್ನು ಪೂಜಿಸುತ್ತಾರೆ. ಇವರು ವೈಷ್ಣವ ಪಂಥಕ್ಕೆ ಸೇರಿರುತ್ತಾರೆ. ಬಂಜಗೆರೆ ಸಮೀಪ ಹರಿಯುವ

ವೇದಾವತಿ (B.T.B. Dam) ನದಿಯಲ್ಲಿ ಗಂಗಾಪೂಜೆಯ್ನು ನೆರವೇರಿಸಿಕೊಂಡು, ಕಾಸು, ಮೀಸಲು, ಮಣೆವುಗಳನ್ನು ಇಡುತ್ತಾರೆ. ತಮ್ಮ ಪಾರಂಪರಿಕ ವೃತ್ತಿಯಂತೆ ಇವರು ಪಶುಗಳನ್ನು ಹೆಚ್ಚಾಗಿ ಸಾಕಿರುವರು. ಈ ಲಕ್ಷ್ಮಯ್ಯ ಎಸ್.ಎಲ್.ಎಸ್.ಸಿ. ಓದಿದ್ದು ಮೊಳಕಾಲ್ಮುರುವಿನಲ್ಲಿ ಪೋಸ್ಟ್‌ಮ್ಯಾನ್ ಕೆಲಸ ಮಾಡುತ್ತಾರೆ. ಕನ್ನಡ – ತೆಲುಗು ಮಾತನಾಡುವ ಇವರ ಕುಟುಂಬದಲ್ಲಿ ಶವಸಂಸ್ಕಾರ ಪದ್ಧತಿಯಲ್ಲಿ ಶವವನ್ನು ಹೂಳುವುದುಂಟು (೧೨.೧೦.೧೯೯೮).

ಗಾದರಿಪಾಲನಾಯಕನೆಂಬ ವೀರನ ಬಗ್ಗೆ ಹಬ್ಬ, ಜಾತ್ರೆಗಳನ್ನು ದಾವಣಗೆರೆ, ಚಿತ್ರದುರ್ಗ ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ಮಾಡಿಕೊಂಡು ಬರುತ್ತಿದ್ದಾರೆ. ದೀಪಾವಳಿ, ಗುಗ್ಗರಿಹಬ್ಬ, ಕಾಳನಹಬ್ಬ ಹೀಗೆ ವಿಶೇಷ ಸಂದರ್ಭದಲ್ಲಿ ಆಚರಣೆಗಳು ನಡೆಯುತ್ತಿರುವುದು ಗಮನಾರ್ಹ. ಗಂಜಿಗಟ್ಟೆ, ಜುಂಜುರುಗಂಎ, ಚನ್ನಬಸಯ್ಯನಹಟ್ಟಿ, ನನ್ನಿವಾಳ, ರಾಮಸಾಗರ, ಬಿ.ಜಿ. ಕೆರೆ, ಪೂಜಾರಹಳ್ಳಿ, ರಾಯಪುರ ಮೊದಲಾದ ಸ್ಥಳಗಳಲ್ಲಿ, ಈ ದೇವರಗುಡಿಗಳಿವೆ. ಇವನ ಅನುಯಾಯಿಗಳು ಈ ಪರಿಸರದಲ್ಲಿ ವ್ಯಾಪಕವಾಗಿ ನೆಲೆಸಿರುವರು. ಹೀಗೆಯೇ ಹಂಪಿ ಪಕ್ಕದ ಕಮಲಾಪುರದಲ್ಲಿ ಇವರ ಧಾರ್ಮಿಕ ಪಂಥವಿದೆ.

ಮ್ಯಾಸಬೇಡರ ಮಹಾದಾರ್ಶನಿಕ ಪುರುಷ ಜಗಳೂರು ಪಾಪನಾಯಕ. ಈತನಿಗೆ ಪರದೇಶಿ ಪಾಪಯ್ಯ, ಕೋರೇಲು ಪಾಪಯ್ಯ, ಸುರದೇವ ಎಂಬೆಲ್ಲ ಹೆಸರುಗಳಿವೆ. ಈತನಿಗೆ ಸಂಬಂಧಿಸಿದ ಪಂಥ ಮಧ್ಯ ಕರ್ನಾಟಕದಲ್ಲಿರುವುದು ಸ್ಪಷ್ಟ. ಮೊಳಕಾಲ್ಮೂರು ತಾಲೂಕಿನ ನೇರ್ಲಹಳ್ಳಿಗೆ ಸೇರಿದ ಓಬ್ನೋಬಯ್ಯನಹಟ್ಟಿ ಸಣ್ಣಪಾಪಯ್ಯ ತಂದೆ ಓಬ್ನೋಬಯ್ಯನನ್ನು ಸಂದರ್ಶಿಸಲಾಯಿತು. ಮಂದವಾರು ಬೆಡಗಿನ 'ಕರಿನಾರು' ಎಂಬ ಪಂಗಡಕ್ಕೆ ಸೇರಿದವರಿವರು. ಹಟ್ಟಿಯಲ್ಲಿ ವಾಸಿಸುತ್ತಿದ್ದು, ಸೂರದೇವರ ಪಾಪನಾಯಕನನ್ನು (ಜಗಳೂರು ಪಾಪನಾಯಕ) ಮನೆದೇವರಾಗಿ ಹೊಂದಿರುತ್ತಾರೆ. ಈ ಪಾಪನಾಯಕ ಮೂಲದಲ್ಲಿ ಎತ್ತಿನ ಕಿಲಾರಿ, ದನಗಾಹಿ ಮತ್ತು ಪವಾಡಪುರುಷನೆಂಬುದು ಇವರ ಅಭಿಪ್ರಾಯ. ಇವರಿಗೆ ಕಂಪಳದೇವರಹಟ್ಟಿ (ಮೊಳಕಾಲ್ಮುರು ತಾ) ಗುಡಿಕಟ್ಟು ಆದರೆ, ನಾಯಕನಹಟ್ಟಿ ಕಟ್ಟೆಮನೆಯಾಗಿರುತ್ತದೆ. ಕಾಲಾಂತರದಲ್ಲಿ ಕಂಪಳ ದೇವರನ್ನು ಮನೆದೇವರಾಗಿ ಹೊಂದಿರುವರು. ಕಂಪಳದೇವರಹಟ್ಟಿಯಲ್ಲಿರುವ ಪಾಪನಾಯಕನ ದೇವಾಲಯಕ್ಕೆ ಇವರು ನಡೆದುಕೊಳ್ಳುತ್ತಿದ್ದು, ತಿರುಪತಿಯಿಂದ ಬಂದ ದೇವರು, ದೇವರೆತ್ತುಗಳ ಜೊತೆಗೆ ತಿರುಪತಿ ವೆಂಕಟೇಶ್ವರನ ಸಾಲಿಗ್ರಾಮದಿಂದ ಬಂದಿದೆ ಎಂದು ತಿಳಿಸುತ್ತಾರೆ. ಇತ್ತೀಚೆಗೆ ಹೊಸ ದೇವಾಲಯದ ಕಟ್ಟಡ ನಿರ್ಮಾಣವಾಗಿದ್ದು, ಪೂಜಾರಿ ಸಣ್ಣಬೋರಯ್ಯ ಮೊದಲಾದವರು ಮಾಳಿಗೆ ಮನೆಯಲ್ಲಿ ವಾಸಿಸುತ್ತಿರುವರು. ಈ ಪೂಜಾರಿ ಪ್ರತಿ ಶನಿವಾರ ಒಂದತ್ತು (ಉಪವಾಸ ಪಥ್ಯ) ಇರುತ್ತಾನೆ. ಈತನನ್ನು ನೇಮಿಸುವುದು 'ನೆಗಿರಮನೆರು' ಎಂಬುವರನ್ನು ಮಾತ್ರ. ಅರಮನೆ ಗುರುಮನೆಗಳೆರಡು ಕಂಪಳದೇವರಹಟ್ಟಿ. ದೇವರೆತ್ತುಗಳು ಕಮರಕಾವಲಿನಲ್ಲವೆ. ೩ ಹಬ್ಬಗಳು ಇಲ್ಲಾಗುವುದುಂಟು. ಎತ್ತಿನ ಕಿಲಾರಿಯನ್ನು ನನ್ನಿವಾಳ ಕಟ್ಟೆಮನೆಯ ದೊರೆ ನೇಮಿಸುತ್ತಾನಲ್ಲದೆ, ಪಟ್ಟಾಕಟ್ಟುತ್ತಾನೆ. ದಾಸಯ್ಯನು ವೈಷ್ಣವ ಸಂಪ್ರದಾಯಕ್ಕೆ ಸೇರಿದ್ದು, ವಾರ ಬರುವುದರಿಂದ ವಾರದ ದಾಸಯ್ಯನೆಂದು ಕರೆಯುವರು. ವಾರಕ್ಕೆ ೫ – ೧೦ ಮನೆಗಳನ್ನು ಬೇಡಿ ಭಿಕ್ಷೆ ಪಡೆಯುತ್ತಾನೆ. ದೇವರೆತ್ತುಗಳ ಹತ್ತಿರ ಸಹಾ ಭಿಕ್ಷೆ ಬೇಡಿ ಭಕ್ತಾದಿಗಳಿಂದ ಸಂಗ್ರಹಿಸಿಕೊಂಡು, ಪಂಜು ನುಂಗುವ ವಿಚಿತ್ರ ದೃಶ್ಯ ಅಪೂರ್ವವಾದುದು. ಈ ದೇವರಿಗೆ ತಾಯಕನಹಳ್ಳಿಯ ಮಾಲಹೊಲೆಯರ ಕೆಂಚಪ್ಪ ಚಲುಮ ಉರುಮೆ ಬಡಿಯುತ್ತಾನೆ. ಇವರು ಸಹಾ ಇದೇ ದೇವರಿಗೆ ನಡೆದುಕೊಳ್ಳುವುದರಿಂದ ಬೇಡ ಹೊಲೆಯರಿಗೂ ಪಾಪನಾಯಕ ಮನೆದೇವರಾಗಿರುವುದು ಕಂಡುಬರುವ ವಿಶೇಷ ಸಂಗತಿ. ಉರುಮೆಗಾರ ಕಾಲಿಗೆ ಗಗ್ಗರಿ ಹಾಕುತ್ತಾನೆ. ಅಗಸ ಈ ಹಬ್ಬಗಳಲ್ಲಿ ಪಂಜು ಹಿಡಿದು ಬೆಳಕು ಮಾಡಿದರೆ, ಪಾಪೇದೇವರಿಗೆ ವಾಸೆ ಕೊಯ್ಯುವುದನ್ನು ಈ ಅಗಸನಿಗೆ ಕೊಡುತ್ತಾರೆ. ಇವರು ಪುರುಷ ದೇವತೆಯಷ್ಟೇ ಅಲ್ಲದೆ, ಸ್ತ್ರೀ ದೇವತೆಯಾದ ದಡ್ಲು ಮಾರಮ್ಮನನ್ನು ಆರಾಧಿಸುವುದುಂಟು. ಇವಳನ್ನು ಚೆಂಚುಲಕ್ಷ್ಮಿ ಎಂದು ಕಂಪಳ ದೇವರಿಗೆ ಹೆಂಡತಿಯೆಂದು ನಂಬಿದ್ದಾರೆ. ವೈಷ್ಣವ ಸಾಲಿಗ್ರಾಮ ಇದಾಗಿದ್ದು, ಜನಿಗೆಹಳ್ಳ (ಚಿನ್ನಹಗರಿ), ನುಂಕಪ್ಪನ ಗುಡ್ಡಗಳನ್ನು ಪೂಜಿಸುವರು. ಮಾಘಮಾಸದಲ್ಲಿ ಗುಗ್ಗರಿಹಬ್ಬ (ದೊಡ್ಡ ಹಬ್ಬ) ನಡೆದು ಮೆಣೆವು ಇಡುತ್ತಾರೆ. ಕಂಪಳದೇವರಿಗೆ ಅಪರೂಪಕ್ಕೆ ಬಹಳ ವರ್ಷಗಳಿಗೊಮ್ಮೆ ಹೆಡೆಕಟ್ಟ (ಪೆಡಗಟ್ಟ ಪಂಡುವ) ಹಬ್ಬವಾಗುತ್ತದೆ. ಇದನ್ನು ನಾಗಾರಾಧನೆಗೆ ಹೋಲಿಸಬಹುದಾಗಿದೆ. ಯುಗಾದಿ ಹಬ್ಬದಲ್ಲಿ ಎಲ್ಲರೂ ಬೇಟೆಯಾಡಲು ಹೋಗುತ್ತಾರೆ. ಇಂದಿಗೂ ಇವರಲ್ಲಿ ಪಶುಪಾಲನೆಯಿದೆ. ಈ ಸಣ್ಣ ತಿಪ್ಪಯ್ಯ ೩ನೇ ತರಗತಿ ಓದಿದ್ದು, ಕಾಂಗ್ರೆಸ್ ಮುಖಂಡ ಮತ್ತು ಪಂಚಾಯತ್ ಸದಸ್ಯನಾಗಿದ್ದವನು.

ವ್ಯವಸಾಯದಿಂದ ಜೀವಿಸುತ್ತಿದ್ದು, ಮನೆಯಲ್ಲಿ ತೆಲುಗು ಭಾಷೆಯನ್ನಾಡುತ್ತಾರೆ. ವಿಶೇಷವೆಂದರೆ ಇವರು ಹೆಂಡತಿಗೆ ತಾಳಿ ಕಟ್ಟುವುದಿಲ್ಲ, ಬದಲಾಗಿ ಕರಿಮಣಿಯನ್ನು ಕಟ್ಟುವರು (೩೦.೧೧.೯೮).



ಗಾದರಿಪಾಲನಾಯಕನ ಪತ್ನಿಯರ ಸಹಗಮನ

ಜಗಳೂರು ಪಾಪನಾಯಕನ ಪಂಥಕ್ಕೆ ಸಂಬಂಧಿಸಿದಂತೆ ಚಿತ್ರದುರ್ಗ ತಾಲೂಕಿನ ಪೇಲೋರಹಟ್ಟಿಯಲ್ಲಿ ಬೇರೆ ಬಗೆಯ ಸಂಗತಿಗಳು ಗೋಚರಿಸುತ್ತವೆ. ನಾಯಕ ಜನಾಂಗ ಡಿ.ಸೂರಯ್ಯ (೪೫) ವ್ಯವಸಾಯದಿಂದ ಜೀವಿಸುತ್ತಾನೆ. ಈತ ಮಲ್ಲಿನಾಯಕ ಪಂಗಡದ ಪೈಲಾರು ಬೆಡಗಿನವನು. ಮನೆ ದೇವರು ಜಗಳೂರು ಪಾಪನಾಯಕ. ಈ ದೇವರನ್ನು ಶಿವಶರಣನೆಂದು ಗುಗ್ಗರಿಹಬ್ಬ, ಯುಗಾದಿಯಲ್ಲಿ ಬೇಟೆಯಾಡುವುದು, ದನಗಾಹಿ ಎಂದು ತಿಳಿದು ದೇವರೆತ್ತುಗಳನ್ನು ಮೆರೆಸುವುದು (ಓಡಿಸುವುದು) ಕಂಡುಬರುತ್ತದೆ. ಜಗಳೂರುಜ್ಜನ ದೇವಾಲಯ ಚಳ್ಳಕೆರೆ ಸಮೀಪದಲ್ಲಿದೆ. ಇವರಿಗೆ ನನ್ನಿವಾಳ ಮತ್ತು ಹಿರೇಹಳ್ಳಿ ಗುಡಿಕಟ್ಟೆ ಮತ್ತು ಕಟ್ಟೆಮನೆಗಳಾಗಿವೆ. ಜಗಳೂರು ಪಾಪನಾಯಕ ಚಳ್ಳಕೆರೆ ತಾಲೂಕಿನ ನನ್ನಿವಾಳದ ಅಡವಿಯ ಕಾಡ್ಲಕುಂಟೆ ತಿಪ್ಪೆಯಲ್ಲಿ ಜನಿಸಿದನೆಂದು ಹೇಳಲಾಗುತ್ತದೆ. ಚಳ್ಳಕೆರೆ, ನನ್ನಿವಾಳ, ಕರೆಕಾಟ್ಲಹಳ್ಳಿ, ಮುಚ್ಚುಗುಂಟೆ, ಕಲ್ಲಹಳ್ಳಿ, ಪೇಯಿಲಾರಹಟ್ಟಿ, ಚೂರುಪಾಪಯ್ಯನಹಟ್ಟಿ, ಗೋನೂರು, ಹಾಯ್ಕಲ್, ಬೆಳಗಟ್ಟ, ಕಂಪಳದೇವರಹಟ್ಟಿ ಮತ್ತು ಜಗಳೂರುಗಳಲ್ಲಿ ಈತನ ದೇವಾಲಯಗಳಿವೆ. ಜಗಳೂರು ಪಾಪನಾಯಕನದು ಕತ್ತಿದೇವರು. ಇಲ್ಲಿನ ಪೂಜಾರಿಯ ಹೆಸರು ಪೂಜಾರಿ ಪಾಪಯ್ಯ. ಈತನನ್ನು ಯಜಮಾನರು, ಊರ ಜನರು, ದೇವರೆತ್ತುಗಳಿಂದ ತೀರ್ಥಪ್ರಸಾದ, ಪೂಜೆ ಮಾಡಿದ ನಂತರ ನೇಮಿಸುತ್ತಾರೆ. ಅರಮನೆ ಗುರುಮನೆಗಳೆರಡು ಪದಿಮುತ್ತಿಗಾರು ಮತ್ತು ನನ್ನಿವಾಳ. ನಲಗೇತ್ಲ ಎತ್ತುಗಳು ಇವುಗಳ ಜೊತೆಗಿರುತ್ತವೆ. ಕಿಲಾರಿಯನ್ನು ಯಜಮಾನರು ನೇಮಿಸುತ್ತಾರೆ. ಶುಭಕಾರ್ಯಗಳಲ್ಲಿ ದಾಸಯ್ಯ ಶಂಖ ಊದುವುದು, ಜಾಗಟೆ ಬಡಿಯುವುದುಂಟು. ರಾಯಭಾರು, ಕಾಮಗೇತ್ಲು ಪಂಜುನುಂಗುವುದು, ಕಾಮಗೇತ್ಲ ದಾಸಯ್ಯನು ಜಗಳೂರಜ್ಜನ ಗುಡಿ ಮುಂದೆ ಮಾಡುತ್ತಾನೆ. ಇದಕ್ಕೆ ನನ್ನಿವಾಳ ಮೂಲದ ಬೆಳಗಟ್ಟದಲ್ಲಿರುವ ಉರುಮೆಯವರು ಬರುತ್ತಾರೆ. ಹರಕೆ ಇರುವವರು ವಿವಿಧ ಕೆಲಸಗಳನ್ನು ಮಾಡುತ್ತಾರೆ. ಊರಿನ ಹಿರಿಯರು ಜವಾಬ್ದಾರಿಗಳನ್ನು ನೋಡಿಕೊಳ್ಳುವರು. ದೇವರು ಗಂಗೆಪೂಜೆಗೆ ಹೋದಾಗ ದೇವರ ಮುಂದೆ ಪ್ರತಿಯಾಗಿ ಗಂಗಮ್ಮ ಪೂಜೆಗೆ ವಾಸೆ ಕೊಯ್ಯುತ್ತಾರೆ. ಇವರು ಸ್ತ್ರೀ ದೇವತೆಯಾದ ಕೆಂಚಮ್ಮನನ್ನು ಪೂಜಿಸಿ ಅಗ್ನಿಕುಂಡ, ಬೆಂಕಿಕುಂಡ ತುಳಿಯುವುದುಂಟು. ಇವರು ಶೈವಪಂಥಕ್ಕೆ ಸೇರಿದವರು. ತಮ್ಮೂರಿನ ಗಂಗಮ್ಮ ಬಾವಿಯನ್ನು ಆರಾಧಿಸುವರು. ಇವರು ನಿಸರ್ಗದಲ್ಲಿ ಕಪ್ಪು ಕಲ್ಲುಗಳ ಕೊರಕಲು ನೆಲವನ್ನು ಪೂಜ್ಯವೆಂದು ಭಾವಿಸಿರುವರು. ಗುಗ್ಗರಿಹಬ್ಬದಲ್ಲಿ ಕಾಸುಕಟ್ಟಿಕೊಳ್ಳುವುದು, ಊರ ಹೊರಗೆ ದೇವರು ವಾಸಮಾಡಿದ ಸ್ಥಳವೆಂದು ನಂಬಿ ೩ ದಿನ ಜಾತ್ರೆ ಮಾಡುವರು. ಗುಗ್ಗರಿ ಮತ್ತು ಯುಗಾದಿ ಹಬ್ಬಗಳು ಇಲ್ಲಿ ಪ್ರಧಾನ. ವ್ಯವಸಾಯ,

ಪಶುಪಾಲನೆಯಲ್ಲಿ ಇವರು ತೊಡಗಿಸಿಕೊಂಡಿದ್ದು, ಕೋಳಿ, ಹಂದಿ ಸಾಕಾಣಿಕೆ ನಿಷಿದ್ಧವಾಗಿದೆ. ಗಟ್ಟಿಮುಟ್ಟಾದ ಜನರು ಇವರಾಗಿದ್ದು, ಬಸವಂತನ ಆಟ, ಮಂಡೆ ಆಟಗಳನ್ನು ಆಡುವರು. ಜಗಳೂರು ಪಾಪನಾಯಕನಿಗೆ ಗುಂಡೇತವಾರು ಎಂಬ ಬೆಡಗಿನ ನಾಯಕರು ಪ್ರಾಣಿ ತಲೆ ಕೊಟ್ಟಾಗ ಕಡೆಯದೆ ಗುಂಡುಕೊಟ್ಟು ವಾಸೆ ಕೊಯ್ಯುತ್ತಾರೆ. ಆದ್ದರಿಂದ ಇಂದಿಗೂ ಪ್ರಾಣಿಬಲಿ ಕೊಡುವಾಗ ಮೊದಲು ಅದರ ಮುಂಗಾಲು ಕಡಿದು ೩ ಹೆಜ್ಜೆ ನಡೆಸಿದ ಬಳಿಕ ಶಿರ ಕಡಿಯುತ್ತಾರೆ.

ಮ್ಯಾಸಬೇಡರ ಮತ್ತೊಬ್ಬ ವೀರ ಕೊ (ಡ) ಗಲು ಬೊಮ್ಮಯ್ಯನೆಂಬುವನು ತನ್ನ ಸಾಂಸ್ಕೃತಿಕ ಪರಂಪರೆಯನ್ನು ಅನುಯಾಯಿಗಳ ಮೂಲಕ ಬಿಟ್ಟುಹೋಗಿದ್ದಾನೆ. ಚಳ್ಳಕೆರೆ ತಾಲೂಕಿನ ಕಾಟಪ್ಪನಹಟ್ಟಿಯ ೬೭ ವರ್ಷದ ಜಂಬುಗುಂಪುಲು (ಆಂಧ್ರಪ್ರದೇಶ) ಬೊಮ್ಮಯ್ಯನ ಮಗ ಸಣ್ಣಬೊಮ್ಮಯ್ಯನು ಈ ಪಂಥಕ್ಕೆ ಸೇರಿದವನು. ಹಟ್ಟಿಯಲ್ಲಿ ನೆಲೆಸಿರುವ ಈತ ಮಲ್ಲಿನಾಯಕನ ಪಂಗಡ ಎನುಮುಲೋರು ಬೆಡಗಿನವನು. ಅಮವಾಸೆ ದೇವರಾಗಿ ಬೊಮ್ಮದೇವರನ್ನು ಮತ್ತು ಸುರೇಚೆನ್ನಕಾಮನಾಯಕನನ್ನು ಹುಣ್ಣಿಮೆ ದೇವರೆಂದು; ಇವರಿಬ್ಬರೂ ವೀರರೆಂದು ಪರಿಗಣಿಸಲಾಗಿದೆ. ವರವು (ಚಳ್ಳಕೆರೆ – ತಾ) ಇವರಿಗೆ ಧಾರ್ಮಿಕ ಕೇಂದ್ರವಾಗಿದೆ. ಮನೆದೇವರ ಕಥೆಯನ್ನು ಹೇಳುತ್ತಾ ರಪ್ಪಲಸೂರಿ ಮಗ ಚೆನ್ನಕಾಮನಾಯಕ, ದಡ್ಡಿಸೂರನಾಯಕ, ಚೆನ್ನಪಾಲನಾಯಕ, ಯಮಂಚಿನಾಯಕ, ಕಾಟಮಲ್ಲೆನಾಯಕ, ಬೊಡೆಮಲ್ಲನಾಯಕ, ಚೆನ್ನಮಲ್ಲೆನಾಯಕ ಎತ್ತುಗಳನ್ನು ಕಾಯುತ್ತಿದ್ದರು. ರಪ್ಪಲಸೂರಿ ತಂದೆ ಅಲಿಕೆನಾಯಕನ ಮಾವನು ಮತ್ತು ರಾಯಮ್ಮ ? (ತ) ದೊಡ್ಡೇರಿ ತವರೂರು ಸಂತೆಗೆ ಬಂದಾಗ ಮಳೆ ಬಂತು. ಆಗ ರಪ್ಪಲಸೂರಿ (ಕಷ್ಟದಲ್ಲಿ) ರೊಪ್ಪದಲ್ಲಿ ಉಳಿದರು. ರಾಯಕ್ಕ ರಪ್ಪಲಸೂರಿ ಇಬ್ಬರೂ ಪೂರ್ವದ ಕಡೆ ಜಂಪುಗುಲುಗೆ ಹೋದರು. ರಪ್ಪಲಸೂರಿಗೆ ಬಹಿಷ್ಕರಿಸಿದರೂ ೩೨ ಸಾವಿರ ಕುಲದವರು ಎತ್ತುಗಳನ್ನು ಕಳುಹಿಸುವುದಿಲ್ಲ ಎಂದರು. ಆತ ಶರಣ. ಅಕ್ಕರಾಯಮ್ಮನಿಗೆ ವಡೆಲಾರು ಎತ್ತು ಹರಿಯುತ್ತವೆಂದು ಸಾರಿದ. ಆದ್ದರಿಂದ ಹೆಣ್ಣುಮಕ್ಕಳ ದೇವರಾಗಿ ಬೆಳೆದುಬಂತು. ವರವಿನಲ್ಲಿರುವ ದೇವರ ಗುಡಿ ಕಾಂಸಿಹುಲ್ಲಿನಿಂದ ಕಟ್ಟಲ್ಪಟ್ಟಿದೆ. ತಿಪ್ಪಯ್ಯನೆಂಬ ಪೂಜಾರಿ ಗುಡಿಸಲು ಮನೆಯಲ್ಲಿ ವಾಸಿಸುತ್ತಾನೆ. ಈ ಪೂಜಾರಿಯನ್ನು ಅಣ್ಣತಮ್ಮಂದಿರು, ದೊರೆ ತೀರ್ಮಾನದಂತೆ ಪದಿಮುತ್ತಿವಾರು ಎಂದು ಕರೆದು ದೇವರೆತ್ತುಗಳ ಸನ್ನಿಧಿಯಲ್ಲಿ ಪೂಜಾರಿ ನೇಮಕವಾಗುತ್ತಿದ್ದ. ದೇವರೆತ್ತುಗಳು ಇವರಿಗೆ ಸರ್ವಸ್ವ ಎಂದು ನಂಬಿದ್ದಾರೆ. ದೇವರೆತ್ತುಗಳು ಮಲ್ಲೂರಹಳ್ಳಿ ಸಮೀಪ ಪಿಲ್ಲಿಗುಂಡ್ಲು ಅರಣ್ಯದಲ್ಲಿರುತ್ತವೆ. ಕಿಲಾರಿಯಾಗಿ ಉಜ್ಜಿನಿದಾದಜ್ಜನ ಸಂತತಿಯಿದ್ದು, ನಲದಾದಿಮುತ್ತೆನ ಯಜಮಾನನಾಗಿರುವರು. ಹಿರೇಹಳ್ಳಿಯ ಚಲುವಾದಿಗಳು ಉರುಮೆ ಬಡಿದರೆ, ಅಲ್ಲಿನ ಅಗಸರು ಮಡಿ ಹಾಸುತ್ತಾರೆ. ಕಾಟಪ್ಪನು ಸ್ತ್ರೀದೇವತೆಯಿಂದ ಬಂದವನೆಂದು ಮಾರಮ್ಮಗೌರ ಸಮುದ್ರ, ದಡ್ಲುಮಾರಮ್ಮನನ್ನು ಪೂಜಿಸುವರು. ಶೈವ ಸಂಪ್ರದಾಯದ, ಬ್ರಹ್ಮನ ಅನುಯಾಯಿಗಳೆಂದು ಪಂಥವನ್ನು ಕಲ್ಪಿಸಿಕೊಂಡಿರುವರು. ಇವರಿಗೆ ಅಕ್ಕಮ್ಮನ ಬಾವಿ, ವೇದಾವತಿ ನದಿ, ಬೂದಿಗುಮ್ಮ, ದೇವರಹಳ್ಳಿ, ಬನ್ನಿಮರ, ಬೇವು ಮರಗಳ ಆರಾಧನೆ ಪ್ರಚಲಿತದಲ್ಲಿದೆ. ಗುಗ್ಗರಿ, ದೀಪಾವಳಿ ಹಬ್ಬಗಳಲ್ಲಿ ಕಾಸು, ಮಣಿವುಗಳಿದ್ದು, ಅಹಿಂಸೆಯನ್ನು ಇವರು ಪ್ರತಿಪಾದಿಸುತ್ತಾರೆ. ಕೋಲು, ಭಜನೆ, ಬಯಲಾಟ, ನಾಟಕ ಇತ್ಯಾದಿಗಳಿಂದ ಸಮಯ ಕಳೆಯುತ್ತಾ, ಬಡಗಿ ಕೆಲಸವನ್ನು ಮುಂದುವರೆಸುತ್ತಿದ್ದಾರೆ. ಇವರ ವಂಶದಲ್ಲಿ ೭ ಗುಂಪುಗಳಿದ್ದು, ಉಜ್ಜಿನಿದಾದಜ್ಜ (ಕಿಲಾರಿ) ನಲ್ಲದಾದಜ್ಜ (ನಾಯಕ) ಎಂಬುವರಿದ್ದಾರೆ.

ಮೊಳಕಾಲ್ಮೂರು ತಾಲೂಕಿನ ಮುತ್ತಿಗಾರಹಳ್ಳಿ ಪ್ರದೇಶವು ಕೊಳಗಲು ಬೊಮ್ಮನ ಆಳ್ವಿಕೆಗೊಳಪಟ್ಟಿದ್ದು, ಐತಿಹಾಸಿಕ ನೆಲೆಗಳನ್ನು ಇಂದಿಗೂ ನೋಡಬಹುದು. ಮುತ್ತಿಗಾರಹಳ್ಳಿಯ ಕೊಡಗುಬೊಮ್ಮನ ವಂಶಸ್ಥರೆಂದು ಹೇಳಿಕೊಳ್ಳುವ ಎನ್.ಎಂ. ಬೊಮ್ಮಯ್ಯ – ನಲ್ಲಯ್ಯನು ಕೊಡಗನಾರು ಮನೆತನಕ್ಕೆ ಸೇರಿದವನು. ಕೃಷಿಕೂಲಿಯಿಂದ ಜೀವನಮಾಡುವ ಈತನಿಗೆ ೬೮ ವರ್ಷ ವಯಸ್ಸಾಗಿದೆ. ಈತ ಮಾರವ ಬುಟಗಲೊರು ಬೆಡಗಿಗೆ ಸೇರಿದ್ದು, ಕೊಡಗನಾರುಪುಟ್ಟಿಯ ಹಕ್ಕುದಾರರು ಮತ್ತು ಮಲ್ಲಿನಾಯಕನ ಪಂಗಡದವರಾಗಿದ್ದಾರೆ. ತಮ್ಮ ಮೂಲಪುರುಷ, ಬುಡಕಟ್ಟು ವೀರನಾದಬೊಮ್ಮದೇವರೇ ಮನೆದೇವರು. ಈತನು ತಮ್ಮನಾಗಬೇಕು ಮಾರಮ್ಮ ಅಕ್ಕನಾಗಬೇಕೆಂದು ಹೇಳಲಾಗುತ್ತಾರೆ. ಐವೋದಿ ಮಠಕ್ಕೆ (ಗೌರಸಮುದ್ರ) ೧೪ ಪಟ್ಟಿಗೆಗಳಲ್ಲಿ ೧ನೆಯದು ಕೊಡಗನವನದು. ಗುಡಿಕಟ್ಟೆ – ಕಟ್ಟೇಮನೆಗಳೆರಡು ಇವರಿಗೆ ಗೌರಸಮುದ್ರವಾಗಿತ್ತು. ಈ ವಂಶಸ್ಥರು ತಮ್ಮ ಹಿರೇಮಗನಿಗೆ ಕೊಡಗುಬೊಮ್ಮನ ಹೆಸರನ್ನಿಡುತ್ತಾರೆ. ಇವರು ಪೂರ್ವದಲ್ಲಿ ವಲಸೆ ಹೋಗಿ ಮರಳಿ ಇಲ್ಲಿಗೆ ಬಂದಿರವರು. ಉನ್ನತ ಹಂತಕ್ಕೆ ತಲುಪದೆ ಇನ್ನು ಪರದಾಡುತ್ತಿದ್ದಾರೆ. ನಿಂಗಯ್ಯ ತಂದೆ ಇದರ ಪೂಜಾರಿ. ಈಗ್ಗೆ

ನಾಲ್ಕು ತಲೆಮಾರುಗಳಿಂದ ಇವರೇ ಪೂಜಾರಿಗಳು. ಇವರಿಗೆ ಅತೀ ಪವಿತ್ರ ಧಾರ್ಮಿಕ ಕೇಂದ್ರ ಗೌರಸಮುದ್ರ. ದೇವರೆತ್ತುಗಳಿದ್ದು ಕಿಲಾರಿಯ ಹೆಸರು ಬೊಮ್ಮಯ್ಯ. ಗೌರಸಮುದ್ರದ ಚಲುವಾದಿಗಳು ಉರುಮೆ ಬಡಿಯುತ್ತಾರೆ. ದೇವರಹಳ್ಳಿ ಮಾರಮ್ಮನನ್ನು ಪೂಜಿಸುತ್ತಿದ್ದು, ಭಾದ್ರಪದಮಾಸದಲ್ಲಿ ವಾಸೆ ಕೊಯ್ಯುತ್ತಾರೆ. ಈ ಮಾರಮ್ಮ ನೀಡಗಲ್ಲು ಸಂಸ್ಥಾನದಿಂದ ಬಂದಿದ್ದು, ಬೊಮ್ಮನಿಗೆ ತಂಗಿಯಾಗಬೇಕೆಂದು ನಂಬುವುದುಂಟು. ಶೈವ ಸಂಪ್ರದಾಯಕ್ಕೆ ಸೇರಿದ ಇವರು, ಕಾಸು, ಮಣಿವುಗಳನ್ನು ರೂಢಿಸಿದ್ದು, ಮಾರಮ್ಮನ ಸಿಡಿ, ಎರಡು ಜತೆಗಿರುವ ದೇವತೆಗಳ ಎದುರು ಒಕುಳಿ ಆಡುವರು. ಐವೋದಿ ಮಠ ಧಾರ್ಮಿಕ ಕೇಂದ್ರ. ಪಶುಪಾಲನೆ ಇದ್ದು, ಯುಗಾದಿಯಲ್ಲಿ ಇವರು ಬೇಟೆಯಾಡುತ್ತಾರೆ.

ಇದೇ ಪಂಥಕ್ಕೆ ಸೇರಿದ ಚಿತ್ರದುರ್ಗ ತಾಲೂಕಿನ ಸುಲ್ತಾನಿಪುರದ ಬಿ.ತಿಪ್ಪೇಸ್ವಾಮಿ – ಬೊಮ್ಮಯ್ಯನು ವ್ಯವಸಾಯ ಮಾಡುತ್ತಿದ್ದು, ನಾಯಕರ ಎನುಮುಲಾರು ಬೆಡಗಿನಲ್ಲಿ ಇವರು ದೊರೆಗಳು. ಇವರ ಮನೆದೇವರು ಬೊಮ್ಮಲಿಂಗೇಶ್ವರ. ನನ್ನಿವಾಳ ಇವರ ಕಟ್ಟೆಮನೆ. ಮೊದಲಿದ್ದ ಗುಡಿಸಲನ್ನು ಪರಿವರ್ತಿಸಿ ದೇವಾಲಯ ಕಟ್ಟಿದ್ದಾರೆ. ಕೊಟ್ಟಿಗೆಯ ವಾಸದಿಂದ ಮಾಳಿಗೆ ಮನೆಗೆ ಬಂದಿರುವ ಇವರು ಪೂಜಾರಿ ಬೋರಯ್ಯನನ್ನು ಅಣ್ಣತಮ್ಮಂದಿರು ನೇಮಿಸಿದ್ದಾರೆ. ದಾಸಯ್ಯ ಬಂದು ಕೆಲಸ ಕಾರ್ಯಗಳನ್ನು ಪೂರೈಸುತ್ತಾನೆ. ವಾಸೆ ಕೊಯ್ಯುವುದು ಬೋಗನಹಳ್ಳಿಯ ಹತ್ತಿರ ಗರಣಿ ಹಳ್ಳದಲ್ಲಿ. ಶೈವಸಂಪ್ರದಾಯ ಇವರು ಕೃಷಿ ಚಟುವಟಿಕೆಗಳಲ್ಲಿದ್ದು, ಕನ್ನಡ – ತೆಲುಗು ಮಾತನಾಡುತ್ತಾರೆ. ತಮ್ಮ ಹೆಂಡತಿಯರಿಗೆ ತಾಳಿಕಟ್ಟದ ಮಣಿಮಾತ್ರ ಕಟ್ಟುವುದು ವಿಶೇಷ.

ಚಿತ್ರದುರ್ಗ ತಾಲೂಕು, ಕಸಬಾ ಕಲ್ಲೇನಹಳ್ಳಿಯ ಓಬಯ್ಯ ತಂದೆ ಬೊಮ್ಮಯ್ಯ ಗಾವುಡ್ಲಾರು ಮನೆತನದವರು. ಮ್ಯಾಸನಾಯಕರ ಬುಟ್ಟುಗಲೋರು ಬೆಡಗಿಗೆ ಇವರು ಸೇರಿದ್ದಾರೆ. ಗೌರಸಮುದ್ರದ ಬೊಮ್ಮದೇವರನ್ನು ಮನೆದೇವರನ್ನಾಗಿ ಮಾಡಿಕೊಂಡಿದ್ದಾರೆ. ನಾಯಕನಹಟ್ಟಿ ಇವರ ಕಟ್ಟೆಮನೆ. ನನ್ನಿವಾಳ ಗುಡಿಕಟ್ಟು ಇವರದಾಗಿದ್ದು, ಅನೇಕ ರೀತಿಯ ಸಂಪ್ರದಾಯಗಳಿದ್ದು ಇವರು ಕರೆಬಟ್ಟೆ, ಬಳೆ ಹೀಗೆ ಕಪ್ಪು ಬಣ್ಣದ ವಸ್ತುಗಳನ್ನು ಬಳಸುವುದಿಲ್ಲ.

ದಾವಣಗೆರೆ ಜಿಲ್ಲೆಯ ಜಗಳೂರು ತಾಲೂಕಿನ ದೊಡ್ಡಬೊಮ್ಮನಹಳ್ಳಿಯ ದೊಡ್ಡಬೋರಪ್ಪನ ಮಗ ಬೋರಪ್ಪ (೬೫) ಗಣಗಟ್ಲಾರು ಮನೆತನದವನು. ನಾಯಕರ ಪುವ್ವಲಾರು ಬೆಡಗಿಗೆ ಸೇರಿದ್ದು, ಬೊಮ್ಮದೇವರು ಇವರ ಮನೆದೇವತೆ. ಕೂಡ್ಲಿಗಿ ತಾಲೂಕಿನ ಕುರಿಹಟ್ಟಿ ಇವರ ಗುಡಿಕಟ್ಟೆಯಾಗಿದೆ. ಕನ್ನಡ ಮಾತನಾಡುವ ಇವರು ಪ್ರಾಚೀನ ರೂಢಿಸಂಪ್ರದಾಯಗಳನ್ನು ಬದಲಿಸಿಕೊಂಡು ಆಧುನಿಕತೆಯತ್ತ ದಾಪುಗಾಲು ಹಾಕುತ್ತಾರೆ. ಕುರಿಹಟ್ಟಿ ಮಾಲರು ಚಲುವಾದಿಗಳು ಉರುಮೆ ಬಡಿಯುತ್ತಾರೆ. ಚೌಡಮ್ಮ, ಮಾರಮ್ಮ, ದುರುಗುಮ್ಮ ಇವರ ಸ್ತ್ರೀ ದೇವತೆಗಳು.

ಮೊಳಕಾಲ್ಮೂರು ತಾಲೂಕಿನ ಸುಲೇನಹಳ್ಳಿಯ ವಿ. ಮಾರನಾಯಕ ತಂದೆ ಈರಯ್ಯ ಚಿಲಕನವಾರು ಬೆಡಗಿನವರು. ಇವರು ಮಾರಮ್ಮನ ಬುಟ್ಟುಗುಲಾರು. ಬೊಮ್ಮದೇವರು ಇವರ ಆರಾಧ್ಯದೈವ. ಹಿರೇಹಳ್ಳಿ ಕಟ್ಟೆಮನೆ, ಐವೋದಿ ಗುಡಿಕಟ್ಟು ಇವರದು. ಬೊಮ್ಮದೇವರಿಗೆ ಅಕ್ಕನಾಗುವ ಮಾರಮ್ಮನು ನಿಡಗಲ್ಲಿನಿಂದ ಗೌರಸಮುದ್ರದ ತುಮ್ಮಲಿಗೆ ಬಂದಳಂತೆ. ಬೇಡರೆಡ್ಡಿ ಹಳ್ಳಿಯಲ್ಲಿ ಬೊಮ್ಮನ ದೇವಾಲಯವಿದೆ. ದೇವಾಲಯ ನವೀನ ಮಾದರಿಯದು. ಇಲ್ಲಿನ ಪೂಜಾರಿ ಬೊಮ್ಮಯ್ಯ (ಲಿಂಗಯ್ಯ). ೧೪ ಜನ ಅಣ್ಣ – ತಮ್ಮಂದಿರು ಪೂಜಾರಿಯನ್ನು ನೇಮಿಸುತ್ತಾರೆ. ಗೌರಸಮುದ್ರ ಇವರಿಗೆ ಕೇಂದ್ರಸ್ಥಳ (ಗುರುಮನೆ). ದೇವರೆತ್ತುಗಳಿದ್ದು, ೧೪ ಜನ ಗೌರದವರಿಂದ ನೇಮಕವಾಗಿರುತ್ತಾನೆ. ಗೌರಸಮುದ್ರದ ಚಲುವಾದಿಗಳು ಉರುಮೆ ಬಡಿಯುವರು. ಸ್ತ್ರೀ ದೇವತೆ ಗೌರಸಮುದ್ರದ ಮಾರಮ್ಮನನ್ನು ಇವರು ಆರಾಧಿಸುವರು. ಮೀಸಲು ಕಾಸು, ಮಣಿವು, ಗುಗ್ಗರಿಹಬ್ಬ, ಮಾರಮ್ಮನಹಬ್ಬಗಳಲ್ಲಿ ನಡೆ0ಯುತ್ತವೆ. ಹೀಗೆ ನಾನಾ ಬಗೆಯ ರೂಢಿ ಸಂಪ್ರದಾಯಗಳು ಕೊಡಗುಬೊಮ್ಮನ ಬಗ್ಗೆ ಪ್ರಚಲಿತದಲ್ಲಿವೆ. ಪ್ರಾದೇಶಿಕವಾಗಿ ಇವನ ಸಂಪ್ರದಾಯಗಳಲ್ಲಿ ಏಕರೂಪತೆಯಿಲ್ಲ.

ಬಳ್ಳಾರಿ ಜಿಲ್ಲೆ ಕೂಡ್ಲಿಗಿ ತಾಲೂಕಿನ ಕರ್ನಾರಹಟ್ಟಿ ಪರಿಸರವು ಪ್ರಾಚೀನ ಚರಿತ್ರೆಯನ್ನು ಹೊಂದಿದೆ. ಇಲ್ಲಿ ನೆಲೆಸಿರುವ ಬೇಡರು ತಾವು ಸಾಕಿದ ಗೋವುಗಳನ್ನೇ ದೇವರೆತ್ತುಗಳೆಂದು ಪೂಜಿಸುವರು. ಘಟ್ಟಿಮುತ್ತಯ್ಯನು ಶ್ರೀಶೈಲ ಮುತ್ತಿಗಾರರಿಗೆ ಪದಿಪೂಜಾರಿ. ತಂದೆ

ಗಡ್ಡಮುತ್ತಯ್ಯ ಮನೆತನಕ್ಕೆ ಘಡ್ಡಮಿತ್ತಿಗಾರು ಎನ್ನುತ್ತಾರೆ. ಇವರು ಮ್ಯಾಸನಾಯಕರ ಬೋಡೆಪಾರ್ಲು (ಮಂದವಾರು) ಬೆಡಗಿಗೆ ಸೇರಿರುವರು. ತಮ್ಮ ಹಿರಿಯ ಅಜ್ಜಂದಿರು ಮತ್ತು ದೇವರೆತ್ತುಗಳನ್ನು ಇವರು ಆರಾಧಿಸುತ್ತಾರೆ. ರಾಯಾಪುರದ ಸಮೀಪ ಪದ್ನಾರ ದೇವರಹಟ್ಟಿಯಲ್ಲಿ ನೆಲಸಿದ್ದು, ಹಿಂದೆ ಶ್ರೀಶೈಲದಿಂದ ಗೋವುಗಳೊಂದಿಗೆ ೧೩ ಪೆಟ್ಟಿಗೆ ದೇವರುಗಳ ಸಮೇತ ಬಂದರೆಂದು ಹೇಳಲಾಗುತ್ತದೆ. ಶ್ರೀಶೈಲದಿಂದ ಕರ್ನಾಟಕದ ಹಂಪಿ, ಆನೆಗುಂದಿಗಳ ಮೂಲಕ ವಿವಿಧ ಸ್ಥಳಗಳಿಗೆ ಚದುರಿದ್ದಾರೆ. ಇವರದು ಪದಿವಾರು ದೇವರು (ಹತ್ತು). ಇದಕ್ಕೆ ಉದಿಪದಿ ದಡ್ಡಿಮಿತ್ತೆ ದೇವರು ಗಾದರಿದೇವರು, ಕಾಡೇಲು ದೇವರು, ದಾದಗನಾರು ದೇವರು (ಹಿರೇಹಳ್ಳಿ), ಬೋಸೆದೇವರು (ರಾಯಾಪುರ), ಗಾದರಿದೇವರು, ಮಾಟಿದೇವರು (ಮುತ್ತಿಗಾರಹಳ್ಳಿ), ಸೌರುವುದು (ದೇವರು ರಾಯಪುರು) ಗಳು ಸೇರುತ್ತವೆ. ದಡ್ಲುಮಾರವ್ವ ಸಹಾ ಒಂದೇ ಹತ್ತಿರ ಇವುಗಳೊಂದಿಗೆ ಸೇರಿಕೊಳ್ಳುವುದುಂಟು. ಉಟಕುಂಟೆ, ವಡಕ್ಕಟ್ಟೆ ಕಮರಕಾವಲಿನಲ್ಲಿ ವರ್ಷಕ್ಕೊಮ್ಮೆ ೫ ದಿವಸ ಕಾರ್ತಿಕಮಾಸದಲ್ಲಿ ಹಬ್ಬ ಜರುಗುತ್ತದೆ. ಪದಿಪೂಜಾರಿ ೧೨ ಗಂಟೆ ಉಪವಾಸವಿರುತ್ತಾನೆ. ೧೨ ಜನ ಕೋಮುದಾರ, ಕುಲಸಾವಿರದವರು, ೩ ಜನ ನಾಯಕರು, ೭ ಜನ ಹಿರಿಯರು ಸೇರಿ ಪೂಜಾರಿಯನ್ನು ನೇಮಿಸುತ್ತಾರೆ. ದೇವರೆತ್ತುಗಳು ಊಟಕುಂಟೆ, ಕಮರ ಕಾವಲಿನಲ್ಲಿವೆ. ಸು. ೨೪೦ ದೇವರೆತ್ತುಗಳಿದ್ದು, ಇವುಗಳ ಬಲಭಾಗದ ಪೃಷ್ಟದ ಹತ್ತಿರ ಲಿಂಗ ಮುದ್ರೆಯನ್ನು ಹಾಕಿಸುತ್ತಾರೆ. ಕಿಲಾರಿ ಹೆಸರು ಮಚ್ಚಮಲ್ಲಯ್ಯ. ದಾಸಯ್ಯನು ಇಲ್ಲಿದ್ದಾನೆ. ತಾಯಕನಹಳ್ಳಿ ಚಲವಾದಿ ಕೆಂಚಯ್ಯ ಉರುಮೆ ಬಡಿದರೆ, ಕೊಮ್ಮನಹಳ್ಳಿ ಹರಿಜನರು ಕಾಳೆಊದುತ್ತಾರೆ. ಇವರು ನಾಯಕರಂತೆ ಸಂಪ್ರದಾಯಗಳಿಗೆ ಒಗ್ಗಿಹೋಗಿದ್ದು, ಕೋಳಿ ತಿನ್ನುವುದಿಲ್ಲ. ಎತ್ತುಗಳು ಗಂಗೆಸ್ನಾನಕ್ಕೆ ವೇದಾವತಿಗೆ ಹೋಗುತ್ತವೆ. (ಜಾನ್‌ಮದ್ದಿ). ಭೂಚಕ್ರದ ಗೊಡಗು, ಕಂಚಿನನಗಾರಿ ತೆಗೆದುಕೊಂಡು ಎಲ್ಲರೂ ಸೇರಿ ಹೊರಡುವರು. ಶೈವ ಮತ್ತು ವೈಷ್ಣವ ಸಂಪ್ರದಾಯಗಳಿವೆ ಇವರಲ್ಲಿ. ಇವರು ಊಟಕುಂಟೆ ಹತ್ತಿರದ ಬಾವಿಯನ್ನು ಪೂಜಿಸುವರು. ಎತ್ತುಗಳನ್ನೇ ದೇವರೆಂದು ಪ್ರದರ್ಶಿಸಿ, ಚಿಕ್ಕಮಕ್ಕಳಿಗೆ ಕೂದಲು ತೆಗೆಸುವುದು, ಮಣ್ಣಿನ ಕೊಡದಲ್ಲಿ ನೀರು ಕುಡಿಯುವುದು, ಆಲದ ಮರದ ಎಲೆಗಳಲ್ಲಿ ಊಟ ಮಾಡುತ್ತಾರೆ ಪೂಜಾರಿಗಳು. ಬರಿಮೈಯಲ್ಲಿರುವ ಪೂಜಾರಿ ತಲೆಗೆ ರುಮಾಲು, ಸೊಂಟದ ಕೆಳಗೆ ಚಲ್ಯಾಣ, ಹೆಗಲಲ್ಲಿ ಕರೆಕಂಬಳಿಯನ್ನು ಹೊಂದಿರುವರು.

ಕಂಪಳದೇವರಹಟ್ಟಿಯ ದಡ್ಡಿ ಮುತ್ತಿ ಪೂಜಾರಿ ಮಲ್ಲನಾಯಕನ ಪಂಗಡಕ್ಕೆ ಸೇರಿದವನು. ಇವನು ದಡ್ಡಿಮುತ್ತೆ, ಬಿಲ್ಲುದೇವರುಗಳನ್ನು ಪೂಜಿಸುವರು. ಸೂರಿಚಿನ್ನಕಾಮರು ತಮ್ಮ ವೀರನೆಂದು ಕರೆದುಕೊಂಡಿರುವರು. ಆನೆಗುಂದಿ ಇವರಿಗೆ ಅರಮನೆ ಗುರುಮನೆಯಾಗಿದೆ. ಶ್ರೀಶೈಲದ ಪದಿನಾರು ಎತ್ತುಗಳಿವೆ. ಮೇಲಿನಂತೆ ಎಲ್ಲಾ ಕಾರ್ಯಕ್ರಮಗಳನ್ನು ಇವರು ಸಹಾ ನೆರವೇರಿಸಿಕೊಂಡು ಬಂದಿದ್ದಾರೆ.

ಎರಡನೇ ತಿರುಪತಿಯೆಂದು ಕರ್ನಾಟಕದಲ್ಲಿ ಪ್ರಸಿದ್ಧವಾಗಿರುವ ಕಂಪಳದೇವರಹಟ್ಟಿ ಮ್ಯಾಸಬೇಡರಿಗೆ ಆಧ್ಯಾತ್ಮಿಕ, ಯಾತ್ರಾಸ್ಥಳವಾಗಿದೆ. ಇವರ ಮೂಲನೆಲೆಗಳಲ್ಲಿ ಇದು ಮೊದಲನೆಯದು. ಸೂರಮ್ಮನಹಳ್ಳಿಯ ಅಂಚೆಬೋರಯ್ಯ ತಂದೆ ಅಂಚೆಬಸಯ್ಯನು ಮಂದಲವಾರು ಪಂಗಡದ ಮುಂಡಾಸಿ ದಾಸರಿ (ಮುಂಡಾಸಿ, ಗೊಡಗು, ಬೋಡೆ) ಚಂದ್ರವಂಶಕ್ಕೆ ಸೇರಿದವರು. ಹಟ್ಟಿಯಲ್ಲಿರುವ ಇವರದು ಕಂಪಳರಂಗ ಮನೆದೇವರು. ಎಲ್ಲಕ್ಕೂ ಕಂಪಳದೇವರಹಟ್ಟಿ ಆವಾಸ ಕೇಂದ್ರವಾಗಿದೆ. ಕರಿನಾರು ಎತ್ತುಗಳನ್ನು ಕಾಯುವ ಜನರು. ಕಿಂದಿಕರಿನಾಡು, ಮೇಲಿನ ಕರಿನಾಡು (ಮಣಿಗಾರ ದೀಕ್ಷೆ) ಎನ್ನುವರಿದ್ದರು. ೩ ಜನ ದಾಸರೆಂದರೆ, ಮುಂಡಾಸಿದಾಸರಿ ಕಂಪಳರಂಗ, ಗೊಡಗುದಾಸರಿ – ಬೋರೆದೇವರು ಮತ್ತು ಬೋಡೆದಾಸರಿ – ಬಂಜಗೆರೆ ಓಬಳೇಶ್ವರರೆಂದು ಗುರುತಿಸಲಾಗಿದೆ. ಇದರ ಶಾಖೆಗಳು ದಾಸರಹಳ್ಳಿ, ಹೂಡೇಂ, ಜುಮ್ಮೋಬನ ಹಳ್ಳಿಗಳಾಗಿವೆ. ಪೂಜಾರಿಗೆ ಪಾತಪೂಜಾರಿ ಎನ್ನುವರು. ಬೋರೆ ದೇವರ ದೇವರೆತ್ತುಗಳಿವೆ. ಕಿಲಾರಿ ಕಂಪಳದೇವರ ಹಟ್ಟಿಯಲ್ಲಿದ್ದಾರೆ. ವೈಷ್ಣವ ಪಂಥಕ್ಕೆ ಸೇರಿದ ಇವರು ಕಂಪಳ ದೇವರನ್ನು ಹಂಪಿಗೆ ಗಂಗಾಸ್ನಾನಕ್ಕೆ ತರುತ್ತಾರೆ. ಓಬಳದೇವರು, ಗುಂಡ್ರಾಳು ಗಂಗಮ್ಮ ಇತರ ಆರಾಧನ ದೇವತೆಗಳಿವೆ. ಇವರಲ್ಲಿ ಪಶುಪಾಲನೆ ನೆಲೆಯೂರಿದ್ದು, ಅನೇಕ ರೀತಿಯ ಆಚರಣೆ ಪದ್ಧತಿಗಳು ಚಾಲ್ತಿಯಲ್ಲಿವೆ.



ಗಾವು ಜಿಗಿಯುವ ದೃಶ್ಯ, ಕಾತ್ರಿಕೆಹಟ್ಟೆ

ಬಳ್ಳಾರಿ ಜಿಲ್ಲೆ, ಕೂಡ್ಲಿಗಿ ತಾಲೂಕಿನ ಹೂಡೇಂಗ್ರಾಮದ ಎನ್.ಎಂ. ಬೋರಯ್ಯ ತಂದೆ ಮುದ್ದಯ್ಯ (ದಾಸರಮುದ್ದಯ್ಯ) ಇವರು ಕಂಪಳರಂಗ ಪ್ರೌಢಶಾಲೆಯಲ್ಲಿ ಜವಾನರಾಗಿದ್ದಾರೆ. ಇವರ ಬೆಡಗು ಎನುಮುಲಾರು. ಆರಾಧಿಸುವ ದೇವರು ಕಂಪಳರಂಗಸ್ವಾಮಿ. ಇವರ ಕುಟುಂಬದಲ್ಲಿ ಆಧುನಿಕ ಸಂಪ್ರದಾಯಗಳು ಬಂದಿವೆ. ಚೌಡಮ್ಮ ಸ್ತ್ರೀ ದೇವತೆ, ವೈಷ್ಣವ ಪಂಥಕ್ಕೆ ಸೇರಿದ್ದು ಅನೇಕ ಬಗೆಯ ಪದ್ಧತಿಗಳನ್ನಿಲ್ಲಿ ಅವಲೋಕಿಸಬಹುದಾಗಿದೆ.

ಇದೇ ಹೂಡೇಂ ಗ್ರಾಮಕ್ಕೆ ಸೇರಿದನಾಯಕ ಮನೆತನದವರು ಪಾಪನಾಯಕ ತಂದೆ ಬೋಸಮಲ್ಲಯ್ಯನವರು, ಗೋನೂರು ಕಟ್ಟೆಮನೆಯವರು. ಬೋಸೆ ವಾರು ಬೆಡಗಿಗೆ ಸೇರಿದ ಇವರು ತೋಟದಲ್ಲಿ ನೆಲೆಸಿರುವರು. ಈತ ನಾಯಕನಾದ್ದರಿಂದ ಸಾವಿರ ದೇವರಿಗೆ ಹಕ್ಕಿದೆ. ರಾಯಾಪುರದ ಬೋಸೆದೇವರನ್ನು ಇವರು ಆರಾಧಿಸುವರು. ಮುತ್ತಿಗಾರರ ೧೦೧ ಅಣ್ಣತಮ್ಮಂದಿರಂತೆ ಇವರು ಜನಾಂಗದ ಕೆಲಸವನ್ನು ನೆರವೇರಿಸುತ್ತಾರೆ. ಮನೆಯಲ್ಲಿ ಸ್ತ್ರೀದೇವತೆಗಳ ಆರಾಧನೆಯಿದ್ದು, ದಡ್ಲುಮಾರಮ್ಮ, ದೇವರಹಳ್ಳಿ ಮಾರಮ್ಮ ದೇವತೆಗಳು ಮುತ್ತಿಗಾರರಲ್ಲಿ ಹುಟ್ಟಿದಂಥವು. ಚಿನ್ನಹಗರಿ ನದಿ ಇವರಿಗೆ ಪವಿತ್ರವಾದುದು. ವೈಷ್ಣವ ಸಂಪ್ರದಾಯ ಇವರಲ್ಲಿದ್ದು, ಪ್ರಾಣಿಬಲಿ (ಕಾತ್ರಿಕೆಹಟ್ಟಿ) ಇತರೆ ರೂಢಿ ಸಂಪ್ರದಾಯಗಳು ಪ್ರಚಲಿತದಲ್ಲಿವೆ.



ಬಲಿಮುನ್ನ ಮಂತ್ರ, ಕಾತ್ರಿಕೆಹಟ್ಟೆ

ಚಳ್ಳಕೆರೆ ತಾಲೂಕು ಬೋಸೆದೇವರಹಟ್ಟಿ ಬಿ.ಓ. ಬೋರಯ್ಯ ತಂದೆ ಸಣ್ಣ ಓಬಯ್ಯ ಮ್ಯಾಸನಾಯಕರ ಬೋಸೆವಾರು ಬೆಡಗಿಗೆ ಸೇರಿದವರು. ಇವರ ಮನೆದೇವರಾದ ಬೋಸೆರಂಗಸ್ವಾಮಿಯನ್ನು ಪುರಾಣ ಪುರುಷನೆಂದು ನಂಬಿದ್ದಾರೆ. ಇದರ ಮೂಲಸ್ಥಳ ಮದ್ದನಕುಂಟೆ. ಅಲ್ಲಿಂದ ಬೋಸೆದೇವರಹಟ್ಟಿಗೆ ಬಂದಿದೆ. ಗುಡಿಸಿಲಿನಲ್ಲಿ ದೇವರ ವಿಗ್ರಹಗಳಿದ್ದು, ಮಲ್ಲಿಕಾರ್ಜುನ ಎಂಬ ವ್ಯಕ್ತಿ ಇದರ ಪೂಜಾರಿ. ಇವನನ್ನು ಮುತ್ತಿಗಾರು ನೇಮಿಸುವರು. ಬೋಸೆದೇವರ ಎತ್ತುಗಳಿಗೆ ರಂಗಸ್ವಾಮಿ ಎಂಬ ಕಿಲಾರಿ ಇದ್ದಾರೆ. ಇದೇ ಗ್ರಾಮದ ದಾಸರಯ್ಯನು ಮಾದಿಗ ಜನಾಂಗಕ್ಕೆ ಸೇರಿದ್ದು ನಾಯಕರ ದೇವತೆಗಳ ಆರಾಧನೆಯಲ್ಲಿ ಪ್ರಮುಖ ಪಾತ್ರವಹಿಸುವನು. ಬೆಳಗಟ್ಟದ ಉರುಮೆಯವರು, ನಾಯಕನಹಟ್ಟಿ ಅಗಸರು ಬರುತ್ತಾರೆ. ಸ್ತ್ರೀ ದೇವತೆ ದಡ್ಲು ಮಾರಮ್ಮ, ವೈಷ್ಣವ ಪಂಥಕ್ಕೆ ಸೇರಿದ ಇವರು ಹಂಪೆ ಹತ್ತಿರ ತುಂಗಭದ್ರಾ ನದಿಗೆ ಬಂದು ದೇವರ ಸ್ನಾನ ಮಾಡಿಸಿಕೊಂಡು ಹೋಗುತ್ತಾರೆ. ಇವರ ಕುಟುಂಬವು ವಿದ್ಯಾವಂತರನ್ನು ಹೊಂದಿದೆ. ಇವರ ಸಂಸ್ಕೃತಿ ಸಾಕಷ್ಟು ಸುಧಾರಣೆಯಾಗಿರುವುದು ಕಂಡುಬರುತ್ತದೆ.



ಬಲಿವಿಧಾನ, ಕಾತ್ರಿಕೆಹಟ್ಟೆ



ಬಲಿವಿಧಾನ, ಕಾತ್ರಿಕೆಹಟ್ಟಿ

ಭೈರವನ ಆರಾಧನೆ ಬೇಡರಲ್ಲಿ ಪ್ರಾಚೀನ ಕಾಲದಿಂದಲೂ ಬೆಳೆದುಬಂದಿದೆ. ಚಿತ್ರದುರ್ಗ ಜಿಲ್ಲೆಯಲ್ಲಿ ಶೈವ ಮತ್ತು ವೈಷ್ಣವ ಪಂಥಗಳೆರಡು ಸಮವಾಗಿ ಕಂಡುಬರುತ್ತವೆ. ನಲಗೇತಯ್ಯನಹಟ್ಟಿಯ ತಿಪ್ಪೇಸ್ವಾಮಿ ಮ್ಯಾಸ ನಾಯಕರ ಕಾರಕೆನ್ನೇರು (ಬೋರುಗುಲು) ಬೆಡಗಿಗೆ ಸೇರಿದ್ದು, ಮಂದವಾರು ಪಂಗಡದಲ್ಲಿದ್ದಾರೆ. ನಾಯಕನಹಟ್ಟಿ ಕಟ್ಟೆಮನೆಯಾದರೆ, ನಲಗೇತಯ್ಯನಹಟ್ಟಿ ಗುಡಿಕಟ್ಟೆ ಇವರದು. ಮನೆದೇವರು ಕುದಾಪುರದ ಚಿಂತಗುಂಟ್ಲ ಬೋರೆದೇವರು. ಇದಕ್ಕೆ ದೇವರೆತ್ತುಗಳಿದ್ದು, ಕಿಲಾರಿ, ದಾಸಯ್ಯನವರು ಬೇರೆ ಬೇರೆ ಕೆಲಸಗಳನ್ನು ಮಾಡುತ್ತಿದ್ದಾರೆ.

ಹೊಳಲ್ಕೆರೆ ತಾಲೂಕಿನ ಗಂಜಿಗಟ್ಟೆಯ ರಾಜಪ್ಪ ತಂದೆ ಕಂಪಳಪ್ಪ (ಚಿನ್ನಪ್ಪರ ಕಂಪಳಪ್ಪ) ಎಂಬುವರು ನಾಯಕ ಜನಾಂಗದ ಲೆಕ್ಕಿಮಲೆರು, ಪೂವುಲಾರು ಮತ್ತು ಅನಂತಪುವುಲಾರು ಎಂಬ ೩ ಜನ ಅಣ್ಣತಮ್ಮಂದಿರ ಬೆಡಗಿಗೆ ಸೇರಿದವರು. ಇವರದು ಭೈರವೇಶ್ವರ (ಬೋರೆದೇವರು) ದೇವಾಲಯ ಗಂಜಿಗಟ್ಟೆಯಲ್ಲಿದೆ. ಗುಡಿಕಟ್ಟೆ ಗಂಜಿಗಟ್ಟೆಯಾದರೆ ಕಟ್ಟೆಮನೆ ಗೋನೂರು. ಈ ದೇವರು ಗಾದರಿಪಾಲನಾಯಕನ ಜೊತೆ ಬಂದಿದೆ ಎಂದು ಹೇಳಲಾಗುತ್ತದೆ. ಕಾಮಗೇತಲಾರು ರಾಮಚಂದ್ರಪ್ಪ ಇದರ ಪೂಜಾತಿಗಳು. ಸ್ಥಳೀಯರು ಉರುಮೆ ಬಡಿದರೆ, ಇತರರು ಬೇರೆ ಬೇರೆ ಕೆಲಸ ಮಾಡುತ್ತಾರೆ. ವ್ಯಾಸೆ ಕೊಯ್ಯುವ ಸಂಪ್ರದಾಯವಿದ್ದು, ಕಂಪಳಮಾರಮ್ಮನು (ಚಾಮುಂಡಿ) ಸ್ತ್ರೀ ದೇವತೆಯಾಗಿದ್ದಾಳೆ. ಶೈವ ಪಂಥಕ್ಕೆ ಸೇರಿದ ಇವರು ಗಾದ್ರಿಹಳ್ಳವನ್ನು ಪವಿತ್ರವೆಂದು ನಂಬಿರುವರು. ಕಾಸು, ಮಣಿವು, ಓಕುಳಿ, ಬೇಟೆ ಇವರಲ್ಲಿ ಪ್ರಚಲಿತವಿರುವ ಇತರ ಪ್ರವೃತ್ತಿಗಳು ಮತ್ತು ಆಚರಣೆಗಳು.

## ೭. ಬುಡಕಟ್ಟು ವೀರರ ಧಾರ್ಮಿಕ ಪಂಥ ಮತ್ತು ಸಾಂಸ್ಕೃತಿಕ ಪರಂಪರೆ (3)

ಚಳ್ಳಕೆರೆ ತಾಲೂಕು ಕುದಾಪುರ ಹತ್ತಿರ ಬೋರೆದೇವರಹಟ್ಟಿ ಪೂಜಾರಿ ಸಣ್ಣ ಬೋರಯ್ಯ ತಂದೆ ಗೋವಿಂದಪ್ಪ ಚಿಂತಗುಂಟ್ಲ ಬೋರೆದೇವರ ಪೂಜಾರಿ. ಮ್ಯಾಸನಾಯಕರ ಗೊಡಗುದಾಸರಿ ಬೆಡಗಿಗೆ ಸೇರಿದ್ದಾನೆ. ಮ್ಯಾಸಬೇಡರ ೧೨ ಪೆಟ್ಟಿಗೆ ದೇವರುಗಳು ಇಲ್ಲಿಂದಲೇ ಹೊರಟು ಹೋದವೆಂದು ಹೇಳುತ್ತಾರೆ. ಇವರಿಗೆ ಕಟ್ಟೆಮನೆ ಗುಡಿಕಟ್ಟೆ ಕುದಾಪುರ. ಆಧುನಿಕ ದೇವಾಲಯವಿದ್ದು, ಉತ್ತಮ ಶಿಲ್ಪಗಳು ಇಲ್ಲಿವೆ. ಮಾಳಿಗೆ ಮನೆಯಲ್ಲಿ ವಾಸಿಸುತ್ತಿದ್ದು, ಮುತ್ತಿಗಾರ ಎತ್ತುಗಳಿವೆ. ಪೂಜಾರಿಯನ್ನು ಅಣ್ಣತಮ್ಮಂದಿರು ನೇಮಿಸುತ್ತಿದ್ದು, ಮುತ್ತಿಗಾರ ಎತ್ತುಗಳಿಗೆ ಕಿಲಾರಿಯು ಇದ್ದಾನೆ. ಓಬನಹಟ್ಟಿ ದಾಸರಯ್ಯ ದುರುಗದ ಕೆಳಗೋಟೆ ದಾಸರಿ, ಗೌಡಗೆರೆ ಉರುಮೆಯವರು, ಗೌರೀಪುರದ ಮಡಿವಾಳರು ಬರುತ್ತಿರುವುದು ವಿಶೇಷ. ಇದು ಉದ್ಭವ ಲಿಂಗವಾದ್ದರಿಂದ ಗಂಗೆ ಸ್ನಾನಕ್ಕೆ ದೇವರು ಹೋಗುವುದಿಲ್ಲ. ಈ ಪೂಜಾರಿಗಳು ಮನೆದೇವತೆಯಾಗಿ ದಡ್ಲುಮಾರಮ್ಮನನ್ನು ಪೂಜಿಸುವರು. ಶೈವ ಸಂಪ್ರದಾಯಕ್ಕೆ ಸೇರಿದ ಇವರು ಪ್ರತಿ ಭಾನುವಾರ ವಿಶೇಷ ಹಬ್ಬ – ಪೂಜೆ ಮಾಡಿದರೆ, ಗುಗ್ಗರಿ ಹಬ್ಬಗಳನ್ನು ಮಾಡುವರು. ತೆಲುಗು ಮಾತನಾಡುವ ಇವರು ತಮ್ಮ ಹೆಂಡತಿಯರಿಗೆ ತಾಳಿ ಕಟ್ಟುವುದಿಲ್ಲ. ಕರಿಮಣಿಯನ್ನು ತವರು ಮನೆಯವರು ಮಾಡಿಸುತ್ತಾರೆ. ಹಿಂದಿನವರಂತೆ ಈ ಪದ್ಧತಿಯನ್ನು ರೂಢಿಸಿಕೊಂಡಿದ್ದಾರೆ.

ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲೂಕಿನ ಚಿನ್ನಹಗರಿ ನದಿ ದಂಡೆಯ ಮೇಲಿರುವ ಹೂಡೇಂ ಗ್ರಾಮದಲ್ಲಿಯು ಬೋರೆದೇವರ ಪ್ರಾಚೀನ ದೇವಾಲಯವಿದೆ. ಇದು ನಡುಗಡ್ಡೆ ನಾಯಕರಿಗೆ ದೇವರೆಂದು ಹೇಳುತ್ತಾರೆ. ಈ ಗ್ರಾಮದ ಯರ್ರಿಬೋರಯ್ಯ ತಂದೆ ದಾಸರೋಬಯ್ಯ ನಡುಗಡ್ಡೆ ಪಾತ ಪೂಜಾರಿಯಾಗಿದ್ದಾನೆ. ಮ್ಯಾಸನಾಯಕರ ಮಂದಲವಾರು ಬೆಡಗಿನ ನಡುಗಡ್ಡೆವಾರೆಂದು ಕರೆಸಿಕೊಳ್ಳುವರು. ಜುಮ್ಮೋಬನಹಳ್ಳಿ – ೮, ಮುಷ್ಟಲಗುಮ್ಮಿ – ೨, ದಾವಣಗೆರೆಯಲ್ಲಿ ೨ ಮನೆಗಳು ಈ ದೇವರಿಗೆ ನಡೆದುಕೊಳ್ಳುತ್ತಾರೆ. ಈ ದೇವರಿಗೆ ಮೂಲ ಚಿಂತಗುಟ್ಲ ಬೋರದೇವರೇ. ಸಹಸ್ರಾರು ವರ್ಷಗಳ ಹಿಂದಿನದು ಈ ದೇವರೆಂಬ ನಂಬಿಕೆಯಿದೆ. ಇಲ್ಲಿರುವ ದೇವಾಲಯ ಗಂಗರ ಕಾಲಕ್ಕೆ ಸೇರಿದಂತಿದ್ದು, ಕೆಲವರು ನೊಳಂಬರ ಕಾಲಕ್ಕೆ ಸೇರಿದ್ದೆಂದು ಹೇಳುತ್ತಾರೆ. ಭೈರವನಶಿಲ್ಪ, ವಿನಾಯಕ, ಸೂರ್ಯ, ಜಿನ, ವಿಷ್ಣು ಶಿಲ್ಪಗಳಿವೆ. ಇವನನ್ನು ನಡುಗಡ್ಡೆಯವರು ನೇಮಿಸುವರು. ಜುಮ್ಮೊಬನ ಹಳ್ಳಿಯಿಂದ ಉರುಮೆಯವರು ಬರುತ್ತಾರೆ. ಮಾಘಮಾಸದಲ್ಲಿ ವಾಸೆ

ಕೊಯ್ಯುವುದುಂಟು. ಕಂಪಳದೇವರನ್ನು ಇವರು ಪೂಜಿಸುತ್ತಿದ್ದು ತಮ್ಮ ಏಕದೇವತಾರಾಧನೆಯನ್ನು ಕೈಬಿಟ್ಟಿದ್ದಾರೆ. ಕಾಸುಕಟ್ಟಿಕೊಳ್ಳುವ, ಬೇಟೆಯಾಡುವ, ಪಶುಪಾಲನೆ, ಬಯಲಾಟ, ಯಕ್ಷಗಾನ ಮೊದಲಾದವು ರೂಢಿಯಲ್ಲಿವೆ.

ಮ್ಯಾಸಬೇಡರ ಅನೇಕ ವೀರರ ಪಂಥಗಳು ಮರೆಯಾಗಿರುವುದುಂಟು. ಅಂಥವುಗಳು ವಿಶ್ಲೇಷಣೆ ಇಂದಿನ ಅನಿವಾರ್ಯ ಕಾರ್ಯವಾಗಿದೆ. ಬಳ್ಳಾರಿ ಜಿಲ್ಲೆ, ಕೂಡ್ಲಿಗಿ ತಾಲೂಕಿನ ಕಾತ್ರಿಕಟ್ಟೆ ಗೌಡ್ರಪಾಲಯ್ಯ ತಂದೆ ಕಾಟಯ್ಯನು ಮ್ಯಾಸನಾಯಕರ ಕಾಮಗೇತಿ ಗೋತ್ರಕ್ಕೆ ಸೇರಿರುತ್ತಾರೆ. ಹಟ್ಟಿಯಲ್ಲಿ ನೆಲೆಸಿರುವ ಈತ ಸೂರಪ್ಪನಾಯಕ (ಕಾಮಗೇತನಹಳ್ಳಿ) ನ ಅನುಯಾಯಿ ಕಾಮಗೇತನಹಳ್ಳಿ ಇವರ ಗುಡಿಕಟ್ಟು ಮತ್ತು ಕಟ್ಟೆಮನೆ. ಈ ದೇವರಲ್ಲದೆ, ಚಳ್ಳಕೆರೆ ಕಾಟಪ್ಪ, ರುದ್ರಮ್ಮನಹಳ್ಳಿ ನಲುಜೆರುವಯ್ಯ, ಉಡೆಗೊಳಂನ ಚಿತ್ರದೇವರು ಮೊದಲಾದವುಗಳನ್ನು ಕಾಮಗೇತಿಗಳು ಆರಾಧಿಸುವರು. ಇವರು ಸುಧಾರಿತ ಜನಜೀವನಕ್ಕೆ ಒಗ್ಗಿ ಹೋಗಿರುವರು. ಕಾಮಗೇತನಹಳ್ಳಿ ಜಗಳೂರು ತಾಲೂಕಿನಲ್ಲಿದ್ದು, ಬೇಡರಿಗೆ ಆಚಾರ ಕಟ್ಟೆಮನೆ ಎಂದು ಖ್ಯಾತವಾಗಿದೆ. ನಿಜಲಿಂಗಪ್ಪ ಇದರ ಪೂಜಾರಿ, ದೊಣ್ಣೆಹಳ್ಳಿ ಹತ್ತಿರ ಜನಿಗೆಹಳ್ಳಕ್ಕೆ ಈ ದೇವರು ಗಂಗೆಸ್ನಾನಕ್ಕೆ ಬರುತ್ತದೆ.

ಇದೇ ದೇವರಿಗೆ ಸೇರಿದ ಪೂಜಾರಿ ಬಸಣ್ಣ ತಂದೆ ಸೂರಯ್ಯನವರು ಬಸವಣ್ಣನ ಪೂಜಾರಿಗಳಾಗಿ ಪೂಜಾರಹಳ್ಳಿಯಲ್ಲಿದ್ದಾರೆ. ಇವರದು ಕಾಮಗೇತನಹಳ್ಳಿ ಸೂರಪ್ಪನಾಯಕ ಮನೆದೇವರು. ಕಾಮಗೇತನಹಳ್ಳಿ ಧಾರ್ಮಿಕ ಕೇಂದ್ರವಾಗಿದೆ. ಸೂರ್ಯದೇವ ಪಾಪನಾಯಕನನ್ನು ಇವರು ಪೂಜಿಸುವರು. ಕಾಮಗೇತನಹಳ್ಳಿಯಲ್ಲಿ ಸೂರಪ್ಪನ ದೇವಾಲಯವಿದೆ. ದೇವರೆತ್ತುಗಳಿದ್ದು ಬಸಪ್ಪನಹಟ್ಟಿ ಮಾಚೂರನಾಯಕ ಕಿಲಾರಿ ಆಗಿರುತ್ತಾನೆ. ಮುದುಕದಹಳ್ಳಿ ಚಲುವಾದಿಗಳು ಉರುಮೆ ಬಡಿಯುತ್ತಾರೆ.

ಮ್ಯಾಸಬೇಡರ ಸಂಸ್ಕೃತಿಯಲ್ಲಿ ಕಾಟಪ್ಪನಾಯಕನೆಂಬ ವೀರ ಚಳ್ಳಕೆರೆ ಪರಿಸರದಲ್ಲಿದ್ದನು. ಅವನ ಬಗೆಗೆ ಧಾರ್ಮಿಕ ಸಂಪ್ರದಾಯಗಳು ಬೆಳೆದುಬಂದಿವೆ. ಇಲ್ಲಿನ ಕಾಟಪ್ಪನಹಟ್ಟಿಯ ಯಜಮಾನ್ ನಾರಯಣಪ್ಪ (ದೊಡ್ಡಕಾಟಯ್ಯ ತಂದೆ ಅಜ್ಜಯ್ಯ) ಊರಿನ ಯಜಮಾನರ ಮನೆತನದವರು. ಮಂದಲಗೋತ್ರದ ಕಾಮಗೇತಿ (ಕಪ್ಪಗಲ್ಲು) ಪಂಗಡದವರು. ಇವರು ದನಗಾಹಿ ಕಾಟಪ್ಪ ನಾಯಕನನ್ನು ಕಾಟಮಲಿಂಗೇಶ್ವರನೆಂದು ಪೂಜಿಸುವರು. ಧಾರ್ಮಿಕ ನೆಲೆ ಕಾಟಪ್ಪನಹಟ್ಟಿ. ಇವರ ಮೂಲ ನಿಡಗಲ್ಲ. ನಿಡಗಂಟಿ ದೊರೆ ಕಾಮರಾಜನ ಮಗಳನ್ನು ಮದಕರಿ ವಂಶಸ್ಥರಿಗೆ ಕೊಟ್ಟಿದ್ದರು. ಆ ಹೆಣ್ಣಿನ ಒಡಲಿಗೆ ಪೂಜಿಸಲು ಕೊಟ್ಟಿದ್ದರು. ಆಗಿನಿಂದ ಒಡಲಿಗೆ ಬಂದು ಹೆಣ್ಣಿನ ಮೂಲಕ ದೇವರಾಯಿತು. ಇಲ್ಲಿ ಕಾಟಮಲಿಂಗೇಶ್ವರ ದೇವಾಲಯಗಳಿವೆ. ಕಾಟಮುಲಿಂಗಯ್ಯ ಇಲ್ಲಿನ ಪೂಜಾರಿ. ಕೊಟ್ಟಿಗೆ ಮನೆಗಳಲ್ಲಿ ವಾಸಿಸುವ ಇವರನ್ನು ಗೋಶಿಕೆರೆ ಜಂಗಮರು ಶುದ್ಧಿ ಮಾಡಿ ಪೂಜಾರಿಯಾಗಿ ಮಾಡುತ್ತಾರೆ. ನಲ್ಲಟಬ್ಬಾರು (ಹೆಣ್ಣಿನ ಅಧಿಕಾರದಿಂದ ಬಂದ ಹೆಸರು) ಎಂದು ಕರೆಯುವ ಇವರ ಜೀವನದಲ್ಲಿ ಕಟ್ಟುನಿಟ್ಟಿನ ನಿಯಮಗಳಿವೆ. ಭಾವಭಾಮೈದುನರಾದ ಬೇಡರೆಡ್ಡಿಹಳ್ಳಿ ಯರಮಂಚಿ ನಾಯಕನು ಇವರಿಗೆ ದೊರೆ. ವರವಿನ ಕಾವಲಿನಲ್ಲಿ ದೇವರೆತ್ತುಗಳಿವೆ. ದೀಪಾವಳಿ, ಗುಗ್ಗರಿಹಬ್ಬ, ಯುಗಾದಿಗಳಲ್ಲಿ ವಾಸಿಕೊಯ್ಯುವರು. ಪರಮೇಶಿನಾರು ಗೋವಿಂದಪ್ಪ ಕಿಲಾರಿ ಮುತ್ತಿನ ಕಾಲ್ಚೆಂಡೆಯನ್ನು ಕಂಪಳದೇವರಿಗೆ ಕೊಟ್ಟರು. ಕಾಟಯ್ಯನು ಪರಂಪರೆಯಿಂದ ಬಂದ ದಾಸಯ್ಯನಾಗಿರುವನು. ಹಿರೇಹಳ್ಳಿ ಚಲುವಾದಿಗಳು ಇಲ್ಲಿ ಉರುಮೆ ಬಡಿಯುವರು. ಗೋಶಿಕೆರೆ ಹಳ್ಳದಲ್ಲಿ ಈ ದೇವರಿಗೆ ನಿವಾಳಿ ಕೊಯ್ಯುತ್ತಾರೆ. ಶೈವ ಪಂಥಕ್ಕೆ ಸೇರಿದ ಇವರು ವೇದಾವತಿ ನದಿ ಮೂಗು ಮುತ್ತ ಚಿಲುಮೆಯನ್ನು ಆರಾಧಿಸುವರು. ಲ ಅಜ್ಜನವರಿಗೆ ಕಾಸುಮೀಸಲು ಕಟ್ಟಿಕೊಳ್ಳುತ್ತಾರೆ. ನಿಡಗಲ್ಲು, ನನ್ನಿನಾಳ, ಗೊನೂರು, ನಾಯಕನಹಟ್ಟಿಗಳು ಇವರಿಗೆ ಪವಿತ್ರ ಸ್ಥಳಗಳು. ಶಿವರಾತ್ರಿ ದಿನ ಗೋಶಿಕೆರೆ ಹಳ್ಳದಲ್ಲಿ ಬೇಟೆಯಾಡುತ್ತಾರೆ. ವಿವಿಧ ಪ್ರವೃತ್ತಿಗಳಲ್ಲಿ ನಾಟಕ, ಹಂದಿಬೇಟೆ, ಸಂಗೀತ, ಭಜನೆ, ಕೋಲುಬಡಿಯುವರು. ಕೃಷಿ ಮತ್ತು ಪಶುಪಾಲನೆಯು ಇವರಲ್ಲಿ ಪ್ರಧಾನ ವೃತ್ತಿಗಳಾಗಿವೆ.



ಬೋರೆ ದೇವರ ಪ್ರಾಚೀನ ದೇವಾಲಯ, ಹೂಡೇಂ

ಚಿತ್ರನಾಯಕನೆಂಬ ವೀರನಿದ್ದ ಕಾರಣ ಅವನ ಸಂಪ್ರದಾಯ ಬೆಳೆದುಬಂದಿದೆ. ಸೂರಮ್ಮನಹಳ್ಳಿಯ ಓಬವ್ವ ತಂದೆ ತಿಪ್ಪಯ್ಯ ಮಂದಲಗೋತ್ರದ ಬಿದ್ನಾರು ಪಂಗಡದವರು. ಇವರು ಆರಾಧಿಸುವುದು ಚಿತ್ರಲಿಂಗೇಶ್ವರನೆಂಬ ದೇವರನ್ನು. ಈತನೊಬ್ಬ ಪುರಾಣ ಪುರುಷನಲ್ಲದೆ ದಂತವ್ಯಕ್ತಿಯಾಗಿದ್ದು, ೭೪ ನೇ ಉಡೇಗೊಳಂ ರಾಯದುರ್ಗ ತಾಲೂಕು, ಅನಂತಪುರ ಜಿಲ್ಲೆಯಲ್ಲಿದ್ದನಂತೆ. ಮೊರ್ಲಹಳ್ಳಿಯ ಪೂಜಾರಿ ಬೋರಯ್ಯನೆಂಬುವನು ಇದರ ಪೂಜಾರಿ. ಬೇವಿನಮರ, ಚಿನ್ನಹಗರಿ ನದಿ ಇವರಿಂದ ಆರಾಧನೆಗೊಳ್ಳುತ್ತವೆ.

ಪಾಲನಾಯಕನಕೋಟೆ (ಹಿರೇಹಳ್ಳಿ ಹತ್ತಿರ) ಯ ತಿಪ್ಪೇಸ್ವಾಮಿ ತಂದೆ ಅಪ್ಪಯ್ಯ ಮಾಳಿಗೆ ಮನೆತನದವರು. ನಾಯಕರ ಬುಲ್ಲೊಡ್ಲು (ಮಂದ) ಬೆಡಗಿಗೆ ಸೇರಿದ್ದಾರೆ. ಇವರದು ಬಂಗಾರು ದೇವರು, ನನ್ನಿವಾಳದಲ್ಲಿದೆ. ಪಶುಪಾಲನೆ ಮಾಡುವಾಗ ಬಂಗಾರು ಹುಲಿ ಮಾಡಿಸಿ ಅದನ್ನು ಪೂಜೆ ಮಾಡಿಕೊಂಡು ಹೋಗಿರೆಂದು ತಿಳಿಸಿದ್ದರಂತೆ. ಅಂದಿನಿಂದ ಮುತ್ತಿಗಾರರಲ್ಲಿ ಹುಟ್ಟಿದ ದೇವರಾಗಿ, ಬೇಟೆಯಾಡುವಾಗ ಮೊಲದಷ್ಟು ಬಂಗಾರ ಸಿಕ್ಕಿದ್ದರಿಂದ ಅವರ ಪ್ರತೀಕವೇ ಅದನ್ನು ದೇವರಾಗಿ ಮಾಡಿಕೊಂಡಿದ್ದಾರೆ. ರಂಗಶೇಡು ಬಂಗಾರು (ಆಂಧ್ರ), ನನ್ನಿವಾಳ ಬಂಗಾರದೇವರಹಟ್ಟಿಯಲ್ಲಿ ದೇವಾಲಯಗಳಿವೆ. ಹುಲ್ಲಿನ ಗುಡಿಸಲು, ಸುತ್ತಲೂ ಬಂದರಿ ಸೊಪ್ಪು ಲೆಕ್ಕಿ ಸೊಪ್ಪನ್ನು ಕಟ್ಟಿದ್ದಾರೆ ದೇವರ ಗುಡಿಗಳಿಗೆ. ಬಂಗಾರು ದೇವರಹಟ್ಟಿಯ ಬುಲ್ಲಯ್ಯ ಇದರ ಪೂಜಾರಿ. ದೇವರಿಗೆ ಸೇರಿದ ಹಿರಿಯರು ಈತನನ್ನು ನೇಮಿಸಿದ್ದಾರೆ. ದೇವರೆತ್ತುಗಳಿದ್ದು, ಬೋರಯ್ಯನೆಂಬ ಕಿಲಾರಿಯು ಇದ್ದಾನೆ. ನನ್ನಿವಾಳದಲ್ಲಿ ದೀಪಾವಳಿ, ಗುಗ್ಗರಿಹಬ್ಬ, ಶೂನ್ಯದಲ್ಲಿ, ೧೨ ಅಮವಾಸೆ ಹುಣ್ಣಿಮೆಗಳಲ್ಲಿ ಪೂಜಾಕಾರ್ಯಗಳು ನಡೆಯುತ್ತವೆ. ಕಾರಹುಣ್ಣಿಮೆಯಲ್ಲಿ ಗೊಡ್ಡು ಕುರಿಯನ್ನು (ಬಂಜೆ) ವಾಸೆ ಕೊಯ್ಯುತ್ತಾರೆ. ನನ್ನಿವಾಳದ ಗುಡ್ಡ ಮೇಲಿನ ಹಳ್ಳ, ಗುಡ್ಡ, ಪವಿತ್ರವಾಗಿವೆ. ಸ್ತ್ರೀ ದೇವತೆಯಾಗಿ ದೇವರಹಳ್ಳಿ ದಡ್ಲುಮಾರಮ್ಮನನ್ನು ಪೂಜಿಸುವರು. ನಿತ್ಯಬೇಟೆಗಾರರಾದ ಇವರು ಯಕ್ಷಗಾನ, ಕೋಲಾಟಗಳಲ್ಲಿ ಕಾಲ ಕಳೆಯುವರು.

ನೇರ್ಲಗುಂಟೆಯಲ್ಲಿ ಬಂಗಾರು ದೇವಾಲಯವಿದೆ. ಬಿ. ಬೋರನಾಯಕ ತಂದೆ ಪೂಜಾರಿ ಎಂ.ಜಿ. ಓಬನಾಯಕ ಬುಲ್ಲಾಡ್ಲಾರು ಮನೆತನದವರು. ಇವರು ನಿವೃತ್ತ ಎಸ್.ಆರ್.ಟಿ.ಸಿ.ಕೆ.ಮೆನೇಜರ್. ಇವರ ಬೆಡಗು 'ಬುಲ್ಲುಡ್ಲಾರು' (ಮಂದ). ಇದರಲ್ಲಿ ೩ ವಿಧ ಬೋಡಿ ಬುಲ್ಲುಡ್ಲು, ಪಾಲು ಬುಲ್ಲುಡ್ಲು, ಜೋಗಿ ಬುಲ್ಲುಡ್ಲು. ಬಂಗಾರು ದೇವರು ಶಕ್ತಿಪೀಠ (ಹುಲಿಗಾಂಬಾ) ದಲ್ಲಿ ಹುಲಿಯನ್ನು ಆರಾಧಿಸುತ್ತಾರೆ. ಕಟ್ಟೆಮನೆ ನನ್ನಿವಾಳ. ಇದು ಶ್ರೀಶೈಲದ ನಲಮಲ, ಯರಮಲದಿಂದ ಬಂದಿದೆಯಂತೆ. ನೇರ್ಲಗುಂಟೆ ಹತ್ತಿರ ಗಾದರಿಪಾಲನಾಯಕ ಎತ್ತು ಹೊಡೆದುಕೊಂಡು ಹೋಗಿದ್ದನೆಂದು ಇಲ್ಲಿನ ಕಥೆಯಿದೆ. ಆಂಧ್ರದ ಈರಾಪುರ, ರಂಗಸೇಟ್ಲು ಕರ್ನಾಟಕದ ಸಿರಗೇರಿಹಟ್ಟಿ, ಬೂದಿಹಳ್ಳಿಗಳಲ್ಲಿ ಗುಡಿಗಳಿವೆ. ಈ ದೇವರ ಪೂಜಾತಿಯ ಹೆಸರು ಬೋರಯ್ಯ. ಮ್ಯಾಸಬೇಡರ ೩ ಜನ ಪೂಜಾರಿಗಳಾದ ನಲಗೇತಿ, ಕಾಮಗೇತಿ ಮತ್ತು ಬುಲ್ಲುಡ್ಲು ಸೇರಿ ೯ ಜನ ಅಜ್ಜನವರೊಂದಿಗೆ ಪೂಜಾರಿಯನ್ನು ನೇಮಿಸುವರು. ನನ್ನಿವಾಳ ಕಟ್ಟೆಮನೆಯಾಗಿದೆ. ದೇವರೆತ್ತುಗಳಲ್ಲದೆ ಈ ದೇವರ ಕಾರ್ಯಗಳಾವು ನಡೆಯುವುದಿಲ್ಲ. ಕಿಲಾರಿ ಬೋರಯ್ಯ ಅಣ್ಣತಮ್ಮಂದಿರ ಸಲಹೆಯಂತೆ ಪೂಜಾಕಾರ್ಯಗಳನ್ನು ನೆರವೇರಿಸುವರು.

ನಾಯಕನಹಟ್ಟಿ ಚಲುವಾದಿಗರು ಮತ್ತು ನೇರ್ಲಗುಂಟೆ ಮಡಿವಾಳರು ಸೇವಾ ಕೆಲಸಗಳನ್ನು ಮಾಡುತ್ತಾರೆ. ವಾಸೆ ಕೊಯ್ಯುವ ಪದ್ಧತಿ ಇವರಲ್ಲಿದ್ದು, ಬಂಗಾರು ದೇವರನ್ನು ಹೆಣ್ಣು ಅಥವಾ ಸ್ತ್ರೀ ದೇವತೆಯೆಂದು ಆರಾಧಿಸುವರು. ವೈಷ್ಣವ ಪಂಥದ ಸಂಪ್ರದಾಯಗಳು ಇವರಲ್ಲಿ ಕಂಡುಬರುತ್ತವೆ. ವೇದಾವತಿ ನದಿ, ಗುಹೇಶ್ವರ ಬೆಟ್ಟ, ಕಲ್ಲೇದೇವರಪುರದ ಕಲ್ಲಪ್ಪ, ಗಾದರಿ ಮಲೆಬೆಟ್ಟ ಮೊದಲಾದವು ಆರಾಧನಾ ಕೇಂದ್ರಗಳಾಗಿವೆ. ದೇವರುಗಳಿಗೆ ಕಾಸು, ಮೀಸಲು, ಮಣೆವುಗಳನ್ನು ಗುಗ್ಗರಿಹಬ್ಬ, ಎತ್ತಿನಹಬ್ಬ, ದೀಪಾವಳಿಗಳಲ್ಲಿ ಮಾಡುವರು. ವರ್ಷದಲ್ಲಿ ಆಗಾಗ ಬೇಟೆಗೂ ಇವರು ಹೋಗುವರು. ಕೋಳಿ ನಿಷಿದ್ಧ, ಸಾಕುವುದಿಲ್ಲ ಮತ್ತು ತಿನ್ನುವುದಿಲ್ಲ. ವ್ಯವಸಾಯ ವೃತ್ತಿ ಇವರದಾಗಿದ್ದು, ಮನೆಯಲ್ಲಿ ತೆಲುಗು ಮಾತನಾಡುತ್ತಾರೆ. ಇವರಲ್ಲಿ ಪಾರಂಪರಿಕವಾಗಿ ಬಂದಂತೆ ತಮ್ಮ ಪತ್ನಿಯರಿಗೆ ತಾಳಿಕಟ್ಟದೆ ಕೇವಲ ಕರಿಮಣಿಯನ್ನು ಮಾತ್ರ ಕಟ್ಟುತ್ತಾರೆ.

ದೇವರ ಗಂಜಿಗಟ್ಟೆಯಲ್ಲಿ ಗಾದರಿಪಾಲನಾಯಕನ ಪಂಥವಲ್ಲದೆ, ಕಂಪ್ಲಿ ನರಸಿಂಹ, ಸೂರ್ಯನಾರಾಣ ದೇವರುಗಳ ಆರಾಧನೆಯು ಪ್ರಚಲಿತದಲ್ಲಿದೆ. ಇಲ್ಲಿನ ಪೂಜಾರಿ ರಾಮಚಂದ್ರಪ್ಪ ತಂದೆ ಪಟೇಲ್ ನರಸಪ್ಪ ಪೂಜಾರಿಗೆ ಮನೆತನದವನು. ಕಾಮಗೇತಲಾರು ಪಂಗಡಕ್ಕೆ ಸೇರಿದ ಇವರು ಕಂಪಳ ನರಸಿಂಹ, ಭೈರವೇಶ್ವರ, ಗಾದರಿಪಾಲನಾಯಕ, ಸೂರ್ಯನಾರಾಯಣ ಮೊದಲಾದ ದೇವತೆಗಳನ್ನು ಆರಾಧಿಸುವರು. ಗಂಜಿಗಟ್ಟೆ, ಗೋನೂರುಗಳು ಗುಡಿಕಟ್ಟೆ ಮತ್ತು ಕಟ್ಟೆಮನೆಗಳಾಗಿವೆ. ವೀರನ ದೇವಾಲಯ ಕಾಮಗೇತನಹಳ್ಳಿಯಲ್ಲಿದೆ. ಇದರ ಹೆಸರು ಸೂರಪ್ಪನಾಯಕ. ಇಲ್ಲಿರುವ (ಗಾದರಿಪಾಲ ನಾಯಕನು) ಅಹೋಬಲದೇವರನ್ನು ಬೇರೆ ಕಡೆಯಿಂದ ತಂದಿದ್ದರಂತೆ. ನಾಯಕ ಜನಾಂಗದ ಹಿರಿಯರು ಈ ಪೂಜಾರಿಯನ್ನು ನೇಮಿಸುತ್ತಾರೆ. ಅರಮನೆ ಮತ್ತು ಗುರುಮನೆ ಗಂಜಿಗಟ್ಟೆಯಾಗಿದೆ. ಗಾದರಿಪಾಲನಾಯಕನ ಕಾಲದಲ್ಲಿದ್ದ ದೇವರೆತ್ತುಗಳ ಸಂತತಿ ಈಗ ವೃದ್ಧಿಯಾಗಿಲ್ಲ. ದಾಸಯ್ಯನಿದ್ದು, ಅನೇಕ ಬಗೆಯ ರೂಢಿಸಂಪ್ರದಾಯಗಳು ಪ್ರಚಲಿತದಲ್ಲಿವೆ.

ಇದೇ ಗ್ರಾಮಕ್ಕೆ ಸೇರಿದ ಕಂಪಳಪ್ಪ ಶೇಣಜ್ಜಿ ಕಂಪಳ್ಳ ವ್ಯವಸಾಯದಿಂದ ಜೀವಿಸುತ್ತಾನೆ. ಇವರು ಕಾಮಗೇತಲಾರು ಪಂಗಡಕ್ಕೆ ಸೇರಿದ್ದಾರೆ. ಸೂರಪ್ಪನಾಯಕ (ಕಂಪಳನರಸಿಂಹ) ಇವರು ಮನೆದೇವರು. ಗೋನೂರು ಕಟ್ಟೆಮನೆಗೆ ಸೇರಿದ ಗಂಜಿಗಟ್ಟೆ ಗುಡಿಕಟ್ಟಾಗಿದ್ದು, 'ಗಾದ್ರಿ ಸಿಂಹಾಸನ' ಇಲ್ಲಿದೆ. ಎಲ್ಲರೂ ಸೇರಿ ಈ ದೇವರನ್ನು ಮಾಡುತ್ತಾರೆ. ವೀರನ ಹೆಸರಿನಲ್ಲಿರುವ ಕಲ್ಲುಹುಣಸೆ (ಲಕ್ಷ್ಮಿಸಾಗರ) ದೇವಾಲಯವಿದೆ. ಗಂಜಿಗಟ್ಟೆಯ ಕಂಪಳ ನರಸಿಂಹ ದೇವಾಲಯದ ಕೆಲವು ಶಿಲ್ಪಗಳು ಈ ವಂಶಸ್ಥರಿಗೆ ಸಂಬಂಧಿಸಿವೆ. ಕಾಮಗೇತಿ ರಾಮಚಂದ್ರಪ್ಪ ಈ ದೇವರ ಪೂಜಾರಿ. ಇವರಿಗೆ ಅರಮನೆ, ಗುರುಮನೆಗಳೆರಡು ಚಿತ್ರದುರ್ಗ ಮುರುಘಾಮಠವಾಗಿದೆ. ಇದಕ್ಕೆ ದೇವರೆತ್ತುಗಳಿಲ್ಲದಿದ್ದರೂ, ದಾಸಯ್ಯ ಜಾಗಟೆ, ಶಂಖು, ಬೋನಾಸೆ ಹಿಡಿದು ತನ್ನ ಕಾರ್ಯವಿಧಿಗಳನ್ನು ಪೂರೈಸುವನು. ಶಿವರಾತ್ರಿಯಲ್ಲಿ ವಾಸೆ ಎಂದು ಹುಲಿ ಹೋತವನ್ನು ಗಾದರಿದೇವರಿಗೆ ಬಲಿ ಕೊಟ್ಟರೆ, ಬೋರೆ ದೇವರಿಗೆ ವಾಸೆ ಕೊಯ್ಯುವರು. ವೈಷ್ಣವ ಧರ್ಮದ ಸಂಪ್ರದಾಯಗಳನ್ನು ಇವರು ಮೈಗೂಡಿಸಿಕೊಂಡಿದ್ದಾರೆ. ಈ ಗ್ರಾಮದಲ್ಲಿರುವ ದೇವರಹೊಂಡ ಮತ್ತು ಪಕ್ಕದ ಗಾದ್ರಿಹಳ್ಳ (ಮಿಂಚೇರಿ ಹಳ್ಳ) ಕ್ಕೆ ಪೂಜಿಸುವರು. ಗಾದರಿಮಲೆ ಬೆಟ್ಟವನ್ನು ಇವರು ಪೂಜಿಸುವರು. ಕಾಸು, ಮೀಸಲು, ಮಣೆವು, ಓಕುಳಿ, ಕೋಲು, ಭಜನೆ, ನಾಟಕ, ಛತ್ರಿ ಚಾಮರ ಇತರ ಪರಿಕರಗಳು ಮತ್ತು ಆಚರಣೆಗಳು ರೂಢಿಯಲ್ಲಿವೆ.

ಆಂಧ್ರದಲ್ಲಿರುವ ಅಹೋಬಲ, ಪೆನ್ನೋಬಳ, ಕದರಿಗಳಲ್ಲಿ ವೈಷ್ಣವ ಸಂಪ್ರದಾಯಕ್ಕೆ ಸೇರಿದ ನರಸಿಂಹದೇವಾಲಯಗಳಿವೆ. ಈ ಪ್ರಭಾವ ಕರ್ನಾಟಕದ ಬೇಡ ನಾಯಕರ ಮೇಲಾದುದು ಗಮನಾರ್ಹ. ಎನ್.ಪಿ. ಓಬಯ್ಯ (ಬ್ಯಾಟ್‌ಪ್ಯಾಟ್) – ಸಣ್ಣ ತಿಮ್ಮಯ್ಯ ಎಂಬುವರು ರಾಯದುರ್ಗ ತಾಲೂಕು ವಾಲ್ಮೀಕಿ ಸಂಘದ ಅಧ್ಯಕ್ಷರು. ಅನಂತಪುರ (ಆಂಧ್ರಪ್ರದೇಶ) ಜಿಲ್ಲೆಯಲ್ಲಿ, ಈ ಸಂಪ್ರದಾಯಕ್ಕೆ ಸೇರಿದವರಿದ್ದಾರೆ. ಇವರು ವಾಲ್ಮೀಕಿ ಜನಾಂಗದ (ಮುಚ್ಚ) ಮಳೆಲಾರು ಬೆಡಗಿಗೆ ಸೇರಿದವರು. ಚಳ್ಳಕೆರೆ ತಾಲೂಕಿನ ದಾಸರಮುತ್ತೇನಹಳ್ಳಿ ಗೆದ್ದುಲಗಟ್ಟೆ ಓಬಳದೇವರು, ಕೂಡ್ಲಿಗಿ ತಾಲೂಕಿನ ಮಾಕನಡಕು ಓಬಳದೇವರಿಗೂ ಇವರಿಗೂ ಸಂಬಂಧವಿದೆ. ಪಟ್ಟಣದಲ್ಲಿ ನೆಲಸಿರುವ ಇವರು ಚಿಂತರ ಗುಂಟನಹಳ್ಳಿ ಓಬಳ ದೇವರನ್ನು ಮನೆದೇವರಾಗಿ ಹೊಂದಿರುವರು. ಇವರು ಅಹೋಬಲ ನರಸಿಂಹನನ್ನು ಆರಾಧ್ಯ ದೇವರಾಗಿ

ಕಂಡಿರುವುದು ಸ್ಥಳೀಯವಾಗಿಯೇ ಎಂಬುದು ನಿಜ. ರಾಯಾಪುರದ ದಾಸಯ್ಯ, ಕುರಿಹಟ್ಟಿ ಉರುಮೆಯವರು, ಸ್ಥಳೀಯ ಅಗಸರು ವಿವಿಧ ಕೆಲಸಗಳನ್ನು ಮಾಡುತ್ತಾರೆ. ಮಾಘಮಾಸದಲ್ಲಿ ಬೋರೆ ದೇವರಿಗೆ ವಾಸೆ ಕೊಯ್ಯುತ್ತಾರೆ. ಸ್ತ್ರೀ ದೇವತೆಯಾಗಿ ಗೌರಸಮುದ್ರದ ಮಾರಮ್ಮನನ್ನು ಪೂಜಿಸುತ್ತಾರೆ. ಇವರಲ್ಲಿ ಬೇಟೆ, ಪಶುಪಾಲನೆ ಮತ್ತು ಕೃಷಿ ವೃತ್ತಿಗಳು ಜೀವಂತವಾಗಿವೆ. ಬೋಸೆವಾರು ಬೆಡಗಿನವರು ನವಣೆ ಹೊಲದಲ್ಲಿ ಓಡಾಡುವುದಿಲ್ಲ, ತಿನ್ನುವುದಿಲ್ಲ, ರಾಯದುರ್ಗ ಮತ್ತು ಮೊಳಕಾಲ್ಮೂರು ನಡುವೆ ಇರುವ ಅಡಿಗುಪ್ಪ (ಗಲಗಲ್ಲು ಹತ್ತಿರ) ರಾಜಲು ದೇವರು ಮಾನ್ಯವಿದೆ. ಬೇಡರಿಗೆ ಇವು ಆರಾಧನೆ ನೆಲೆಗಳಾಗಿ ಇಂದು ಪರಿವರ್ತನೆಗೊಂಡಿವೆ.

ಟಿ.ಓ. ಪಾಲಣ್ಣ ಶಿಕ್ಷಕರು, ಕಾಲುವೆಹಳ್ಳಿ ಇವರು ಮಂದಲೋರು ಪಂಗಡಕ್ಕೆ ಸೇರಿದ್ದು, ಶೀತಮುತ್ತಿ ವಂಶಸ್ಥರಾಗಿರುವರು. ಚಳ್ಳಕೆರೆ ತಾಲೂಕಿನ ಕಾಲುವೆಹಳ್ಳಿಯಲ್ಲಿ ಶ್ರೀ ಓಬಳಸ್ವಾಮಿ ಗುಡಿಹಳ್ಳಿ ದೇವತೆಯಿದೆ. ಮತ್ತೊಂದು ದೇವರ ಗುಡಿ ಗಾದರಿಪಾಲನಾಯಕನಿಗೆ ಸೇರಿದ್ದಾಗಿದೆ. ಶಿಲೆ, ಹುತ್ತದಿಂದ ಉದ್ಭವದಿಂದ ಆಗಿದೆ. ಓಬಳದೇವರ ಪೂಜಾರಿ ಓಬಳಯ್ಯ, ಗಾದರಿ ದೇವರ ಪೂಜಾರಿ ಸಣ್ಣ ಪಾಲಯ್ಯನವರಿದ್ದಾರೆ. ಗುಡಿಹಳ್ಳಿ ಚಲುವಾದಿಗಳು ಉರುಮೆ ಬಡಿಯುತ್ತಾರೆ. ಇತರ ಸಣ್ಣ ಪುಟ್ಟ ಕೆಲಸಗಳನ್ನು ಇತರರು ಮಾಡುತ್ತಾರೆ. ಸ್ತ್ರೀ ದೇವತೆ ಗೌರಸಮುದ್ರದ ಮಾರಮ್ಮನನ್ನು ಪೂಜಿಸುವರು. ವೈಷ್ಣವ ಸಂಪ್ರದಾಯಕ್ಕೆ ಸೇರಿದ ಇವರು ವೇದಾವತಿ, ತಿರುಪತಿ ಕ್ಷೇತ್ರವನ್ನು, ಪಶುಗಳನ್ನು ಆರಾಧಿಸುವರು. ಬೇಟೆ, ಪಶುಪಾಲನೆ ರೂಢಿಯಲ್ಲಿದೆ. ಕೋಲಾಟ, ನಂದಿಧ್ವಜ, ಭಜನೆ, ಯಕ್ಷಗಾನ ವಿವಿಧ ರಂಗಗಳಲ್ಲಿ ಮುನ್ನಡೆದಿರುವರು. ಇವರು ಸತ್ತ ಹೆಣವನ್ನು ಹೂಳುವಾಗಿ ಉತ್ತರಕ್ಕೆ ಕಾಲು, ದಕ್ಷಿಣಕ್ಕೆ ತಲೆಯನ್ನಿಡುತ್ತಾರೆ.

ತೋಟದ ಪೆದ್ದ ಓಬಯ್ಯ ತಂದೆ ಮುಕ್ಕಣ್ಣ, ತೋಟದವರೆಂದು ಕರೆಸಿಕೊಂಡು ಪೂಜಾರಹಳ್ಳಿ ಕೆ.ಬಿ.ಹಟ್ಟಿಯಲ್ಲಿ ನೆಲಸಿರುವರು. (ಸು.೯೫) ವರ್ಷ ಇವರು ಮಾಕನಡಕು ಮಳೆಲಾರು ಪಂಗಡಕ್ಕೆ ಸೇರಿದ್ದಾರೆ. ಇವರು ಗೆದ್ದಲುಗಟ್ಟೆ ಓಬಳದೇವರು, ಮಾಕನಡಕು ಓಬಳದೇವರು, ಚೆಂತಗುಂಟ್ಲು ಬೋರೆದೇವರುಗಳನ್ನು ಪೂಜಿಸುತ್ತಾರೆ. ದಾಸರ ಮುತ್ತೇನಹಳ್ಳಿ ಓಬಳದೇವರಿಗೆ ಇಂದು ನಡೆದುಕೊಳ್ಳುವರು. ಚೌಳಕೆರೆ ಹಿರಿಯರ ಗುಂಡುಗಳು, ಅಹೋಬಲನರಸಿಂಹ, ಕಂಚೋಬಳ ನರಸಿಂಹ, ಬಂಜಗೆರೆ ಓಬಯ್ಯ, ಗೆದ್ದಲುಗಟ್ಟೆ ಓಬಳ ದೇವರು ಮೊದಲಾದವುಗಳು ಇವರಿಗೆ ಆರಾಧ್ಯ ದೇವತೆಗಳಾಗಿವೆ. ದಾಸರಮುತ್ತೇನಹಳ್ಳಿಯ ಓಬಳದೇವರ ಗುಡಿ ಚೌಕಾಕಾರದ ಕಲ್ಲಿನ ಮಂಟಪವನ್ನು ಹೊಂದಿದೆ. ಪೂಜಾರಿಯ ಹೆಸರು ಓಬಯ್ಯ. ಆಯಾ ಮನೆತನದ ಅಣ್ಣತಮ್ಮಂದಿರು ಸೇರಿ ಪುಟ್ಟಿಯವರು, ಯಜಮಾನರು ಪೂಜಾರಿಯನ್ನು ನೇಮಿಸುವರು. ಇದರ ದೇವರೆತ್ತುಗಳು ಪಲ್ಲನಾಯಕನ ತಿಪ್ಪೆ ಅರಣ್ಯದಲ್ಲಿವೆ. ಊರಿನ ಹೊರಗಿನ ರೊಪ್ಪದಲ್ಲಿ ಸಣ್ಣ ಓಬಯ್ಯ ಕಿಲಾರಿ, ದೇವರೆತ್ತುಗಳಿದ್ದು, ಪೂಜಾ – ಕೆಲಸಗಳು ಇಲ್ಲಿಯೇ ನಡೆಯುತ್ತವೆ. ದೇವರ ಭಕ್ತಾಧಿಗಳು ಮತ್ತು ನೂರೊಂದು ಜನ ಹಿರಿಯರ ಸಮ್ಮುಖದಲ್ಲಿ ಕಿಲಾರಿ ನೇಮಕ ನಡೆಯುತ್ತದೆ. ತಲೆಮಾರುಗಳಿಂದಲೂ ದಾಸಯ್ಯ ಇಲ್ಲಿಗೆ ಬಂದು ಕೆಲಸ – ಕಾರ್ಯಗಳನ್ನು ಮಾಡುತ್ತಾನೆ. ತಂದೆ, ಮಗ ಹೀಗೆ ಆ ವಂಶದವರು ದಾಸಯ್ಯರಾಗಿದ್ದಾರೆ. ಮಲ್ಲೂರಹಳ್ಳಿ ಚಲುವಾದಿ ಕುಟುಂಬದವರು (ಬಸಣ್ಣ) ದೇವರಿಗೆ ಉರುಮೆ ಬಡಿಯುವರಲ್ಲದೆ, ಈ ದೇವರ ಭಕ್ತರು ಸಹಾ ಆಗಿರುತ್ತಾರೆ. ಅಗಸರು ದೇವರಗಂಗಿಪೂಜೆ, ಬನ್ನಿಮುಡಿಯಲು ಅಥವಾ ಊರಾಡಲು ಹೊರಟಾಗ ಬಟ್ಟೆಯನ್ನು ಮಡಿಹಾಸುತ್ತಾರೆ. ಇವರು ಹಿರಿಚೆನ್ನಮ್ಮ ಎಂಬ ಪ್ರಾಚೀನತೆ ಪಡೆದ ದೇವತೆಯನ್ನು ಪೂಜಿಸುತ್ತಾರೆ. ಅಹೋಬಲ ನರಸಿಮಹನ ವಿವಿಧ ಪ್ರಕಾರದ ಗ್ರಾಮೀಣ ದೇವತೆಗಳನ್ನು ಇವರು ಪೂಜಿಸುವುದು ಹೆಚ್ಚು. ಚಿನ್ನಹಗರಿ, ವೇದಾವತಿ ನದಿಗಳಲ್ಲಿ ತಮ್ಮ ಆಚರಣೆ, ಪದ್ಧತಿಗಳನ್ನು ಮಾಡಿಕೊಳ್ಳುವರು. ಬೇವಿನಮರ, ಹೊಂಗೆಮರ, ಜಮ್ಮಿಮರ, ಆಲದ ಮರಗಳನ್ನು ಪೂಜಿಸುವರು. ಭರ್ಚಿ, ಕಂಧ್ಲಿ, ಚಂದ್ರಾಯುಧ, ಕೊಡಲಿ, ಮೊಚ್ಚುಗಳಿದ್ದು ಆಗಾಗ ಬೇಟೆಗೆ ಹೋಗುವುದುಂಟು. ಕುರಿ, ದನ, ಎಮ್ಮೆಗಳನ್ನು ಸಾಕುವುದರೊಂದಿಗೆ ಕೃಷಿಯನ್ನು ಪ್ರಧಾನವಾಗಿ ಮಾಡಿಕೊಂಡು ಬಂದಿದ್ದಾರೆ. ವಾರಕ್ಕೊಮ್ಮೆ ಶನಿವಾರ ಒಂದೊತ್ತು (ಉಪವಾಸ) ಇರುವ ಪೆದ್ದ ಓಬಯ್ಯನವರು ದೇವರ ಹೆಸರಿನಲ್ಲಿ ಶಾಸ್ತ್ರ ಜೋತಿಷ್ಯ, ತಗಡು ಯಂತ್ರ, ಚೂರ್ಣಗಳನ್ನು ಕೊಟ್ಟು ಜನರಿಗೆ ಭಾದಿಸುವ ರೋಗಗಳನ್ನು ನಾಟಿ ಔಷಧಿಕೊಟ್ಟು ಗುಣ ಪಡಿಸುತ್ತಾರೆ. ಮಕ್ಕಳಿಲ್ಲದ ದಂಪತಿಗಳಿಗೆ ಗಿಡಮೂಲಿಕೆ ಕೊಟ್ಟು ಅವರಲ್ಲಿ (ಹಾರ್ಮೋನುಗಳು ಉತ್ಪಾದಿಸುವಂತೆ ಮಾಡಿ) ಮಕ್ಕಳ ಸಂತಾನ ಪಡೆದಾಗ ಅವರು ಕೊಟ್ಟ (ದಾನ) ಕುರಿಗಳೇ ಹಿಂಡಾಗಿವೆ. ಸುತ್ತಮುತ್ತಲಿನ ಪರಿಸರಕ್ಕೆ ಇವರದು ದೊಡ್ಡ ಹೆಸರು. ಕೃಷಿಯಲ್ಲಿ ಬಹುದೊಡ್ಡ ಪರಿಣಿತ ತಜ್ಞನಲ್ಲದೆ, ಲೋಕಾನುಭವಿಯಾಗಿ ಅನೇಕ ವ್ಯಾಜ್ಯಗಳನ್ನು ಇತ್ಯರ್ಥ ಮಾಡಿರುತ್ತಾರೆ. ಜೀವನದಲ್ಲಿ ನಾನಾ

ಗಂಡಾಂತರಗಳನ್ನು (ಕಪಿಲೆ ಹೊಡೆಯುವುದು) ಎದುರಿಸಿದ್ದನ್ನು ಸ್ಮರಿಸಿಕೊಳ್ಳುತ್ತಾರೆ. ಇವರು ಬೇಡರ ಇತರರಿಗೆ ವಯಸ್ಸಿನಲ್ಲಿ ದೊಡ್ಡವರಾದ್ದರಿಂದ ಪ್ರತಿಯೊಂದು ವಿಷಯಕ್ಕೂ ನಿರ್ಣಾಯಕ ವ್ಯಕ್ತಿ ಆಗಿದ್ದಾರೆ. ಇವರು ದಿ. ೧೨.೪.೦೨ ರಂದು ತೀರಿಕೊಂಡಾಗ ಇಡೀ ಗ್ರಾಮವೇ ಕಂಬನಿ ಮಿಡಿದು ಮೌನ ಆಚರಿಸಿತು.



೯೫ರ ವಯೋದ್ಧರಾದ ತೋಟದ ಪೆದ್ದ ಓಬಯ್ಯ, ಪೂಜಾರಹಳ್ಳಿ

ಇದೇ ದೇವರ ಪಂಥಕ್ಕೆ ಸೇರಿದ ಪೂಜಾರಿ ಬೋರಯ್ಯ ಪಲ್ಲಯ್ಯ ಎಂಬ ಪಟ್ಟದ ಪೂಜಾರಿ ರುದ್ರಮ್ಮನಹಳ್ಳಿಯವರು. ಈ ಗ್ರಾಮದ ಹಳೆಯ ಹೆಸರುದಿದ್ದಲುಪಲ್ಲಿ. ದಿದ್ದಲಾರು ಎಂಬುದು ಮ್ಯಾಸಬೇಡರ ಒಳಪಂಗಡದಲ್ಲಿರುವ ಬೆಡಗಿನ ಹೆಸರು. ಈತ ಶಾಕೆಲಾರು ಬೆಡಗಿಗೆ ಸೇರಿದವರು. ಇವರದು ನಲುಜೆರುವ ಓಬಳದೇವರು. ಇದನ್ನು ಅಹೋಬಲನರಸಿಂಹನೆಂದು ಪರಿಭಾವಿಸಿಕೊಳ್ಳುವರು. ಗಜ್ಜಿಗಿನವಾಡು (ನಾಯಕ) ಎಂಬುವನು ಕೋರೆಯಲ್ಲಿ ಕಟ್ಟಿಕೊಂಡು ಅಲೆದು ಕೊನೆಗಿಲ್ಲಿ ಬಂದು ನೆಲಸಿದರು. ಇದರೊಂದಿಗೆ ೧೨ ಪೆಟ್ಟಿಗೆ ದೇವರು ನಾಯಕನಹಟ್ಟಿ ಕಟ್ಟೇಮನೆಗೆ ಸೇರಿವೆ. ಕಂಚಿನ ನಗಾರಿ, ಶಂಕ (ಎಡಮುರಿಶಂಖು), ಬಲಮುರಿ ಶಂಖು (ಬಿರುದಾವಳಿ), ನಾಗಮುರಿ ಬೆತ್ತ, ಒಂಟಿಕೋಡು ಬೆಲ್ಲಿ ಹಸು, ಗರುಡಗಂಭ, ಬೆಳ್ಳಿ ಗೊಡಗು, ದೊಣ್ಣೆ, ಛತ್ರಿ – ಚಾಮರ ಅಲಗು ಮೊದಲಾದ ಪರಿಕರಗಳು ಈ ದೇವರಿಗೆ ಸಂಬಂಧಿಸಿವೆ. ಆರಂಭದಲ್ಲಿ ಗುಡಿಸಲಿನಲ್ಲಿದ್ದ ದೇವರಿಗೆ ಈಗ ಆಧುನಿಕ ದೇವಾಲಯವನ್ನು ನಿರ್ಮಿಸಿದ್ದಾರೆ. ಈ ದೇವರಿಗೆ ಗಜ್ಜಿಗನವನು ಯಜಮಾನ. ಕಾಟಪ್ಪನ ಎತ್ತುಗಳು ಇವರಿಗೆ ದೇವರೆತ್ತುಗಳಾಗಿವೆ. ಇದಕ್ಕೆ ಪೂಜಾರಿಗಳೇ ದಾಸಯ್ಯರೆಂದು ಕರೆಸಿಕೊಂಡಿದ್ದಾರೆ. ಹಿರೇಹಳ್ಳಿಯ ಉರಮೆಯವರು, ಅಗಸರು ಇಲ್ಲಿಗೆ ಬರುತ್ತಾರೆ. ಗೌರಸಮುದ್ರದ ಮಾರಮ್ಮನನ್ನು ಮನೆ ದೇವರೂ (ಸ್ತ್ರೀ) ರೂಢಿಸಿಕೊಂಡು ಬಂದಿದ್ದಾರೆ. ಇವರು ದೊಡ್ಡಹಳ್ಳಿ, ಬೂದಿಹಳ್ಳಿ, ಮಂಗಲಬಾವಿಹಳ್ಳಿ (ಗಂಗಿ) ಮೊದಲಾದ ಸ್ಥಳಗಳನ್ನು ಪೂಜಿಸುವರು. ಇವರಲ್ಲಿ ಕಾಸು, ಮಣೆವು, ಜಾತ್ರೆಗಳಲ್ಲಿ ಅನೇಕ ಕೆಲಸಕಾರ್ಯಗಳಿದ್ದು, ಎತ್ತುಗಳು ಹರಿಯುತ್ತವೆ. ಪಶುಪಾಲನೆ ಇವರಲ್ಲಿದ್ದು, ಕೃಷಿಯನ್ನು ಪ್ರಧಾನವಾಗಿ ಉಳಿಸಿಕೊಂಡಿರುವರು. ಬೇಡರಲ್ಲಿರುವ ಇತರ ವಿಶೇಷತೆಗಳಂತೆ ಕೆಲವೊಂದು ಇವರಲ್ಲಿವೆ.

ಓಬಳದೇವರಿಗೆ ಸಂಬಂಧಿಸಿದ ಎಸ್.ತಿಪ್ಪನಾಯಕ ತಂದೆ ಕುಂಟ ಹನುಮಯ್ಯನವರು ಹುಲಿಮರಿತಪ್ಪೆ ಮನೆತನದವರು. ನಿವೃತ್ತ ದಫೇದಾರ್ ಆಗಿರುವ ತಿಪ್ಪನಾಯಕನು (೧೯.೯.೧೯೨೦ ಜನ್ಮದಿನ) ನಾಯಕ ಜನಾಂಗದ ಯರಬಾಮುಡ್ಲರು ಬೆಡಗಿಗೆ ಸೇರಿದ್ದಾರೆ. ಮೊಳಕಾಲ್ಮೂರು ತಾಲೂಕಿನ ಪೆದಾರಗುಡ್ಡವೆಂದು ಖ್ಯಾತವಾಗಿದ್ದ ಹುಚ್ಚಂಗಿ ದುರ್ಗವೇ (ಹಿರಾನ್ ಗುಡ್ಡ= ಹಿರೆಆರ್ಯರು ಕದಂಬ ರಾಜನ ಕಾಲದ ಸ್ಥಳ) ಇವರ ಮೂಲಸ್ಥಳವಾಗಿದೆ ಪೂಜಾರಹಳ್ಳಿ ಗುರುನಾಥ ಓಬಳದೇವರನ್ನು ಮನೆದೇವರಾಗಿ ಹೊಂದಿದ್ದು, ಸಾಧು ಸತ್ಪುರಷನೆಂದು (ಕಾರೆಕೊಳ=ತಾವರೆಕೊಳ), ಲಕ್ಕಿಮುತ್ತಿ ಓಬಳದೇವರೆಂದು ಇದನ್ನು ಕರೆದುಕೊಳ್ಳುತ್ತಾರೆ. ಆನೆಗುಂದಿ

ರಾಜಮನೆಯಾದರೆ ಪೂಜಾರಹಳ್ಳಿ ಹಿರೆಮನೆ ಇವರಿಗೆ. ೯ ಜನ ನಾಥರಲ್ಲಿ ಓಬನಹಳ್ಳಿ ಗುರುನಾಥನು ಇವರ ಮೂಲಪುರುಷನಾಗಿರುವನು. ಈ ದೇವರು ನುಂಕುಮಲೆ ಸಿದ್ಧೇಶ್ವರ ಮಠಕ್ಕೆ ಸೇರಿದೆ. ಗೌರಕನಾಥ (ಉಚ್ಚಂಗಿದುರ್ಗ) ರಾಕ್ಷಸರು ನೆಲೆಸಿದ ಸ್ಥಳವೆಂದು ಈ ಪ್ರದೇಶವನ್ನು ಸಾಂಕೇತಿಸುತ್ತಾರೆ. ಇವರಲ್ಲಿ ವೀರಪರಂಪರೆಯಿದ್ದು, ವಿಷ್ಣುವಿನ ಪಂಥಕ್ಕೆ ಸೇರಿದ್ದಾರೆ. ನಾರದನನ್ನು ಇಲ್ಲಿ ಸ್ಮರಿಸಿಕೊಂಡು, ಪಾಮುಡ್ಲಾರು ಎಂದರೆ ಹಾವಿನವರು ಎಂಬುದನ್ನು ಹೇಳುತ್ತಾರೆ. ಓಬಣ್ಣ ಪೂಜಾರಿಯಾಗಿರುವನು. ಆಧುನಿಕ ಶೈಲಿಯ ದೇವಾಲಯ ಇಲ್ಲಿದೆ. ಅರಮನೆ ಗುರುಮನೆಗಳೆರಡು ಆನೆಗುಂದಿ. ದೇವರೆತ್ತುಗಳ ಕಿಲಾರಿ ಸಣ್ಣ ಬೋರಯ್ಯ, ಕೆ.ಬಿ. ಹಟ್ಟಿಯ ಪಾಮುಡ್ಲಾರುಗಳೇ ದಾಸಯ್ಯಗಳು. ದಾಸರೋಬಯ್ಯ ಎಂಬ ಹಿರಿಯ ವ್ಯಕ್ತಿ ಇವರಿಗೆ ಸಂಬಂಧಿಸಿದವನು. ಇಮಡಾಪುರದ ಉರುಮೆಯವರು, ಪೂಜಾರಹಳ್ಳಿ ಅಗಸರು ದೇವರ ಕೆಲಸಗಳನ್ನು ಮಾಡುವರು. ಗಂಗೆಪೂಜೆಗೆ ಹೋದ ದೇವರಿಗೆ ನಿವಾಳಿ ಕೊಯ್ದು ಅಗಸರು – ಉರುಮೆಯವರು ಹಂಚಿಕೊಳ್ಳುತ್ತಾರೆ. ಇಲ್ಲಿಗೆ ಸಮೀಪದ ಕಾರೆಕೊಳ್ಳ ಎಂಬ ಹಳ್ಳಕೆರೆ (ಚಿನ್ನಹಗರಿಯ ಉಪನದಿ) ಗಂಗೆಪೂಜೆಗೆ ಹೋಗುತ್ತದೆ ಈ ದೇವರು. ಹಂಪೆ ವಿರೂಪಾಕ್ಷಸ್ವಾಮಿ, ತುಂಗಭದ್ರ ನದಿಯ ಕೋಟಿಲಿಂಗ ಮುಂತಾದವು ಪೂಜಾರ್ಹ ಸ್ಥಳಗಳಾಗಿವೆ. ಪೂಜಾರಹಳ್ಳಿಯಲ್ಲಿರುವ ವೀರಗಲ್ಲನ್ನು ಇವರು ತಮ್ಮ ಪೂಜಾರಹಳ್ಳಿ ವೀರಗಲ್ಲು ಮೂಲಪುರುಷನೆಂದು ಹೇಳಿಕೊಳ್ಳುತ್ತಾರೆ. ಇವರು ರಾಜವಂಶೀರಾದ್ದರಿಂದಲೋ ಏನೋ ಹಿಂದೆ ರಾಜಕಾರ್ಯಗಳಲ್ಲಿ ಮಗ್ನನಾಗಿದ್ದರಿಂದ ವಿವಾಹ ಸಮಯದಲ್ಲಿಯೂ ಬಿಡುವುರುತ್ತಿರಲಿಲ್ಲವೇನೋ? ಹೀಗಾಗಿ ಸಾಂಕೇತಿಕವಾಗಿ ಅವನ ಕತ್ತಿಗೆ ಧಾರೆಯೆರೆಯುತ್ತಾರೆ. ಈ ಪಾಮುಡ್ಲಾರು ಪಂಗಡದವರೆಲ್ಲರೂ ತಾವು ಮದುವೆಹೆಣ್ಣಿನ ಮನೆಗೆ ಹೋಗದೆ ಕತ್ತಿಯನ್ನು ಅಲಂಕೃತಗೊಳಿಸಿ ಅದಕ್ಕೆ ಮದುಮತಿ ಜೊತೆಯಲ್ಲಿಟ್ಟು, ಮುತ್ತೈದೆಯರ ಮೂಲಕ ತಾಳಿ ಕಟ್ಟಿಸುತ್ತಾರೆ. ಸೋದರಮಾವನು ಈ ಸಂದರ್ಭದಲ್ಲಿ ಹಾಜರಿರುತ್ತಾನೆ. ಬಹುಶಃ ಮದುವೆಗೆ ಹೊರಟ ವೀರನೊಬ್ಬ ಯಾವುದೋ ಕಾರಣಕ್ಕಾಗಿ ಮಡಿದಿರಬಹುದು. (ಯುದ್ಧದಲ್ಲಿ ಹೋರಾಡಿ?) ಈ ಕಾರಣವಾಗಿ ಈ ವಂಶೀಯರು ಅಂದಿನಿಂದ ಹೆಣ್ಣಿನ ಮನೆಗೆ ಹೋಗದೆ ಕತ್ತಿಗೆ ಧಾರೆ ಎರೆಯುತ್ತಾರೆ. ಆ ಮೂಲಕ ಕ್ಷತ್ರಿಯ ಧರ್ಮಕ್ಕೆ ಇಂಥ ಆಚರಣೆಗಳು ಬಹು ಹತ್ತಿರವಾದಂಥವು. ಕಾಸು, ಮಣೆವು, ತೀರ್ಥಯಾತ್ರೆಗಳು ಇವರಲ್ಲಿ ರೂಢಿಯಲ್ಲಿವೆ. ಇತ್ತೀಚೆಗೆ ಇವರಲ್ಲಿ ಸಂಘರ್ಷಗಳು ಏರ್ಪಡುವುದುಂಟು. ಮೇಲೆ ಹೇಳಿದಂತೆ ಮದುಮಗನೇ ಮದುವೆಗೆ ಹೋಗದಿರುವಾಗ ಆ ವ್ಯಕ್ತಿ ಹೇಗಿರುವನೋ ಕುಂಟನೋ, ಕುರುಡನೋ, ನಮ್ಮ ಹೆಣ್ಣನ್ನು ಕೊಡುವುದಿಲ್ಲವೆಂದು ಸಂಪ್ರದಾಯವನ್ನೇ ವಿರೋಧಿಸಿದ ಸಂದರ್ಭಗಳಿವೆ. ಇದು ಔಚಿತ್ಯವೂ ಕೂಡ ಆಗಿದೆ.



ಯರಮಂಚಿನಾಯಕ ಸಂಸ್ಥಾನ ಗುರುನಾಥ ಓಬಳದೇವರು, ಪೂಜಾರಹಳ್ಳಿ

ದಾವಣಗೆರೆ ಜಿಲ್ಲೆ, ಜಗಳೂರು ತಾಲೂಕಿನ ದೊಡ್ಡಬೊಮ್ಮನಹಳ್ಳಿಯ ನಾಯಕರ ತಿಪ್ಪೇಸ್ವಾಮಿ ಮಳೆಲಾರು ಪಂಗಡಕ್ಕೆ ಸೇರಿದವನು. ಇವರ ಮನೆದೇವರು ಮಾಕನಡಕು ಓಬಳದೇವರು. ಇದಕ್ಕೆ ಗೆದ್ದಲುಗಟ್ಟೆ ಓಬಳದೇವರೆಂದು ಕರೆಯುವರು. ಪೂಜಾರಿ ರಾಮಸ್ವಾಮಿ ಎಂಬುವರು ಈ ದೇವರಿಗೆ ಪೂಜಾರಿ. ಎಲ್ಲದಕ್ಕೂ ಮಾಕನಡಕು ಇವರಿಗೆ ಪವಿತ್ರಸ್ಥಳ. ಹೀಗೆ ಅನೇಕ ರೂಢಿಸಂಪ್ರದಾಯಗಳು ಚಾಲ್ತಿಯಲ್ಲಿವೆ.

ಇದೇ ಗ್ರಾಮದ ಬಿ.ಟಿ.ತಿಪ್ಪೇಸ್ವಾಮಿ ತಂದೆ ಜಂಪಯ್ಯನವರು ನಾಯಕ ಜನಾಂಗದ ಮಳೆಲಾರು ಬೆಡಗಿನ ಗುಂಡಜ್ಜೆರು ಮನೆತನಕ್ಕೆ ಸೇರಿದ್ದಾರೆ. ಈ ದೊಡ್ಡಬೊಮ್ಮನಹಳ್ಳಿ ಐತಿಹಾಸಿಕ ಸ್ಥಳ. ಚಿತ್ರದುರ್ಗ ಅರಸರ ಕಾಲದಲ್ಲಿ ಇದುಗಡಿ ಗ್ರಾಮದಂತಿತ್ತು. ಹರಪನಹಳ್ಳಿ ಪಾಳೆಯಗಾರರು ಉತ್ತರ ಭಾಗದಲ್ಲಿ ಆಳ್ವಿಕೆ ನಡೆಸುತ್ತಿದ್ದರು. ಕಣಕುಪ್ಪೆ ಕಾಟಪ್ಪನಾಯಕನ ಕೆಳಗಿ ಇದ್ದ ಹನುಮನಾಗತಿಹಳ್ಳಿ, ಬಂಗಾರಿಗುಡ್ಡ ಮೊದಲಾದ ಸ್ಥಳಗಳನ್ನು ದೊಡ್ಡಬೊಮ್ಮಣ್ಣ, ಯಲ್ಲಮಲ್ಲಣ್ಣ, ಜರಮನಾಯಕ ಇತರರು ಬಿಚ್ಚುಗತ್ತಿ ಭರಮಣ್ಣನಾಯಕನ ಕಾಲದಲ್ಲಿ ಅಧೀನ ಅರಸರು ಅಥವಾ ಅಧಿಕಾರಿಗಳಾಗಿದ್ದರು. ಅಣಜಿ ಕಾಳಗದಲ್ಲಿ ಹರಪನಹಳ್ಳಿಯವರು ಬಂದಾಗ ಯುದ್ಧ ನಡೆದು ಇವರ ಯುದ್ಧ ಮಾಡಿ ಜಯತಂದು ಕೊಟ್ಟಿದ್ದರು. ಈ ಸ್ಮರಣಾರ್ಥ ಕೋಟೆಕೊತ್ತಲಗಳನ್ನು ಕಟ್ಟಿಸಿ ಜೀರ್ಣೋದ್ಧಾರ ಮಾಡಿಸಿದ್ದರಂತೆ. ಈ ಗ್ರಾಮದಲ್ಲಿ ಓಬಳದೇವರಿಗೆ ನಡೆದುಕೊಳ್ಳುವವರ ಸಂಖ್ಯೆ ಜಾಸ್ತಿ. ಮಾಕನಡಕು ಓಬಳದೇವರು ಇವರಿಗೆ ಆರಾಧ್ಯ ದೇವತೆ. ಪೂಜಾರಿ ರಾಮಸ್ವಾಮಿ ಅವರು ಹಿರಿಯರ ಆದೇಶದಂತೆ ಶಿಕ್ಷಕರಾಗಿದ್ದರೂ ಪೂಜಾರಿ ಕೆಲಸ ಮಾಡುತ್ತಾರೆ. ದೇವರೆತ್ತುಗಳಿದ್ದು, ಜರಿಮಲೆಯನ್ನು ಗುರಮನೆ – ಅರಮನೆಯಾಗಿ ಹೊಂದಿರುವರು. ಪಕ್ಕದ ಕುರಿಹಟ್ಟಿಯವರು ಉರುಮೆ ಬಡಿಯುತ್ತಾರೆ (ದಿವಂಗತ ಉರಮೆ ಓಬಯ್ಯ). ಭರತ ಹುಣ್ಣಿಮೆಯ ಗುಗ್ಗರಿಹಬ್ಬ ಮಾಡುತ್ತಾರೆ. ವೈಷ್ಣವ ಸಂಪ್ರದಾಯಗಳನ್ನು ರೂಢಿಸಿಕೊಂಡಿರುವ ಇವರು ಮನೆದೇವತೆಯಾಗಿ ಚೌಡಮ್ಮ, ಕುರಿಹಟ್ಟಿ ಮಾರಮ್ಮನನ್ನು ಪೂಜಿಸುವರು. ಯುಗಾದಿ ಬೇಟೆ, ಪಶುಪಾಲನೆ, ಕೃಷಿ ಪದ್ಧತಿಗಳು ಇವರಲ್ಲಿವೆ.

ಕೂಡ್ಲಿಗಿ ತಾಲೂಕಿನ ಹುಲಿಕೆರೆ ಗ್ರಾಮದ ವಕೀಲರಾದ ಟಿ. ಓಂಕಾರಪ್ಪ ತಂದೆ ಟಿ. ಸಿದ್ದಪ್ಪ ಅವರು ತಮ್ಮಯ್ಯನಗುಡ್ಡದ ಮನೆಯವರು. ಮ್ಯಾಸನಾಯಕರ ಮಂದ್ಲಾರು ಬೆಡಗಿಗೆ ಸೇರಿದ್ದಾರೆ. ಮನೆದೇವರಾಗಿ ತಮ್ಮ ಪೂರ್ವ ಸ್ಥಳದಲ್ಲಿದ್ದ ತಮ್ಮಯ್ಯನ ಗುಡ್ಡದ ಓಬಳದೇವರನ್ನು ಪೂಜಿಸುವರು. ಮೇಲಿನವರಂತೆ ಇವರಲ್ಲಿ ಅನೇಕ ಆಚರಣೆಗಳಿವೆ.

ದಾವಣಗೆರೆ ಜಿಲ್ಲೆಯ ಜಗಳೂರು ತಾಲೂಕಿನ ಶೆಟ್ಟಿಗೊಂಡನಹಳ್ಳಿ ಗ್ರಾಮದ ನೀಲಪ್ಪ ತಂದೆ ಮಲ್ಲಪ್ಪ ಎಂಬುವರು ಉಲ್ಲಮನೇರು ಕುಟುಂಬಕ್ಕೆ ಸೇರಿದ್ದು, ವ್ಯವಸಾಯದಿಂದ ಜೀವಿಸುತ್ತಿರುವರು. ಮ್ಯಾಸನಾಯಕರ 'ಮಳೇಲಾರು' ಎಂಬುದು ಇವರ ಬೆಡಗು. ಮುದ್ಲಾಪುರದ ಓಬಳದೇವರನ್ನು ಮನೆದೇವರಾಗಿ ಹೊಂದಿರುವರು. ಪೆಟ್ಟಿಗೆ ದೇವರಾದ ಓಬಳದೇವರನ್ನು ಕಾಂಶಿ ಗುಡಿಯಲ್ಲಿಟ್ಟಿದ್ದಾರೆ. ಪೂರ್ವಕಾಲದಿಂದಲೂ ಮುದ್ಲಾಪುರ ಕಟ್ಟೆಮನೆ ಗುಡಿಕಟ್ಟೆಗಳಿಗಿಂತ ತನ್ನದೇ ಆದ ಧಾರ್ಮಿಕ ನೆಲೆಯನ್ನು ಹೊಂದಿದೆ. ಚೌಡಮ್ಮ, ಗೌರಮ್ಮ, ಮಾರಮ್ಮ ಇತರ ದೇವತೆಗಳನ್ನು ಪೂಜಿಸುವರು. ಬೇಟೆಯಲ್ಲಿ ಹಂದಿ, ಮೊಲಗಳನ್ನು ಕೊಲ್ಲುತ್ತಾರೆ. ಇತ್ತೀಚೆಗೆ ಇವರು ರಾಜಕೀಯ ಕ್ಷೇತ್ರಕ್ಕೆ ಪದಾರ್ಪಣೆ ಮಾಡುತ್ತಿರುವರು.

ಮಳೆಲಾರು ಬೆಡಗಿನವರೇ ಹೆಚ್ಚಾಗಿ ಪೂಜಿಸುವ ಓಬಳದೇವರಿಗೆ ಮಂದಲಾರು ಸಹ ಪೂಜಿಸುವುದುಂಟು. ಶೈವ ದೇವತೆಗಳಿಗೆ ಬಿಲ್ಲು, ಬಾಣ ಇತರ ಪರಿಕರಗಳನ್ನು ಪೂಜಿಸುವುದು ಸಾಂಕೇತಿಕವಾಗಿ ಎಂಬುದು ನಿಜ. ವೈಷ್ಣವ ದೇವತೆಗಳಿಗೆ ಪೆಟ್ಟಿಗೆ ದೇವರನ್ನು ಪೂಜಿಸುತ್ತಿದ್ದು ಅದರಲ್ಲಿ ನಂದಿ ವಿಗ್ರಹ, ಸಾಲಿಗ್ರಾಮಗಳಿರುತ್ತವೆ. ಚಿತ್ರದುರ್ಗ ಜಿಲ್ಲೆ ಹೊಳಲ್ಕೆರೆ ತಾಲೂಕಿನ ದೇವರಗಂಜಿಗಟ್ಟೆಯ ಗೋಪನಾಳ ಓಬಳಪ್ಪ ತಂದೆ ಕರಿಯಪ್ಪ ನಾಯಕ ಜನಾಂಗದ ಮಳೆಲಾರು ಬೆಡಗಿಗೆ ಸೇರಿದವರು. ಅಹೋಬಲ ನರಸಿಂಹನನ್ನು ಆರಾಧಿಸುವರು. ಮನೆದೇವರಾಗಿ ಓಬಳದೇವರನ್ನು ಪೂಜಿಸಿದವರು. ಅಮವಾಸೆ ದೇವರಾಗಿ ಚಿತ್ರದೇವರಿಗೆ ನಡೆದುಕೊಳ್ಳುವರು. ಮೊದಲನೆಯದಕ್ಕೆ ಬೇಟೆ ಕಡಿಯುವುದಿಲ್ಲ. ಎರಡನೆಯದಕ್ಕೆ ಕಡಿಯುವರು. ಈ ದೇವರನ್ನು ಹೊಳೆಯಲ್ಲಿ ಸಿಕ್ಕಿದೆ ಎನ್ನುವರು. ಗಂಜಿಗಟ್ಟೆ ಹೊಂಡದ ಮುಂಭಾಗದಲ್ಲಿರುವ ದೇವಾಲಯವೇ ಓಬಳದೇವರು. ಇದು ಪ್ರಾಚೀನಕಾಲದ ಕಟ್ಟಡವಾಗಿದೆ. ಭೈರವಶಿಲ್ಪ, ವೀರಗಲ್ಲುಗಳು ಇಲ್ಲಿವೆ. ಪಾಮುಡ್ಲಾರು ಓಬಣ್ಣನೆಂಬುವನು ಇದಕ್ಕೆ ಪೂಜಾರಿ. ಅರಮನೆ – ಗುರುಮನೆ ಕೊಡಿಹಳ್ಳಿಯಾಗಿದೆ. ದಾಸಯ್ಯ, ಉರುಮೆಯವರು, ಅಗಸರು ಇರುತ್ತಾರೆ.

ವಾಸೆಕೊಯ್ಯುವ ಪದ್ಧತಿ ಇದ್ದು, ಕರಿಯಮ್ಮ ಎಂಬ ಸ್ತ್ರೀ ದೇವತೆಗೆ ನಡೆದುಕೊಳ್ಳುತ್ತಾರೆ. ಗಾದ್ರಿಹಳ್ಳ ಗಾದ್ರಿಗುಡ್ಡಗಳನ್ನು ಆರಾಧಿಸುವರು. ಬೇಟೆ, ಪಶುಪಾಲನೆ, ಕೃಷಿ ವೃತ್ತಿಗಳು ಇವರಲ್ಲಿ ಪ್ರಧಾನವಾಗಿವೆ.

ಕೂಡ್ಲಿಗಿ ತಾಲೂಕಿನ ಪೂಜಾರಹಳ್ಳಿ ಓಬಳದೇವರು ಈ ಭಾಗಕ್ಕೆ ತುಂಬಾ ಪ್ರಸಿದ್ಧವಾದದು. ಇದಕ್ಕೆ ಸುತ್ತೆಲ್ಲ ಜನರು ನಡೆದುಕೊಳ್ಳುವರು. ಇದರ ಪೂಜಾರಿ ಓಬಣ್ಣ ತಂದೆ ಗುರವಯ್ಯನವರು ತಲೆಮಾರಿನಿಂದ ಪೂಜಾರಿಗೆ ಮಾಡಿಕೊಂಡು ಬಂದಿದ್ದಾರೆ. ಇವರು ಪಾಮುಡ್ಲಾರು ಬೆಡಗಿಗೆ ಸೇರಿದ್ದಾರೆ. ಎನುಮುಲಾರು, ಗುಂಡತೇಲಾರು ಇವರಿಗೆ ಅಣ್ಣ – ತಮ್ಮಂದಿರಾಗಬೇಕು. ಗಾದರಿಪಾಲನಾಯಕನನ್ನು ಜನಾಂಗದ ಮಹಾಪುರುಷನೆಂದು ತಿಳಿದಿರುವರು. ಮನೆದೇವರಾಗಿ ಶ್ರೀ ಓಬಳೇಶ್ವರಸ್ವಾಮಿ ಜಗದ್ಗುರು ಪಾಮುಡ್ಲು ಗುರುನಾಥನನ್ನು ಪವಾಡ ಪುರುಷನೆಂದು ಪೂಜಿಸುವರು. ಎಲ್ಲದಕ್ಕೂ ಪೂಜಾರಹಳ್ಳಿ ಕೇಂದ್ರಸ್ಥಳ. ಈತನನ್ನು ಕೋರಿ, ಕೋಲು ಹಿಡಿದು ೭ + ೭ = ೧೪ ದಿನ ಹಾಕಿ ಬಂಡೆಯಲ್ಲಿ ೭ ಮಣ ಸುಣ್ಣ ಹಗೆಯಲ್ಲಿ ಹಾಕಿ ಆತ ಹೋಗಿದ್ದ. ೧೪ ದಿವಸ ಉರುಮೆ ಮತ್ತು ಗುಂಡುಟ್ಲಾರು ಕಾಯುತ್ತಿದ್ದರು. ೧೪ ದಿವಸ ನಂತರ ನಾಗರಹಾವು ಶಿರಕ್ಕೆ ಧರಿಸಿ ಪೆಂಜರೆ ಹೊಟ್ಟೆಗೆ ಸುತ್ತಿಕೊಂಡು, ಕಮಂಡಲ, ಕಾ (ಹಾ) ವುಗಳನ್ನು, ಚೇಳು ಮೊಂಡರೆಗಬ್ಬೆಗಳಿಂದ ಅಲಂಕೃತನಾಗಿದ್ದ. ಎರಡು ನಾಗರಹಾವುಗಳನ್ನಿಡಿದು ಗ್ರಾಮಸ್ಥರಿಗೆ ಹಾಲು ಕುಡಿರಿ ಎಂದಾಗ ಕುಡಿಯಲಿಲ್ಲ. ತಮ್ಮ ಮೂಲ ನೆಲೆ ಚೌಳಕೆರೆ ಹತ್ತಿರ ಕೋಟಿಲಿಂಗವನ್ನು ಆಗಾಗ ಪೂಜಿಸುವರು. ವೀರನ ಹೆಸರಿನಲ್ಲಿ ಹಳೆ ಪೂಜಾರಹಳ್ಳಿ ಕಾರಕೆನ್ನಿಹಳ್ಳಿಗಳಲ್ಲಿ ಕುರುಹುಗಳಿವೆ. ಪೂಜಾರಹಳ್ಳಿಯಲ್ಲಿ ಈತ ಸಮಾಧಿಯಾದನೆಂದು ದೇವಾಲಯ ನಿರ್ಮಿಸಲಾಗಿದೆ. ದೇವಾಲಯವು ಕಲ್ಲಿನಬಂಡೆ, ಕಲ್ಲುಗಳಿಂದ ಆಧುನಿಕವಾಗಿ ನಿರ್ಮಿಸಿದ್ದು, ವಿಷ್ಣುವಿನ ಸಾಲಿಗ್ರಾಮಗಳಿವೆ. ಪೂಜಾರಹಳ್ಳಿಯ ವೀರಗಲ್ಲಿಗೆ ಪೂಜೆ ಮಾಡಿದ ನಂತರ ಈ ದೇವರಿಗೆ ಪೂಜಿಸುವರು. ಈ ಹಿಂದೆ ತಿಳಿಸಿದಂತೆ ಪಾಮುಡ್ಲಾರು ವೀರನೊಬ್ಬ ಹೋರಾಡಿ ಮಡಿದ ಸ್ಮಾರಕ ಅದಾಗಿದೆ. ಅಣ್ಣತಮ್ಮಂದಿರು ೭ ದಿನ ಅಜ್ಜನವರು ಎತ್ತಿನಬೊಮ್ಮಯ್ಯ, ಜಮ್ಮೋಬನಹಳ್ಳಿ ಓಬಣ್ಣ, ಧರ್ಮಾಪುರಂ ಓಬಣ್ಣ, ನಾಕಿಡ್ಲಾರು ಮತ್ತು ಗೌಡ್ರ ಲಕ್ಕಯ್ಯ ಇದರ ಯಜಮಾನರು. ಅರಮನೆ ಗುರುಮನೆ ಆನೆಗುಂದಿ. ದೇವರೆತ್ತುಗಳಿದ್ದು, ವರ್ಷಕ್ಕೆರಡು ಬಾರಿ ದೇವರ ಮುಂದೆ ಹೊಡಿಸುವರು. ಗದ್ದಿಗೆ ಹಾಕಿ, ಕಾಳು ಕಡಿ, ಎಡೆಯಿಟ್ಟು, ಮುಸರೆ ಹಾಕಿ ಪೂಜೆ ಮಾಡುತ್ತಾರೆ. ಅರಿಷಿಣ ನೀರು ಚೆಲ್ಲುತ್ತಾರೆ. ಕಿಲಾರಿ ಹಿಂದೆ ಹಿಂದೆ ಚೆಲ್ಲಿದಾಗ ದೂಪ ದೀಪಗಳನ್ನು ಹಂಚಿ, ಮುದ್ರೆ, ಕೋಲು, ಕೊಡ್ಲಿ, ಕಂಬಳಿಗಳನ್ನಿಡಿದ ಕಿಲಾರಿಗೆ ಕಾಸು ಮೀಸಲನ್ನು ಭಕ್ತಾಧಿಗಳು ಸಲ್ಲಿಸುತ್ತಾರೆ. ಎತ್ತಿನಬೊಮ್ಮಯ್ಯ ಮನೆತನದವರು ಕಿಲಾರಿಯನ್ನು ನೇಮಿಸುತ್ತಾರೆ. ಈಗ ಕೆ.ಬಿ. ಹಟ್ಟಿ ಸಣ್ಣ ಬೋರಯ್ಯನ ಮಕ್ಕಳು ದೇವರೆತ್ತುಗಳನ್ನು ಮೇಯಿಸುತ್ತಾರೆ. ಕುಕ್ಕಲಾರು ಮನೆತನದವರನ್ನು ದಾಸಯ್ಯನಾಗಿ ನೇಮಿಸುವರು. ಕೋಗುಂಡಿ ಮನೆತನದವರನ್ನು ದಾಸಯ್ಯನೆಂದು ಮೈಗೆ ಮುದ್ರೆಹಾಕುತ್ತಾರೆ. ಇಮಡಾಪುರದ ಬೊಮ್ಮಯ್ಯ ಉರುಮೆ ಬಡಿಯುತ್ತಾನೆ. ಆಯಗಾರರಿಗೂ, ಉರುಮೆಯವರಿಗೂ ಇದೇ ಮನೆದೇವರು. ಅಗಸರು ನಡುಮಡಿ ಹಾಸುವುದು ಪಂಜು ಹಿಡಿಯುವ ಕೆಲಸಗಳನ್ನು ಮಾಡುತ್ತಾರೆ. ಗಂಗೆ ಪೂಜೆಗೆ ಹೋದಾಗ ಚೌಳಕೆರೆಗೆ ಹೋಗಿ ದೇವರಿಗೆ ಊರು ಮಾರಮ್ಮನನ್ನು ಮಾಡುತ್ತಾರೆ. ಸ್ತ್ರೀ ದೇವತೆಯಾಗಿ ೭ ಜನ ಅಕ್ಕಮ್ಮನವರು ಬೊಮ್ಮಯ್ಯನನ್ನು ಜುಟ್ಟು ಜನಿವಾರ ಹಿಡಿದು, ಕುಲ ಕೆಡಿಸಲು ಹೋಗುತ್ತಾರೆ. ಗುರುನಾಥಸ್ವಾಮಿ ಹಿರೆಕೆಡಜರಿಗೆ (ಕಡಿಜಿರಣಗೆ) ಮಾಡಿ ಬಿಡುತ್ತಾರೆ. ಬಾಳೆಎಲೆ ಹಾಕಿ, ಬನ್ನಿ ಎಲೆ ಹಾಕಿ, ಸಜ್ಜೆ, ಅಂಬಲಿಮಾಡಿ, ಮೊಣಕೈಯಿಂದ ಕುಟ್ಟಿ, ಅಚ್ಚು ಇಲ್ಲದ ಬಂಡೆ ಹೊಡೆದು ಬಂದರೆ ನಾನು ಬಂದರೆ ಮುದ್ದಿನ ಬೊಮ್ಮಯ್ಯ ಪಂಚಾಂಗಮು ಬೊಮ್ಮಯ್ಯ ೭ ಜನ ಅಕ್ಕಮಂದಿರು ಹುಟ್ಟುತ್ತಾರೆ. ಇವರದು ವೈಷ್ಣವ ಪಂಥ. ಸಾಲಿಗ್ರಾಮ, ಬಲಿಮುರಿ ಶಂಖು, ನಾಗಮುರಿಬೆತ್ತ, ಜಾಗಟೆ, ಬೊನಾಸಿ, ಗಂಟೆ, ಧೂಪಾರ್ತಿ ಇತ್ಯಾದಿ ವಸ್ತುಗಳಿರುತ್ತವೆ. ಹಂಪೆ ಪುಣ್ಯ ಸ್ಥಳದ ತಿರುಗಿನ ಮಡುವಿನಲ್ಲಿ (ಚಕ್ರತೀರ್ಥ) ಸ್ನಾನ ಮಾಡುವುದು. ಚೌಳಕೆರೆ ಹತ್ತಿರ ಹಾಲು ಹರಿಸಲು ಹೋಗುತ್ತದೆ. ಅಲ್ಲಿಂದ ಕಾರೆ ಕೆನ್ನಿ ಹಳ್ಳಕ್ಕೆ ಹೋಗಿ ಮಣೆವು, ಪೂಜೆ, ದೇವರೆತ್ತುಗಳನ್ನು ಬಡಿಸಿ ಊರಿಗೆ ಬರುತ್ತಾರೆ. ಈ ದೇವರಾಗುವ ದಿನಗಳು ಶನಿವಾರ ಮತ್ತು ಭಾನುವಾರ. ಹಂಪೆ ಇವರಿಗೆ ತೀರ್ಥಕ್ಷೇತ್ರ. ಬೇಟೆ, ಪಶುಪಾಲನೆ ಮತ್ತು ಕೃಷಿ ವೃತ್ತಿಗಳು ಇವರಲ್ಲಿವೆ. ಇತರರೊಡನೆ ಉತ್ತಮ ಭಾಂದವ್ಯವನ್ನು ಇವರು ಹೊಂದಿದ್ದಾರೆ.

ಓಬಳ ದೇವರು ಮತ್ತು ಬಸವಣ್ಣನ ದೇವರುಗಳು ಜೊತೆ ಜೊತೆಗಿರುವುದು ಕೆ.ಬಿ. ಹಟ್ಟಿಯಲ್ಲಿ ಕಂಡುಬರುವುದು ವಿಶೇಷ. ಬಸವಣ್ಣ ದೇವರ ಪೂಜಾರಿ ಗಿಡ್ಡಬಸಣ್ಣ ತಂದೆ ಸೂರಯ್ಯ ಕೃಷಿ ಕುಟುಂಬದವರು. ಇವರ ಮನೆದೇವರು ಬಸವಣ್ಣ. ಇಡೀ ಜಗತ್ತಿಗೆ ದೇವರು ಈ ಬಸವಣ್ಣ

ಎನ್ನುತ್ತಾರೆ ಪೂಜಾರಿ. ಎಲ್ಲ ಧರ್ಮ, ಜಾತಿ ಸಮುದಾಯಗಳವರು ಈ ದೇವರಿಗೆ ನಡೆದುಕೊಳ್ಳುತ್ತಾರೆ. ಮಂದಲಗೋತ್ರದ ಕಾಮಗೇತಿಯವರು ಇದರ ಆರಾಧಕರು. ಇಂದು ವೀರಶೈವ ಲಿಂಗಾಯತರು, ರೆಡ್ಡಿಗರು, ಮೊದಲಾದವರು ಹೆಚ್ಚಾಗಿ ನಡೆದುಕೊಂಡರು ಮುಂದಾಳತ್ವ, ಯಜಮಾನಿಕೆ ಪೂಜಾರಿಗಳದೆ. ಇದು ಸ್ವಾತಂತ್ರ್ಯ ದೇವರಾದ್ದರಿಂದ ಗುಡಿಕಟ್ಟೆ ಕಟ್ಟೆಮೆಗಳಿಲ್ಲ. ಈ ದೇವರ ಕಥೆ ಹೀಗಿದೆ: ಚಿತ್ತಕ್ಕನಿಗೆ ದನ ಕಾಯುವಾಗ ಒಡಿಗೆ (ಸೀರೆ ಸೆರಗು) ಬಂದು ಸೇರಿಕೊಂಡಿತಂತೆ. ತಂದೆ ಇದ್ದು, ತಾಯಿಯಿಲ್ಲದ ಚಿತ್ತಕ್ಕನಿಗೆ ಲಿಂಗ ಬಂದಂಗೆಲ್ಲ ಹಿಂದಕ್ಕೆ ಒಸೆದರೂ ಮತ್ತೆ ಬಂದು ಒಡಲು ಸೇರುತ್ತಿತ್ತು. ಮಾಡ್ಲನಾಯಕನಹಳ್ಳಿ, ಬೆಣಚೆಹಳ್ಳಿ ಬಸವಣ್ಣ, ೧೦೧ ಬಿಲ್ಲೆಪುತ್ರಮರದ ಹತ್ತಿರ ಗುಡಿ ಇದೆ (ಜರಿಮಲೆ). ದೇವರು ಅಲ್ಲಿಮದ ಹುಟ್ಟಿ ಉದ್ಭವಗೊಂಡು ಇಲ್ಲಿಗೆ ಬಂದಿದೆ. ಮತ್ತೊಂದು ಮೂಲಕ ಪ್ರಕಾರ ಕಲ್ಯಾಣದಿಂದ ಉಳುವಿಗೆ ಬಂದು ಅಲ್ಲಿಂದ ಕೊಟ್ಟೂರು, ೭ ಮಂಡಾಳ ರಾಯಪುರ ನಂತರ ಶನ್ಯೇಶಿಗುಡ್ಡದ (ಗುಡೆಕೋಟೆ) ಹತ್ತಿರ ಬಂದು ಪವಾಡ ತೋರಿ ಸಿದ್ದಯ್ಯನಕೋಟೆಗೆ ಬಂದು ಅಲ್ಲಿಂದ ಪೂಜಾರಹಳ್ಳಿಗೆ ಬಂದಿತಂತೆ. ದೇವಾಲಯಗಳು ೭ ಮಂಡಲ ರಾಯಾಪುರ, ಚನ್ನೇಶಪ್ಪನ ಮಠ, ಸಿದ್ಧಯ್ಯನ ಕೋಟೆ, ಪೂಜಾರಹಳ್ಳಿಗಳಲ್ಲಿವೆ. ಇವರು ಕೊಟ್ಟಿಗೆ ಮನೆಗಳಲ್ಲಿ ವಾಸಿಸಿದರೆ ಒಳ್ಳೆಯದೆಂದು, ಮಾಂಸಹಾರವನ್ನು ಸೇವಿಸುವುದಿಲ್ಲ. ಹೆಣ್ಣುಮಗಳಿಗೆ ಒಲಿದ ದೇವರು ಇದಾಗಿದ್ದು, ಆಕೆಯ ಸಂತತಿ ಬೆಳೆದು ಬಂದಿದೆ. ಚಿತ್ತಕ್ಕನಿಗೆ ಮದುವೆಯಾಗಿರಲಿಲ್ಲವಾದ್ದರಿಂದ ಆಕೆಯ ಸಹೋದರ ಸಂತತಿ ಇಂದಿದೆ ಎನ್ನುವುದು ನಿಜ. ಶುಭಕಾರ್ಯಗಳನ್ನು ಮಾಡುವಾಗ ಗುಡೆಕೋಟೆಯ ಹಿರೇಮಠದ ಸ್ವಾಮಿಗಳನ್ನು ಇವರು ಆಹ್ವಾನಿಸುವರು. ಕುರಿಹಟ್ಟಿ ಉರುಮೆಯವರು ಬರುತ್ತಾರೆ. ಮಡಿವಾಳರು ಮಡಿಹಾಸುವರು. ಕೊಡದಗುಡ್ಡದ ಮಾರಮ್ಮ, ಮಲಿಯಮ್ಮ ದೇವತೆಗಳನ್ನು ಪೂಜಿಸುವರು. ಪರಿವಾರ ದೇವತೆ ಇವರಿಗಿಲ್ಲ. ಕುಮತಿ ಹತ್ತಿರ ಮಧ್ಯಮರದ ಗಂಗಮ್ಮನಿಗೆ ಮಾಳೆಹಳ್ಳಿ ಹತ್ತಿರ ಚಿನ್ನಹಗರಿ ನದಿಗೆ ದೇವರನ್ನು ಗಂಗೆಸ್ನಾನಕ್ಕೆ ಒಯ್ಯುತ್ತಾರೆ. ೫೦ ವರ್ಷಕ್ಕೊಮ್ಮೆ ಹಂಪೆಗೆ ಹೋಗಿಬರುತ್ತಾರೆ. ಶೈವಪಂಥಕ್ಕೆ ಸೇರಿದ ಇವರು ಕಟ್ಟುನಿಟ್ಟಿನ ಜೀವನ ನಡೆಸುವರು. ಪೂಜಾರಹಳ್ಳಿ ಅರಣ್ಯದಲ್ಲಿ ಬಸವಣ್ಣನ ಕೆರೆ ಇದೆ ಎನ್ನುತ್ತಾರೆ. ಸನ್ಯಾಸಪ್ಪನ ಮಠಕ್ಕೆ ಹೋಗಿ ಬಂದ ಮೇಲೆ ಹಬ್ಬಜಾತ್ರೆಗಳಾಗಿವೆ. ದೀಪಾವಳಿ, ಗುಗ್ಗರಿಹಬ್ಬಗಳಾಗುತ್ತವೆ. ಊರಬಾಗಿಲು ಹತ್ತಿರ ಅಥವಾ ಹಳ್ಳದಲ್ಲಿ ನಿವಾಳಿ ಕಡಿಯುತ್ತಾರೆ. ಈ ದೃಶ್ಯ ದೇವರಿಗೆ ಕಾಣುವುದಿಲ್ಲ. ಇರುವ ರಕ್ತ ಕಾಣಿಸಿದಂತೆ ನೀರು ಹಾಕುವರು. ಈ ದೇವರ ಕಾಲಿಗೆ ಬಿದ್ದು ಅನೇಕ ರೀತಿಯ ಇಷ್ಟಾಸಿದ್ಧಿಗಳನ್ನು ಭಕ್ತಾಧಿಗಳು ಪಡೆದುಕೊಳ್ಳುವರು. ಮಳೆ, ಫಲಸಂತಾನ, ದರಿದ್ರ್ಯ, ಅನಿಷ್ಟ ನಿವಾರಣೆ; ಮೊದಲಾದವುಗಳನ್ನು ಭಕ್ತಾಧಿಗಳು ಕೇಳಿಕೊಳ್ಳುತ್ತಾರೆ.

# ಅನುಬಂಧಗಳು ೧

**ಕನ್ನಡ ವಿಶ್ವವಿದ್ಯಾಲಯ, ಹಂಪಿ**

**ಚರಿತ್ರೆ ವಿಭಾಗ**

**'ಚಿತ್ರದುರ್ಗ ಜಿಲ್ಲೆ ಬುಡಕಟ್ಟು ವೀರರು'**

(ಮ್ಯಾಸನಾಯಕ ಬುಡಕಟ್ಟು ಕುರಿತ ಸಾಂಸ್ಕೃತಿಕ ಮತ್ತು ಮೌಖಿಕ ಚರಿತ್ರೆಯ ಅಧ್ಯಯನ)

**ಪ್ರಶ್ನಾವಳಿ**

೦೧. ಮಾಹಿತಿದಾರ/ಳ/

ತಂದೆ/ಮನೆತನ/ವೃತ್ತಿ/ಹೆಸರು

ಮತ್ತು ವಯಸ್ಸು

೦೨. ಗ್ರಾಮ/ತಾಲ್ಲೂಕು/ಜಿಲ್ಲೆ/ರಾಜ್ಯ

೦೩. ಬುಡಕಟ್ಟು/ಧರ್ಮ/ಬೆಡಗು
ಉಪ – ಬೆಡಗು/ಪುರುಷ/ಸ್ತ್ರೀ

೦೪. ನೆಲಸಿರುವ ಪರಿಸರ (ವ್ಯಕ್ತಿನಾಮ ಸ್ಥಳಗಳು)

೦೫. ಆರಾಧಿಸುವ ದೇವತೆ ಹೆಸರು/ಬುಡಕಟ್ಟು
ವೀರ/ದಂತವ್ಯಕ್ತಿ/ಪುರಾಣಪುರುಷ/ಆಧ್ಯಾತ್ಮಿಕ
ಪುರುಷ/ಬೇಟೆಗಾರ/ದನಗಾಹಿ/ಇತ್ಯಾದಿ

೦೬. ಗುಡಿಕಟ್ಟು ಮತ್ತು ಕಟ್ಟೆಮನೆ

೦೭. ಮನೆದೇವರು/ಕಥೆ/ಹಿನ್ನೆಲೆ

೦೮. ದೇವರ ಮೂಲಸ್ಥಳ/ನಡೆದ ಘಟನೆ/
ಪುರಾಣ/ಪ್ರತೀತಿ/ಇತ್ಯಾದಿ

೦೯. ವೀರನ ಹೆಸರಿನಲ್ಲಿರುವ ದೇವಾಲಯ/
ಗುಡಿ/ವಾಸ್ತುಶಿಲ್ಪ/ಇತ್ಯಾದಿ

೧೦. ದೇವಾಲಯ/ಗುಡಿಯ ಸ್ಥಿತಿ – ಗತಿ/ಶಾಸನ/
ಮಹಾಸತಿಕಲ್ಲು/ವೀರಗಲ್ಲು/ಇತ್ಯಾದಿ

೧೧. ವಾಸಿಸುವ ಮನೆ ಆಕಾರ (ಕೊಟ್ಟಿಗೆ/ಗುಡಿಸಲು)

೧೨. ಪೂಜಾರಿಯ ಹೆಸರು/ಅಡ್ಡ ಹೆಸರು

೧೩. ಪೂಜಾರಿಯ ನೇಮಕ ಮತ್ತು ಬೆಡಗು
ಕಟ್ಟುಪಾಡುಗಳು/ಕರ್ತವ್ಯ

೧೪. ಎ. ಗುರುಮನೆ/ರಾಜಮನೆ (ಅರಮನೆ)

೧೪.ಬಿ. ದೇವರೆತ್ತುಗಳ ಪಾತ್ರ/ಅರಣ್ಯ (ಇವೆಯೋ/ಇಲ್ಲವೋ)
ಅವುಗಳಿಗೆ ಮಾಡುವ ಪೂಜಾ ವಿಧಾನಗಳು

೧೫. ಕಿಲಾರಿ ನೇಮಕ/ಕರ್ತವ್ಯ

೧೬. ದಾಸಯ್ಯ/ಪಂಜುನುಂಗುವುದು
(ವಂಶಪರಂಪರೆಯಿಂದ ಬಂದವರೆ/ಇಲ್ಲವೆ)

೧೭. ಉರುಮೆಯವರು/ಆಯಗಾರರು
(ಆರಾಧಿಸುವ ದೇವತೆಗಿರುವ ಸಂಬಂಧ)

೧೮. ಅಗಸ/ಇತರರ ಪಾತ್ರ
(ಪಂಜು/ಮಡಿಹಾಸುವುದು/ಮಣೆವು ಇತ್ಯಾದಿ)

೧೯. ವಾಸೆ ಕೊಯ್ಯುವುದು
(ಗಂಗೆಸ್ನಾನ/ಉರುಮಾರಮ್ಮ ಇತ್ಯಾದಿ)

೨೦. ಸ್ತ್ರೀ ದೇವತೆಯ ರೂಢಿಸಂಪ್ರದಾಯ
(ಬುಡಕಟ್ಟು ವೀರನಿಗಿರುವ/ಸಂಬಂಧ
ಇತರ ಐತಿಹಾಸಿಕ ಸಂಗತಿಗಳು)

೨೧. ಪುರುಷ ದೇವತೆಯ ಮೂಲಪಂಥ/
ಈಗಿನ/ರೂಢಿ/ಸಂಪ್ರದಾಯ ಇತ್ಯಾದಿ

೨೨. ಆರಾಧಿಸುವ ನದಿ/ಕೆರೆ/ಕಾಲುವೆ/ತೊರೆ
ಹಳ್ಳ/ಗೋಕಟ್ಟೆ/ಬಾವಿ/ಇತ್ಯಾದಿ

೨೩. ನಿಸರ್ಗ: ಬೆಟ್ಟ/ಗುಡ್ಡ/ಬಂಡೆ/ಕಲ್ಲು/ಮರ
ಇತ್ಯಾದಿಗಳ ಆರಾಧನೆ

೨೪. ಕಾಸುಕಟ್ಟಿಕೊಳ್ಳುವುದು/ಮಣೆವು/
ಹಬ್ಬ/ಜಾತ್ರೆ/ಯಾತ್ರೆ

೨೫. ಸಿಡಿ/ಓಕುಳಿ/ರಥ

೨೬. ಮಠ/ತೀರ್ಥಕ್ಷೇತ್ರ/ಆಧ್ಯಾತ್ಮಿಕ ಸ್ಥಳಗಳು

೨೭. ಬೇಟೆ/ಕರಿ/ಬಳಸುವ ಆಯುಧ

೨೮. ಪಶುಪಾಲನೆ/ಕೃಷಿ/ಸಾಕುಪ್ರಾಣಿಗಳು/ನಿಷಿದ್ಧ
(ಹುಲ್ಲು – ನೀರಿಗಾಗಿ ವಲಸೆ)

೨೯. ರಾಜಕೀಯ/ಸಮಾಜಸೇವೆ/ಇತರರೊಂದಿಗಿನ
ಸಹ ಸಂಬಂಧ

೨೦. ಕ್ರೀಡೆ: ನೃತ್ಯ/ಸಂಗೀತ/ಇತ್ಯಾದಿ

೨೧. ವಿದ್ಯಾರ್ಹತೆ/ಕೂಲಿ/ಕಾರ್ಮಿಕರು
ಉದ್ಯೋಗ/ನಿರುದ್ಯೋಗ/ಇತ್ಯಾದಿ

೨೨. ಪ್ರಧಾನವೃತ್ತಿ/ಉಪವೃತ್ತಿ/ (ಜನಜೀವನ – ವಲಸೆ)

೨೩. ವಿಶೇಷತೆ

೨೪. ಇತರೆ

೨೫. ಭೇಟಿ ಸ್ಥಳ/ದಿನಾಂಕ/ಸಮಯ

ಸಂಪರ್ಕ ವಿಳಾಸ : ವಿರೂಪಾಕ್ಷಿ ಪೂಜಾರಹಳ್ಳಿ, ಅಧ್ಯಾಪಕ, ಚರಿತ್ರೆ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಕಮಲಾಪುರ ೫೮೩೨೭೬, ಬಳ್ಳಾರಿ ಜಿಲ್ಲೆ, ವಿರೂಪಾಕ್ಷಿ, ಎಂ.ಎ., ಎಂ.ಫಿಲ್., – ಪಿಎಚ್.ಡಿ., ಸಂಶೋಧಕ, ಕೆ.ಬಿ.ಹಟ್ಟಿ, ಪೂಜಾರಹಳ್ಳಿ ಅಂಚೆ ೫೮೩ ೨೭೮ಕೂಡ್ಲಿಗಿ ತಾ., ಬಳ್ಳಾರಿ ಜಿಲ್ಲೆ

ದಯಮಾಡಿ ಮೇಲಿನ ಕೋರಿಕೆಯಂತೆ ಪೂರ್ಣ ಮಾಹಿತಿಯನ್ನು ನೀಡಿ ಸಹಕರಿಸಬೇಕೆಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,
(ವಿರೂಪಾಕ್ಷಿ ಪೂಜಾರಹಳ್ಳಿ)

# ಅನುಬಂಧ ೨

**ಮಾಹಿತಿದಾರರ ವಿವರ**

| ಕ್ರ. ಸಂ. | ಮಾಹಿತಿದಾರರ ಹೆಸರು | ತಂದೆ ಹೆಸರು | ವಯಸ್ಸು | ಸ್ಥಳ | ದಿನಾಂಕ |
|---|---|---|---|---|---|
| ೧ | ಪೂಜಾರಿಪಾಲಯ್ಯ | ಪೂಜಾರಿಬೋರಯ್ಯ | ೮೦ | ಚೆನ್ನಬಸಯ್ಯನಹಟ್ಟಿ, ಚಳ್ಳಕೆರೆ ತಾ. ಚಿತ್ರದುರ್ಗ | ೨೮.೨.೯೮ |
| ೨ | ಮಾಳಿಗೆ ಜಯಪ್ಪ | ಪಾಲಪ್ಪ | ೪೮ | ಗಂಜಿಗಟ್ಟೆ, ಹೊಳಲ್ಕೆರೆ, | |

| | | | | | |
|---|---|---|---|---|---|
| | | | | ಚಿತ್ರದುರ್ಗ ಜಿ. | |
| ३ | ಸಣ್ಣಮನೆ ಪಾಪಣ್ಣ | ಬೊಮ್ಮಣ್ಣ | ೬೦ | ದೊಡ್ಡಬೊಮ್ಮನಹಳ್ಳಿ, ಜಗಳೂರು, ದಾವಣಗೆರೆ ಜಿ. | ೬.೫.೧೯೯೯ |
| ४ | ತಳವಾರ ಈರಣ್ಣ | ಪಾಲಯ್ಯ | ೭೪ | ಹುಲಿಕೆರೆ, ಕೂಡ್ಲಿಗಿ ತಾ, ಬಳ್ಳಾರಿ ಜಿ. | ೨.೪.೧೯೯೯ |
| ೫ | ನಾಗೇಂದ್ರ ನಾಯಕ್ | ನಂಗಿಪಾಲಯ್ಯ | ४೯ | ತಾರಾನಾಥ ಕ್ಲಿನಿಕ್, ಚಳ್ಳಕೆರೆ, ಚಿತ್ರದುರ್ಗ ಜಿ. | |
| ೬ | ಸಣ್ಣ ಪಾಲಯ್ಯ | ರಾಬಲು ಪೂಜಾರಿ | ೭೦ | ಪದಿನಾರು ದೇವರಹಟ್ಟಿ, ಮೊಳಕಾಲ್ಮೂರು, ತಾ. | |
| ೭ | ಓಬಯ್ಯ | ಪೆದ್ದ ಓಬಯ್ಯ | ೬೦ | ಪದಿನಾರು ದೇವರಹಟ್ಟಿ, ಮೊಳಕಾಲ್ಮೂರು, ತಾ. | |
| ೮ | ಶ್ರೀಮತಿ ಶಾರದಮ್ಮ (ನಾಗತಿ) | ಕಸ್ತೂರಿ ಮಲ್ಲಪ್ಪನಾಯಕ | ೭೯ | ಪರಶುರಾಂಪುರ, ಚಳ್ಳಕೆರೆ ತಾ, ಚಿತ್ರದುರ್ಗ ಜಿ. | ೫.३.೧೯೯೯ |
| ೯ | ಪಿ. ಮುದಿಯಪ್ಪ | ಪರ್ವತಯ್ಯ | ४೬ | ಮಲ್ಲೂರಹಳ್ಳಿ, ಚಳ್ಳಕೆರೆ ತಾ, ಚಿತ್ರದುರ್ಗ ಜಿ. | ೧೫.೨.೧೯೯೯ |
| ೧೦ | ಸೂರಯ್ಯ | ಎಳವಿ ಪಾಲಯ್ಯ | ३೫ | ಮ್ಯಾಸರಹಟ್ಟಿ, ಮಲ್ಲೂರಹಳ್ಳಿ, ಚಿತ್ರದುರ್ಗ ಜಿ. | ೧೫.೨.೧೯೯೯ |
| ೧೧ | ಪೂಜಾರಿಸಣ್ಣ ಬೋರಯ್ಯ | ಗೋವಿಂದಪ್ಪ | ३೮ | ಬೋರದೇವರಹಟ್ಟಿ, ಚೆಳ್ಳಕೆರೆ ತಾ, ಚಿತ್ರದುರ್ಗ ಜಿ. | ೮.೯.೧೯೯೯ |
| ೧೨ | ಪೂಜಾರಿ ರಾಮಚಂದ್ರಪ್ಪ | ಪಟೇಲ್ ನರಸಪ್ಪ | ೫೦ | ದೇವರಗಂಜಿಗಟ್ಟೆ ಹೊಳಲ್ಕೆರೆ ತಾ, | |

| | | | | | |
|---|---|---|---|---|---|
| | | | | ಚಿತ್ರದುರ್ಗ ಜಿ. | |
| ೧೩ | ರಾಜಪ್ಪ | ಕಂಪಳಪ್ಪ | ೪೫ | ದೇವರಗಂಜಿಗಟ್ಟೆ ಹೊಳಲ್ಕೆರೆ ತಾ, ಚಿತ್ರದುರ್ಗ ಜಿ. | |
| ೧೪ | ಬಿ.ಬೋರನಾಯಕ | ಎಂ.ಜಿ.ಓಬನಾಯಕ | ೬೨ | ನೇರ್ಲಗುಂಟೆ, ಚಳ್ಳಕೆರೆ ತಾ, ಚಿತ್ರದುರ್ಗ ಜಿ. | ೨೫.೧.೧೯೯೯ |
| ೧೫ | ಜಂಬುಗುಂಪಲುಸಣ್ಣ ಬೋಮ್ಮಯ್ಯ | | ೬೭ | ಬೊಮ್ಮಯ್ಯ ಕಾಟಪ್ಪನಹಟ್ಟಿ, ಚಳ್ಳಕೆರೆ ತಾ, ಚಿತ್ರದುರ್ಗ ಜಿ. | |
| ೧೬ | ಬೋರಯ್ಯ | ಸಣ್ಣ ಓಬಯ್ಯ | ೪೫ | ಬೋಸೆದೇವರಹಟ್ಟಿ, ಚಳ್ಳಕೆರೆ ತಾ, ಚಿತ್ರದುರ್ಗ ಜಿ. | |
| ೧೭ | ಲಕ್ಷ್ಮೀನರಸಪ್ಪ | ದೊಡ್ಡನರಸಪ್ಪ | ೭೦ | ಚಿಕ್ಕಕುರುಗೋಡು ಗೌರಿಬಿದನೂರು, ಕೋಲಾರ, ೨೫.೦೨.೨೦೦೦ | |
| ೧೮ | ಪಾಪನಾಯಕ | ಬೋಸೆಮಲ್ಲಯ್ಯ | ೪೫ | ಹೂಡೇಂ, ಕೂಡ್ಲಿಗಿ ತಾ, ಬಳ್ಳಾರಿ ಜಿ. | ೨೮.೩.೧೯೯೯ |
| ೧೯ | ದಡ್ಡಿಮುತ್ತಿ ಪೂಜಾರಿ | | ೭೫ | ಕಂಪಳದೇವರಹಟ್ಟಿ, ಮೊಲಕಾಲ್ಮೂರು ತಾ, ಚಿತ್ರದುರ್ಗ ಜಿ. | |
| ೨೦ | ತಿಪ್ಪೇಸ್ವಾಮಿ | --- | ೫೦ | ನಲಗೇತಯ್ಯನಹಟ್ಟಿ, ಚಳ್ಳಕೆರೆ ತಾ, ಚಿತ್ರದುರ್ಗ ಜಿ. | |
| ೨೧ | ಓಬಯ್ಯ | ತಿಪ್ಪಯ್ಯ | ೮೫ | ಸೂರಮ್ಮನಹಳ್ಳಿ, ಚಳ್ಳಕೆರೆ ತಾ, ಚಿತ್ರದುರ್ಗ ಜಿ. | |

| | | | | | |
|---|---|---|---|---|---|
| ೧೧ | ತಿಪ್ಪೇಸ್ವಾಮಿ | ಅಪ್ಪಯ್ಯ | ೫೦ | ಪಾಲನಾಯಕನಕೋಟೆ, ಹಿರೇಹಳ್ಳಿ ಅಂಚೆ, ಚಳ್ಳಕೆರೆ ತಾ. | ೧೦.೧೦.೧೯೯೮ |
| ೧೨ | ಎನ್.ಎಂ. ಬೋರಯ್ಯ | ಮುದ್ದಯ್ಯ | ೨೬ | ಹೂಡೇಂ ಅಂಚೆ, ಕೂಡ್ಲಿಗಿ ತಾ, ಬಳ್ಳಾರಿ ಜಿ. ೧೮.೧೦.೧೯೯೮ | |
| ೧೪ | ಪೂಜಾರಿಬಸಣ್ಣ | ಸೂರಯ್ಯ | ४೦ | ಪೂಜಾರಹಳ್ಳಿ ಅಂಚೆ, ಕೂಡ್ಲಿಗಿ ತಾ, ಬಳ್ಳಾರಿ ಜಿ. | ೧೮.೧೦.೧೯೯೮ |
| ೧೫ | ಅಂಚೆಬೋರಯ್ಯ | ಅಂಚೆಬಸಯ್ಯ | ೬೦ | ಸೂರಮ್ಮನಹಳ್ಳಿ, ಮೊಲಕಾಲ್ಮೂರು ತಾ, ಚಿತ್ರದುರ್ಗ ಜಿ. | |
| ೧೬ | ಜಲ್ಲೇಯ್ಯ | | ೫೦ | ದೊಂಬರಸಿದ್ಧಾಪುರ, ಕೂಡ್ಲಿಗಿ ತಾ, ಬಳ್ಳಾರಿ ಜಿ. | |
| ೧೭ | ಎನ್.ಪಿ.ಓಬಯ್ಯ | ಸಣ್ಣ ತಿಮ್ಮಯ್ಯ | ೭೫ | ರಾಯದುರ್ಗ ಅಂಚೆ, ಅನಂತಪುರ ಜಿ. (ಆಂಧ್ರ) | ೨೦.೧೧.೧೯೯೮ |
| ೧೮ | ನೀಲಪ್ಪ | ಮಲ್ಲಪ್ಪ | ೬೦ | ಶೆಟ್ಟಿಗೊಂಡನಹಳ್ಳಿ, ಜಗಳೂರು ತಾ, ದಾವಣಗೆರೆ ಜಿ. | ೫.೨.೧೯೯೯ |
| ೧೯ | ಓಬಯ್ಯ | ಬೊಮ್ಮಯ್ಯ | ४೫ | ಕಲ್ಲೇನಹಳ್ಳಿ, ಚಿತ್ರದುರ್ಗ ತಾ, ಜಿ., ೫.೨.೧೯೯೯ | |
| ೨೦ | ಗೋಪನಾಳ ಓಬಳಪ್ಪ | ಕರಿಯಪ್ಪ | ೬೦ | ಗಂಜಿಗಟ್ಟೆ, ಹೊಳಲ್ಕೆರೆ ತಾ, ಚಿತ್ರದುರ್ಗ ಜಿ. | |
| ೨೧ | ಕಂಪಳಪ್ಪ | ಕಂಪಳಪ್ಪ | ೬೦ | ಗಂಜಿಗಟ್ಟೆ, ಹೊಳಲ್ಕೆರೆ ತಾ, ಚಿತ್ರದುರ್ಗ ಜಿ. | ೧೯.೧೦.೧೯೯೯ |

| | | | | | |
|---|---|---|---|---|---|
| ೩೨ | ಗೌಡ್ರಪಾಲಯ್ಯ | ಸೂರಪ್ಪನಾಯಕ | ೫೫ | ಕಾತ್ರಿಕೆ ಹಟ್ಟಿ, ಕೂಡ್ಲಿಗಿ ತಾ, ಬಳ್ಳಾರಿ ಜಿ. | |
| ೩೩ | ಘಟ್ಟಿ ಮುತ್ತಯ್ಯ | ಗಡ್ಡಮು ಮುತ್ತಯ್ಯ | ೭೫ | ಅರಣ್ಯದ ಕರ್ನಾರಹಟ್ಟಿ, ಕೂಡ್ಲಿಗಿ ತಾ, ಬಳ್ಳಾರಿ ಜಿ. | ೬.೧೦.೧೯೯೯ |
| ೩೪ | ವೆಂಕಟಪತಿ ಆರ್.ಪಿ. | ಕೋನೇಟಿನಾಯಕ | ೬೩ | ಅರಮನೆ, ಕೋಟೆ, ರಾಯದುರ್ಗ ತಾ, ಅನಂತಪುರ ಜಿ. ೩೦.೧೧.೧೯೯೯ | |
| ೩೫ | ಸಣ್ಣ ಪಾಪಯ್ಯ | ಓದ್ನೋಬಯ್ಯ | ೭೦ | ಕಂಪಳದೇವರಹಟ್ಟಿ, ಮೊಳಕಾಲ್ಮೂರು ತಾ, ೩೦.೧೧.೧೯೯೯ | |
| ೩೬ | ಓಬಯ್ಯ | ಬುಕ್ಕಯ್ಯ | ೩೪ | ಚೌಡಿಕೇರಿ ಕಮಲಾಪುರ, ಹೊಸಪೇಟೆ, ತಾ, ಬಳ್ಳಾರಿ ಜಿ. ೧೯.೯.೧೯೯೮ | |
| ೩೭ | ಪೂಜಾರಿನರೆಗಲ್ಲಪ್ಪ | ಪೂಜಾರಿ ಬೊಮ್ಮಯ್ಯ | ೩೬ | ಮನ್ಮಥಕೇರಿ, ಕಮಲಾಪುರ, ಹೊಸಪೇಟೆ ತಾ, ಬಳ್ಳಾರಿ ಜಿ. ೧೯.೯.೧೯೯೮ | |
| ೩೮ | ಎನ್.ಎಂ.ಬೊಮ್ಮಯ್ಯ | ನಲ್ಲಯ್ಯ | ೬೦ | ಮುತ್ತಿಗಾರಹಳ್ಳಿ, ಮೊಳಕಾಲ್ಮೂರು ಜಿ, ೨೯.೯.೧೯೯೮ | |
| ೩೯ | ಬಿ.ತಿಪ್ಪೇಸ್ವಾಮಿ | ಬೊಮ್ಮಯ್ಯ | ೩೦ | ಸುಲ್ತಾನಿಪುರ, ಚಿತ್ರದುರ್ಗ ತಾ, ಜಿ., ೧೨.೧೨.೧೯೯೯ | |

| | | | | | |
|---|---|---|---|---|---|
| ೪೦ | ಪೂಜಾರಿ ಓಬಣ್ಣ | ಪೂಜಾರಿಗುರುವಯ್ಯ | ೪೫ | ಪೂಜಾರಹಳ್ಳಿ, ಕೂಡ್ಲಿಗಿ ತಾ, ಬಳ್ಳಾರಿ ಜಿ. ೨.೧೦.೧೯೯೮ | |
| ೪೧ | ಓಂಕಾರಪ್ಪ ಟಿ. | ಟಿ.ಸಿದ್ದಪ್ಪ | ೩೧ | ಹುಲಿಕೆರೆ, ಕೂಡ್ಲಿಗಿ ತಾ, ಬಳ್ಳಾರಿ ಜಿ. ೨.೪.೧೯೯೯ | |
| ೪೨ | ಬೋರಪ್ಪ | ದೊಡ್ಡ ಬೋರಪ್ಪ | ೬೫ | ದೊಡ್ಡಬೊಮ್ಮನಹಳ್ಳಿ, ಜಗಳೂರು ತಾ, ದಾವಣಗೆರೆ ಜಿ. ೬.೫.೧೯೯೯ | |
| ೪೩ | ಬಿ.ಟಿ.ತಿಪ್ಪೇಸ್ವಾಮಿ | ಜಂಪಯ್ಯ | ೬೦ | ದೊಡ್ಡಬೊಮ್ಮನಹಳ್ಳಿ, ಜಗಳೂರು ತಾ, ದಾವಣಗೆರೆ ಜಿ. ೬.೫.೧೯೯೯ | |
| ೪೪ | ತಿಪ್ಪೇಸ್ವಾಮಿ | --- | | ದೊಡ್ಡಬೊಮ್ಮನಹಳ್ಳಿ, ಜಗಳೂರು ತಾ, ದಾವಣಗೆರೆ ಜಿ. ೬.೫.೧೯೯೯ | |
| ೪೫ | ತಿಪ್ಪನಾಯಕ | ಕುಂಟಹನುಮಂತಯ್ಯ | ౭೯ | ಹುಲಿಮುರಿತಿಪ್ಪೆ, ಮೊಳಕಾಲ್ಮೂರು ಪಟ್ಟಣ | |
| ೪೬ | ಡಿ.ಸೂರಯ್ಯ | ಸೂರಯ್ಯ | ೪೬ | ಪೇಲೋರಹಟ್ಟಿ, ಚಿತ್ರದುರ್ಗ ತಾ., ಮತ್ತು ಜಿಲ್ಲೆ | |
| ೪೭ | ವಿ. ಮಾರನಾಯಕ | ಈರಯ್ಯ | ೫೩ | ಸುಲೇನಹಳ್ಳಿ, ಮೊಳಕಾಲ್ಮೂರು ತಾ. | |
| ೪೮ | ನಾರಾಯಣಪ್ಪ | ದೊಡ್ಡ ಕಾಟಯ್ಯ | ೪೫ | ಕಾಟಪ್ಪನಹಟ್ಟಿ, ಚಳ್ಳಕೆರೆ ತಾ, ಚಿತ್ರದುರ್ಗ ಜಿ. | |

| | | | | | |
|---|---|---|---|---|---|
| | | | | ೧೨.೧೦.೧೯೯೯ | |
| ೪೯ | ಶ್ರೀಮತಿ ಕಾಟಮ್ಮ | ಗಂ. ತಿಪ್ಪಸೂರಯ್ಯ | ೬೦ | ನಾಯಕನಹಟ್ಟಿ, ಚಳ್ಳಕೆರೆ ತಾ, ಚಿತ್ರದುರ್ಗ ಜಿ. | |
| ೫೦ | ಪೂಜಾರಿಬೋರಯ್ಯ | ಪಲ್ಲಯ್ಯ | ೭೫ | ರುದ್ರಮ್ಮನಹಳ್ಳಿ, ಚಳ್ಳಕೆರೆ ತಾ, ಚಿತ್ರದುರ್ಗ ಜಿ. ೨೦.೧೦.೧೯೯೮ | |
| ೫೧ | ತೋಟದ ಪೆದ್ದ ಓಬಯ್ಯ | ಮುಕ್ಕಣ್ಣ | ೯೨ | ಕೆ.ಬಿ.ಹಟ್ಟಿ, ಪೂಜಾರಹಳ್ಳಿ, ಕೂಡ್ಲಿಗಿ ತಾ, ಬಳ್ಳಾರಿ ಜಿ. ೨೦.೯.೧೯೯೮ | |
| ೫೨ | ಟಿ.ಓ. ಪಾಲಣ್ಣ | ತಳವಾರ ಓಬಣ್ಣ | ೫೭ | ಕಾಲುವೆಹಳ್ಳಿ, ಚಳ್ಳಕೆರೆ ತಾ, ಚಿತ್ರದುರ್ಗ ಜಿ. | |
| ೫೩ | ಬಿ.ಲಕ್ಷ್ಮಯ್ಯ | ಪೋಸ್ಟ್‌ಮಾಸ್ಟರ್ | ೫೫ | ಗೌರಸಮುದ್ರ, ಮೊಳಕಾಲ್ಮುರು ತಾ, ಚಿತ್ರದುರ್ಗ ಜಿ. | |
| ೫೪ | ಚಿತ್ತಪ್ಪ | ತಮ್ಮಯ್ಯ | ೬೫ | ಚೋರನೂರು, ಬೊಮ್ಮಗಟ್ಟಿ, ಸೊಂಡೂರು. | |
| ೫೫ | ಜಿ. ಮರಳಸಿದ್ದಪ್ಪ | ಜೆ.ಬಸಪ್ಪ | ೨೬ | ಉಜ್ಜೀನಿ, ಕೂಡ್ಲಿಗಿ ತಾ, ಬಳ್ಳಾರಿ ಜಿ. | |
| ೫೬ | ಶ್ರೀಮತಿ ರತ್ನಮ್ಮ | ಗಂ.ತಿಪ್ಪೇಸ್ವಾಮಿ | ೪೬ | ಸೊಂಡೆಕೊಳ, ಚಳ್ಳಕೆರೆ ತಾ. | |
| ೫೭ | ಕಾನನಕಟ್ಟೆತಿಪ್ಪನಾಯ್ಕ | --- | ೭೦ | ಕಾನಕಟ್ಟೆ, ಜಗಳೂರು ತಾ, ದಾವಣಗೆರೆ ಜಿ. | |

# ಅನುಬಂಧ ೩

೧೯೮೧ರ ಜನಗಣತಿ ಪ್ರಕಾರ ಪರಿಶಿಷ್ಟ ಪಂಗಡ ಬುಡಕಟ್ಟಿನ ಉಪಜಾತಿಗಳು

| | ಬುಡಕಟ್ಟು | ಜನಸಂಖ್ಯೆ |
|---|---|---|
| ೧. | ಆಡಿಯನ್ | ೩೮೬ |
| ೨. | ಬಾರ್ಡಾ | ೭೨೯ |
| ೩. | ಬಾವಚ, ಬಾಮ್ಚೆ, | ೭೯೪ |
| ೪. | ಭಿಲ್, ಭಿಲ್‌ಗರಾಸಿಯು, ಧೋಳಿ ಭಿಲ್, ಡುಂಗ್ರಿ ಭಿಲ್, ಡುಂಗ್ರಿ ಗರಾಸಿಯ, ಮೇವಾಸಿಭಿಲ್, ರಾವಲ್ ಭಿಲ್, ತಾಡ್ವಿಭಿಲ್, ಭಾಗಾ ಲಿಯಾ, ಭಿಲಾಲ, ಪಾವರಾ, ವಾಸವ, ವಾಸವೆ | ೧,೮೬೬ |
| | | |
| ೫. | ಚೆಂಚು, ಚೆಂಚವಾರ್ | ೨೭೬ |
| ೬. | ಚೋಧರಾ | ೧೪೦ |
| ೭. | ಡುಬ್ಲ, ತಲವಿಯ, ಹಲ್ಪತಿ | ೨ |
| ೮. | ಗಮಿಟ್, ಗಾಮ್ಟ್ರ, ಗವಿಟ್, ಮಾವ್ಚಿ, ಪಡ್ವಿ, ವಾಳ್ವಿ | ೩೪ |
| ೯. | ಗೊಂಡ್, ನಾಯ್ಕ್‌ಪೋಡ್, ರಜ್‌ಗೊಂಡ್ | ೬೦,೭೩೦ |
| ೧೦. | ಗೌಡಲು | ೩,೩೮೩ |
| ೧೧. | ಹಕ್ಕಿಪಿಕ್ಕಿ | ೩.೩೮೩ |
| ೧೨. | ಹಸಲರು | ೧೦,೬೦೦ |
| ೧೩. | ಇರುಳರ್ | ೩೧೩ |
| ೧೪. | ಇರುಳಿಗ | ೫,೫೩೪ |
| ೧೫. | ಜೇನುಕುರುಬ | ೩೪,೭೪೬ |
| ೧೬. | ಕಾಡುಕುರುಬ | ೨,೦೯,೨೭೭ |
| ೧೭. | ಕಮ್ಮಾರ (ದಕ್ಷಿಣ ಕನ್ನಡ ಜಿಲ್ಲೆ ಮೈಸೂರು ಜಿಲ್ಲೆಯ ಕೊಳ್ಳೆಗಾಲ) | ೮೪೪ |
| ೧೮. | ಕಣಿಯನ್, ಕಣ್ಯಾನ್ (ಮೈಸೂರು ಜಿಲ್ಲೆ ಕೊಳ್ಳೆಗಾಲ ತಾಲೂಕಿನಲ್ಲಿ ಮಾತ್ರ) | ೫೨೮ |
| ೧೯. | ಕಥೋಡಿ, ಕಟ್‌ಕಾರಿ, ಧೋರ್, ಕಥೋಡಿ, ಧೋರ್ ಕಟ್‌ಕಾರಿ, ಸೋನಕಥೋಡಿ, | ೯೪೨ |

| | | |
|---|---|---|
| | ಸೋನ್ ಕಟ್‌ಗಿರಿ | |
| ೨೦. | ಕಾಟ್ಟು ನಾಯಕನ್ | ೧೦೭ |
| ೨೧. | ಕೊಕ್ನ, ಕೊಕ್ನಿ, ಕುಕ್ನೆ | ೪೧ |
| ೨೨. | ಕೋಳಿಘೋರ ಟೋಕರೆ ಕೋಳಿ ಕೊಲ್ಚಾ, ಕೊಲ್ಲ | ೩೯,೧೩೫ |
| ೨೩. | ಕೊಂಡಕಾಪುಸ್ | ೯೮ |
| ೨೪. | ಕೊರಗ | ೧೫,೧೪೬ |
| ೨೫. | ಕೋಟ | ೭೫ |
| ೨೬. | ಕೋಯ, ಭೀನಕೋಯಿ ರಾಜ್ ಕೋಯಿ | ೨೭,೮೦೬ |
| ೨೭. | ಕುಡಿಯ, ಮೆಲಕುಡಿ | ೧,೭೭೩ |
| ೨೮. | ಕುರುಬ (ಕೊಡಗುಜಿಲ್ಲೆ) | ೪,೫೯೫ |
| ೨೯. | ಕುರುಮನ್ಸ್ | ೧೩೧ |
| ೩೦. | ಮಹಾಮಸಲರ್ | ೧೪ |
| ೩೧. | ಮಲ್ಕೆಕುಡಿ | ೬,೯೬೭ |
| ೩೨. | ಮಲಸರ್ | ೬,೯೬೭ |
| ೩೩. | ಮಲಯೆಕಂಡಿ | ೬೨ |
| ೩೪. | ಮಲೇರು | ೧೨೯ |
| ೩೫. | ಮರಾಠಿ (ಕೊಡಗು ಜಿಲ್ಲೆ) | ೧,೮೪೨ |
| ೩೬. | ಮರಾಠಿ (ದ.ಕನ್ನಡ ಜಿಲ್ಲೆ) | ೬೫,೮೨೧ |
| ೩೭. | ಮೇದ | ೧೮,೬೮೪ |
| ೩೮. | ನಾಯಕ್ಡ, ನಾಯಕ ಚೋಳಿ, ವಾಲಾ ನಾಯಕ, ಕಪಾಡಿಯ ನಾಯಕ, ಮೋಟನಾಯಕ, ನಾನಾ ನಾಯಕ, | ೧೨,೬೩,೫೫೦ |
| ೩೯. | ಪಳ್ಳಿಯನ್ | ೭೪೦ |
| ೪೦. | ಪಣಿಯನ್ | ೪೮೨ |
| ೪೧. | ಪಾರ್ಧಿ, ಅಡ್ವಿ, ಚಿಂಚೇರ್ ಫ್ಯಾನ್ಸಿ, ಪಾರ್ಧಿ | ೨,೪೨೪ |
| ೪೨. | ಪಟೇಲಿಯ | ೫೨ |
| ೪೩. | ರಠವಾ | ೧೦ |
| ೪೪. | ಶೋಲಗ | ೧,೯೪೩ |
| ೪೫. | ಸೋಲಿಗರು | ೧೬,೩೮೯ |
| ೪೬. | ತೋಡ | ೧೩೦ |
| ೪೭. | ವಾರ್ಲಿ | ೭ |

| | | |
|---|---|---|
| ೪೮. | ವಿಟೋಲಿಯ, ಕೊಟ್ವಾಲಿಯ, ಬರೋಡಿಯ | ೧೩ |
| ೪೯. | ಯೆರವ | ೧೯,೨೬೧ |

**ಭಾರತದ ಜನಗಣತಿ ೨೦೦೧ ಕರ್ನಾಟಕ ರಾಜ್ಯಕ್ಕೆ ಅನ್ವಯಿಸುವ ಪರಿಶಿಷ್ಟ ಪಂಗಡಗಳ ಪಟ್ಟಿ (ನಾಯಕ)**

ನಾಯಕ್ಡ, ನಾಯಕ

ಚೋಳಿವಾಲಾ ನಾಯಕ

ಕಪಾಡಿಯ ನಾಯಕ

ಮೋಟನಾಯಕ

ನಾನಾನಾಯಕ, ನಾಯ್ಕ್

ನಾಯಕ್, ಬೇಡ, ಬೇಡರ್

**೧೯೯೧ ರ ಜನಗಣತಿಯಂತೆ ಚಿತ್ರದುರ್ಗ ಜಿಲ್ಲೆಯ ನಾಯಕರ ಜನಸಂಖ್ಯೆ**

| | |
|---|---|
| **ಶೇ.೭.೩. ನಗರ** | **೪೩,೦೫೫** |
| **ಶೇ. ೨೮.೨೯ ಗ್ರಾಮೀಣ** | **೨,೭೫,೨೩೬** |
| **ಶೇ.೧೪.೬೦** | **ಒಟ್ಟು ೩,೧೮,೩೮೧** |

೧೯೮೧ರ ಜನಗಣತಿಯ ಪ್ರಕಾರ ಪ.ಪಂ. ಸಂಖ್ಯೆ ೧೮,೨೫,೨೦೩

೧೯೯೧ರ ಜನಗಣತಿಯ ಪ್ರಕಾರ ಪ.ಪಂ. ಸಂಖ್ಯೆ ೧೯,೧೫,೬೯೧

# ಅನುಬಂಧ ೪

**ಮ್ಯಾಸಬೇಡರು ಆರಾಧಿಸುವ ದೇವರುಗಳು**

೧. ಯರಮಂಚಿನಾಯಕ

೨. ಜಗಳೂರು ಪಾಪನಾಯಕ

೩. ಗಾದರಿಪಾಲನಾಯಕ

೪. ದಡ್ಡಿಸೂರನಾಯಕ

೫. ಕಾಟಪ್ಪನಾಯಕ

೬. ಬೊಮ್ಮದೇವರು

೭. ಯರಗೊಡ್ಲಯ್ಯ

೮. ಪದಿಮುತ್ತಿಗಾರು

೯. ಪೆದ್ದತಿರುಮಲ ದೇವರು

೧೦. ಪಚ್ಚಪದಿ ಓಬಳದೇವುರ
೧೧. ಮಂದಬೊಮ್ಮದೇವರು
೧೨. ಮಲ್ಲಿನಾಯಕ ಬೊಮ್ಮದೇವರು
೧೩. ಶುಕ್ಲಮಲ್ಲಿನಾಯಕ ದೇವರು
೧೪. ಸೂರಪ್ಪ ದೇವರು
೧೫. ಚಿತ್ರದೇವರು
೧೬. ನಲ್ಲಚೆರುವು ಓಬಳದೇವರು
೧೭. ಬಂಜಗೆರೆ ಓಬಳದೇವರು
೧೮. ಕಾವಲು ಓಬಳದೇವರು
೧೯. ಮಾಕನಡಕು ಓಬಳದೇವರು
೨೦. ಅಲಕಿ ಓಬಳದೇವರು
೨೧. ಮಂಗಪೋಟಿ ಓಬಳದೇವರು
೨೨. ಮುದ್ದಾಪುರದ ಓಬಳದೇವರು
೨೩. ಗುಡಿಹಳ್ಳಿ ಓಬಳದೇವರು
೨೪. ಕಂಚೋಬಳದೇವರು
೨೫. ಚಿಂತಗುಂಟ್ಲ ಬೋರೆದೇವರು
೨೬. ಪಡಗಲಬಂಡೆ ಬೋರೆದೇವರು
೨೭. ಉಳ್ಳಾರ್ಥಿ ಬೋರೆದೇವರು
೨೮. ಬೊಮ್ಮನಹಳ್ಳಿ ಬೋರೆದೇವರು
೨೯. ಬೋಸೆದೇವರು
೩೦. ಬಂಗಾರು ದೇವರು
೩೧. ಕಾಟಿಮಲ್ಲಿನಾಯಕ ದೇವರು
೩೨. ನನ್ನಿವಾಳ ಮುತ್ತಿಗಾರ ದೇವರು
೩೩. ನನ್ನಿವಾಳ ಬೊಮ್ಮದೇವರು
೩೪. ಚನ್ನಕೇಶವ ದೇವರು
೩೫. ಯರಗಾಟನಾಯಕ ದೇವರು
೩೬. ದಡ್ಡಿಮುತ್ತಿ ದೇವರು
೩೭. ದಿದ್ದಿಲು ಪಾಲನಾಯಕ
೩೮. ಸಂಚರಾಡ್ಲು ದೇವರು
೩೯. ಬೆಲ್ಲಲಗಾದ್ರಿ ದೇವರು
೪೦. ಕ್ಯಾತಪುಲು ದೇವರು
೪೧. ಮೂಸಿಲು ದೇವರು
೪೨. ಬಾಗನಪಲ್ಲಿ ದೇವರು

೪೩. ಬೊಗ್ಗಲು ದೇವರು

೪೪. ಪಟ್ಟಪೊಲ್ಲಲು ದೇವರು

೪೫. ಪೆದ್ದಳ್ಳನಾಯಕ ದೇವರು

೪೬. ಹಟ್ಟಿಮಲ್ಲಪ್ಪನ ದೇವರು

೪೭. ಗುಂಡೇತಲ ದೇವರು

೪೮. ಪುಲಕುಂಟ ಚನ್ನನಾಯಕ ದೇವರು

೪೯. ಏಡುಜಂಜಲ ಹನುಮಂತರಾಯ

೫೦. ಪಾಮುಡ್ಲು ಗುರುನಾಥ

೫೧. ರಾಜಲು ದೇವರು

೫೨. ನನ್ನಲಬ್ಬ ದೇವರು

೫೩. ನಳ್ಳಲ್ಬ ದೇವರು

೫೪. ಪಾಲಬ್ಬ ದೇವರು

೫೫. ಗಾಮಬ್ಬ ದೇವರು

೫೬. ಪೆದ್ದಕ್ಕ ರಾಯಮ್ಮ

೫೭. ಪೆದ್ದತಿರುಮಲಭಾಗ್ಯ ಲಕ್ಷ್ಮಿದೇವರು

೫೮. ದಡ್ಲುಮಾರಮ್ಮ

೫೯. ಏಡೇಲು ಮುತ್ತಿಗಾರ ಮಾರಮ್ಮ

೬೦. ಮುತ್ತಿಗಾರ ಮಲಿಯಮ್ಮ

೬೧. ಗೌಡಗೆರೆ ಲಕ್ಷ್ಮಮ್ಮ

೬೨. ಕೊಡುಗುಡ್ಡದ ಮಾರಮ್ಮ

೬೩. ಊರುಮಾರಮ್ಮ

೬೪. ಗೌರಿಸಂದ್ರದಮಾರಮ್ಮ

೬೫. ಕಾತ್ರಿಕಟ್ಟೆಮಾರಮ್ಮ

೬೬. ಕುರಿಹಟ್ಟಿ ಮಾರಮ್ಮ

೬೭. ಗಲಗಲ್ಲು ದೇವಮ್ಮ

೬೮. ಜುಮ್ಮೋಬನಹಳ್ಳಿ ಮಲಿಯಮ್ಮ

೬೯. ಹಿರಿಜಿನ್ನಮ್ಮ

೭೦. ಬುಟ್ಟುಗಲಬೊಮ್ಮದೇವರು

೭೧. ಎರ್ರಿಪೋತ ಅಲಗುದೇವರು

೭೨. ದೇವರು ಗೊಡ್ಲರು

೭೩. ರಾಬರ್ಲು ಪೆದ್ದ ಪೊಂಜು

೭೪. ಪೆಯಿಲು ನಾಯಕನ ಗಾದಿನಾಯಕ

೭೫. ಅಕನೂರು ಪಾತಪ್ಪ

೭೬. ಪುರ್ಲಹಳ್ಳಿ ಭೂತಪ್ಪ

೭೭. ನಾಯ್ಕನಹಟ್ಟಿ ತಿಪ್ಪೇಸ್ವಾಮಿ

೭೮. ಇತ್ಯಾದಿ

# ಅನುಬಂಧ ೫

ಮ್ಯಾಸಬೇಡ (ನಾಯಕ) ಬೆಡಗು, ದೇವರು ಮತ್ತು ಸ್ಥಳಗಳು


| | | |
|---|---|---|
| ಅಲಿಕೋರು | ಅಲಕಿ ಓಬಳ ದೇವರು | ಕೂನಬೇವು, ಹುಣಿಸೆಕಟ್ಟೆ |
| ಕೌಲೋರು | ರಾಜಲ ದೇವರು | ದಿಬ್ಬದಹಳ್ಳಿ |
| ಗಿಡ್ಡಮುತ್ತಿನೋರು | ಪೆನ್ನೋಬಳ ದೇವರು | ಬುಕ್ಕಾಂಬುಧಿ |
| ಗಂಟಗೂಳಿಮುಲೋನು | ಗೂಳಿಮುಗೋತ್ರದೇವರೆತ್ತು | ಬೇಡರೆಡ್ಡಿಹಳ್ಳಿ |
| ಬುಲ್ಲಡಲೋರು | ಬಂಗಾರು ದೇವರು | ನನ್ನಿವಾಳ |
| ಮಂದಲೋರು | ರಾಜಲದೇವರು | ಮಲ್ಲೂರಹಳ್ಳಿ |
| ನಲ್ಲಬಾಪಲ | ದಡ್ಡಿಸೂರನಾಯಕ | ಹಿರೇಹಳ್ಳಿ |
| ಮಂದಲೋರು | ಸಿರಿವಾಳ ಓಬಳದೇವರು | ಆಯಾಹಳಿಗಳಲ್ಲಿದೆ |
| ಬೋಡಿಬುಲ್ಲುಡಲೋರು | ಬಂಗಾರು ದೇವರು | ಶ್ರೀರಂಗಧಾಮ |
| ಮುಚ್ಚುಬುಲ್ಲುಡುಲವರು | ಬಂಗಾರು ದೇವರು | ತೀಟಕುಂಟೆ |
| ಯರ್ರಳ್ಳ ನಾಯಕರು | ಬಂಗಾರು ದೇವರು ಪೆನ್ನೊಬಳ ದೇವರು | ಬುಕ್ಕಾಂಬುಧಿ |
| ದಾಸಳ್ಳ ನಾಯಕರು | ಪೆನ್ನೊಬಳ ದೇವರು ಬುಕ್ಕಾಂಬುಧಿ | |
| ಬುಕ್ಕಳ್ಳ ನಾಯಕರು | ಪೆನ್ನೊಬಳ ದೇವರು | |
| ನಾಗಮುತ್ತಿವಾರು | ಪೆನ್ನೊಬಳ ದೇವರು | |
| ಪಾಲಮುತ್ತಿವಾರು | ಪೆನ್ನೊಬಳ ದೇವರು | |
| ಮಾರಮ್ಮ ಬುಟ್ಟುಗಲು | ಐವೋದಿ ಮಾರಮ್ಮ | ಗೌರಸಮುದ್ರ |
| ಬೊಮ್ಮದೇವರುಬುಟ್ಟುಗಲು | ಬೊಮ್ಮದೇವರು | ಸಿದ್ಧಿಹಳ್ಳಿ – ಗೌರಸಮುದ್ರ |
| ಸಿದ್ದಪೆಲ್ಲಿ ಬುಟ್ಟುಗಲು | ಮಾರಮ್ಮ | ಮಾರಮ್ಮನಹಳ್ಳಿ |
| ಮಾದೇಲಿಂಗಪ್ಪಬುಟ್ಟುಗಲು ಬುಡ್ಡೆಪಾಪಲು | ಮಾದೇಲಿಂಗಪ್ಪ | ಹಿರೇಮಲ್ಲನಹೊಳೆ |
| ಬಿಲ್ಲನೋರು | ಮುತ್ತಿಗಾರು ಮಾರಮ್ಮ | ಪದಿನಾರು |

| | | |
|---|---|---|
| ರ್‍ಯಾಬಲೋರು | | ದೇವರಹಟ್ಟಿ |
| ದೊಡ್ಡಮುತ್ತಿನೋರು<br>ಬೋಸೆವಾರು<br>ಮೀಸಲಾರೆ<br>ಬೋರೆಪಾಡುವಾರು | ಮುತ್ತಿಗಾರು ಮಾರಮ್ಮ | ಪದಿನಾರು<br>ದೇವರಹಟ್ಟಿ |
| ಯರಪಾಮಡಲೋರು | ಮುತ್ತಿಗಾರಹಳ್ಳಿಮಾರಮ್ಮ | ಪದಿನಾರು<br>ದೇವರಹಟ್ಟಿ |
| ಜರಕನ ವಾಡು<br>ದಡ್ಡಿಸೂರನಾಕನಾರು<br>ಮೊಲಕೇತಿ ಎದ್ದುಲವಾರು | ಎತ್ತಿನಕಿಲಾರಿಗಳು | |
| ಗುಡ್ಡಮೆದ್ದಲವಾರು | ದಡ್ಡಿಸೂರನಾಯಕ | |
| ನಲದಮ್ಮ<br>ನಾಯಕನೋರು<br>ನಲ್ಲಬಾಪನೋರು<br>ಮಾಸಿಲುವಾರು<br>ದಾಸವಡೆಯರು<br>ಅಚ್ಚವಲ್ಲಿ ವಡೆಯರು | ಸೂರಿನಂದನ ಅಲಗು | ಹಿರೇಹಳ್ಳಿ |
| ಸಿದ್ದಪಲ್ಲಿ ದಿದ್ದಿಲೋರು<br>ಬುಡ್ಡಬೋರನೋರು<br>ಪಾಮುಡ್ಲಾರು<br>ಬಿರುದು ಪಾಮುಡ್ಲಾರು | ಗಾದರಿಪಾಲನಾಯಕ | |
| ರಸಸಿದ್ಧ ಪಾಮುಡ್ಲಾರು | ಪಾಮುಡ್ಲಾರು ಗುರುನಾಥ | ಓಬಣ್ಣನಹಳ್ಳಿ |
| ತಾತಾಚಾರಿ ಪಾಮುಡ್ಲಾರು | ಪಾಮುಡ್ಲಾರು ಗುರುನಾಥ | ಓಬಣ್ಣನಹಳ್ಳಿ |
| ಗುರು ಪಾಮುಡ್ಲಾರು | ಪಾಮುಡ್ಲಾರು ಗುರುನಾಥ | ಓಬಣ್ಣನಹಳ್ಳಿ |
| ಯರ ಪಾಮುಡ್ಲಾರು | ಪಾಮುಡ್ಲಾರು ಗುರುನಾಥ | ಓಬಣ್ಣನಹಳ್ಳಿ |
| ನಲ ಪಾಮುಡ್ಲಾರು | ಪಾಮುಡ್ಲಾರು ಗುರುನಾಥ | ಓಬಣ್ಣನಹಳ್ಳಿ |
| ಜರಕು ಪಾಮುಡ್ಲಾರು | ಪಾಮುಡ್ಲಾರು ಗುರುನಾಥ | ಓಬಣ್ಣನಹಳ್ಳಿ |
| ದ್ಯಾವುಡ್ಲವಾರು | ವಡೇಲಮುತ್ತಿಗಾರು | |
| ಕುಂದರ್ಲವಾರು<br>ಮಲಕೇಟಿ ಎದ್ದುಲಾರು<br>ಗುದ್ದುಮು ಎದ್ದುಲಾರು | ಗುಡಿಹಳ್ಳಿ ಓಬಳದೇವರು | ಗುಡಿಹಳ್ಳಿ |
| ಕ್ಯಾಸಾಪುರದ ಕ್ಯಾಸನಾರು<br>ಬುಡ್ಡಬೋರನಾರು | ಕೊತ್ತಲಬೊಮ್ಮದೇವರು | |

| | | |
|---|---|---|
| ಬೋಡಿದಾಸರಿ | ದೊಡ್ಡತಿರುಮಲ ದೇವರು | ಬೇಡರೆಡ್ಡಿಹಳ್ಳಿ |
| ಕಾಮಗೇತಲಾರು | ಸೂರಪ್ಪದೇವರು | ಕಾಮಗೇತನಹಳ್ಳಿ |
| ಕುಕ್ಕಲಾರು | ಚಿತ್ರಲಿಂಗ | ಉಡೇಗೋಳ |
| ಬೋಡೇ ಪಡ್ಲುವಾರು<br>ಬೆಲ್ಲಲೋರು | ಮುತ್ತಿ ಕಮರ ಕಾವಲುಗಾರ | ಎತ್ತುಗಳು |
| ಮುಚ್ಚುಬೆಲ್ಲಲೋರು | ಸೂರೇದೇವರು | ಗೋನೂರು |
| ಪೂವಲಾರು | ಪೊನ್ನೊಬಳ | |
| ನನ್ನುಲಾರು<br>ದಡ್ಡಿಮುತ್ತಿವಾರು<br>ಅಬ್ಬರಾಜುವಾರು | ಬೊಮ್ಮದೇವರು | ನನ್ನಿವಾಳ |
| ಅಬ್ಬನೋರು | ದಡ್ಡಿ ಮುತ್ತಿ ದೇವರು | |
| ಕ್ಯಾತಪುಲವಾರು | ಗಾದರಿಪಾಲನಾಯಕ | |
| ಮೊನ್ನುಲುವಾರು | ರಾಜಲದೇವರು<br>ಹುಚ್ಚ ಮಲ್ಲಪ್ಪ | ಮಲ್ಲೂರಹಳ್ಳಿ |
| ಪಾಲಬ್ಬನಾರು | ರಾಜಲದೇವರು | |
| ದ್ಯಾವರ ಗೊರ್ಲುವಾರು | ಕಂಪಳ ರಂಗಸ್ವಾಮಿ | ಕಂಪಳ ದೇವರಹಟ್ಟಿ |
| ಕರಿನಾರು | ಕಂಪಳ ರಂಗಸ್ವಾಮಿ | ಕಂಪಳ ದೇವರಹಟ್ಟಿ |
| ಎನುಮುಲಾರು<br>ಸೊನ್ನಲಬ್ಬುನಾರು<br>ಪಾಲಬ್ಬನಾರು | ಶುಕ್ಲಮಲ್ಲನಾಯಕ<br>ಗಾದರಿಪಾಲನಾಯಕ | ಕಂಪಳ ದೇವರಹಟ್ಟಿ |
| ಗಾಮಬ್ಬನಾರು<br>ಪೊಟ್ಟ ಪೊಲ್ಲಾರು<br>ಪುಟ್ವಾಲಾರು<br>ಪೆದ್ದನಾರು | ಬೊಮ್ಮನಹಳ್ಳಿ<br>ಬೋರೆದೇವರು | |
| ಬೊಗ್ಗಲಾರು<br>ಪೆದ್ದಳ್ಳನಾಕ<br>ಬೋಡಿ ದಾಸರಿ | ಗಾದರಿಪಾಲನಾಯಕ | |
| ಗೊಡಗು ದಾಸರಿ<br>ಚನ್ನನೋರು | ಯರಮಂಚಿನಾಯಕ | ಓಬನಹಳ್ಳಿ |
| ರಂಗಸೇಟಿ<br>ಬಲ್ಲನಾಡು<br>ಗೊನೊಡು<br>ಕಾಮನಾಡು | ಬಂಗಾರು ದೇವರು | ಸಿರಿಗಯ್ಯನಹಟ್ಟಿ |

| | | |
|---|---|---|
| ಕರಿನಾಡು<br>ಗೋಸೇಲರು<br>ಪಡ್ಲರು<br>ಯರಮಂಚಿ | ಕಂಪಳರಂಗಸ್ವಾಮಿ | |

**ಕರ್ನಾಟಕದ ಬುಡಕಟ್ಟು (ಬೇಡ) ವೀರರ ನೆಲೆಗಳು**



೧. ಕಂಪಳರಂಗ ಕ್ಷೇತ್ರ
೨. ಭೈರವ ಕ್ಷೇತ್ರ
೩. ಮಲೆಮಾದೇಶ್ವರ ಕ್ಷೇತ್ರ
೪. ತಲಕಾಡು
೫. ನುಂಕಮಲೈ
೬. ಅಶೋಕ ಸಿದ್ಧಾಪುರ
೭. ಆನೆಗುಂದಿ
೮. ಕಬ್ಬಳಕಾಶೀಪುರ
೯. ಮೈಸೂರು
೧೦. ಚಾಮರಾಜನಗರ
೧೧. ಕಾಗಿನೆಲೆ
೧೨. ನೀರ್ಥಡಿ ರಂಗನಾಥ
೧೩. ಕುಮ್ಮಟದುರ್ಗ
೧೪. ಗಂಜಿಗಟ್ಟೆ
೧೫. ಜಗಳೂರು
೧೬. ನಾಯಕನಹಟ್ಟಿ

೧೭. ವಲಸೆ
೧೮. ಮುತ್ತಿಗಾರಹಳ್ಳಿ
೧೯. ಹಿರೇಹಳ್ಳಿ
೨೦. ಗೌರಸಮುದ್ರ
೨೧. ಓಬಣ್ಣನಹಳ್ಳಿ
೨೨. ಗಲಗಲ್ಲು
೨೩. ಕಪ್ಪಡಬಂಡಹಟ್ಟಿ
೨೪. ಗುಡೆಕೋಟೆ
೨೫. ಸುರಪುರ
೨೬. ಮುಧೋಳ
೨೭. ಗದಗ
೨೮. ಕೂಡ್ಲಿಗಿ
೨೯. ನ್ಯಾಮತಿ
೩೦. ಹಂಪಿ
೩೧. ಅನಿಲಗೋಳ
೩೨. ಅಥಣಿ
೩೩. ಚಿಕ್ಕಲದಿನ್ನೆ
೩೪. ತರೀಕೆರೆ
೩೫. ಆವನಿ
೩೬. ಕಲ್ಲತ್ತಗಿರಿ
೩೭. ಬಾಣವಾರ

**ಬುಡಕಟ್ಟು ವೀರರ ಕ್ಷೇತ್ರಗಳು (ಚಿತ್ರದುರ್ಗ ಜಿಲ್ಲೆ)**



೧. ಗಾದರಿಪಾಲನಾಯಕನ ಕ್ಷೇತ್ರ
ಗಂಜಿಗಟ್ಟೆ

೨. ಪಾಪನಾಯಕನ ಕ್ಷೇತ್ರ
ಜಗಳೂರು

೩. ಕೊಡಗುಬೊಮ್ಮನ ಕ್ಷೇತ್ರ
ಮುತ್ತಿಗಾರಹಳ್ಳಿ

೪. ಯರಮಂಚಿನಾಯಕನ ಕ್ಷೇತ್ರ
ಓಬಣ್ಣನಹಳ್ಳಿ

೫. ಪೆದ್ದಯ್ಯನ ಸ್ಮಾರಕ
ಕಪ್ಪಡಬಂಡಟ್ಟಿ

೬. ಗಾಜನಾಯಕ ಕ್ಷೇತ್ರ
ಬೆಳಗಟ್ಟ

೭. ಬಾಗೇನಾಳು ಓಬವ್ವನ ನೆಲೆ
ಸಾಸಲುಹಟ್ಟಿ

೮. ತಮ್ಮಟಕಲ್ಲು ಪ್ರಾಚೀನ ನೆಲೆ

೯. ತಿಪ್ಪೇಸ್ವಾಮಿ ಕ್ಷೇತ್ರ
ನಾಯಕನಹಟ್ಟಿ

೧೦. ದಡ್ಡಿಸೂರನಾಯಕನ ಕ್ಷೇತ್ರ
ಹಿರೇಹಳ್ಳಿ

೧೧. ಮಾರಮ್ಮನ ಆಯೋಧಿಕ್ಷೇತ್ರ
ಗೌರಸಮುದ್ರ

೧೨. ವೇದಾವತಿ ನದಿ ಪ್ರದೇಶ

೧೩. ಚಿನ್ನಹಗರಿ ನದಿ ಪ್ರದೇಶ

* * *